ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ

(ಬಳ್ಳಾರಿ ಮತ್ತು ದಾವಣಗೇರಿ ಜಿಲ್ಲೆಯನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕ
ಶೇಖರಾಚಾರಿ. ಕೆ

ಮಾರ್ಗದರ್ಶಕರು
ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯-೧೦

(372)

ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ

(ಬಳ್ಳಾರಿ ಮತ್ತು ದಾವಣಗೇರಿ ಜಿಲ್ಲೆಯನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕ
ಶೇಖರಾಚಾರಿ.ಕೆ

ಮಾರ್ಗದರ್ಶಕರು
ಡಾ.ಡಿ.ಪಾಂಡುರಂಗಬಾಬು
ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯ - ೧೦

ದೃಢೀಕರಣ ಪತ್ರ

ಶ್ರೀ ಶೇಖರಾಚಾರಿ ಕೆ., ಅವರು "ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ" (ಬಳ್ಳಾರಿ ಮತ್ತು ದಾವಣಗೇರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಪಿಎಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಡಿ.ಪಾಂಡುರಂಗಬಾಬು)
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 31.05.೨೦೧೦
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ" (ಬಳ್ಳಾರಿ ಮತ್ತು ದಾವಣಗೇರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಡಾ.ಡಿ.ಪಾಂಡುರಂಗಬಾಬು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಲಾಗಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಶೇಖರಾಚಾರಿ.ಕೆ)
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 31-05-2010
ಸ್ಥಳ : ವಿದ್ಯಾರಣ್ಯ

ಪರಿವಿಡಿ

<u>ಅಧ್ಯಾಯ - ಒಂದು</u>

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರವೇಶ

೧.೨. ಅಧ್ಯಯನದ ಉದ್ದೇಶ ಹಾಗೂ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಸ್ವರೂಪ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರವೇಶ

ಭಾಷೆ, ಸಂಸ್ಕೃತಿ ಚಿಂತನೆ ಕುರಿತಂತೆ ತೀವ್ರಗತಿಯಲ್ಲಿ ಅಧ್ಯಯನಗಳು ನಡೆದಿವೆ, ನಡೆಯುತ್ತಲೂ ಬಂದಿವೆ. ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಇದೊಂದು ಮಹತ್ವದ ಹಾಗೂ ಉತ್ಕೃಷ್ಟದ ಬೆಳವಣಿಗೆಯೆನ್ನಲು ಅಡ್ಡಿಯಿಲ್ಲ. ಸಮುದಾಯಗಳನ್ನು ವಿವಿಧ ಮಾದರಿಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ಅಧ್ಯಯನ ಮಾಡಲಾಗುತ್ತದೆ. ಭಾರತೀಯ ಸಮಾಜ ಬಹುಮುಖಿ ಸಂಸ್ಕೃತಿಯ ತವರೂರು. ಇಲ್ಲಿ ಹಲವು ಬಗೆಯ ಜೀವನ ಕ್ರಮಗಳು ಸಮ್ಮಿಲನಗೊಂಡಿವೆ. ಈ ಸಮುದಾಯಗಳು ತಮ್ಮದೇ ಆದ ಆಚರಣೆ, ಸಂಪ್ರದಾಯ, ನಂಬಿಕೆ, ವೃತ್ತಿ, ದೈವ ಇತ್ಯಾದಿ ಅಂಶಗಳನ್ನು ಭಾಷೆಯ ಮೂಲಕ ಅಭಿವ್ಯಕ್ತಿಗೊಳಿಸುವುದನ್ನು ಕಾಣಬಹುದು. ಭಾಷೆ ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಸುವ ಸಂವಹನ ಸಾಧನ. ಇದು ಜಗತ್ತಿನ ಇತರ ಪ್ರಾಣಿಗಳಿಂದ ಮನುಷ್ಯನನ್ನು ಬೇರ್ಪಡಿಸಲು ಮೂಲ ಕಾರಣವಾದುದು. ಭಾಷೆ ಇಬ್ಬರು ವ್ಯಕ್ತಿಗಳ ನಡುವಿನ ಸಂಪರ್ಕ ಸಾಧನ ಮಾತ್ರವಾಗಿರದೇ ತಾವು ಬದುಕುತ್ತಿರುವ ಸಮಾಜದ, ಸಾಂಸ್ಕೃತಿಕ ನೆಲೆಯ, ಪರಿಸರದ, ಬದುಕಿನ ಸಮಸ್ತ ವಿವರಗಳನ್ನು ಅರಗಿಸಿಕೊಂಡ ಘಟಕವಾಗಿದೆ. ಮನುಷ್ಯ ಬದುಕಿನ ಸಂಸ್ಕೃತಿಯ ಸ್ವರೂಪ, ಚರಿತ್ರೆ ಪರಂಪರೆಗಳ ಅಧ್ಯಯನಕ್ಕೆ ಮುಖ್ಯ ಆಕರವೂ ಆಗುತ್ತದೆ. ಭಾಷೆಯನ್ನು ವ್ಯಕ್ತಿಗಳೇ ಬಳಸಿದರೂ ಅದರ ನೆಲೆ ಬೆಲೆಗಳಿರುವುದು ಸಾಮುದಾಯಿಕ ಅಸ್ತಿತ್ವದಲ್ಲಿ. ಈ ಭಾಷೆಯಿಂದಲೇ ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುವ ಅಂಶಗಳನ್ನು ಗುರುತಿಸಲು ಸಾಧ್ಯ. ಅವು ಮೇಲ್‌ನೋಟಕ್ಕೆ ಒಂದೇ ತೆರನಾಗಿ ಕಂಡರು ಆಳಕ್ಕೆ ನೋಡಿದಾಗ ಭಿನ್ನವಾದ ಅಂಶಗಳನ್ನು ಗುರುತಿಸಲು ಸಾಧ್ಯ. ಇಂತಹ ಸಮುದಾಯಗಳಲ್ಲಿ ಒಂದಾದ ಪಾಂಚಾಳರನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ ಹಾಗೂ ಮಹತ್ವ

ಭಾರತೀಯ ಸಮಾಜ ಎನ್ನುವುದು ಹಲವು ಬಿಡಿ ಸಮುದಾಯಗಳ ಕೂಟ, ಹಾಗೆಯೇ ಭಾರತೀಯ ಸಂಸ್ಕೃತಿ ಎನ್ನುವ ವಿಚಾರವೂ ಹಲವಾರು ಸಂಸ್ಕೃತಿಗಳ ಮೊತ್ತ. ಹೊರನೋಟಕ್ಕೆ ಸ್ಥೂಲವಾಗಿ

ಏಕಾಕಾರದಲ್ಲಿ ಕಾಣುವ ಭಾರತೀಯ ಸಮಾಜ ಸಂಸ್ಕೃತಿಗಳು ಒಳಪದರುಗಳಲ್ಲಿ ಪ್ರತಿ ಸಮುದಾಯಕ್ಕೂ ವಿಭಿನ್ನವಾಗಿರುವ ಬದುಕಿನ ಕ್ರಮ, ಬದುಕಿನ ಕಾರಣಕ್ಕಾಗಿ ರೂಢಿಸಿಕೊಂಡಿರುವ ಸಮಾಜೋ ಆರ್ಥಿಕ ನೆಲೆಗಳು ಅಂದರೆ ವೃತ್ತಿ, ಕಸಬು ಕೌಶಲ್ಯಗಳು ಈ ಕಾರಣದಿಂದಾಗಿಯೇ ಗಟ್ಟಿಗೊಂಡಿರುವ ಸಮುದಾಯಗಳ ಸಾಮಾಜಿಕ ಸಾಂಸ್ಕೃತಿಕ ನಡವಳಿಕೆಗಳು ಅಂದರೆ ಆಚರಣೆ, ನಂಬಿಕೆ, ನಿಷೇಧ ಮುಂತಾದ ವಿಚಾರಗಳು ಸಮುದಾಯಗಳಿಗೆ ವೈಶಿಷ್ಟ್ಯತೆಯು ಹಾಗೂ ಅನನ್ಯತೆಯ ಚಹರೆಗಳನ್ನು ರೂಪಿಸಿವೆ.

ಭಾರತೀಯ ಸಮುದಾಯಗಳು ಬೇರೆ ಬೇರೆ ಘಟಕಗಳಾಗಿ ಅಸ್ತಿತ್ವವನ್ನು ಹೊಂದಿದ್ದರೂ ಪ್ರತಿಯೊಂದು ಸಮುದಾಯವೂ ಒಟ್ಟು ಸಾಮಾಜಿಕ ಸಂರಚನೆಯಲ್ಲಿ ವಿಶಿಷ್ಟ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬೇರೆ ಬೇರೆ ಸಮುದಾಯಗಳಿಗೆ ಆಧಾರವಾಗಿ ಹಾಗೂ ಬೇರೆ ಬೇರೆ ಸಮುದಾಯಗಳನ್ನು ಆಧರಿಸಿ ಒಂದು ಸಮಾಜವಾಗಿ ರೂಪುಗೊಳ್ಳಲು ಕಾರಣವಾಗಿದೆ. ಭಾರತೀಯ ಸಮಾಜದ ಸಾಂಸ್ಕೃತಿಕ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳಲು ಪ್ರತಿ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ವಿವರಗಳನ್ನು ಬಿಡಿಬಿಡಿಯಾಗಿ ವಿವರಿಸಿಕೊಳ್ಳುವ ಅಗತ್ಯವಿದೆ. ಪಾರಂಪರಿಕವಾಗಿ ದುಡಿಯುವ ಸಂಸ್ಕೃತಿಯ, ಕಲೆ, ಕೌಶಲ್ಯಗಳನ್ನು ವೃತ್ತಿಯ ಅವಿಭಾಜ್ಯ ಅಂಗವಾಗಿಸಿಕೊಂಡಿರುವ ಪಾಂಚಾಳ ಸಮುದಾಯ ಭಾರತದ ಮುಖ್ಯ ಸಮುದಾಯಗಳಲ್ಲಿ ಒಂದಾಗಿದೆ. ಈ ಸಮುದಾಯದ ವೃತ್ತಿವಿವರ, ಆಚರಣೆ, ನಂಬಿಕೆ, ದೈವ, ನಿಷೇಧಗಳ ವಿಚಾರಗಳು ಹಾಗೂ ವೃತ್ತಿಯ ಕಾರಣಕ್ಕಾಗಿ ರೂಪುಗೊಂಡಿರುವ ವಿಶಿಷ್ಟ ಭಾಷಿಕ ವಿವರಗಳನ್ನು ದಾಖಲಿಸಿ ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ

ಕಮ್ಮಾರಿಕೆ, ಬಡಗಿತನ, ಅಕ್ಕಸಾಲಿಕೆ, ಶಿಲ್ಪಗಾರಿಕೆ ಹಾಗೂ ಕಂಚುಗಾರಿಕೆ ಈ ಐದು ವೃತ್ತಿಗಳು ಅವರ ಪ್ರಧಾನ ವೃತ್ತಿಗಳು ಹಾಗೂ ಇವುಗಳಿಂದಲೇ ಅವರ ಜೀವನ ಮಾರ್ಗ. ಈ ಐದು ವೃತ್ತಿಗಳನ್ನು ಒಟ್ಟಿಗೆ ಹೇಳುವ ಸಮೂಹ ಪದವೇ ವಿಶ್ವಕರ್ಮ, ಪಾಂಚಾಳ ಎಂದು ಕರೆಯಲಾಗುತ್ತದೆ. ಒಂದು ವೃತ್ತಿ ಸಮುದಾಯಕ್ಕೆ ಹಲವು ವಿಧಿ ನಿಷೇಧಗಳು, ಅಗೋಚರ ನಿಯಮಗಳು ಚಾರಿಯಲ್ಲಿದ್ದು ಆ ಸಮುದಾಯವನ್ನು ನಿಯಂತ್ರಿಸುತ್ತಿರುತ್ತವೆ. ಇವು ಆ ಸಮುದಾಯದ ಚಹರೆಯನ್ನು ನಿರ್ಧರಿಸುತ್ತವೆ. ಹಾಗೆಯೇ ಒಂದು ಸಮುದಾಯದ ಅಧ್ಯಯನ ಮಾಡುವಾಗ ಅವರ ಸಂಪ್ರದಾಯ, ನಂಬಿಕೆ, ಕೌಟುಂಬಿಕ ವ್ಯವಸ್ಥೆ, ನಾಗರೀಕತೆಯಿಂದ ಆಗಿರುವ ಬದಲಾವಣೆ, ಭಾಷೆ ಇತ್ಯಾದಿಯಾಗಿ ಎಲ್ಲಾ ಮಗ್ಗಲುಗಳನ್ನು ಗಮನಿಸಬೇಕಾಗುತ್ತದೆ. ಇಂತಹ ಅಧ್ಯಯನ ಒಂದು ಸಮುದಾಯದ ಆಳವಾದ ಅಧ್ಯಯನವೆನಿಸಿಕೊಳ್ಳುತ್ತದೆ. ಸಮುದಾಯದ ಬಗೆಗಿನ ಅಧ್ಯಯನಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಹೊಂದಿವೆ. ಏಕೆಂದರೆ ಇಂದಿನ ಶೀಘ್ರಗತಿಯ ಬದಲಾವಣೆಯ ವ್ಯಾಪಕತೆ ಪಾಂಚಾಳರಂತಹ ಹಲವು ಸಮುದಾಯಗಳ ಪಾರಂಪರಿಕ ವೃತ್ತಿ, ಜೀವನ ಶೈಲಿಯನ್ನು ಬದಲಾಯಿಸಿ ಬಿಡುವ ಸಾಧ್ಯತೆಗಳೇ ಹೆಚ್ಚು. ಹೀಗಾಗಿ ನಶಿಸಿ ಹೋಗುತ್ತಿರುವ ಸಮುದಾಯದ ಭಾಷಿಕ ವಿವರ, ಸಾಂಸ್ಕೃತಿಕ ವಿವರಗಳನ್ನು ಸಂಗ್ರಹಿಸಿ ವಿಶ್ಲೇಷಿಸುವ ಅವಶ್ಯಕತೆಯಿದೆ.

ಸಮುದಾಯಗಳ ಸಂಸ್ಕೃತಿಯನ್ನು ಸಮಗ್ರ ಹಿನ್ನೆಲೆಯಲ್ಲಿ ತಿಳಿಯುವ ದೃಷ್ಟಿಯಿಂದ ಒಂದೊಂದು ಸಮುದಾಯಗಳನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಅಗತ್ಯ ಪ್ರಸ್ತುತದಲ್ಲಿ ಅವಶ್ಯವಿದೆ. ಸಮುದಾಯಗಳು ರೂಢಿಸಿಕೊಂಡಿರುವ ಸಂಸ್ಕೃತಿ, ಭಾಷೆಯನ್ನು ಕುರಿತು ಅಭ್ಯಸಿಸುವುದರಿಂದ ಸಮುದಾಯಗಳ ಜೀವನ ಕ್ರಮ, ಸಾಮಾಜಿಕ ವ್ಯವಸ್ಥೆಗಳು, ವೈಶಿಷ್ಟ್ಯವನ್ನು ಗುರುತಿಸಬಹುದು. ಜನಾಂಗಿಕ ಅಧ್ಯಯನಗಳು ಒಂದು ಕಾಲದಲ್ಲಿ ಕೇವಲ ಮಾನವ ಶಾಸ್ತ್ರಜ್ಞರಿಗೆ ಮೀಸಲು ಎನ್ನುವ ಪರಿಸ್ಥಿತಿಯು ಉಂಟಾಗಿತ್ತು. ನಂತರ ಅಂತರ್ ಶಿಸ್ತೀಯ ಅಧ್ಯಯನಗಳು ಬಳಕೆಗೆ ಬಂದ ಮೇಲೆ ಒಂದು ಸಮುದಾಯದ ಎಲ್ಲಾ ಮಗ್ಗಲುಗಳನ್ನು ತಿಳಿದುಕೊಳ್ಳಲಿಕ್ಕೆ ಅವಶ್ಯಕವಾಯಿತು. ಈ ಹಿನ್ನೆಲೆಯಲ್ಲಿ ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ ಈ ನೆಲೆಗಳಿಂದ ಅಧ್ಯಯನ ಮಾಡುವ ಅಗತ್ಯತೆ ಇರುವುದನ್ನು ಮನಗಾಣಬಹುದು.

ಮಾನವ ಶಾಸ್ತ್ರಜ್ಞರು, ಜಾನಪದ ವಿದ್ವಾಂಸರು ಮಾತ್ರ ಕೈ ಹಾಕುತ್ತಿದ್ದ ಸಮುದಾಯಗಳ ಕ್ಷೇತ್ರವನ್ನು ಪ್ರಸ್ತುತದಲ್ಲಿ ಭಾಷಾವಿದ್ವಾಂಸರು ಕೂಡ ಪ್ರವೇಶಿಸಿದ್ದಾರೆ. ಒಂದು ಸಮುದಾಯದ ಬದುಕಿನ ಒಟ್ಟಾರೆ ಸಾಂಸ್ಕೃತಿಕ ಪರಿಸರವನ್ನು ತಿಳಿಯಬೇಕಾದರೆ ಆ ಸಮುದಾಯದ ವೃತ್ತಿ ಭಾಷೆ, ನಿಷೇಧ ಪದಗಳು, ನುಡಿಗಟ್ಟು, ಗಾದೆ, ವ್ಯಕ್ತಿನಾಮಗಳು, ಸಂಬೋಧನಾ ರೂಪಗಳು, ನಂಬಿಕೆ, ಸಂಪ್ರದಾಯ ಇಂತಹ ಸಂಸ್ಕೃತಿಯನ್ನು ಜೀವಂತವಾಗಿಟ್ಟುಕೊಂಡಿರುವ ಸಮುದಾಯವನ್ನು ಸಮಾಜೋಭಾಷಿಕ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಇಂದಿನ ಆಧುನೀಕರಣದ ಪ್ರಕ್ರಿಯೆಯಲ್ಲಿ ಎಷ್ಟೊ ಸಮುದಾಯಗಳು ತಮ್ಮ ಪಾರಂಪರಿಕ ಆಯಾಮ ನಶಿಸಿ ಹೊಸತನವನ್ನು ಪಡೆಯುತ್ತಿರುವುದನ್ನು ಕಾಣುತಲಿದ್ದೇವೆ. ಇಂತಹ ಸಂದರ್ಭದಲ್ಲಿ ಆ ಸಮುದಾಯಗಳು ತಮ್ಮ ಪಾರಂಪರಿಕತೆಯನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿರುವುದನ್ನು ಇಂದು ಕಾಣಬಹುದು. ಆದರೆ ಇಂತಹ ಅಧ್ಯಯನಗಳಿಂದ ಭಿನ್ನ ಸಮುದಾಯಗಳ ನಡುವಿನ ಸಂಬಂಧ, ವೈವಿಧ್ಯಪೂರ್ಣವಾದ ಜೀವನ, ಭಾಷೆಯ ಮಹತ್ವ ತಿಳಿಯುತ್ತದೆ. ಇಂತಹ ವಿಶಿಷ್ಟತೆಯನ್ನು ಹೊಂದಿರುವ ಸಮುದಾಯಗಳ ಮೂಲ ಆಯಾಮವು ಕಣ್ಮರೆಯಾಗುತಲಿವೆ. ಅಂತಹ ಸಮುದಾಯಗಳಲ್ಲಿ ಒಂದಾದ ಪಾಂಚಾಳ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯನ್ನು ಕುರಿತು ಸಂಶೋಧನೆ ಮಾಡುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಬಹುಪಾಲು ಸಮುದಾಯಗಳಲ್ಲಿ ಆಧುನಿಕತೆ ಪ್ರವೇಶ ಪಡೆದ ನಂತರ ಆ ಸಮುದಾಯ ರೂಢಿಸಿಕೊಂಡ ಸಂಸ್ಕೃತಿ, ಭಾಷಾ ಸಂಪತ್ತು ದೂರವಾಗಿವೆ. ಆದರೆ ಪಾಂಚಾಳ ಸಮುದಾಯದಲ್ಲಿ ತಮ್ಮ ವೃತ್ತಿ ಆಧುನಿಕ ಪ್ರಕ್ರಿಯೆಗೆ ಒಳಗಾಗುತ್ತ ತನ್ನೊಡಲೊಳಗೆ ಅಡಗಿಸಿಕೊಂಡಿದ್ದಾರೆ. ಈ ಸಮುದಾಯವನ್ನು ಗುರುತಿಸುವುದು ಐದು ವೃತ್ತಿಗಳ ಮುಖಂತರವೇ. ಪಾಂಚಾಳರು ಇತರೆ ಸಮುದಾಯಗಳ ಜೊತೆ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದರು ಎಂಬುದಕ್ಕೆ ಅನೇಕ ಪುರಾವೆಗಳು ದೊರೆಯುತ್ತವೆ. ಈ ಹೊಂದಾಣಿಕೆಯಿಂದಲೇ ಸಮುದಾಯಕ್ಕೆ ಸಮಾಜದಲ್ಲಿ ಇಂದಿಗೂ ವಿಶೇಷವಾದ ಸ್ಥಾನವಿದೆ ಹಾಗೂ ಇತರೆ ಸಮುದಾಯಗಳೊಂದಿಗೆ ಬಂಧುತ್ವವನ್ನು ಕೂಡ ಪಡೆದುಕೊಂಡಿದ್ದಾರೆ. ಈ ಉದ್ದೇಶದಿಂದಲೇ ಕೂಸು ಹುಟ್ಟಿದರೆ ಆಚಾರಿಬೇಕು, ಸತ್ತರೆ ಆಚಾರಿಬೇಕು ಎಂಬ ನುಡಿಮುತ್ತು ಜನಪ್ರಿಯತೆಗೊಂಡಿರುವುದು.

ಭಾಷೆಯ ಮುಖ್ಯ ಉದ್ದೇಶ ಮಾನವನಿಗೆ ಸಾಮಾಜಿಕ ಸಂಪರ್ಕ ಕಲ್ಪಿಸುವುದಾಗಿದೆ. ಭಾಷೆ ಸಂಸ್ಕೃತಿಯ ಮುಖ್ಯ ಅಂಗವಾಗಿರುವುದರಿಂದ ಭಾಷಾ ಸಮುದಾಯದಲ್ಲಿ ಭಾಷಿಕರು ಪರಸ್ಪರ ಆತಂರಿಕ ಸಂಬಂಧವನ್ನು ಹೊಂದಿರುತ್ತಾರೆ. ಆದ್ದರಿಂದ ಭಾಷೆಯಷ್ಟು ಪರಸ್ಪರ ವಿನಿಮಯ ಸಾಮರ್ಥ್ಯ ಬೇರೆ ಯಾವುದಕ್ಕೂ ಇಲ್ಲ. ಸಮುದಾಯಗಳು ತಮ್ಮ ಸಂವಹನಕ್ಕಾಗಿ ತನ್ನದೇ ಆದ ಪದಕೋಶವನ್ನು ಹೊಂದಿರುತ್ತದೆ ಹಾಗೂ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುತ್ತದೆ. ಹಾಗಾಗಿ ಭಾಷೆ ಮತ್ತು ಸಂಸ್ಕೃತಿಗೆ ನಿಕಟವಾದ ಸಂಬಂಧವಿರುವ ಹಾಗೆ ಅದರದೇ ಅರ್ಥ ಪರಂಪರೆಯು ಇದೆ. ಆದ್ದರಿಂದ ಸಮುದಾಯಗಳು ಬಳಸುವ ಈ ಪದಕೋಶಗಳ ಹಿಂದಿರುವ ಸಾಂಸ್ಕೃತಿಕ ಅರ್ಥದ ಅರಿವು ಇಂದು ಅಧ್ಯಯನಗಳಿಗೆ ಅಗತ್ಯವಾಗಿದೆ. ಸಾಮಾನ್ಯವಾಗಿ ಅಧ್ಯಯನಕ್ಕೆ ಒಳಪಡುವ ಸಮುದಾಯದ ಭಾಷೆ ಮತ್ತು ಸಂಸ್ಕೃತಿ ವಿವರಗಳನ್ನು ಕಲೆ ಹಾಕುವ ಕ್ಷೇತ್ರಕಾರ್ಯಕ್ಕೆ ಮಾತ್ರ ಸೀಮಿತಗೊಳ್ಳದೆ ಒಂದು ಸಮುದಾಯದ ನೆಲೆಬೆಲೆಯನ್ನು ಗುರುತಿಸುವುದು ಸಾಧ್ಯವಾಗಬೇಕು. ಒಂದು ಭಾಷಿಕ ಸಮುದಾಯ ತನ್ನ ಪರಂಪರೆಯ ವೃತ್ತಿಯ ಭಾಷೆಯನ್ನು ಹೇಗೆ ಸಂಗೋಪಿಸಿಕೊಳ್ಳುತ್ತದೆ ಎಂಬುದನ್ನು ಕೂಡ ತಿಳಿಯಬೇಕಾಗಿದೆ.

ಪದಗಳನ್ನಷ್ಟೇ ಭಾಷೆ ಒಳಗೊಂಡಿರುವುದಿಲ್ಲ. ಅದು ಆ ಸಮುದಾಯದ ಜನರ ಬದುಕು, ಆಚಾರ, ವಿಚಾರ, ನಂಬಿಕೆ, ನಿಷೇಧ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ಈ ಎಲ್ಲ ಅಂಶಗಳನ್ನು ನಾವು ತಿಳಿಯಬೇಕಾದರೆ ಅಂತರ್ ಶಿಸ್ತೀಯ ಅಧ್ಯಯನ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ವೃತ್ತಿ ಪದಗಳು ಅವರ ಆಚಾರ-ವಿಚಾರ ಮಯವಾಗುತಲಿವೆ. ಹಾಗಾಗಿ ಪಾಂಚಾಳರ ವೃತ್ತಿ ಪದಗಳನ್ನು ಸಮಗ್ರವಾಗಿ ಸಂಗ್ರಹಿಸಿ ಆ ಪದಗಳ ವಿಶಿಷ್ಟತೆ, ಅರ್ಥ ವಿವರಣೆಯ ಜೊತೆಗೆ ವೃತ್ತಿ ಪದಗಳು ತಮ್ಮ ಕ್ಷೇತ್ರವನ್ನು ಮೀರಿ ಬೇರೊಂದು ವಲಯದಲ್ಲಿ ಯಾವ ರೂಪವನ್ನು ಪಡೆದಿವೆ ಎಂಬುದಕ್ಕೆ ಆದ್ಯತೆ ನೀಡಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಪಾಂಚಾಳರ ಭಾಷೆ ಮತ್ತು ಸಂಸ್ಕೃತಿಯ ಅಧ್ಯಯನವನ್ನು ಕೇಂದ್ರವಾಗಿರಿಸಿಕೊಂಡಿದೆ. ಆದ್ದರಿಂದ ಈ ಅಧ್ಯಯನಕ್ಕೆ ವ್ಯಾಪ್ತಿಯನ್ನು ಬಳ್ಳಾರಿ ಹಾಗೂ ದಾವಣಗೇರಿ ಜಿಲ್ಲೆಯನ್ನು ಅನುಲಕ್ಷಿಸಿ ಅಲ್ಲಿ ವಾಸವಾಗಿರುವ ಪಾಂಚಾಳ ಸಮುದಾಯವನ್ನು ತೆಗೆದುಕೊಳ್ಳಲಾಗಿದೆ. ಈ ಹಿನ್ನಲೆಯಲ್ಲಿ ಪಾಂಚಾಳರ ಅಧ್ಯಯನಕ್ಕೆ ಒಟ್ಟು ಸಾಂಸ್ಕೃತಿಕ ವಿವರಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುತ್ತ ಅವುಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಪಾಂಚಾಳರ ಐತಿಹಾಸಿಕತೆ, ವೃತ್ತಿಭಾಷೆ, ಸಮಾಜೋಭಾಷಿಕ ಅಧ್ಯಯನ, ಆಚರಣೆ ಹಾಗೂ ಸಂಪ್ರದಾಯಗಳನ್ನು ಕುರಿತ ಅಧ್ಯಯನ ಪಾಂಚಾಳರ ಒಟ್ಟು ಜೀವನ ವಿಧಾನವನ್ನು ಸಮಕಾಲೀನ ಸಂದರ್ಭದೊಂದಿಗೆ ಮುಖಾಮುಖಿಯಾಗಿಸುವ ಉದ್ದೇಶವನ್ನು ಹೊಂದುವ ಈ ಬಗೆಯ ಅಧ್ಯಯನಕ್ಕೆ ಶಿಸ್ತು ತಂದುಕೊಡುವ ಪಾಂಚಾಳರ ಕುರಿತಾದ ಈವರೆಗಿನ ಬರಹಗಳು ಮತ್ತು ಸಮುದಾಯದ ಹಿರಿಯರು ಮತ್ತವರ ಅನುಭವಗಳನ್ನು ಪ್ರಸ್ತುತ ವಿಷಯಕ್ಕೆ ಬಳಕೆ ಮಾಡಿಕೊಳ್ಳಲಾಗಿದೆ. ಹಾಗೂ ಕ್ಷೇತ್ರಕಾರ್ಯ ಕೈಗೊಂಡಾಗ ಪೂರ್ವಸಿದ್ಧತೆಗೆ

ಪ್ರಶ್ನಾವಳಿಯ ಚೌಕಟ್ಟನ್ನು ಹಾಕಿಕೊಂಡು ಪಾಂಚಾಳರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಿ ಈ ಪ್ರಬಂಧಕ್ಕೆ ಅಗತ್ಯವಾದ ವಿಷಯಗಳನ್ನು ಪೂರಕವಾಗಿ ಅಳವಡಿಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೪. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪ ಇಂತಿದೆ

ಅಧ್ಯಾಯ - ೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಯನ್ನು ಪ್ರಾರಂಭದಲ್ಲೇ ತಿಳಿಸಲಾಗಿದೆ. ಈ ಮಹಾ ಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಗೆ ಸಂಬಂಧಿಸಿದಂತೆ ಸಂಶೋಧನೆಯ ಚೌಕಟ್ಟನ್ನು ತಿಳಿಸಲಾಗಿದೆ.

ಅಧ್ಯಾಯ - ೨ ಪಾಂಚಾಳರನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನದ ಸಮೀಕ್ಷೆ

ಈ ಅಧ್ಯಾಯದಲ್ಲಿ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ವೈಧಾನಿಕತೆಯ ದೃಷ್ಟಿಯಿಂದ ಮಾಡಲಾಗಿದೆ. ಹಾಗೂ ನಡೆದಿರುವ ಅಧ್ಯಯನಗಳು ಯಾವ ಮಾದರಿಯಲ್ಲಿ ನಡೆದಿವೆ ಎಂದು ತಿಳಿಸಲಾಗಿದೆ.

ಅಧ್ಯಾಯ - ೩. ಪಾಂಚಾಳರ ಐತಿಹಾಸಿಕ ನೆಲೆ

ಈ ಅಧ್ಯಾಯವು ಪಾಂಚಾಳರ ಮೂಲ ಇತಿಹಾಸವನ್ನು ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಶಾಸನಗಳಲ್ಲಿ ಪಾಂಚಾಳರು, ಜನಪದ ಕಾವ್ಯಗಳಲ್ಲಿ ಪಾಂಚಾಳರು ಹಾಗೂ ಸಾಹಿತ್ಯ ಕೃತಿಗಳಲ್ಲಿ ಪಾಂಚಾಳರು ಎಂದು ವಿಭಾಗ ಮಾಡಿಕೊಂಡು ಉಲ್ಲೇಖಗಳನ್ನು ತಿಳಿಸುತ್ತ ಮೂಲ ಇತಿಹಾಸವನ್ನು ತಿಳಿಸಲಾಗಿದೆ.

ಅಧ್ಯಾಯ - ೪ ಪಾಂಚಾಳರ ಬದುಕು, ಭಾಷೆ

ಈ ಅಧ್ಯಾಯವು ಪಾಂಚಾಳರ ಬದುಕು, ಭಾಷೆ ಕುರಿತದ್ದಾಗಿದೆ. ಈ ಅಧ್ಯಾಯದಲ್ಲಿ ಪಾಂಚಾಳರ ಬದುಕು ಮತ್ತು ಸಂಸ್ಕೃತಿ ಹಾಗೂ ಪಾಂಚಾಳರ ಭಾಷಾಬಳಕೆ ಸಮಾಜೋಭಾಷಿಕ ಅಧ್ಯಯನ ಎಂದು ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಪಾಂಚಾಳರ ಐದು ವೃತ್ತಿಗಳ ಪದನಿಷ್ಪತ್ತಿಯ ಜೊತೆಗೆ ಇತರೆ ಸಮುದಾಯಗಳೊಂದಿಗೆ ಇರುವ ಸಂಬಂಧ, ಬದುಕು ಮತ್ತು ಸಂಸ್ಕೃತಿಯನ್ನು ತಿಳಿಸಲಾಗಿದೆ. ಅಂದರೆ ಇವರು ವೃತ್ತಿಯಲ್ಲಿ ಅನುಸರಿಸುವ ನಿಯಮಗಳು, ಉತ್ಪಾದಿಸುವ ನಿರ್ಮಾಣಗಳನ್ನು ಕುರಿತು ವಿವರವಾಗಿ ಹೇಳಲಾಗಿದೆ. ಪಾಂಚಾಳರ ಭಾಷಾಬಳಕೆ-ಸಮಾಜೋಭಾಷಿಕ ಅಧ್ಯಯನದಲ್ಲಿ ಒಂದು ಸಮಾಜ ವಿವಿಧ ಜಾತಿ, ವರ್ಗ, ಶ್ರೇಣಿ, ಸ್ಥಾನಮಾನಗಳನ್ನು ಒಳಗೊಂಡಿರುವ ವ್ಯಕ್ತಿಗಳ ಸಮೂಹ, ಇವರೆಲ್ಲ ತಮ್ಮ ನಡುವಿನ ಸಂವಹನಕ್ಕೆ ಒಂದೇ ಭಾಷೆಯನ್ನು ಬಳಸುತ್ತಿದ್ದರೂ ವ್ಯಕ್ತಿಗಳ ಸಾಮಾಜಿಕ ನೆಲೆಯ ಅಂಶಗಳು ಅದರ ಭಾಷೆಯಲ್ಲಿ ಬಿಂಬಿತವಾಗಿರುತ್ತವೆ. ಆದರೆ ಅದರ ಅರ್ಥ ಒಂದೇ ತೆರನಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಂಚಾಳರನ್ನು ಬಳಸಿಕೊಂಡು ನಿರ್ಮಾಣವಾದ ಗಾದೆ-ಒಗಟುಗಳು, ಸಂಬೋಧನಾ ರೂಪ ಮತ್ತು ವ್ಯಕ್ತಿನಾಮಗಳ ಬಳಕೆ, ವ್ಯಕ್ತಿನಾಮಗಳ ಬಳಕೆ

ಪರಂಪರೆ ಮತ್ತು ಆಧುನಿಕ ಸಂದರ್ಭ, ಬೈಯ್ಗುಳ, ವ್ಯಂಗ್ಯ, ಮೂದಲಿಕೆ, ಭಾಷಾ ಬಳಕೆ ಮತ್ತು ಆಚರಣೆ, ನಂಬಿಕೆಗಳು ಇಂತಹ ಸಾಮಾಜಿಕ ಭಿನ್ನಾಂಶಗಳನ್ನು ಚರ್ಚಿಸುತ್ತಾ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ - ೫ ಆಚರಣೆ, ಸಂಪ್ರದಾಯಗಳು

ಈ ಅಧ್ಯಾಯದಲ್ಲಿ ಸಮುದಾಯದ ಸಾಮಾನ್ಯ ದೈವ, ನಂಬಿಕೆ, ನಿಷೇಧ, ಆಚರಣೆಗಳು ಹಾಗೂ ವೃತ್ತಿಯಾಧಾರಿತ ನಂಬಿಕೆ, ನಿಷೇಧ, ಆಚರಣೆಗಳು ಅಂದರೆ ಪಾಂಚಾಳರ ದೈವಗಳಾದ ಕಾಳಮ್ಮ, ಭರಮಪ್ಪ, ವಿಶ್ವಕರ್ಮ, ಮೌನೇಶ್ವರ, ನಾಗಲಿಂಗಜ್ಜ ಹಾಗೂ ಸಮುದಾಯದ ಸಾಮಾನ್ಯ ಆಚರಣೆಗಳಾದ ಜನನ, ಬಾಣಂತನ, ನಾಮಕರಣ, ಜವುಳ, ಉಪನಯನ, ಋತುಮತಿ, ಮದುವೆ, ಸೀಮಂತ, ಸಾವು-ಸಂಸ್ಕಾರ ಹಾಗೂ ಸಾಮಾಜಿಕ ಹಬ್ಬಗಳು, ಪಾಂಚಾಳರ ಧಾರ್ಮಿಕ, ಸಾಮಾಜಿಕ ಸ್ಥಾನಮಾನ, ವೃತ್ತಿ ಸಂಬಂಧಿ ಆಚರಣೆ, ವೃತ್ತಿಸಂಬಂಧಿ ಹಬ್ಬ-ಆಚರಣೆಗಳು, ವೃತ್ತಿ ಸಂಬಂಧಿ ನಂಬಿಕೆ-ನಿಷೇಧಗಳು ಇವುಗಳನ್ನು ಕುರಿತು ಸೂಕ್ಷ್ಮ ಅವಲೋಕನ ಮಾಡಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ - ೬ ಸಮಾರೋಪ

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದಿಂದ ಕಂಡುಕೊಂಡ ಫಲಿತಗಳನ್ನು ಹೇಳಲಾಗಿದೆ. ಹಾಗೂ ಅನುಬಂಧದಲ್ಲಿ ವೃತ್ತಿಉಪಕರಣಗಳು, ವಕ್ತೃವಿವರ, ಪರಾಮರ್ಶಿತ ಗ್ರಂಥಗಳ ಸೂಚಿಯನ್ನು ಅಡಕಗೊಳಿಸಲಾಗಿದೆ.

ಅಧ್ಯಾಯ - ಎರಡು

ಪಾಂಚಾಳರನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನದ ಸಮೀಕ್ಷೆ

ಅಧ್ಯಾಯ - ಎರಡು

ಪಾಂಚಾಳರನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನದ ಸಮೀಕ್ಷೆ

ಪ್ರಾಚೀನ ಕನ್ನಡ ಸಾಹಿತ್ಯ ಹಾಗೂ ಇತಿಹಾಸವನ್ನು ಅಧ್ಯಯನ ಮಾಡುತ್ತಾ ಹೋದಂತೆಲ್ಲ ಅನೇಕ ವಿಷಯಗಳು ವಸ್ತುಕೋಶಗಳಾಗಿಯೇ ಗೋಚರಿಸುತ್ತವೆ. ಯಾವುದೇ ಬಗೆಯ ಸಾಹಿತ್ಯ ರಚನೆಯಾಗಬೇಕಾದರೆ ಪರಿಸರ, ಜನಸಮುದಾಯದ ಭಾಷೆ, ಬದುಕನ್ನೇ ಅವಲಂಬಿಸಿವೆ. ಅದರಂತೆ ಪ್ರಸ್ತುತ ಅಧ್ಯಯನ ಜನಾಂಗೀಯ ಮೂಲವಾಗಿದ್ದು, ಅದರ ಸುತ್ತ ಹೆಣೆದುಕೊಂಡ ವಿಷಯಗಳ ಸತ್ಯವನ್ನು ಕಂಡುಕೊಳ್ಳುವ ಉದ್ದೇಶ ಪ್ರಬಂಧದ ಆಶಯಗಳಲ್ಲೊಂದು.

ಪ್ರತಿಯೊಂದು ಜಾತಿಗೂ ತನ್ನದೇ ಆದ ಇತಿಹಾಸ ಪರಂಪರೆ ಇದೆ. ಲಿಂಗಾಯತ, ಬ್ರಾಹ್ಮಣ, ವೀರಶೈವ, ಕುರುಬ ಮುಂತಾದ ಜಾತಿಸಮುದಾಯಗಳಂತೆ ಪಾಂಚಾಳರಿಗೂ ಅವರದೇ ಆದ ಇತಿಹಾಸವಿದೆ. "ಪಾಂಚಾಳರ ಇತಿಹಾಸವು ಮಾನವ ಜನಾಂಗ ಭೂಮಿಯ ಮೇಲೆ ಉದಯಿಸಿದಾಗಿನಿಂದಲೂ ಆರಂಭಗೊಂಡಿದೆ ಎಂಬ ಕಲ್ಪನೆಯೊಂದಿದೆ. ಈ ವಿಶ್ವವನ್ನು ಹುಟ್ಟಿಸಿದವನೇ ವಿರಾಡ್ವಿಶ್ವಕರ್ಮನು, ವಿಶ್ವಶಿಲ್ಪಿಯೂ, ಅವನಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರ, ಸೂರ್ಯ, ಮೊದಲಾದ ದೇವತೆಗಳೂ, ರಾಕ್ಷಸರೂ, ಗಂಧರ್ವರೂ, ಪಶುಪಕ್ಷಿಗಳು ಸಕಲ ಚರಾಚರ ವಸ್ತುಗಳೂ ನಿರ್ಮಿಸಲ್ಪಟ್ಟಿವೆ. ನಿರಾಕಾರನಾಗಿದ್ದ ವಿಶ್ವಕರ್ಮನು ಲೀಲಾ ವಿನೋದದಿಂದ ತನ್ನ ಸಾಕಾರವನ್ನು, ವಿಶ್ವವನ್ನು ಸೃಷ್ಟಿಸುವ ಮೂಲಕ ತೋರಿಸಿಕೊಂಡಿದ್ದಾನೆ. ಋಗ್ವೇದದಲ್ಲಿ ಬರುವ ಪುರುಷಸೂಕ್ತವು ಅವನದೇ ಆಗಿದ್ದು ಸಕಲದೇವತೆಗಳಿಗೂ ಅವನೇ ತಂದೆಯಾಗಿದ್ದಾನೆ. ಅವನ ಪಂಚಮುಖಗಳಿಂದ ಉದ್ಭವಿಸಿದ ಜನಾಂಗವೇ ಪಂಚಾನನರು ಅಥವಾ ಪಾಂಚಾಳರೆಂದು ಕರೆಯಲ್ಪಡುತ್ತಿದ್ದಾರೆ. ಪಂಚಶಿಲ್ಪಗಳನ್ನು ಮಾಡಿ ಲೋಕಕಲ್ಯಾಣವನ್ನು ಮಾಡುವವರಾದ್ದರಿಂದ ವಿಶ್ವಬ್ರಾಹ್ಮಣರೆಂದೂ, ವಿಶ್ವಕರ್ಮನನ್ನೇ ಕುಲದೇವನನ್ನಾಗಿ ಪೂಜಿಸುತ್ತಿರುವುದರಿಂದ

ವಿಶ್ವಕರ್ಮರೆಂದೂ ಈ ಜನಾಂಗವು ಕರೆಯಲ್ಪಡುತ್ತದೆ" ಎಂದು ವಿಶ್ವಕರ್ಮರ ಇತಿಹಾಸ (ಶಿಲ್ಪ ಸಹ್ಯಾದ್ರಿ ಪುಟ-೭೧) ಕುರಿತು ಚರ್ಚಿಸುವ ಸಂದರ್ಭದಲ್ಲಿ ವ್ಹಿ.ಜಿ.ದೀಕ್ಷಿತ ಅವರು ಅಭಿಪ್ರಾಯ ಪಡುತ್ತಾರೆ.

ವಿಶ್ವಬ್ರಾಹ್ಮಣ ಸಂಸ್ಕೃತಿಯು ಶುದ್ಧ ವೈದಿಕ ಸಂಪ್ರದಾಯಕ್ಕೆ ಸೇರಿದ್ದು ಎಂದು ಬ್ಯಾರಿಸ್ಟರ ಎಂಬ ವಿದ್ವಾಂಸರು ತಿಳಿಸುತ್ತಾರೆ. ಆಲ್ಫ್ರೆಡ್ ಎಡ್ವರ್ಡ್ ರಾಬರ್ಟನು ತನ್ನ ಕೃತಿಯಾದ Vishwakarma & His deseendeht ಇದರಲ್ಲಿ ಸಾನಗ, ಸನಾತನ, ಅಹಭೂನ, ಶಿಲ್ಪಿ ಹಾಗೂ ದೈವಜ್ಞ ಎಂಬ ಪಂಚಗೋತ್ರಗಳ ಜನರಾದ ಕಮ್ಮಾರ, ಬಡಿಗ, ಕಂಚುಗಾರ, ಶಿಲ್ಪಿ ಹಾಗೂ ಅಕ್ಕಸಾಲಿಗಳಿಗೆ ಕ್ರಮವಾಗಿ ದೀಕ್ಷಿತ್, ಮಹಾಮುನಿ, ಧರ್ಮಾಧಿಕಾರಿ, ಪಂಡಿತ, ವೇದಪಾಠಕರೆಂಬ ಅಡ್ಡಹೆಸರುಗಳಿವೆ ಎಂದು ಗುರುತಿಸಿ ಈ ಜನರು ರಾಜರಾಗಿ, ರಾಜಗುರುಗಳಾಗಿ, ಪಂಡಿತರಾಗಿ ಮೆರೆದಿರುವ ವಿಷಯವನ್ನು ತಿಳಿಸುತ್ತಾರೆ. ಬಾದಾಮಿಯ ಚಾಲುಕ್ಯರು ವಿಶ್ವಕರ್ಮರೆಂದು ಓಂ.ಪ್ರಕಾಶ ಶರ್ಮಾ ಅವರು 'ಪಾಂಚಾಳ ಬ್ರಾಹ್ಮಣೋಂಕಿ ಉತ್ಪತ್ತಿ' ಲೇಖನದಲ್ಲಿ ವಿವರಿಸಿದ್ದಾರೆ.

ಹಾಗೆಯೇ ಪ್ರಾಚೀನ ಕೃತಿಗಳಾದ ಪಂಪಭಾರತ, ಗದಾಯುದ್ಧ, ಶಬ್ದಮಣಿದರ್ಪಣ, ಸಿದ್ಧರಾಮ ಚಾರಿತ್ರ್ಯ, ಕುಮಾರರಾಮನ ಸಾಂಗತ್ಯ ಮುಂತಾದ ಕೃತಿಗಳಲ್ಲಿ ಪಾಂಚಾಳರ ಕುರಿತು ಮಾಹಿತಿ ದೊರೆಯುತ್ತದೆ. ಅಲ್ಲದೆ ವಚನಕಾರರು, ತ್ರಿಪದಿಕಾರರು, ತತ್ವಪದಕಾರರು ಇವರುಗಳಲ್ಲಿಯೂ ಪಾಂಚಾಳರ ವೃತ್ತಿಗಳ ಕುರಿತು ಅವರು ಸಮಾಜದಲ್ಲಿ ಯಾವ ರೀತಿಯಾಗಿ ಬೆರತು ಕೊಂಡಿದ್ದರು ಎಂಬುದನ್ನು ಉಲ್ಲೇಖಿಸುತ್ತದೆ.

ಇಂತಹ ಅನೇಕ ಉದಾಹರಣೆಗಳು ಸಾಹಿತ್ಯದುದ್ದಕ್ಕೂ ಸಿಗುವುದರಿಂದ ಪಾಂಚಾಳರ ಇತಿಹಾಸ ಕ್ರಿ.ಪೂ.೧-೨ನೇ ಶತಮಾನದಿಂದ ಇಂದಿನವರೆಗೂ ಜನಜನಿತವಾಗಿದೆ ಎಂದು ಹೇಳಬಹುದು. ಇಂತಹ ಸಮುದಾಯದ ಕುರಿತು ಅನೇಕ ಕೃತಿಗಳು ರಚನೆಯಾಗಿದೆ. ಹಾಗಾಗಿ ಅವುಗಳ ಕುರಿತು ಸಮೀಕ್ಷೆ ಮಾಡುವುದು ಸೂಕ್ತವೆನಿಸುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿರುವ ಡಾ.ದೇವೇಂದ್ರಕುಮಾರ ಹಕಾರಿ ಮತ್ತು ಡಾ.ಕೆ.ಆರ್.ಸಂಧ್ಯಾರೆಡ್ಡಿಯವರು ಸಂಪಾದಿಸಿರುವ 'ಗ್ರಾಮೀಣ ವೃತ್ತಿಗಳು' ಎಂಬ ಕೃತಿಯಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಆರು ಲೇಖನಗಳಿವೆ. ಅವುಗಳೆಂದರೆ ಡಾ.ಸೈಯದ್ ಜಮೀರುಲ್ಲಾ ಷರೀಫ್‌ರವರ 'ಉತ್ತರ ಕನ್ನಡ ಜಿಲ್ಲೆಯ ಕಮ್ಮಾರಿಕೆ,' ನರಸಿಂಹೇಗೌಡ ನಾರಣಾಪುರರವರ 'ಚಿನಿವಾರಿಕೆ ದಕ್ಷಿಣ ಕರ್ನಾಟಕದಲ್ಲಿ', ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರ 'ದಕ್ಷಿಣ ಕನ್ನಡದಲ್ಲಿ ಚಿನಿವಾರಿಕೆ', ಪ್ರೊ.ಎಂ.ಎಲ್.ನರಸಿಂಹಮೂರ್ತಿಯವರ 'ದಕ್ಷಿಣ ಕರ್ನಾಟಕದಲ್ಲಿ ಬಡಗಿ ವೃತ್ತಿ', ಡಾ.ದಸ್ತಗೀರ ಅಲ್ಲೀಭಾಯಿಯವರ 'ಉತ್ತರ ಕರ್ನಾಟಕದ ಬಡಿಗ ವೃತ್ತಿ' ಹಾಗೂ ಆರ್.ಜಿ.ಶ್ಯಾನಭಾಗರವರ 'ಉತ್ತರ ಕನ್ನಡದಲ್ಲಿ ಬಡಿಗತನ' ಈ ಲೇಖನಗಳಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ವಿವರಿಸಿದ್ದಾರೆ.

ಡಾ.ಸೈಯದ್ ಜಮೀರುಲ್ಲಾ ಷರೀಫ್‌ರವರ 'ಉತ್ತರ ಕನ್ನಡ ಜಿಲ್ಲೆಯ ಕಮ್ಮಾರಿಕೆ' ಎಂಬ ಲೇಖನದಲ್ಲಿ ಪಾಂಚಾಳರು ಎಂದರೆ ಕಬ್ಬಿಣ, ಕಟ್ಟಿಗೆ, ಚಿನ್ನ, ಕಂಚು ಹಾಗೂ ಕಲ್ಲಿನ ಕೆಲಸ

ಮಾಡುವವರನ್ನೆಲ್ಲಾ ಪಾಂಚಾಳರು ಎಂದು ಗುರುತಿಸುತ್ತಾರೆ. ಈ ಐದು ವೃತ್ತಿಯನ್ನು ನಿರ್ವಹಿಸಬಲ್ಲ ಪ್ರತ್ಯೇಕ ವರ್ಗಗಳ ಜನರಿಗೆ ಪಾಂಚಾಳರು ಎಂದು ಹೆಸರು ಬಂದಿತು ಎಂದು ತಿಳಿಸುತ್ತಾರೆ. ಕಮ್ಮಾರರು ಆಚರಿಸುವ ಹಬ್ಬಗಳು, ಸಿದ್ಧಪಡಿಸುವ ವಸ್ತುಗಳು, ಬಳಸುವ ಕಚ್ಚಾ ಸಾಮಗ್ರಿಗಳು, ಸಾಧನ ಮತ್ತು ಉಪಕರಣಗಳು, ಕಮ್ಮಾರನ ಕೆಲಸಕ್ಕೆ ಅಡ್ಡಿಯಾಗುವ ಆತಂಕಗಳು ಹಾಗೂ ಪಾರಿಭಾಷಿಕ ಶಬ್ದಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದ್ದಾರೆ.

ಈ ಲೇಖನದಲ್ಲಿ ಲೇಖಕರು ಸಂಪೂರ್ಣವಾಗಿ ಕಮ್ಮಾರಿಕೆಯನ್ನು ವೃತ್ತಿಯನ್ನಾಗಿ ಅನುಸರಿಸಿಕೊಂಡು ಬಂದಿರುವ ಲಿಂಗಾಯತ ಕಮ್ಮಾರ, ಮುಸ್ಲಿಂ ಕಮ್ಮಾರ, ಕ್ರಿಶ್ಚಿಯನ್ ಕಮ್ಮಾರ ಹಾಗೂ ಬಯಲು ಕಂಬಾರಿಕೆಯ ಮಾಹಿತಿಯನ್ನು ಸಂಗ್ರಹಿಸಿ ವಿವರಣೆಯನ್ನು ನೀಡಿದ್ದಾರೆ. ಪಾಂಚಾಳರ ಹಬ್ಬಗಳ ವಿವರಣೆಯ ಸಂದರ್ಭದಲ್ಲಿ ಬೇರೆ ಸಮುದಾಯದವರ ಜೊತೆಗೂಡಿ ಆಚರಿಸುವ ಹಬ್ಬಗಳ ಮಾಹಿತಿಯನ್ನು ಮಾತ್ರ ತಿಳಿಸುತ್ತಾರೆ. ಈ ಸಂದರ್ಭದಲ್ಲಿ ಕುಲದೇವತೆಗೆ ಬಲಿಕೊಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಮಾಂಸಹಾರಿಗಳಾದ ಇವರು ಸೋಮವಾರ, ಶನಿವಾರ ಹಾಗೂ ಸಂಕಷ್ಟ ಚೌತಿ ದಿನಗಳಲ್ಲಿ ಪೂರ್ಣ ಸಸ್ಯಹಾರಿಗಳಾಗಿರುತ್ತಾರೆ. ಆದರೆ ಉಳಿದ ದಿನಗಳಲ್ಲಿ ಮಾಂಸಹಾರಿಗಳು ಎಂದು ತಿಳಿಸುತ್ತಾರೆ.

ಪಾಂಚಾಳರೆಂದರೆ ವಿಶ್ವಕರ್ಮನ ವಂಶೋದ್ಭವರೆಂದು ವಿಶ್ವಕರ್ಮನ ಒಂದೊಂದು ಮುಖದಿಂದ ಇವರು ಜನಿಸಿದವರೆಂದು ಗುರುತಿಸುತ್ತಾರೆ. ಹಾಗಾದರೆ ಇವರು ಮಾಂಸಹಾರಿಗಳು ಎಂದು ಹೇಳುವುದಕ್ಕೆ ಬರುವುದಿಲ್ಲ. ಕಮ್ಮಾರಿಕೆಯ ವೃತ್ತಿಯ ಸಂದರ್ಭದಲ್ಲಿ ಪಾಂಚಾಳರು ಅನುಸರಿಸುವ ಆಚರಣೆ ವಿಧಿ-ವಿಧಾನಗಳನ್ನು, ವೃತ್ತಿ ಮತ್ತು ಕುಲದೇವತೆಗಳ ಹಬ್ಬಗಳಾದ ಶಿರಸಂಗಿ ಕಾಳಮ್ಮದೇವಿಯ ಜಾತ್ರೆ, ತಿಂಥಿಣಿ ಮೊನಪ್ಪಯ್ಯನ ಜಾತ್ರೆ ಇವುಗಳ ಬಗ್ಗೆ ಉಲ್ಲೇಖವನ್ನೇ ಮಾಡುವುದಿಲ್ಲ. ಆದ್ದರಿಂದ ಈ ಲೇಖನದ ಮೊದಲಿಗೆ ಪಾಂಚಾಳರೆಂದರೆ ಯಾರು ಎಂಬುದನ್ನು ಗುರುತಿಸಿ ನಂತರ ಕಮ್ಮಾರಿಕೆಯನ್ನು ವೃತ್ತಿಯಾಗಿ ಅನುಸರಿಸಿಕೊಂಡು ಬಂದಿರುವ ಜನಾಂಗವು ಆಚರಿಸುವ ವಿಧಿ ವಿಧಾನಗಳನ್ನು ತಿಳಿಸಲು ಪ್ರಯತ್ನಿಸಿದ್ದಾರೆ.

ನರಸಿಂಹೇಗೌಡ ನಾರಣಾಪುರರವರ 'ಚಿನಿವಾರಿಕೆ-ದಕ್ಷಿಣ ಕರ್ನಾಟಕದಲ್ಲಿ' ಎಂಬ ಈ ಲೇಖನವನ್ನು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಿ ಈ ಲೇಖನವನ್ನು ಸಿದ್ಧಪಡಿಸಿದ್ದಾರೆ. ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕುಶಲಕರ್ಮಿಯೇ ಅಕ್ಕಸಾಲಿಗ, ಚಿನಿವಾರ, ಓಜ, ಸೊನಾರರು, ಚಿನ್ನಾಚಾರಿ, ಆಚಾರಿ, ಆಚಾರ್ರು, ಪತ್ತಾರು, ವಿಶ್ವಕರ್ಮ, ಪಾಂಚಾಳ ಮುಂತಾದ ಹೆಸರುಗಳಿಂದ ಪ್ರಾದೇಶಿಕತೆಗೆ ಅನುಗುಣವಾಗಿ ಕರೆಯಲ್ಪಡುತ್ತಾರೆ ಎಂದು ತಿಳಿಸುತ್ತಾರೆ. ಅಕ್ಕಸಾಲಿಗರ ಪ್ರಾಚೀನತೆಯನ್ನು ಗುರುತಿಸುತ್ತ ಚಿನಿವಾರಿಕೆ ಪದದ ನಿಷ್ಪತ್ತಿಯನ್ನು ಅರ್ಥೈಸುತ್ತಾರೆ.

ಮೇಲೆ ತಿಳಿಸಿದ ಕ್ಷೇತ್ರಗಳಲ್ಲಿ ಚಿಕ್ಕಮನೆ ಆಚಾರ್ರು, ದೊಡ್ಡಮನೆ ಆಚಾರ್ರು, ಕುಲಾಚಾರ್ರು, ಮತಾಚಾರ್ರು ಹಾಗೂ ಲಿಂಗಾಚಾರ್ರು ಎಂಬ ಜಾತಿಗಳು ಕಂಡುಬರುತ್ತವೆ. ಚಿಕ್ಕಮನೆ ಆಚಾರ್ರು ಮಾಂಸವನ್ನು ತಿನ್ನುವುದಿಲ್ಲ. ದೊಡ್ಡ ಮನೆ ಆಚಾರ್ರು, ಕುಲಾಚಾರ್ರು, ಮತಾಚಾರ್ರು ಮಾಂಸವನ್ನು

ಸೇವಿಸುತ್ತಾರೆ. ಲಿಂಗಚಾರ್ರು ಇವರು ವೃತ್ತಿಯನ್ನು ಅವಲಂಬಿಸಿದ ಲಿಂಗಾಯತರು ಇವರು ಕೂಡ ಮಾಂಸವನ್ನು ತಿನ್ನುವುದಿಲ್ಲ. ಈ ಎಲ್ಲಾ ಜಾತಿಗಳಲ್ಲಿ ಚಿಕ್ಕಮನೆ ಆಚಾರ್ರು ಮಾತ್ರ ವೈದಿಕ ಪರಂಪರೆಯುಳ್ಳವರಾಗಿದ್ದಾರೆ ಎಂದು ತಿಳಿಸುತ್ತಾರೆ.

ವೈದಿಕ ಪರಂಪರೆಯ ಪಾಂಚಾಳರ ಹುಟ್ಟಿನಿಂದ ಹಿಡಿದು ಮರಣದವರೆಗಿನ ನಾನಾ ವಿಧಿ ನಿಷೇಧಗಳನ್ನು ಕಲೆಹಾಕಿದ್ದಾರೆ. ಇದರ ಜೊತೆಗೆಯೇ ಚಿನ್ನ, ಬೆಳ್ಳಿ, ವಜ್ರವನ್ನು ತೂಕದ ಆಧಾರಿತವಾಗಿ ಬೆಲೆ ಕಟ್ಟಲಾಗುತ್ತದೆ. ಅವುಗಳ ವಿವರವನ್ನು ಪ್ರಾಚೀನ ಕಾಲದಿಂದ ಆಧುನಿಕದವರೆಗೆ ವಿವರಣೆಯ ಪಟ್ಟಿಯನ್ನು, ಅಕ್ಕಸಾಲಿಗರು ಆಭರಣಗಳನ್ನು ತಯಾರಿಸಲು ಬೇಕಾಗಿರುವ ಸಾಧನಗಳನ್ನು, ಅವುಗಳ ಉಪಯೋಗ, ಕೆಲಸ ಮಾಡುವ ಸಂದರ್ಭದಲ್ಲಿ ಬೆಸಗೆ ಹಾಕುವಾಗ ಬರುವ ಹೊಗೆಯಿಂದಾಗಿ ಅವರಿಗೆ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚು ಎಂದು ತಿಳಿಸುತ್ತಾರೆ.

ಮೇಲೆ ತಿಳಿಸಿದ ಕ್ಷೇತ್ರಗಳಲ್ಲಿ ಪಾಂಚಾಳರು ಆಚರಿಸುವ ಹಬ್ಬಗಳು, ಸಾವು, ಸಂಸ್ಕಾರಕ್ಕೆ ಸಂಬಂಧಿಸಿದ ವಿಧಿ-ವಿಧಾನ, ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ, ಸರ್ಕಾರದಿಂದ ಅವರಿಗೆ ಸಿಗುವ ಸವಲತ್ತುಗಳು, ಇಂದಿನ ಆಧುನಿಕ ಸಂದರ್ಭದಲ್ಲಿ ಸಂಪ್ರದಾಯಿಕ ವೃತ್ತಿ ನಶಿಸುತ್ತ ಬರುತ್ತದೆ. ಆಧುನಿಕತೆಗೆ ತಕ್ಕಂತೆ ಅವರ ವೃತ್ತಿಬದುಕಿನಲ್ಲಾದ ಮಾರ್ಪಾಡು ಇದಕ್ಕೆ ಸಂಬಂಧಿಸಿದಂತೆ ಅವರಲ್ಲಿಯ ಸಂಘ-ಸಂಸ್ಥೆಗಳಾಗಲಿ ಸರ್ಕಾರದಿಂದಾಗಲಿ ಅವರಿಗೆ ವೃತ್ತಿ ತರಬೇತಿಗೆ ಇರುವ ಮಾಹಿತಿ ಮುಂತಾದ ವಿಷಯಗಳನ್ನು ಅಧ್ಯಾಯನಕ್ಕೆ ಒಳಪಡಿಸಿದ್ದರೆ. ಇನ್ನೂ ಹೆಚ್ಚಾಗಿ ಅಕ್ಕಸಾಲಿಗ ವೃತ್ತಿಯ ಮೇಲೆ ಬೆಳಕು ಚೆಲ್ಲಬಹುದಿತ್ತು ಅನಿಸುತ್ತದೆ.

ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರ 'ದಕ್ಷಿಣ ಕನ್ನಡದಲ್ಲಿ ಚಿನಿವಾರಿಕೆ' ಈ ಲೇಖನದಲ್ಲಿ ಚಿನ್ನದ ಸಂಶೋಧನೆಯ ಬಗ್ಗೆ, ಅದರ ಪ್ರಾಚೀನತೆಯ ಬಗ್ಗೆ, ಸ್ತ್ರೀ ಪುರುಷರು ಪ್ರಾಚೀನ ಕಾಲದಲ್ಲಿ ಧರಿಸುತ್ತಿದ್ದ ಆಭರಣಗಳು, ವೇದಗಳಲ್ಲಿ, ಪುರಾಣಗಳಲ್ಲಿ, ರಾಮಯಣ ಮಹಾಭಾರತಗಳಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ವರ್ಣನೆಯನ್ನು, ಆಚಾರ್ಯ ಮತ್ತು ಆಚಾರಿ ಎಂಬ ಪದಗಳ ಕುರಿತಂತೆ ಪುರಾಣದ ಕಥೆಗಳ ವಿವರಣೆಯನ್ನು ನೀಡಿದ್ದಾರೆ.

ಅಕ್ಕಸಾಲಿಗರು ವಿಶ್ವಕರ್ಮನ ಪಂಚಮುಖಗಳಲ್ಲಿ ಒಬ್ಬರು. ಇವರ ಜೀವನಾವರ್ತನ ಆಚರಣೆಗಳು, ಆಚರಿಸುವ ಹಬ್ಬಗಳು, ಅವರು ಚಿನ್ನ ಶುದ್ಧಿ ಮಾಡುವ ವಿಧಾನ, ಉಪಯೋಗಿಸುವ ಉಪಕರಣಗಳು, ಮತ್ತು ಉಂಟಾಗಿರುವ ತೊಂದರೆಗಳನ್ನು ವಿವರಿಸಿದ್ದಾರೆ. ಆದರೆ ಅಕ್ಕಸಾಲಿಗರ ಹಬ್ಬಗಳ ವಿವರಣೆಯನ್ನು ನೀಡುವಾಗ ಇತರೇ ಜನಾಂಗದ ಜೊತೆ ಸೇರಿ ಆಚರಿಸುವ ಹಬ್ಬಗಳ ವಿವರಣೆಯನ್ನು ಮಾತ್ರ ಕೊಡುತ್ತಾರೆ. ಇವರ ಕುಲದೇವತೆಗಳ ಹಬ್ಬಗಳ ವಿವರಣೆಯನ್ನು ಅಧ್ಯಯನಕ್ಕೆ ಲೇಖಕರು ಒಳಪಡಿಸಿಲ್ಲ. ಈ ಚಿನಿವಾರಿಕೆಯ ಕೆಲಸದಿಂದ ಅವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಉತ್ತಮವಾಗಿದಿಯೋ ಇಲ್ಲವೋ, ಅಕ್ಕಸಾಲಿ ಕೆಲಸದಿಂದ ಅವರಿಗೆ ಉಂಟಾಗಿರುವ ತೊಂದರೆಗಳನ್ನು ಹೇಗೆ ಪರಿಹರಿಸಿಕೊಳ್ಳಬಹುದು ಎಂಬೆಲ್ಲಾ ವಿಷಯದ ಕಡೆಗೆ ಲೇಖನದಲ್ಲಿ ಮಾಹಿತಿಯನ್ನು ಒದಗಿಸಿದ್ದರೆ ತುಂಬ ಉತ್ತಮವಾಗಿರುತಿತ್ತು.

ಪ್ರೊ.ಎಂ.ಎಲ್.ನರಸಿಂಹಮೂರ್ತಿಯವರ 'ದಕ್ಷಿಣ ಕರ್ನಾಟಕದಲ್ಲಿ ಬಡಗಿ ವೃತ್ತಿ' ಎಂಬ ಲೇಖನದಲ್ಲಿ ಜನಾಂಗದ ಸಂಕ್ಷಿಪ್ತ ಪರಿಚಯದ ಜೊತೆಗೆ ಬಡಗಿ ವೃತ್ತಿ ಪ್ರಾಚೀನತೆಯಿಂದ ಆಧುನಿಕತೆಯ ಕಡೆಗೆ ನಡೆದು ಬಂದ ರೀತಿಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾರೆ. ಪಾಂಚಾಳರು ವೈದಿಕ ಆಚರಣೆಗಳನ್ನು ಅನುಸರಿಸುವರು. ಅವರು ಹುಟ್ಟಿನಿಂದ ಸಾಯುವತನಕ ಆಚರಿಸುವ ವಿಧಿ-ವಿಧಾನಗಳ ಕುರಿತು ತಿಳಿಯಪಡಿಸಿದ್ದಾರೆ.ಆದರೆ ವಿವಾಹಕ್ಕೆ ಸಂಬಂಧಿಸಿದಂತೆ ಮರುವಿವಾಹ, ವಿಧವಾ ವಿಚ್ಛೇದನೆ, ಕೂಡಿಕೆ ಇವುಗಳಿಗೆ ಸಂಬಂಧಿಸಿದಂತೆ ಹಾಗೂ ಈ ಸಂಪ್ರದಾಯಗಳು ಆಧುನಿಕ ಸಂದರ್ಭದಲ್ಲಿಯೂ ಮುಂದುವರೆದುಕೊಂಡು ಬಂದಿವೆಯೋ ಇಲ್ಲವೋ ಎಂಬುದರ ಬಗ್ಗೆ ಗಮನ ಹರಿಸಬೇಕಿತ್ತು. ಸಾವು ಸಂಸ್ಕಾರಗಳಲ್ಲಿ ವೈದಿಕ ಶಾಹಿಯ ವಿಧಿ ವಿಧಾನಗಳನ್ನು ಅನುಸರಿಸುವ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. ಈ ವಿಚಾರಗಳು ಮದುವೆಯಾದವರಿಗೆ ಮಾತ್ರ ಸಂಬಂಧಿಸಿದ ವಿಷಯಗಳನ್ನು ನಿರೂಪಿಸಿದ್ದಾರೆ. ಈ ಸಂಪ್ರದಾಯ, ಆಚರಣೆಗಳ ಸಮುದಾಯದಲ್ಲಿ ಮದುವೆ ಆಗದೆ ಇರುವವರು ತೀರಿಕೊಂಡರೆ, ಮದುವೆಗೆ ಮುಂಚೆಯೇ ತೀರಿಕೊಂಡವರು ಇಂತಹವುಗಳ ಬಗ್ಗೆ ಮಾಹಿತಿಯನ್ನು ಒದಗಿಸಿದ್ದರೆ ಇನ್ನೂ ಈ ಲೇಖನವು ತುಂಬ ಉತ್ತಮವಾಗಿರುತಿತ್ತು.

ವ್ಯವಸಾಯ, ಪಿರೋಪಕರಣಗಳು, ಗೃಹ ನಿರ್ಮಾಣ, ಗೃಹಬಳಕೆ, ಧಾರ್ಮಿಕ, ಕ್ರೀಡೆಗೆ, ಶಾಲಾ ಕಾಲೇಜ್‌ಗಳಲ್ಲಿ ಬಳಸುವ ಇತರೆ ಸಿದ್ಧಪಡಿಸುವ ವಸ್ತುಗಳಿಗೆ ಸಂಬಂಧಿಸಿದಂತೆ ದೀರ್ಘವಾದ ಪಟ್ಟಿಯನ್ನು ನೀಡಿದ್ದಾರೆ.

ಬಡಗಿತನಕ್ಕೆ ಬೇಕಾಗುವ ಸಾಧನ ಮತ್ತು ಉಪಕರಣಗಳು, ಬಳಸುವ ಕಚ್ಚಸಾಮಗ್ರಿಗಳು, ತಯಾರಿಕೆಯ ವಿವಿಧ ಹಂತಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ತಿಳಿಸುತ್ತಾರೆ. ಆದರೆ ಈ ಬಡಗಿ ವೃತ್ತಿಯಿಂದ ದೊರಕುವ ಆದಾಯ, ಅವರ ಶ್ರಮ, ಸರ್ಕಾರಿ ಕೆಲಸಗಳಲ್ಲಿ ಮೀಸಲು, ಬಡಗಿ ಕೆಲಸಕ್ಕೆ ಸರ್ಕಾರಿ ಬ್ಯಾಂಕುಗಳಿಂದ ದೊರಕುವ ಸಾಲದ ಸೌಲಭ್ಯ, ಬಡಗಿತನಕ್ಕೆ ಉಪಯೋಗಿಸುವ ಕಟ್ಟಿಗೆಗಳನ್ನು ಪರೀಕ್ಷಿಸುವ ವಿಧಾನ, ಯಾವ ವಸ್ತುಗಳ ತಯಾರಿಕೆಗೆ ಯಾವ ಮರವನ್ನು ಬಳಸಿದರೆ ಸೂಕ್ತ ಎಂಬೆಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿದ್ದರೆ ಬಡಿಗತನ ಕೆಲಸದ ಬಗ್ಗೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಬಹುದಿತ್ತು.

ಡಾ.ದಸ್ತಗೀರ ಅಲ್ಲೀಭಾಯಿ ಅವರ 'ಉತ್ತರ ಕರ್ನಾಟಕದ ಬಡಿಗ ವೃತ್ತಿ' ಎಂಬ ಲೇಖನದಲ್ಲಿ ಆಯಗಾರರ ವೃತ್ತಿಯಲ್ಲಿ ಪಾಂಚಾಳರು ಪ್ರಮುಖ ಪಾತ್ರವಹಿಸುತ್ತಾರೆ. ಈ ಆಯ ಪದ್ಧತಿಯು ಭಾರತದ ತುಂಬೆಲ್ಲಾ ಇದೆ. ಆದರೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕ್ರಿ.ಶ.ಹನ್ನೊಂದನೆಯ ಶತಮಾನದಿಂದೀಚೆಗೆ ಶಾಸನಗಳಲ್ಲಿ ಆಯಗಾರರ ಬಗ್ಗೆ ಹಲವು ಹತ್ತು ಪ್ರಸ್ತಾಪಗಳಿವೆ. ಆಯಗಾರರಿಗೆ ಆಯಕೊಡುವುದರ ಜೊತೆಗೆ ವಿವಿಧ ರೀತಿಯ ಕಾಣಿಕೆ, ಸಂಭಾವನೆಗಳನ್ನು ಕೊಡುವುದಿದೆ. ಇವುಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಧಾನ್ಯ, ವಸ್ತು ಅಥವಾ ಹಣದ ರೂಪದಲ್ಲಿ ನೀಡುತ್ತಿದ್ದರು. ಇಂತಹ ಕಾಣಿಕೆಗಳು ಊರಿಂದ ಊರಿಗೆ ಭಿನ್ನವಾಗಿರುತ್ತವೆ. ಅವು ತಲೆ ತಲಾಂತರದಿಂದ ಬಂದಿರುತ್ತವೆ.

ಕುಟುಂಬಗಳಲ್ಲಿ ಪರಸ್ಪರ ಸುಖದುಃಖಗಳಲ್ಲಿ, ಧರ್ಮ ಕರ್ಮಗಳಲ್ಲಿ ಭಾಗಿಯಾಗಿಸುತ್ತವೆ. ಗ್ರಾಮ ಸಂಸ್ಕೃತಿಯ ಅಂಗವಾಗಿ ಬೆಳೆದು ಬಂದ ಆಯಗಾರರಲ್ಲಿ ಬಡಿಗೇರರು ಪ್ರಮುಖರು. ಇವರು ತಮ್ಮನ್ನು ವಿಶ್ವಬ್ರಾಹ್ಮಣರೆಂದು ಕರೆದುಕೊಳ್ಳುತ್ತಾರೆ. ಮತ್ತು ಅದನ್ನು ಪೌರಾಣಿಕ, ಐತಿಹ್ಯ, ಶಾಸ್ತ್ರ, ಪುರಾಣ ಹಾಗೂ ವೇದೋಪನಿಷತ್ತುಗಳ ಆಧಾರಗಳಿಂದ ಪುಷ್ಟೀಕರಿಸುತ್ತಾರೆ.

ಪಾಂಚಾಳ ಎಂಬ ಪದ ಕನ್ನಡ ಶಾಸನದಲ್ಲಿ ಕ್ರಿ.ಶ.೧೩೧೨ರಿಂದ ೧೮೬೪ರ ವರೆಗೆ ಉಲ್ಲೇಖವಾಗಿದೆ. ಬಡಿಗೇರ ವೃತ್ತಿಯ ಪ್ರಾಚೀನತೆ, ಸಂಪ್ರದಾಯ, ಹಬ್ಬಹರಿದಿನಗಳು, ನಂಬಿಕೆ, ಆಚರಣೆಗಳು, ಅವರು ಸಿದ್ಧಪಡಿಸುವ ವಸ್ತುಗಳು, ಬಳಸುವ ಸಾಧನ ಉಪಕರಣಗಳು, ಬಡಗಿತನದ ವಿವಿಧ ಹಂತಗಳು, ಬಡಗಿತನಕ್ಕೆ ಎದುರಾಗುವ ಅಡ್ಡಿ ಆತಂಕಗಳು, ಬಡಗಿತನದಲ್ಲಿ ಕುಟುಂಬದ ಸಹಕಾರ, ಬಡಗಿತನದ ತರಬೇತಿ ಹಾಗೂ ವೃತ್ತಿ ಪಾರಿಭಾಷಿಕ ಪದಗಳ ಮೂಲಕ ಬಡಗಿತನದ ವೃತ್ತಿಯ ಬಗ್ಗೆ ಬೆಳಕನ್ನು ಹರಿಸಿದ್ದಾರೆ.

ಆರ್.ಜಿ.ಶ್ಯಾನಭಾಗರವರ 'ಉತ್ತರ ಕನ್ನಡದಲ್ಲಿ ಬಡಗಿತನ' ಎಂಬ ಲೇಖನದಲ್ಲಿ 'ಮರಕಡಿದು, ಕೆತ್ತಿ ಗೃಹ ನಿರ್ಮಾಣದ ಮತ್ತು ಗೃಹೋಪಯೋಗಿ ಉಪಕರಣಗಳು, ರೈತೋಪಯೋಗಿ ಉಪಕರಣಗಳು ಮುಂತಾದವುಗಳನ್ನು ಪಾರಂಪರಿಕವಾಗಿ ಮಾಡುತ್ತ ಬಂದಿರುವ ಕಸುಬಿಗೆ ಬಡಗಿತನ' ಎಂದು ಜಾನಪದ ಸಾಹಿತ್ಯದ ವ್ಯಾಖ್ಯಾನವಾಗಿದೆ. ಬಡಗಿತನ ಗ್ರಾಮೀಣ ಕಸಬು, ಮನೆತನದ ಉದ್ಯೋಗ ಪರಂಪರಾಗತ ವೃತ್ತಿ, ಬಡಿಗರು ವಿಶ್ವಕರ್ಮ ಸಮಾಜದವರೆಂದು, ಕುಶಲ ಕೆಲಸಗಾರರಿಗೆ ಇದನ್ನೇ ವೃತ್ತಿನಾಮವಾಗಿ ಬಳಸುವರು, ವಿಶ್ವಕರ್ಮನನ್ನು ವೇದದಲ್ಲಿ ದೇವತೆ ಎಂಬ ಅರ್ಥದಲ್ಲಿ ಸಂಬೋಧಿಸಿದ್ದಾರೆ ಎಂದು ತಿಳಿಸುತ್ತಾರೆ.

ಯಜುರ್ವೇದದಲ್ಲಿ ವಿಶ್ವಕರ್ಮನಿಗೆ ಸಾನಗ, ಸನಾತನ, ಅಹಭೂನ, ಪ್ರತ್ನಸ ಹಾಗೂ ಸುಪರ್ಣಸರೆಂಬ ಪಂಚರ್ಷಿಗಳು ಮಾನಸ ಪುತ್ರರೆಂದು ತಿಳಿಸುತ್ತಾರೆ. ಆಯಗಾರರಾದ ಬಡಗಿಯರು ತಮ್ಮ ಹಳ್ಳಿಗಳ ಅಗತ್ಯವನ್ನು ಪೂರೈಸುತ್ತಿದ್ದರು. ಆಯದಲ್ಲಿನ ಸ್ವಲ್ಪ ಭಾಗವನ್ನು ಬಡಿಗರು ದೇವರಿಗೆ ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಚಾಲುಕ್ಯ ಮತ್ತು ಹೊಯ್ಸಳರ ಕಾಲದಿಂದ ಬಡಿಗ ವೃತ್ತಿಯ ಮೇಲೆ ಬಡಗಿದೇಟೆ, ಕೊಡತಿವನ, ಅವರು ಉಪಯೋಗಿಸುವ ಕಚ್ಚಾವಸ್ತು ಹಾಗೂ ತಯಾರಿಸಿದ ಸಿದ್ಧವಸ್ತುಗಳ ಮೇಲೆ ತೆರಿಗೆಯನ್ನು ಹಾಕಲಾಗುತಿತ್ತು ಎಂದು ಲೇಖನದಲ್ಲಿ ತಿಳಿಸುತ್ತಾರೆ.

ಬಹುಪತ್ನಿತ್ವ ಈ ಸಮುದಾಯದಲ್ಲಿ ಪ್ರಚಲಿತವಿತ್ತು. ವಿಧವಾ ವಿವಾಹಕ್ಕೆ ನಿಷೇಧವಿತ್ತು. ಅಂತರ ಜಾತಿಗಳೊಡನೆ ಸಂಬಂಧ ಇಟ್ಟುಕೊಂಡವರನ್ನು ತಮ್ಮ ಸಮಾಜದಿಂದ ಹೊರದೂಡಿ ಶಿಕ್ಷಿಸುತ್ತಿದ್ದರು. ಇಂತಹ ಅಪರಾಧಿಗಳಿಗೆ ದಂಡವನ್ನು ವಿಧಿಸುತ್ತಿದ್ದರು. ಈ ದಂಡವನ್ನು ಸಮಾಜದ ಬೋಧಕ ಅನ್ನುವನಿಗೆ ನೀಡಬೇಕಿತ್ತು. ಪೂಜಾ-ಪುನಸ್ಕಾರ, ಗಣಹೋಮ, ಹವನಗಳ ಮೂಲಕ ಆಚರಣೆ ಸಂಪ್ರದಾಯವನ್ನು, ಅಗಲಿರುವ ಹಿರಿಯರ, ಕಿರಿಯರ, ಆತ್ಮ ಸಂತೃಪ್ತಿಗೊಳಿಸಲು ಶ್ರಾದ್ಧ ಹಾಗೂ ಸರ್ವಪಿತ ಅಮವಾಸ್ಯೆಗಳು ಆಚರಿಸುತ್ತಾರೆ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಈ ಲೇಖನದಲ್ಲಿ ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ಅವರ ಆರ್ಥಿಕ ಪರಿಸರ, ಸಭೆಸಮಾರಂಭಗಳಿಗೆ ಖರ್ಚು ಮಾಡುತ್ತಿದ್ದ ಹಣ, ಮನೆ ನಿರ್ಮಾಣಕ್ಕೆ ವಿನಿಯೋಗಿಸಿದ್ದ ಹಣ ಇವುಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಆದರೆ ಆಧುನಿಕ ಸಂದರ್ಭದಲ್ಲಿ ಬಡಗಿ ವೃತ್ತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಸಿಗುವ ಸೌಲಭ್ಯಗಳು, ಗೌರವ, ವೃತ್ತಿಯಿಂದ ಆರ್ಥಿಕತೆಯ ಸ್ವಾವಲಂಬನೆ, ಗ್ರಾಮೀಣ ವೃತ್ತಿಗಳೆಲ್ಲಾ ಕ್ಷೀಣಿಸುತ್ತ ಆಧುನಿಕತೆಯ ಕಡೆಗೆ ವಾಲುವುದಕ್ಕೆ ಕಾರಣವಾಗಿರುವ ಅಂಶಗಳ ಬಗ್ಗೆ ಲೇಖನದಲ್ಲಿ ಮಾಹಿತಿಯನ್ನು ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗಿರುವ **ಡಾ.ಎಚ್.ಜೆ.ಲಕ್ಕಪ್ಪಗೌಡರು** ಸಂಪಾದಿಸಿರುವ **'ವಿಶಿಷ್ಟ ಜಾನಪದ'** ಎಂಬ ಕೃತಿಯಲ್ಲಿ **'ಪಾಂಚಾಲ ಜಾನಪದ'** ಎಂಬ ಲೇಖನವನ್ನು **ಸೊ.ಸಂ.ತಿಮ್ಮೇಗೌಡರು** ಬರೆದಿದ್ದಾರೆ. ಈ ಲೇಖನವು ಕಮ್ಮಾರ, ಬಡಗಿ, ಶಿಲ್ಪಿ, ಅಕ್ಕಸಾಲಿ ಮತ್ತು ಕಂಚುಗಾರ ಎಂಬ ವೃತ್ತಿಸೂಚಕ ಪದಗಳು ಮೇಲ್ನೋಟಕ್ಕೆ ಜಾತಿಸೂಚಕಗಳಂತೆ ಭಾಸವಾಗುತ್ತವೆ. ಆದರೆ ಆ ಜನಗಳ ಬದುಕು, ಪಾರಂಪರಿಕ ಹಾಗೂ ಜಾನಪದೀಯ ಅಂಶಗಳನ್ನು ಗಮನಿಸಿದರೆ ಈ ಐದು ವೃತ್ತಿಗಳನ್ನು ಒಂದೇ ಜಾತಿಯವರು ನಿರ್ವಹಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ ಎಂದು ತಿಳಿಸುತ್ತಾರೆ.

ಈ ವೃತ್ತಿ ಕಸುಬಿನ ಹುಟ್ಟು ಮನುಷ್ಯನ ಆದಿಮ ಬದುಕಿನ ನಾಗರೀಕತೆಯ ಮಜಲುಗಳಲ್ಲಿ ಎಂದು ಕಲ್ಲು, ಮರ, ಲೋಹಗಳು ಯಾವಾಗ ಬಳಸಲ್ಪಟ್ಟವೋ ಅಂದೇ ಹುಟ್ಟಿತು. ಈ ನಾಡಿನ ಪ್ರತಿಯೊಂದು ಪ್ರಾಗೈತಿಹಾಸದ ತುಣುಕಿನಲ್ಲೂ ಮನುಕುಲಕ್ಕೆ ಈ ವೃತ್ತಿಯವರು ಸಲ್ಲಿಸಿದ ಕಾಣಿಕೆಯನ್ನೇ ಕಾಣುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ. ಪಾಂಚಾಳರ ದೇವರು, ಇವರ ವೃತ್ತಿಯ ಬಗೆಗಿರುವ ನಂಬಿಕೆಗಳು, ಗಾದೆಗಳು, ಬಳಸುವ ಉಪಕರಣಗಳು, ತಯಾರಿಸುವ ಸಾಮಗ್ರಿಗಳು, ಅವರು ಕೆಲಸಕ್ಕೆ ಬಳಸುವ ಮರಗಳು, ಜನಾಂಗವನ್ನು ಕುರಿತ ಸಾಹಿತ್ಯ, ಈ ವೃತ್ತಿಯನ್ನು ಆಶ್ರಯಿಸಿದ ಇತರ ಜನಾಂಗಗಳು ಹಾಗೂ ಆಧುನಿಕತೆಯ ಪ್ರವೇಶ ಮುಂತಾದ ವಿಷಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

ಲೇಖಕರು ತಿಳಿಸುವಂತೆ ಇವರ ಹುಟ್ಟು, ಸಾವು, ಮದುವೆ, ಹಬ್ಬ ಮೊದಲಾದ ಸಂದರ್ಭಗಳ ಆಚರಣೆಯಲ್ಲಿ ಸ್ಥಳೀಯ ಪ್ರಭಾವಿ ಭೂ ಒಡೆಯರ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವುದನ್ನು ಕಾಣುತ್ತೇವೆ. ಹಾಗಾಗಿ ದೇಶದ ಉದ್ದಗಲಕ್ಕೂ ಇವರ ಬದುಕಿನ ವಿನ್ಯಾಸಗಳಲ್ಲಿ ಭಿನ್ನತೆ ಕಂಡುಬರುತ್ತದೆ ಎಂದು ತಿಳಿಸುತ್ತಾರೆ. ಈ ಅಂಶವು ಪಾಂಚಾಳರಿಗೆ ದೂರವೆನಿಸುತ್ತವೆ. ಈ ಮಾಹಿತಿಯನ್ನು ಅವರು ಲಿಂಗಾಯತ ಪಾಂಚಾಳರ ಮೂಲಕ ಪಡೆದುಕೊಂಡಿರಬಹುದು ಎಂದೆನಿಸುತ್ತದೆ. ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಾಂಚಾಳರು ಮೂಲದಿಂದ ಇಂದಿನವರೆಗೂ ಶುದ್ಧ ವೈದಿಕಾಚರಣೆಯಿಂದ ಸಾವು-ಸಂಸ್ಕಾರ, ಹಬ್ಬ-ಆಚರಣೆಗಳನ್ನು ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ಆಚರಿಸುವುದು ಕಂಡುಬರುತ್ತದೆ.

ಅಕ್ಕಸಾಲಿ, ಕಮ್ಮಾರ, ಬಡಗಿ, ಕಂಚುಗಾರ ಮತ್ತು ಶಿಲ್ಪಿ ವೃತ್ತಿಗೆ ಸಂಬಂಧಿಸಿದಂತೆ ತಯಾರಿಸುವ ಉಪಕರಣಗಳು, ಬಳಸುವ ಆಯುಧಗಳು, ಸ್ತ್ರೀ-ಪುರುಷರ ಆಭರಣಗಳು ಇವುಗಳ ಬಗ್ಗೆ ಮಾಹಿತಿ ಒದಗಿಸುತ್ತಾರೆ. ಅಕ್ಕಸಾಲಿಗರ ಹತ್ತಿರ ಸಾಮಾನುಗಳನ್ನು ತಯಾರಿಕೆಗೆ ಕೊಟ್ಟಾಗ, ಅಕ್ಕಸಾಲಿಗ ಸಮುದಾಯಕ್ಕೂ

ಇನ್ನಿತರ ಸಮುದಾಯಕ್ಕೂ ಇರುವ ಸಂಬಂಧವನ್ನು ಕುರಿತು ಅಂದರೆ ಅವುಗಳ ತಯಾರಿಕೆಯು ಹಂತ ಮುಗಿದ ಮೇಲೆ ಧಾರ್ಮಿಕ ವಿಧಿಗನುಗುಣವಾಗಿ ಪೂಜೆ ಮಾಡಿಕೊಂಡು ತಮ್ಮ ಒಡವೆಗಳನ್ನು ಒಯ್ಯುವುದು, ಊರಿನ ದೈವದವರೆಲ್ಲರೂ ಸೇರಿ ಊರಿನ ದೇವತೆಯ ಆಭರಣಗಳನ್ನು ಮಾಡಿಸುವುದಕ್ಕೆ ಕೊಟ್ಟಾಗ ಅವನಿಗೆ ಕೊಡಬೇಕಾದ ಮೌಲ್ಯದ ಬಗ್ಗೆ, ಇದರಂತೆಯೇ ಇನ್ನಿತರ ವೃತ್ತಿಗಳಿಗೂ ಅನುಸರಿಸುತ್ತದೆ. ಇಂತಹ ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಈ ಲೇಖನದಲ್ಲಿ ಲೇಖಕರು ಚೆಲ್ಲಬಹುದಿತ್ತು.

ಬಡಗಿ ವೃತ್ತಿಗೆ ಸಂಬಂಧಿಸಿದಂತೆ ಮರವನ್ನು ಯಾವ ವೇಳೆ ಕಡಿದರೆ ಅದಕ್ಕೆ ಹುಳುಹತ್ತುವುದಿಲ್ಲ, ಮರ ಕಡಿದ ಎಷ್ಟು ದಿನಗಳ ಕಾಲ ಅದನ್ನು ಹಾಗೆಯೇ ಬಿಡಬೇಕು. ಯಾವ ಮರವು ಯಾವ ವಸ್ತುವಿಗೆ ಸೂಕ್ತ, ಯಾವ ಮರವನ್ನು ಗೃಹೋಪಯೋಗಿ ಸಾಮಾನುಗಳಿಗೆ ಉಪಯೋಗಿಸಬಾರದು, ಏಕೆ ಎಂಬ ನಂಬಿಕೆಗಳ ಮೇಲೆ ಅಧ್ಯಯನ ನಡೆಸಿದ್ದರೆ ತುಂಬಾ ಉಪಯುಕ್ತ ಮಾಹಿತಿ ಲಭಿಸುತಿತ್ತು.

ಶಿಲ್ಪಿ ವೃತ್ತಿಗೆ ಸಂಬಂಧಿಸಿದಂತೆ ತಿಳಿಸುವಾಗ ಅವರು ಮೂರ್ತಿಯನ್ನು ಕೆತ್ತುವಾಗ ಅನುಸರಿಸುವ ವಿಧಿ ವಿಧಾನಗಳು, ಈ ಕೆಲಸಕ್ಕೆ ಇರುವ ಬೇಡಿಕೆ, ಇವರು ಈ ವೃತ್ತಿಯನ್ನು ಕಲಿಯಬೇಕಾದರೆ ಅವರ ದೇಹದ ಯಾವುದೇ ಭಾಗವು ಊನವಾಗಿರಬಾರದು ಮತ್ತು ಸಮುದಾಯದಿಂದ ಯಾವುದೇ ಅಪಮಾನಕ್ಕೆ ಗುರಿಯಾಗಿರಬಾರದು ಇಂತಹ ಅನೇಕ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸಬಹುದಿತ್ತು.

ಕಂಚುಗಾರ ವೃತ್ತಿಗೆ ಸಂಬಂಧಿಸಿದಂತೆ ತಿಳಿಸುವಾಗ ಇವರು ವೈದಿಕಾಚರಣೆಯನ್ನು ಅನುಸರಿಸುತ್ತಾರೆ. ಈ ಕೆಲಸ ಮಾಡುವವರ ಸಂಖ್ಯೆ ತೀರ ಕಡಿಮೆ. ಈ ಕೆಲಸವನ್ನು ನಿರ್ವಹಿಸುವವರು ರೈತರ ಜೊತೆಗೆ ಇರುವ ಸಂಪರ್ಕ ಸಂಬಂಧಿಸಿದಂತೆ, ಈ ವೃತ್ತಿ ಕೈಗೊಳ್ಳುವವರ ಸಂಖ್ಯೆ ತೀರ ಕಡಿಮೆ ಏಕೆ? ಎಂಬೆಲ್ಲಾ ವಿಚಾರಗಳ ಮೇಲೆ ಮಾಹಿತಿಯನ್ನು ತಿಳಿಸಬಹುದಿತ್ತು. ಒಟ್ಟಾರೆಯಾಗಿ ಈ ಲೇಖನವು ಪಾಂಚಾಳ ಜಾನಪದ ಎಂದಿದ್ದು ಜಾನಪದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲೆಹಾಕಿದ್ದಾರೆ. ಇನ್ನೂ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿದ್ದರೆ ತುಂಬ ಉಪಯುಕ್ತವಾಗುತ್ತಿತ್ತು.

ಡಾ.ಜಯಲಕ್ಷ್ಮೀ ಸೀತಾಪುರರವರ ‘ಜನಪದ ಒಕ್ಕಲು’ ಎಂಬ ಕೃತಿಯಲ್ಲಿ ‘ವಿಶ್ವಕರ್ಮರು’ ಎಂಬ ಲೇಖನವಿದ್ದು. ಈ ಲೇಖನವನ್ನು ಮುಖ್ಯವಾಗಿ ಎರಡು ರೀತಿಯ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಖನಿಜ ಸಂಬಂಧವಾದ ನಂಬಿಕೆಗಳು, ಆಚರಣೆಗಳು, ಐತಿಹ್ಯಗಳು ಒಂದು ಮುಖವಾದರೆ ಅವುಗಳ ಉಪಯೋಗದ ದೃಷ್ಟಿ ಇನ್ನೊಂದು ಮುಖವಾಗುತ್ತದೆ. ಪರಂಪರಾನುಗತವಾಗಿ ಬಂದ ಈ ವಿದ್ಯೆ ಜನಪದ ಮೂಲಕ್ಕೆ ಹೆಚ್ಚಾಗಿ ಸಂಬಂಧಪಡುತ್ತದೆ ಎಂದು ತಿಳಿಸುತ್ತಾರೆ.

ಹೆಂಗಸರ, ಗಂಡಸರ ಹಾಗೂ ಮಕ್ಕಳ ಒಡವೆಗಳ ಬಗ್ಗೆ ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವುದನ್ನು ತಿಳಿಸುತ್ತ ಹೋಗುತ್ತಾರೆ. ಚಿನ್ನ-ಬೆಳ್ಳಿ, ವಿಶ್ವಕರ್ಮರಿಗೆ ಸಂಬಂಧಿಸಿದ ಗಾದೆಗಳನ್ನು ಕಲೆಹಾಕಿ ವಿಶ್ಲೇಷಿಸಿದ್ದಾರೆ. ಚಿನ್ನ-ಬೆಳ್ಳಿಗೆ ಸಂಬಂಧಿಸಿದ ಆಚರಣೆಗಳು, ನಂಬಿಕೆಗಳನ್ನು ವಚನ ಸಾಹಿತ್ಯದಿಂದ ಆಧುನಿಕತೆಯವರೆಗೂ ಉದಾಹರಣೆಗಳ ಮೂಲಕ ಬೆಳಕು ಚೆಲ್ಲುತ್ತಾರೆ. ಈ ಲೇಖನವನ್ನು ಜನಪದ ಸಾಹಿತ್ಯದ ಮೂಲಕ ವಿಶ್ಲೇಷಿಸುತ್ತಾರೆ. ಜನಪದರಲ್ಲಿ ಅಯಗಾರಕ್ಕೆ ಸಂಬಂಧಿಸಿದ ಮಾಹಿತಿಗಳು, ಅವರಿಗೆ ಇದ್ದ ಸ್ಥಾನಮಾನಗಳ

ಬಗ್ಗೆ, ಅಕ್ಕಸಾಲಿಕೆಯ ವೃತ್ತಿಯಲ್ಲಿ ಕುಟುಂಬಗಳು ನಿರ್ವಹಿಸುವ ಪಾತ್ರ, ಪ್ರಾಚೀನ ಕಾಲಕ್ಕೂ ಇಂದಿನ ಪ್ರಸ್ತುತ ಸ್ಥಿತಿಯಲ್ಲಿ ವೃತ್ತಿಯ ಏರುಪೇರುಗಳ ಬಗ್ಗೆ ಲೇಖನದಲ್ಲಿ ಯಾವುದೇ ಮಾಹಿತಿಗಳು ಸಿಗುವುದಿಲ್ಲ.

ಡಾ.ಡಿ.ಸಿ.ರಾಜಪ್ಪರವರ ಮೈಸೂರು ರಾಜ್ಯದಲ್ಲಿ 'ವಾಣಿಜ್ಯ ಮತ್ತು ಕರಕುಶಲ ಕಲೆಗಳು' ಎಂಬ ಕೃತಿಯಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಕರಕುಶಲ ಕಲೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇದರ ಜೊತೆಗೆಯೇ ಮೈಸೂರು ರಾಜ್ಯಕ್ಕೆ ಸಂಬಂಧಿಸಿದ ಹನ್ನೊಂದು ಜಿಲ್ಲೆಗಳಲ್ಲಿ ಪಾಂಚಾಳರ ಜನಗಣತಿಯನ್ನು ಉಲ್ಲೇಖಿಸುತ್ತಾ ಅವರಿಗೆ ವಿಧಿಸಿದ್ದ ತೆರಿಗೆಯನ್ನು ತಿಳಿಸುತ್ತಾರೆ. ಆದರೆ ಈ ಜನಗಣತಿಗೆ ಸಂಬಂಧಿಸಿದಂತೆ ಹೆಣ್ಣುಮಕ್ಕಳ ಸಂಖ್ಯೆ, ಗಂಡು ಮಕ್ಕಳ ಸಂಖ್ಯೆ ಅದರಲ್ಲಿ ಮಕ್ಕಳ ಸಂಖ್ಯೆಯ ಬಗ್ಗೆ ತಿಳಿಸುವುದಿಲ್ಲ. ಈ ಜನಸಂಖ್ಯೆಯವರೆಲ್ಲರೂ ಕೂಡ ಕರಕುಶಲಕಲೆಗಳಲ್ಲಿ ಭಾಗಿಯಾಗಿದ್ದಾರೆಯೇ ಎಂಬುದಕ್ಕೆ ಸ್ಪಷ್ಟತೆ ದೊರೆಯುವುದಿಲ್ಲ. ಮೈಸೂರು ರಾಜ್ಯದಲ್ಲಿ ಉಪಯೋಗಿಸುತ್ತಿದ್ದ ಆಭರಣ ಪಟ್ಟಿಯ ಹೆಸರುಗಳನ್ನು ಕೊಡುತ್ತಾರೆ. ವ್ಯಕ್ತಿಯು ಧರಿಸುವ ಆಭರಣಗಳ ರೀತಿ ನೀತಿಯಿಂದ ಅವನ ಸಾಮಾಜಿಕ ಹಂತವನ್ನು ಗುರುತಿಸಬಹುದಿತ್ತು. ಪಾಂಚಾಳರಿಗೆ ಸಂಬಂಧಿಸಿದಂತೆ ಅಕ್ಕಸಾಲಿ, ಬಡಿಗ ಮತ್ತು ಕಮ್ಮಾರ ಕರಕುಶಲ ಕಲೆಗಳ ಬಗ್ಗೆ ಮಾತ್ರ ಮಾಹಿತಿ ದೊರೆಯುತ್ತದೆ. ಆದರೆ ಕಂಚುಗಾರ ಮತ್ತು ಶಿಲ್ಪಿಗೆ ಸಂಬಂಧಿಸಿದಂತೆ ಮಾಹಿತಿ ತಿಳಿಸುವುದಿಲ್ಲ.

ಡಾ.ವೀರೇಶ್ ಬಡಿಗೇರರವರ 'ಅಡಿಗಲ್ಲು' ಎಂಬ ಕೃತಿಯಲ್ಲಿ 'ಅಡಿಪೂಜೆ' ಎಂಬ ಲೇಖನವಿದ್ದು, ಈ ಲೇಖನದಲ್ಲಿ ಅಡಿಗಲ್ಲು ಪೂಜೆ, ಕಂಬಾರ ಕುಲುಮೆ ಮತ್ತು ಮನೆಯಲ್ಲಿನ ಕ್ರಿಯೆಗಳು, ಬಡಿಗೇರ ಮನೆ ಮತ್ತು ಬಡಿಗ ಸಾಲಿಯಲ್ಲಿನ ಕ್ರಿಯೆಗಳು ಹಾಗೂ ಈ ಸಂದರ್ಭದ ಕೆಲವು ವಿಶೇಷ ಅಂಶಗಳ ಬಗ್ಗೆ ವಿವರಿಸುತ್ತಾರೆ. ಈ ಲೇಖನದ ಮುಖ್ಯ ಉದ್ದೇಶ ರೈತ ಮೊದಲ ಮಳೆ ಭೂಮಿಗೆ ಬಿದ್ದ ತಕ್ಷಣವೇ ತನ್ನ ಭೂಮಿಯನ್ನು ಬಿತ್ತಲಿಕ್ಕೆ ಪ್ರಾರಂಭಿಸುತ್ತಾನೆ. ಬಿತ್ತಲಿಕ್ಕೆ ಮುಖ್ಯವಾಗಿ ಕೂರಿಗೆ, ಕುಂಟೆ, ರಂಟೆ, ಸೆಡ್ಡಿ ಇತ್ಯಾದಿಗಳು ಬೇಕು. ಈ ರೈತಾಪಿ ಸಲಕರಣೆಗಳನ್ನು ಮಾಡಿಸಿಕೊಳ್ಳಲು ಪ್ರಾರಂಭಿಸುತ್ತಾನೆ. ಈ ಸಂದರ್ಭದ ಆಚರಣೆಗಳನ್ನು ಈ ಲೇಖನದಲ್ಲಿ ಸವಿವರವಾಗಿ ವಿಶ್ಲೇಷಿಸಿದ್ದಾರೆ.

'ಶಿಲ್ಪ ಸಹ್ಯಾದ್ರಿ' ಎಂಬ ನೆನಪಿನ ಸಂಚಿಕೆಯ ಪ್ರಧಾನ ಸಂಪಾದಕರಾದ ಕೆ.ವಾಸುದೇವಾಚಾರ್ ಶಿವಮೊಗ್ಗ, ಕಾ.ವಾ.ಆಚಾರ್ಯ ಶಿರ್ವಾ, ಪ್ರೊ.ಕೆ.ಪಿ.ಈರಣ್ಣ ಧಾರವಾಡ ಇವರು ಪಾಂಚಾಳರಿಗೆ ಸಂಬಂಧಿಸಿದಂತೆ ಮಹತ್ವಪೂರ್ಣ ಲೇಖನಗಳನ್ನು ಸಂಪಾದಿಸಿ ಈ ಸಂಚಿಕೆಯನ್ನು ಪ್ರಕಟಗೊಳಿಸಿದ್ದಾರೆ. ಇದರಲ್ಲಿರುವ ಮಹತ್ವ ಪೂರ್ಣ ಲೇಖನಗಳೆಂದರೆ ಪ್ರೊ.ಕೆ.ಪಿ.ಈರಣ್ಣನವರ 'ಶಾಸನಗಳಲ್ಲಿ ವಿಶ್ವಕರ್ಮರ ಜೀವನ ದರ್ಶನ,' ಪೆರ್ಲ ಅನಂತಾಚಾರ್ಯರವರ 'ವಿಶ್ವಕರ್ಮ ಧರ್ಮ ಸಂಸ್ಕೃತಿ,' ಬಿ.ಶ್ರೀಧರ ಆಚಾರ್ಯರವರ 'ವಿಶ್ವಬ್ರಾಹ್ಮಣರ ಆಚರಣೆಗಳು,' ಈರಣ್ಣ ಪತ್ತಾರ, ಶ್ರೀಕಾಳಪ್ಪ ಮಾಡಬಾಳ ಅವರ 'ನಮ್ಮ ಶಿಕ್ಷಣ ಅಂದು-ಇಂದು-ಮುಂದೆ,' ವಿರುಪಾಕ್ಷ ಬಡಿಗೇರ್‌ರವರ 'ಕರ್ನಾಟಕದ ವಿಶ್ವಕರ್ಮ ಮಹಾಪುರುಷರು,' ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರ 'ಜಾನಪದದಲ್ಲಿ ಶಿಲ್ಪಿಗಳು,' ಕಾ.ವಾ.ಆಚಾರ್ಯ ಶಿರ್ವ ಅವರ 'ಆಧುನಿಕ ವಿಶ್ವಕರ್ಮ ಸಾಹಿತ್ಯ,' ಡಾ.ಬಿ.ಮುದ್ದಾಚಾರ್‌ರವರ 'ಶಿಲ್ಪಕಲಾವಿದ ಶಾರದ ಅಭಿನವ

ಜಕಣಾಚಾರ್ಯ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳು ಹಾಗೂ ಪದ್ಮಶ್ರೀ ಎಸ್.ಎನ್.ಸ್ವಾಮಿ,' ಶೀಲಾಕಾಂತ ಪತ್ತಾರ ಬಾದಾಮಿ ಅವರ 'ವಿಶ್ವಕರ್ಮರ ಶಿಕ್ಷಣ ಪದ್ಧತಿ,' ಕೆ.ವಾಸುದೇವಾಚಾರ್ಯ ಅವರ 'ಕರ್ನಾಟಕದಲ್ಲಿ ವಿಶ್ವಕರ್ಮ ಸಮಾಜೋದ್ಧಾರ ಮತ್ತು ಸಂಘಟನೆ,' ಶ್ರೀ ಗುರುಲಿಂಗಾಚಾರ್ಯರವರ 'ಸಂಧ್ಯಾವಂದನೆ' ಹಾಗೂ ವ್ಹಿ.ಜಿ.ದೀಕ್ಷಿತ್‌ರವರ 'ವಿಶ್ವಕರ್ಮರ ಇತಿಹಾಸ' ಎಂಬ ಲೇಖನಗಳಿವೆ. ಒಟ್ಟಾರೆಯಾಗಿ ಈ ನೆನಪಿನ ಸಂಚಿಕೆಯು ವಿಶ್ವಕರ್ಮರ ಮೂಲ, ಸಂಸ್ಕೃತಿ, ಪ್ರಗತಿ, ಶಿಕ್ಷಣ, ಹಾಗೂ ಸಂಘಟನೆಗಳನ್ನು ತಿಳಿಸುವ ಮಹತ್ವದ ಕೃತಿಯಾಗಿದೆ.

ಈ ಮೇಲಿನ ಎಲ್ಲಾ ಲೇಖನಗಳು ಸಂಧ್ಯಾವಂದನೆ, ಸಂಸ್ಕೃತಿ, ಸಾಮಾಜಿಕ ಕಾರ್ಯಗಳು, ಶಿಕ್ಷಣ ಇಂತಹವುಗಳಿಗೆ ಮಾತ್ರ ಮೀಸಲಾಗಿದೆ. ಆದರೆ ಪಾಂಚಾಳರ ಜೀವನಕ್ಕೆ ಸಂಬಂಧಿಸಿದ ಆರ್ಥಿಕ ಸುಧಾರಣೆಗಾಗಿ ಸಹಕಾರ ಸಂಘಗಳು, ಕೈಗಾರಿಕಾ ಕ್ಷೇತ್ರಗಳು, ತಾಂತ್ರಿಕ ಶಾಲೆಗಳು ಸ್ಥಾಪನೆಯತ್ತ ಸರ್ಕಾರದ ಸೌಲಭ್ಯಗಳ ಬೆಳಕಿನ ಕಡೆಗೂ ಲೇಖನಗಳು ಇದ್ದಾರೆ ಇನ್ನು ಕೃತಿಯು ತುಂಬ ವಿಶಿಷ್ಟವಾಗಿರುತಿತ್ತು ಎಂದು ಹೇಳಬಹುದು.

ಡಾ.ಎಸ್.ಎಸ್.ಅಂಗಡಿಯವರ 'ಬಡಿಗ ವೃತ್ತಿಪದ ಮಂಜರಿ' ಎಂಬ ಕೃತಿಯು ಆಡುನುಡಿಯನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಕೃತಿ. ಆಯಗಾರರಲ್ಲಿ ಬಡಿಗೇರರ ಸ್ಥಾನಮಾನ, ಬಡಿಗ ವೃತ್ತಿ ಪದಗಳಿಗೆ ಸಂಬಂಧಿಸಿದಂತೆ ಉಪಕರಣಗಳು ಬಡಗಿತನಕ್ಕೆ ಉಪಯೋಗಿಸುವ ಕಟ್ಟಿಗೆಗಳು ಹಾಗೂ ಬಡಿಗ ವೃತ್ತಿ ಸಂದರ್ಭದಲ್ಲಿ ಬಳಕೆಯಾಗುವ ಕ್ರಿಯಾಪದಗಳನ್ನು ತಿಳಿಸುತ್ತಾರೆ. ಉಪಕರಣಗಳು, ಕ್ರಿಯಾಪದಗಳಿಗೆ ಸಂಬಂಧಿಸಿದಂತೆ ಹೆಸರನ್ನು ಸೂಚಿಸಿ ಅದರ ಮುಂದೆ ಉಪಕರಣದಿಂದ ಮಾಡುವ ಕೆಲಸದ ಬಗ್ಗೆ ವಿವರಣೆ ನೀಡುತ್ತಾರೆ. ಒಟ್ಟಾರೆಯಾಗಿ ಕೃತಿಯಲ್ಲಿ ವೃತ್ತಿಪದಗಳನ್ನು ಸಂಗ್ರಹಿಸಿ ಸೂಕ್ತವಾದ ಪದಕೋಶವನ್ನು ರಚನೆ ಮಾಡಿದ್ದಾರೆ.

ಈ ಪದಕೋಶದಲ್ಲಿ ಬಡಗಿ ಕೆಲಸಕ್ಕೆ ಸಂಬಂಧಿಸಿರದ ಉಪಕರಣಗಳಿಗೆ ಸಂಬಂಧಿಸಿದ ಪದಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಕೊಡ್ಲಿ, ಕೊಡ್ಲಿ ಕಾವು, ಕೈ ಕೊಡ್ಲಿ, ಗಂಡುಕೊಡ್ಲಿ ಎಂಬ ಪದಗಳು ಆದರೆ ಬಡಗಿ ವೃತ್ತಿಯಲ್ಲಿಯೇ ಮುಖ್ಯ ಉಪಕರಣಗಳಾದ ಮಸಗಲ್ಲು ಅಥವಾ ಮಸೆಮಣೆ, ಗೃಹೋಪಯೋಗಿ ಮತ್ತು ಕೃಷಿಗೆ ಸಂಬಂಧಿಸಿದ ವಸ್ತುಗಳಾದ ಮರದ ರಂಟೆ, ಕಬ್ಬಿಣರಂಟೆ, ಬಂಡಿಗೆ ಸಂಬಂಧಿಸಿದಂತೆ ಕುಂಬದ ಕಟ್ಟು ಅಥವಾ ಗಡ್ಡಿಯ ಕಟ್ಟು ಇಂತಹ ಅನೇಕ ಪದಗಳನ್ನು ಈ ವೃತ್ತಿಪದಕೋಶದಲ್ಲಿ ಸೇರಿಸಬಹುದಿತ್ತು. ಆಯಗಾರರಲ್ಲಿ ಬಡಿಗೇರರವರ ಸ್ಥಾನಮಾನ ಕುರಿತಂತೆ ಶಾಸನಗಳಲ್ಲಿ ಅನೇಕ ಕಡೆ ಅದರ ಬಗ್ಗೆ ಉಲ್ಲೇಖಗಳಿವೆ. ಇದರಿಂದ ಆಯಗಾರರ ಪ್ರಾಚೀನತೆ, ಪ್ರಸ್ತುತ ಸಂದರ್ಭಕ್ಕೂ ಮತ್ತು ಪ್ರಾಚೀನ ಸಂದರ್ಭಲ್ಲಿ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಕಲೆಹಾಕಿಕೊಟ್ಟಿದ್ದರೆ ಮುಂದಿನ ಅಧ್ಯಾಯನಕಾರರಿಗೆ ತುಂಬ ಉಪಯುಕ್ತವಾಗುತ್ತಿತ್ತು.

ಡಾ.ಎಚ್.ಡಿ.ಪ್ರಶಾಂತರವರು ಸಂಪಾದಿಸಿರುವ 'ಜನಸಮುದಾಯ ಸಂಪುಟ' ಎಂಬ ಕೃತಿಯಲ್ಲಿ ಪಾಂಚಾಳರಿಗೆ ಸಂಬಂಧಿಸಿದಂತೆ ಅವರಿಗಿರುವ ಪರ್ಯಾಯನಾಮಗಳು ಅವರ ಭಾಷೆ, ಬೆಡಗು, ಅನುಸರಿಸುವ

ವಿಧಾನಗಳನ್ನು ದಾಖಲಿಸಿದ್ದಾರೆ. ವೃತ್ತಿಯ ಜೊತೆಗೆ ಇತರೆ ಉದ್ಯೋಗ, ಸರ್ಕಾರಿ ನೌಕರರು, ವ್ಯಾಪಾರಿಗಳು ಹಾಗೂ ಖಾಸಗಿ ನೌಕರರಾಗಿ ಸೇವೆ ಸಲ್ಲಿಸುತಲಿದ್ದಾರೆ. ಇವರು ಸಮುದಾಯದ ಅಭ್ಯುದಯಕ್ಕಾಗಿ ಸಂಘಟನೆಗಳನ್ನು ಕಟ್ಟಿಕೊಂಡಿದ್ದಾರೆ. ರಾಜಕೀಯವಾಗಿ, ಶೈಕ್ಷಣಿಕವಾಗಿ ತೀರ ಹಿಂದುಳಿದವರಾಗಿದ್ದಾರೆ ಎಂಬ ಮಾಹಿತಿಯನ್ನು ವ್ಯಕ್ತಪಡಿಸುತ್ತಾರೆ. ಸಂಪುಟದಲ್ಲಿ ಸಂಪಾದಕರು ಪಾಂಚಾಳರಿಗೆ ಸಂಬಂಧಿಸಿದ ಜನಸಂಖ್ಯೆ, ಐದು ವೃತ್ತಿಗಳಲ್ಲಿ ಹೆಚ್ಚಾಗಿ ಮಾಡುವ ವೃತ್ತಿ ಸಂಖ್ಯೆಗಳನ್ನು ನೀಡಿದ್ದರೆ ತುಂಬಾ ಉಪಯುಕ್ತ ಮಾಹಿತಿ ದೊರಕಿಸಿದಂತಾಗುತಿತ್ತು.

ಕರ್ನಾಟಕದ ಎಲ್ಲಾ ಜಿಲ್ಲೆಗಳ ಗ್ಯಾಸೆಟಿಯರ್‌ಗಳಲ್ಲಿ ಪಾಂಚಾಳರ ಬಗ್ಗೆ ಕುರಿತಾದ ಮಾಹಿತಿ ದೊರೆಯುತ್ತವೆ. ಪಾಂಚಾಳ ಸಮುದಾಯದವರು ವಿಶೇಷವಾಗಿ ಅವರವರ ಪರಂಪರಾಗತ ಕಲಾ ಕೌಶಲ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ಇವರನ್ನು ಪಾಂಚಾಳರು, ವಿಶ್ವಬ್ರಾಹ್ಮಣ, ವಿಶ್ವಕರ್ಮ ಎಂದು ಕರೆಯುವುದುಂಟು. ಚಿನ್ನ, ಬೆಳ್ಳಿ, ಕಾಷ್ಠ, ಕಬ್ಬಿಣ, ಶಿಲ್ಪಿ, ತಾಮ್ರದ ಕೆಲಸ ಮಾಡುವವರು ಇವರಿಗೆ ಮುಖ್ಯವಾಗಿ ಕಮ್ಮಾರ-ಮಯ, ಬಡಿಗ-ಮನು, ಕಂಚುಗಾರ-ತ್ವಷ್ಟ, ಶಿಲ್ಪಿಗಾರ-ಶಿಲ್ಪಿ ಹಾಗೂ ಅಕ್ಕಸಾಲಿಗ-ವಿಶ್ವಜ್ಞ ಎಂಬ ಋಷಿಗಳ ಮಕ್ಕಳಾದ ಇವರಿಗೆ ಸನಾತನ, ಸನಗಾಸ್ಯ, ಅಹಬೂವನ, ಪ್ರಾತ್ನಸ ಹಾಗೂ ಸುಪರ್ಣಸ ಎಂಬ ಗೋತ್ರಗಳಿವೆ. ಪುರೋಹಿತ ವರ್ಗ, ಉಪನಯನ ಪದ್ಧತಿ ರೂಢಿಯಿದೆ. ಸಾಂಪ್ರದಾಯಿಕವಾಗಿ ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇಧನಗಳು ಆಚರಣೆಯಲಿಲ್ಲ. ಇವರು ಕನ್ನಡ ಭಾಷಿಕರು ಹಾಗೂ ಸಸ್ಯಹಾರಿಗಳು ಹುಟ್ಟುಸಾವು ಮೊದಲಾದ ಸಂದರ್ಭಗಳಲ್ಲಿ ಸೂತಕ ಆಚರಿಸುತ್ತಾರೆ. ಕಾಳಿಕದೇವಿ, ಮೌನೇಶ್ವರ ಇವರ ಸಮುದಾಯದ ದೈವಗಳು. ಶವವನ್ನು ಸುಡುವ ರೂಢಿ ಉಂಟು. ಈ ಎಲ್ಲಾ ಅಂಶಗಳನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳ ಗ್ಯಾಸೆಟಿಯರ್‌ಗಳಲ್ಲಿ ಮಾಹಿತಿ ತಿಳಿಸಿದ್ದಾರೆ.

ಡಾ.ಕೆ.ಎಸ್.ಕುಮಾರಸ್ವಾಮಿಯವರ 'ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು' ಎಂಬ ಆಧುನಿಕ ಪೂರ್ವ ಕನ್ನಡ ಶಾಸನಗಳನ್ನು ಅನುಲಕ್ಷಿಸಿ ಬರೆದ ಕೃತಿಯಲ್ಲಿ ಕೆಲವು ಪ್ರಾತಿನಿಧಿಕ ಕಲಾವಿದರ ಜೀವನ ಪುನಾರಚನೆಯ ಅಧ್ಯಯನವನ್ನು ಪರಿಚಯ ಮಾಡಿಕೊಡುತ್ತಾರೆ.

ಶಿಲಾಶಾಸನ ಶಿಲ್ಪಿಗಳಾದ ಪುಲಿಗೆರೆಯ ಬಮ್ಮೋಜನ ಮತ್ತು ಶ್ರವಣಬೆಳಗೋಳದ ಹೊಯ್ಸಳಾಚಾರಿಯ ಮನೆತನ, ಮೂರ್ತಿ ಶಿಲ್ಪಿಯಾದ ದಾಸೋಜನ ಮನೆತನ ಹಾಗೂ ತಾಮ್ರ ಶಾಸನಾಚಾರ್ಯನಾದ ವೀರಣಾಚಾರ್ಯನ ಮನೆತನಗಳ ವಂಶಾವಳಿಯನ್ನು ಅಧ್ಯಯನ ಮಾಡುತ್ತಾರೆ. ಇದರ ಜೊತೆಗೆಯೇ ಈ ಶಿಲ್ಪಿಗಳ ಸಮಾಜವನ್ನು ಅಧ್ಯಯನ ಮಾಡಲಾಗಿದೆ. ಆರ್ಥಿಕ ಸ್ಥಿತಿಗತಿ, ಜೀವಿತದ ಆಯಗಾರಿಕೆ, ವ್ಯಕ್ತಿಗತ ದುಡಿಮೆ, ಆಚಾರಿಗಳ ಸಂಪಾದನೆ, ದೇವಸ್ಥಾನ ನಿರ್ಮಾಣದ ಆದಾಯ, ಕೃಷಿ ಕೆಲಸದ ಆದಾಯ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಪ್ರತ್ಯೇಕವಾದ ಅಧ್ಯಾಯಗಳಾಗಿ ಮಾಡಿಕೊಂಡು ಅಧ್ಯಯನ ನಡೆಸಿರುವುದು ವಿಶಿಷ್ಟವಾಗಿದೆ.

ಈ ಕುಶಲ ಕೆಲಸಗಾರರಿಗೆ ವಿಧಿಸುತ್ತಿದ್ದ ತೆರಿಗೆ, ಇವರ ಅಂಗಡಿಗಳ ಮೇಲೆ ಹಾಕುತ್ತಿದ್ದ ತೆರಿಗೆ ಹಾಗೂ ಐದು ವೃತ್ತಿಯವರನ್ನು ಸಮಾವೇಶಗೊಳಿಸಿ ವಿಧಿಸುತ್ತಿದ್ದ ತೆರಿಗೆಯ ಕುರಿತಾದ ವಿಚಾರಗಳನ್ನು

ಇಲ್ಲಿ ಚರ್ಚಿಸುತ್ತಾರೆ. ಒಟ್ಟಾರೆಯಾಗಿ ಈ ಕೃತಿಯು ಮಧ್ಯಕಾಲೀನ ಕರ್ನಾಟಕದ ಪಾಂಚಾಳರ ಸಮಾಜಕ್ಕೆ ಸೇರಿದ ಒಂದು ಸಮೀಕ್ಷೆಯಾಗಿದೆ.

ಡಾ.ಕರಿಗೌಡ ಬೀಚನಹಳ್ಳಿಯವರು ಸಂಪಾದಿಸಿರುವ **'ಕರಕುಶಲ ಕಲೆಗಳು'** ಎಂಬ ಕೃತಿಯಲ್ಲಿ ಪಾಂಚಾಳರ ವೃತ್ತಿಗೆ ಸಂಬಂಧಿಸಿದ ಲೇಖನಗಳಿವೆ. **'ಕಮ್ಮಾರಿಕೆ'** ಎಂಬ ಲೇಖನವನ್ನು **ಸುಭಾಷ್ ಕಮ್ಮಾರರವರು, 'ಕಂಚು'** ಎಂಬ ಲೇಖನವನ್ನು **ಪಿ.ಕೆ.ಖಂಡೋಬಾರವರು** ಹಾಗೂ **'ಅಕ್ಕಸಾಲಿ'**ಗರ ಬಗ್ಗೆ **ಆ.ಲ.ನರಸಿಂಹನ್**ರವರು ಬರೆದಿದ್ದಾರೆ.

'ಕಮ್ಮಾರಿಕೆ' ಈ ಲೇಖನದಲ್ಲಿ ಕರಕುಶಲ ಕಲೆಗಳ ಬೆಳವಣಿಗೆಗೆ ಪಾಂಚಾಳರ ಕೊಡುಗೆ ಅತ್ಯಂತ ಪ್ರಮುಖವಾದದ್ದು. ಕ್ರಿ.ಶ.೩೫೦ ರಲ್ಲಿ ಮೆಗಾಸ್ತನೀಸ್ ಭಾರತದಲ್ಲಿ ಬೇಸಾಯ ಮಾಡುವ ರೈತರ ಬಗ್ಗೆ ಹೇಳುತ್ತಾನೆ. ಆದರೆ ಕೃಷಿ ಉಪಕರಣಗಳ ಬಗ್ಗೆ ಪ್ರಸ್ತಾಪವಿಲ್ಲ. ಇವುಗಳ ಬಗ್ಗೆ ನಮಗೆ ವಿವರಗಳು ಸಿಗುವುದು ರಾಮಾಯಣ, ಮಹಾಭಾರತದಲ್ಲಿ, ೧೨ನೇ ಶತಮಾನದ ವಚನಕಾರರಲ್ಲಿ, ಸರ್ವಜ್ಞನ ತ್ರಿಪದಿಗಳಲ್ಲಿ, ದಾಸರ ಕೀರ್ತನೆಗಳಲ್ಲಿ ಹಾಗೂ ಸಂತ ಮೌನೇಶ್ವರರ ವಚನಗಳಲ್ಲಿ ಕಮ್ಮಾರಿಕೆಯ ವೃತ್ತಿ ಹಾಗೂ ಕೃಷಿ ಉಪಕರಣಗಳ ಬಗ್ಗೆ ಉಲ್ಲೇಖಗಳು ಸಿಗುತ್ತವೆ ಎಂದು ತಿಳಿಸುತ್ತಾರೆ.

ಕಮ್ಮಾರಿಕೆಯ ಬಗ್ಗೆ ಜನಮನದಲ್ಲಿರುವ ಐತಿಹ್ಯಗಳು, ರಚನಾ ವಿಧಾನ, ನಂಬಿಕೆ ಆಚರಣೆಗಳು ಹಾಗೂ ಸಾಮಾಜಿಕ, ಧಾರ್ಮಿಕತೆಗೆ ಸಂಬಂಧಿಸಿದಂತೆ ಕಮ್ಮಾರಿಕೆಯ ಉಪಯೋಗ ಕುರಿತಂತೆ ಚರ್ಚಿಸುತ್ತಾರೆ.

'ಕಂಚುಗಾರಿಕೆ' ಈ ಲೇಖನದಲ್ಲಿ ಶಿಲಾಯುಗ ಮತ್ತು ಕಬ್ಬಿಣಯುಗಗಳ ಮಧ್ಯದ ಅವಧಿಯಲ್ಲಿ ಕಂಚಿನ ತಯಾರಿಕೆ ಪ್ರಾರಂಭವಾಯಿತೆಂದು ತಿಳಿದು ಬಂದಿದೆ. ಕ್ರಿ.ಪೂ.ಮೂರನೆಯ ಸಹಸ್ರಮಾನದಲ್ಲಿ ಏಷ್ಯ ಮೈನರ್, ಗ್ರೀಸ್, ಮೆಸೋಪೋಟೇಮಿಯಾ ಮತ್ತು ಭಾರತಗಳ ಮುಂದುವರಿದ ನಾಗರೀಕತೆಗಳಲ್ಲಿ ಕಂಚಿನ ಉಪಯೋಗ ವಿಶೇಷವಾಗಿ ಕಂಡುಬರುತ್ತದೆ. ಕಂಚನ್ನು ವಿಗ್ರಹಗಳಿಗೆ, ಶಿಲ್ಪ ಕಲಾಕೃತಿಗಳು, ದೇವಸ್ಥಾನದ ಬಾಗಿಲುಗಳು ಹಾಗೂ ದೀಪಸ್ತಂಬ ಮೊದಲಾದವುಗಳಿಗೆ ಅತ್ಯಗತ್ಯವಾಗಿ ಉಪಯೋಗಿಸಲಾಗುತ್ತಿತ್ತು. ಕಂಚಿಗೆ ಸಂಬಂಧಿಸಿದಂತೆ ಇತರೆ ಸಮುದಾಯದವರು ಇಟ್ಟುಕೊಂಡು ಬಂದಂತಹ ನಂಬಿಕೆ ಆಚರಣೆಗಳನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ.

ಸಾಮಾಜಿಕವಾಗಿ ಕರಕುಶಲ ಕಲೆಗಳಲ್ಲಿ **ಅಕ್ಕಸಾಲಿಕೆ** ವೃತ್ತಿ ಪ್ರಮುಖವಾದದು. ಅಕ್ಕಸಾಲಿಕೆ ವೃತ್ತಿಯಿಂದ ಪಡೆಯುತ್ತಿದ್ದ ಸಂಭಾವನೆ, ಗೌರವ ಬಿರುದುಗಳನ್ನು, ಅವರು ಕೊಡಬೇಕಿದ್ದ ತೆರಿಗೆಗಳ ಬಗ್ಗೆ, ಕಲಾವಿದನ ಸ್ಥಾನ ಹಾಗೂ ಕಲಾ ಶಿಕ್ಷಣಕ್ಕೆ ಕೊಟ್ಟಂತಹ ಪ್ರಾಮುಖ್ಯತೆಯನ್ನು ಇದರಲ್ಲಿ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಈ ಮೇಲಿನ ಮೂರು ಲೇಖನಗಳನ್ನು ಅವಲೋಕಿಸಿದಾಗ ಇದರಲ್ಲಿ ಕರಕುಶಲ ಕಲೆಗಳು ಎಂದಿನಿಂದ ಪ್ರಾರಂಭವಾದವು, ಅವುಗಳಿಗೆ ಇದ್ದ ಬೆಲೆ, ಅವುಗಳಿಂದ ಪಡೆಯುತ್ತಿದ್ದ ಸಂಭಾವನೆ, ಗೌರವಗಳನ್ನು ಮಾತ್ರ ತಿಳಿಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಕರಕುಶಲ ಕಲೆಗಳಿಗಿರುವ ಬೇಡಿಕೆ, ಸಾಂಪ್ರದಾಯಿಕ ಕರಕುಶಲ ಕಲೆಗಳೇ ಮುಂದುವರಿದಿವೆಯೋ ಅಥವಾ ಆಧುನಿಕತೆಗೆ ತಕ್ಕಂತೆ

ಬದಲಾವಣೆಗಳನ್ನು ಪಡೆಯುತ್ತ ಬಂದಿವೆಯೋ, ಈ ಕಲೆಗಳಿಗೆ ಇರುವ ಆರ್ಥಿಕ ಪರಿಸರ ವ್ಯವಸ್ಥೆ, ಅವುಗಳನ್ನು ಕಲಿಸುವ ಸಂಸ್ಥೆಗಳು, ಪ್ರಾಚೀನ ಸಂದರ್ಭದಲ್ಲಿ ನೀಡಿದಂತೆ ಪ್ರಸ್ತುತ ಸಂದರ್ಭದಲ್ಲಿ ಈ ವೃತ್ತಿಗಳಿಗೆ ನೀಡಿದ ಬಿರುದು ಗೌರವಗಳ ಬಗ್ಗೆ ಮಾಹಿತಿಯನ್ನು ಇವುಗಳಲ್ಲಿ ಉಲ್ಲೇಖಿಸಿದ್ದರೆ ಇನ್ನು ಲೇಖನಕ್ಕೆ ಹೆಚ್ಚಿನ ಬೆಳಕನ್ನು ಚೆಲ್ಲಿದಂತಾಗುತಿತ್ತು.

ಡಾ.ಜಿ.ಜ್ಞಾನಾಸುಂದರವರ **'ಸಂಸ್ಕೃತಾನುಕರಣ ಮತ್ತು ವಿಶ್ವಬ್ರಾಹ್ಮಣರು'** ಎಂಬ ಕೃತಿಯಲ್ಲಿ ಸಾಮಾಜಿಕ ಹಿನ್ನೆಲೆಯ ಮೂಲಕ ವೇದಗಳ ಕಾಲದಿಂದ ಪ್ರಸ್ತುತದವರೆಗೂ ೧೫ ಅಧ್ಯಾಯಗಳಲ್ಲಿ ಆಳವಾದ ಸಂಶೋಧನೆ ಕೈಗೊಂಡು ಈ ಕೃತಿಯನ್ನು ಬರೆದಿದ್ದಾರೆ. ಎಂ.ಎನ್.ಶ್ರೀನಿವಾಸರವರು ಪಾಂಚಾಳ ಸಮುದಾಯಕ್ಕೆ ಸಂಬಂಧಿಸಿದಂತೆ ಇವರು ಮಾಂಸಹಾರಿಗಳು, ಶುದ್ಧತೆ ಇಲ್ಲದವರು ಎಂಬುದನ್ನು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಪಾಂಚಾಳರ ಬಗ್ಗೆ ತಪ್ಪು ಮಾಹಿತಿಯನ್ನು ದ್ವಿತೀಯ ಪಿ.ಯು.ಸಿ ಸಮಾಜಶಾಸ್ತ್ರದಲ್ಲಿ ಕೊಟ್ಟಿದ್ದರು. ಈ ವಿಷಯವನ್ನು ಕುರಿತು ಲೇಖಕರು ಶಾಸ್ತ್ರೀಯ ವಿವರಣೆಯ ಮೂಲಕ ಅತ್ಯಂತ ಸರಳ ರೀತಿಯಲ್ಲಿ ವಿಶ್ವಕರ್ಮರ ವೈದಿಕಾಚರಣೆಯ ಬಗ್ಗೆ ವಿವರಿಸುತ್ತಾರೆ. ಶ್ರೀನಿವಾಸರವರು ಸಾಮಾಜಿಕ ಶ್ರೇಣಿಯನ್ನು ತಿಳಿಸುವಾಗ ಪಾಂಚಾಳ ವೃತ್ತಿಯನ್ನು ಬೇರೆ ಸಮುದಾಯದವರು ಅನುಸರಿಸಿರುವವರನ್ನು ನೋಡಿ ಅವರ ಆಚಾರ ವಿಚಾರಗಳಿಗೆ ಸಂಬಂಧಿಸಿದಂತೆ ಇವರು ಮಾಂಸಹಾರಿಗಳು ಎಂದು ತಿಳಿಸುತ್ತಾರೆ ಎಂದೆನಿಸುತ್ತದೆ. ಆದರೆ ಪಾಂಚಾಳರು ಶುದ್ಧ ಸಸ್ಯಹಾರಿಗಳಾಗಿದ್ದಾರೆ.

ಈ ವೃತ್ತಿಯನ್ನು ಬಯಲು ಅಕ್ಕಸಾಲಿ, ಹಿರೆಮನೆತನದವರು, ಮುದ್ದೆ ಕಂಬಾರರು ಕೂಡ ಈ ಪಾಂಚಾಳ ವೃತಿಯನ್ನು ಮಾಡುತ್ತಾರೆ. ಇವರು ಮಾಂಸಹಾರಿಗಳು ಇವರನ್ನೇ ಅಧ್ಯಯನ ಮಾಡಿ ವೈದಿಕಾಚರಣೆಯನ್ನು ಅನುಸರಿಸುತ್ತ ಬಂದಿರುವ ಪಾಂಚಾಳರಲ್ಲಿಯೇ ಚಿಕ್ಕ ಮನೆತನದವರನ್ನು ಮಾಂಸಹಾರಿಗಳು ಎಂದಿರುವುದರಿಂದ ಇದಕ್ಕೆ ಅನುಸಾರವಾಗಿ ಜ್ಞಾನಸುಂದರವರು ಶುದ್ಧ ವೈದಿಕ ಸಂಪ್ರದಾಯದವರು ಎಂದು ತಿಳಿಸಿದ ಸೂಕ್ತ ಅಧ್ಯಯನ ಇದಾಗಿದೆ. ಆದರೆ ಶ್ರೀನಿವಾಸರವರು ಈ ಬಯಲುಗಮ್ಮಾರರ ಸಂಬಂಧಿಸಿದಂತೆ ಅಧ್ಯಯನ ಮಾಡಿ ವಿವರ ತಿಳಿಸಿದ್ದಾರೆ ಎನಿಸುತ್ತದೆ.

ಸನ್ನಿವಾಳ ಆಚಾರ್ಯರು ತೆಲುಗಿನಿಂದ ಅನುವಾದಿಸಿದ **'ಚಿತ್ತೂರು ಜಿಲ್ಲಾ ಅದಾಲತ್ತು ಕೋರ್ಟಿನ ತೀರ್ಪು'** ಎನ್ನುವ ವರದಿಯಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಬ್ರಾಹ್ಮಣರು ಮತ್ತು ಪಾಂಚಾಳರ ಮಧ್ಯೆ ಮದುವೆಯ ಸಂದರ್ಭಗಳಲ್ಲಿ ವೈಶ್ಯಮ ಉಂಟಾದಾಗ ಬ್ರಾಹ್ಮಣರು ನಮ್ಮ ಅನುಮತಿಯಿಲ್ಲದೆ ನೀವು ಮದುವೆಯನ್ನು ಮಾಡಿಕೊಳ್ಳುವಂತಿಲ್ಲ ಮತ್ತು ನಾವೇ ನಿಮ್ಮ ಮದುವೆಗಳಲ್ಲಿ ಪುರೋಹಿತ್ಯ ಕೆಲಸವನ್ನು ಮಾಡುವರು ಎಂದು ವ್ಯಾಜ್ಯ ನಡೆಸಿದಾಗ ಈ ವಿಷಯ ಕೋರ್ಟಿನ ಮೆಟ್ಟಿಲನ್ನು ಹತ್ತುತ್ತದೆ. ಕೋರ್ಟಿನಲ್ಲಿ ಪಾಂಚಾಳರಿಗೆ ಮತ್ತು ಬ್ರಾಹ್ಮಣರಿಗೆ ಸಂಬಂಧಿಸಿದ ಮಾಹಿತಿಗಳನ್ನು ಪರಾಮರ್ಶಿಸಿ ಕೋರ್ಟು ಪಾಂಚಾಳರು ಬ್ರಾಹ್ಮಣರಿಗಿಂತ ಮೇಲು ಅವರಿಗೆ ನೀವು ಏನು ತಾಕೀತ್ತು ಮಾಡುವಂತಿಲ್ಲ ಎಂದು ಹೇಳಿ ಅವರಿಗೆ ದಂಡವನ್ನು ವಿಧಿಸಿತು. ಇದರ ವಿವರಣೆ ಈ ವರದಿಯಲ್ಲಿ ದೊರೆಯುತ್ತದೆ.

ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ **ಡಾ.ಡಿ.ಪಾಂಡುರಂಗಬಾಬುರವರ 'ಪಾಂಚಾಳ ವೃತ್ತಿ ಪದಕೋಶ'** ಎಂಬ ಕೃತಿಯಲ್ಲಿ ಪಾಂಚಾಳರ ಐದು ವೃತ್ತಿಗಳನ್ನು ವಿಭಾಗಗಳಾಗಿ ವಿಂಗಡಿಸಿ, ವೃತ್ತಿಯ ಉಪಕರಣಗಳು, ಉಪಕರಣಗಳ ಬಳಕೆ, ಉಪಕರಣಗಳ ವಿಧಗಳು, ತಯಾರಿಸುವ ಸಾಮಾನು, ವೃತ್ತಿ ಬಗೆಗಿರುವ ನಂಬಿಕೆ ಅವರ ದೈವ, ಮರಗಳಿಗೆ ಬರುವರೋಗ, ವೃತ್ತಿಗೆ ಸಂಬಂಧಿಸಿದ ನಿಷೇಧಗಳು ಹಾಗೂ ವೃತ್ತಿ ಸಂದರ್ಭಗಳಲ್ಲಿ ಬಳಕೆಯಾಗುವ ಸಂಕೀರ್ಣ ಪದಗಳನ್ನು ದಾಖಲಿಸಿ ಅವುಗಳ ವಿವರಣೆಯನ್ನು ನೀಡಿದ್ದಾರೆ.

ಈ ಲೇಖನದಲ್ಲಿ ವೃತ್ತಿಗಳಿಗೆ ಸಂಬಂಧಿಸಿದಂತೆ ನಿರ್ಮಾಣಗಳ ಪಟ್ಟಿಯಲ್ಲಿ ನಿರ್ಮಾಣದ ವಸ್ತುಗಳಿಗೆ ಸಂಬಂಧಿಸಿದಂತೆ ಉದಾಹರಣೆಗೆ ಮೂರ್ತಿ ಶಿಲ್ಪಗಳು, ದೇವಸ್ಥಾನ, ಮನೆಯ ಬಾಗಿಲು,ಕೂರಿಗೆ, ಕುಳ, ಪಾದಪೀಠ ಇಂತಹವುಗಳಿಗೆ ಸಂಬಂಧಿಸಿದಂತೆ ಆಯಗಳ (ವಾಸ್ತು) ಮಾಹಿತಿಯನ್ನು ದಾಖಲಿಸಿದ್ದರೆ ಕೃತಿಯ ನೋಡುಗರಿಗೆ ತುಂಬ ಉಪಯುಕ್ತ ಮಾಹಿತಿ ದೊರಕುತಿತ್ತು ಎಂದೆನಿಸುತ್ತದೆ.

ಡಾ.ಎಸ್.ಕೆ ಜೋಶಿಯವರು ಸಂಪಾದಿಸಿರುವ **ಶ್ರೀ ಚಂದ್ರಕಾಂತ ಸುಳ್ಳದ ಅವರ ಚಂದ್ರಪ್ರಭಾ ಅಭಿನಂದನಾ ಗ್ರಂಥದಲ್ಲಿ** ಪಾಂಚಾಳರ ಸಂಸ್ಕೃತಿಗೆ ಸಂಬಂಧಪಟ್ಟಂತಹ ವಿಷಯಗಳನ್ನು ಕಲೆ ಹಾಕಿದ್ದಾರೆ. ಪಾಂಚಾಳರ ಪಂಚ ಉದ್ಯೋಗಗಳ **'ಅವನತಿ ಉನ್ನತಿ'** ಎಂಬ ಲೇಖನದಲ್ಲಿ ಬಡಗಿತನ, ಕಮ್ಮಾರಿಕೆ, ಅಕ್ಕಸಾಲಿಕೆ, ಶಿಲ್ಪ ಹಾಗೂ ಕಂಚುಗಾರಿಕೆಯ ಉದ್ಯೋಗ, ಹಿಂದಿನ ಕಾಲದಲ್ಲಿ ಪಾಂಚಾಳರಿಗೆ ಉನ್ನತ ಸ್ಥಾನಮಾನ, ಮಾರ್ಯದೆ, ಪ್ರಾಶಸ್ತ್ಯ ಇತರ ಕಸುಬಿನವರಿಗಿಂತ ಹೆಚ್ಚಾಗಿ ಇತ್ತು. ಅಲ್ಲದೆ ಅವರಿಗೆ ರಾಜ ಮಾರ್ಯದೆ ಕೊಟ್ಟು ಬಿರುದು ಪುರಸ್ಕಾರ ನೀಡಿ ಗೌರವಿಸುತ್ತಿದ್ದರು. ಅಂದು ವಿಶ್ವಕರ್ಮರಿಗೆ ಬಿಟ್ಟು ಬೇರೆ ಸಮುದಾಯದವರಿಗೆ ಈ ಉದ್ಯೋಗಗಳು ಬರುತ್ತಿರಲಿಲ್ಲ ಹಾಗೂ ಇವರಿಗೆ ಪೈಪೋಟಿಯು ಇರುತ್ತಿರಲಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ರಾಜ ಮನೆತನಗಳು ಇಲ್ಲವಾಗಿ ಸಾಮಾನ್ಯ ಜನರನ್ನು ಅವಲಂಬಿಸಿ ಈ ಉದ್ಯೋಗಗಳನ್ನು ಮಾಡಬೇಕಾಗಿ ಬಂದಿರುವುದರಿಂದ ಈ ಉದ್ಯೋಗಗಳು ನಶಿಸ ತೊಡಗಿದವು ಎಂಬ ವಿಚಾರವನ್ನು ವ್ಯಕ್ತ ಪಡಿಸುತ್ತಾರೆ. ಇವರ ಉನ್ನತಿಗೆ ಸಂಬಂಧಿಸಿದಂತೆ ಆಧುನಿಕತೆಯ ಸಂದರ್ಭದಲ್ಲಿ ವೃತ್ತಿ ಶಿಕ್ಷಣಕ್ಕೆ ವಿಶೇಷ ಪ್ರಾಶಸ್ತ್ಯವನ್ನು ಅಳವಡಿಸಿಕೊಂಡರೆ ಸೂಕ್ತ ಎಂದು ಹೇಳುವರು.

ಜಿ.ಜ್ಞಾನಾನಂದ ಮತ್ತು ಸರಿತಾಜ್ಞಾನಾನಂದರವರು ಸಂಪಾದಿಸಿರುವ **'ಆಚಾರ್ಯಾಭಿವಂದನೆ'** ಎಂಬ ಸಂಭಾವನಾ ಸಂಪುಟದಲ್ಲಿ **ಡಾ.ಶಂಬಾ ಜೋಶಿಯವರ 'ವಿಶ್ವಬ್ರಾಹ್ಮಣರು ಒಂದು ವೈದಿಕ ವಿಶ್ಲೇಷಣೆ' ಹೊ ನಾರಾಯಣರಾವ್** ರವರ 'ವೈಶ್ವಕರ್ಮಣ ಧರ್ಮ' ಹಾಗೂ ಡಾ.ಸಾ.ಶಿ.ಮರುಳಯ್ಯ ಅವರ **'ವಿಶ್ವಬ್ರಾಹ್ಮಣವು ವೀರಶೈವಕ್ಕಿತ್ತ ಕೊಡುಗೆ'** ಈ ಮೇಲಿನ ಲೇಖನಗಳಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಮಾಹಿತಿಗಳನ್ನು ತಿಳಿಸುತ್ತಾರೆ. ಡಾ. ಶಂಬಾ ಜೋಶಿಯವರು 'ವಿಶ್ವಬ್ರಾಹ್ಮಣರು ಒಂದು ವೈದಿಕ ವಿಶ್ಲೇಷಣೆ' ಎಂಬ ಲೇಖನದಲ್ಲಿ ವಿಶ್ವಕರ್ಮ ಸಂಪ್ರದಾಯದ ಬ್ರಾಹ್ಮಣರಲ್ಲಿ ಮಂತ್ರಸಿದ್ಧರೂ, ಬ್ರಹ್ಮಜ್ಞರು ಆಗಿದ್ದುಂಟು. ದೇವಾಸುರರಿಬ್ಬರಿಗೂ ಇವರ ಜ್ಞಾನ ಶಕ್ತಿಯ ಅವಶ್ಯಕತೆಯಿತ್ತು. ಆದ್ದರಿಂದ

ಹಿಂದಿನ ಕಾಲದಲ್ಲಿ ಸಮಾಜಧಾರೆಯ ಕಾರ್ಯದಲ್ಲಿ ಮಹತ್ವವು ಇವರಿಗೆ ಮೀಸಲಾಗಿದ್ದಿತ್ತು. ಇಂದ್ರನು ವಿಶ್ವರೂಪನು ದ್ವೇಷಿಯಾಗಿದ್ದನು ಎಂಬ ಕಥೆಯಿಂದ ಯಂತ್ರ ಮಂತ್ರಗಳಲ್ಲಿ ಸಿದ್ದಸ್ತರಾದ ಈ ವಿಶ್ವಕರ್ಮ ಸಂಪ್ರದಾಯದವರ ಪೂರ್ವಜರು ಅಸುರರಿಗಿಂತಲೂ ಮುಂಚಿನಿಂದಲೇ ಈ ದೇಶದಲ್ಲಿ ಇದ್ದರೆಂಬ ಊಹೆಗೆ ಅವಕಾಶ ದೊರೆಯುತ್ತದೆ. ವಿಶ್ವರೂಪನು ಅಸುರರ ಪಕ್ಷಪಾತಿ ಆಗಿದ್ದನೆಂಬ ಕಥಾಭಾಗವು ಈ ಊಹೆಯನ್ನು ಪುಷ್ಟೀಕರಿಸುತ್ತದೆ ಎಂದು ತಿಳಿಸುತ್ತಾರೆ.

ವಿಶ್ವಕರ್ಮನು ದೇವರಿಗಾಗಿ ವಿಮಾನಗಳನ್ನು ನಿರ್ಮಿಸಿದನು. ನಗರ ರಚನೆ ಮಾಡಿದನು. ವಿಷ್ಣುವಿನ ಶಂಖ, ಶಿವನ ತ್ರಿಶೂಲ, ಇಂದ್ರನ ವಜ್ರ ಸಿದ್ಧಪಡಿಸಿದನು. ತಿಲೋತ್ತಮೆ ಎಂಬ ಅಪ್ಸರೆಯನ್ನು ಸೃಷ್ಟಿಸಿದ ಕಥೆಯಿದೆ. ಈ ಅಪ್ಸರೆಗಾಗಿ ಸುಂದರರು ಸ್ಪರ್ಧಿಸಿ, ಕಾದಾಡಿ ಮಡಿದರು ಎಂಬೆಲ್ಲಾ ವಿಷಯಗಳು ಆಧುನಿಕ ಶಾಸನಗಳಿಂದ ತಿಳಿಯುತ್ತದೆ ಎನ್ನುತ್ತಾರೆ. ಈ ಲೇಖನದಲ್ಲಿ ಒಟ್ಟಾರೆಯಾಗಿ ಶಂಬಾ ಅವರು ವಿಶ್ವಕರ್ಮರಿಗೆ ಇದ್ದಂತಹ ಸ್ಥಾನಮಾನ, ಅವರು ನಿರ್ವಹಿಸುತ್ತಿದ್ದ ಕೆಲಸ ಮುಂತಾದ ಮಾಹಿತಿಗಳ ಬಗೆಗೆ ಸ್ಪಷ್ಟಪಡಿಸಿರುವರು.

ಹೊಸಬೆಟ್ಟು ನಾರಾಯಣರಾವ್ ರವರ 'ವೈಶ್ವಕರ್ಮಣ ಧರ್ಮ' ಎಂಬ ಲೇಖನದಲ್ಲಿ ಭಾರತೀಯ ಸಂಸ್ಕೃತಿಯ ಅಡಿಯಲ್ಲಿ ಬಾಳಿಬದುಕುವ ಪ್ರತಿಯೊಬ್ಬ ವ್ಯಕ್ತಿಯ ಆಧ್ಯಾತ್ಮಿಕ ಬದುಕಿನಲ್ಲಿ ವಿಶ್ವಕರ್ಮ ಧರ್ಮದ ಪ್ರಭಾವ ಇದ್ದೇ ಇದೆ. ಶ್ರೀ ಎಲ್.ಜಿ ಹಾವನೂರ್ ಅವರು ಹಿಂದೂ ಧರ್ಮವನ್ನು ಪಾಂಚಾಳರು ಇಂದಿನವರೆಗೆ ರಕ್ಷಿಸಿಕೊಂಡು ಬಂದವರು ಮನೆ-ಮನೆಗಳಲ್ಲಿಯ ವಿಗ್ರಹಗಳಿಗೆ, ದೇವಸ್ಥಾನಗಳಿಗೆ, ಮೂರ್ತಿಗಳಿಗೆ, ಸಾಲದ್ದಕ್ಕೆ ಹೆಣ್ಣುಮಕ್ಕಳ ಕಂಠಾಭರಣಗಳಿಗೆ ಕಾರಣರಾದ ವಿಶ್ವಕರ್ಮರಲ್ಲದೆ ಅನ್ಯಬ್ರಾಹ್ಮಣರೂ ಅಲ್ಲ, ಕ್ಷತ್ರಿಯರೂ ಅಲ್ಲ ಎಂದು ಹೇಳಿದ್ದಾರೆ. ವಿಶ್ವಕರ್ಮ ಧರ್ಮಕ್ಕೂ ಭಾರತೀಯ ಸಂಸ್ಕೃತಿಯ ಅಡಿಯಲ್ಲಿ ಬಾಳುವ ವ್ಯಕ್ತಿಗೂ ಇರುವ ಅವಿಭಾಜ್ಯ ಸಂಬಂಧಕ್ಕಿಂತ ಹೆಚ್ಚಿನ ಪುರಾವೆ ಬೇಕಾಗಿಲ್ಲ ಎಂದು ತಿಳಿಸುತ್ತಾರೆ.

ಡಾ.ಸಾ.ಶಿ ಮರುಳಯ್ಯರವರ 'ವಿಶ್ವಬ್ರಾಹ್ಮಣವು ವೀರಶೈವಕ್ಕಿತ್ತ ಕೊಡುಗೆ' ಎಂಬ ಲೇಖನದಲ್ಲಿ ವೀರಶೈವ ಸಕಲ ಸಮಯಗಳನ್ನೊಳಗೊಂಡ ಸಂಕೀರ್ಣ ಧರ್ಮ, ಅಂತೆಯೇ ಎಲ್ಲವುಗಳ ಸಾರ ಹೀರಿಕೊಂಡು ಶಿವಾದ್ವೈತವೆನ್ನುವ ವಿನೂತನ ದರ್ಶನವನ್ನು ಸಾರಿದ ವಿಶ್ವಧರ್ಮ ಇದರ ಪ್ರಗತಿ. ಪುನರುತ್ಥಾನ ಕಾರ್ಯಗಳಲ್ಲಿ ವಿಶ್ವಬ್ರಾಹ್ಮಣರು ನೆರವಾಗಿದ್ದಾರೆ. ತಮ್ಮ ನಿಷ್ಠಾಪೂರ್ಣ ಸೇವೆಯಿಂದ ಅದನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹೇಳುವರು.

ಕಿನ್ನರಿ ಬೊಮ್ಮಯ್ಯ, ಹಾವಿನಹಾಳ ಕಲ್ಲಯ್ಯ, ವರದಾನಿ ಗುಡ್ಡವೆ ಹಾಗೂ ಕರಸ್ಥಲದನಾಗಿದೇವ ಇವರೆಲ್ಲರೂ ಹುಟ್ಟಿನಿಂದ ವಿಶ್ವಬ್ರಾಹ್ಮಣರೇ ಆಗಿದ್ದು, ಬದುಕಿನ ದಿನಗಳಲ್ಲಿ ವೀರಶೈವರಾಗಿ ವೀರಶೈವ ಧರ್ಮದ ಪುನರ್‌ಜೀವನ ಕಾರ್ಯದಲ್ಲಿ ಇವರು ಪ್ರಮುಖ ಪಾತ್ರವಹಿಸಿದವರು ಎಂದು ತಿಳಿಸುತ್ತಾರೆ. ಇದರ ಜೊತೆಗೆಯೇ ಬಾಚಿಕಾಯಕದ ಬಸವಯ್ಯ, ಕಾಳವ್ವೆ ಇವರನ್ನು ಕೂಡ ಈ ಲೇಖನದಲ್ಲಿ ಸೇರಿಸಬಹುದಿತ್ತು. ಪಾಂಚಾಳ ಕುಲದಲ್ಲಿ ಜನಿಸಿ ತಮ್ಮ ಜೀವನವನ್ನೆಲ್ಲಾ ವೀರಶೈವ ಧರ್ಮಕ್ಕೆ ಮುಡಿಪಾಗಿ ಇಟ್ಟಿದ್ದರು.

ಶ್ರೀನಿವಾಸಚಾರಿ ಬಿ. ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಎಂ.ಫಿಲ್ ಪದವಿಯ **'ಬಡಗಿತನದ ದೇಶೀಯ ತಂತ್ರಜ್ಞಾನ'** ಎಂಬ ಕಿರುಪ್ರಬಂಧವು ಒಟ್ಟು ಒಂಭತ್ತು ಅಧ್ಯಾಯಗಳಿಂದ ಕೂಡಿದೆ. ಕಿರುಪ್ರಬಂಧವು ಬಡಗಿತನಕ್ಕೆ ಸಂಬಂಧಿಸಿದಂತೆ ದೇಸಿಯುತೆಯ ಮೂಲಕ ಕೃಷಿ, ಸಾಮಾಜಿಕ ರಚನೆ, ಕೆಲಸದಲ್ಲಿ ಮನೆಯ ಮಕ್ಕಳು ತೊಡಗಿಕೊಳ್ಳುವಿಕೆ, ಅವರ ಮೇಲೆ ಬಂದಿರುವ ಗಾದೆ, ಒಗಟುಗಳು ಹಾಗೂ ಜಾಗತೀಕರಣದ ಸಂದರ್ಭದಲ್ಲಿ ಅವರು ಎದುರಿಸುವ ಸವಾಲುಗಳ ಬಗ್ಗೆ ತಿಳಿಸುತ್ತಾರೆ.

ಒಟ್ಟಾರೆಯಾಗಿ ಈ ಕಿರು ಪ್ರಬಂಧವು ಬಡಗಿತನದ ಬಗ್ಗೆ ಬೆಳಕು ಚೆಲ್ಲುತ್ತದೆ. ಇದರ ಜೊತೆಗೆಯೇ ಬಡಗಿತನಕ್ಕೆ ಆಧುನಿಕ ಸಂದರ್ಭದಲ್ಲಿ ಅವರು ತಯಾರಿಸುವ ಪೀಠೋಪಕರಣಗಳು, ಕೆಲಸದಿಂದ ಸಿಗುವ ಹಣ, ಬೇರೆ ಸಮುದಾಯದವರು ಈ ವೃತ್ತಿಯನ್ನು ಮಾಡತೊಡಗಿದ್ದಾರೆ ಇದರಿಂದ ಮೂಲ ಬಡಿಗರಿಗೆ ಆಗುವ ತೊಂದರೆಗಳು, ಆಧುನೀಕರಣದಿಂದ ರೈತರಿಗೆ ಬೇಕಾಗುವ ರೈತಾಪಿ ಸಲಕರಣೆಗಳೆಲ್ಲ ಮಾರುಕಟ್ಟೆಯಲ್ಲಿ ಲಭಿಸುವುದರಿಂದ ಇವರ ವೃತ್ತಿಯ ಮೇಲೆ ಉಂಟಾಗುವ ನಷ್ಟ, ಅರಣ್ಯಗಳೆಲ್ಲವೂ ಸರ್ಕಾರದ ಸ್ವತ್ತಿನಲ್ಲಿರುವುದರಿಂದ ಕಟ್ಟಿಗೆ ಖರೀದಿ ಮಾಡಲಿಕ್ಕೆ ಪಡಬೇಕಾದ ತೊಂದರೆ, ಕೆಲಸದ ಸಂದರ್ಭದಲ್ಲಿ ಏನಾದರೂ ನೋವು ಸಂಭವಿಸಿದರೆ ಸರ್ಕಾರದ ವತಿಯಿಂದ ಅಥವಾ ಸಂಘ ಸಂಸ್ಥೆಗಳ ಕಡೆಯಿಂದ ಆರ್ಥಿಕ ನೆರವಿನ ಬಗ್ಗೆ, ಆಚರಣೆಗಳಿಗೆ ಸಂಬಂಧಿಸಿದಂತೆ ಈ ಸಮುದಾಯದವರಿಗೆ ಮತ್ತು ಬೇರೆ ಸಮುದಾಯದವರಿಗೆ ಊಟ, ಧಾರ್ಮಿಕ ಸಭೆ ಸಮಾರಂಭಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ ಏಕೆ? ಸಾವು ಸಂಸ್ಕಾರಗಳಲ್ಲಿ ಅನುಸರಿಸುವ ಸಂಪ್ರದಾಯಗಳು ಇವುಗಳೆಲ್ಲ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರೆ ಇನ್ನಷ್ಟು, ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಯಲಿಕ್ಕೆ ಈ ಕಿರುಪ್ರಬಂಧವು ಅನುವುಮಾಡಿಕೊಡುತಿತ್ತು.

ಶ್ರೀನಿವಾಸಚಾರಿ.ಬಿ. ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ **'ಪಾಂಚಾಳ ಜಾನಪದ'** ಎಂಬ ಮಹಾಪ್ರಬಂಧದಲ್ಲಿ ಜಾನಪದದಲ್ಲಿ ಪಾಂಚಾಳರ ಸ್ಥಾನಮಾನ ಕುರಿತಂತೆ ಎಂಟು ಅಧ್ಯಾಯಗಳ ಮೂಲಕ ಸಂಶೋಧನೆ ಮಾಡಿದ್ದಾರೆ.

ಪಾಂಚಾಳ ಸಮಾಜದ ಮೌಖಿಕ ಇತಿಹಾಸವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ನೀಡಿದ್ದಾರೆ. ಪಾಂಚಾಳ ಸಮುದಾಯಕ್ಕೆ ಸಂಬಂಧಿಸಿದಂತೆ ಐದು ವೃತ್ತಿಯ ಉಪಕರಣಗಳ ಪಟ್ಟಿಯನ್ನು ನೀಡುತ್ತಾರೆ. ಸಮಾಜದ ಆಚರಣೆ ಮತ್ತು ನಂಬಿಕೆ ಕುರಿತಂತೆ ಮನುಷ್ಯ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು, ನಿಸರ್ಗ ಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು, ವೃತ್ತಿಕೇಂದ್ರಿತ ಆಚರಣೆ ಮತ್ತು ನಂಬಿಕೆಗಳು ಹಾಗೂ ದೈವಕೇಂದ್ರಿತ ಆಚರಣೆ ಮತ್ತು ನಂಬಿಕೆಗಳೆಂದು ವಿಂಗಡಿಸಿಕೊಂಡು ಸಂಶೋಧನೆಯನ್ನು ಕೈಗೊಂಡಿದ್ದಾರೆ. ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ಆಯ ಪದ್ಧತಿಯ ಸ್ಥಾನಮಾನವನ್ನು ವಿವರಿಸುತ್ತಾರೆ. ಸಮಾಜದ ಸಮಕಾಲೀನ ಅಸ್ತಿತ್ವ, ನಾಳಿನ ಸಾಧ್ಯತೆಗಳು ಮತ್ತು ದೇಶೀಯ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಚರ್ಚಿಸುತ್ತಾರೆ.

ಮಹಾಪ್ರಬಂಧದಲ್ಲಿ ಆಯತನಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುವಾಗ ಪ್ರಾಚೀನ ಕಾಲಕ್ಕೆ ಸಂಬಂಧಿಸಿದ ವಿವರಣೆಯನ್ನು ಮಾತ್ರ ನೀಡುತ್ತಾರೆ. ಪ್ರಾಚೀನ ಸಂದರ್ಭದಲ್ಲಿ ಆಯದಿಂದ ಬಂದಂತಹ ದವಸ-ಧಾನ್ಯಗಳಿಂದ ಜೀವನ ನಡೆಸುತ್ತಿದ್ದರು. ಆಧುನಿಕ ಸಂದರ್ಭದಲ್ಲಿ ಆಯತನಕ್ಕೆ ಪ್ರಾಶಸ್ತ್ಯ ಇದೆಯೋ? ಇದ್ದರೆ ಕುಶಲಕರ್ಮಿಗಳಿಗೆ ಜೀವನ ನಡೆಸಲು ಸಾಧ್ಯವಾಗುತ್ತದೆಯೋ? ಎಂಬೆಲ್ಲಾ ವಿಷಯಗಳನ್ನು ಚರ್ಚಿಸಬಹುದಿತ್ತು. ಸಮಕಾಲೀನ ಸಂದರ್ಭದಲ್ಲಿ ಅವರ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಸರ್ಕಾರದ ಅನುದಾನಗಳು, ಸಂಘ-ಸಂಸ್ಥೆಗಳ ಸ್ಥಾಪನೆ, ಸಮಕಾಲೀನ ಸಂದರ್ಭಕ್ಕನುಗುಣವಾಗಿ ವೃತ್ತಿಯ ನಿರ್ಮಾಣಗಳು, ಬದಲಾವಣೆ ಇಂತಹ ವಿಷಯಗಳನ್ನು ಚರ್ಚಿಸಿದ್ದರೆ ತುಂಬಾ ಉಪಯುಕ್ತ ಮಾಹಿತಿಗಳು ಸಿಗುತ್ತಿದ್ದವು.

ಪಾಂಚಾಳ ಸಮುದಾಯದ ಈವರೆಗಿನ ಅಧ್ಯಯನದ ಸಮೀಕ್ಷೆಯಿಂದ ಅವರ ಪಾರಂಪರಿಕ ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಸ್ಥೂಲವಾದ ಚಿತ್ರಣವೊಂದು ಸಿಗುತ್ತದೆ. ಪಾಂಚಾಳರು ಊರಿನ ಯಾವುದೇ ಮುಖ್ಯ ಆಚರಣೆಗಳು ಮತ್ತು ಘಟನೆಗಳಲ್ಲಿ ಪಾಂಚಾಳರ ಉಪಸ್ಥಿತಿ ಇದ್ದೆ ಇರುತ್ತದೆ. ಹಿಂದಿನಿಂದಲೂ ಪಾಂಚಾಳರು ಯಾವುದೇ ಬಗೆಯ ಉನ್ನತ-ಸ್ಥಾನಮಾನಗಳನ್ನು ಅನುಭವಿಸುತ್ತ ಬಂದಿದ್ದರೂ ಅವು ಸಮಾಜದ ಜೊತೆಗಿರುವ ನಿಕಟ ಸಂಬಂಧವನ್ನು ತಿಳಿಸುವಂತಹುಗಳಾಗಿವೆ.

ಆಧುನಿಕ ಕೈಗಾರಿಕೆಗಳು ಮುಖ್ಯವಾಗಿ ಭಾರತದ ರೈತಾಪಿ ಜನಸಮುದಾಯದಿಂದ ಹಿಡಿದು ಎಲ್ಲಾ ಕುಶಲಕರ್ಮಿ ಜನಾಂಗಗಳ ಮೇಲೆ ಬೇರೆ ಬೇರೆ ರೀತಿಯ ಪರಿಣಾಮವನ್ನು ಬೀರಿದೆ. ಕೈಗಾರಿಕೆಗಳ ಉತ್ಪನ್ನದಿಂದ ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿರುವಂತೆ ಇಂಥ ಕರಕುಶಲ ಜನಾಂಗಗಳ ಆರ್ಥಿಕ ಪರಿಸ್ಥಿತಿ ಹಿಂದುಳಿಯುವಿಕೆಗೆ ಕಾರಣವಾಗಿವೆ. ಈ ಮೂಲಕಸುಬು ನಂಬಿಕೊಂಡು ಜನಸಮುದಾಯ ತಮ್ಮ ಹೊಟ್ಟೆಪಾಡನ್ನು ನಿಭಾಯಿಸಿಕೊಳ್ಳುವುದು ಪ್ರಸ್ತುತ ಸಂದರ್ಭದಲ್ಲಿ ಸಾಧ್ಯವಾಗುತ್ತಿಲ್ಲ. ಈ ಕೈಗಾರೀಕರಣದಿಂದ ಮೊಟ್ಟಮೊದಲಿಗೆ ಪಾಂಚಾಳರ ಸಾಂಪ್ರದಾಯಿಕ ವೃತ್ತಿ ಸಲಕರಣೆಗಳು ಮೂಲೆಗುಂಪಾದವು. ಪಾಂಚಾಳರ ಹತ್ತಿರ ಬಂದು ಕೆಲಸ ಮಾಡಿಸಿಕೊಳ್ಳುತ್ತಿದ್ದ ರೈತಾಪಿ ಸಮುದಾಯಗಳು ಆಧುನಿಕ ಮಾರುಕಟ್ಟೆಯಲ್ಲಿ ದೊರಕುವ ಸಲಕರಣೆಗಳನ್ನು ಖರೀದಿಸಲು ಪ್ರಾರಂಭಿಸಿದರು. ಹೀಗಾಗಿ ಇದರ ಎದುರು ಪೈಪೋಟಿ ನಡೆಸುವುದು ಅಸಾಧ್ಯವಾಗಿದೆ. ಏಕೆಂದರೆ ಸ್ವಂತ ಬಂಡವಾಳ ಹೂಡಿ ಇದನ್ನೇ ಲಾಭದಾಯಕ ಉದ್ಯಮವನ್ನಾಗಿ ಮಾಡಿಕೊಳ್ಳಬಹುದಾದ ಸ್ಥಿತಿವಂತಿಕೆ ಇಲ್ಲದಾಗಿದೆ. ಇಂತಹ ಸಮಸ್ಯೆಗಳಿಂದ ಸಮುದಾಯಗಳಲ್ಲಿ ಅಸಹಾಯಕತೆಯ ವಾತವರಣ ಮೂಡತೊಡಗಿದೆ.

ಮೇಲಿನ ಅಧ್ಯಯನಗಳು ಪಾಂಚಾಳರ ಪರಂಪರೆ ಮತ್ತು ಚಾರಿತ್ರಿಕ ವಿಚಾರಗಳನ್ನು ಆಂಶಿಕವಾಗಿ ಗುರುತಿಸುತ್ತವೆ. ಆದರೆ ಜನ ಸಂಸ್ಕೃತಿಯ ಪರಂಪರೆಯಲ್ಲಿ ನಿತ್ಯ ದುಡಿಮೆಯನ್ನು, ಕಾಯಕವನ್ನು ನಂಬಿ ಬೆಳೆದು ಬಂದಿರುವ ಈ ಸಮುದಾಯ ಕೈಗಾರೀಕರಣ ಹಾಗೂ ಆಧುನಿಕ ಮಾರುಕಟ್ಟೆ, ಗ್ರಾಹಕ, ಉತ್ಪಾದಕ ಬಂಡವಾಳದ ಬಿರುಗಾಳಿಯಲ್ಲಿ ಇವರ ಬದುಕು, ಭಾಷೆ, ಅಸ್ತಿತ್ವಗಳ ಭವಿಷ್ಯಕ್ಕಾಗಿ ನಡೆಯಬೇಕಾದ ಅಧ್ಯಯನಗಳು ಇನ್ನೂ ಆರಂಭಗೊಂಡಿಲ್ಲವೆಂದೇ ಹೇಳಬೇಕಾಗಿದೆ.

ಇಂದಿನ ಪ್ರಸ್ತುತ ಸಂದರ್ಭದಲ್ಲಿ ವೃತ್ತಿ ನಿರತ ಸಮುದಾಯಗಳು ತಮ್ಮ ದುಡಿಮೆಯ ಫಲವನ್ನು ಅನುಭವಿಸಲಾಗದೇ, ಕಲಾವಂತಿಕೆಯನ್ನು ಜೀವಂತವಾಗಿ ಉಳಿಸಿಕೊಳ್ಳಲಾಗದೆ ಆತಂಕ ಪರಿಸ್ಥಿತಿಯಲ್ಲಿವೆ. ಇಂತಹ ಸಂದರ್ಭಗಳಲ್ಲಿ ಸಮುದಾಯಗಳ ಶೋಧನೆ ತುಂಬ ಮಹತ್ವವಾದದ್ದು. ಆದುದರಿಂದ ಸಂಸ್ಕೃತಿ ಮತ್ತು ಭಾಷೆಯ ಅಧ್ಯಯನಕ್ಕೆ ತೊಡಗುವುದು ಉಪಯುಕ್ತವಾದದು. ಸಮುದಾಯದ ಭಾಷೆ, ಸಂಬಂಧಗಳು, ವೃತ್ತಿನಾಮಗಳು, ಇತರೆ ಸಮುದಾಯಗಳ ಮೇಲೆ ಬೀರುವ ಪ್ರಭಾವ, ಇಂದಿನ ಆರ್ಥಿಕ ಪರಿಸರ ಈ ತೆರನಾದ ಅಧ್ಯಯನಗಳು ನಡೆದಿಲ್ಲ. ಸಮುದಾಯದ ಪ್ರಾಸಶ್ತ್ಯ ಉಳಿಯಬೇಕಾದರೆ ಅವುಗಳು ರೂಡಿಸಿಕೊಂಡಿರುವಂತಹ ಮೇಲಿನ ವಿಷಯಗಳನ್ನೆಲ್ಲಾ ಅಧ್ಯಯನ ಮಾಡಬೇಕು.

ಅಧ್ಯಾಯ - ಮೂರು

ಪಾಂಚಾಳರ ಐತಿಹಾಸಿಕ ನೆಲೆ

೩.೧. ಶಾಸನಗಳಲ್ಲಿ ಪಾಂಚಾಳರು

೩.೨. ಜನಪದ ಕಾವ್ಯಗಳಲ್ಲಿ ಪಾಂಚಾಳರು

೩.೩. ಸಾಹಿತ್ಯ ಕೃತಿಗಳಲ್ಲಿ ಪಾಂಚಾಳರು

ಅಧ್ಯಾಯ - ಮೂರು

ಪಾಂಚಾಳರ ಐತಿಹಾಸಿಕ ನೆಲೆ

ಸಾಮ್ರಾಜ್ಯಶಾಹಿಯ ವೈಭವೀಕರಣದ ಇತಿಹಾಸ, ಸಾಮಾನ್ಯವಾಗಿ ದುಡಿಯುವ ವರ್ಗದ ಇತಿಹಾಸವನ್ನು ಲಕ್ಷಿಸಿಲ್ಲ. ಒಂದು ಜನಸಮುದಾಯದ ಇತಿಹಾಸ ಆ ಸಮುದಾಯ ನೆಲೆಸಿದ್ದ ಸೇವೆಗೈದ ನಾಡಿನ, ಪ್ರದೇಶದ ಸಂಸ್ಕೃತಿ, ಕಲೆ, ಭಾಷೆಗಳ ಬೆಳವಣಿಗೆ ವಿಕಾಸಕ್ಕೆ ಹೇಗೆ ಪೂರಕವಾಗಿರುತ್ತದೆ ಎಂಬುದನ್ನು ಗಮನಿಸುವ ಅಗತ್ಯವಿದೆ. ಒಂದು ನಾಡಿನ ಒಟ್ಟಾರೆ ಅಭಿವೃದ್ಧಿ, ಕಲೆ, ಸಾಂಸ್ಕೃತಿಕ ಹಿರಿಮೆ ಗರಿಮೆಗಳ ಹೆಚ್ಚಳಕ್ಕೆ ಇಂತಹ ದುಡಿಯುವ ವರ್ಗದ ಪರಿಶ್ರಮ ಜೀವಿಗಳ ಕೊಡುಗೆ ಅಪಾರವಾಗಿರುತ್ತದೆ. ಈ ಇತಿಹಾಸವು ಶಾಸನ, ಮೌಖಿಕ ಪರಂಪರೆ, ಸಾಹಿತ್ಯ ಕೃತಿಗಳಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಉಲ್ಲೇಖಿತವಾಗಿದೆ. ಪಾಂಚಾಳರ ಕುರಿತು ಇಂತಹ ಐತಿಹಾಸಿಕ ವಿವರಗಳನ್ನು ಈ ಅಧ್ಯಾಯದಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಕಮ್ಮಾರ, ಬಡಿಗ, ಅಕ್ಕಸಾಲಿಗ, ಶಿಲ್ಪಿ ಹಾಗೂ ಕಂಚುಗಾರ ಇವರು ವಿಶ್ವಕರ್ಮರು, ಪಾಂಚಾಳರು, ವಿಶ್ವಬ್ರಾಹ್ಮಣರು, ಪಂಚಕರ್ಮಿಯರು, ಆಚಾರಿ ಮುಂತಾದ ಹೆಸರುಗಳಿಂದ ಗುರುತಿಸಿಕೊಂಡು ಇತಿಹಾಸದಲ್ಲಿ ಪ್ರಮುಖವಾದ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಸಂಸ್ಕೃತದಲ್ಲಿ ಪಂಚ ಎಂದರೆ ಐದು ಎಂದು ಅರ್ಥ. ಕಬ್ಬಿಣ, ಕಟ್ಟಿಗೆ, ಬೆಳ್ಳಿ, ಕಂಚು, ಬಂಗಾರ, ಕಲ್ಲು ಹಾಗೂ ಕಂಚು ಇವುಗಳಿಂದ ವಸ್ತು ಉತ್ಪನ್ನಗಳನ್ನು ಮಾಡುವ ವೃತ್ತಿಯ ಸಮುದಾಯವನ್ನು ಪಾಂಚಾಳ ಎಂದು ಕರೆಯುತ್ತಾರೆ. ಪಾಂಚಾಳ ಎನ್ನುವ ಪದ ಐದು ವೃತ್ತಿಗಳನ್ನು ಒಟ್ಟಿಗೆ ಸೇರಿಸಿ ಹೇಳುವ ಪದವಾಗಿದೆ. ಈ ವೃತ್ತಿ ಸೂಚಕ ಪದಗಳು ಮೇಲ್ನೋಟಕ್ಕೆ ಜಾತಿಸೂಚಕಗಳಂತೆ ಭಾಸವಾಗುತ್ತವೆ. ಆದರೆ ಈ ಸಮುದಾಯದ ಜನಗಳ ಬದುಕಿನ ವಿವರಗಳನ್ನು ಅಭ್ಯಸಿಸಿದರೆ ಐದು ವೃತ್ತಿಗಳನ್ನು ಒಂದೇ ಜಾತಿಯವರು ನಿರ್ವಹಿಸಿಕೊಂಡು ಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಹ ಸಮುದಾಯದ ಬಗ್ಗೆ ಶಾಸನ, ಜಾನಪದ ಹಾಗೂ ಸಾಹಿತ್ಯ ಕೃತಿಗಳಲ್ಲಿ ಸಮುದಾಯದ ರೀತಿ- ನೀತಿಗಳನ್ನು ಕುರಿತು ಉಲ್ಲೇಖವಾಗಿರುವುದನ್ನು ಕಾಣಬಹುದು. ಇವುಗಳ ಮೂಲಕ ಪಾಂಚಾಳರ ಪ್ರಾಚೀನ ಇತಿಹಾಸವನ್ನು ಗುರುತಿಸಲಿಕ್ಕೆ ಆಕರ ಸಾಮಗ್ರಿಯಾಗಿ ದೊರೆಯುತ್ತವೆ.

ಡಿಸ್ಕಲರ್ ಎಂಬ ವಿದ್ವಾಂಸರ ಅಭಿಮತದಂತೆ 'ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆಯೇ ಶಾಸನ ಸಾಹಿತ್ಯವೂ ವಿಷಯದ ಗಣೆಯಾಗಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಜ್ಞಾನದ ಕೊರತೆಯನ್ನು ಶಾಸನ ಅಭ್ಯಾಸದಿಂದ ಹೋಗಲಾಡಿಸಿಕೊಳ್ಳಬಹುದು'[೧] ಎಂದಿದ್ದಾರೆ. ನಮ್ಮ ನಾಡಿನ ಜನ ಜೀವನವು ಜಾನಪದ, ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲು ಅಭಿವ್ಯಕ್ತವಾಗಿಲ್ಲ. ಇದಕ್ಕೆ ಪಾಂಚಾಳ ಸಮುದಾಯವು ಹೊರತಾಗಿಲ್ಲ. ಶಾಸನ, ಜಾನಪದ ಹಾಗೂ ಸಾಹಿತ್ಯ ಕೃತಿಗಳ ಅವಲೋಕನದಿಂದ ಪಾಂಚಾಳ ಸಮುದಾಯ ಜೀವನದ ವಿವಿಧ ಮುಖಗಳ ಸ್ಪಷ್ಟ ಚಿತ್ರಣವು ದೊರೆಯುತ್ತದೆ. ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದು ತಮ್ಮ ಕಲೆಯ ಪ್ರಾವೀಣ್ಯತೆಯಿಂದ ರಾಜ-ಮಹಾರಾಜರುಗಳಿಂದ ಸನ್ಮಾನವನ್ನು ಪಡೆದುಕೊಂಡವರು. ರೈತ ಕುಟುಂಬಗಳಿಗೆ ಬೇಕಾದ ಸಲಕರಣೆಗಳನ್ನು ಸಕಾಲಕ್ಕೆ ಒದಗಿಸಿ ರೈತಾಪಿ ಜನಗಳಿಂದ ಆಯಗಾರರು ಎಂದು ಕರೆಸಿಕೊಂಡಿದ್ದಾರೆ. ಅಂದು ಗ್ರಾಮದಲ್ಲಿದ್ದ ಗ್ರಾಮಸಭೆಯಲ್ಲಿ ಇವರು ಖಾಯಂ ಸದಸ್ಯರಾಗಿ ಗ್ರಾಮದ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿದವರು. ತುರುಗಳ ಕಳ್ಳತನದಲ್ಲಿ, ಸ್ತ್ರೀಯರ ಮಾನ ಕಾಪಾಡುವುದರಲ್ಲಿ ತಮ್ಮ ಜೀವನದ ಹಂಗು ತೊರೆದು ಹೋರಾಡಿ ತಮ್ಮ ಶೌರ್ಯವನ್ನು ತೋರಿದ್ದಾರೆ. ಕೆರೆ, ದೇವಾಲಯಗಳನ್ನು ಕಟ್ಟಿಸಿ ಅವುಗಳಿಗೆ ಸ್ವತಃ ದಾನಗಳನ್ನು ನೀಡಿದ ಕೊಡುಗೈ ದಾನಿಗಳಾಗಿದ್ದಾರೆ.

ತಮ್ಮ ವೃತ್ತಿಯ ನೀತಿ ನಿಯಮಗಳನ್ನು ಕಾಪಾಡಿಕೊಂಡು ಬರಲು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದರು. ಸಾಮಂತರಾಗಿ, ಮಂತ್ರಿಗಳಾಗಿ, ಭಂಡಾರಿಗಳಾಗಿ, ರಾಜಗುರುಗಳಾಗಿ, ಕವಿಗಳಾಗಿ, ವೈದ್ಯರುಗಳಾಗಿ, ಜ್ಯೋತಿಷಿಗಳಾಗಿ ಗೌರವ ಸ್ಥಾನಗಳನ್ನು ಅಲಂಕರಿಸಿದ್ದರು ಎಂದು ಶಾಸನಗಳಿಂದ ತಿಳಿಯುತ್ತದೆ. ಈ ಹಿನ್ನಲೆಯಲ್ಲಿ ಪಾಂಚಾಳರಿಗೆ ಸಂಬಂಧಿಸಿದ ಶಾಸನ, ಜಾನಪದ ಹಾಗೂ ಸಾಹಿತ್ಯ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಿ ಈ ನೆಲದಲ್ಲಿ ಪಾದರ್ಪಣೆ ಮಾಡಿದ ಪಾಂಚಾಳ ಸಮುದಾಯದ ಪ್ರಾಚೀನ ಇತಿಹಾಸವನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

೩.೧. ಶಾಸನಗಳಲ್ಲಿ ಪಾಂಚಾಳರು

ಕ್ರಿ.ಶ ೭೭೬-೭೭೮ರ ನಾಗಮಂಗಲ ತಾಲೂಕಿನ ದೇವರಹಳ್ಳಿ ಗ್ರಾಮದ ಶಾಸನದಲ್ಲಿ 'ಸರ್ವ್ವಕಲಾಧಾರ ಭೂತಚಿತ್ರಕಲಾಭಿಜ್ಞೇನ ವಿಶ್ವಕರ್ಮ್ಮಾಚಾರ್ಯ್ಯೇಣೇದಂ ಶಾಸನಮ್ ಲಿಖಿತಮ್'[೨] ಎಂದಿದೆ. ಈ ಬಿರುದನ್ನು ಪಡೆದಿರುವ ವಿಶ್ವಕರ್ಮನು ಶಾಸನವನ್ನು ಬರೆದಿದ್ದಾನೆ ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ ೧೦೭೪ರ ಶಾಸನದಲ್ಲಿ ಶಾಸನವನ್ನು ಮಾಡಿದ ಕಾಳೋಜನಿಗೆ 'ಶ್ರೀಮತ್ ತಿಳಿಪಳ್ಳಿಯ ಬೀನೋಜನ ಮಗಂ ಕಾಳೋಜ ಶಾಸನಮಂ ಮಾಡಿದ ಬೆಸಕ್ಕೆ ಸೋಮೇಶ್ವರ ಪಂಡಿತರ್ ವರ್ಷಂ ಪ್ರತಿ ಅವಲಕ್ಕಿಗೆ ಖಣ್ದುಗ ಭತ್ತಮಂ ಕೊಟ್ಟರ್'[೩] ಎಂದು ಹೇಳಿದೆ. ಕ್ರಿ.ಶ. ೧೪೫೮ರ ಶಾಸನದಲ್ಲಿ 'ತಿಂಮ್ಮೋಜನು ಬರಹಮಾಗಲು ನಾಡ ಹಜುವಿನ ಯಿಪ್ಪತ್ತು ಸಲಿಗೆ ಭತ್ತ'[೪] ಎಂದು ಹೇಳಿದೆ. ಹೀಗೆ ಅವರ ಕೆಲಸಕ್ಕೆ ಪ್ರತಿಯಾಗಿ ಭತ್ತ ಇತ್ಯಾದಿಗಳನ್ನು ಕೊಟ್ಟಿದ್ದು ಕಂಡುಬರುತ್ತದೆ.

ವಿಶ್ವಕರ್ಮರು ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಆ ಊರಿನ ಇತರೇ ಸಮುದಾಯದವರು ಭೂಮಿಯನ್ನು ದಾನವಾಗಿ ನೀಡಿರುವುದುಂಟು. ಕ್ರಿ.ಶ.೧೦೭೫ರ ಶಾಸನದಲ್ಲಿ "ಶಿಲ್ಪಿ ಬೀರೋಜಂಗೆ ಸುರೋಜಂಗೆ ರಾಯಗಟ್ಟಿಯಿಂ ಬಡಿಗ ಮತ್ತರು ೧೨ ಸಿಡೀ ಹುಣಸೆಯಿಂ ಪಡುವ ಮತ್ತರು ೧೨ ತೋಂಟ ಮತ್ತರು೨."[೪] ಮತ್ತೊಂದು ಶಾಸನದಲ್ಲಿ "ಆ ಸಂದಿಯ ಸೋಮಜನ ಮಗ ಹರಿಯೋಜ ಸಾತೇಶ್ವರ ದೇವರ ದೇವಾಲ್ಯವಂ ಎರಡು ತಾಮಟಿ ಶಾಸನವುವಂಗೆಯ್ದು ಹರಿಯೋಜಂಗೆ ಸಾತ ಸಮುದ್ರದ ಕೆಳಗೆ ಗದ್ದೆಕೋ ೧೦ ಎಂದಿದೆ"[೫] ಕ್ರಿ.ಶ.೧೧೬೩ರ ಶಾಸನವೊಂದರಲ್ಲಿ "ಕಲುಕುಟಿಗ ಕೇತೋಜಂಗೆ ಸ್ಥಾನಿಕರಿಪ್ಪತ್ತು ಕಮ್ಮ ಗದ್ದೆಯನುಂ ಬಳಿಯಂ ಸಲಿಸುವರು"[೬]

ಕ್ರಿ.ಶ. ೧೧೧೮ರ ಶಾಸನವೊಂದರಲ್ಲಿ 'ಭರತೇಶ್ವರ ದೇವರ ಕಮಾಪೆರೆಯ ದಶವನವಗಂಗಯನ ಕೇಲೋಜನುಂ ಗಂಗನುಂ ದೇವರ್ಗೆ ೮೦ ಕರ್ಚಿಕೊಟ್ಟರು'[೭] ಎಂಬ ಉಲ್ಲೇಖ ದೊರೆಯುತ್ತದೆ. ಇಲ್ಲಿ ಕಮ್ಮಾರಿಕೆಯಿಂದ ದೊರೆಯುವ ಆದಾಯದಲ್ಲಿ ೧/೧೦ ಭಾಗದಂತೆ ದೇವರಿಗೆ ಅರ್ಪಿಸಿದ ವಿವರ ದೊರೆಯುತ್ತದೆ.

ಕ್ರಿ.ಶ.೧೧೩೮ರ ಧಾರವಾಡ ಜಿಲ್ಲೆಯ ಮತ್ತೂರ ಗ್ರಾಮದ ಶಾಸನದಲ್ಲಿ ಕಮ್ಮನವಳ್ಳಿಯ ಜಕ್ಕಿ ಸೆಟ್ಟಿಯು ಮತ್ತೂರಿನ ಮೇಲೆ ದಾಳಿ ಮಾಡಿ ಹೆಣ್ಣು ಮಕ್ಕಳನ್ನು ಅಪಹರಿಸಬೇಕೆಂದುಕೊಂಡಾಗ ಆ ಗ್ರಾಮದ ಕಮ್ಮಾರ ಮಾಚನು ಅವನೊಂದಿಗೆ ಹೋರಾಟವನ್ನು ಮಾಡಿ ಅವನನ್ನು ಕೊಂದುದಲ್ಲದೆ, ಆ ಹೋರಾಟದಲ್ಲಿ ಮರಣ ಹೊಂದಿದನೆಂದು ಹೇಳಿದೆ. ಗೊಟ್ಟಗೊಂಡ ಗ್ರಾಮದ ಜಕ್ಕಿಗೌಡ, ಕಂಕಗೌಡ ಮತ್ತು ಅಲ್ಲಿಯ ಸಮಸ್ತ ಪ್ರಜೆಗಳು ಸೇರಿ ಮಾಚನ ಅಣ್ಣನಿಗೆ ೨೨ ಕಮ್ಮಭೂಮಿ ಮತ್ತು ೫೦ ಕಮ್ಮ ಹಕ್ಕಲನ್ನು ದಾನವಾಗಿ ನೀಡಿದ್ದು ತಿಳಿಯುತ್ತದೆ.[೮]

ಕ್ರಿ.ಶ.೧೧೩೮ರ ಹೊಯ್ಸಳರ ವಿಷ್ಣುವರ್ಧನನ ಕಾಲಕ್ಕೆ ಸಂಬಂಧಿಸಿದ ಬೋಮ್ಮನಹಳ್ಳಿಯ ಶಾಸನದಲ್ಲಿ ಕಿರಿಯ ಬಸವಾಚಾರಿ ಎಂಬವನು ಸಾರ್ವಜನಿಕರ ಉಪಯೋಗಕ್ಕಾಗಿ ಕೆರೆ ಹಾಗೂ ದೇವಾಲಯವನ್ನು ಕಟ್ಟಿಸಿ, ತಾನೇ ತಪಸ್ವಿಯಾಗಿ ಧರ್ಮವನ್ನು ಪ್ರತಿಪಾಲಿಸತೊಡಗಿದನೆಂದು ತಿಳಿದು ಬರುತ್ತದೆ.[೯]

ಕ್ರಿ.ಶ.೧೧೫೨ರ ಧಾರವಾಡ ಜಿಲ್ಲೆಯ ಶಾಸನದಲ್ಲಿ ಕಮ್ಮಾರ ಗಳಯಾನೆಂಬ ಮಹಾಯೋಧನು ಯುದ್ಧದಲ್ಲಿ ಹೋರಾಡಿ ಸ್ವರ್ಗವೇರಿದನೆಂದು ಹೇಳಿದೆ.[೧೦] ಇದರಿಂದ ಪಾಂಚಾಳರು ತಮ್ಮ ವೃತ್ತಿಯೊಂದಿಗೆ ಸಾಹಸ ಕಾರ್ಯದಲ್ಲಿಯೂ ಪಾಲ್ಗೊಂಡಿದ್ದರು ಎಂಬುದು ತಿಳಿಯುತ್ತದೆ.

ಕ್ರಿ.ಶ.೧೧೮೬ರ ಶಾಸನದಲ್ಲಿ ಬಡಿಗ ಕಲ್ಲೋಜನು ತನಗೆ ಬರುವ ಕೂಲಿಯಲ್ಲಿಯೇ ಹೊಸೂರದ ಮೋರಕೇಶ್ವರ ದೇವರ ನಿತ್ಯ ನೈವೇದ್ಯಕ್ಕಾಗಿ ಅಕ್ಕಿಯನ್ನು ಶ್ರೀ ಅಗಸ್ತ್ಯ ಮುನಿಗಳ ಕಾಲತೊಳೆದು ಬಿಡುತ್ತಾನೆ. ಇದು ಪುತ್ರಪೌತ್ರದಿಗಳೆಲ್ಲರೂ ಮುಂದುವರಿಸಿಕೊಂಡು ಬರಬೇಕೆಂದು[೧೧] ಹೇಳಿದೆ.

ಕ್ರಿ.ಶ.೧೧೮೯ರ ಗದಗ ತಾಲೂಕಿನ ಹೊಂಬಳ ಗ್ರಾಮದ ಶಾಸನದಲ್ಲಿ "ಕಂಚಗಾಬಿ ದೇವರ ಉಪಕರಣಗಳೆಲ್ಲವುಂ ಕೂಲಿಯಂ ಕೊಳ್ಳದೆ ಮಾಡಿ ಕೊಡುವಂತಾಗಿ ಬಿಟ್ಟರು"[೧೨] ಎಂದು ಹೇಳಿದೆ.

ದೇವರ ಉಪಕರಣ ಮುಂತಾದ ಕೆಲಸಗಳು ತಮ್ಮ ಸೇವೆ ಎಂದುಕೊಂಡು ಅವುಗಳಿಗೆ ಪ್ರತಿಫಲವನ್ನು ತೆಗೆದುಕೊಳ್ಳದೆ ಮಾಡುತ್ತಿದ್ದುದುಂಟು.

ಕ್ರಿ.ಶ.೧೧೯೪ರ ಚಿಕ್ಕಮಗಳೂರು ತಾಲೂಕು ಕೆಂಕೆರೆ ಗ್ರಾಮದ ಶಾಸನದಲ್ಲಿ ಚಂದ್ರಮ ಉಳಿಯಣ್ಣನ ಬಡಗಿ ಸಂಕೋಜ, ಮಲೋಜ, ಬುತೋಜ ಮಾಡಿದ ವೀರಗಲ್ಲು ಎಂದು ಉಲ್ಲೇಖವಾಗಿದೆ. ಸಂಕೋಜ ಮಲೋಜ ಬುತೋಜ ಬಡಗಿಗಳಾಗಿದ್ದರು ಈ ವೀರಗಲ್ಲನ್ನು ಇವರೇ ರಚನೆ ಮಾಡಿದರು ಎಂದು ತಿಳಿಸುತ್ತದೆ.

ಕ್ರಿ.ಶ.೧೨ನೇ ಶತಮಾನದ ಹಾವೇರಿ ತಾಲೂಕಿನ ದೇವಿಹೊಸೂರಿನ ವೀರಗಲ್ಲು ಶಾಸನದಲ್ಲಿ 'ಸರ್ವನಮಸ್ಯದನಾದಿಯಗ್ರಹಾರಂ ದೆಯ್ವದ ಪೊಸವೂರಂ ಶ್ರೀ ಮಸ್ಮಹಾ ಮಂಡಳೇಶ್ವರಂ ಕೀರ್ತ್ತಿದೇವರಸ ನಿಱಿದುತಱುವ ಕೊಂಡ ಹೋಹಲ್ಲಿ ಅಕ್ಕಸಾಲಿ ದಾಸೋಜಂ ಮಾಱಿಂ ತಿದಿರ್ಚ್ಚಿಕಾದಿ ಶ್ರೀ ಸಾಸಿರ್ವ್ವರ ಶ್ರೀ ಪಾದಶರಣೆಂದು ಸುರಲೋಕ ಪ್ರಾಪ್ತನಾದ್ ಎಂದಿದೆ. ಮಹಾಮಂಡಳೇಶ್ವರ ಕೀರ್ತಿದೇವರಸನು, ಅಗ್ರಹಾರವಾಗಿದ್ದ ದೇವಿಹೊಸೂರಿಗೆ ಮುತ್ತಿಗೆಯನ್ನು ಹಾಕಿ ಅಲ್ಲಿರುವ ಗೋವುಗಳನ್ನು ತೆಗೆದುಕೊಂಡು ಹೋಗುವಾಗ ಆ ಗ್ರಾಮದ ಅಕ್ಕಸಾಲಿ ದಾಸೋಜನು ಅವನೊಂದಿಗೆ ಹೋರಾಟವನ್ನು ಮಾಡಿ ಮಡಿದ. ಇವನ ಸ್ಮರಣೆಗಾಗಿ ಈ ವೀರಗಲ್ಲು ಹಾಕಿಸಲಾಗಿದೆ.

ಕ್ರಿ.ಶ.೧೨ನೇ ಶತಮಾನದ ಹುಬ್ಬಳ್ಳಿ ತಾಲೂಕಿನ ಮಂಟೂರು ಗ್ರಾಮದಲ್ಲಿರುವ ಹೊಯ್ಸಳ ಎರಡನೆಯ ವೀರ ಬಲ್ಲಾಳನ ತಾಮ್ರಪಟದಲ್ಲಿ ಹಿಟ್ಟಿನ ತಳವಾರ, ಮಾರಯ ನಾಯಕ, ಹಿಟ್ಟಕಾರಿ ಬಡಗಿ ಹಿರೋಜ, ಹಿಟ್ಟಿನ ಕಮ್ಮಾರ ದೇವೊಜ ಮತ್ತು ಹಿಟ್ಟಿನ ಅಕ್ಕಸಾಲೆ ಪಾರಿಸೋಜ ಇವರುಗಳಿಗೆ ಭೂಮಿಯನ್ನು ಕೊಟ್ಟ ಉಲ್ಲೇಖಗಳು ದೊರೆಯುತ್ತವೆ

ಕ್ರಿ.ಶ.೧೨೧೪ರ ಗದಗ ತಾಲೂಕಿನ ನಾಗಾವಿಯ ಯಾದವ ಸಿಂಘಣನ ಕಾಲದ ಶಾಸನದಲ್ಲಿ ಅಲ್ಲಿಯ ಮಹಾಬಳೇಶ್ವರ ದೇವರಿಗೆ ಕಮ್ಮಾರ ಬೋಮ್ಮಜನು ತನ್ನ ಕಮತದ ಕೆಲಸದಿಂದ ಬಂದ ಆದಾಯವನ್ನು ದಾನವಾಗಿ ಇದನ್ನು ಊರಗೌಡ ಮತ್ತು ಸಮಸ್ತ ಪ್ರಜೆಗಳು ಕಾಪಾಡಬೇಕೆಂದು ಹೇಳಿದೆ.

ಕ್ರಿ.ಶ.೧೨೩೧ರ ಕಡೂರು ತಾಲೂಕಿನ ಸೋಮನಹಳ್ಳಿಯ ಶಾಸನವು ಅಕ್ಕಸಾಲೆ ಮಾರೋಜನು ತನ್ನ ಅಕ್ಕಸಾಲೆ ಹಿಟ್ಟಿನ ಭೂಮಿಯೊಳಗೆ ಬ್ರಹ್ಮೇಶ್ವರ ದೇವರ ಅಂಗಭೋಗಕ್ಕೆ ಬಿಟ್ಟದತ್ತಿ ಬೆದ್ದಲು ಕಂಬ ೫೫ ಎಂದು ಹೇಳಲಾಗಿದೆ.

ಕ್ರಿ.ಶ.೧೨೫೯-೬೦ರ ಮಳವಳ್ಳಿ ತಾಲೂಕು ಮಾರೆಹಳ್ಳಿ ಗ್ರಾಮದ ಶಾಸನದಲ್ಲಿ 'ಸಿದಾರ್ತಿ ಸಂವತ್ಸರದ... ಬ...೫..ಲು... ಶ್ರೀ ನಾರಸಿಂಹದೇವರು ಅಕಸಾಲೆ ಕಾಳಜೀಗೆ ಕೊಟ್ಟ ಕೊಡುಗೆ ನಕಾ ಬಂಗಾರದ ಕೆಲಸ ವಿಸ ತಾಯನೊ ಮಾಡುವುದಕೆ ಮಾಸಹೇಳಿಥಲು ಕೊಡುಗೆ ಗದ್ದೆ ಹಲ ಕೊಳಗವನೂ ಅನುಭವಿಸುವವನು. ಅಂದರೆ ಅಕ್ಕಸಾಲಿ ಕಾಳಜೀ ಎನ್ನುವನು ಹೊಯ್ಸಳ ನರಸಿಂಹ ರಾಜನಿಗೆ ಬಂಗಾರದ ಕೆಲಸ ಮಾಡಿಕೊಟ್ಟುದಕ್ಕೆ ಗದ್ದೆಯ ಹೊಲವನ್ನು ಅನುಭವಿಸಲು ಬಿಟ್ಟುಕೊಡುತ್ತಾನೆ.

ಕ್ರಿ.ಶ.೧೩೧೨ರಲ್ಲಿ ಕೃಷ್ಣರಾಜ ಪೇಟೆ ತಾಲೂಕು ಬೈರಾಪುರದ ಶಾಸನದಲ್ಲಿ ಪಾಂಚಾಳರಿಗೆ ಆಯಿ ಘಂಡುಗ ಗದ್ದೆಯನ್ನು ಬೈರಾಪುರದ ಮಹಾಜನಂಗಳು ಕೊಟ್ಟಿರುವುದರ ಉಲ್ಲೇಖವಿದೆ.

ಕ್ರಿ.ಶ.೧೩೭೨ರ ಗುಂಡ್ಲಪೇಟೆ ಗ್ರಾಮದ ಶಾಸನವೊಂದರಲ್ಲಿ ಸಮಸ್ತ ವೀರಪಾಂಚಾಳರು ಸರ್ವಏಕಮತ್ಯವಾಗಿ ವಿಜಯಪುರದ ದೇವರಾದ ಕೇತವ್ವಯಗೆ ಪ್ರತಿಗ್ರಾಮದಲ್ಲಿರುವ ವೀರಪಾಂಚಾಳರ ವರ್ಷಂಪ್ರತಿ ೧. ಅಕ್ಕಸಾಲೆಗರು ೧ ಕಂಚಗಾರರು ಆಹಳಕ್ಕೆ ೩ ಪ್ರಕಾರದಲ್ಲಿಯೇ ಪ್ರತಿವರುಷವು ದಾನವಾಗಿ ಕೊಡುತ್ತಿದ್ದರು ಎಂಬ ಉಲ್ಲೇಖ ದೊರೆಯುತ್ತದೆ.[೨೦]

ಕ್ರಿ.ಶ.೧೪೧೮ರ ವಿಜಯನಗರ ಕಾಲದ ಶಾಸನವು ತಿಳಿಸುವ ಪ್ರಕಾರ ವೀರಪಾಂಚಾಳರು ವಿಜಯನಗರದ ಅರಸ ಹರಿಹರ ಮಹಾರಾಯನಿಗೆ ಆಸ್ಥಾನದ ಸಿಂಹಾಸನವನ್ನು ತಯಾರು ಮಾಡಿಕೊಡುತ್ತಾರೆ. ಅದನ್ನು ನೋಡಿ ಮೆಚ್ಚಿದ ಮಹಾರಾಜನು ಪಾಂಚಾಳರಿಗೆ ಸೇರಿದ ಎತ್ತುಗಳು, ಎಮ್ಮೆಗಳು, ಗಾಡಿ, ಆಭರಣಗಳು ಮುಂತಾದವುಗಳ ಮೇಲಿನ ತೆರಿಗೆಯನ್ನು ಮಾಫಿ ಮಾಡಿ ಸ್ಥಿರಕಾಯ ಮಾಡುತ್ತಾನೆ.[೨೧]

ಕ್ರಿ.ಶ.೧೪೩೧ರ ಮಾಲೂರು ತಾಲೂಕು ತೇಕಲ್ಲು ಗ್ರಾಮದ ವರದರಾಜ ಸ್ವಾಮಿ ದೇವಸ್ಥಾನದಲ್ಲಿ ದೇವೋಜ ಎಂಬ ಬಡಗಿಯು ಗುಡಿಗೆ ಸಂಬಂಧಿಸಿದ ಮರಕೆಲಸವನ್ನು ಮಾಡಿಕೊಡುತ್ತಾನೆ. ಇದಕ್ಕಾಗಿ ಈತನಿಗೆ ಗದ್ದೆ, ಹೊಲವನ್ನು ಕೊಡಲಾಗಿದೆ ಎಂದು ತಿಳಿಸುತ್ತದೆ.[೨೨]

ಕ್ರಿ.ಶ.೧೪೨೬ರ ಶ್ರೀರಂಗಪಟ್ಟಣದ ಶಾಸನದಲ್ಲಿ ಶಾಸನ ರಚನಕಾರ ತನ್ನನ್ನು 'ತ್ವಷ್ಟಾ' ಎಂದು ಹೇಳಿಕೊಂಡಿದ್ದಾನೆ. ಎಲ್ಲಾ ಸಂದರ್ಭದಲ್ಲಿಯೂ ಒಂದೊಂದು ವೃತ್ತಿಯನ್ನು ಸಂಭಾವನೆಯಾಗಿ ಸ್ವೀಕರಿಸಿದ್ದಾನೆ. 'ಸುಗುಣೋಧೀಮನ್ ವೀರಣಃ' ಎಂದು ಹೆಮ್ಮೆ ಪಡುತ್ತಾನೆ. ಇದರಂತೆಯೇ ಕ್ರಿ.ಶ. ೧೪೪೫, ೪೭ ಹಾಗೂ ೫೫ರ ಶಾಸನಗಳಲ್ಲಿ 'ತ್ವಷ್ಟಾ ಸುಗುಣೋಧೀಮನ್ ವೀರಣಃ' (ಒಳ್ಳೆಯ ಗುಣದಿಂದ ಕೂಡಿರುವ) ಎಂದು ಕರೆದುಕೊಳ್ಳುತ್ತಾನೆ.[೨೩]

ಕ್ರಿ.ಶ.೧೪೮೦ರ ಶಾಸನದಲ್ಲಿ ಬಡಗಿ ಲಿಂಗೋಜನು ಜಗಳೂರು ತಾಲೂಕು ನಿಬಗೂರಿನಲ್ಲಿ ಆಂಜನೇಯ ಗುಡಿಯ ಕೆಲಸ ಮಾಡುತ್ತಾನೆ. ಇದಕ್ಕಾಗಿ ಗೌಡನು ಇವನಿಗೆ ಅರವತ್ತು ಒಕ್ಕಲು ಮಾನ್ಯವನ್ನು ಕೊಡುತ್ತಾನೆ.[೨೪]

ಕ್ರಿ.ಶ.೧೫೪೪ರ ಮಡಿಕೇರಿ ತಾಲೂಕು ಅಂಜನಗಿರಿ ಗ್ರಾಮದಲ್ಲಿ ಅಪರೂಪಕ್ಕೆ 'ದಾರುಮಯ' ಬಸದಿಯ ನಿರ್ಮಾಣವಾದ ವಿಷಯವು ಬರುತ್ತದೆ. ಆದರೆ ಹೀಗೆ ಮರದಲ್ಲಿ ಮಾಡಿಸಿದ ವ್ಯಕ್ತಿಯನ್ನು ಕರೆದು ಗುರುಗಳು ಶಿಲಾಮಯ ಬಸದಿಯನ್ನು ಕಟ್ಟಿಸಲು ಬುದ್ಧಿಯನ್ನು ಹೇಳುತ್ತಾರೆ.[೨೫]

ಕ್ರಿ.ಶ.೧೫೫೯ರ ಶಾಸನದಲ್ಲಿ ಎಲ್ಲೋಜ, ತಿಮ್ಮೋಜ ಹಾಗೂ ಉಲ್ಲೋಜ ಎಂಬ ಕಮ್ಮಾರರು ನೀರನ್ನು ಎತ್ತುವ ಏತಕ್ಕಾಗಿ ಕಬ್ಬಿಣದ ಬಾನಿಯನ್ನು ತಯಾರು ಮಾಡಿ ಬಾವಿಯಿಂದ ನೀರೆತ್ತುವ ಈ ಬಾನಿಗಳನ್ನು ಧರ್ಮಕ್ಕೆಂದು ಮಾಡಿಕೊಡುತ್ತಾರೆ. ಇವರು ತಮ್ಮನ್ನು ಶ್ರೀ ಮತು ಕಾಳಿಕಾ ಕಮಟೇಶ್ವರ ದೇವರ ವರ ಪ್ರಸಾದಿಗಳು ಎಂದು ಹೇಳಿಕೊಂಡಿದ್ದಾರೆ.[೨೬]

ಕ್ರಿ.ಶ.೧೬೧೬ರ ಮೂಡಗೆರೆ ತಾಲೂಕು ಗೋಣಿಬಿಡು ಗ್ರಾಮದ ಶಾಸನದಲ್ಲಿ 'ಬೀಡ ಕಾಳಾಂಮನ ಸುನಾರರು ಕಾಳಪನಾಯಕರಿಗೆ ಧರ್ಮವಾಗಲಿಯಂದು ಗೋಣೀಬಿಡು ಪಾಂಚಾಳದವರು ಯಿಾ ಮಾಫು ಶುದ್ಧಲು ವೀರ ಸಮಯದ ಸುನಾಲುವಿನ ಕನಡ ವೀರಪಾಂಚಾಳದವರಲು ಕೂಡಿಕೊಡದವರು ತಮ್ಮ

ಹೆಂಡರ ಪರರಿಗೆ ಕೊಟಹಾಗೆ ಕಾಳಪನಾಯಕರ ಸಾಸನವ ಸಂಣಲಿಂಗಣನು ಬರೆದ ಕುಲದೊಳಗೆ ಮದುವೆಲಿ ಹೆಂಣುಗಂಡಿನಲಿ ಬಂದ ಹಣವನು ದೇವರಿಗೆ ಕೊಡಲುಳ್ಳವರು ಕೊಡದೆಯಿದರ ಮಕ್ಕಳು,[೨೭] ಎಂದಿದೆ. ಇದರಲ್ಲಿ ಅಕ್ಕಸಾಲಿಗರ ಎರಡು ಪ್ರಭೇದಗಳನ್ನು ಹೇಳಿದೆ. ಅವರೇ ಗೋಣೇಬಿಡಿನ ಬಹುಶಃ ಕೊಂಕಣಿ ವಿಶ್ವಕರ್ಮರಾಗಿರುವ ಪಾಂಚಾಳರು ಮತ್ತು ಕನ್ನಡ ವೀರ ಪಾಂಚಾಳರು. ಮೂಲತಃ ಇವೆರಡೂ ಪಂಗಡಗಳೂ ತಮ್ಮನ್ನು ವಿಶಿಷ್ಟವೆಂದು ಭಾವಿಸಿದ್ದುದರಿಂದ, ಇವರಲ್ಲಿ ಅಂತರ್ ವಿವಾಹವಿರಲಿಲ್ಲ. ಆದರೆ ಕಾಳಪ್ಪನಾಯಕನ ಪ್ರಯತ್ನದಿಂದಾಗಿ ಇವೆರಡು ಒಂದು ಒಪ್ಪಂದವನ್ನು ಮಾಡಿಕೊಂಡು ಈ ಎರಡೂ ಪಂಗಡದವರು ಪರಸ್ಪರ ವಿವಾಹ ಮಾಡಿಕೊಳ್ಳಲು ಒಪ್ಪಿಕೊಂಡರು. ಈ ಮೇಲಿನ ಒಪ್ಪಂದದಂತೆ ವಿವಾಹವು ನಡೆದರೆ ಎರಡೂ ಕಡೆಯವರು ತಮ್ಮ ಮನೆಯ ದೇವರಿಗೆ ಕಾಣಿಕೆಯನ್ನು ಕೊಡಲು ಒಪ್ಪಿಕೊಂಡರು ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೮೬೪ರ ಶ್ರೀ ರಂಗಪಟ್ಟಣ ಗ್ರಾಮದ ಶಾಸನದಲ್ಲಿ ಲಕ್ಕನಾಚಾರ್ಯನು 'ಸುಪರ್ನಸ' ಗೋತ್ರ ಕಾತ್ಯಾಯನ ಸೂತ್ರ ಪ್ರಣಮಶ್ಯಾಖ ಎಂದು ತನ್ನ ಗೋತ್ರದ ಬಗ್ಗೆ ಹೇಳಿಕೊಂಡಿರುವುದನ್ನು ಕಾಣಬಹುದು. ಹಾಗೂ ಶ್ರೀ ಮತ್ಕಾಳಿಕಾಂಬ ಕಮಠೇ ಶ್ವಮಿ ಸಂನಿಧಿಗೆ ತಾನು ಮಾಡಿದ ಸೇವೆ ಎಂದು ಹೇಳಿಕೊಂಡಿದ್ದಾನೆ.[೨೮]

೩.೨. ಜನಪದ ಕಾವ್ಯಗಳಲ್ಲಿ ಪಾಂಚಾಳರು

ಜನಪದ ಕಲೆ ಪ್ರಾಚೀನ ಕಾಲದಿಂದ ಅನುವಂಶಿಕವಾಗಿ ಬೆಳೆದುಕೊಂಡು ಬಂದಿದೆ. ಜನಪದ ಕಲೆಗಳ ಮುಖ್ಯ ಉದ್ದೇಶ ಮಾನಸಿಕ ನೆಮ್ಮದಿ. ಇದರಿಂದ ಹೃದಯ ಸಂಸ್ಕಾರವಾಗುತ್ತದೆ. ಕೇವಲ ಹೊಟ್ಟೆಪಾಡಿಗಾಗಿ ಈ ಕಲೆ ಹುಟ್ಟಿಕೊಂಡಿಲ್ಲ. ಇದರ ಜೊತೆಗೆ ನಂಬಿಕೆ, ದೈವಿ ಆರಾಧನೆ, ಜೀವನ ದರ್ಶನ, ಸೌಂದರ್ಯ ದರ್ಶನ ಮುಂತಾದವು ಮಾನವನ ಕಲೆಯ ಸಂಸ್ಕೃತಿಯ ಪ್ರತೀಕವಾಗಿವೆ. ಇದಕ್ಕೆ ಉದಾಹರಣೆ ಎಂಬಂತೆ ಕ್ರಿ.ಪೂ.೩೦೦೦ ವರ್ಷಕ್ಕಿಂತ ಹಿಂದಿನಿಂದಲೂ ಮಾನವನು ಕೆತ್ತಿದ, ಕೊರೆದ ಚಿತ್ರಗಳು ಇವತ್ತಿಗೂ ಜೀವಂತ ಸಾಕ್ಷಿಯಾಗಿವೆ. ಹಿಂದಿನ ಕಾಲದಲ್ಲಿ ಉಪಯೋಗಿಸಿದ ಕಲ್ಲಿನ ಆಯುಧಗಳು, ಮಣ್ಣಿನ ಮಡಕೆಗಳು, ಅವಶೇಷ ಮುಂತಾದವುಗಳು ಇವತ್ತಿಗೂ ದೊರೆಯುತ್ತಿರುವುದು ಅವರ ಕಲೆಗಾರಿಕೆಯ ಜೀವಂತ ಪ್ರದರ್ಶನಕ್ಕೆ ಸಾಕ್ಷಿಯಾಗಿವೆ. ಕರ್ನಾಟಕದಲ್ಲಿ ಐಹೊಳೆ, ಪಟ್ಟದಕಲ್ಲು, ಬಳ್ಳಿಗಾವೆ, ಬೇಲೂರು, ಹಳೇಬೀಡು, ಸೋಮನಾಥ ದೇವಾಲಯಗಳ ಶಿಲ್ಪಕಲೆ ಇವರ ಪ್ರಾಚೀನ ಇತಿಹಾಸ ಗುರುತಿಸುವಲ್ಲಿ ಸಹಾಯಕವಾಗುತ್ತವೆ. ಇಂತಹ ಸಮುದಾಯಗಳ ಸಾಂಸ್ಕೃತಿಕ ಜೀವನವನ್ನು ಅರಿಯುವಲ್ಲಿ ಜಾನಪದ ಕಾವ್ಯಗಳು ಬಹುಮುಖ್ಯ ಆಕರಗಳಾಗಿ ನಿಲ್ಲುತ್ತವೆ. ಹಿಂದಿನ ಪಾಂಚಾಳ ಸಮುದಾಯದವರು ಹೊಲಗದ್ದೆಗಳಲ್ಲಿ ದುಡಿಯುವ ಅವಶ್ಯಕತೆಯಿರಲಿಲ್ಲ. ಇವರು ಗ್ರಾಮದ ಸಾಮಾಜಿಕ ಕಾರ್ಯಗಳಲ್ಲಿ ನೆರವಾಗಬೇಕಿತ್ತು. ಯಕ್ಷಗಾನದ ಆಟಗಳು, ರಂಗಕುಣಿತ ಹಾಗೂ ವೃತ್ತಿಯ ಮುಖಾಂತರ ಗ್ರಾಮದ ಜನತೆಗೆ ಸಹಾಯವಾಗುತ್ತಿದ್ದರು. ಇಂತಹ ಸಮುದಾಯವನ್ನು ಕುರಿತು ಅವರ ವೃತ್ತಿ ಸಲಕರಣೆಗಳನ್ನೆ ಉಪಯೋಗಿಸಿಕೊಂಡು ಜನಪದರು ಜನಪದ ಕಾವ್ಯಗಳನ್ನು ಕಟ್ಟಿದ್ದಾರೆ. ಈ ಕಾವ್ಯಗಳ ಮೂಲಕ ಪಾಂಚಾಳರ ಇತಿಹಾಸವನ್ನು ಗುರುತಿಸಲಿಕ್ಕೆ ಆಕರಗಳಾಗಿ ನಿಲ್ಲುತ್ತವೆ.

ಜನಪದ ಕಾವ್ಯಗಳಲ್ಲಿ ಅತ್ಯಂತ ಮಹತ್ವವುಳ್ಳ ಕೃತಿ ಮಂಟೇಸ್ವಾಮಿ ಕಾವ್ಯ. ಮೈಸೂರು ಪ್ರಾಂತದಲ್ಲಿ ಹೆಚ್ಚು ಪ್ರಚಲಿತವಿರುವ ಇದು ಸಿದ್ಧಾಪ್ಪಜಿಯ ಹುಟ್ಟು ಬೆಳವಣಿಗೆ ಮತ್ತು ನಡೆದು ಬಂದ ದಾರಿ ಇವುಗಳ ಕುರಿತು ಯಥಾರ್ಥವಾದ ಮಾಹಿತಿಯನ್ನು ಒದಗಿಸುತ್ತದೆ.

ಕಾವ್ಯದಲ್ಲಿ ಒಂದು ಕಡೇ ಸಿದ್ದಪ್ಪಾಜಿ ಮೂಲತಃ ಕಮ್ಮಾರನಾಗಿದ್ದು ಆತನ ಕುರಿತು ವಿವರಗಳನ್ನು ನೀಡುವುದರ ಜೊತೆಗೆ ಪಾಂಚಾಳ ಒಕ್ಕಲುಗಳಾದ ಕಾಳೋಜಿ, ದಿಂಬೋಜಿ, ಬೇಟೋಜಿ, ಎರೆಡೋಜಿ, ನಿಂಗೋಜಿ, ಚನ್ನೋಜಿ, ಸರಸೋಜಿ ಎಂಬ ಏಳು ಜನ ವೋಜಕುಲದನಿಗಳಿದ್ದು ಇವರಿಗೆ ಏಳು ಕುಲುಮೆಗಳು, ಕುಲುಮೆಗಳಲ್ಲಿ ತಲಕಾಡಿನ ಸಖಿ ಚಾಮರಾಜ ಒಡೆಯರಿಗೆ ಕತ್ತಿ, ಪೀರಂಗಿ, ಬಂದೂಕು ಮುಂತಾದವುಗಳನ್ನು ತಯಾರು ಮಾಡಿಕೊಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ.

ಮುಂದುವರೆದು ಕಾವ್ಯದಲ್ಲಿ ಬಸವಚಾರಿಯು ಮಂಟೇಸ್ವಾಮಿಯನ್ನು ಬೈಯುವ ಸಂದರ್ಭದಲ್ಲಿ ಪಾಂಚಾಳ ವೃತ್ತಿ ಪದಗಳನ್ನು ಬಳಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ

ಇವನ ಇಕ್ಕಳದಲ್ಲಿ ಇಡಕಂಡು
ರಾವುಗೋಲಲ್ಲಿ ಬಡಿದು
ಕೇಳು ನನ್ನ ಮಡದೀ
ಅವನ್ಗೇ ಕಾದುಗಟ್ಟಿತಗದು
ಅವನ ಅಂಗೈ ಮೇಲೆ ಮಡಗಿ
ದೊಡ್ಡ ಬಾಚಿ ತೆಗೆದು
ಚಿಕ್ಕು ಬಾಚಿ ತೆಗೆದು
ಅಡಗಲ್ಲಿನ ಮೇಲೆ ಅವನ
ಕೆಡಿಕಂಡು ನನ್ನ ಮಡದಿ
ಅವನ ಮರವ ಕೆತ್ತುದಂಗೆ ನಾನು
ತುಂಡು ತುಂಡಾಗಿ ಕೆತ್ತುತೀನಿ[3]

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಪಾಂಚಾಳ ಸಮುದಾಯದ ವೃತ್ತಿಪದಗಳ ಹಿನ್ನೆಲೆಯಲ್ಲಿ ಬಸವಾಚಾರಿ ಬೈದಿರುವುದನ್ನು ಕಾಣುತ್ತೇವೆ. ಇಕ್ಕಳ, ರಾವುಗೋಲು, ಗಟ್ಟಿ, ದೊಡ್ಡಬಾಚಿ, ಚಿಕ್ಕಬಾಚಿ, ಅಡಿಗಲ್ಲು ಮುಂತಾದವುಗಳು ವೃತ್ತಿಪದಗಳಾಗಿವೆ. ಈ ವೃತ್ತಿ ಪದಗಳ ಬಳಕೆ ಹಿಂದೆ ಈ ಸಮುದಾಯ ಸಂಸ್ಕೃತಿಯ ಬದುಕಿನ ರೀತಿ ಅಭಿವ್ಯಕ್ತಗೊಂಡಿರುವುದು ಗಮನಿಸಬೇಕಾದ ಅಂಶವಾಗಿದೆ.

ಡಾ.ಎಸ್.ಎಸ್.ಅಂಗಡಿಯವರ 'ಬಡಗಿ ವೃತ್ತಿಪದ ಮಂಜರಿ'ಯಲ್ಲಿ ಚರ್ಚಿಸುತ್ತ 'ಕೃಷಿಯು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಕೃಷಿಕರು ವರ್ಷದುದ್ದಕ್ಕೂ ತಮ್ಮ ನೆರವಿಗೆ ಬಂದ ಕೆಲಸಗಾರರು ಹಾಗೂ ಆಯಗಾರರನ್ನು ಸ್ಮರಿಸುವುದು ಹಿಂದಿನಿಂದಲೂ ಬಂದ ವಾಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಹಂತಿಪದಗಳನ್ನು ಹಾಡುವ ಸಂದರ್ಭದಲ್ಲಿ ಅವರನ್ನು ಸ್ಮರಿಸಿಕೊಂಡು ಕೃತರ್ಥರಾಗುವುದುಂಟು.

ಉದಾಹರಣೆಗೆ:-

ಯರಝುರವಿ ಬಡಿಗ್ಯಾನ ಬೇಗಾನೆ ಬರಹೇಳಿ
ಭಾರೀಯ ಉಳಿಬಾಚಿ ಸಹವಾಗಿ | ದ್ಯಾಮಣ್ಣ
ಭಾರೀಯ ತೇರ ಕಡೆದಾರು||

ಬೂದಿಗೊಪ್ಪ ಬಡಿಗ್ಯಾನ ತಟ್ಟನೆ ಬರಹೇಳಿ
ಕಟ್ಟೆ ಉಳಿಬಾಚಿ ಸಹವಾಗಿ | ಶ್ಯಾಸಪ್ಪ
ಭಾರೀಯ ತೇರು ಕಡೆದಾರು||

ಬಡಿಗ್ಯಾನ ಬಂದವನ ಬಡಿವಾರ ನೋಡಿರೆ
ಬಡಬಾಯಿ ತುಂಬ ಎಲಿ ಅಡಕೆ | ಹಣೆಮ್ಯಾಲ
ಬಂಡಿಗಾಲಿಂಥ ಕುಂಕುಮ||

ಕಂದವ್ವನೆತ್ತಿಕೊಂಡು ಕಂಡೆ ಬಡಿಗರ ಮನಿಯ
ಸಧ್ಯಕ್ಕೆ ಬೇಕಣ್ಣ ಕಡಗೋಲು|| ನಮ್ಮನೀಯ
ಕಾಳೆಮ್ಮೆ ಹಾಲು ಕಡೋದೈತಿ||

ಬಡಿಗ್ಯಾರ ಓಣ್ಯಾಗ ಸೆಡಗೀನ್ನೇನ್ನೇಳಲಿ
ಬಿಳಿಯಂಗಿ ಬೆಳ್ಳಿ ಉಡದಾರ | ಹಾಕ್ಕೊಂಡು
ಬಡಿಗಣ್ಣ ಸೆಡ್ಡೆ ಬಿಗುದಾನೋ||

ಉಕ್ಕಿನ ಉಳಿಬಾಚಿ ಹತ್ತೆಳೆಯ ಜನಿವಾರ
ಮುತ್ತ ಸುರದಂಗ ಬೆವತನ | ಮಾನಪ್ಪ
ಅಚ್ಚ ಬಡಿಗ್ಯಾನ ಮಗನವ್ವ||

ಕಡಗೋಲು ಕುಡುಗೋಲು ಸೆಡ್ಡಿ ಮಡ್ಡೆಯ ಕೋಲು
ಬಡಗಿ ಬ್ಯಾಕೋಲು ಬಾರಕೋಲು | ಉರ್ಗೋಲು
ಸವದತ್ತಿ ಬಡಿಗ್ಯಾ ಮಾಡ್ಯಾಣ||

ಜಾಲಿಯ ಗಿಡಾ ಕಡಿದ ಮಾರುದ್ದ ನಗಾ ಮಾಡಿ
ಯರಗಟ್ಟಿ ಬಡಿಗ್ಯಾ ಮಾಡ್ಯಾಣ | ನಗಾ ನೋಡಿ
ಮಂದಿ ಹೌಹಾರಿ ನಿಂತಾರೊ||

ಕರಿಯ ಗೊಂಗಡಿ ತಂದ ಮುರಿದ ಟೊಪ್ಪಿಗೆ ಮಾಡಿ
ಹೊತ್ತಾನೊ ಬಡಿಗ್ಯಾ ಹೆಗಲಿಗೆ | ಕೂರಿಗೆ ದಿಂಡ
ಇಟ್ಯಾನ ರೈತನ ಮನಿ ಮುಂದ||

ಅರಿಯ ಮೇಟಿ ಆರಮಳಾ ಉದ್ದತಿ
ಹಂತಿಗಿ ಚೆಂದ ಆಗೇತಿ | ಆ ಮೇಟಿ
ಯರಝುರ ಬಡಿಗ್ಯಾ ಮಾಡ್ಯಾಣ||

ಜಂತಿ ಕುಂಟೆಯ ಹಲ್ಲ ಎಂತವನೋ ಕೆತ್ಯಾನೋ
ಅಂತರಲಿ ಇರುವ ಬಡಿಗ್ಯಾ | ಕೆತ್ತಿದ ಕುಂಟಿ
ಚಿಂತಿಲ್ಲದ ಕುಂಟಿ ತೆಗಿದಾನೋ||

ಬಿತ್ತುವ ಕೂರಿಗಿ ಮುಂದ್ ಬಿದ್ದಾನೋ ಮಳಿದೇವ
ಎದ್ದಾನೊ ಒಕ್ಕಲಿಗ ಬೆಳತಾನ | ಕೂರಿಗಿ ಕುಂಟಿ
ಬಿದ್ದಾವೋ ಬಡಿಗ್ಯಾನ ಮನಿ ಮುಂದ||

ನನ್ನೂರ ತೇರವ ಯಾರ್ಯಾರ ಮಾಡ್ಯಾರ
ಅಚ್ಚ ಆಯಗಾರ ತಿಳಿಮಾಡಿ | ಬಡಿಗ್ಯಾನ
ಚೊಕ್ಕ ಬಣ್ಣವ ಹಚ್ಯಾರ ||[೨೦]

ಈ ಹಂತಿಪದದಲ್ಲಿ ಬಡಿಗ್ಯಾನ ಬಡಿವಾರ, ಅವನು ಹಚ್ಚುವ ಕುಂಕುಮ, ಹಾಕುವ ಬಟ್ಟೆ, ಉಡುದಾರ, ಜನಿವಾರ, ರೈತಾಪಿ ಜನಗಳಿಗೆ ಮಾಡಿಕೊಡುವ ಕೆಲಸ, ಮಳೆಗಾಲದ ಸಂದರ್ಭ ಬಡಿಗ್ಯಾನ ಮನೆ ಮುಂದೆ ಬಿಳುವ ಕುರಿಗೆ ಕುಂಟೆಯ ರಾಶಿ, ಊರಿನ ತೇರು ಇಂತಹ ಅನೇಕ ವಿಷಯಗಳನ್ನು ತಿಳಿಸುವುದರ ಜೊತೆಗೆ ದಿನನಿತ್ಯದ ಕೆಲಸಗಳನ್ನು ಹಂತಿಪದಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಡಾ.ಆರ್.ಬಿ.ಕುಮಾರರವರ 'ಮುದ್ದೆ ಕಂಬಾರ' ಕೃತಿಯ ಅನುಬಂಧದಲ್ಲಿ ಮೌಖಿಕ ಸಾಹಿತ್ಯವಾದ ಜನಪದ ಹಾಡನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಈ ಹಾಡುಗಳು ಪ್ರಸ್ತುತ ಅಧ್ಯಯನಕ್ಕೆ ಯೋಗ್ಯವಾಗಿದ್ದು ಪಾಂಚಾಳರ ಕುಲದೇವತೆಯಾದ ಕಾಳಿಕ ದೇವಿ ಕುರಿತು ವಿವರಣೆ ನೀಡುತ್ತವೆ.

ಹೊಸಬಾಗಣಿ ತೋಪಿನ ಸೀರೆ ನೀರೆ
ಆಕಿ ಕಾಳಮ್ಮನ ದೇವಿ ಪೂಜೇ
ಬಾಳವೇ ನಮ್ಮ ಗೆಜ್ಜೆ ಸಲಾವೇನೇ ||ಪ||

ಆಕೇನೆ ಕಾಳಮ್ಮಾ ಶಿವಪೂಜೆಗಾವಾಗೆ
ಆಕಾಸ ಘಂಟೇ ಡಣಲೆಂದೇ
ಬಾಳವೇ.... ||೧||

ಅಂಬರದಾಗಣೆ ತೆಂಗಿನ ತಿಳಿ ನೀರೇ

ರೆಂಬೆ ಕಾಳಮ್ಮಾ ಶಿವಪೂಜೇ

ಬಾಳವೇ.... ||೨||[೬೯] ಮುಂದುವರೆಯುತ್ತದೆ.

ಕುಲದೇವತೆಗೆ ಹರಕೆ ತಿರಿಸುವ ಸಂದರ್ಭದಲ್ಲಿ ಹೊಸಬಾಗಣೆ, ಟೋಪಿನ ಸೀರೆ, ನೀರೆ ಮುಂತಾದವುಗಳಿಂದ ಕಾಳಮ್ಮನ ಪೂಜೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಅಕಾಶದಿಂದ ತೆಂಗಿನ ತಿಳಿನೀರಿನಂತೆ ಕಾಳಮ್ಮನಿಗೆ ಅಭಿಷೇಕ ನೆರವೇರುತ್ತದೆ. ಜೊತೆಗೆ ಢಣ ಢಣವೆಂಬ ಘಂಟೆಯ ನಿನಾದ ಮೊಳಗುತ್ತದೆ. ಇಷ್ಟೊಂದು ಸಮೃದ್ಧವಾಗಿ ಭಕ್ತಿಯಿಂದ ಪಾಂಚಾಳರು ಆರಾಧಿಸುವುದನ್ನು ಜನಪದಕಾರರು ಕಟ್ಟಿಕೊಟ್ಟಿದ್ದಾರೆ.

ಡಾ.ದಸ್ತಗೀರಿ ಅಲ್ಲಿಬಾಯಿಯವರು ಸಂಪಾದಿಸಿರುವ 'ದಣಿವು ಕಾಣದ ಪದಗಳು' ಎಂಬ ಕೃತಿಯಲ್ಲಿ ಪಾಂಚಾಳ ಜನಾಂಗದ ರೀತಿ ನೀತಿಗಳ ಚಿತ್ರಣ ಸ್ಪಷ್ಟವಾಗುತ್ತದೆ.

ಉದಾಹರಣೆಗೆ:-

ಬಡಿಗರ ಓಣ್ಯಾಗ ಸೆಡಗಕೀನ್ನೇಳಲಿ

ಬಿಳಿಯಂಗಿ ಬೆಳ್ಳಿ ಉಡುದಾರ | ಹಾಕ್ಕೊಂಡು

ಬಡಿಗಣ್ಣ ಹೆಡ್ಡಿ ಬಿಗಿದಾನೋ

ನಾಗಸೂರಿನ ಬಡಿಗ ನಾಶ ತೊಟ್ಲಿಲ ಮಾಡ

ನಾಚೂನಿಗೊಂದು ನನಗೊಂದು | ಮನಿಯಾನ

ಸ್ವಾದರತ್ತಿಗೊಂದು ಸೊಸಿಗೊಂದು[೭೦]

ಬಡಗಿಯ ಬಗೆಗಿರುವ ಮೆಚ್ಚುಗೆಯ ನುಡಿಗಳು, ಸೇವೆ ಹಾಗೂ ಸಂಬಂಧವನ್ನು ಕುರಿತು ಉಲ್ಲೇಖಿಸುತ್ತದೆ.

ಗುಡೇಕೋಟಿ ಪಾಳೆಗಾರರ ಹೆಣ್ಣು ಮಕ್ಕಳಾದ ನೀಲಮ್ಮಾಜಿ ಬಸಮ್ಮಾಜಿ ಅಂದರೆ ಹರಪನಹಳ್ಳಿ ಎರಡನೇ ಸೋಮಶೇಖರನ ಅರಸನ ಮಡದಿಯರ ಬಗ್ಗೆ ಇರುವ ಕೋಲಿನ ಪದಗಳಲ್ಲಿ ಬಡಗಿಯ ಉಲ್ಲೇಖ ದೊರೆಯುತ್ತದೆ.

ನೀಲಮ್ಮಾಜಿ, ಬಸಮ್ಮಾಜಿ ಕೂಡ್ಯರೆ |ಬಾವಿ ನೀರಿಗ್ಹೋದಾರೆ ಕೋಲು |ಕೋಲೆ

ಬಾವಿನೀರಿಗ್ಹೋದರೆ | ಹಕ್ಕಿಪಕ್ಕಿ ಸುಳವಿಲ್ಲ |ಕೋಲು |ಕೋಲೆ

ಹಕ್ಕಿಪಕ್ಕಿ ಸುಳವಿಲ್ಲ | ಮರಗಳಾಗಿ ನಿಂತರೇ |ಕೋಲು |ಕೋಲೆ

ಮರಗಳಾಗಿ ನಿಂತರೇ | ಬಡಿಗೇರಣ್ಣಾ ಬಂದಾನೆ |ಕೋಲು |ಕೋಲೆ

ಬಡಿಗೇರಣ್ಣಾ ಬಂದಾನೆ | ಕಡಿದು ತುಂಡು ಮಾಡ್ಯಾನೆ |ಕೋಲು |ಕೋಲೆ

ಕಡಿದು ತುಂಡು ಮಾಡ್ಯಾನೆ | ಕೆತ್ತಿ ತೊಟ್ಟಿಲು ಮಾಡ್ಯಾನೆ |ಕೋಲು |ಕೋಲೆ

ಕತ್ತಿ ತೊಟ್ಟಿಲು ಮಾಡ್ಯಾನೆ | ಚಾರಿ ಬೈಲಾಗಿಟ್ಟ್ಯಾನೆ |ಕೋಲು |ಕೋಲೆ

ಚಾರಿ ಬೈಲಾಗಿಟ್ಟ್ಯಾನೆ | ಮಕ್ಕಳಿದ್ದವರು ಬಂದಾರೆ |ಕೋಲು |ಕೋಲೆ

ಮಕ್ಕಳಿದ್ದವರು ಬಂದಾರೆ | ಕರೀಟ ಮಾಡಿ ಒಯ್ದ್ಯಾರೆ |ಕೋಲು |ಕೋಲೆ"

ಈ ಕೋಲಿನ ಪದದಲ್ಲಿ ಬಡಗಿಯು ತನ್ನ ವೃತ್ತಿಯ ಕೆಲಸದ ಬಗ್ಗೆ ಕೋಲಿನ ಪದಗಳ ಮುಖಾಂತರ ಜನಪದರು ಕಟ್ಟಿ ಹಾಡಿ ಹೊಗಳಿದ್ದಾರೆ.

೩.೩. ಸಾಹಿತ್ಯ ಕೃತಿಗಳಲ್ಲಿ ಪಾಂಚಾಳರು

ಸಂಸ್ಕೃತ ಸಾಹಿತ್ಯವನ್ನು ಅವಲೋಕಿಸಿದಾಗ ವೇದ, ಉಪನಿಷತ್ತು, ಸ್ಮೃತಿಗಳಲ್ಲಿ ಪಾಂಚಾಳರ ಕುರಿತು ಅಲ್ಲಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಗೊಂಡಿರುವುದುಂಟು. ಸ್ಮೃತಿಯಲ್ಲಿ ಪಾಂಚಾಳ ಪದವನ್ನು ಕುರಿತು 'ಪಂಚಾಲಾ ವಿಶ್ವಕರ್ಮಾ ಕುಲೋತ್ಪನ್ನಃ ಬ್ರಾಹ್ಮಣ ಜಾತಿಯಾ ಶಿಲ್ಪಿ ವಿಶೇಷ ಇತ್ಯರ್ಥಃ' ಎಂದು ವರ್ಣಿಸುತ್ತದೆ. ಹಾಗೆಯೇ ವಿಶ್ವಕರ್ಮ ಪದವನ್ನು ಹೀಗೆ ವ್ಯಾಖ್ಯಾನಿಸಲಾಗಿದೆ. 'ವಿಶ್ವಂ ಕೃತ್ಸ್ನಂ ಕ್ರಿಯಾ ವ್ಯಾಪಾರೋಯಸ್ಯಸಃ ವಿಶ್ವಕರ್ಮಾ' ವಿಶ್ವದ ಸೃಜನ, ರಕ್ಷಣೆ, ಕ್ರಿಯೆ, ಆಗು ಹೋಗುಗಳು ಯಾವನಿಂದ ಆಗುವುವೋ ಅವನೇ ವಿಶ್ವಕರ್ಮನು. ತನ್ನ ಸಂಕಲ್ಪ ಮಾತ್ರದಿಂದಲೇ ಸಕಲವನ್ನು ಸೃಷ್ಟಿಸಿದವನು. ಅತನಿಗೆ ಐದು ಮುಖಗಳು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಹಾಗೂ ಈಶಾನ ಎಂಬುದಾಗಿ ವಿವರಗಳು ಸಂಬಂಧಪಟ್ಟ ಅನೇಕ ಕೃತಿಗಳಲ್ಲಿ ದೊರೆಯುತ್ತವೆ.

ಋಗ್ವೇದದ ಹತ್ತನೆಯ ಮಂಡಲದ ೮೧-೮೨ನೆಯ ಸೂಕ್ತಗಳಲ್ಲಿ, ಆಶಾವಾಸ್ಯೋಪನಿಷತ್ತಿನಲ್ಲಿ, ವಿಶ್ವಕರ್ಮ ಪುರಾಣದಲ್ಲಿ, ಮೂಲಸ್ತಂಭ ಪುರಾಣದಲ್ಲಿ ವಿಶ್ವಕರ್ಮ ಜನಾಂಗದ ಬಗ್ಗೆ ವಿವರಗಳು ದೊರೆಯುತ್ತವೆ. ವಾಯುಪುರಾಣ ಉತ್ತರ ಭಾಗದ ೩೩ನೆಯ ಅಧ್ಯಾಯದಲ್ಲಿ ಉಕ್ತವಾಗಿರುವ 'ದೇವಾಚಾರ್ಯಸ್ಯ ಮಹತೋಭಿಮತೋ ವಿಶ್ವಕರ್ಮಣಃ' ಎಂಬ ಮಾತಿನ ಮೇಲಿಂದ ವಿಶ್ವಕರ್ಮನು ದೇವತೆಗಳ ಆಚಾರ್ಯನಾಗಿದ್ದನೆಂದು ತಿಳಿಯುತ್ತದೆ. ಅದೇ ರೀತಿ ವಿಶ್ವಕರ್ಮನ ಪುತ್ರ ವಿಶ್ವರೂಪನೂ ಸಹ ದೇವತೆಗಳ ಆಚಾರ್ಯನಾಗಿದ್ದನೆಂದು ಸ್ಮೃತಿಯಲ್ಲಿ ಹೇಳಿದೆ. 'ವಿಶ್ವರೂಪೋ ವೈತ್ವಾಷ್ಟ್ರಃ ಪುರೋಹಿತೋ ದೇವಾನಾ ಮಾಸೀತ್' ಎಂಬ ಉಕ್ತಿಯಿಂದಾಗಿ ವಿಶ್ವಕರ್ಮರಿಗೆ ಆಚಾರ್ಯ ಎಂಬ ನಾಮಧೇಯವು ಬಂದಿದೆ. ಇದನ್ನು ಹೆಚ್ಚಾಗಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ಉಪಯೋಗಿಸುತ್ತಾರೆ.

ವಸಿಷ್ಠ ಪುರಾಣದಲ್ಲಿ

ವಿಶ್ವಕರ್ಮ ಮುಖೋದ್ಭೂತಾಃ

ಬ್ರಾಹ್ಮಣಾಃ ಪಂಚಕೀರ್ತಿತಾಃ|

ಸದ್ಯೋಜಾತ ಮುಖೇ ಜಾತಸ್ಸಾನಗೋ ವಿಶ್ವಕರ್ಮಣಃ|

ವಾಮದೇವ ಮುಖೇಜಾತಃ ಬ್ರಹ್ಮರ್ಷಿಸ್ತು ಸನಾತನಃ|

ಅಘೋರ ಮುಖ ಸಂಜಾತೋಽ ಹಭೂನೋ ವಿಶ್ವಕರ್ಮಣಃ|

ತತ್ಪುರುಷ ಮುಖೇಜಾತಃ ಪುತ್ರೋಸೌ ವಿಶ್ವಕರ್ಮಣಃ

ತಸ್ಯೇಶಾನ ಮುಖೇಜಾತಸ್ಸು ಪರ್ಣೋ ವಿಶ್ವಕರ್ಮಣಃ" ಎಂದು ಹೇಳಿದೆ.

ಮೂಲಸ್ತಂಭ ಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿದೆ.

ವಿಶ್ವಕರ್ಮಾ ಜಗನ್ನಾಥಃ ವಿಶ್ವಕರ್ಮಾ ಜಗದ್ಗುರುಃ
ವಿಶ್ವಕರ್ಮಾ ಜಗತ್ತೇಜಃ ವೈಶ್ವಕರ್ಮಮಿದಂ ಜಗತ್
ಏವಂ ಶ್ರೀ ವಿಶ್ವಕರ್ಮಾಣಂ[೩೫]

ಅಂದರೆ ವಿಶ್ವಕರ್ಮನೇ ಜಗತ್ತಿಗೆ ಪ್ರಭುವು ವಿಶ್ವಕರ್ಮನೇ ಜಗತ್ತಿನ ಗುರುವು, ವಿಶ್ವಕರ್ಮನೇ ಜಗತ್ತಿನ ಪ್ರಕಾಶವು ಈ ಜಗತ್ತೆಲ್ಲವೂ ವಿಶ್ವಕರ್ಮನೆ ಎಂದು ತಿಳಿಸುತ್ತದೆ.

ಸ್ಕಂದ ಪುರಾಣದ ನಾಗರ ಖಂಡದಲ್ಲಿ 'ಸ್ಥಪತಿ ಸ್ಥಾಪಕಶ್ಚೈ ವೇತ್ಯಾಚಾರ್ಯೋ ವಿಶ್ವಕರ್ಮಣ' ಎಂದು ಹೇಳಲಾಗಿದೆ. ಅಂದರೆ ಶಾಸ್ತ್ರದ ಅರ್ಥವನ್ನು ಅರಿತು ಸ್ವತಃ ಆಚರಿಸಿ ಇತರರನ್ನು ಆಚರಣೆಯಲ್ಲಿ ತೊಡಗಿಸುವವನು ಆಚಾರ್ಯ ಎಂದು ತಿಳಿಸುತ್ತದೆ.

ಪಂಪ ಹಾಗೂ ರನ್ನನ ಕೃತಿಗಳಾದ 'ವಿಕ್ರಮಾರ್ಜುನ ವಿಜಯ' ಮತ್ತು 'ಗದಾಯುದ್ಧ'ದಲ್ಲಿ 'ಕಮ್ಮಯೋಜ' ಎಂಬ ಪದಗಳ ಪ್ರಯೋಗಗಳನ್ನು ಕಾಣಬಹುದು.

ಕ್ರಿ.ಶ.೧೧೩೯ಲರ 'ಅಭಿನವಾಭಿದಾನಂ' ಎಂಬ ಕೃತಿಯಲ್ಲಿ ಕಮ್ಮಾರರು ತಯಾರಿಸುತ್ತಿದ್ದ ಬಾಣಗಳು ಮುಂತಾದವುಗಳ ಬಗ್ಗೆ ಉಲ್ಲೇಖ ದೊರೆಯುತ್ತದೆ.[೩೬]

ರಾಘವಾಂಕನ 'ಸಿದ್ಧರಾಮ ಚಾರಿತ್ರ'ದಲ್ಲಿ

'ಹಲವು ತಿದಿಗಳಲೂದಿ ಲೇಸಾಗಿ ಕಾಸಿ ಕೆಂ
ಗಲಿಪ ಕಿಡಿಗಳನುಗುಳ್ವ ಪಂಚಲೋಹದ ಗುಂಡ
ನೆಲೆಲೆ ಕಕ್ಕಸದ ಕಮ್ಮಱರು ನಿಡಿದಿಕ್ಕುಳುಗಳಿಂದ ವಚಿ ಪಿಡಿದು ತಂದು'[೩೭]

ಎಂದು ಉಲ್ಲೇಖವಾಗುತ್ತದೆ. ಕುಲುಮೆಯಲ್ಲಿ ತಿದಿಯನ್ನು ಒತ್ತಿ ಕುಲುಮೆಯಿಂದ ಉಗುಳುವ ಕಿಡಿಗಳಿಂದ ಪಂಚಲೋಹದ ಗಟ್ಟಿಗಳನ್ನು ಕೆಂಪಗೆ ಕಾಯಿಸಿ ಉದ್ದನೆಯ ಇಕ್ಕುಳದಿಂದ ಹಿಡಿದು ಕಮ್ಮರರು ಶ್ರಮವಹಿಸಿ ಕೆಲಸ ಮಾಡುತ್ತಿದ್ದರು ಎಂದು ರಾಘವಾಂಕನು ವರ್ಣಿಸುತ್ತಾನೆ.

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಸಂದರ್ಭದಲ್ಲಿ ಅನೇಕ ವಚನಕಾರರು ತಮ್ಮ ವಚನಗಳಲ್ಲಿ ಕಬ್ಬಿಣ, ಕಮ್ಮಾರ, ಪಾಂಚಾಳ, ಕಮ್ಮಟ, ಅಕ್ಕಸಾಲಿಗ ಮುಂತಾದ ಪದಗಳು ಬಳಕೆಯಾಗಿರುವುದನ್ನು ಕಾಣಬಹುದು.

ಮಾದಾರ ಚೆನ್ನಯ್ಯನ ಒಂದು ವಚನದಲ್ಲಿ

'ಸಾಂಖ್ಯಶ್ವಪಚ ಅಗಸ್ತ್ಯ ಕಬ್ಬಿಲ ದೂರ್ವಾಸ
ಮಚ್ಚಿಗ ದಧೀಚಿ ಕೀಲಿಗ, ಕಶ್ಯಪ ಕಮ್ಮಾರ
ರೋಮಜ ಕಂಚುಗಾರ'[೩೮]

'ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಸನಿಕ್ಕಿ ಸಾಲಿಗನಾದ'...[೩೯] ಎನ್ನುವ ಬಸವಣ್ಣರ ವಚನ

'ಹೊರಗಿನ ತಿಗುಡಂ ಬಾಚಿಯಿಂದ ಸವೆದ ಒಳಗಿನ ತಿಗುಡ ಉಳಿಯಿಂದ ಸವೆದೆ'[೪೦]

'ಆರು ದರ್ಶನವೆಲ್ಲ ಎನ್ನಬಾಚಿಯ ಕಲೆ
ಮಿಕ್ಕಾದ ಮೀರಿದ ಅವಧೂತರುಗಳೆಲ್ಲ
ಎನ್ನ ಉಳಿಯೊಳಗಣ ಒಡಪು
ಇಂತಿವ ಮೀರಿವೆಂದಿಸಿ ಬೇದಿಸಿಹೆನೆಂಬುವರೆಲ್ಲ ಎನ್ನ ಕೂಡತಿಯಡಿಯಲಿ ಒಡೆಯಸಿಕೊಂಬ ಬಡಿಹೋರಿಗಳು'...[೪೧] ಎನ್ನುವ ಬಾಚಿ ಕಾಯಕದ ಬಸವಯ್ಯನ ವಚನಗಳಲ್ಲಿ ವಿಶ್ವಕರ್ಮ ಸಮುದಾಯ ವೃತ್ತಿ ಪದಗಳು ಕುರಿತಂತೆ ಉಲ್ಲೇಖವಾಗಿರುವುದು ಕಾಣಬಹುದು.

ಸರ್ವಜ್ಞನ ತ್ರಿಪದಿಗಳಲ್ಲಿಯೂ ಉಲ್ಲೇಖಗಳು ಕಂಡುಬರುತ್ತವೆ.

'ಹಡಗು ಕಡಲಿಗೆ ಬೇಕು, ಗುಡುಗು ಮಿಂಚಿಗೆ ಬೇಕು
ಕಡಗದಾ ಕೈಯ ಸೊಸೆಬೇಕು | ಊರಿಂಗೆ
ಬಡಿಗ ತಾ ಬೇಕು ಸರ್ವಜ್ಞ'[೪೨] ಈ ತ್ರಿಪದಿಯಲ್ಲಿ ಸಮಾಜಕ್ಕೆ ಬಡಿಗನ ಅವಶ್ಯಕತೆಯನ್ನು ಹೇಳುತ್ತದೆ.

'ಅಕ್ಕಸಾಲೆ ಒಂದೂರಿಗೊಕ್ಕಲೆಂದೆನ ಬೇಡ
ಬೆಕ್ಕು ಬಂದಿಲಿಯ ಹಿಡಿಯುವಂತೆ ಊರಿಗೊಂ
ದುಕ್ಕಲೇ ಮಾರಿ ಸರ್ವಜ್ಞ'[೪೩]

'ಅಕ್ಕಸಾಲೆಯ ಮಗ ಚಿಕ್ಕವನೆಂದೆನಬೇಡ
ಬೆಕ್ಕು ಬಂದಿಲಿಯ ಹಿಡಿಯುವಂತೆ ಕಮ್ಮಟವ
ನಿಕ್ಕುತಲೆ ಕದಿವ ಸರ್ವಜ್ಞ'[೪೪]

ಹೀಗೆ ಅನೇಕ ಕಡೆ ಕಮ್ಮಾರ, ಬಡಿಗ, ಅಕ್ಕಸಾಲಿಗ, ಕಮ್ಮಟ ಮುಂತಾದ ಪದಗಳು ಬಳಕೆಯಾಗಿರುವುದು ಕಾಣಬಹುದು. ಹಾಗೂ ಅವರ ವ್ಯಕ್ತಿತ್ವಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ತಿಳಿಸುತ್ತವೆ.

ಕನಕದಾಸರ ಮೋಹನ ತರಂಗಿಣಿಯ ಕೃತಿಯಲ್ಲಿ ದ್ವಾರಕಪುರದ ವರ್ಣನೆ ಮಾಡುವ ಸಂದರ್ಭದಲ್ಲಿ

'ಕಂಚುಗಾಱರು ಕೈದುಗಾಱರು ಹೊಳೆವ ಹೂ
ಮ್ಮಂಚಗಾಱರು ಶಿಲ್ಪಿಗರು
ಸಂಚುಗಾಱರು ಸದ್ವಿದ್ಯಾಧಿಕರಾದ
ಪಂಚಾಳರಿರ್ದಕ್ಕೆಲದಿ'[೪೫] ಎಂದಿದೆ. ದ್ವಾರಕ ಪುರದ ಬಿದಿಯ ಎರಡು ಕಡೆಗೆ ಪಾಂಚಾಳರ ಕರಕುಶಲ ಅಂಗಡಿಗಳಿದ್ದವು ಎಂದು ವರ್ಣಿಸುತ್ತಾರೆ.

೧೬-೧೭ನೇ ಶತಮಾನದಲ್ಲಿದ್ದ ತಿಂಥಿಣಿ ಮೋನಪ್ಪಯ್ಯನ ಬಹುಪಾಲು ವಚನಗಳು ಕಮ್ಮಾರಿಕೆಯ ಉಪಕರಣಗಳನ್ನು ಉಲ್ಲೇಖಿಸುತ್ತವೆ. ಮೂಲತಃ ಕಮ್ಮಾರನಾಗಿದ್ದ ಮೋನಪ್ಪಯ್ಯ ಅದೇ ಪರಿಸರದಲ್ಲಿ ಬೆಳೆದವನಾಗಿದ್ದರಿಂದ ತನ್ನ ವಚನಗಳಲ್ಲಿ ವೃತ್ತಿಯ ಉಪಕರಣಗಳನ್ನು ಆಧ್ಯಾತ್ಮಿಕ ಚಿಂತನೆಗೆ ಹೋಲಿಕೆ ಮಾಡಿ ಬರೆದ ವಚನಗಳು ದೊರೆಯುತ್ತವೆ.

'ಬಡಿಗ ಕಮ್ಮಾರರು ಪೊಡವಿಗಧಿಕರ್ತರು
ಬಡಿದು ಬತ್ತೀಸ ಆಯುಧವ ಮಾಡಿ
ಸರ್ವರಿಗೆ ಕೊಡುವರಯ್ಯ ಬಸವಣ್ಣ'[೩೮]

'ಕಾಯಕವೇ ಕಮ್ಮಾರ, ಕಾಯಕವೇ ಹೊಲೆಮಾದಿಗ'
'ಬಡಿಗ ಕಮ್ಮಾರರಿಗೆ ತುಡುಗುತನ ಸಲ್ಲದು'
'ಮೊನಪ್ಪನ ಮಾತು ಚಾನದ ಹದನದಂತೆ'
'ಅರ್ಕಸಾಲೆರ ಒಡಲೊಳುಜನಿಸಿ'[೩೯]

೧೮ನೆಯ ಶತಮಾನದ ಕರಸ್ಥಲ ನಾಗಲಿಂಗ ಸ್ವಾಮಿಗಳು ಮೂಲತಃ ಪಾಂಚಾಳ ಸಮುದಾಯದಿಂದ ಹುಟ್ಟಿ ಬಂದವರು. ಇವರ ತತ್ವಪದಗಳಲ್ಲಿ ಪಾಂಚಾಳರ ಗೋತ್ರಗಳಾದ ಮನು, ಮಯ, ತ್ವಷ್ಟ್ಯ, ಶಿಲ್ಪಿ ಮತ್ತು ವಿಶ್ವಜ್ಞ ಎಂಬ ಗೋತ್ರವುಳ್ಳಾವರಾಗಿದ್ದರು. ಉಳಿ, ಕೊಡತಿ, ಬಾಚಿ ಮುಂತಾದ ಪದಗಳು ಉಲ್ಲೇಖವಾಗಿರುವುದನ್ನು ಕಾಣಬಹುದು.

ವಿಶ್ವಕರ್ಮರು, ಪಾಂಚಾಳರು, ವಿಶ್ವಬ್ರಾಹ್ಮಣರು, ಆಚಾರ್ಯ, ಸಮಸ್ತವೀರ ಪಾಂಚಾಳ ಹಾಗೂ ಓಜ ಎಂಬ ಹೆಸರುಗಳಿಂದ ಶಾಸನ, ಜಾನಪದ ಹಾಗೂ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾಗಿರುವ ಪಾಂಚಾಳರ ಸಂಸ್ಕೃತಿಗೆ ಭವ್ಯವಾದ ಪರಂಪರೆ ಮತ್ತು ವಿಸ್ತಾರವಾದ ಪ್ರಾಚೀನತೆಯಿದೆ. ಸಾಹಿತ್ಯ ಕೃತಿಗಳನ್ನು ಅವಲೋಕಿಸಿದಾಗ ಪಾಂಚಾಳರು ಸೃಷ್ಟಿಗೆ ಮೂಲ ಕರ್ತೃಗಳೆಂದೂ, ಇವರಿಂದಲೇ ಸಕಲವು ನಿರ್ಮಾಣವಾಯಿತೆಂದು ಋಗ್ವೇದದ ೧೦ನೇ ಮಂಡಲದಲ್ಲಿ ತಿಳಿದುಬರುತ್ತದೆ. ವಿಶ್ವಕರ್ಮ ಪುರಾಣ ಹಾಗೂ ಮೂಲಸ್ತಂಭ ಪುರಾಣಗಳಲ್ಲಿ ವಿಶ್ವಕರ್ಮ ಜನಾಂಗದ ಬಗ್ಗೆ ವಿವರಗಳು ದೊರೆತಿರುವುದು ಮೇಲೆ ಉಲ್ಲೇಖಿಸಲಾಗಿದೆ. ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ ಪಾಂಚಾಳ ಶಬ್ದದ ಬಗೆಗೆ ಹೀಗೆ ಹೇಳುತ್ತಾನೆ. 'ವಿಶ್ವದ ನಿರ್ಮಾಣ, ರಕ್ಷಣೆ, ಕ್ರಿಯೆ ಹಾಗೂ ಆಗುಹೋಗುಗಳು ಯಾವನಿಂದ ನೆರವೇರುತ್ತಿದೆಯೋ ಅವನೇ ಪಾಂಚಾಳ' ಎಂದು ಹೇಳುತ್ತಾನೆ. ಪಾಂಚಾಳರ ಉಗಮವನ್ನು ಷಟ್‌ಸ್ಥಲ ಸಿದ್ಧಾಂತ ಚಕ್ರವರ್ತಿ ಚನ್ನಬಸವಣ್ಣನು, ನಾಗಲಿಂಗಸ್ವಾಮಿಗಳು ತಮ್ಮ ವಚನಗಳಲ್ಲಿ ವಿಶ್ವಕರ್ಮನಿಂದಲೇ ಹೇಗೆ ಚರಾಚರಗಳು ಸೃಷ್ಟಿಯಾದವು ಹೇಗೆ ವಿಶ್ವವು ನಿರ್ಮಾಣವಾಯಿತೆಂಬುದನ್ನು ಸ್ಪಷ್ಟಗೊಳಿಸಿದ್ದಾರೆ."[೪೦]

ಡಾ. ಶಂಭಾಜೋಶಿಯವರು ಕರ್ನಾಟಕ ಸಂಸ್ಕೃತಿ ಸಂಪುಟ ಮೂರು, ಹಾಲುಮತ ದರ್ಶನದಲ್ಲಿ ಪಾಂಚಾಳರು ಈ ದೇಸೀಯವರು. ಪಾಂಚಾಳ ಸಂಪ್ರದಾಯದ ಬ್ರಾಹ್ಮಣರಲ್ಲಿ ಮಂತ್ರಸಿದ್ಧರೂ, ಬ್ರಹ್ಮಜ್ಞಾರೂ ಆಗಿದ್ದುಂಟು. ದೇವಾಸುರರಿಬ್ಬರಿಗೂ ಇವರ ಜ್ಞಾನ ಶಕ್ತಿಯ ಅವಶ್ಯಕತೆ ಇತ್ತು ಆದ್ದರಿಂದ

ಸಮಾಜಧಾರಣೆಯ ಕಾರ್ಯದಲ್ಲಿ ಮಹತ್ವದ ವ್ಯಕ್ತಿಗಳಾಗಿದ್ದರು. ಸಿಂಧೂಕೊಳ್ಳದ ಸಂಸ್ಕೃತಿಗೂ ವಿಶ್ವಬ್ರಾಹ್ಮಣರ ಸಂಸ್ಕೃತಿಗೂ ಸಂಬಂಧವಿದೆ ಎಂದು ತಿಳಿದು ಬರುತ್ತದೆ. ಅಲ್ಲಿ ದೊರೆತಿರುವ ಉಪಕರಣ, ಕಲೆ, ವಾಸ್ತುಶಿಲ್ಪ ಇವುಗಳು ಸ್ಥಿರಗೊಳಿಸುತ್ತವೆ.

ನಮ್ಮ ನಾಡಿನಲ್ಲಿ ಅನೇಕ ಮಹಾಪುರುಷರು ಜನಿಸಿ, ಸಮಾಜದಲ್ಲಿದ್ದ ಅನಿಷ್ಟ ಸಂಪ್ರದಾಯಗಳನ್ನು ನಿರ್ಮೂಲನೆ ಮಾಡುವುದರ ಜೊತೆಗೆ ಕಾಯಕಕ್ಕೆ ತುಂಬ ಮಹತ್ವವನ್ನು ಕೊಟ್ಟು ಜನರಿಗೆ ತಿಳುವಳಿಕೆಯನ್ನು ನೀಡಿದರು. ಅಂಥವರ ಸಾಲಿಗೆ ಈ ಪಾಂಚಾಳ ಸಮುದಾಯದ ಅನೇಕ ಮಹಾಪುರುಷರು ಅಂದಿನ ಕಾಲದಲ್ಲಿ ಬೇರೂರಿದ್ದ ಮೌಢ್ಯತೆಯನ್ನು ತೊಲಗಿಸಿ ಹೊಸ ತಿರುವನ್ನೇ ಜನರಲ್ಲಿ ಮೂಡಿಸಿದರು. ಉದಾಹರಣೆಗೆ ಮೂರುಜಾವದ ಚಿಕ್ಕೇಶ್ವರರು, ಕಿನ್ನರಿ ಬ್ರಹ್ಮಯ್ಯ, ಬಾಚಿಕಾಯಕದ ಬಸವಯ್ಯ, ಕಾಳವ್ವೆ, ಗುಡ್ಡಾಪುರದ ದಾನಮ್ಮದೇವಿ, ಲಚ್ಚಾಣದ ಸಿದ್ದಪ್ಪ ಮಹಾರಾಜರು, ಗಗನಾಪುರದ ಗಂಗಪ್ಪಯ್ಯನವರು, ಹೊಳೆ ಆಲೂರಿನ ಎಚ್ಚರೇಶ್ವರರು, ಮುರನಾಳದ ಗಂಗಾಧರ ಸ್ವಾಮೀಜಿ ಹಾಗೂ ಉಕ್ಕಡಗಾತ್ರಿ ಕರಿಬಸಪ್ಪಜ್ಜ ಇವರೆಲ್ಲರೂ ಪಾಂಚಾಳ ಸಮುದಾಯದಲ್ಲಿ ಜನಿಸಿ ಇಡೀ ಸಮಾಜಕ್ಕೆ ಆಧ್ಯಾತ್ಮಿಕ ವಿದ್ಯೆಯನ್ನು ನೀಡಿದ ಮಹಾಪುರುಷರು.

ಅನೇಕ ಐತಿಹ್ಯಗಳ ಮುಖಾಂತರ ಹಾಗೂ ಹೊಯ್ಸಳರ ಕಾಲದ ಶಾಸನದಲ್ಲಿ ಉಲ್ಲೇಖವಾಗಿರುವ ಜಕಣಾಚಾರ್ಯರು ನಾಡಿನ ತುಂಬೆಲ್ಲಾ ತಮ್ಮ ಶಿಲ್ಪಕಲೆಯಿಂದ ಪ್ರಸಿದ್ಧಿ ಪಡೆದ ಮಹಾನ್ ಶಿಲ್ಪಿ. ಇವರು ಪಾಂಚಾಳ ಸಮುದಾಯದಲ್ಲಿ ಜನಿಸಿದವರು. ಇವರಿಂದ ನಿರ್ಮಾಣವಾದ ದೇವಸ್ಥಾನಗಳು, ಶಿಲ್ಪಗಳು ಪ್ರಾಚೀನ ಇತಿಹಾಸವನ್ನು ಗುರುತಿಸುವಲ್ಲಿ ಆಧಾರವಾಗಿ ನಿಲ್ಲುತ್ತವೆ.

ಪ್ರಸ್ತುತ ಸಂದರ್ಭದಲ್ಲಿ ಕಮ್ಮಾರ, ಬಡಿಗ, ಅಕ್ಕಸಾಲಿಗ, ಶಿಲ್ಪಿ ಹಾಗೂ ಕಂಚುಗಾರರನ್ನು ಒಟ್ಟಿಗೆ ಸೇರಿಸಿ ವಿಶ್ವಕರ್ಮ, ಪಾಂಚಾಳ ಎಂದು ಕರೆಯಲಾಗುತ್ತದೆ. ಇದರಿಂದ ಒಂದು ಜನಾಂಗದ ಸಂಸ್ಕೃತಿ, ಆಚಾರ ವಿಚಾರ, ಸೌಲಭ್ಯಗಳು ಒದಗಿಸಿಕೊಳ್ಳಲು ಸಹಾಯಕವಾಗುತ್ತದೆ. ಆದರೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದ ಅಂಶವೆಂದರೆ ಈ ಐದು ವೃತ್ತಿಗಳನ್ನು ಒಬ್ಬರೇ ನಿರ್ವಹಿಸುವವರು ಎಲ್ಲಿಯೂ ಕಾಣಸಿಗುವುದಿಲ್ಲ. ಕಮ್ಮಾರಿಕೆ, ಬಡಗಿತನ ಹಾಗೂ ಶಿಲ್ಪ ಕೆಲಸವನ್ನು ಒಬ್ಬರೇ ಈ ಮೂರು ವೃತ್ತಿಗಳನ್ನು ನಿರ್ವಹಿಸಿಕೊಂಡು ಬಂದಿರುವರು ಕಾಣಸಿಗುತ್ತಾರೆ. ಪಾಂಚಾಳ ಸಮುದಾಯದಲ್ಲಿಯೂ ಇತರ ಸಮುದಾಯಗಳಲ್ಲಿರುವಂತೆ ಶ್ರೇಣಿಕೃತ ವ್ಯವಸ್ಥೆ ಕಂಡು ಬರುತ್ತದೆ. ಕಮ್ಮಾರಿಕೆ, ಕಂಚುಗಾರಿಕೆ ವೃತ್ತಿಯನ್ನು ನಿರ್ವಹಿಸುವರು ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರು ಎಂದೇ ಹೇಳಬಹುದು. ಬಡಗಿತನ, ಅಕ್ಕಸಾಲಿಕೆ ಹಾಗೂ ಶಿಲ್ಪಿ ಕೆಲಸಗಳನ್ನು ನಿರ್ವಹಿಸುವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆ. ಆರ್ಥಿಕ ಸ್ಥಿತಿಯಲ್ಲಿ ಉತ್ತಮವಿರುವ ಈ ಮೂರು ವೃತ್ತಿಯವರು ಆಧುನಿಕ ಸೌಲಭ್ಯಗಳನ್ನು ಪಡೆಯುವುದರಲ್ಲಿ ಸಫಲರಾಗಿದ್ದಾರೆ. ಆದರೆ ಕಮ್ಮಾರಿಕೆ, ಕಂಚುಗಾರಿಕೆ ಈ ವೃತ್ತಿಗಳನ್ನು ನಿರ್ವಹಿಸುವರು ಹಿಂದುಳಿದಿದ್ದಾರೆಂದು ಹೇಳಬಹುದು. ಏಕೆಂದರೆ ಆಧುನಿಕ ಸಂದರ್ಭದಲ್ಲಿ ಕಮ್ಮಾರಿಕೆ, ಕಂಚುಗಾರಿಕೆ ವೃತ್ತಿಗೆ ಬೇಡಿಕೆಯೇ ಇಲ್ಲದಂತಾಗಿದೆ. ಇವರು ತಯಾರಿಸುವ ಉಪಕರಣಗಳೆಲ್ಲವೂ

ಮಾರುಕಟ್ಟೆಯಲ್ಲಿಯೇ ಸಿಗುತ್ತವೆ. ಕಮ್ಮಾರಿಕೆಯ ವೃತ್ತಿಗೆ ಮುಖ್ಯವಾಗಿ ಇದ್ದಿಲು ಬೇಕು. ಇದುವೇ ಸಿಗುತ್ತಿಲ್ಲ ಇಂತಹ ಸಂದರ್ಭದಲ್ಲಿ ಈ ವೃತ್ತಿಯಿಂದ ಯಾವುದೇ ಭರವಸೆಗಳು ಅವರಿಗೆ ಇಲ್ಲದಂತಾಗಿವೆ.

ಪಂಪನ ಕೃತಿಗಳಲ್ಲಿ, ರಾಘವಾಂಕನ ಸಿದ್ಧರಾಮಚಾರಿತ್ರ್ಯ, ವಚನಗಳು, ತ್ರಿಪದಿಗಳು, ಕನಕದಾಸರ ಮೋಹನ ತರಂಗಿಣಿ, ಮಂಟೇಸ್ವಾಮಿ ಕಾವ್ಯ, ಕೋಲುಪದ, ಕುಮಾರ ರಾಮನ ಚರಿತ್ರೆ ಇವುಗಳೆಲ್ಲವು ಪಾಂಚಾಳ ಇತಿಹಾಸಕ್ಕೆ ಬೆಳಕು ಚೆಲ್ಲುತ್ತವೆ.

ಡಾ.ಎಂ.ಚಿದಾನಂದ ಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಪಾಂಚಾಳರ ಬಗ್ಗೆ ಹೀಗೆ ಉಲ್ಲೇಖಿಸುತ್ತಾರೆ. ಇವರ ಅಧಿದೈವ ವಿಶ್ವಕರ್ಮ, ಕರ್ನಾಟಕದಲ್ಲಿಯಂತೂ ಶಿಲ್ಪ ಮತ್ತು ಚಿತ್ರ ಎಂಬ ಕುಶಲಕಲೆಗಳ ಅಭಿವೃದ್ಧಿಗೆ ಇವರೇ ಕಾರಣರು. ಇವರ ಹೆಸರುಗಳು ಸಾಮಾನ್ಯವಾಗಿ ಆಚಾರ್ಯ, ಓಜ ಎಂದಿರುತ್ತವೆ. ಕಲಾರಾಧಕರಾದ ಇವರ ರಕ್ತದಲ್ಲೇ ಕಲೆಯ ಬೀಜಗಳು ಹುದುಗಿರುವಂತೆ ಕಾಣುತ್ತದೆ ಎಂದು ತಿಳಿಸುತ್ತಾರೆ.

ಈ ಎಲ್ಲಾ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಪಾಂಚಾಳರ ಸಂಸ್ಕೃತಿ ಸಿಂಧೂ ನಾಗರಿಕತೆಯ ಜೊತೆಗೆ ಬೆಸೆದುಕೊಂಡಿತ್ತು ಎಂಬ ಅಂಶವು ವಿಧಿತವಾಗುತ್ತದೆ.

ಅಡಿಟಿಪ್ಪಣಿ

೦೧. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೧

೦೨. ಎ.ಕ.(ಸಂ-೭) ಶಾ, ಸಂಖ್ಯೆ ೧೪೪, ನೆಲಮಂಗಲ (ತಾ) ದೇವರಹಳ್ಳಿ

೦೩. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೬

೦೪. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೬

೦೫. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೬

೦೬. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೬

೦೭. ಡಾ.ಆರ್.ಬಿ.ಕುಮಾರ್, ಮುದ್ದೆ ಕಂಬಾರರು, ೨೦೦೪, ಪುಟ.೩೩

೦೮. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೪

೦೯. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೩

೧೦. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೩

೧೧. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೭

೧೨. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೬

೧೩. ಎ.ಕ.(ಸಂ-೧೧) ಶಾ, ಸಂಖ್ಯೆ ೨೦೦, ಚಿಕ್ಕಮಗಳೂರು (ತಾ) ಕೆಂಕೆರೆ

೧೪. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೪

೧೫. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೫

೧೬. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೩

೧೭. ಎ.ಕ.(ಸಂ-೧೨) ಶಾ, ಸಂಖ್ಯೆ ೨೨೬, ಕಡೂರು (ತಾ) ಸೋಮನಹಳ್ಳಿ

೧೮. ಎ.ಕ.(ಸಂ-೭) ಶಾ, ಸಂಖ್ಯೆ ೬೪, ಮಳವಳ್ಳಿ (ತಾ) ಮಾರೆಹಳ್ಳಿ

೧೯. ಎ.ಕ.(ಸಂ-೬) ಶಾ, ಸಂಖ್ಯೆ ೯೫, ಕೃಷ್ಣರಾಜಪೇಟೆ (ತಾ) ಬೈರಾಪುರ

೨೦. ಎ.ಕ.(ಸಂ-೩) ಶಾ, ಸಂಖ್ಯೆ ೧೭, ಗುಂಡ್ಲುಪೇಟೆ (ತಾ) ಗುಂಡ್ಲುಪೇಟೆ

೨೧. ಡಾ.ಕೆ.ಎಸ್.ಕುಮಾರಸ್ವಾಮಿ, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ೧೯೯೪, ಪುಟ.೧೯

೨೨. ದೇವೇಂದ್ರ ಕುಮಾರ ಹಕಾರಿ, ಗ್ರಾಮೀಣ ವೃತ್ತಿಗಳು, ೨೦೦೦, ಪುಟ.೧೯೯

೨೩. ಎ.ಕ.(ಸಂ-೬) ಶಾ, ಸಂಖ್ಯೆ ೨೧, ಶ್ರೀರಂಗಪಟ್ಟಣ

೨೪. ಡಾ.ಕೆ.ಎಸ್.ಕುಮಾರಸ್ವಾಮಿ, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ೧೯೯೪, ಪುಟ.೨೦

೨೫. ಎ.ಕ.(ಸಂ-೧) ಶಾ, ಸಂಖ್ಯೆ ೧೯, ಮಡಿಕೇರಿ (ತಾ) ಅಂಜನಗಿರಿ

೨೬. ಡಾ.ಆರ್.ಬಿ.ಕುಮಾರ್, ಮುದ್ದೆಕಂಬಾರರು, ೨೦೦೪, ಪುಟ.೩೨

೨೭. ಎ.ಕ.(ಸಂ-೧೧) ಶಾ, ಸಂಖ್ಯೆ ೮, ಮೂಡಗೆರೆ (ತಾ) ಗೋಣೀಬಿಡು

೨೮. ಎ.ಕ.(ಸಂ-೬) ಶಾ, ಸಂಖ್ಯೆ ೩೯, ಶ್ರೀರಂಗಪಟ್ಟಣ

೨೯. ಬೋರಲಿಂಗಯ್ಯ ಹಿ.ಚಿ (ಸಂ), ಮಂಟೇಸ್ವಾಮಿ ಬುಡಕಟ್ಟು ಮಹಾಕಾವ್ಯ ಮಾಲೆ, ೧೯೯೭, ಪುಟ -೩೬೨

೩೦. ಡಾ.ಎಸ್.ಎಸ್.ಅಂಗಡಿ, ಬಡಿಗ ವೃತ್ತಿಪದ ಮಂಜರಿ, ೧೯೯೯, ಪುಟ.೬೫-೬೭

೩೧. ಡಾ.ಆರ್.ಬಿ.ಕುಮಾರ್, ಮುದ್ದೆಕಂಬಾರರು, ೧೯೮೪, ಪುಟ.೧೮೪

೩೨. ಡಾ.ದಸ್ತಗಿರಿ ಅಲ್ಲೀಭಾಯಿ (ಸಂ), ದಣಿವು ಕಾಣದ ಪದಗಳು, ೧೯೮೪, ಪುಟ.೧೩

೩೩. ಎಚ್.ಎಂ.ಬಸವರಾಜ, ಗುಡೇಕೋಟೆ : ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಕಿರು ಪ್ರಬಂಧ), ೧೯೯೮, ಪುಟ.೯೭

೩೪. ಶ್ರೀ ಸಿದ್ಧಲಿಂಗ ಸ್ವಾಮಿಗಳು, ಆಚಾರ್ಯಾಭಿವಂದನೆ, ಪುಟ:೪೯

೩೫. ಶ್ರೀ ಸಿದ್ಧಲಿಂಗ ಸ್ವಾಮಿಗಳು, ಆಚಾರ್ಯಾಭಿವಂದನೆ, ಪುಟ:೪೯

೩೬. ಕುಮಾರಸ್ವಾಮಿ, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ೧೯೯೪, ಪುಟ:೬೯

೩೭. ಡಾ.ಬಿ.ಎ.ವಿವೇಕ ರೈ (ಸಂ), ರಾಘವಾಂಕನ ಸಮಗ್ರಕಾವ್ಯ, ೨೦೦೪, ಪುಟ:೨೪೨

೩೮. ಸುಂಕಾಪುರ, ಎಂ.ಎಸ್ (ಸಂ), ಸಕಲ ಪುರಾತನರ ವಚನಗಳು, ಸಂ:೩, ೧೯೭೮

೩೯. ಸುಂಕಾಪುರ, ಎಂ.ಎಸ್ (ಸಂ), ಸಕಲ ಪುರಾತನರ ವಚನಗಳು, ಸಂ:೩, ಪುಟ:೩೪೭

೪೦. ಪ್ರೊ.ವೀರೇಶ ಬಡಿಗೇರ, ಬಾಚಿ ಕಾಯಕದ ಬಸವಯ್ಯ : ವೃತ್ತಿ ಹಾಗೂ ತತ್ತ್ವ ಮೀಮಾಂಸೆ, ೨೦೦೭, ಪುಟ:೭೭

೪೧. ಪ್ರೊ.ವೀರೇಶ ಬಡಿಗೇರ, ಬಾಚಿ ಕಾಯಕದ ಬಸವಯ್ಯ : ವೃತ್ತಿ ಹಾಗೂ ತತ್ತ್ವ ಮೀಮಾಂಸೆ, ೨೦೦೭, ಪುಟ:೪೩

೪೨. ಡಾ.ಎಸ್.ಎಸ್.ಅಂಗಡಿ, ಬಡಿಗ ವೃತ್ತಿಪದ ಮಂಜರಿ, ೧೯೯೯, ಪುಟ:೧೭

೪೩. ಡಾ.ರಾಗೌ (ಸಂ), ಸರ್ವಜ್ಞನ ವಚನಗಳು, ೨೦೦೩, ಪುಟ:೧೨೩

೪೪. ಡಾ.ರಾಗೌ (ಸಂ), ಸರ್ವಜ್ಞನ ವಚನಗಳು, ೨೦೦೩, ಪುಟ:೧೨೩

೪೫. ಜಿ.ಜಿ.ಮಂಜುನಾಥನ್ (ಸಂ), ಮೋಹನ ತರಂಗಿಣಿ, ಪುಟ:೨೬

೪೬. ಸಿ.ಬಿ.ಕಡಕೋಳ (ಸಂ), ತಿಂಥಿಣಿ ಮೌನೇಶ್ವರರ ವಚನಗಳು, ೧೯೮೫, ಪುಟ:೪೪

೪೭. ಸಿ.ಬಿ.ಕಡಕೋಳ (ಸಂ), ತಿಂಥಿಣಿ ಮೌನೇಶ್ವರರ ವಚನಗಳು, ೧೯೮೫, ಪುಟ:೪೯

೪೮. ಕೆ. ವಾಸುದೇವಚಾರ್ (ಸಂ), ಶಿಲ್ಪಸಹ್ಯಾದ್ರಿ, ೧೯೯೧, ಪುಟ:೯

ಅಧ್ಯಾಯ - ನಾಲ್ಕು

ಪಾಂಚಾಳರ ಬದುಕು, ಭಾಷೆ

<u>ಅಧ್ಯಾಯ - ನಾಲ್ಕು</u>

ಪಾಂಚಾಳರ ಬದುಕು, ಭಾಷೆ

೪.೧. ಪಾಂಚಾಳರ ಬದುಕು ಮತ್ತು ಸಂಸ್ಕೃತಿ

ಸಂಸ್ಕೃತಿ ಎಂಬ ಪರಿಭಾಷೆಯು ತುಂಬಾ ವ್ಯಾಪಕವಾದುದು, ಪಾಂಚಾಳರ ಕುರಿತ ಅಧ್ಯಯನದ ಈ ಸಂದರ್ಭದಲ್ಲಿ ಅವರ ಬದುಕಿನ ವಿಧಾನ, ವೃತ್ತಿಯ ಸಾಮಾಜಿಕ, ಧಾರ್ಮಿಕ ನೆಲೆಗಳು ಆಧುನಿಕ ಪೂರ್ವ ಸಂದರ್ಭದಲ್ಲಿ ಕೇವಲ ಹೊಟ್ಟೆಪಾಡಿನ, ಸ್ವಕೇಂದ್ರಿತ ವ್ಯವಹಾರವಾಗಿರಲಿಲ್ಲ. ನಾಡಿನ, ಉತ್ಪಾದಕ ಸಮುದಾಯಗಳಿಗೆ ಆಡಳಿತದ ನೆಲೆಗಳಿಗೆ ಪೂರಕವಾಗಿ ಕೃಷಿ, ಯುದ್ಧಕ್ಕೆ ಸಂಬಂಧಿಸಿದ ಉಪಕರಣ ಸಾಮಾಗ್ರಿ ತಯಾರಿಕೆಯಲ್ಲದೆ ಸಾಮುದಾಯಿಕ ಸಂಸ್ಕೃತಿಯ ನೆಲೆಗಳಾದ ದೇವಾಲಯ, ಕಲೆ, ವಾಸ್ತುಗಳ ನಿರ್ಮಾಣ, ನಿರ್ವಹಣೆಗಳಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಿದ್ದರು. ಸಮಾಜ ಸಂರಚನೆಯಲ್ಲಿ ಪ್ರಮುಖ ಅಂಗವಾಗಿದ್ದು ಪಾಂಚಾಳ ವೃತ್ತಿ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಬದುಕಿನ ನೆಲೆಗಳನ್ನು ಈ ಅಧ್ಯಾಯದಲ್ಲಿ ಹಿಡಿದಿಡಲು ಪ್ರಯತ್ನಿಸಿದೆ.

ಗ್ರಾಮಜೀವನದ ವಿವಿಧ ವೃತ್ತಿ ಉಪಕರಣಗಳ ನಿರ್ಮಾಣಕ್ಕಾಗಿ ನಿರತರಾದ ಪಾಂಚಾಳರ ಸಮುದಾಯಕ್ಕೆ ಪ್ರಾಚೀನ ಕಾಲದಿಂದಲೂ ವಿಶೇಷ ಪರಂಪರೆ ಹಾಗೂ ಮಹತ್ವದ ಸ್ಥಾನವಿದೆ. ಕೃಷಿ ಹಾಗೂ ಕೃಷಿಯೇತರ ಉಪಕರಣಗಳ ನಿರ್ಮಾತೃಗಳನ್ನೇ ಕಮ್ಮಾರ, ಬಡಿಗೇರ, ಅಕ್ಕಸಾಲಿಗ, ಕಂಚುಗಾರ ಹಾಗೂ ಶಿಲ್ಪಿ ಎಂದು ಕರೆಯುತ್ತ ಬಂದಿದ್ದೇವೆ. ಅದರ ಜೊತೆಗೆಯೇ ಕರಕುಶಲ ಜ್ಞಾನಿಗಳು, ವೇದ ವಿದ್ಯೆಗಳಲ್ಲಿ ಪರಿಣಿತರು, (ಉಲ್ಲೇಖ: ಶಿಲ್ಪಾದರ್ಶ ಸಂಪುಟ-೧. ಜಿ.ಜ್ಞಾನಾನಂದ, ಪುಟ-೧೧) ಸಮುದಾಯಗಳ ನಿಕಟ ಸಂಬಂಧಿಗಳಾದ ಇವರು ಶತಮಾನಗಳ ಏಳು-ಬೀಳುಗಳಲ್ಲಿ ತಮ್ಮ ವೃತ್ತಿಗಳನ್ನು ಮುನ್ನಡೆಸಿ ರೈತಾಪಿ, ಅರಸಪರಿವಾರ ಸಮುದಾಯಗಳ ಜೀವನಕ್ಕೆ ಆಸರೆಯಾಗಿ ನಿಂತವರು. 'ಒಕ್ಕಲಿಗ ಒಕ್ಕದಿರೇ ಬಿಕ್ಕುವುದು ಜಗವೆಲ್ಲಾ' (ಉಲ್ಲೇಖ: ಶಿಲ್ಪ ಸಹ್ಯಾದ್ರಿ ಕೆ.ವಾಸುದೇವಾಚಾರ, ಪುಟ-೮) ಎಂಬ ನಾಣ್ಣುಡಿಯಂತೆ ಒಕ್ಕಲಿಗ ಒಕ್ಕಲಿಕ್ಕೆ ಮೂಲ ಈ ಪಾಂಚಾಳರೇ, ಭಾರತ ಹಳ್ಳಿಗಳ ದೇಶ ಹಾಗೂ ಕೃಷಿ ಪ್ರಧಾನವಾದ ದೇಶ ಇದರಿಂದಾಗಿ

ಭೂಮಿಗೆ ಹೆಚ್ಚಿನ ಮಹತ್ವವಿದೆ. ಭೂಮಿಯ ಕೇಂದ್ರಬಿಂದು ರೈತ, ಈ ರೈತನನ್ನು ಕೇಂದ್ರವಾಗಿಟ್ಟುಕೊಂಡು ವೃತ್ತಿಗಳು ಪ್ರಾರಂಭವಾಗುತ್ತವೆ ಅಥವಾ ವೃತ್ತಿಗಳೇ ಮೂಲ ಕೇಂದ್ರ ಇವುಗಳನ್ನೇ ಮೂಲವಾಗಿಟ್ಟುಕೊಂಡು ರೈತ ತನ್ನ ಕೃಷಿ ಚಟುವಟಿಕೆಯಲ್ಲಿ ರೂಪವನ್ನು ಪಡೆಯುತ್ತಾನೆ. ಈ ರೈತ ಕುಟುಂಬಗಳಿಗೆ ಬೇಕಾದ ಉಪಕರಣಗಳ ಸೇವೆಯನ್ನು ಒದಗಿಸುತ್ತಾನೆ. ಇದಕ್ಕೆ ಪ್ರತಿಫಲವಾಗಿ ರೈತ ತಾನು ಬೆಳೆದ ಬೆಳೆಯಲ್ಲಿ ಪಾಂಚಾಳರಿಗೆ ಒಂದು ಪಾಲನ್ನು ಕೊಡುತ್ತಾನೆ. ಇದು ರೈತ ಹಾಗೂ ಪಾಂಚಾಳ ಸಮುದಾಯಗಳ ನಡುವಿನ ನಿಕಟ ಸಂಬಂಧವನ್ನು ಗಟ್ಟಿಗೊಳಿಸುವ ಅಂಶವಾಗಿದೆ. ಇದಕ್ಕೆ ಹಳ್ಳಿಯ ಪ್ರದೇಶಗಳಲ್ಲಿ 'ಆಯಾ' ಪದ್ಧತಿ ಎಂದು ಕರೆಯಲಾಗುತ್ತದೆ. ಅಂದರೆ ವೃತ್ತಿಯ ಸೇವೆಗೆ ರೈತ ವರ್ಷಕ್ಕೆ ಇಂತಿಷ್ಟು ಎಂದು ನಿಗದಿ ಮಾಡಿ ಸುಗ್ಗಿಯ ಸಮಯದಲ್ಲಿ ತಾನು ಒಕ್ಕಿದ ರಾಶಿಯಿಂದ ಕಾಳುಕಡಿಯನ್ನು ಕೊಡುತ್ತಿದ್ದರು. ಇದರ ಜೊತೆಗೆಯೇ ಸಂಭಾವನೆಯನ್ನು ನೀಡುತ್ತಿದ್ದರು. ಇವು ಪಾಂಚಾಳ ಹಾಗೂ ರೈತ ಸಮುದಾಯಗಳ ನಡುವೆ ತಲೆತಲಾಂತರದಿಂದ ಮುಂದುವರೆದುಕೊಂಡು ಬಂದಿದೆ. ಇದರಿಂದಲೇ ಒಕ್ಕಲಿಗ ಒಕ್ಕಲಿಕ್ಕೆ ಮೂಲ ಪಾಂಚಾಳ ಎಂದು ಹೇಳಬಹುದು. ರೈತ ಸಮುದಾಯಗಳು ಪಾಂಚಾಳರ ಕುಟುಂಬಗಳಲ್ಲಿ ಪರಸ್ಪರ ಸುಖ-ದುಃಖಗಳಲ್ಲಿ ಧರ್ಮ-ಕರ್ಮಗಳಲ್ಲಿ ಭಾಗಿಯಾಗಿರುವುದನ್ನು ಕಾಣುತ್ತೇವೆ. ಸಂಸ್ಕೃತಿಯ ದೃಷ್ಟಿಯಿಂದ ಪಾಂಚಾಳರು ವಾದ್ಯಗಳ ಕಲಾ ಪ್ರೌಢಿಮೆ, ಮಂತ್ರ-ತಂತ್ರ, ನಾಟಿ ವೈದ್ಯಪದ್ಧತಿ, ಗ್ರಾಮದೇವತೆಯ ಅರ್ಚಕರು, ಕೀಲುಗೊಂಬೆ ತಯಾರಿಕೆ, ರಥ, ಪಲ್ಲಕ್ಕಿ ಇಂತಹ ಕಲೆಗಳನ್ನು ಕರಗತಗೊಳಿಸಿಕೊಂಡಿದ್ದಾರೆ. ಈ ಮೇಲಿನ ಎಲ್ಲಾ ಅಂಶಗಳಿಂದಲೇ ದೇಶದ ಬೆನ್ನೆಲುಬು ರೈತ ಆದರೆ ರೈತನ ಬೆನ್ನೆಲುಬು ಪಾಂಚಾಳ ಎಂದರೆ ಅತಿಶಯೋಕ್ತಿ ಎನಿಸಲಾರದು.

ಪಾಂಚಾಳ ಸಮುದಾಯ ತಯಾರಿಸುವ ವಸ್ತುಗಳು ಕೇವಲ ರೈತಾಪಿ ಚಟುವಟಿಕೆಗಳಿಗೆ ಸಂಬಂಧಿಸಿರದೆ ಪ್ರತಿಯೊಂದು ವರ್ಗಕ್ಕೂ ಅಂದರೆ ನೇಕಾರಿಕೆ, ಚಮ್ಮಾರ, ಕುರುಬ, ಮಡಿವಾಳ ಹೀಗೆ ಎಲ್ಲಾ ಸಮುದಾಯಗಳಿಗೂ ಇವರ ಅಗತ್ಯವಿದೆ. ಹಾಗೆಯೇ ಪ್ರತಿಯೊಂದು ಸಮುದಾಯಗಳ ತಮ್ಮ ಅದಿದೈವದ ನಿರ್ಮಾಣದ ಕೆಲಸಗಳಲ್ಲಿ ಇವರೆ ಮುಖ್ಯರು. ಪಾಂಚಾಳರು ತಮ್ಮ ವೃತ್ತಿಯ ಮೂಲಕ ಸಮಾಜದಲ್ಲಿ ಸಾಂಸ್ಕೃತಿಕವಾಗಿ ವಿಶೇಷಸ್ಥಾನ ಪಡೆದವರಾಗಿದ್ದಾರೆ.

೪.೧.೧. ಕಮ್ಮಾರ

ಕಬ್ಬಿಣ ಕೆಲಸವನ್ನು ನಿರ್ವಹಿಸುವವನು ಕಮ್ಮಾರ. ಇವನು ಪಾಂಚಾಳರಲ್ಲಿ ಒಬ್ಬನಾಗಿದ್ದಾನೆ. ಶಾಸನ, ಕಾವ್ಯ ಹಾಗೂ ಮೌಖಿಕ ಇತಿಹಾಸದಲ್ಲಿ ಕರ್ಮಹರ, ಕಂಬರ, ಕಮ್ಮರ, ಕಂಬಾರ, ಕುಲುಮೆ, ಕಂಬಾರದಿಣ್ಣೆ, ಕಮ್ಮಾರ ಸಾಲಿ ಎಂಬೆಲ್ಲಾ ಪರ್ಯಾಯ ಪದಗಳು ಕಮ್ಮಾರನ ಬಗ್ಗೆ ಕಾಣಿಸಿಕೊಂಡಿವೆ. ಕರ್ವೊನ್ ಎಂಬ ಮೂಲ ಪದದಿಂದ ಕಮ್ಮಾರ ಪದ ಬಳಕೆಗೆ ಬಂದಿದೆ ಎಂದು ಊಹಿಸಲಾಗಿದೆ. 'ಕರ್ವೊನ್ ಎಂದರೆ ಕಬ್ಬಿಣ, ಕಮ್ಮಣ ಎಂದರೆ ಕುಲುಮೆ, ಕರ್ಮ+ಕಾರ ಕಮ್ಮಾರ ಆಗಿದೆ ಎನ್ನುತ್ತಾರೆ. ಈಗ ಬಳಕೆಯಲ್ಲಿ ಕಮ್ಮಾರ ಮತ್ತು ಕಂಬಾರ ಎರಡೂ ರೂಪಗಳು ಬಳಕೆಯಲ್ಲಿವೆ.' ಹಾಗೆಯೇ ಕಮ್ಮಾರ ಸಾಲಿ ಎಂಬ ಪದದಲ್ಲಿ 'ಸಾಲಿ' ಎಂದರೆ ಕೇವಲ ವಿದ್ಯಾಭ್ಯಾಸ ನೀಡುವ ಸಂಸ್ಥೆಗಳೆಂಬ ಸೀಮಿತ ಅರ್ಥವನ್ನು ಪಡೆದುಕೊಳ್ಳದೇ ಕೈಗಾರಿಕೆಯ ಸ್ಥಳ, ಕೆಲಸದ ಮನೆ ಎಂಬ ವಿಶಾಲಾರ್ಥದಲ್ಲಿ ಬಳಕೆಗೊಂಡಿದೆ. ಸಂಸ್ಕೃತ ಶಾಲಾ ಮೂಲ ರೂಪದಿಂದ 'ಸಾಲಿ' (ಶಾಲೆ>ಸಾಲೆ>ಸಾಲಿ) ಬಂದಿದೆ. ಸಾಲಿ ಪದದ ಬಳಕೆ ವೃತ್ತಿಪರ

ಜನಾಂಗದವರನ್ನು ಹೆಸರಿಸುವಲ್ಲಿ ಬಳಕೆಗೊಳ್ಳುತ್ತದೆ. ಮಡಿಕೆ ಮಾಡುವ ಕುಂಬಾರನನ್ನು 'ಚಕ್ರಸಾಲಿ' ಎಂದು ಕರೆಯುವ ವಾಡಿಕೆ.[೨] ಅದರಂತೆಯೇ ಕಬ್ಬಿಣ ಕೆಲಸ ಮಾಡುವ ಸ್ಥಳಕ್ಕೆ 'ಕಮ್ಮಾರ ಸಾಲಿ' ಎಂದು ಕರೆಯಲಾಗುತ್ತದೆ.

ಕಮ್ಮಾರಿಕೆ ಭಾರತದಲ್ಲಿ ಅತ್ಯಂತ ಪ್ರಬುದ್ಧವಾದ ಮಟ್ಟವನ್ನು ಮುಟ್ಟಿತ್ತು. ಜಗತ್ತಿನಲ್ಲಿ ಭಾರತದ ಉಕ್ಕಿಗೆ ಅತ್ಯಂತ ಬೇಡಿಕೆಯನ್ನು ಹೊಂದಿತ್ತು. ಈ ಬೇಡಿಕೆ ಇಲ್ಲಿ ತಯಾರಾಗುವ ಅತ್ಯುತ್ಕೃಷ್ಟವಾದ ಉಕ್ಕಿನ ಮೇಲೆ ಅವಲಂಬಿಸಿದೆ. ಕ್ರಿ.ಶ.೪ನೆಯ ಶತಮಾನದಲ್ಲಿ ತಯಾರಾದ ಸಮುದ್ರಗುಪ್ತನ ಅಲಹಬಾದ್ ಸ್ತಂಭಶಾಸನ ಶತಮಾನಗಳು ಕಳೆದರು ತುಕ್ಕು ಹಿಡಿಯದೇ ನಿಂತಿದೆ. ಇಂದಿನ ಆಧುನಿಕ ತಂತ್ರಜ್ಞಾನ ಯುಗದ ಕಾಲದವರೆಗೂ ಕೂಡ ಈ ತಂತ್ರಜ್ಞಾನ ನಿಗೂಢವಾಗಿಯೇ ಉಳಿದಿದೆ. ಅಂತಹ ಸ್ಥಾನವನ್ನು ಭಾರತದ ಕಮ್ಮಾರಿಕೆ ಪಡೆದಿತ್ತು.

ಪಾಂಚಾಳ ಸಮುದಾಯದಲ್ಲಿ ಒಂದು ವೃತ್ತಿಯಾದ ಕಮ್ಮಾರಿಕೆ ಸಮಾಜದ ಕರಕುಶಲ ಕಲೆಗಳಲ್ಲಿ ಒಂದಾಗಿದೆ. ಕಮ್ಮಾರಿಕೆಯ ವೃತ್ತಿಯಿಂದ ಗೃಹನಿರ್ಮಾಣ, ಗೃಹಬಳಕೆಯ ಸಾಮಾನು, ಬೇಟೆಯ ಉಪಕರಣಗಳು, ಯುದ್ಧ ಸಾಮಗ್ರಿಗಳು, ಧಾರ್ಮಿಕತೆ ಮುಂತಾದ ಕಡೆಗಳಲ್ಲಿ ಕಮ್ಮಾರಿಕೆಯ ವೃತ್ತಿಯು ಮುಖ್ಯ ಉಪಯೋಗವಾಗುತ್ತದೆ. ಇದರಿಂದಲೇ ಈ ವೃತ್ತಿಯು ತುಂಬ ಮಹತ್ವವನ್ನು ಪಡೆದುಕೊಂಡಿತ್ತು. ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಯಂತ್ರಗಳ ಪ್ರಭಾವದಿಂದ ಈ ವೃತ್ತಿಯ ಬೇಡಿಕೆ ತುಂಬ ವಿರಳವಾಗಿದೆ. ಮಳೆಗಾಲದ ಸಂದರ್ಭದಲ್ಲಿ ಈ ವೃತ್ತಿಗೆ ಬಿಡುವು ಇಲ್ಲದ ಕೆಲಸಗಳು ಇರುತ್ತಿದ್ದವು. ಪ್ರಾಚೀನ ಕಾಲದಲ್ಲಿ ಕಮ್ಮಾರ ಶಾಲೆಯಿಂದಲೇ ಸೈನಿಕರಿಗೆ ಬೇಕಾಗುವ ಭರ್ಚಿ, ಕತ್ತಿ, ಅವರ ಅಂಗಾಂಗಳ ಕವಚ, ಬಂದುಕು, ಕೃಷಿ ಚಟುವಟಿಕೆಗಳಿಗೆ, ದೈನಂದಿನ ಜೀವನೋಪಾಯಕ್ಕೆ, ವ್ಯಾಪಾರಕ್ಕೆ ಸಂಬಂಧಿಸಿದಂತ ಕೆಲಸಗಳಿಗೆಲ್ಲಾ ಕಮ್ಮಾರರನ್ನೂ ಇತರೆ ಸಮುದಾಯದವರು ಅವಲಂಬಿಸಿದ್ದರು. ಆದರೆ ಬರುಬರುತ್ತ ಇದರ ಮಹತ್ವ ಕೆಲವೆ ಕೆಲವು ಕೆಲಸಗಳಿಗೆ ಸೀಮಿತವಾಗಿದೆ. ಈ ವೃತ್ತಿಯು ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಹೆಚ್ಚಾಗಿ ಉಳಿದುಕೊಂಡು ಬಂದಿದೆ.

ಕಮ್ಮಾರಿಕೆಯ ವೃತ್ತಿಯು ಕೃಷಿ ಕೆಲಸದಲ್ಲಿ ಮಾತ್ರ ಬಳಕೆಯಾಗುತ್ತಲಿದೆ. ಕೃಷಿಗೆ ಸಂಬಂಧಿಸಿದಂತೆ ಕುಡ, ಜಿಗಳಿ ಮಳೆ, ಕುಂಬದ ಕಟ್ಟು, ಕಳೆ ಕೀಳಲು ಬಳಸುವ ಕುರ್ಚಿಗಿ, ಕುಡುಗೋಲು, ಎತ್ತುಗಳಿಗೆ ಮೇವನ್ನು ಕತ್ತರಿಸಲು ಬೇಕಾದ ಕತ್ತರಿ, ಚಲಿಕೆ, ಗುದ್ದಲಿ, ಆರೆಕೋಲು ಈ ಎಲ್ಲಾ ಸಾಮಾನುಗಳನ್ನು ಕೃಷಿ ಚಟುವಟಿಕೆಗೆ ಕಮ್ಮಾರನ ಕಡೆಯಿಂದ ರೈತರು ಮಾಡಿಸಿಕೊಳ್ಳುತ್ತಿದ್ದರು. ಈ ಎಲ್ಲಾ ಸಾಮಾನುಗಳು ಆಧುನಿಕ ತಂತ್ರಜ್ಞಾನದಿಂದ ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ರೈತರು ಅವುಗಳನ್ನು ಖರೀದಿ ಮಾಡುವುದು ವಿರಳ. ಕುಡುಗೋಲು ಪ್ರಸ್ತುತ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇದನ್ನು ರೈತರು ಮಾರುಕಟ್ಟೆಯಲ್ಲಿ ಖರೀದಿ ಮಾಡುವುದಿಲ್ಲ. ಏಕೆಂದರೆ ಕುಡುಗೋಲನ್ನು ತಯಾರಿಸಲು ಕಮ್ಮಾರ ಕಬ್ಬಿಣವನ್ನು ಉಪಯೋಗಿಸುವುದಿಲ್ಲ. ಅದಕ್ಕೆ ಅರದ ಪಟ್ಟಿಗಳಿಂದ ಮಾತ್ರ ಕಮ್ಮಾರ ಕುಡುಗೋಲನ್ನು ತಯಾರು ಮಾಡಿ ರೈತರಿಗೆ ಕೊಡುತ್ತಾನೆ. ಅರದ ಪಟ್ಟಿಯಿಂದ ಕುಡುಗೋಲನ್ನು ಮಾಡುವುದರಿಂದ ಅದು

ಹರಿತವಾಗಿರುತ್ತದೆ. ಕೈಯಲ್ಲಿ ತೂಕವೆನಿಸುವುದಿಲ್ಲ. ರೈತ ಇಡೀ ದಿನವೆಲ್ಲ ಹೊಲಗಳಲ್ಲಿ ಬೆಳೆದ ಪೈರನ್ನು ಕೊಯ್ಯುವಾಗ ಅದು ತನ್ನ ಹರಿತವನ್ನು ಕಳೆದುಕೊಳ್ಳುವುದಿಲ್ಲ. ಹಾಗೂ ಕೊಯ್ಯುವ ಸಂದರ್ಭದಲ್ಲಿ ಆಯಾಸ, ದಣಿವು ಸಹ ಕಾಣುವುದಿಲ್ಲ. ಇಂತಹ ಉದ್ದೇಶಗಳಿಂದ ರೈತರೇ ಸ್ವತಃ ಅರದ ಪಟ್ಟಿ (ತುಂಡು)ಗಳನ್ನು ಕೊಟ್ಟು ಕತ್ತರಿ, ಮನೆಯಲ್ಲಿ ತರಕಾರಿ ಎಚ್ಚಲು ಇಳಿಗೆ ಮಣೆ, ಮಾಂಸವನ್ನು ಕತ್ತರಿಸುವ ಕತ್ತಿ, ಊರದೇವತೆಯ ಹಬ್ಬದ ಸಂದರ್ಭದಲ್ಲಿ ಪ್ರಾಣಿಯನ್ನು ಬಲಿಕೊಡುವಾಗ ಉಪಯೋಗಿಸುವ ಗಂಡುಕೊಡಲಿ, ಚಮ್ಮಾರ ಚಪ್ಪಲಿಗಳನ್ನು ತಯಾರಿಸಲು ಬೇಕಾದ ರೇಂಪಿಗೆ ಇತ್ಯಾದಿ ಉಪಕರಣಗಳನ್ನು ಕಮ್ಮಾರನಿಂದಲೇ ಮಾಡಿಸಿಕೊಳ್ಳುತ್ತಾರೆ. ಕಮ್ಮಾರನಿಗೂ ಯಾವ ಯಾವ ಉಪಕರಣಗಳು ಯಾವ ವಸ್ತುವನ್ನು ಬಳಸಿ ಮಾಡಿದರೆ ಅದು ಉಪಯೋಗಕ್ಕೆ ಬರುತ್ತೆ ಎಂಬ ಅಂಶ ಅವನಿಗೆ ಗೊತ್ತಿರುತ್ತದೆ. ಈ ಉದ್ದೇಶಗಳಿಂದ ಕೆಲವೊಂದು ಸಾಮಗ್ರಿಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಜನಸಮುದಾಯ ಅವುಗಳನ್ನು ಕಡಿಮೆ ಪ್ರಮಾಣದಲ್ಲಿ ಖರೀದಿಸುವರು.

ಕೃಷಿಯ ಕೆಲಸಕ್ಕೆ ಮುಖ್ಯವಾಗಿ ಕೂರಿಗೆ, ರಂಟೆ, ಚಕ್ಕಡಿ (ಬಂಡಿ) ಇತ್ಯಾದಿಗಳು ಬಹುಮುಖ್ಯವಾಗಿ ಬೇಕೆ ಬೇಕು. ಇವುಗಳನ್ನು ತಯಾರು ಮಾಡಲು ಬಡಿಗ ಹಾಗೂ ಕಮ್ಮಾರ ಇವರಿಬ್ಬರ ನೆರವಿನಿಂದ ಸಾಮಗ್ರಿಗಳು ರೂಪುಗೊಳ್ಳುತ್ತವೆ. ಬಹುಪಾಲು ಹಳ್ಳಿಗಳಲ್ಲಿ ಕಮ್ಮಾರಿಕೆ ಹಾಗೂ ಬಡಗೀತನ ಈ ವೃತ್ತಿಗಳನ್ನು ಒಬ್ಬರೇ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಕೂರಿಗೆ, ರಂಟೆ, ಚಕ್ಕಡಿ ಇತ್ಯಾದಿ ಸಾಮಗ್ರಿಗಳನ್ನು ತಯಾರಿಸುವ ಸಂದರ್ಭದಲ್ಲಿ ಏಕಕಾಲದಲ್ಲಿಯೇ ಎರಡು ಕೆಲಸಗಳು ನಡೆಯುತ್ತಿರುತ್ತವೆ. ಚಕ್ಕಡಿಗೆ ಸಂಬಂಧಿಸಿದಂತೆ ಕುಂಬದ ಕಟ್ಟು, ಅಚ್ಚು ತಯಾರು ಮಾಡುವುದು, ಚಕ್ರಕ್ಕೆ ಹಳಿಹಾಕುವುದು, ಚಕ್ರಕ್ಕೆ ಕೀಲ, ಕುಡ, ಕೂರಿಗೆ ಮಳಿ ಇವು ಎಲ್ಲವು ಕಮ್ಮಾರನಿಂದಲೇ ತಯಾರಾಗುತ್ತವೆ. ಇದರಿಂದಾಗಿ ಈ ಎರಡು ವೃತ್ತಿಗಳನ್ನು ನಿರ್ವಹಿಸುವವರಿಗೆ ಇಂತಹ ಕೆಲಸಗಳನ್ನು ಮಾಡಲು ರೈತರು ಕೊಡುತ್ತಾರೆ. ಪ್ರಸ್ತುತದಲ್ಲಿ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಮಾಡಿಸುವ ರೈತರ ಸಂಖ್ಯೆಯೇ ಕಡಿಮೆಯಾಗಿದೆ. ಇದಕ್ಕೆ ಹಲವು ಕಾರಣಗಳಿವೆ. ಮುಖ್ಯವಾಗಿ ರೈತರು ಹೋಲವನ್ನು ಹೂಳಲಿಕ್ಕೆ, ಬಿತ್ತಲಿಕ್ಕೆ ಯಂತ್ರೋಪಕರಣಗಳನ್ನು ಬಳಸುವರು. ಆದರೆ ಆರ್ಥಿಕವಾಗಿ ದುರ್ಬಲವುಳ್ಳ ರೈತರು ಕಟ್ಟಿಗೆಗಳಿಂದ ಉಪಕರಣಗಳನ್ನು ಮಾಡಿಸಲಿಕ್ಕೆ ಬೇಕಾದ ಕರಿಜಾಲೆ, ಚಿರಚಲ ಕಟ್ಟಿಗೆ ಸಿಗುವುದು ವಿರಳ. ಸಿಕ್ಕರೂ ಕೂಡ ಒಣಗಿದ ಕಟ್ಟಿಗೆ ಸಿಗುವುದಿಲ್ಲ. ಇಂತಹ ಅನೇಕ ಕಾರಣಗಳಿಂದ ಕೃಷಿಯ ಚಟುವಟಿಕೆಯಲ್ಲಿ ಬಡಗಿತನ ಇಂದು ಕಣ್ಮರೆಯಾಗುತಲಿದೆ.

ಬಂಡಿ ಮಾಡಿಸಲಿಕ್ಕೆ ಒಂದು ವರುಷ ಮುಂಚಿತವಾಗಿಯೇ ಅದಕ್ಕೆ ಬೇಕಾದ ಮರಗಳೆಲ್ಲವನ್ನು ಕಲೆಹಾಕಿ, ಒಣಗಿಸಿ ನಂತರ ಬಂಡಿ ಮಾಡಿಸಲಿಕ್ಕೆ ರೈತರು ಬಡಗಿಗೆ ಮುಟ್ಟನ್ನು ಕೊಡುತ್ತಿದ್ದರು. ಪ್ರಸ್ತುತದಲ್ಲಿ ಇದು ಸಾಧ್ಯವಾಗುತ್ತಿಲ್ಲ. ಕಮ್ಮಾರಿಕೆಯ ಕೆಲಸದಲ್ಲಿ ಬಂಡಿಗೆ ಸಂಬಂಧಿಸಿದಂತೆ ಚಕ್ರಕ್ಕೆ ಹಳಿ ಹಾಕುವುದು. ಅಚ್ಚು ಮೆಟ್ಟು ಎರುವುದು ಇವು ಎಲ್ಲವು ತುಂಬ ಕಷ್ಟಕರವಾದ ಕೆಲಸ ಅಷ್ಟೇ ವೃತ್ತಿಯಲ್ಲಿ ಪ್ರತಿಭೆಯುಳ್ಳವರಾಗಿರಬೇಕಾಗುತ್ತದೆ. ಅಚ್ಚು (ಎರಡು ಇಂಚು ದಪ್ಪ ಐದು ಅಡಿ ಉದ್ದದ

ಕಬ್ಬಿಣ) ಮೆಟ್ಟು ಎರುವ ಸಂದರ್ಭದಲ್ಲಿ ಅಚ್ಚನ್ನು ಕುಲುಮೆಯಲ್ಲಿಟ್ಟು ಕಬ್ಬಿಣ ಹದ ಬರುವ ತನಕ ಇದ್ದಿಲು ಹಾಗೂ ನೆಲ್ಲು ತೌಡನ್ನು ಕುಲುಮೆಯಲ್ಲಿ ಹಾಕಿ ಕಾಯಿಸುತ್ತಾರೆ. ಕಬ್ಬಿಣ ಕಾದು ಹದ ಬಂದ ಮೇಲೆ ಕಮ್ಮಾರ ಅಚ್ಚನ್ನು ಅಡಿಗಲ್ಲು ಮೇಲಿಟ್ಟು ತನ್ನ ಸಹಾಯಕರೊಂದಿಗೆ ಬಂಡಿಯ ಚಕ್ರದ ರಂಧ್ರಕ್ಕೆ ಸರಿಹೊಂದುವಂತೆ ಅಚ್ಚನ್ನು ಸುತ್ತಿಗೆಗಳಿಂದ ಬಡಿಸಿ ದುಂಡಗೆ ಮಾಡುತ್ತಾನೆ. ಐದು ಅಡಿ ಉದ್ದದ ಅಚ್ಚನ್ನು ಮಧ್ಯ ಎರಡುವರೆ ಅಗಲದಷ್ಟು ಬಿಟ್ಟು ಇನ್ನುಳಿದ ಎರಡು ಕಡೆಯ ಭಾಗಗಳನ್ನು ದುಂಡಾಗಿ ಮಾಡುತ್ತಾರೆ. ಅಂದರೆ ಅಚ್ಚಿನ ಎರಡು ತುದಿಯನ್ನು ಒಂದು ಇಂಚು ಸುತ್ತಳತೆ ಇರುವ ಆಕೃತಿಗೆ ತರುತ್ತಾರೆ. ಇದು ಪರಿಪೂರ್ಣ ಆಕೃತಿಗೆ ಬಂದ ಮೇಲೆ ಇದನ್ನು ಬಂಡಿಯ ಎರಡು ಚಕ್ರಗಳಿಗೆ ಜೋಡಿಸುವರು. ಇದು ಅಚ್ಚು ತಯಾರಿಸುವ ವಿಧಾನ. ಇದಕ್ಕೆ ದೈಹಿಕ ಶ್ರಮದ ಜೊತೆಗೆ ಪ್ರತಿಭೆಯು ಕೂಡ ಇರಬೇಕು. ಇದರ ಜೊತೆಗೆಯೇ ಏಕಾಗ್ರತೆಯು ಕೂಡ ಕಮ್ಮಾರನಲ್ಲಿ ಇರಲೇಬೇಕು. ಏಕಾಗ್ರತೆಗೆ ಮುಖ್ಯವಾಗಿ ಶಾಂತವಾದ ಪ್ರದೇಶ ಬೇಕು. ಆದರೆ ವೃತ್ತಿ ಸಂದರ್ಭದಲ್ಲಿ ಶಾಂತವಾದ ವಾತಾವರಣವಿರುವುದಿಲ್ಲ. ತಿದಿಯ ಶಬ್ದ, ರೈತರು ಕಮ್ಮಾರನೊಂದಿಗೆ ತಮ್ಮ ಉಪಕರಣದ ಬಗ್ಗೆ ಮಾತನಾಡುತ್ತಲೇ ಇರುತ್ತಾರೆ. ಇಂತಹ ಸಂದರ್ಭಗಳಲ್ಲಿಯೂ ಕಮ್ಮಾರ ರೈತರ ಜೊತೆಗೆ ಮಾತನಾಡುವ ಮೂಲಕವೇ ತನ್ನ ವೃತ್ತಿಗೂ ಕೂಡ ಪ್ರಾಶಸ್ತ್ಯವನ್ನು ಕೊಡುತ್ತಾನೆ. ಈ ವೃತ್ತಿಗೆ ಸಹಾಯಕರು ಬೇಕೆ ಬೇಕು. ಈ ಸಹಾಯಕರಿಂದ ಕಮ್ಮಾರ ಅಡಿಗಲ್ಲಿನ ಮೇಲೆ ಕಾದ ಕಬ್ಬಿಣವನ್ನು ಹಿಡಿದುಕೊಂಡು ತನ್ನ ಆಕೃತಿಗೆ ಬರುವ ತನಕ ಸಹಾಯಕರಿಗೆ ಕಬ್ಬಿಣದ ಮೇಲೆ ಚಮ್ಮಟಿಗೆ, ಸುತ್ತಿಗೆಯಿಂದ ಪೆಟ್ಟು, ಹಾಕಲಿಕ್ಕೆ ಹೇಳುತ್ತಿರುತ್ತಾನೆ. ಅದು ತನ್ನ ಆಕೃತಿಗೆ ಬಂದ ಮೇಲೆ ಪೆಟ್ಟನ್ನು ಹಾಕುವುದು ನಿಲ್ಲಿಸುವ ಸೂಚನೆ ಕೊಡುತ್ತಾನೆ.

ಕೃಷಿಯ ಕೆಲಸಕ್ಕೆ ಬೇಕಾದ ರಂಟೆಯ ಕುಳ, ತಾಳಿಗೆ ಹಾಕುವ ಬಳಿ, ಕುಡ ಇವುಗಳೆಲ್ಲವೂ ಮಾರುಕಟ್ಟೆಯಲ್ಲಿ ಲಭ್ಯವಿರುವುದಿಲ್ಲ. ಇಂತಹ ಉಪಕರಣಗಳನ್ನು ಕಮ್ಮಾರನಿಂದಲೇ ತಮ್ಮ ರಂಟೆ, ಕುಂಟೆಗೆ ಬೇಕಾದ ಅಳತೆಗೆ ಸರಿ ಹೊಂದುವಂತೆ ಮಾಡಿಸಿಕೊಳ್ಳುತ್ತಾರೆ. ರೈತ ತಾನು ಉಪಯೋಗಿಸುವ ಕಳೆವು (ಕಸ) ಕೀಳುವ ಕುರ್ಚಿಗಿಯಿಂದ ಹಿಡಿದು ಗೃಹಪಯೋಗಿ ಉಪಕರಣಗಳವರೆಗೂ ಕಮ್ಮಾರನ ಪ್ರತಿಭೆಯಿಂದ ಈ ಎಲ್ಲಾ ಉಪಕರಣಗಳು ಅರಳುತ್ತವೆ.

ಕಮ್ಮಾರ ಬಂಡಿಯ ಚಕ್ರಕ್ಕೆ ಹಳಿ ಹಾಕುವಾಗ ಅಂದರೆ ಕಬ್ಬಿಣ ಪಟ್ಟಿ ಹಾಕುವ ಸಂದರ್ಭದಲ್ಲಿ ಜಾಗ್ರತೆಯಿಂದ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಹಳಿಯನ್ನು ನೆಲದ ಮೇಲಿಟ್ಟು ಅದರ ಸುತ್ತಲು ಒಣಗಿದ ಸೆಗಣಿಯ ಕುಳ್ಳು, ಟೆಂಗಿನ ಕಾಯಿಯ ಸಿಪ್ಪೆ ಇಲ್ಲವೆ ನೆಲ್ಲಿನ ತೌಡು ಇವುಗಳಿಂದ ಹಳಿಯನ್ನು ಮುಚ್ಚಿ ಬೆಂಕಿಯನ್ನು ಹಚ್ಚಿ ಹಳಿಯನ್ನು ಚೆನ್ನಾಗಿ ಕಾಯಿಸುತ್ತಾರೆ. ಹಳಿಯು ಚೆನ್ನಾಗಿ ಕಾದಿದೆ ಎಂಬುದು ಖಚಿತ ಪಡಿಸಿಕೊಂಡು ತನ್ನ ಸಹಾಯಕರೊಂದಿಗೆ ಹಳಿಯನ್ನು ಇಕ್ಕಳದಿಂದ ಹಿಡಿದು ಬಂಡಿಯ ಚಕ್ರದ ಹೊರಭಾಗಕ್ಕೆ ಸೇರುಸುತ್ತಾನೆ. ಹಳಿಯನ್ನು ಹೊರಭಾಗಕ್ಕೆ ಸೇರಿಸುವ ಸಂದರ್ಭದಲ್ಲಿ ತುಂಬ ಅನುಭವಬೇಕಾಗುತ್ತದೆ. ಚಕ್ರಕ್ಕೆ ಹಳಿಯನ್ನು ಇಟ್ಟ ತಕ್ಷಣವೇ ಚಮ್ಮಟಿಗೆಯಿಂದ ಗಾಲಿಯ ಸುತ್ತಲು

ಹಳಿಯನ್ನು ಬಡಿಯುತ್ತಾರೆ. ಬಡಿಯುವ ಸಂದರ್ಭದಲ್ಲಿ ಚಕ್ರಕ್ಕೆ ನೀರನ್ನು ಹಾಕುತ್ತಿರಬೇಕು ಇದು ಸ್ವಲ್ಪ ತಡವಾದರೂ ಚಕ್ರ ಸುಟ್ಟು ಹೋಗುವ ಸಂಭವವಿರುತ್ತದೆ. ನೀರನ್ನು ಚಕ್ರಕ್ಕೆ ಹಿತಮಿತವಾಗಿ ಮಾತ್ರ ಹಾಕುತ್ತಿರಬೇಕು. ಜಾಸ್ತಿ ಹಾಕಿದರೆ ಹಳಿಯು ಚಕ್ರಕ್ಕೆ ಹೊಂದುವುದಿಲ್ಲ. ಗಾಲಿಯ ಸುತ್ತಲೂ ಹಳಿಯನ್ನು ಬಡಿಯುವ ಸಂದರ್ಭದಲ್ಲಿ ಬೆಸಗೆಹಾಕಿದ ಜಾಗಕ್ಕೆ ಚಮ್ಮಟಿಗೆಯಿಂದ ಬಡಿಯುವಂತಿಲ್ಲ ಬಡಿದರೆ ಬೆಸಗೆ ಬಿಡುವ ಸಾಧ್ಯತೆಗಳಿರುತ್ತವೆ. ಹಾಗೂ ಹಳಿಯನ್ನು ಇಕ್ಕಳದಿಂದ ಹಿಡಿದು ತರುವಾಗ ಕೈ ತಪ್ಪಿದರೆ ಅವರ ದೇಹದ ಯಾವುದೇ ಭಾಗಕ್ಕಾದರೂ ತಗುಲಿ ಸುಟ್ಟು ಹೋಗುವ ಸಾಧ್ಯತೆಗಳು ಹೆಚ್ಚು. ಈ ಎಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಕಮ್ಮಾರ ಇಂತಹ ಸೂಕ್ಷ್ಮ ಕೆಲಸಗಳನ್ನು ನಿರ್ವಹಿಸುತ್ತಾನೆ.

ಇಂತಹ ಕೆಲಸಗಳ ಜೊತೆಗೆಯೇ ಗೃಹಪಯೋಗಿ ಉಪಕರಣಗಳಾದ ಇಳಿಗೆ, ಚಮಚ, ಚುಚ್ಚಗ, ತಂಡಾಸು, ಊದಗೊಳವೆ ಹಾಗೂ ಮನೆಯ ಕೆಲಸಕ್ಕೆ ಸಂಬಂಧಿಸಿದಂತೆ ಜೋಕಾಲಿಕೊಂಡಿ, ನಗಾಸ, ಬಳಿಗಳು, ಬಾಗಿಲುಗಳಿಗೆ ಚಿಲಕ, ಅಗುಳಿ, ಮೊಳೆ ಇತ್ಯಾದಿ ಸಾಮಗ್ರಿಗಳು, ದೇವಾಲಯಗಳಿಗೆ ಗಂಟೆಗಳು, ದವಸ-ದಾನ್ಯಗಳನ್ನು ಅಳೆಯಲಿಕ್ಕೆ ಸೇರು, ಪಾವು, ಅಚ್ಚೆರುಪಾವು, ಪಡಿ ಇತ್ಯಾದಿಗಳು. ವ್ಯಾಪಾರಕ್ಕೆ ಸಂಬಂಧಿಸಿದಂತೆ ತಕ್ಕಡಿ, ಅಳತೆಯ ಕಲ್ಲು ಹೀಗೆ ಬೇರೆ ಬೇರೆ ಸಮುದಾಯದವರ ಕೆಲಸಗಳಿಗೆ ಸಂಬಂಧಿಸಿದಂತೆ ಸಾಮಗ್ರಿಗಳನ್ನು ಜನಸಮುದಾಯಕ್ಕೆ ಸರಿಯಾದ ಸಮಯಕ್ಕೆ ತಯಾರಿಸಿ ಕೊಡುತ್ತಿದ್ದರು.

ಈ ತರಹದ ಅನೇಕ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿರುವ ಕಮ್ಮಾರರಿಗೆ ಆಧುನಿಕ ಸಂದರ್ಭದಲ್ಲಿ ತಮ್ಮ ವೃತ್ತಿಗೆ ಪೆಟ್ಟು ಬಿದ್ದಿದೆ. ಇದರಿಂದ ವೃತ್ತಿಯನ್ನು ಕೈಬಿಟ್ಟು ನಗರಗಳಿಗೆ ಬೇರೊಂದು ಕೆಲಸವನ್ನು ಹುಡುಕಿಕೊಂಡು ಹೋಗುವ ಸಾಧ್ಯತೆಗಳು ಹೆಚ್ಚಾಗಿವೆ. ಪ್ರಸ್ತುತ ಸಂದರ್ಭದಲ್ಲಿ ರೈತರು ಹೊಲದಲ್ಲಿ ಬಿತ್ತಲಿಕ್ಕೆ ಬೇಕಾಗುವ ಎಲ್ಲ ಉಪಕರಣಗಳು ಆಧುನಿಕ ಯಂತ್ರೋಪಕರಣಗಳನ್ನು ಬಳಸುವುದರಿಂದ ಕಮ್ಮಾರರ ಹತ್ತಿರ ಕೆಲಸ ಮಾಡಿಸಿಕೊಳ್ಳುವವರ ಸಂಭವ ತುಂಬ ಕಡಿಮೆಯಾಗಿದೆ. ಅದರ ಜೊತೆಗೆಯೇ ಈ ಕೆಲಸಕ್ಕೆ ಮುಖ್ಯವಾಗಿ ಕಬ್ಬಿಣ ಕಾಯಿಸಲು ಬೇಕಾದಂತಹ ಕಚ್ಚಾ ಸಾಮಗ್ರಿಯಾದ ಇದ್ದಿಲು ಪ್ರಸ್ತುತದಲ್ಲಿ ಸಿಗುವುದು ವಿರಳ. ಇಂತಹ ಅನೇಕ ಸಮಸ್ಯೆಗಳಿಂದ ಈ ವೃತ್ತಿಯು ಅವಸಾನದ ಅಂಚಿನಲ್ಲಿ ಸಾಗುತ್ತಲಿದೆ.

ಕರಕುಶಲ ಕಲಾವಿದನಾದ ಕಮ್ಮಾರನಿಗೆ ಸಮಾಜದಲ್ಲಿ ಒಂದು ಗಣ್ಯಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿ ಗ್ರಾಮಗಳಲ್ಲಿ ಕಮ್ಮಾರನಿಲ್ಲ ಎಂಬ ಶಬ್ದವೇ ಇರುತ್ತಿರಲಿಲ್ಲ. ಬೆಳಗ್ಗೆ ಹಾಗೂ ಸಾಯಂಕಾಲ ಕಮ್ಮಾರಿಕೆಯ ಕೆಲಸ ತುಂಬಾ ಭರಾಟೆಯಿಂದ ಸಾಗುತ್ತಿತ್ತು. ಗ್ರಾಮಗಳಲ್ಲಿ ಕಮ್ಮಾರನ ಅಡಿಗಲ್ಲುನಿಂದ ಕಬ್ಬಿಣ ಬಡಿಯುವ ಶಬ್ದ ಕೇಳಿತು ಅಂದರೆ ಸಾಕು, ಎಲ್ಲ ರೈತರು ಕುಲುಮೆಗೆ ಬಂದು ಕಮ್ಮಾರನಿಂದ ಸಾಮಗ್ರಿಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಆದರೆ ಇಂದು ಆ ಒಂದು ದೃಶ್ಯ ಮರೆಯಾಗಿದೆ. ಅಲ್ಲದೆ ಕಮ್ಮಾರನ ಸಹಾಯಕ್ಕಾಗಿ ಜನ ಸಿಗುವುದು ಕಡಿಮೆಯಾಗಿದೆ. ಏಕೆಂದರೆ ಇದು ಶ್ರಮದಾಯಕವಾದ ಕೆಲಸ ದಿನಾಲೂ ಉರಿವ ಬೆಂಕಿಯ ಮುಂದೆಯೇ ಕುಳಿತು ಕೆಲಸ ಮಾಡಬೇಕು. ಇಷ್ಟೆಲ್ಲವಾದರೂ ರೈತರು ಕೊಡುವ ಹಣ ಕಮ್ಮಾರನಿಗೆ ಜೀವನ ಸಾಗಿಸಲು ಸಾಕಾಗುವುದಿಲ್ಲ. ಏಕೆಂದರೆ ಕಮ್ಮಾರನ ಸಹಾಯಕನಿಗೆ

ಹಾಗೂ ಇದ್ದಿಲು ತರುವುದಕ್ಕೆ ಹಣ ಕೊಡಬೇಕು. ಇವು ಎಲ್ಲವುಗಳಿಂದ ಉಳಿದ ಹಣದಲ್ಲಿ ಕಮ್ಮಾರ ಜೀವನ ಸಾಗಿಸಬೇಕು. ಇಂತಹ ಪರಿಸ್ಥಿತಿಯಲ್ಲಿ ಹೇಗೋ ಕೆಲಸವನ್ನು ನಿಭಾಯಿಸಿಕೊಂಡು ಮುಂದೆ ಸಾಗಬೇಕೆಂದುಕೊಂಡರೆ ಯಂತ್ರ ಜಗತ್ತು ಕಮ್ಮಾರನ ಕೆಲಸವನ್ನು ಮುಂದೆ ಸಾಗಲು ಬಿಡದು. ಹಾಗೂ ಯಂತ್ರದ ಸಾಮಾನುಗಳು ಕಡಿಮೆ ಬೆಲೆಯಲ್ಲಿ ಸಿಗುತ್ತವೆ. ಆದ್ದರಿಂದ ಯಾವುದೇ ಸಮಯ ಹಾಳುಮಾಡಿಕೊಳ್ಳದೆ ಮಾರುಕಟ್ಟೆಯಲ್ಲಿ ಸಾಮಗ್ರಿಯನ್ನು ಖರೀದಿ ಮಾಡಿಕೊಂಡ ರೈತ ತನ್ನ ಕೆಲಸವನ್ನು ನಿಭಾಯಿಸಿಕೊಳ್ಳುತ್ತಾನೆ. ಇಂತಹ ಅನುಕೂಲಗಳಿಂದ ರೈತ ಸಮುದಾಯಗಳು ಕಮ್ಮಾರನ ಹತ್ತಿರವೇ ಸುಳಿಯುವುದಿಲ್ಲ. ಕಮ್ಮಾರನ ಕೈ ಚಳಕದಿಂದ ತಯಾರಿಸಿದ ವಸ್ತುಗಳಿಗೆ ತಕ್ಕಂತೆ ಬೆಲೆ ಕೊಡುವುದು ತುಂಬ ವಿರಳ. ಇದರಿಂದ ಕೆಲಸಕ್ಕೆ ತಕ್ಕ ಪ್ರತಿಫಲಸಿಗದಂತಾಗಿದೆ. ಇಂತಹ ಅನೇಕ ಸಮಸ್ಯೆಗಳಿಂದ ತಮ್ಮ ವೃತ್ತಿಯನ್ನು ಬಿಟ್ಟು ಬೇರೊಂದು ವೃತ್ತಿಯಲ್ಲಿ ನಿರತರಾಗಿರುವುದನ್ನು ನಾವು ಇಂದು ಕಾಣಬಹುದಾಗಿದೆ.

೪.೧.೨. ಬಡಿಗೇರ

ಪಾಂಚಾಳ ಸಮುದಾಯದ ಒಂದು ವೃತ್ತಿಯಾದ ಬಡಗಿತನವು ಕರಕುಶಲ ಕಲೆಗಳಲ್ಲಿ ಒಂದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಯಂತ್ರಗಳ ಬಳಕೆಯಿಂದ ಬಡಗಿತನದ ಸಾಂಪ್ರದಾಯಿಕ ಕಲಾತ್ಮಕತೆಯನ್ನು ಕಳೆದುಕೊಂಡಿದೆ. ತನ್ನ ಪ್ರಾದೇಶಿಕ ಅನನ್ಯತೆಯನ್ನು ಕಳೆದುಕೊಂಡು ನಗರ ಸಂಸ್ಕೃತಿಗಳ ಬೆಳವಣಿಗೆಯ ಭಾಗವಾಗಿ ಈ ವೃತ್ತಿಯು ಮಾರ್ಪಡಾಗುತ್ತಲಿದೆ. ಕಟ್ಟಿಗೆಯ ಕೆಲಸವನ್ನು ನಿರ್ವಹಿಸುವರಿಗೆ ಸಾಮಾನ್ಯವಾಗಿ ಬಡಿಗೇರ, ಬಡಿಗ್ಯಾಣ್ಣ, ಬಡಿಗೇಪ್ಪ, ಆಚಾರಿ ಎಂದೆಲ್ಲ ಕರೆಯಲಾಗುತ್ತದೆ. "ಈ ಪದ ಸಂಸ್ಕೃತದ 'ವರ್ಧ' ಅಂದರೆ 'ಕತ್ತರಿಸು' ಎಂಬ ರೂಪ ವರ್ಧಕಿ>ವದ್ಧಕಿ>ಬಡ್ಡಕಿ(ಗಿ) ಬಡಗಿಯಾಗಿ ಬಳಕೆಗೆ ಬಂದಿರಬಹುದೆಂದು ಊಹಿಸಿದ್ದೂ ಜನ ಬಳಕೆಯ ಹಾಗೂ ಚಾರಿತ್ರಿಕ ಪ್ರಯೋಗಗಳನ್ನು ಗಮನಿಸಿದರೆ ಬಡಗಿ-ಬಡಿಗಿ (ಬಡ+ಕೀಗಿ) ಅಚ್ಚಕನ್ನಡ ರೂಪವೆಂದು ತೋರುತ್ತದೆ. ಅದು ಸಂಸ್ಕೃತಕ್ಕೆ ಭಾಷಾಂತರಾಗುವಾಗ ವರ್ಧಕಿ ಆಗಿರಬಹುದು ಅಥವಾ ಎರಡೂ ರೂಪಗಳು ಸ್ವತಂತ್ರವಾಗಿ ರೂಪಿತವಾಗಿರುವ ಸಾಧ್ಯತೆಗಳು ಇವೆ."[೬] ಇಲ್ಲಿ ಮುಖ್ಯವಾಗಿ ವರ್ಧದಿಂದ ಜನಭಾಷೆಯಲ್ಲಿ ಬಡಗಿಯಾಗಿರುವುದನ್ನು ಗಮನಿಸಿದರೆ ವರ್ಧರೂಪ ಬಡಗಿ ಎಂದು ಹೇಳುವುದರಲ್ಲಿ ನಿಜಾಂಶವಿದೆ. ಕಟ್ಟಿಗೆಯನ್ನು ಕತ್ತರಿಸಿ ಒಂದು ರೂಪ ಕೊಡುವುದಕ್ಕೆ ಬಡಗಿ ಎಂದು ಕರೆಯಬಹುದಾಗಿದೆ. ಶಾಸನ, ಜನಪದ ಹಾಗೂ ಸಾಹಿತ್ಯ ಕೃತಿಗಳಲ್ಲಿ ಬಡಗಿ, ಬಡಿಗೇರ, ಬಡಿಗಾರ, ಆಚಾರಿ ಎಂದು ಬಳಕೆಯಾಗಿವೆ. ಇವುಗಳಿಂದ ಬಡಗಿತನದ ಪ್ರಾಚೀನತೆಯ ಬಗ್ಗೆ ನಮಗೆ ಮಾಹಿತಿಸಿಗುತ್ತದೆ. ಹಲವಾರು ರಾಜಮನೆತನಗಳು ಬಡಗಿ ಕೆಲಸಕ್ಕೆ ಸಂಬಂಧಿಸಿದಂತೆ ದಾನದತ್ತಿಗಳನ್ನು ಬಿಟ್ಟಿದ್ದು ಶಾಸನಗಳಲ್ಲಿ ಉಲ್ಲೇಖಗಳಾಗಿವೆ. ಇಲ್ಲಿಯ ಬಡಗಿ ಕೆಲಸ ಹೊರದೇಶಗಳಲ್ಲಿ ಅಪಾರ ಬೇಡಿಕೆಯಿತ್ತು ಎಂದು ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ಬಾರ್ಬೊಸಾ ನೂನಿಜ್ ತಮ್ಮ ಬರಹಗಳಲ್ಲಿ ಹೇಳಿದ್ದಾರೆ. ಮೈಸೂರು ಅರಮನೆ, ಟಿಪ್ಪುಸುಲ್ತಾನನ ಅರಮನೆ ಮರದ ಕೆತ್ತನೆಗಳಾಗಿವೆ. ಹಾಗೂ ಅರಮನೆಗಳಲ್ಲಿ ಕಾಣಸಿಗುವ ಸಿಂಹಾಸನ, ತೂಗುಮಂಚ, ಮಲಗುವ ಮಂಚ, ಬಾಗಿಲುಗಳು, ಕುರ್ಚಿ ಇತ್ಯಾದಿ ಉಪಕರಣಗಳು ಅತ್ಯುತ್ತಮ ಕಲಾಮಾದರಿಗಳಾಗಿ ಕಾಣಲು ಬಡಗಿಯ ಪ್ರತಿಭೆಯ ಬಗ್ಗೆ ನಮಗೆ ತಿಳಿಯುತ್ತದೆ.

ಜನಸಮುದಾಯಗಳ ನಿಕಟವರ್ತಿಗಳಾದ ಬಡಿಗೇರರು ಕೃಷಿಗೆ, ಗೃಹೋಪಯೋಗಿ, ಸಾಂಸ್ಕೃತಿಕ ಹಾಗೂ ಮನೋರಂಜನ ವಸ್ತುಗಳನ್ನು ಜನಸಮುದಾಯಗಳಿಗೆ ತಮ್ಮ ಕೈಚಳಕದಿಂದ ಸಕಾಲದಲ್ಲಿ ತಯಾರಿಸಿಕೊಟ್ಟು ಮಹತ್ವದ ಸ್ಥಾನವನ್ನವಲಂಬಿಸಿಕೊಂಡಿದ್ದಾರೆ. ಈ ಪಾಂಚಾಳ ವೃತ್ತಿಗಳಲ್ಲಿ ಕಮ್ಮಾರಿಕೆ, ಬಡಗಿತನ ದೈಹಿಕ ಪರಿಶ್ರಮವುಳ್ಳ ಕೆಲಸಗಳಾಗಿವೆ. ಬಡಗಿತನಕ್ಕೆ ಪ್ರಾಚೀನ ಕಾಲದಲ್ಲಿ ಯಾವುದೇ ಯಂತ್ರೋಪಕರಣಗಳಿದ್ದಿಲ್ಲ. ಇಂತಹ ಸಂದರ್ಭಗಳಲ್ಲಿ ಬಡಗಿಯು ಮರಗಳನ್ನು ಕೊರೆದು, ಕೆತ್ತಿ ರೈತರಿಗೆ ಬೇಕಾದ ಪರಿಕರಗಳ ತಯಾರಿಕೆಗೆ ಬೇಕಾಗುವ ಅಳತೆಗೆ ತಂದುಕೊಂಡು ಕೆಲಸ ನಿರ್ವಹಿಸುತ್ತಿದ್ದಾನೆ.

ಬಡಗಿಯು ಇತರೇ ಸಮುದಾಯದವರಿಗೆ ಬೇಕಾದ ವಸ್ತು ತಯಾರಿಕೆಗೆ ಮೊದಲೇ ಇಂತಹ ಮರಗಳಿಂದ ನಿಮ್ಮ ವಸ್ತು ತಯಾರಿಸಿದರೆ ಅವುಗಳು ಉತ್ತಮ ಬಾಳಿಕೆ ಬರುತ್ತವೆ ಎಂದು ತಿಳಿಸುತ್ತಾರೆ. ಅಂದರೆ ಕೃಷಿ ಉಪಕರಣಗಳಿಗೆಲ್ಲ ಜಾಲಿ, ಕರಿಜಾಲಿ, ಬೇವು, ನೀಲಗಿರಿ ಮರಗಳನ್ನು ಗೃಹಪಯೋಗಿ ಹಾಗೂ ಸಾಂಸ್ಕೃತಿಕ ಉಪಕರಣಗಳಿಗೆ ಮಾವಿನ ಮರ, ಬೇವು, ತೇಗ, ಹೊನ್ನೇ, ಬೀಟೆ, ತೆಂಗು, ಅರಬೇವು, ನಂದಿ, ಬಾರಿ ಮರಗಳನ್ನು ಬಳಸುತ್ತಾರೆ. ಕೆಲಸವನ್ನು ಮಾಡುವ ಮೊದಲು ಈ ರೀತಿಯ ಪೂರ್ವಾಪರ ಅಂಶಗಳನ್ನು ಗ್ರಾಮೀಣ ಜನರಿಗೆ ತಿಳಿಸುತ್ತಾನೆ. ನಂತರ ಅವರು ತಂದಂತಹ ಮರದ ಕಟ್ಟಿಗೆಯಲ್ಲಿ ಯಾವ ಯಾವ ಉಪಕರಣಗಳು ರಚನೆಯಾಗಬಹುದು, ಮರದ ತಾಳಿಕೆ ಹೇಗಿದೆ, ತಯಾರಿಕೆಯ ವಸ್ತುವಿನ ಬಗ್ಗೆ ಮರದಲ್ಲಿ ರೂಪುಗೊಳ್ಳುತ್ತದೆಯೋ, ಇಲ್ಲವೋ ಎಂದು ಮೊದಲು ಖಚಿತಪಡಿಸಿಕೊಂಡು ಕೆಲಸಕ್ಕೆ ತೊಡಗುತ್ತಾನೆ. ಒಂದು ಪಕ್ಷ ಆ ಕಟ್ಟಿಗೆಯಲ್ಲಿ ರೈತ ಅಂದು ಕೊಂಡಂತೆ ಎಲ್ಲ ಸಾಮಗ್ರಿಗಳನ್ನು ತಯಾರಿಸಿಕೊಡುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ಬಡಗಿಯು ಮರದ ಉದ್ದ ಸುತ್ತಳತೆ ನೋಡಿದರೆ ಸಾಕು ಆ ಮರದಿಂದ ಇಂತಹ ಉಪಕರಣಗಳನ್ನು ಮಾಡಬಹುದು ಎಂದು ನಿಂತಲ್ಲೇ ಹೇಳುತ್ತಾನೆ. ಅಂತಹ ಪ್ರತಿಭೆ ಬಡಗಿಯಲ್ಲಿ ಅಡಗಿರುತ್ತದೆ.

ಆಧುನಿಕ ಯುಗದಲ್ಲಿ ಮರವನ್ನು ಯಂತ್ರದಿಂದ ಕೊಯ್ದು ಉಪಕರಣಗಳನ್ನು ತಯಾರು ಮಾಡುವುದರಿಂದ ಗಟ್ಟಿತನ ಉಳಿಯುವುದಿಲ್ಲ. ಯಂತ್ರದಿಂದ ಮರವನ್ನು ಕೊಯ್ಯುವ ಸಂದರ್ಭದಲ್ಲಿ ಸಾರಸಗಟವಾಗಿ ಕೊಯ್ಯಲಾಗುತ್ತದೆ. ಮರದ ಮಧ್ಯದಲ್ಲಿ ಬರುವ ಕೆಚ್ಚು ಗಟ್ಟಿತನ ಕಟ್ಟಿಗೆಯಲ್ಲಿ ಉಳಿದುಕೊಳ್ಳುವುದಿಲ್ಲ. ಏಕೆಂದರೆ ಮರವನ್ನು ಕೊಯ್ಯುವ ಸಂದರ್ಭದಲ್ಲಿ ಮರದ ಮಧ್ಯಭಾಗವನ್ನೇ ಸೀಳುವುದರಿಂದ ಅದರಲ್ಲಿರುವ ಕೆಚ್ಚು ಹೋಗಿ ಮೇಲ್ಭಾಗ ಮಾತ್ರ ಉಳಿದುಕೊಳ್ಳುವ ಸಾಧ್ಯತೆಗಳು ಹೆಚ್ಚು. ಆದುದರಿಂದ ಉಪಕರಣಗಳು ಗಟ್ಟಿಗೊಳ್ಳುವುದಿಲ್ಲ. ಆದರೆ ಬಡಗಿಯ ಕೈಯಿಂದ ತಯಾರಿಸುವಾಗ ಮರದ ವಿವರವನ್ನು ತಿಳಿಯುತ್ತಾನೆ. ಮರಕ್ಕೆ ಯಾವ ಯಾವ ಕಡೆಗೆ ಗಂಟು, ಸುಳಿ ಇವೆ ಯಾವ ಕಡೆಯಿಂದ ಅದನ್ನು ಕೊರೆದರೆ ನಮಗೆ ಗಟ್ಟಿಕಟ್ಟಿಗೆ ಸಿಗುತ್ತದೆ ಎಂಬೆಲ್ಲ ವಿಚಾರಗಳನ್ನು ಆಲೋಚನೆ ಮಾಡಿ ಮರವನ್ನು ಕೊಯ್ಯಲು ಪ್ರಾರಂಭಿಸುತ್ತಾನೆ.

ಮರಕೊಯ್ಯುವ ಯಂತ್ರಗಳಲ್ಲಿ ಬಹುತೇಕ ಕೆಲಸ ಮಾಡುವವರು ಪಾರಂಪರಿಕಾ ಅನುಭವವಿಲ್ಲದ ಜನಾಂಗದವರಾಗಿರುವುದರಿಂದ ಪಾಂಚಾಳರ ವೃತ್ತಿಗಳಿಗೆ ಸಂಬಂಧಿಸಿದ್ದ ವೃತ್ತಿ ಇಂದೂ ಆಧುನಿಕತೆಯ

ಪ್ರಭಾವದಿಂದಾಗಿ ಅನೇಕ ಸಮುದಾಯಗಳಿಗೆ ಹಂಚಿಹೋಗುವ ಸಾಧ್ಯತೆಗಳಿವೆ. ಇಂತಹ ಮಜಲುಗಳ ಮಧ್ಯೆ ಈ ಸಮುದಾಯ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ.

ಇದರಿಂದ ಮರದ ವಿವರ ತಿಳಿಯದೆ ನಿರ್ದಿಷ್ಟವಾಗಿ ನಮಗೆ ಬೇಕಾಗಿರುವ ಅಳತೆಯಲ್ಲಿ ಮರವನ್ನು ಕೊರೆದು ಕೊಡುತ್ತಾರೆ. ಇದರಿಂದ ನಮಗೆ ಕಟಿಗೆ ಗಟ್ಟಿ ಬರುವುದಿಲ್ಲ ಹಾಗೂ ವಸ್ತುಗಳು ಬಾಳಿಕೆ ಬರುವುದಿಲ್ಲ. ಬಡಗಿಯ ಮೂಲ ವೃತ್ತಿಯೆ ಬಡಗಿತನ ಆಗಿರುವುದರಿಂದ ಮರದ ನರನಾಡಿಗಳೆಲ್ಲವನ್ನು ತನ್ನ ಹನ್ನೆರಡನೆಯ ವಯಸ್ಸಿನಿಂದಲೇ ಮನೆಯ ಹಿರಿಯರ ಜೊತೆಗೆ ಕೆಲಸವನ್ನು ಅನುಕರಿಸುತ್ತ ಬಂದಿರುತ್ತಾನೆ. ಇದರಿಂದ ಮರದ ಬಗ್ಗೆ ಮಾಹಿತಿ ಬಡಗಿಯ ಹತ್ತಿರ ದೊರೆತಂತೆ ಬೇರೆ ಸಮುದಾಯದವರಿಗೆ ಅಷ್ಟೊಂದು ಗೊತ್ತಿರುವುದಿಲ್ಲ ಎಂದು ಹೇಳಬಹುದು.

ಬಡಗಿ ಸಮುದಾಯದವರು ಸಮಾಜದ ಜೊತೆ ಹಲವು ರೀತಿಯಲ್ಲಿ ನಿಕಟ ಸಂಬಂಧವನ್ನು ಹೊಂದಿರುತ್ತಾರೆ. ಈ ಸಮುದಾಯವು ಇತರೆ ಸಮುದಾಯವನ್ನು ಅವಲಂಬಿಸದೇ ಜೀವಿಸುವುದು ಕಷ್ಟ ಎನ್ನುವ ಹಾಗೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಅವರ ವೃತ್ತಿಯ ಬಗ್ಗೆ ಒಳಹೊಕ್ಕು ನೋಡಿದಾಗ ಈ ಅಂಶ ಕಂಡುಬರುತ್ತದೆ. ಜೀವನೋಪಾಯಕ್ಕಾಗಿ ವೃತ್ತಿಯನ್ನು ಅವಲಂಬಿಸಿದ ಇವರು ಇತರ ಸಮುದಾಯಗಳೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದಿರುವುದನ್ನು ಕಾಣಬಹುದು. ಅಂದರೆ ಬಡಗಿಯು ತನ್ನ ವೃತ್ತಿಯಿಂದ ಕುಂಬಾರನ ವೃತ್ತಿಗೆ ಬೇಕಾದ ತಿಗರಿ (ಚಕ್ರ -ಮಡಿಕೆಯನ್ನು ಮಾಡುವ ಸಾಧನ)ಯನ್ನು ಮಾಡಿಕೊಟ್ಟು ತಮ್ಮ ಗೃಹಪಯೋಗಕ್ಕೆ ಬೇಕಾದಂತಹ ಮಡಿಕೆ, ಗಡಿಗೆ, ಸ್ವಾರಿ ಮುಂತಾದವುಗಳನ್ನು ಪಡೆದುಕೊಳ್ಳುತ್ತಾರೆ. ಕೃಷಿಕರಿಗೆ ಬೇಕಾದಂತಹ ನೇಗಿಲು, ಕೂರಿಗಿ, ಕುಂಟೆ, ಬಂಡಿ ಇತ್ಯಾದಿಗಳನ್ನು ತಯಾರಿಸಿ ಅವರಿಂದ ದವಸ ದಾನ್ಯಗಳನ್ನು ಆಯಾ ರೂಪದಲ್ಲಿ ಪಡೆದುಕೊಳ್ಳುತ್ತಿದ್ದರು. ಚಮ್ಮಾರನಿಗೆ ಬೇಕಾದ ಗೃಹಪಕರಣಗಳನ್ನು ತಯಾರಿಸಿಕೊಟ್ಟು ತಮ್ಮ ಮನೆಯವರಿಗೆ ಬೇಕಾಗುವ ಪಾದರಕ್ಷೆಗಳನ್ನು ಪಡೆಯುವುದು. ಹೀಗೆ ಬಡಗಿ ಸಮುದಾಯವು ತನ್ನ ವೃತ್ತಿಯಿಂದ ಇತರ ಸಮುದಾಯಗಳೊಂದಿಗೆ ಒಪ್ಪಂದ ಮಾಡಿಕೊಂಡು ಕೆಲಸವನ್ನು ನಿರ್ವಹಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಬಡಗಿ ಸಮುದಾಯದವರಿಗೆ ಮಳೆಗಾಲದ ಸಂದರ್ಭದಲ್ಲಿ ಅತಿಹೆಚ್ಚಾಗಿ ಕೆಲಸಗಳು ಇರುತ್ತವೆ. ರೈತರು ತಮಗೆ ಬೇಕಾದ ಕೃಷಿ ಉಪಕರಣಗಳನ್ನು ಈ ಸಂದರ್ಭದಲ್ಲಿ ತಯಾರಿಸಿಕೊಳ್ಳುತ್ತಾರೆ. ಮಳೆ ಬಂತು ಎಂದರೆ ಬಡಿಗೇರ ಓಣಿಯಲ್ಲಿ ರೈತರ ಜಾತ್ರೆಯೇ ಅಲ್ಲಿ ನೆರದಿರುತ್ತದೆ. ನಮ್ಮ ಕುರಿಗಿ ಹಾಸಿಕೊಡು ನಮ್ಮದು ಮೇಳಿ ಕೆತ್ತಿಕೊಡು ಎಂದು ಬಡಗಿಯನ್ನು ದುಂಬಾಲು ಬಿದ್ದಿರುತ್ತಾರೆ. ಬಡಗಿ ಕೆಲಸದಲ್ಲಿ ಕನಿಷ್ಟ ನಾಲ್ಕರಿಂದ ಹತ್ತು ಮಂದಿಯ ತನಕ ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ. ಆ ಸಂದರ್ಭದಲ್ಲಿ ಬಿಡುವು ಎಂಬುದೇ ಬಡಗಿಗಳಿಗೆ ಸಿಗುವುದಿಲ್ಲ.

ಬಳ್ಳಾರಿ ಹಾಗೂ ದಾವಣಗೇರಿ ಜಿಲ್ಲೆಗಳಲ್ಲಿ ಭರಣಿ ಮಳೆ ಬಂದ ತಕ್ಷಣವೇ ಊರಿನ ಕುರುಬ ಸಮುದಾಯದ ಹಿರಿಯ ರೈತ ರಂಟೆ, ಕೂರಿಗೆ ಹಾಸಿಕೊಳ್ಳಲಿಕ್ಕೆ ಪೂಜಾ ಸಾಮಗ್ರಿಗಳೊಂದಿಗೆ ಕಮ್ಮಾರ,

ಬಡಿಗ ಕೆಲಸ ಮಾಡುವ ಸ್ಥಳಕ್ಕೆ ಹೋಗಿ ಬಡಗಿಯ ಹಾಗೂ ಕಮ್ಮಾರನ ವೃತ್ತಿ ಉಪಕರಣಗಳನ್ನು ಬಡಿಗನ ಕೈಯಿಂದ ಪೂಜೆ ಮಾಡಿಸಿ ಕೂರಿಗೆ ಹಾಸಲಿಕ್ಕೆ ಹಾಕುತ್ತಾನೆ. ಕಮ್ಮಾರನ ಹತ್ತಿರ ಕುಡ, ಕೂರಿಗೆ ಮಳಿಗಳನ್ನು ಮಾಡಲಿಕ್ಕೆ ಕೊಡುತ್ತಾನೆ. ಇದು ಮೊದಲ ಪೂಜೆ. ಕುರುಬರ ಪೂಜೆಯ ನಂತರ ಬಡಿಗ, ಕಮ್ಮಾರ ವ್ಯವಸಾಯೋಪಕರಣಗಳನ್ನು ತಯಾರಿಸಿದ ಮೇಲೆ ಇನ್ನುಳಿದ ರೈತ ಸಮುದಾಯದವರ ಉಪಕರಣಗಳನ್ನು ಹಾಸಿಕೊಡುತ್ತಾರೆ. ಈ ಪೂಜೆಗೆ ಹಳ್ಳಿಯ ಪ್ರತಿಯೊಂದು ಸಮುದಾಯದವರು ನೆರೆದಿರುತ್ತಾರೆ. ಬಡಿಗ ಕಮ್ಮಾರನಿಗೆ ಉಲುಪಿಯನ್ನು ಕೊಡುವರು. ಇದಕ್ಕೆ ಸಂಬಂಧಿಸಿದಂತೆ ಒಂದು ತ್ರಿಪದಿಯು ಹೀಗೆ ಉಲ್ಲೇಖವಾಗುತ್ತದೆ.

'ಗದ್ದರಿಸಿ ಮಳಿದೇವ ಬಿದ್ದಾನ ಭೂಮಿಗಿ
ಎದ್ದನೊಕ್ಕಲಿಗ ಬೆಳತನಕ | ಕೂರಿಗಿ ಕುಂಟಿ
ತಂದಾನ ಬಡಗಿ ಅರಮನಿಗಿ'[೪] ಎನ್ನುವಲ್ಲಿ ಮಳೆಯಿಂದ ಹುಟ್ಟಿಕೊಳ್ಳುವ ಕೃಷಿ ಬದುಕಿನ ಚಿತ್ರಣವನ್ನು ಕಟ್ಟಿ ಕೊಡುತ್ತದೆ. ಮಳೆಯಿಲ್ಲದೆ ವ್ಯವಸಾಯ ಹೇಗೆ ಸಾಧ್ಯವಿಲ್ಲವೊ ಹಾಗೆಯೇ ಬಡಿಗ ಇಲ್ಲದೆ ವ್ಯವಸಾಯವು ಸಾಧ್ಯವಿಲ್ಲ ಎನ್ನುವ ಅಂಶವು ಸರ್ವಜ್ಞನ ತ್ರಿಪದಿಯಿಂದ ವ್ಯಕ್ತವಾಗುತ್ತದೆ.

'ಕಂಚಿಯ ಫಲ ಲೇಸು ಮಿಂಚು ಮುಗಿಲಿಗೆ ಲೇಸು
ಕೆಂಚನ ಹೆಣ್ಣು ಇರಲೇಸು | ಊರಿಗೊಬ್ಬ
ಪಾಂಚಾಳ ಲೇಸು ಸರ್ವಜ್ಞ'

'ಹಡಗು ಗಾಳಿಗೆ ಲೇಸು ಗುಡುಗು ಮುಗಿಲಿಗೆ ಲೇಸು
ಒಡಹುಟ್ಟಿದಣ್ಣ ಇರಲೇಸು | ಊರಿಗೊಬ್ಬ
ಬಡಗಿಯೇ ಲೇಸು ಸರ್ವಜ್ಞ'[೫]

ಬಡಗಿಯು ಕೇವಲ ಕೃಷಿ ಉಪಕರಣಗಳ ತಯಾರಿಕೆಗೆ ಮೀಸಲಾಗಿರದೆ ಸಾಂಸ್ಕೃತಿಕ ಉಪಕರಣಗಳ ತಯಾರಿಕೆಯಲ್ಲಿ ತನ್ನ ಪ್ರತಿಭೆಯನ್ನು ವಿಸ್ತರಿಸಿರುವುದು ಕಂಡು ಬರುತ್ತದೆ. ಬಡಗಿಯ ವೃತ್ತಿಯ ವ್ಯಾಪ್ತಿಯನ್ನು ಗುರುತಿಸುವುದು ಕಷ್ಟಸಾಧ್ಯ. ವ್ಯವಸಾಯದ ಉಪಕರಣಗಳಿಂದ ಸಾಂಸ್ಕೃತಿಕ ಉಪಕರಣಗಳವರೆಗೂ, ಪ್ರತಿಯೊಂದು ಸಮುದಾಯಗಳಿಗೆ ಕೆಲಸ ಮಾಡಿಕೊಡುವಲ್ಲಿ ಬಡಗಿಯು ಪ್ರಮುಖನಾಗುತ್ತಾನೆ. ಪ್ರತಿಸಮುದಾಯಕ್ಕೂ ತಮ್ಮದೇ ಆದ ದೈವ, ನಂಬಿಕೆ, ಆಚರಣೆಗಳು ಇರುತ್ತವೆ. ಅವರಿಗೆ ಅನುಗುಣವಾಗಿಯೇ ದೈವ ಭಾವನೆಯಿಂದ ಗುರುತಿಸಲ್ಪಡುವ ವಸ್ತುಗಳನ್ನು ತಯಾರಿಸಿ ಕೊಡುತ್ತಾನೆ. ವಿವಿಧ ಸಮುದಾಯದವರು ತಮ್ಮ ತಮ್ಮ ದೇವರ ಉತ್ಸವಗಳನ್ನು ಆಚರಿಸಿಕೊಳ್ಳುತ್ತಾರೆ. ಈ ಉತ್ಸವಗಳಿಗೆ ಉತ್ಸವ ಮೂರ್ತಿಗಳ ಕೆತ್ತನೆಯನ್ನು ವಾಸ್ತು ಪ್ರಕಾರ ಆ ಸಮುದಾಯದ ಉತ್ಸವ ಮೂರ್ತಿ ಕೆತ್ತಿ ಕೊಡುವುದು ಬಡಗಿಯ ಕೆಲಸ. ಎಲ್ಲ ದೇವಸ್ಥಾನಗಳು ತನ್ನದೇ ಆದ ರಥವನ್ನು ಹೊಂದಿರುತ್ತವೆ. ಈ ರಥಗಳ ನಿರ್ಮಾಣದಲ್ಲಿ ಬಡಗಿಯೇ ಮುಖ್ಯ ಕಾರಣಕರ್ತ. ಬಡಗಿಯ ಕುಶಲ ಕೆಲಸಗಳಿಗೆ ಇಂದಿಗೂ ಸಾಕ್ಷಿಯಾಗಿ ದೇವಸ್ಥಾನದ ರಥಗಳನ್ನು ನೋಡಬಹುದು. ಪ್ರತಿ ವರ್ಷಕ್ಕೊಮ್ಮೆ

ನಡೆಯುವ ದೇವರ ಉತ್ಸವದಲ್ಲಿ ತೇರನ್ನು ಎಳೆಯಲಾಗುತ್ತದೆ. ತೇರನ್ನು ಎಳೆಯಬೇಕಾದರೆ ಬಡಗಿಯು ಇನ್ನೂ ಒಂದು ವಾರ ಉತ್ಸವ ಇರುವಾಗಲೇ ತೇರನ್ನು ನಿಲೆಹಾಕಿ, ಅಲಂಕರಿಸಿಕೊಟ್ಟ ಮೇಲೆಯೇ ಊರಿನ ದೈವದವರು, ಭಕ್ತಾದಿಗಳು ತೇರನ್ನು ಎಳೆಯುವುದು. ತೇರನ್ನು ನಿಲೆ ಹಾಕಲಿಕ್ಕೆ ಊರಿನ ದೈವದವರು ಬಡಗಿಯ ಮನೆಗೆ ಹೋಗಿ ಉಲುಪಿಯನ್ನು ಕೊಟ್ಟು ತೇರಿನ ಕೆಲಸವನ್ನು ನಿರ್ವಹಿಸಿಕೊಡಬೇಕೆಂದು ತಿಳಿಸಿ ಬರುತ್ತಾರೆ. ಇಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಒಂದು ಭಾಗವಾಗಿ ಬಡಗಿಯರು ಬೇಕೇ ಬೇಕು.

ದೇವಸ್ಥಾನಗಳಲ್ಲಿ ದೇವರ ಮೂರ್ತಿಗಳ ಉತ್ಸವದ ಸಂದರ್ಭದಲ್ಲಿ ಉಪಯೋಗಿಸುವ ಪಲ್ಲಕ್ಕಿಯು ಬಡಗಿಯ ಕೈಯಿಂದ ರಚನೆಯಾಗಿರುತ್ತದೆ. ಮನೆಗಳಲ್ಲಿ ದೇವರನ್ನು ಪೂಜಿಸಲಿಕ್ಕೆ ಮಂಟಪ, ಮಠಗಳಲ್ಲಿ ಸ್ವಾಮೀಜಿಗಳ ಆಸನಗಳು, ಗುಡಿಯ ದ್ವಾರಬಾಗಿಲು, ದೇವಿಯ ವಿಗ್ರಹಗಳು, ನಂದಿಕೋಲು, ದೀವಟಿಗೆ, ಛತ್ರಿ ಚಾಮರ ಹೀಗೆ ಸಾಂಸ್ಕೃತಿಕ ಉಪಕರಣಗಳು ಗ್ರಾಮೀಣ ಸಂಸ್ಕೃತಿಯ ಅನಿವಾರ್ಯ ಅಂಗವಾಗಿದ್ದವು. ಇಂತಹ ಸಾಂಸ್ಕೃತಿಕ ಉಪಕರಣಗಳನ್ನು ರಚಿಸಿಕೊಡುವಲ್ಲಿ ಬಡಗಿಯರು ಪ್ರಮುಖರಾಗಿದ್ದಾರೆ. ಹಿಂದಿನ ಬಡಿಗಿಗಳು ಕುಶಲಿಗಳೂ, ವಾಸ್ತು ವಿಜ್ಞಾನ ತಜ್ಞರೂ ಆಗಿದ್ದರು.[೬] ಪಾಂಚಾಳರು ಆಯ (ವಾಸ್ತುವಿಗೆ)ಕ್ಕೆ ಮಹತ್ವವನ್ನು ಕೊಡುತ್ತಾರೆ. ಯಾವುದೇ ಕೆಲಸವಿರಬಹುದು ಆಯವನ್ನು ನೋಡಿ ಕೆಲಸ ನಿರ್ವಹಿಸುವರು. ಉಪಕರಣಗಳನ್ನೇ ಮಾಡುವ ಸಂದರ್ಭದಲ್ಲಿ ಆಯ ಬರಲಿಲ್ಲವೆಂದರೆ ಆ ಉಪಕರಣವನ್ನು ತಯಾರಿಸುವುದಿಲ್ಲ. ಆಯವಿಲ್ಲದ ಉಪಕರಣ ಬಾಳಿಕೆ ಬರುವುದಿಲ್ಲ ಒಂದು ವೇಳೆ ಮಾಡಿದವರಿಗೆ ಕೆಡುಕು ಉಂಟಾಗುತ್ತದೆ. ಮನೆಯಲ್ಲಿ ನೆಮ್ಮದಿ ಇರುವುದಿಲ್ಲ ಇತ್ಯಾದಿ ಸಮಸ್ಯೆಗಳು ತಲೆದೊರುವವು ಎಂಬ ನಂಬಿಕೆಯಿಂದ ಗೃಹೋಪಯೋಗಿ, ಸಾಂಸ್ಕೃತಿಕ, ವ್ಯವಸಾಯ ಉಪಕರಣಗಳನ್ನು ತಯಾರಿಸಿದರು ಉಪಕರಣಕ್ಕೆ ಸಂಬಂಧಿಸಿದ ಅಳತೆಯಂತೆಯೇ (ವಾಸ್ತುವಿಗೆ ಅನುಗುಣವಾಗಿ) ಕೆಲಸವನ್ನು ನಿರ್ವಹಿಸುವರು.

ಮಾನವನಿಗೆ ಅವಶ್ಯಕವಾಗಿರುವ ಮನೋರಂಜನಾ ಉಪಕರಣಗಳ ತಯಾರಿಕೆಗೂ ಬಡಗಿಯ ಪಾತ್ರ ಪ್ರಮುಖವಾಗಿರುತ್ತದೆ. ಮನೋರಂಜನೆಯನ್ನು ತಾನು ಅನುಭವಿಸುವುದರ ಜೊತೆಗೆ ಸಮಾಜದ ಇತರ ಸಮುದಾಯದವರಿಗೂ ಮನೋರಂಜನೆಗೆ ಬೇಕಾದ ಉಪಕರಣಗಳನ್ನು ಮಾಡಿಕೊಡುವ ಜವಾಬ್ದಾರಿ ಈ ಬಡಿಗನದೇ. ಗ್ರಾಮೀಣ ಮಕ್ಕಳ ಆಟದ ಸಾಮಾನುಗಳಾದ ಆಟದ ಬಂಡಿ, ಚಿನ್ನಿಕೋಲು, ಬುಗರಿ ಹಾಗೂ ಕೋಲಾಟಕ್ಕೆ ಕೋಲು, ಸಂಗೀತಕ್ಕೆ ಸಂಬಂಧಿಸಿದ ಉಪಕರಣಗಳಾದ ಹಾರ್ಮೋನಿಯಂ, ತಬಲ, ಡೊಳ್ಳು, ಮದ್ದಲೆ, ತಂಬೂರಿ, ಮೃದಂಗ, ಶಹನಾಯಿ, ಕೊಳಲು, ಸಮಾಳ, ನಾಟಕಗಳಲ್ಲಿ ಪಾತ್ರ ಮಾಡುವ ವ್ಯಕ್ತಿಗೆ ಮುಖಕ್ಕೆ ಸಿಂಗಾರ, ದೇವರ ದ್ಯಾನ ಮಾಡಲು ಬೇಕಾದ ಭಜನೆ ಸಾಮಗ್ರಿಗಳು, ಮದುವೆಯ ಸಂದರ್ಭದಲ್ಲಿ ಬೇಕಾದ ಬಾಸಿಂಗಗಳು ಹೀಗೆ ಸಮುದಾಯದ ಪ್ರತಿಯೊಂದು ಚಟುವಟಿಕೆಯಲ್ಲಿ ಈ ಬಡಗಿಯ ಪಾತ್ರ ಅವಶ್ಯಕವಾಗಿರುತ್ತದೆ.

ಬಡಗಿಯು ತಯಾರಿಸುವ ಪೀಠೋಪಕರಣಗಳು ಬಳಸುವ ವರ್ಗಗಳ ಮೇಲೆ ನಿರ್ಧರಿಸಿ ತಯಾರಿಸಿಕೊಡುತ್ತಾನೆ. ಅಂದರೆ ಅವರ ಆರ್ಥಿಕತೆಯ ಸ್ಥಿತಿ-ಗತಿಗೆ ಅನುಗುಣವಾಗಿ ತಯಾರಿಸಿ ಕೊಡುತ್ತಾನೆ. ದ್ವಾರಬಾಗಿಲು, ರಥ, ಪಲ್ಲಕ್ಕಿ, ಕದ, ಮಂಚ, ದೇವರ ಮಂಟಪ, ಕುರ್ಚಿ, ತೂಗುಮಂಚ

ಇವುಗಳ ಕುಸರಿ ಕೆಲಸವನ್ನು ಮಾಡುತ್ತಾನೆ. ಇವುಗಳ ರಚನೆಗೆ ಅಧಿಕ ಬೆಲೆಯನ್ನು ಕೊಡಬೇಕಾಗುತ್ತದೆ. ಹಾಗೂ ಇಂತಹ ಉಪಕರಣಗಳಿಗೆ ಉಪಯೋಗಿಸುವ ಕಟ್ಟಿಗೆಯ ಬೆಲೆಯು ಅಧಿಕವಾಗಿರುತ್ತದೆ. ಇಂತಹ ಉಪಕರಣಗಳನ್ನು ಶ್ರೀಗಂಧ, ತೇಗ, ಹೊನ್ನೆ, ಬೀಟೆ, ಬಾರಿ ಕಟ್ಟಿಗೆಗಳಿಂದ ಮಾತ್ರ ಮಾಡಿ ಕೊಡುತ್ತಾರೆ.

ಮನೆಗಳಲ್ಲಿ ಪೂಜೆ ಮಾಡಲು ಎಕ್ಕಿಗೀಡದ ಬೇರಿನಿಂದ ಗಣೇಶನ ಮೂರ್ತಿ ತಯಾರಿಸಿಕೊಡುತ್ತಾರೆ. ಕುಸುರಿ ಕೆಲಸಗಳಲ್ಲಿ ಹೂಬಳ್ಳಿ, ದೇವರ ಚಿತ್ರಗಳು, ಆನೆ, ನವಿಲು, ಗಿಣಿ, ಹಂಸ, ಗರುಡ ಇಂತಹ ಪ್ರಾಣಿಗಳನ್ನು ಯಥಾವತ್ತಾಗಿ ಬಾಗಿಲು, ಕದ, ಟೇಬಲ್, ಮಂಟಪಗಳಲ್ಲಿ ಸ್ವಾಭಾವಿಕ ಮತ್ತು ಸಹಜ ಸೌಂದರ್ಯ ಬರಲು ಪೀಠೋಪಕರಣಗಳಲ್ಲಿ ಬರುವಂತೆ ರಚಿಸುತ್ತಾರೆ. ಮನೆಯ ಮಾಡಿಗೆ, ತೊಲೆ, ಕಂಬ, ಬೊದು, ನಾಗಂದಿಹಲಿಗೆ, ಹಣೆಬಿಲ್ಲೆ ಇವುಗಳಿಗೆಲ್ಲಾ ಕುಸುರಿ ಕೆಲಸವನ್ನು ಮಾಡಿರುವುದು ಕಾಣಬಹುದು. ಇವುಗಳಿಗೆ ಆಳವಾಗಿ ಕಟ್ಟಿಗೆಗಳನ್ನು ಕೊರೆಯುವುದು, ಕಂಬಗಳಿಗೆ ಜಂತ್ರವನ್ನು ಹಿಡಿಯುವುದು ಹಾಗೂ ಒಳ ಮುರಿತಗಳಿಂದ ಮನೆಯ ಒಳಂಗಣ ಸುಂದರವಾಗಿ ನಿರ್ಮಿಸುತ್ತಾರೆ. ಕೃಷಿಯ ಉಪಕರಣಗಳಾದ ಕುಂಟೆ, ರಂಟೆ, ಕೂರಿಗೆ, ಬಾರಿಕೋಲು, ಸೆಡ್ಡಿ ಇವುಗಳ ಮೇಲ್ಮೈಯಲ್ಲಿ ಬಡಗಿ ಕುಸುರಿಕೆಲಸ ಮಾಡಿ ಅವುಗಳಿಗೆ ಮೆರಗನ್ನು ಕೊಡುತ್ತಾನೆ. ಆಧುನಿಕ ಸಂದರ್ಭದಲ್ಲಿಯೂ ಕೂಡ ವೈವಿಧ್ಯಮಯ ಪೀಠೋಪಕರಣಗಳ ರಚನೆಯನ್ನು ಕಾಣುತ್ತೇವೆ. ಅತೀ ಹೆಚ್ಚಾಗಿ ಈ ಪೀಠೋಪಕರಣಗಳನ್ನು ಜಾಲಿ ಕಟ್ಟಿಗೆ, ಕರಿಜಾಲಿ ಕಟ್ಟಿಗೆಯನ್ನು ಉಪಯೋಗಿಸಿ ತಯಾರು ಮಾಡುವುದನ್ನು ಕಾಣಬಹುದಾಗಿದೆ. ಈ ಕೆಲಸದಲ್ಲಿ ಬಡಗಿ ತನಗೆ ಅನುಕೂಲವಾಗುವಂತೆ ಕೆಲಸಮಾಡುವಂತಿಲ್ಲ. ಇಲ್ಲಿ ಕೆಲಸ ಮಾಡಿಸುವ ಯಜಮಾನನ ಮಾರ್ಗದರ್ಶನದಲ್ಲಿ ತನ್ನ ಪ್ರತಿಭೆಯನ್ನು ತೋರಿಸಬೇಕಾಗುತ್ತದೆ. ಆದರೆ ಪ್ರಾಚೀನ ಕಾಲದಲ್ಲಿ ಬಡಗಿಯ ಮಾರ್ಗದರ್ಶನದಲ್ಲಿ ಉಪಕರಣಗಳು ತಯಾರಾಗುತ್ತಿದ್ದವು.

ಬಡಗಿಯ ಕೆಲಸ ಪ್ರಸ್ತುತ ಸಂದರ್ಭದಲ್ಲಿ ತುಂಬ ಸರಳತೆಯ ಕಡೆಗೆ ವಾಲಿದೆ. ಮೊದಲು ಮರವನ್ನು ತಾನೇ ಕೊಯ್ದು ಕೆತ್ತಿ ಉಪಕರಣಗಳನ್ನು ಮಾಡಿ ಕೊಡಬೇಕಾಗಿತ್ತು. ಆದರೆ ಯಂತ್ರೋಪಕರಣಗಳ ಆಗಮನದಿಂದ ಬಡಗಿಯ ದೈಹಿಕ ಶ್ರಮ ನಿಂತಿದೆ. ಮರವನ್ನು ಕೊಯ್ಯಲು ಸಾಮಿಲ್ (ಮರ ಕೊಯ್ಯುವ ಯಂತ್ರ)ಗಳಿವೆ. ಕಟ್ಟಿಗೆಯನ್ನು ನಯಗೊಳಿಸಲು ಪ್ಲೇನಿಂಗ್ ಮಿಷನ್‌ಗಳು ಬಂದಿವೆ. ಕಟ್ಟಿಗೆಯಲ್ಲಿ ಉಗುಲು ತೊಡಲು ಡ್ರಿಲ್ ಮಿಷನ್‌ಗಳಿವೆ. ಕದಗಳ ಹಲಗೆಯನ್ನು ಕಟಿಂಗ್ ಮಾಡಲು ಡೀಪ್ ಮಿಷನ್‌ಗಳಿವೆ. ಕಟ್ಟಿಗೆಗೆ ಮೆರಗನ್ನು ಕೊಡಲು ಗೋಲು, ಕಾರ್ನಿಸ್, ಚಡಿ ಮುಂತಾದ ವಿನ್ಯಾಸಗಳನ್ನು ಪ್ಲೇನಿಂಗ್ ಮಿಷನ್‌ನಿಂದಲೇ ಮಾಡಿಕೊಳ್ಳಬಹುದು. ಟೇಬಲ್ ಕಾಲು, ಮಂಚದ ಕಾಲು, ಟೀಫಾಯಿ ಕಾಲುಗಳನ್ನು ಕುಂಡಲಿ ಆಕಾರ, ದೀಪದ ಸ್ತಂಭದ ಆಕಾರ, ಹೂಜಿಯ ಆಕಾರ ಮಾಡಲು ಟರ್ನಿಂಗ್ ಮಿಷನ್‌ಗಳಿವೆ. ಹಲಗೆಯನ್ನು ಒಂದಕ್ಕೊಂದು ಕೂಡಿಸಲು ವೈಸ್‌ಗಳಿವೆ. ಹೀಗೆ ಅನೇಕ ರೀತಿಯಲ್ಲಿ ಬಡಗಿಯು ಉಪಕರಣಗಳನ್ನು ತಯಾರಿಸಲಿಕ್ಕೆ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ. ತನ್ನ ಪ್ರತಿಭೆಯ ಕೈಚಳಕ, ದೈಹಿಕ ಶ್ರಮದಿಂದ ಮುಂದುವರೆದ ಬಡಗಿಯ ವೃತ್ತಿ ಪ್ರಸ್ತುತದಲ್ಲಿ ಯಂತ್ರಗಳ ಸಹಾಯದಿಂದ ಮಾತ್ರ ಸಾಧ್ಯವೆನ್ನುವಂತೆ ಕಣ್ಣಿಗೆ ಕಾಣಿಸುತ್ತದೆ.

ಎಷ್ಟೋ ಮಾರ್ಪಾಡುಗಳಾದರೂ ಅದು ಬಡಗಿಯ ಪ್ರತಿಭೆಯಿಂದಲೇ ಸಾಧ್ಯ. ಬಡಗಿಯು ಆಧುನಿಕ ಸಮಾಜಕ್ಕೆ ತಕ್ಕಂತೆ ತನ್ನ ಉಪಕರಣಗಳನ್ನು ಬದಲಾಯಿಸುತ್ತ ಸಾಮಗ್ರಿಗಳನ್ನು ತಯಾರು ಮಾಡಿಕೊಡಲು ಮುಂದಾಗಿದ್ದಾನೆ. ಈ ವೃತ್ತಿಯು ಅವನಿಗೆ ತಲತಲಾಂತರದಿಂದ ಬಂದುದಾಗಿದೆ. ಆದ್ದರಿಂದ ಬಡಗಿಯ ಕೈಚಳಕಕ್ಕೆ ಅನುಭವ ವೃತ್ತಿಪರತೆ ಕರಕುಶಲತೆಯ ಮಾನದಂಡ ಕಲ್ಪನಾ ವಿಲಾಸದ ಲಹರಿಯಲ್ಲಿ ತನ್ನ ಪ್ರತಿಭೆಯನ್ನು ಕಟ್ಟಿಗೆಯ ಮೇಲೆ ಅರಳಿಸುವಲ್ಲಿ ಪಳಗಿದವನಾಗಿದ್ದಾನೆ.

ಬಡಗಿಗಳು ಸಂಭಾವನೆಗಾಗಿಯೆ ಎಂದೂ ಕೆಲಸ ಮಾಡಿದವರಲ್ಲ ಎಂದು ಶಾಸನಗಳ ಆಧಾರದ ಮುಖಾಂತರ ತಿಳಿಯುತ್ತದೆ. ಸಮಾಜದ ಒಂದು ಭಾಗವಾಗಿ ಕೆಲಸ ನಿರ್ವಹಿಸಿ ಅವರು ಕೊಟ್ಟಂತಹ ದವಸಧಾನ್ಯಗಳನ್ನು ಸ್ವೀಕರಿಸಿ ಜೀವನ ನಡೆಸಿದವರೆಂಬುದು ತಿಳಿದು ಬರುತ್ತದೆ. ಆಧುನಿಕತೆಯ ಸಂದರ್ಭದಲ್ಲಿ ವೃತ್ತಿಯ ಬೇಡಿಕೆ ಹೆಚ್ಚಿದಂತೆಲ್ಲಾ ಗೃಹೋಪಯೋಗಿ ಉಪಕರಣಗಳ ತಯಾರಿಕೆಯಿಂದ ಅವರ ಕೆಲಸದ ಪ್ರತಿಫಲವಾಗಿ ಆಯತನ, ಆಯಗಾರಿಕೆ ಮರೆಯಾಗಿ ಕೆಲಸಕ್ಕೆ ತಕ್ಕಂತೆ ಹಣವನ್ನು ಪಡೆಯುವುದು ಪ್ರಚಲಿತಕ್ಕೆ ಬಂದಿದೆ. ಈ ವೃತ್ತಿಯನ್ನು ಇತರೇ ಸಮುದಾಯದವರು ಅನುಸರಿಸಿ ಕೆಲಸ ಮಾಡುತಲಿದ್ದಾರೆ. ಪರಂಪರಾಗತವಾಗಿ ವೃತ್ತಿ ಮುಂದುವರೆಸಿಕೊಂಡು ಬಂದ ಬಡಗಿಯ ಕೆಲಸದ ಮೆರಗು ವೈವಿಧ್ಯತೆಯಿಂದ ಕೂಡಿರುತ್ತದೆ. ಆದರೆ ಇತರೇ ಸಮುದಾಯದವರು ಅನುಸರಿಸಿ ಮಾಡುತಲಿರುವ ಕೆಲಸ ವೈವಿಧ್ಯತೆಯಿಂದ ಕೂಡಿರುವುದಿಲ್ಲ ಹಾಗೂ ಅವುಗಳಿಗೆ ಆಯ ಇತ್ಯಾದಿ ಶಾಸ್ತ್ರಗಳಿಲ್ಲದೇ ರಚನೆಯಾಗಿರುತ್ತವೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಡಗಿ ಸಮುದಾಯದವರು ಹಾಗೂ ಕೆಲಸ ಮಾಡಿಸಿಕೊಳ್ಳುವ ಇತರೆ ಸಮುದಾಯದವರು ಮಾಹಿತಿಯನ್ನು ನೀಡಿದ್ದಾರೆ.

ಯಂತ್ರೋಪಕರಣಗಳ ಸಹಾಯದಿಂದ ಏನೆಲ್ಲವೂ ಸಾಧ್ಯವಾಗುತ್ತದೆ ಎನ್ನುವುದಕ್ಕೆ ಬಡಗಿ ತಯಾರಿಸುತ್ತಿದ್ದ ಉಪಕರಣ ಹಾಗೂ ವಸ್ತುಗಳೆಲ್ಲವು ಯಂತ್ರೋಪಕರಣಗಳ ಭರಾಟೆಯಲ್ಲಿ ನಿಧಾನವಾಗಿ ಮಾಯವಾಗುತಲಿವೆ. ಬಡಗಿಯು ಕಟ್ಟಿಗೆಯನ್ನು ವೀಕ್ಷಿಸುವಲ್ಲಿ ತನ್ನದೇ ಆದ ವಿಧಾನವನ್ನು ಉಪಯೋಗಿಸುವುದನ್ನು ಕಾಣಬಹುದು. ಕೆಲವು ಕಟ್ಟಿಗೆಯನ್ನು ವಾಸನೆಯಿಂದ, ಕೆಲವನ್ನು ಬಣ್ಣ, ಎಳೆಗಳಿಂದ, ಕೆಲವನ್ನು ಕೆಚ್ಚುಗಳಿಂದ ನೋಡಿ ಇದು ಇಂತಹ ಮರದ ಕಟ್ಟಿಗೆ ಎಂದು ಹೇಳುತ್ತಾರೆ. ಇದು ಅವರಿಗೆ ಜನ್ಮಾಂತರದಿಂದ ಬಂದ ಕಲೆ ಆದುದರಿಂದ, ಕಟ್ಟಿಗೆಯ ಜೊತೆ ಹೆಚ್ಚು ಒಡನಾಟ ಇರುವುದರಿಂದ ಇದು ಇಂತಹ ಮರದ ಕಟ್ಟಿಗೆ ಎಂದು ಸುಲಭವಾಗಿ ಹೇಳಿಬಿಡುತ್ತಾರೆ.

ಮನೆಯ ಬಳಕೆಗೆ ಕೆಲವೊಂದು ಮರಗಳನ್ನು ಬಳಸುವುದಿಲ್ಲ. ಅವುಗಳನ್ನು ಕೃಷಿ ಉಪಕರಣಗಳಿಗೆ ಮಾತ್ರ ಬಳಸುತ್ತಾರೆ. ಉದಾಹರಣೆಗೆ ಚಿರ್ಚಲ ಮರ, ಹುಣಸೆಮರ ಇತ್ಯಾದಿ. ಮನೆಯ ಬಾಗಿಲ ಹೊಸ್ತಿಲಿಗೆ ಕರಿಜಾಲಿ, ಬಾರಿ, ಬೇವು, ಜಾಲಿ ಕಟ್ಟಿಗೆಗಳನ್ನು ಮಾತ್ರ ಹೊಸ್ತಿಲಿಗೆ ಉಪಯೋಗಿಸುವರು. ಅರಬೇವಿನ ಕಟ್ಟಿಗೆಯನ್ನು ಡೊಳ್ಳು, ತಮಟೆ, ತಪ್ಪಡೆಗಳಿಗೆ ಉಪಯೋಗಿಸುವರು. ಹೀಗೆ ಮರಗಳ ಸ್ವಭಾವಕ್ಕೆ ಅನುಗುಣವಾಗಿ ಬಡಗಿಯು ಉಪಕರಣ ಹಾಗೂ ವಸ್ತುಗಳಿಗೆ ಕಟ್ಟಿಗೆಯನ್ನು ಉಪಯೋಗಿಸುತ್ತಾನೆ. ಚಿರ್ಚಲ ಮರ, ಹುಣಸೆ ಮರ, ತೆಂಗಿನಮರ ಇವುಗಳನ್ನು ಮನೆಯ ಬಳಕೆಗೆ ಉಪಯೋಗ ಮಾಡುವುದಿಲ್ಲ. ಇವುಗಳನ್ನು ಮನೆಗೆ ಉಪಯೋಗಿಸಬಾರದು. ಮನೆಯ ಹೊರಗಡೆಯ ಸಾಮನುಗಳಿಗೆ

ಮಾತ್ರ ಉಪಯೋಗಿಸುತ್ತಾರೆ. ಬಂಡಿಯ ಚಕ್ರಕ್ಕೆ, ಏಕೆಂದರೆ ಈ ಚಿರ್ಚಲ ಕಟ್ಟಿಗೆಯು ಯಾವಾಗಲೂ ತಿರುಗುತ್ತ ಬಳಕೆಯಾಗಬೇಕು ಎಂಬ ನಂಬಿಕೆ. ಹುಣಸೆ ಮರದಲ್ಲಿ ದೆವ್ವಗಳು ವಾಸವಾಗಿರುತ್ತವೆ ಅದಕ್ಕೆ ಅವನ್ನು ಮನೆಗೆ ಬಳಸಬಾರದು. ಕಟ್ಟಿಗೆಯನ್ನು ಕುರಿತ ಇಂತಹ ನಂಬಿಕೆಗಳು ಬಡಗಿಯಲ್ಲಿ ಉಳಿದುಕೊಂಡು ಬಂದಿವೆ. ಬನ್ನಿಮರ, ಬಿಲ್ವಪತ್ರೆ ಮರ ಇವುಗಳಿಂದಲೂ ಉಪಕರಣ, ವಸ್ತುಗಳನ್ನು ಮಾಡುವುದಿಲ್ಲ. ಏಕೆಂದರೆ ಬನ್ನಿಮರವು ಕಾಳಿಕದೇವಿಯ ಸ್ವರೂಪ ಆದ್ದರಿಂದ ತಮ್ಮ ದೇವತೆಯನ್ನು ಕೊಂದ ಹಾಗೆ ಎಂಬ ಉದ್ದೇಶದಿಂದ ಬನ್ನಿಮರವನ್ನು ಯಾವುದಕ್ಕೂ ಬಳಸುವುದಿಲ್ಲ. ಬಿಲ್ವಪತ್ರೆಯು ಶಿವನ ಸ್ವರೂಪ ಎಂದು ತಿಳಿದು ಇದರಿಂದಲೂ ಉಪಕರಣ, ವಸ್ತುಗಳನ್ನು ತಯಾರಿಸುವುದಿಲ್ಲ.

ಮಲೆನಾಡು ಪ್ರದೇಶಗಳಲ್ಲಿ ಅತಿ ಹೆಚ್ಚಾಗಿ ಮಳೆ ಬೀಳುವುದರಿಂದ ಮಾಳಿಗೆ ಮನೆಗಳ ಸಂಖ್ಯೆ ಕಡಿಮೆ. ಇಲ್ಲಿ ಹಂಚಿನ ಮನೆಗಳೇ ಬಹುತೇಕವಾಗಿರುತ್ತವೆ. ಹಂಚನ್ನು ಮನೆಯ ಮಾಳಿಗೆಗೆ ಹಾಕಲು ತೀರು, ರೀಪಾರ್ ಬೇಕೇ ಬೇಕು. ಈ ತೀರುಗಳಿಗೆ ಸುಬಬುಲ್ ಮರ, ನೀಲಗಿರಿ ಮರ, ಮಾವಿನ ಮರಗಳನ್ನು ಅತಿ ಹೆಚ್ಚಾಗಿ ಬಳಕೆ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿಯ ಮನೆಗಳಿಗೂ ಬೇವು, ಬೀಟೆ, ನೀಲಗಿರಿ, ತೇಗ, ಸುಬಬುಲ್ ಇತ್ಯಾದಿ ಮರಗಳನ್ನು ಮನೆಯ ತೀರು, ಬಾಗಿಲು, ಕಿಟಕಿ, ಕದಗಳಿಗೆ ಉಪಯೋಗಿಸಲಾಗುತ್ತದೆ. ಆಯಾ ಹವಾಗುಣಕ್ಕೆ ಅನುಗುಣವಾಗಿ ಬಡಗಿ ಕಟ್ಟಿಗೆಗಳನ್ನು ಉಪಯೋಗಿಸಿ ಕೆಲಸ ನಿರ್ವಹಿಸುತ್ತಾನೆ.

ಆಧುನಿಕತೆಗೆ ಜನತೆ ತಮ್ಮನ್ನು ತೊಡಗಿಸಿಕೊಂಡ ಮೇಲೆ ಮಾರುಕಟ್ಟೆಯಲ್ಲಿ ಸುಲಭ ದರಕ್ಕೆ ಲಭಿಸುವ ಸ್ಟೀಲ್ ಸಾಮಗ್ರಿಗಳನ್ನು ಉಪಯೋಗಿಸಲಿಕ್ಕೆ ಪ್ರಾರಂಭಿಸಿದ್ದಾರೆ. ಮನೆಯ ಮೇಲ್ಛಾವಣಿಗೆ ಕಬ್ಬಿಣದ ಸಲಾಕಿ, ಸೀಮೆಂಟನ್ನು ಉಪಯೋಗಿಸುವದರಿಂದ ಬಡಗಿಯ ಕೆಲಸ ಮಾಯವಾಗುತ್ತಲಿದೆ. ಬಡಗಿಯು ತನ್ನ ಕೆಲಸಕ್ಕೆ ಮುಖ್ಯವಾಗಿ ಮರಗಳನ್ನೇ ಅವಲಂಬಿಸಿರುವನು ಆದರೆ ಅರಣ್ಯ ಇಲಾಖೆಯವರು ಮರಗಳನ್ನು ಕಡಿಯುವುದಕ್ಕೆ ನಿರ್ಬಂಧ ಮಾಡಿರುವುದರಿಂದ, ಬಡಗಿತನ ಕೆಲಸ ಮಾಡಲು ಸಂಪನ್ಮೂಲದ ಕೊರತೆಯಿಂದಾಗಿ ಪ್ರಸ್ತುತದಲ್ಲಿ ಬಡಗಿ ವೃತ್ತಿ ಮೂಲೆಗುಂಪಾಗಿದೆ. ಬಡಗಿತನದ ಹಳೇಯ ಪದ್ಧತಿ ನಶಿಸುತ್ತ ಆಧುನಿಕರಣದಿಂದ ಕೆಲವು ಉಪಕರಣಗಳು ಮಾತ್ರ ಹೊಸ ಹೆಸರುಗಳಿಂದ ಚಾಲ್ತಿಯಲ್ಲಿ ಬಂದಿವೆ. ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಪಾಂಚಾಳರಲ್ಲದೆ ಇತರೆ ಸಮುದಾಯದವರು ಆರ್ಥಿಕವಾಗಿ ಸಬಲವಾಗಿರುವರು ಬಡಗಿತನಕ್ಕೆ ಬೇಕಾದ ಎಲ್ಲ ಯಂತ್ರೋಪಕರಣಗಳನ್ನು ಖರೀದಿ ಮಾಡಿ ವೃತ್ತಿಯನ್ನು ಕೈಗೊಂಡಿದ್ದಾರೆ. ಪಾಂಚಾಳರು ಆರ್ಥಿಕ ಪ್ರಗತಿಯಲ್ಲಿ ಹಿಂದುಳಿದವರು ಬಡಗಿತನದ ಆಧುನಿಕ ಯಂತ್ರೋಪಕರಣಗಳನ್ನು ಖರೀದಿ ಮಾಡಲು ಆಗದ ಕಾರಣ ಬೇರೆ ವೃತ್ತಿಗಳನ್ನು ಅವಲಂಬಿಸುತ್ತ ಇರುವುದನ್ನು ಕಾಣಬಹುದಾಗಿದೆ.

೪.೧.೩.ಅಕ್ಕಸಾಲಿಗ

ಪಾಂಚಾಳ ಸಮುದಾಯದಲ್ಲಿ ಒಂದು ವೃತ್ತಿಯಾದ ಅಕ್ಕಸಾಲಿಯೂ ಕರಕುಶಲ ವಸ್ತುಗಳನ್ನು ತಯಾರಿಸುವರಲ್ಲಿ ಪ್ರಮುಖರಾಗಿದ್ದಾರೆ. ಚಿನ್ನ, ಬೆಳ್ಳಿ, ತಾಮ್ರದಿಂದ ಆಭರಣಗಳು, ಸಿಂಹಾಸನ, ಕಿರೀಟ

ಇತ್ಯಾದಿ ವಸ್ತುಗಳನ್ನು ತಯಾರಿಸುವವರಿಗೆ "ಅಕ್ಕಸಾಲಿಗ" ಎಂದು ಕರೆಯಲಾಗುತ್ತದೆ. ಅಕ್ಕಸಾಲಿ ಎಂಬ ಪದವು 'ಅರ್ಕ' ಸಾಲೆಯ ಮೂಲಪದ, ಅರ್ಕ ಎಂದರೆ ಅರಗು, ಅರಗು ಕರಗಿಸುವ, ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಸಾಲೆಯೆ ಅರ್ಕಸಾಲೆ. ಕೌಟಿಲ್ಯನು ಬಂಗಾರದ ಒಡವೆ ಮಾಡುವ ಶಾಲೆಗೆ ಅಕ್ಷರಶಾಲೆ ಎಂದಿದ್ದಾನೆ. ಅರ್ಕ ಸಾಲೆಗೆ 'ಇಗ' ಪ್ರತ್ಯಯ ಸೇರಿ ಅಕ್ಕಸಾಲಿಗ ಎನ್ನುವ ಜಾತಿ ವಾಚಕವಾಗಿಯೂ 'ಇಕೆ', ಪ್ರತ್ಯಯದಿಂದಾಗಿ ವೃತ್ತಿ ವಾಚಕವಾಗಿಯೂ ಬಳಕೆಗೆ ಬಂದಿರಬಹುದೆಂದು ಊಹಿಸಲಾಗಿದೆ.[೫] ಸಾಲಿಯೆಂದರೆ ಕೇವಲ ವಿದ್ಯಾಭ್ಯಾಸ ನೀಡುವ ಸಂಸ್ಥೆಗಳೆಂಬ ಸೀಮಿತ ಅರ್ಥವನ್ನು ಪಡೆದುಕೊಳ್ಳದೆ, ಕೈಗಾರಿಕೆಯ ಸ್ಥಳ, ಕೆಲಸದ ಮನೆ ಎಂದು ವಿಶಾಲಾರ್ಥದಲ್ಲಿ ಬಳಕೆಗೊಂಡಿದೆ. ಸಂಸ್ಕೃತ 'ಶಾಲಾ' ಮೂಲ ರೂಪದಿಂದ ಸಾಲಿ (ಶಾಲೆ>ಸಾಲೆ>ಸಾಲಿ) ಬಂದಿದೆ. ಸಾಲಿ ಪದದ ಬಳಕೆ ವೃತ್ತಿಪರ ಜನಾಂಗದವರನ್ನು ಹೆಸರಿಸುವಲ್ಲಿ ಬಳಕೆಗೊಳ್ಳುತ್ತದೆ. ಅಕ್ಕಸಾಲಿ ಎನ್ನುವಲ್ಲಿ 'ಅಕ್ಕಿಸು' ಎಂಬ ಧಾತುವಿನಿಂದ ಕರಗಿಸು, ಜೀರ್ಣಿಸು ಎಂಬ ಅರ್ಥಗಳು ಹೊರಡುತ್ತವೆ. ಇಲ್ಲಿ ಲೋಹವನ್ನು ಕರಗಿಸುವ ಕೈಗಾರಿಕೆ ನಡೆಯುತ್ತಿತ್ತು ಅವರನ್ನು ಅರ್ಕಸಾಲಿ (>ಅಕ್ಕಸಾಲಿ) ಎಂದು ಕರೆಯುತ್ತಾರೆ."[೬] ಹೀಗೆ ಒಂದು ನಿಯಮಿತವಾದ ಸ್ಥಳದಲ್ಲಿ ಲೋಹವನ್ನು ಕರಗಿಸಿ ಜನಸಮುದಾಯಗಳಿಗೆ ಆಭರಣ ಇತ್ಯಾದಿಗಳನ್ನು ತಯಾರಿಸಿ ಕೊಡುವವರಿಗೆ ಅಕ್ಕಸಾಲಿಗ ಎಂಬ ಹೆಸರು ಬಂದಿರುವುದು ವಿಧಿತವಾಗುತ್ತದೆ.

ಕೌಟಿಲ್ಯನ ಅರ್ಥಶಾಸ್ತ್ರ, ಕನಕದಾಸರ ಮೋಹನ ತರಂಗಿಣಿ ಇತ್ಯಾದಿ ಕೃತಿಗಳಲ್ಲಿ, ಶಾಸನಗಳಲ್ಲಿ ಅವಲೋಕಿಸಿದಾಗ ಅಕ್ಕಸಾಲಿಗರಿಗೆ ಪ್ರಾಚೀನ ಕಾಲದಲ್ಲಿ ವಿಶೇಷವಾದ ಮಹತ್ವವಿರುವುದು ಕಂಡುಬರುತ್ತದೆ. ಅಕ್ಕಸಾಲಿಗ ಬೆಳ್ಳಿ ಬಂಗಾರದ ಆಭರಣಗಳನ್ನು ತಯಾರಿಸಿ, ತಮಗೆ ನೀಡಿದ ರಾಜಬೀದಿಯ ಮಳಿಗೆಗಳಲ್ಲಿ ಆಭರಣಗಳನ್ನು ಮಾರಾಟ ಮಾಡುತ್ತಿದ್ದರು ಎಂಬ ಉಲ್ಲೇಖ ಮೇಲಿನ ಕೃತಿಗಳಲ್ಲಿ ಹಾಗೂ ಶಾಸನಗಳಲ್ಲಿದೆ. ಅಕ್ಕಸಾಲಿಗರು ರಾಜ ಮಹಾರಾಜರುಗಳಿಂದ, ಜನ ಸಾಮಾನ್ಯರಿಂದ ಬಂಗಾರ, ಬೆಳ್ಳಿಯನ್ನು ಪಡೆದು ತಮಗೆ ಬೇಕಾದ ಆಭರಣ, ವಸ್ತುಗಳನ್ನು ತಯಾರಿಸಿಕೊಡುತ್ತಿದ್ದರು. ಅಕ್ಕಸಾಲಿ ಸಮಾಜದಲ್ಲಿ ಅತ್ಯುನ್ನತ ಸ್ಥಾನ ಪಡೆದಿದ್ದರು ಎಂಬುದಕ್ಕೆ ಈ ವೃತ್ತಿಯ ಬಗೆಗೆ ಜನರಲ್ಲಿ ನಂಬಿಕೆಯಿರುವುದು. ಬೆಲೆ ಬಾಳುವ ವಸ್ತುಗಳಾದ ಚಿನ್ನ ಬೆಳ್ಳಿಯನ್ನು ಯಾವುದೇ ಕರಾರುಗಳಿಲ್ಲದೆ ಅಕ್ಕಸಾಲಿಗನ ಕೈಯಲ್ಲಿ ಕೊಟ್ಟು ಆಭರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಅಕ್ಕಸಾಲಿಗನು ಜನ ಸಾಮಾನ್ಯರು ಕೊಟ್ಟಂತಹ ಬಂಗಾರ, ಬೆಳ್ಳಿಯನ್ನು ತೆಗೆದುಕೊಂಡು ತಮಗೆ ಬೇಕಾದ ದಿನಕ್ಕೆ ಸರಿಯಾಗಿ ಆಭರಣ, ವಸ್ತುಗಳನ್ನು ಜನಸಾಮಾನ್ಯರಿಗೆ ಮಾಡಿಕೊಟ್ಟಿದ್ದಾರೆ. ಎಲ್ಲಿಯೂ ಕೂಡ ಅಕ್ಕಸಾಲಿಗರು ಬಂಗಾರವನ್ನು ತೆಗೆದುಕೊಂಡು ಜನಸಾಮಾನ್ಯರಿಗೆ ಮೋಸ-ವಂಚನೆ ಮಾಡಿದ ದಾಖಲೆಗಳು ಇಲ್ಲ.

ಅಕ್ಕಸಾಲಿಗನಿಗೆ ಪರಂಪರಾನುಗತವಾಗಿ ಬಂದ ಈ ವೃತ್ತಿ ಪ್ರಸ್ತುತ ಸಂದರ್ಭದಲ್ಲಿ ತುಂಬ ಲಾಭದಾಯಕವಾದ ಉದ್ಯಮವಾಗಿದೆ. ಅಕ್ಕಸಾಲಿಗ ತನ್ನ ಪ್ರತಿಭೆಯಿಂದ ಮಾನವನ ಅಲಂಕಾರಿಕೆಗೆ ಒಂದು ಭಾಗವಾಗಿ ತನ್ನ ವೃತ್ತಿಯನ್ನು ಕೈಗೊಂಡಿದ್ದಾನೆ. ಮಾನವನ ಜೀವನದ ಅಲಂಕಾರಕ್ಕೆ ಧರಿಸಲು ಬೇಕಾದ ಕತ್ತಿನಾಭರಣಗಳು, ಕಿವಿಯಾಭರಣಗಳು, ಮೂಗಿನಾಭರಣಗಳು, ತೋಳು, ಕೈಗಳಿಗೆ, ಸೊಂಟಕ್ಕೆ,

ಮುಂಗೈಗೆ, ಕಾಲಿಗೆ, ಕಾಲು ಬೆರಳಿಗೆ, ಗಂಡಸರ ಆಭರಣಗಳು, ಮಗುವಿನ ಆಭರಣಗಳು ಹಾಗೂ ದೈವಗಳಿಗೆ ಸಂಬಂಧಿಸಿದಂತೆ ಒಡವೆಗಳನ್ನು ತಯಾರಿಸಿಕೊಟ್ಟು ಅವರನ್ನು ಸಂತೋಷಪಡಿಸುವ ಉದಾರಿಗಳಾಗಿದ್ದಾರೆ ಎಂದು ಹೇಳಬಹುದು. ಪ್ರತಿಯೊಂದು ಸಮುದಾಯವು ಮಗು ಹುಟ್ಟಿ ಮೂರು ತಿಂಗಳೊಳಗೆ ಮಗುವಿನ ಕಿವಿಗೆ ಮುರುವನ್ನು ಚುಚ್ಚಿಸುವ ಶಾಸ್ತ್ರ ಕೈಗೊಳ್ಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಅಕ್ಕಸಾಲಿಗನ ಹತ್ತಿರಬಂದು ನಮ್ಮ ಮಗುವಿಗೆ ಒಂದು ಜೊತೆ ಮುರುವು ಮಾಡಿಕೊಡಿ ಅಂತ ಹೇಳಿ ತಮ್ಮಲ್ಲಿರುವ ಬಂಗಾರವನ್ನು ಕೊಡುತ್ತಾರೆ. ಅಕ್ಕಸಾಲಿಗ ಹೇಳಿದ ದಿವಸ ಮಗುವಿನ ಸಮೇತ ಬಂದು ಅಕ್ಕಸಾಲಿಗನಿಗೆ ಉಲುಪಿಯನ್ನು ಕೊಟ್ಟು ಮಗುವಿಗೆ ಮುರುವನ್ನು ಚುಚ್ಚಿಸುತ್ತಾರೆ. ಅಕ್ಕಸಾಲಿಗ ಮುರುವಿನ ತುದಿಗೆ ಕುಂಕುಮ ಎಣ್ಣೆಯನ್ನು ಕಲಿಸಿ ಹಚ್ಚಿ ಕಿವಿಗೆ ಚುಚ್ಚುತ್ತಾನೆ. ನಂತರ ಅವರು ತಂದಂತಹ ಒಣಕೊಬ್ಬರಿ ಬಟ್ಟಲನ್ನು ಮಗುವಿಗೆ ಇಳಿದೆಗೆದು ಬಟ್ಟಲನ್ನು ಮುರಿಯುತ್ತಾನೆ. ಕಿವಿಗೆ ಎಣ್ಣೆ ಕುಂಕುಮವನ್ನು ಬೇರಸಿ ಹಚ್ಚುವ ಉದ್ದೇಶವೆಂದರೆ ಮಗುವಿನ ಮುರುವು ಚುಚ್ಚಿದ ಜಾಗದಲ್ಲಿ ರಕ್ತ ಬರುತ್ತಿದ್ದರೆ, ಕುಂಕುಮದಲ್ಲಿ ಅದು ಬೆರೆತು ರಕ್ತವಾಗಿ ಕಾಣುವುದಿಲ್ಲ ಹಾಗೂ ನೋವಿನ ನಿವಾರಣೆಗಾಗಿ ಇದನ್ನು ಹಚ್ಚಲಾಗುತ್ತದೆ. ಮಗುವಿನ ಕಿವಿಗೆ ತಕ್ಕಂತೆ ಆಭರಣಗಳನ್ನು ತಯಾರುಮಾಡುವ ಕೌಶಲ್ಯವನ್ನು ತಲೆತಲಾಂತರದಿಂದ ಕಲಿತುಕೊಂಡು ಬಂದವರಾಗಿರುತ್ತಾರೆ. ಈ ಉದ್ದೇಶಗಳಿಂದ ಅಕ್ಕಸಾಲಿಗನ ಹತ್ತಿರವೇ ಮಗುವಿನ ಕಿವಿಗೆ ಮುರುವನ್ನು ಚುಚ್ಚಿಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿಯೂ ಕೂಡ ಮಾರುಕಟ್ಟೆಯಲ್ಲಿ ಮಗುವಿಗೆ ಮುರುವನ್ನು ಖರೀದಿ ಮಾಡಿಕೊಂಡು ಬಂದರೂ ಅಕ್ಕಸಾಲಿಗನ ಕೈಯಿಂದಲೇ ಮುರುವನ್ನು ಪೂಜೆ ಮಾಡಿಸಿ ಚುಚ್ಚಿಸುತ್ತಾರೆ.

ಪ್ರಾಚೀನ ಕಾಲದಲ್ಲಿದ್ದ ನಾಣ್ಯಗಳು ಅರಸು ಮನೆತನಗಳ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ನಮಗೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ. ತಾಮ್ರ, ಬಂಗಾರ, ಬೆಳ್ಳಿ, ಕಂಚಿನ ಲೋಹಗಳಿಂದ ನಾಣ್ಯಗಳನ್ನು ಅರಸು ಮನೆತನಗಳ ಒಡೆತನದಲ್ಲಿ ಚಲಾವಣೆಗೆ ಬರುತ್ತಿದ್ದವು. ಆ ಪ್ರದೇಶದ ಆರ್ಥಿಕಾಭಿವೃದ್ಧಿ ಒಳ್ಳೆಯ ಸುಭೀಕ್ಷೆಯಿಂದ ಕೂಡಿತ್ತು ಎಂದರೆ ಬೆಳ್ಳಿ, ಬಂಗಾರದ ನಾಣ್ಯಗಳು ಚಲಾವಣೆಗೆ ಬರುತ್ತಿದ್ದವು. ಆರ್ಥಿಕ ಅಭಿವೃದ್ಧಿ ಹಿನ್ನಡೆಯ ಸಂದರ್ಭದಲ್ಲಿ ತಾಮ್ರ, ಕಂಚುಗಳ ನಾಣ್ಯಗಳ ಚಲಾವಣೆಗೆ ಬರುತ್ತಿದ್ದವು. ಇಂತಹ ನಾಣ್ಯಗಳನ್ನು ತಯಾರಿಸಲು ಅಕ್ಕಸಾಲಿಗರು ನೆರವಾಗುತ್ತಿದ್ದರು. "ನಾಣ್ಯಗಳನ್ನು ಟಂಕಿಸುತ್ತಿದ್ದ ಕಾರ್ಯಗಾರಗಳನ್ನು ಕಮ್ಮಟಗಳೆಂದು, ಅಚ್ಚಿನ ಟಂಕಸಾಲೆಗಳೆಂದು ಕರೆಯುತ್ತಿದ್ದರು. ಈ ಕಮ್ಮಟದಲ್ಲಿ ರಾಜನು ಬಂಗಾರ, ಬೆಳ್ಳಿ, ಕೆಲಸ ಮಾಡಲು ಅಕ್ಕಸಾಲಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಇವರು ಪ್ರತ್ಯೇಕವಾದ ಶ್ರೇಣಿಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದರು. ಒಂದು ಕಮ್ಮಟಕ್ಕೆ ಒಬ್ಬ ಒಡೆಯನಿರುತ್ತಿದ್ದ ಎಂದು ತಿಳಿಸುತ್ತಾರೆ." ಈ ಕಮ್ಮಟದಲ್ಲಿ ನೇಮಕಗೊಂಡವರು ಚಿನ್ನ, ಬೆಳ್ಳಿ, ತೂಕದಲ್ಲಿ ನಿಷ್ಠಾವಂತರೂ, ಜಾಣರೂ, ವ್ಯವಹಾರ ಜ್ಞಾನವುಳ್ಳವರು, ನಂಬಿಕೆಗೆ ಅರ್ಹರು ಆದ ಅಕ್ಕಸಾಲಿಗರನ್ನು ಕೆಲಸಕ್ಕೆ ನಿರ್ವಹಿಸುತ್ತಿರಬಹುದು ಎಂದು ಊಹಿಸಬಹುದಾಗಿದೆ. ಅಕ್ಕಸಾಲಿಗರು ತಮ್ಮ ಕೈಚಳಕದಿಂದ ಅಭರಣಗಳನ್ನು ತಯಾರಿಸಿ ಜನಸಮುದಾಯದವರ ಹಾಗೂ ರಾಜ ಮನೆತನಗಳ

ಮೆಚ್ಚುಗೆಯನ್ನು ಪಡೆದಿದ್ದರು ಎಂದು ಕುಮಾರಸ್ವಾಮಿಯವರು 'ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು' ಎಂಬ ಕೃತಿಯಲ್ಲಿ ಉಲ್ಲೇಖಿಸುತ್ತಾರೆ.

ಆಭರಣಗಳನ್ನು ತಯಾರಿಸುವ ಅಕ್ಕಸಾಲಿಗ ಯಜ್ಞ, ಮಂತ್ರ, ಶಾಸ್ತ್ರಜ್ಞನು, ವೇದಗಳ ಅಧ್ಯಯನ ಪರಂಗತನು, ಆಚಾರವಂತನು, ಮಾತಪಿತೃಗಳನ್ನು ಪಾಲಿಸುವಂತನು ಇತ್ಯಾದಿ ಗುಣಗಳನ್ನು ಅಳವಡಿಸಿಕೊಂಡಿರಬೇಕು. ವಿಶ್ವಕರ್ಮ, ಕಾಳಿಕಾದೇವಿಯನ್ನು ನಿತ್ಯ ಪೂಜಿಸಿ ವೃತ್ತಿಯ ಕೆಲಸಕ್ಕೆ ತೊಡಗಬೇಕು. ಮಾಂಗಲ್ಯ, ಮೂಗುತಿ, ಕಾಲುಂಗುರ, ಕಡಗ ಇಂತಹ ಆಭರಣಗಳನ್ನು ಶಾಸ್ತ್ರೋಕ್ತವಾಗಿ ಪೂಜಿಸಿ ಆಭರಣಗಳನ್ನು ತಯಾರಿಸಬೇಕು ಎಂಬ ನಿಯಮಗಳಿವೆ. ಆದರೆ ಪ್ರಸ್ತುತದಲ್ಲಿ ಈ ನಿಯಮಗಳನ್ನು ಪಾಲಿಸುತ್ತಿಲ್ಲ. ಅಕ್ಕಸಾಲಿಗ ವೃತ್ತಿಯನ್ನು ಬೇರೆ ಸಮುದಾಯದವರು ಅನುಸರಿಸಿಕೊಂಡು ಬಂದು ಈ ವೃತ್ತಿಯಲ್ಲಿ ತೊಡಗಿದ್ದಾರೆ. ಇವರಿಗೆ ವೃತ್ತಿಯ ಶಾಸ್ತ್ರೋಕ್ತ ನಿಯಮಗಳು ಗೊತ್ತಿರುವುದಿಲ್ಲವೆಂದು ಸಮುದಾಯದ ಹಿರಿಯರು ತಿಳಿಸುತ್ತಾರೆ.[೧೦]

ಅಕ್ಕಸಾಲಿಗ ಶಾಸ್ತ್ರೋಕ್ತವಾಗಿ ಆಭರಣಗಳನ್ನು ತಯಾರಿಸಲು ಅನೇಕ ನಂಬಿಕೆಗಳಿವೆ. ಪ್ರಾಚೀನ ಕಾಲದಿಂದ ಪ್ರಸ್ತುತದವರೆಗೂ ಜನಸಮುದಾಯಗಳು ತಮ್ಮ ತಮ್ಮ ದೇವರುಗಳಿಗೆ ಹರಕೆಯನ್ನು (ಮುಡಿಪು) ಹೊತ್ತುಕೊಳ್ಳುತ್ತಾರೆ. ಈ ಹರಕೆಗಳು ತಮಗೆ ಫಲಿಸಿದರೆ, ಅಕ್ಕಸಾಲಿಗಳ ಕೈಯಿಂದ ಒಡವೆಗಳನ್ನು ಮಾಡಿಸಿ ಹರಕೆ ಹೊತ್ತ ದೇವರಿಗೆ ಆಭರಣಗಳನ್ನು ಅರ್ಪಿಸುವರು. ದೇವರಿಗೆ ಅರ್ಪಿಸುವ ಒಡವೆಗಳನ್ನು ಮಾಡುವ ಅಕ್ಕಸಾಲಿಗ ಪ್ರತಿಯೊಂದು ವಿದ್ಯೆಗಳಲ್ಲಿ ಪರಿಣಿತನಾಗಿರಬೇಕು. ವೈದಿಕ ಪರಂಪರೆಯುಳ್ಳವನಾಗಿರಬೇಕು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಾಂಚಾಳ ಸಮುದಾಯದವರು ವಿವರಣೆಯನ್ನು ತಿಳಿಸಿದರು.

ಬಡಗಿತನ ಹಾಗೂ ಕಮ್ಮಾರಿಕೆ ವೃತ್ತಿಗಳಲ್ಲಿ ತಾವೇ ತಮಗೆ ಬೇಕಾದ ಉಪಕರಣಗಳನ್ನು ತಯಾರು ಮಾಡಿಸಿಕೊಳ್ಳುತ್ತಾರೆ. ಹಾಗೂ ಈ ವೃತ್ತಿಗಳಿಗೆ ತಾವು ಕೂಡ ಮಾರ್ಗದರ್ಶನ ನೀಡುತ್ತಾರೆ. ಆದರೆ ಈ ಅಕ್ಕಸಾಲಿಗ ವೃತ್ತಿಯಲ್ಲಿ ತಮಗೆ ಬೇಕಾದ ಆಭರಣವನ್ನು ಗ್ರಾಹಕರು ಮಾಡಲು ತಿಳಿಸುತ್ತಾರೆ. ಅದು ಇಂತಿಷ್ಟು ತೂಕದಲ್ಲಿ ಇರಬೇಕು ಎಂದು ಹೇಳುತ್ತಾರೆ. ಆದರೆ ಅಕ್ಕಸಾಲಿಗ ತನ್ನಲ್ಲಿರುವ ಮಾಡಲಿಂಗ್ (ಅಚ್ಚುಪಡಿ)ನ್ನು ತೋರಿಸುತ್ತಾನೆ. ಆ ಮಾಡಲಿಂಗ್‌ನಲ್ಲಿ ಯಾವುದು ಬೇಕು ಅದನ್ನು ಅನುಸರಿಸಿಕೊಂಡು ಆಭರಣವನ್ನು ತಯಾರಿಸಿಕೊಡುತ್ತಾನೆ. ಈ ವೃತ್ತಿಯ ಕೆಲಸದ ಸಂದರ್ಭದಲ್ಲಿ ಜನಸಮುದಾಯದಿಂದ ದೂರವಿರುತ್ತದೆ. ಪ್ರತಿಯೊಂದು ಆಭರಣಗಳನ್ನು ತಯಾರಿಸುವಲ್ಲಿಯೂ ವಿಧಿವಿಧಾನಗಳು ಕಂಡುಬರುತ್ತವೆ. ಯಾವುದೇ ಆಭರಣವನ್ನು ತಯಾರಿಸುವ ಮೊದಲು ಅಚ್ಚುಗಳನ್ನು ತಯಾರು ಮಾಡಿಕೊಳ್ಳುತ್ತಾರೆ. ಅಂದರೆ ಆಭರಣಗಳು ಯಾವ ಅಳತೆಯಲ್ಲಿರಬೇಕು ಅದಕ್ಕೆ ಎಷ್ಟು ಗ್ರಾಂ ಇರುವ ಹರಳನ್ನು ಸೇರ್ಪಡೆ ಮಾಡಬಹುದು ಇತ್ಯಾದಿಗಳನ್ನು ಅನುಸರಿಸಿ ಮಾಡಲ್‌ಗಳನ್ನು ತಯಾರಿಸಿಕೊಂಡು ಗ್ರಾಹಕರು ಕೊಟ್ಟಂತಹ ಬಂಗಾರಕ್ಕೆ ಇತರೇ ಲೋಹಗಳನ್ನು ಮಿಶ್ರಣ ಮಾಡಿ ಅಗ್ಗಿಷ್ಟಿಕೆಯಲ್ಲಿಟ್ಟು ತಿದಿಯ ಸಹಾಯದಿಂದ ಬೆಂಕಿಯನ್ನು ಉರಿಸಿ ಬಂಗಾರವನ್ನು ಕಾಯಿಸಿ ತಮಗೆ ಬೇಕಾದ ಮಾಡಲ್‌ಗೆ ಕರಗಿದ ಬಂಗಾರದ

ದ್ರವವನ್ನು ಸುರಿಯುತ್ತಾರೆ. ಕೆಲವು ನಿಮಿಷಗಳಲ್ಲಿ ಅದು ದ್ರವ ರೂಪದಿಂದ ಗಟ್ಟಿತನಕ್ಕೆ ಬಂದ ಮೇಲೆ ಮಾಡಲ್‌ನಿಂದ ಹೊರಗಡೆ ತೆಗೆದು ಅದನ್ನು ಅರದಿಂದ ನಯಗೊಳಿಸುತ್ತಾರೆ. ಬಂಗಾರ, ಬೆಳ್ಳಿಯನ್ನು ಅಳತೆ ಮಾಡಲು ಗುಲಗಂಜಿಯನ್ನು ಉಪಯೋಗಿಸಲಾಗುತ್ತಿತ್ತು. ಈಗಲೂ ಕೂಡ ಹಳ್ಳಿಗಳಲ್ಲಿ ಬಂಗಾರ ಅಳತೆ ಮಾಡಲು ಇವುಗಳನ್ನೇ ಉಪಯೋಗಿಸಲಾಗುತ್ತದೆ. ಬಂಗಾರದ ಕೆಲಸ ಉದ್ಯಮವಾಗಿ ಬೆಳೆಯಲಿಕ್ಕೆ ಪ್ರಾರಂಭವಾದುದರಿಂದ ಬಂಗಾರ, ಬೆಳ್ಳಿಯನ್ನು ಅಳತೆ ಮಾಡಲು ಕಂಪ್ಯೂಟರ್ ತ್ರಾಸುಗಳು ಬಂದಿವೆ. ಇವುಗಳಿಂದಲೇ ಪ್ರಸ್ತುತದಲ್ಲಿ ಬಂಗಾರ, ಬೆಳ್ಳಿಯನ್ನು ತೂಕ ಮಾಡಲಾಗುತ್ತದೆ.

೪.೧.೪. ಶಿಲ್ಪಗಾರ

ಪಾಂಚಾಳ ಸಮುದಾಯದಲ್ಲಿ ಶಿಲ್ಪಗಾರ ಕೂಡ ಒಬ್ಬ. ಪಾಂಚಾಳ ಶಿಲ್ಪಿಯು ಸಾಂಸ್ಕೃತಿಕವಾಗಿ ಮಹತ್ವ ಪಡೆದ ಜನಾಂಗ. ಶಿಲ್ಪಿ ಎಂದರೆ ಶಿಲೆಯಲ್ಲಿ ಕೆಲಸ ಮಾಡುವವನಿಗೆ ಶಿಲ್ಪಿ ಎಂದು ಕರೆಯಲಾಗುತ್ತದೆ. ಭಾರತಕ್ಕೆ ವಿದೇಶಿ ಪ್ರವಾಸಿಗರ ಆಕರ್ಷಣೆಗೆ ಮೂಲ ಕಾರಣ ಈ ಶಿಲ್ಪಿಗಳೇ ಎಂದು ಊಹಿಸಬಹುದು. ಏಕೆಂದರೆ ಶಿಲ್ಪಿ ತಮ್ಮ ಕುಶಲ ಕೆಲಸವನ್ನು ಬೇಲೂರು, ಹಳೆಬೀಡು, ಬದಾಮಿ, ಬನಶಂಕರಿ, ಪಟ್ಟದಕಲ್ಲು, ಐಹೊಳೆ, ಸೋಮನಾಥ ದೇವಾಲಯ, ಹಂಪಿ, ಶ್ರವಣಬೆಳಗೊಳ, ಗೋಕರ್ಣ ಮುಂತಾದ ಸ್ಥಳಗಳಲ್ಲಿ ದೇವಾಲಯಗಳ ಹಾಗೂ ಮೂರ್ತಿಗಳ ಕೆತ್ತನೆಯಲ್ಲಿ ತಮ್ಮ ಕೈಚಳಕವನ್ನು ತೋರಿಸಿದ್ದಾರೆ. ದೇವಾಲಯ, ಮೂರ್ತಿಗಳನ್ನು ಕಲಾರಾಧಕರು ನೋಡಿದರೆ ಮತ್ತೆ ಮತ್ತೆ ಕುಶಲತೆಯನ್ನು ನೋಡಬೇಕು ಎಂದೆನಿಸುತ್ತದೆ. ಇಂತಹವುಗಳಿಂದಲೇ ಶಿಲ್ಪಿಯ ಕಲ್ಪನೆ, ಚಾತುರ್ಯ, ನೈಪುಣ್ಯತೆ ಎಷ್ಟರಮಟ್ಟಿಗೆ ತಮ್ಮಲ್ಲಿ ಅಡಕವಾಗಿತ್ತು ಎಂಬುದನ್ನು ಊಹಿಸಲು ಅಸಾಧ್ಯವಾದದು. ಶಿಲ್ಪಿಯ ಕಲೆಗಳಿಗೆ ವಿಶೇಷ ಆದ್ಯತೆ ಇದೆ. ಶಿಲ್ಪಿಯು ಆರಾಧನೆಗೋಸ್ಕರ ಶಿಲ್ಪವನ್ನು ಕೆತ್ತುತ್ತಾನೆ.

"ಶಿಲ್ಪ ಎನ್ನುವುದು ನಿತ್ಯವೂ ತೀರಾ ಸಾಧಾರಣವಾಗಿ ಬಳಸುವ ಪದ ಆದ್ದರಿಂದಲೇ ಏನೋ ನಾವು ನಿಜವಾಗಿ ಶಿಲ್ಪದ ವ್ಯಾಪ್ತಿಯನ್ನು ಆ ಪದದ ನಿಖರವಾದ ಅರ್ಥವನ್ನು ಗ್ರಹಿಸುವುದನ್ನು ಮರೆತಿದ್ದೇವೆ. ಶಿಲ್ಪವು ತಪಸ್ಸಿನಿಂದ ಮಾತ್ರವೇ ಸಾಧ್ಯವಾಗುವಂತಹುದು. ಈ ತಪಸ್ಸಿಗೆ ಮೊದಲು ಸಂಕಲ್ಪ, ಸಂಕಲ್ಪದಿಂದ ಪ್ರೇರಿತವಾದ ಆಲೋಚನೆ, ಧ್ಯಾನ, ಭಾವನೆ ಇತ್ಯಾದಿಗಳನ್ನೆಲ್ಲಾ ಒಳಗೊಂಡ ತಪಸ್ಸಿನ ಫಲವೇ ಶಿಲ್ಪ. ಶಿಲ್ಪ ಶಬ್ದವು 'ಶೀಲ ಸಮದೌ' ಎಂಬ ಧಾತುವಿನಿಂದ ವ್ಯುತ್ಪನ್ನವಾಗಿದೆ. 'ಸಮಾಧಿ' ಎಂಬ ಅರ್ಥವುಳ್ಳ 'ಶಿಲ್' ಧಾತುವು ತಪಸ್ಸನ್ನೇ ಸೂಚಿಸುತ್ತದೆ. ಎಂದರೆ ತಪಸ್ಸಿನ ಪ್ರಭಾವದಿಂದ ನಿರ್ವಹಿಸಲ್ಪಡುತ್ತಿರುವುದು ಶಿಲ್ಪ ಎಂಬುದು ಒಂದು ಅರ್ಥ. ಶಿಲ್ಪಿಯಾದವನು (ಎಂದರೆ ಶಿಲ್ಪ ಕರ್ಮವನ್ನು ನಿರ್ವಹಿಸುವವನು) ತನ್ನ ತಪಸ್ಸಿನಿಂದ (ಸಂಕಲ್ಪ, ಆಲೋಚನೆ, ನಿರ್ಮಾಣ ಇತ್ಯಾದಿಗಳಿಂದ) ಶಿಲ್ಪ ನಿರ್ಮಾಣವನ್ನು ಮಾಡಿ ಕೃತಕೃತ್ಯನಾಗುತ್ತಾನೆ. ಆದ್ದರಿಂದ ಮೊದಲ ಅರ್ಥವು ಆತನಿಗೆ ಅನ್ವಯವಾಗುತ್ತದೆ. ಎರಡನೆಯ ಅರ್ಥವು ಶಿಲ್ಪಕಲಾ ದರ್ಶಕನ ಪರವಾಗಿ ಅನ್ವಯಿಸಬೇಕಾಗುತ್ತದೆ. ಏಕಾಗ್ರ ಚಿತ್ತದಿಂದ ಶಿಲ್ಪಿಯು ನಡೆಸುವ ಶಿಲ್ಪ ಕರ್ಮದ ಫಲವಾಗಿ ರೂಪುಗೊಳ್ಳುವ ಶಿಲ್ಪವು ಅದನ್ನು ನೋಡುವವನಲ್ಲಿಯ ಸೌಂದರ್ಯಾರಾಧನೆಯ ಪ್ರಜ್ಞೆಯನ್ನು ಉದ್ದೀಪನಗೊಳಿಸಿ ಅವನಿಗೆ ಸಮಾಧಿ ಸ್ಥಿತಿಯನ್ನು ತಂದುಕೊಟ್ಟು, ಆನಂದವನ್ನು ಕರುಣಿಸುತ್ತದೆ. ಆದ್ದರಿಂದ ಶಿಲ್ಪವು ಅತ್ಯಂತ ಮಹತ್ತರವೂ, ಪೂಜ್ಯವೂ ಆದುದು."[೧೧]

ಯಜ್ಞವೇದಿ ಹಾಗೂ ಯಜ್ಞಶಾಲೆಗಳ ನಿರ್ಮಾಣಕ್ಕಾಗಿ ಶಿಲ್ಪ ಈ ಮೊದಲು ರೂಪುಗೊಂಡಿತು ಎಂದು ಅನೇಕ ವಿದ್ವಾಂಸರು ತಿಳಿಸುತ್ತಾರೆ. ನಂತರ ಭಾರತೀಯ ಸಂಪ್ರದಾಯದ ಪ್ರಕಾರ ಶಿಲ್ಪವು ವಿಶಾಲವಾದ ಅರ್ಥದಿಂದ ವ್ಯಾಪಿಸಿ ಶಿಲ್ಪಿಯ ಕರಕೌಶಲ್ಯದಿಂದ ಮೂಡಿಬಂದ ಕೃತಿ ಮಾತ್ರವಾಗಿರದೆ ಆರಾಧಿಸುವರ ಪುಣ್ಯ ಪಾಪಗಳ ಫಲವನ್ನು ಕೊಡುವುದಾಗಿದೆ ಎಂದು ತಿಳಿದು ಬರುತ್ತದೆ.

“ಸ್ಥಪತಿ ಎಂದರೆ ಸ್ಥಾಪತ್ಯ ವೇದವನ್ನು, ಜ್ಞಾನವನ್ನು ಹೊಂದಿರುವವನು ಸ್ಥಪತಿಯಾಗುತ್ತಾನೆ. ಶಿಲ್ಪಿ ಆಯಾ ದೇವತಾಮೂರ್ತಿಗಳನ್ನು ಸ್ಥಾಪಿಸಲು ಅರ್ಹವಾದ ವೇದ ಮಂತ್ರಗಳನ್ನು ಶಿಲ್ಪ ಶಾಸ್ತ್ರಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಹಲವು ಶಾಸ್ತ್ರಗಳನ್ನು ಬಲ್ಲನನ್ನು ಸ್ಥಪತಿ ಅಂದರೆ ದೇವಮೂರ್ತಿಗಳನ್ನು ಸ್ಥಾಪಿಸಲು ಅಧಿಪತಿಯಾಗಿರುವುದರಿಂದ ಆತನನ್ನು ಸ್ಥಪತಿ ಎಂದು ಕರೆಯಲಾಗುತ್ತದೆ.” ಪ್ರಾಚೀನ ಕಾಲದಲ್ಲಿ ಶಿಲ್ಪವನ್ನು ಕಲಿಯಬೇಕಾದರೆ ಅವರಿಗೆ ಮೊದಲು ಉಪನಯನ ಮಾಡಿದ ನಂತರ ಶಿಲ್ಪವಿದ್ಯೆಯನ್ನು ಕಲಿಸುವ ಗುರುಕುಲಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದರು. ಗುರುಕುಲದಲ್ಲಿ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಧ್ಯಯನ, ಅಧ್ಯಾಪನ ನಡೆಯುತ್ತಿದ್ದವು ಎಂದು ಶಿಲ್ಪಶಾಸ್ತ್ರ ಗ್ರಂಥಗಳಿಂದ ನಮಗೆ ಮಾಹಿತಿ ಲಭಿಸುತ್ತದೆ. ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ಶಿಲ್ಪಶಾಸ್ತ್ರದ ಪರಿಜ್ಞಾನ, ವಿವಿಧ ಶಿಲ್ಪಗಳ ಅಳತೆ ಇತ್ಯಾದಿ ವಿಷಯಗಳು ಗೊತ್ತಿಲ್ಲದೆ ಕೆಲಸ ನಿರ್ವಹಿಸುವನು ಕೇವಲ ಆಳಾಗಿ ದುಡಿಯುವನು ಹೊರತು ಶಿಲ್ಪಿಯಲ್ಲ ಎಂದು ಉಲ್ಲೇಖವಾಗುತ್ತವೆ.

ದೇವತಾಮೂರ್ತಿಗಳ ರಚನೆಯ ಬಗ್ಗೆ ಶಿಲ್ಪಿಗಳು ಈ ರೀತಿ ತಿಳಿಸುತ್ತಾರೆ. ಈ ಶಿಲ್ಪ ರಚನೆಗೆ ವಿಧಿ ವಿಧಾನಗಳು ಬಹುಮುಖ್ಯವಾಗಿವೆ. ದೇವತಾಮೂರ್ತಿಗಳ ರಚನೆ ಮಾಡುವುದು ಬಹುಕಠಿಣದ ಕೆಲಸ. ಮೂರ್ತಿಯ ರಚನೆಗೆ ಸಂಬಂಧಿಸಿದಂತೆ ಆಯ್ಕೆ ಮಾಡುವ ಕಲ್ಲು, ಅದರ ಆಕಾರ, ಪ್ರಮಾಣ, ಅಳತೆ, ರೂಪಭೂಷಣ, ಆಯುಧ, ಪೀಠ ಹಾಗೂ ಪರಿವಾರ ಈ ವಿಷಯಗಳಿಗೆ ಸಂಬಂಧಿಸಿದಂತೆ ಶಿಲ್ಪಿಯಾದವನು ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಿಕೊಂಡು ಬರಬೇಕು. ಹಾಗೂ ಈ ನಿಯಮಗಳ ಬಗ್ಗೆ ಶಿಲ್ಪಿ ತಿಳಿದವನಾಗಿರಬೇಕು. ದೇವತಾಮೂರ್ತಿ, ದೇವಾಲಯಗಳ ರಚನೆಗೆ ಶಿಲ್ಪಿಯು ಶಿಲ್ಪಶಾಸ್ತ್ರವನ್ನು ಚೆನ್ನಾಗಿ ತಿಳಿದವನಾಗಿರಬೇಕು ಅದರ ಜೊತೆಗೆಯೆ ಶ್ರದ್ಧೆ ಮತ್ತು ಕಲ್ಪನಾಶಕ್ತಿ ಆಗಾದವಾಗಿರಬೇಕು ಎಂದು ತಿಳಿಸುತ್ತಾರೆ.

ಶಿಲ್ಪಗಳ ಕೆತ್ತನೆಗೆ ಆಯ್ಕೆ ಮಾಡಿಕೊಳ್ಳುವ ಶಿಲೆಗಳನ್ನು ಶಿಲ್ಪಿಗಳು ಸೂಕ್ಷ್ಮವಾಗಿ ಪರೀಕ್ಷಿಸಬೇಕು. ಈ ಶಿಲೆಗಳಲ್ಲಿ ಮೂರು ಬಗೆಯ ಕಲ್ಲುಗಳಿರುತ್ತವೆ. ಪುರುಷಶಿಲೆ, ಸ್ತ್ರೀ ಶಿಲೆ ಹಾಗೂ ನಪುಂಸಕ ಶಿಲೆ ಎಂದು, ಇವುಗಳನ್ನು ಗುರುತಿಸುವ ವಿಧಾನಗಳೆಂದರೆ ಬಣ್ಣ, ಎಳೆ, ಶಬ್ದಗಳ ಆಧಾರದಿಂದ ಶಿಲ್ಪಿಗಳು ಈ ಶಿಲೆಗಳನ್ನು ವಿಂಗಡಿಸಿಕೊಳ್ಳುತ್ತಾರೆ. ಈ ಶಿಲೆಗಳನ್ನು ಅಂದರೆ ಪುರುಷ ಶಿಲೆಯನ್ನು ಪುರುಷ ದೇವತಾ ಮೂರ್ತಿಗಳು, ಸ್ತ್ರೀ ಶಿಲೆಯನ್ನು ಸ್ತ್ರೀದೇವತಾ ಮೂರ್ತಿಗಳ ಕೆತ್ತನೆಗೆ ಮಾತ್ರ ಉಪಯೋಗಿಸುತ್ತಾರೆ. ಈ ಪುರುಷ ಶಿಲೆಯನ್ನು ಪತ್ತೆ ಹಚ್ಚುವ ವಿಧಾನಗಳೆಂದರೆ ಶಿಲೆಯು ಕಂಚಿನ ಗಂಟೆ ಶಬ್ದ ಬರುವಂತಿರಬೇಕು. ನೀಲಿವರ್ಣದಲ್ಲಿರುವ ಶಿಲೆಯು ಅದರಲ್ಲಿರುವ ಚುಕ್ಕೆಯನ್ನು ಪರೀಕ್ಷಿಸಿದಾಗ

ಇದರಲ್ಲೇ ಚೌಕಾಕೃತಿ, ಷಟ್‌ದಳ ಮತ್ತು ಅಷ್ಟದಳಾಕೃತಿಗಳನ್ನು ಕಾಣುತ್ತೇವೆ. ಇದೇ ಪುರುಷ ಶಿಲೆಯ ಲಕ್ಷಣಗಳು ಇವುಗಳ ಮೂಲಕವೆ ಶಿಲ್ಪಿ ಇಂತಹ ಶಿಲೆ ಎಂದು ಗುರುತಿಸುತ್ತಾನೆ.

ಸ್ತ್ರೀ ಶಿಲೆಯನ್ನು ಪತ್ತೆ ಹಚ್ಚುವ ವಿಧಾನಗಳೆಂದರೆ ಶಿಲೆಯನ್ನು ಬಾರಿಸಿದರೆ (ತಟ್ಟಿದರೆ) ಮಾರ್ದವ ಶಬ್ದ ಕಿವಿಗೆ ಕೇಳಿಸುವಂತಿರಬೇಕು. ಶಿಲೆಯು ಪಚ್ಚೆ ವರ್ಣದಲ್ಲಿದ್ದು ತ್ರಿಕೋನ, ಪಂಚಕೋನ ಹಾಗೂ ಸಪ್ತಕೋನಗಳು ಈ ಶಿಲೆಯಲ್ಲಿ ಕಂಡುಬರಬೇಕು. ಇಂತಹ ಶಿಲೆಯನ್ನು ಸ್ತ್ರೀ ದೇವತಾಮೂರ್ತಿಗೆ ಉಪಯೋಗಿಸಲಾಗುತ್ತದೆ. ನಪುಂಸಕ ಶಿಲೆಯು ಯಾವ ಶಬ್ದವನ್ನಾದರು ಹೊರಸೂಚಿಸಬಹುದು. ಈ ಶಿಲೆಯನ್ನು ಮೂರ್ತಿಗಳ ಉಪಯೋಗಕ್ಕೆ ಬಳಸಲಾಗುವುದಿಲ್ಲ. ಈ ಲಕ್ಷಣಗಳಿರುವ ಶಿಲೆಯನ್ನು ಶಿಲ್ಪಿ ಮೂರ್ತಿ ಕೆತ್ತನೆಗೆ ಮೊದಲು ಶಿಲೆಯನ್ನು ಪರೀಕ್ಷಿಸಿ ಆಯ್ಕೆ ಮಾಡಿಕೊಳ್ಳುತ್ತಾನೆ.

ಶಿಲ್ಪಿಗೆ ಶಿಲ್ಪವನ್ನು ಕೆತ್ತಿ ಕೊಡಲು ಊರಿನ ಸಮುದಾಯದವರು ತಿಳಿಸಿದಾಗ ಶಿಲ್ಪಿಯು ಮೂರ್ತಿಗೆ ಸಂಬಂಧಿಸಿದಂತೆ ಶಿಲೆಯನ್ನು ಆಯ್ಕೆ ಮಾಡಿಕೊಂಡು ಅಮೃತಘಳಿಗೆಯಲ್ಲಿ ಮೂರ್ತಿಯ ಕೆಲಸವನ್ನು ನಿರ್ವಹಿಸುವರು. ಅಂದರೆ ಕೆಲಸ ಪ್ರಾರಂಭಿಸುವ ಮುಂಚೆ ಸ್ನಾನ ಮಾಡಿ ಶುಚಿರ್ಭೂತವಾಗಿ ಕುಳಿತು, ಗಾಯತ್ರಿ ಧ್ಯಾನ ಮಂತ್ರವನ್ನು ಪಠಿಸಿ ಅಮೃತಘಳಿಗೆಯಲ್ಲಿ ಶಿಲೆ ಹಾಗೂ ತನ್ನ ಉಪಕರಣಗಳನ್ನು ಫಲ ಪುಷ್ಪಗಳಿಂದ ಪೂಜಿಸಿ ತಾನು ರಚಿಸಬೇಕಾಗಿರುವ ಮೂರ್ತಿಯ ಸ್ವರೂಪವನ್ನು ಮನನ ಮಾಡಿಕೊಂಡು ಕೆತ್ತನೆಗೆ ತೊಡಗುತ್ತಾನೆ. ಕೆತ್ತನೆಗೆ ತೊಡಗಿದ ಮೇಲೆ ಮೂರ್ತಿಯು ಕಡೆದರೆ ಸಾಲದು ಆ ಮೂರ್ತಿಗೆ ಪ್ರಾಣಪ್ರತಿಷ್ಠೆಯನ್ನು ಶಿಲ್ಪಿಯೆ ಮಾಡಬೇಕು. ಈ ಪ್ರಾಣ ಪ್ರತಿಷ್ಠೆ ಮೂರ್ತಿಯ ಕೆಲಸದಲ್ಲಿ ಕೊನೆಯ ಹಂತ, ನಂತರವೇ ಆ ಮೂರ್ತಿ ಪೂಜೆಗೆ ಯೋಗ್ಯವಾಗುತ್ತದೆ.

ಶಿಲ್ಪರತ್ನ ಶಾಸ್ತ್ರದ ಒಂಭತ್ತನೆಯ ಅಧ್ಯಾಯದಲ್ಲಿ ಶಿಲ್ಪಿಯು ಈ ಕೆಳಗಿನ ಮಾಹಿತಿಯನ್ನು ತಿಳಿದುಕೊಂಡಿರಬೇಕು ಎಂದು ಇದರಲ್ಲಿ ತಿಳಿಸಲಾಗಿದೆ. ಪೂರ್ವ, ಪಶ್ಚಿಮ ದಿಕ್ಕುಗಳಲ್ಲಿ ವಿಷ್ಣು ದೇವಾಲಯವನ್ನು, ಈಶಾನ್ಯ ದಿಕ್ಕಿನಲ್ಲಿ ಶಿವಾಲಯವನ್ನು, ವಾಯುವ್ಯ ದಿಕ್ಕುಗಳಲ್ಲಿ ದೇವಿಯ ಆಲಯವನ್ನು, ನೈರುತ್ಯ ದಿಕ್ಕಿನಲ್ಲಿ ವಿನಾಯಕ ಮಂದಿರವನ್ನು ಗ್ರಾಮದ ಮಧ್ಯದಲ್ಲಿ ಸಮಸ್ತ ದೇವತೆಗಳ ಆಲಯವನ್ನು ನಿರ್ಮಾಣ ಮಾಡಬಹುದು. ಉಗ್ರದೇವತೆಗಳಾದ ನರಸಿಂಹ, ವೀರಭದ್ರ, ವೀರಾಂಜನೇಯ ದೇವಾಲಯಗಳು ಗ್ರಾಮದ ಎದುರಾಗಿರಬಾರದು. ಸೌಮ್ಯದೇವತೆಗಳಾದ ಲಕ್ಷ್ಮಿ, ಸರಸ್ವತಿ, ವಿನಾಯಕ, ವಿಷ್ಣು, ಶಿವ ಮುಂತಾದ ದೇವಾಲಯಗಳು ಗ್ರಾಮಕ್ಕೆ ಎದುರಾಗಿದ್ದರೆ ಶ್ರೇಷ್ಠ ಎಂದು ಇದರಲ್ಲಿ ಉಲ್ಲೇಖವಾಗಿದೆ.

ಶುಭ ಲಕ್ಷಣಗಳಿಂದ ಕೂಡಿರುವ ಎಲ್ಲ ಮೂರ್ತಿಗಳು ಮಾನವರಿಗೆ ಸುಖವನ್ನು, ಧನವನ್ನು, ಐಶ್ವರ್ಯವನ್ನು, ಸಂತಾನವನ್ನು ಕಲ್ಪಿಸುತ್ತವೆ. ಅವಲಕ್ಷಣಗಳಿಂದ ಕೂಡಿದ್ದಲ್ಲಿ ವಿನಾಶಕಾರಕ ಎಂದು ನಂಬಿಕೊಂಡು ಬಂದಿದ್ದೇವೆ. ಆದ್ದರಿಂದ ಶಾಸ್ತ್ರೋಕ್ತವಾಗಿ, ಶುಭ ಲಕ್ಷಣಗಳಿಂದ ಕೂಡಿರುವುದನ್ನೇ ಮಾನವರು ಸ್ವೀಕರಿಸಬೇಕು, ಅದಕ್ಕಾಗಿ ಶಿಲ್ಪಿಗಳು ಮಾನವನ ಶ್ರೇಯೋಭಿವೃದ್ಧಿಗಾಗಿ ನದಿತೀರಗಳಲ್ಲಿ, ನದಿಗಳ ಸಂಗಮದಲ್ಲಿ, ಬೆಟ್ಟದ ಶಿಖರ ಭಾಗಗಳಲ್ಲಿ, ಅರಣ್ಯಗಳಲ್ಲಿ, ಗ್ರಾಮ ಪಟ್ಟಣಗಳಲ್ಲಿ ಶಿಲ್ಪವನ್ನು ಕೆತ್ತಿ ನಿರ್ಮಿಸಿರಬಹುದು ಎಂದು ಊಹಿಸಬಹುದು.

ವಿಗ್ರಹಗಳ ಲಕ್ಷಣಗಳಿಗೆ ಸಂಬಂಧಿಸಿದಂತೆ ಶಿಲ್ಪಿಗಳು ಈ ರೀತಿ ತಿಳಿಸುತ್ತಾರೆ. ಪ್ರತಿಯೊಂದು ವಿಗ್ರಹವನ್ನು ತಯಾರಿಸುವ ಸಂದರ್ಭದಲ್ಲಿ ವಿಗ್ರಹಕ್ಕೆ ಸಂಬಂಧಿಸಿದಂತೆ ವಾಸ್ತುವನ್ನು ಲೆಕ್ಕ ಹಾಕಬೇಕು. ವಾಸ್ತುವಿಗೆ ಅನುಗುಣವಾಗಿ ವಿಗ್ರಹದ ಎತ್ತರ, ಗಾತ್ರ, ಅಂಗಗಳ ರಚನೆಯ ಉದ್ದ, ಆಯುಧಗಳು, ಅವುಗಳ ಗಾತ್ರ, ಉದ್ದ, ವಿಗ್ರಹ ಪೀಠದ ಅಳತೆ, ಆಕೃತಿ ಇವೆಲ್ಲವುಗಳನ್ನು ಇಂತಿಷ್ಟೆ ಪ್ರಮಾಣದಲ್ಲಿ ಸರಿಯಾಗಿ ಕೆತ್ತಿ ಶಾಸ್ತ್ರೋಕ್ತವಾಗಿ ಪ್ರಾಣ ಪ್ರತಿಷ್ಠೆ ಮಾಡುವ ವಿಗ್ರಹವೂ ಪೂಜೆಗೆ ಅರ್ಹವಾದದ್ದು. ಈ ಮೂರ್ತಿಗಳು ನೋಡುವವರ ಮನಸ್ಸಿಗೆ ಸಂತೋಷವನ್ನುಂಟುಮಾಡಿ ಅವರ ಮನಸ್ಸನ್ನು ಆಕರ್ಷಿಸಿ ಧ್ಯಾನಾಸಕ್ತರನ್ನಾಗಿ ಮಾಡಲು ಸಹಾಯ ಮಾಡುತ್ತವೆ. ಈ ನಿಯಮಗಳಿಗೆ ವ್ಯತಿರಿಕ್ತವಾಗಿ ವಿಗ್ರಹಗಳನ್ನು ಕೆತ್ತಿದರೆ ಆ ವಿಗ್ರಹವು ಕಳೆಯಿಂದ ಕೂಡಿರುವುದಿಲ್ಲ. ಮನುಷ್ಯನ ಮನಸ್ಸಿನಲ್ಲಿ ಆಕರ್ಷಣೆಗೆ ಒಳಪಡುವುದಿಲ್ಲ.

“ಶಿಲ್ಪಿಗೆ ಶಾಸ್ತ್ರದ ಕಟ್ಟುಪಾಡಾದರೂ ಏತಕೆ? ಶಿಲ್ಪಿಗೆ ಪ್ರತಿಭೆ ಪ್ರೌಢಿಮೆಗಳಿದ್ದರೆ ಅವನು ತನಗೆ ತೋಚಿದಂತೆ, ತನಗೆ ತೋಚಿದುದನ್ನು ಮಾಡಬಹುದಲ್ಲ? ಇದಕ್ಕೆ ಶುಕ್ರ ನೀತಿಸಾರ ಹೀಗೆ ಸಮಾಧಾನವನ್ನು ನೀಡುತ್ತದೆ.

ಧ್ಯಾನಯೋಗಸ್ಯ ಸಂಸಿದ್ಧ್ಯೈ ಪ್ರತಿಮಾಲಕ್ಷಣಂ ಸ್ಮೃತಂ|
ಪ್ರತಿಮಾಕಾರಕೋ ಮರ್ತ್ಯೋ ಯಥಾ ಧ್ಯಾನರತೋ ಭವೇತ||

ಶಾಸ್ತ್ರ ಗಂಥಗಳಲ್ಲಿ ಪ್ರತಿಮಾ ಲಕ್ಷಣವನ್ನು ಹೇಳಿರುವುದು ಧ್ಯಾನಯೋಗ ಕೈಗೂಡವ ಸಲುವಾಗಿ. ಪ್ರತಿಮೆಯನ್ನು ಮಾಡುವ ಶಿಲ್ಪಿ ಧ್ಯಾನದಲ್ಲಿ ತೊಡಗಲೆಂದು ಧ್ಯಾನವೆಂದರೆ ಮನಸ್ಸು ಒಂದೇ ವಿಚಾರದಲ್ಲಿ ತೈಲಧಾರೆಯಂತೆ, ಎಡೆಬಿಡದೆ ಹರಿಯುವುದು ಈ ಬಗೆಯ ವ್ಯವಧಾನವಿಲ್ಲದಿದ್ದರೆ ಪ್ರತಿಮೆಯನ್ನು ಮಾಡಲಾಗದು. ಧ್ಯಾನವಿಲ್ಲದೆ ಪ್ರತಿಮೆಯನ್ನು ಮಾಡಿದರೂ ಅದರಲ್ಲಿ ವಿಶೇಷ ಸನ್ನಿಧಾನ ಕೂಡಿಬರುವುದಿಲ್ಲ. ಅದು ಆರಾಧನೆಗೆ ತಕ್ಕದ್ದಾಗುವುದಿಲ್ಲ. ವಾಸ್ತವವಾಗಿ ಪ್ರತಿಮೆ ಸಿದ್ಧವಾಗುವುದು ಕೈಗಳಿಂದ ಅಲ್ಲ, ಮನಸ್ಸಿನಿಂದಲೇ, ಮನಸ್ಸಿನ ಸಂಸ್ಕಾರ ಶಿಲ್ಪಿಗೆ ಅತ್ಯಗತ್ಯ. ಯಾವ ಕಲಾವಿದನಿಗೂ ಈ ಮಾತು ಸರಿಯೆ ಅವನ ಮನಸ್ಸು ಪ್ರತಿಮೆಯನ್ನು ಚೆನ್ನಾಗಿ ತನ್ನಲ್ಲಿ ಮೂಡಿಸಿಕೊಂಡಿರಬೇಕು. ಮನಸ್ಸಿನಲ್ಲಿ ಚಿತ್ರ ಸ್ಫುಟವಾಗಿದ್ದರೆ ಕೈಗಳಿಂದ ಹೊರಹೊಮ್ಮುವ ಶಿಲ್ಪ ಅಚ್ಚುಕಟ್ಟಾಗಿರುತ್ತದೆ.”

ಈ ಮೇಲೆ ತಿಳಿಸಿದಂತೆ ಶಾಸ್ತ್ರದ ಹಿನ್ನಲೆಯಲ್ಲಿ ನಿರ್ಮಿಸಿದ ವಿಗ್ರಹಗಳು ಸರ್ವೋತ್ಕೃಷ್ಟವಾಗಿಯೂ ಆನಂದದಾಯಕವಾಗಿಯೂ ಇರುವುದೆನ್ನುವುದಕ್ಕೆ ನಮಗೆ ಈಗ ಕಂಡುಬರುವ ಅನೇಕ ಪ್ರಾಚೀನ ವಿಗ್ರಹಗಳು ನಿದರ್ಶನಗಳಾಗಿವೆ. ಇಂತಹ ಅನೇಕ ವಿಗ್ರಹ ರಚನೆಯಾಗಲೂ ದೇಶದಲ್ಲಿ ಶಾಂತಿ, ಉದಾರಾಶ್ರಯ ದೊರಕಬೇಕು. ಈ ತರಹದ ಆಶ್ರಯಗಳು ಪ್ರಾಚೀನ ಕಾಲದಲ್ಲಿ ಶಿಲ್ಪಿಗಳಿಗೆ ದೊರೆಯುತಿತ್ತು. ಇದರಿಂದಾಗಿ ಶಿಲ್ಪಿ ಅರಸರು, ಜನಸಮುದಾಯಕ್ಕೆ ಮೆಚ್ಚುಗೆ ನೀಡುವಂತಹ ಅನೇಕ ದೇವಾಲಯ ವಿಗ್ರಹ ಶಿಲ್ಪಗಳನ್ನು ಕೆತ್ತಿ ಕಲಾಭಿವೃದ್ಧಿಯನ್ನು ಉನ್ನತ ಮಟ್ಟಕ್ಕೇರಿಸಿದ್ದರು.

ಪ್ರಸ್ತುತ ಸಂದರ್ಭದಲ್ಲಿ ವಿಗ್ರಹ ಮೂಡಿಬರುವುದು ಕಲಾವಿದನ ಪ್ರೌಢಿಮೆಯಿಂದಲೆ. ಈಗಿನ ಶಿಲ್ಪಿಗಳಲ್ಲಿ ವೇದ, ಉಪನಿಷತ್ತು, ಶಿಲ್ಪಶಾಸ್ತ್ರ ಇತ್ಯಾದಿಗಳೆಲ್ಲವನ್ನು ಕಲಿಯುವುದೆಲ್ಲ ಸಡಿಲಿಕೆಗೊಂಡಿದೆ.

ಶಿಲ್ಪಗಳಿಗೆ ಸೌಂದರ್ಯವನ್ನು ಒದಗಿಸುವುದು ಶಿಲ್ಪಿಯ ಕೆಲಸವಾಗಿದೆ. ಪ್ರಾಚೀನ ಕಾಲದಲ್ಲಿ ಶಿಲ್ಪಿಗಳೆಂದರೆ ಪಾಂಚಾಳ ಸಮುದಾಯದವರೆ. ಆದರೆ ಪ್ರಸ್ತುತದಲ್ಲಿ ಬೇರೆ ಬೇರೆ ಸಮುದಾಯದವರು ಶಿಲ್ಪ ಕೆಲಸದಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಶಿಲ್ಪಿಗೆ ಇರುತ್ತಿದ್ದ ಗೌರವ ಭಾವನೆಗಳು ಇಂದು ಕಣ್ಮರೆಯಾಗುತ್ತಲಿವೆ. ಶಿಲ್ಪಿಗೂ ಜನಸಮುದಾಯಕ್ಕೂ ಯಾವುದೇ ನಿಕಟ ಸಂಬಂಧವಿರುವುದು ಶಾಸನಗಳಲ್ಲಿಯೂ ಉಲ್ಲೇಖವಾಗಿಲ್ಲ. ಆದರೆ ಪಾಂಚಾಳ ವೃತ್ತಿಗಳಾದ ಕಮ್ಮಾರಿಕೆ, ಬಡಗಿತನ, ಕಂಚುಗಾರಿಕೆ ಇವು ಜನಸಮುದಾಯದ ಜೊತೆಗೆ ನಿಕಟ ಸಂಬಂಧವನ್ನು ಹೊಂದಿವೆ. ಜನಸಮುದಾಯದ ಮಾರ್ಗದರ್ಶನದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುತ್ತವೆ. ಆದರೆ ಈ ಶಿಲ್ಪಿ ವೃತ್ತಿಯಲ್ಲಿ ಜನಸಮುದಾಯದ ಸಂಪರ್ಕ ಕಡಿಮೆ. ಬಡಗಿತನ ವೃತ್ತಿಯಲ್ಲಿ ಉಪಕರಣಕ್ಕೆ ಬೇಕಾದ ಮರದ ಮುಟ್ಟುಗಳನ್ನು ತರಲು ರೈತರು ಸಹ ಬಡಗಿಯ ಜೊತೆ ಮರವನ್ನು ಖರೀದಿ ಮಾಡಲು ಸಹಕರಿಸುತ್ತಾನೆ. ಮರದ ಬಗ್ಗೆ ರೈತನಿಗೂ ಅಲ್ಪಸ್ವಲ್ಪ ಮಾಹಿತಿಗೊತ್ತಿರುತ್ತದೆ. ಆದರೆ ಈ ಶಿಲ್ಪ ವೃತ್ತಿಯಲ್ಲಿ ಜನಸಮುದಾಯದ ಸಂಪರ್ಕ ಕಡಿಮೆ. ಜನಸಮುದಾಯ ತಮಗೆ ಬೇಕಾದ ವಿಗ್ರಹ ಮೂರ್ತಿಯನ್ನು ಮಾಡಿಕೊಡಲು ತಿಳಿಸಿ ಹಣಕೊಡುವುದು ಮಾತ್ರ ಇವರ ಕೆಲಸ. ಇವರಿಗೆ ಶಿಲೆಯ ಬಗ್ಗೆ ಯಾವುದೇ ಮಾಹಿತಿಗಳು ಇರುವುದಿಲ್ಲ. ಇಂತಹ ಅನೇಕ ವಿಷಯಗಳಿಂದ ಶಿಲ್ಪವೃತ್ತಿಯು ಜನಸಾಮಾನ್ಯರಿಂದ ದೂರಸರಿದಿದೆ.

೪.೧.೫. ಕಂಚುಗಾರ

ಪಾಂಚಾಳರಲ್ಲಿ ಕಂಚು ಕೆಲಸವನ್ನು ನಿರ್ವಹಿಸುವವನಿಗೆ ಕಂಚುಗಾರ ಎಂದು ಕರೆಯಲಾಗುತ್ತದೆ. ಶಾಸನ, ಕಾವ್ಯಗಳಲ್ಲಿ ಕಂಚು ಕೆಲಸವನ್ನು ನಿರ್ವಹಿಸುವವರನ್ನು ಕಂಚುಗಾರ, ತಾಂಬಟಗಾರ, ಕಾಸಾರ, ಕಲಾಯಿಗಾರ, ಅಚ್ಚುಗಾರ ಮುಂತಾದ ಹೆಸರುಗಳಿಂದ ಉಲ್ಲೇಖಗಳಾಗಿವೆ. ಡಾ.ಡಿ.ಪಾಂಡುರಂಗಬಾಬು ಅವರ 'ಪಾಂಚಾಳ ವೃತ್ತಿ ಪದಕೋಶ' ಎಂಬ ವೃತ್ತಿಪದ ಮಂಜರಿಯ ಪ್ರಸ್ತಾವನೆಯಲ್ಲಿ ಕಂಚುಗಾರರ ಬಗ್ಗೆ ಹೀಗೆ ಪ್ರಸ್ತಾಪಿಸುತ್ತಾರೆ. ಕಂಚುಗಾರ ಎನ್ನುವ ವೃತ್ತಿ ಅಥವಾ ಜಾತಿ ವಾಚಕ ಪದಗಳ ನಿಷ್ಪತ್ತಿಯನ್ನು ವೃತ್ತಿಗೆ ಬಳಸುವ ಮೂಲ ಸಾಮಗ್ರಿಯಿಂದ ಸುಲಭವಾಗಿ ಗುರುತಿಸಬಹುದು. ಕಂಚು ಎನ್ನುವ ಲೋಹವನ್ನು ಬಳಸಿ ಕೆಲಸ ಮಾಡುವವರನ್ನು ಕಂಚುಗಾರ ಎಂದು ಗುರುತಿಸಿಕೊಳ್ಳಬಹುದು ಎಂದು ತಿಳಿಸುತ್ತಾರೆ. ಡಾ.ವಿರೂಪಾಕ್ಷ ಬಡಿಗೇರ ಸಂಪಾದಿಸಿರುವ 'ನಾಗಲಿಂಗಾನುಭವ' ಸಂಸ್ಮರಣ ಗ್ರಂಥದಲ್ಲಿ "ಕಾಸಾರ ಅಡ್ಡ ಹೆಸರು-ಒಂದು ವಿವೇಚನೆ" ಎಂಬ ಲೇಖನವನ್ನು ರಾಜಶೇಖರ ಬಡಿಗೇರರವರು ಬರೆದಿದ್ದಾರೆ. ಇದರಲ್ಲಿ ಕಂಚುಗಾರ ಪದ ನಿಷ್ಪತ್ತಿ ಕುರಿತಂತೆ ಈ ರೀತಿ ತಿಳಿಸುತ್ತಾರೆ. 'ಕ್ಯಾಂಸ' ಶಬ್ದವು ಕನ್ನಡದಲ್ಲಿ 'ಕಪ್ಸ' ಎಂಬ ರೂಪವನ್ನು ಧರಿಸಿ 'ಕಂಸ್ಸ'ವೇ 'ಕಂಸ'ವಾಗಿ ಮಾರ್ಪಟ್ಟು ಕೊನೆಯಲ್ಲಿ ಕಂಚ ಎಂಬ ರೂಪವನ್ನು ಪಡೆಯಿತು. (ಕಂಚ+ಕಾರ) ಕಂಚಗಾರ ಎಂಬ ತದ್ಭವ ರೂಪವನ್ನು ಪಡೆಯಿತು. ಮರಾಠಿ ಭಾಷೆಯಲ್ಲಿ 'ಕಾಸಾರ' ವೂ ಕನ್ನಡ ಭಾಷೆಯ ಕಂಚಗಾರವೂ ಸಮನಾರ್ಥಕಗಳೆಂದು ಹೇಳಿದರೆ ತಪ್ಪಾಗಲಾರದು ಎಂದು ತಿಳಿಸುತ್ತಾರೆ. ಅಂದರೆ ಶಾಸನಗಳಲ್ಲಿ 'ಕಾಸಾರ' ಎಂಬ ಪದವು ಉಲ್ಲೇಖವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಶಬ್ದಕೋಶದಲ್ಲಿ ತಾಮ್ರ, ಹಿತ್ತಾಳೆಯ ಪಾತ್ರೆಗಳನ್ನು ಮಾಡುವವನಿಗೆ ಕಾಸಾರ

ಎಂದು ಅರ್ಥ, ಆದುದರಿಂದ ಕಂಚುಗಾರ ಪದದ ಮೂಲ ರೂಪವಾದ ಕ್ಯಾಂಸ ಎಂಬ ಪದದಿಂದ ಕಂಚುಗಾರ ಎಂದು ಬಳಕೆಯಾಗುತ್ತಲಿದೆ ಎಂದು ಹೇಳಬಹುದು.

ಪಾಂಚಾಳರ ವೃತ್ತಿಗಳಲ್ಲಿ ಕಂಚುಗಾರ ವೃತ್ತಿಯನ್ನು ನಿರ್ವಹಿಸುವವರ ಸಂಖ್ಯೆ ತುಂಬ ವಿರಳ. ಗುಲ್ಬರ್ಗ, ದಾವಣಗೇರಿ, ನಾಗಮಂಗಲ ಸುತ್ತಮುತ್ತಲಿನ ಪ್ರದೇಶದಲ್ಲಿ ಅಲ್ಪಮಟ್ಟಿಗೆ ಈ ವೃತ್ತಿ ನಿರ್ವಹಿಸುವರನ್ನು ಕಾಣಬಹುದು. ಈ ವೃತ್ತಿಯು ಪ್ರಾಚೀನ ಕಾಲದಲ್ಲಿ ತುಂಬ ಮಹತ್ವವನ್ನು ಪಡೆದುಕೊಂಡಿತ್ತು. ಕಂಚನ್ನು ಉಪಯೋಗಿಸುವುದು ಅತಿಹೆಚ್ಚಾಗಿ ದೇವಾಲಯಗಳಿಗೆ, ಗೃಹಪಯೋಗಿ ಸಾಮಾನುಗಳ ತಯಾರಿಕೆಯಲ್ಲಿ ಮಾತ್ರ. ಅಂದರೆ ದೇವರ ವಿಗ್ರಹಗಳಿಗೆ, ದೇವರ ವಿಗ್ರಹಗಳ ಹಿಂದಿನ ಪ್ರಭಾವಳಿಗಳಿಗೆ, ದ್ವಾರ ಬಾಗಿಲುಗಳಿಗೆ, ದೇವಸ್ಥಾನಗಳಲ್ಲಿರುವ ಗಂಟೆ, ಪೂಜೆ ಸಾಮಗ್ರಿಗಳು, ಪಾತ್ರೆ, ಚಿಲಕ, ಬೀಗ, ರಾಜರ, ಸಂತರ, ರಾಣಿಯರ ಮೂರ್ತಿಗಳು ಇತ್ಯಾದಿಗಳಿಗೆ ಉಪಯೋಗಿಸಲಾಗಿದೆ. ಕಂಚನ್ನು ಈ ತರಹದ ಸಾಮಾನುಗಳಲ್ಲಿ ಉಪಯೋಗಿಸಲು ಮುಖ್ಯ ಕಾರಣ ತನ್ನ ಗಡಸುತನಕ್ಕೆ, ತುಕ್ಕು ನಿರೋಧಕ, ಹೆಚ್ಚಿನ ಹೊಳಪು ಇತ್ಯಾದಿಗಳಿಂದ ಈ ಸಾಮಗ್ರಿಗಳಿಗೆ ಅತಿಹೆಚ್ಚಾಗಿ ಉಪಯೋಗಿಸಿದ್ದಾರೆ. ಕಂಚು ಪಂಚಲೋಹಗಳಲ್ಲಿ ಒಂದಾಗಿದೆ. ಈ ಲೋಹಕ್ಕೆ ಅನೇಕ ನಂಬಿಕೆ, ಆಚರಣೆ ಸಂಪ್ರದಾಯಗಳು ಜನಸಮುದಾಯದಲ್ಲಿ ಬೆಳೆದುಕೊಂಡು ಬಂದಿವೆ.

ಕಂಚನ್ನು ದೇವತಾ ವಿಗ್ರಹಗಳಿಗೆ, ಗೃಹಪಯೋಗಿ ಸಾಮನುಗಳಿಗೆ ಉಪಯೋಗಿಸಲು ಮುಖ್ಯಕಾರಣ, ಲೋಹಕ್ಕೆ ಇರುವ ಗುಣಲಕ್ಷಣಗಳಿಂದ ಅಂದರೆ ವಿಗ್ರಹಗಳನ್ನು ಪೂಜೆ ಮಾಡುವ ಸಂದರ್ಭದಲ್ಲಿ ಪಂಚಾಮೃತದಿಂದ ತೊಳೆಯಲಾಗುತ್ತದೆ. ಅದಕ್ಕೆ ಫಲಪುಷ್ಪಾದಿಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಇವೆಲ್ಲವುಗಳಿಂದ ವಿಗ್ರಹ ಸುರಕ್ಷಿತವಾಗಿರಬೇಕಾದರೆ ಕಂಚನ್ನು ಉಪಯೋಗಿಸಬೇಕಾಗುತ್ತದೆ. ಏಕೆಂದರೆ ಕಂಚು ತುಕ್ಕುಹಿಡಿಯುವಿಕೆಯ ಗುಣವನ್ನು ಹೊಂದಿರುವುದಿಲ್ಲ. ಪದೇ ಪದೇ ತೊಳೆಯುವುದರಿಂದ ಹೊಳಪು ಬರುತ್ತದೆ. ಇಂತಹ ಲಕ್ಷಣಗಳು ಈ ಲೋಹಕ್ಕಿರುವುದರಿಂದ ಹಾಗೂ ಕಂಚುಗಾರನಿಗೆ ಇಂತಹ ವಿಷಯಗಳೆಲ್ಲವನ್ನು ತಿಳಿದಿರುವುದರಿಂದ ಈ ಲೋಹವನ್ನು ವಿಗ್ರಹ, ಗೃಹೋಪಯೋಗಿ ಸಾಮಗ್ರಿಗಳ ತಯಾರಿಕೆಯಲ್ಲಿ ಬಳಸುತ್ತಾನೆ.

ಕಂಚುಗಾರ ಈ ಮೇಲಿನ ಸಾಮಗ್ರಿಗಳ ತಯಾರಿಕೆಯಲ್ಲಿ ತನ್ನದೇ ಆದ ವಿಧಿ-ವಿಧಾನಗಳನ್ನು ಅನುಸರಿಸುತ್ತಾನೆ. ತಾನು ತಯಾರು ಮಾಡುವ ಯಾವುದೇ ಸಾಮಗ್ರಿಯಿರಬಹುದು ಅದರ ಆಕಾರ, ವಿನ್ಯಾಸ, ಗಾತ್ರ ಇತ್ಯಾದಿಗಳನ್ನು ಮೊದಲು ಗುರುತಿಸಿಕೊಳ್ಳುತ್ತಾನೆ. ನಂತರ ಆ ಸಾಮಗ್ರಿ ವಿನ್ಯಾಸಕ್ಕೆ ತಕ್ಕಂತೆ ಜೇಡಿಮಣ್ಣು ಇಲ್ಲವೆ ಕಟ್ಟಿಗೆಯಲ್ಲಿ ಆ ವಸ್ತುವಿನ ಅಚ್ಚುಪಡಿಯನ್ನು ತಯಾರಿಸಿಕೊಳ್ಳುತ್ತಾನೆ. ನಂತರ ಕುಲುಮೆಯಲ್ಲಿ ತಿದಿಯ ಸಹಾಯದಿಂದ ಕಂಚನ್ನು ಕರಗಿಸಿ ಆ ಸಾಮಗ್ರಿಯ ಅಚ್ಚು ಪಡಿಗೆ ಕಾಯಿಸಿದ ಲೋಹವನ್ನು ಸುರಿಯುತ್ತಾನೆ. ಸುರಿದ ಲೋಹ ಕೆಲಗಂಟೆಗಳ ನಂತರ ದ್ರವರೂಪವಿದ್ದದ್ದು ಘನರೂಪಕ್ಕೆ ಬಂದ ಮೇಲೆ ಅಚ್ಚುಪಡಿಯನ್ನು ಬಿಚ್ಚುತ್ತಾನೆ. ಅಚ್ಚುಪಡಿಯಲ್ಲಿರುವ ವಸ್ತುವನ್ನು ಹೊರಗಡೆಗೆ ತೆಗೆಯುತ್ತಾನೆ. ಇದು ಕಂಚುಗಾರ ಸಾಮಗ್ರಿಯ ತಯಾರಿಕೆಯಲ್ಲಿ ಅನುಸರಿಸುವ ವಿಧಾನವಾಗಿದೆ.

ಈ ವೃತ್ತಿಯು ತುಂಬ ಸೂಕ್ಷ್ಮತೆಯುಳ್ಳದ್ದು. ಲೋಹವನ್ನು ಕರಗಿಸುವ ಸಂದರ್ಭದಲ್ಲಿ ದ್ರವರೂಪಕ್ಕೆ ಲೋಹ ಬರಲಿಲ್ಲವೆಂದರೆ ಅದಕ್ಕೆ ಇನ್ನಿತರ ಲೋಹಗಳನ್ನು ಮಿಶ್ರಣ ಮಾಡಿ ಕರಗಿಸುತ್ತಾರೆ. ಅಚ್ಚು ಪಡಿಯಲ್ಲಿ ತಾನು ಸುರಿದ ಲೋಹ ಎಲ್ಲಾ ಭಾಗಗಳಿಗೂ ಸರಿಯಾಗಿ ಹೋಗುವಂತೆ ಅಚ್ಚು ಪಡಿಯನ್ನು ತಯಾರಿಸಿಕೊಂಡಿರಬೇಕು. ಹಾಗೂ ಸುರಿದ ಲೋಹವು ಅಚ್ಚುಪಡಿಯ ಯಾವುದೇ ಭಾಗದಲ್ಲಿ ಸೋರುವಂತಿರಬಾರದು. ಅಚ್ಚುಪಡಿಯಿಂದ ವಸ್ತುವನ್ನು ತೆಗೆಯುವಾಗ ಜಾಗ್ರತೆಯನ್ನು ವಹಿಸಬೇಕು. ಇಲ್ಲವಾದಲ್ಲಿ ವಸ್ತು ಮುರಿಯುವ ಸಾಧ್ಯತೆಗಳಿರುತ್ತವೆ. ಕಾದ ಲೋಹವು ಅಚ್ಚುಪಡಿಯ ಎಲ್ಲಾ ಭಾಗಕ್ಕೂ ಸರಿಯಾಗಿ ಲೋಹ ಹೋಗದಿದ್ದರೆ ಸಾಮಗ್ರಿ ಸರಿಯಾದ ರೀತಿಯಲ್ಲಿ ಹೊರಹೊಮ್ಮುವುದಿಲ್ಲ. ಮತ್ತೆ ಇನ್ನೊಂದು ಬಾರಿ ಲೋಹವನ್ನು ಕಾಯಿಸಿ ಸುರಿಯಬೇಕಾಗುತ್ತದೆ. ಜೇಡಿಮಣ್ಣು, ಕಟ್ಟಿಗೆಗಳಿಂದ ಮಾಡಿಕೊಂಡ ಅಚ್ಚುಪಡಿಗೆ ಲೋಹವನ್ನು ಸುರಿಯುವುದಕ್ಕಿಂತ ಮೊದಲು ಅಚ್ಚುಪಡಿಗೆ ಪುಡಿಯನ್ನು ಹಾಕಲಾಗುತ್ತದೆ. ಈ ಪುಡಿಯು ಅಚ್ಚುಪಡಿಯಿಂದ ವಸ್ತುವನ್ನು ತೆಗೆಯಲು ಅನುಕೂಲವಾಗುತ್ತದೆ. ಈ ಎಲ್ಲಾ ಮುನ್ನೇಚ್ಚರಿಕೆಗಳನ್ನು ವೃತ್ತಿಯ ಸಂದರ್ಭದಲ್ಲಿ ಕಂಚುಗಾರ ಅನುಸರಿಸಿ ಸಾಮಗ್ರಿಯನ್ನು ತಯಾರಿಸಿಕೊಡುತ್ತಾನೆ.

ಪಂಚಲೋಹಗಳಲ್ಲಿ ಒಂದಾದ ಈ ಕಂಚು ಇದರ ಬಗ್ಗೆ ಅನೇಕ ನಂಬಿಕೆ, ಆಚರಣೆಗಳನ್ನು ಪ್ರತಿಯೊಂದು ಸಮುದಾಯವರು ಆಚರಿಸುತ್ತ ಬಂದಿರುವುದನ್ನು ಕಾಣಬಹುದು. ಮನೆಯ ಬುನಾದಿಯನ್ನು ಹಾಕುವ ಸಂದರ್ಭದಲ್ಲಿ, ಬಾಗಿಲು ಇಡುವಾಗ, ಮಗುವಿಗೆ ಜ್ವರ ಬಂದ ಸಂದರ್ಭದಲ್ಲಿ ಬರೆಹಾಕುವಿಕೆಗೆ, ತಾಯತಕ್ಕೆ, ವಾಮಮಾರ್ಗಗಳಿಗೆ, ಗಂಡುಮಗು ಜನಿಸಿದ ಸಂದರ್ಭದಲ್ಲಿ ಕಂಚಿನ ತಟ್ಟೆ ಬಾರಿಸಲಿಕ್ಕೆ ಇತ್ಯಾದಿಗಳಿಗೆ ಈ ಲೋಹವನ್ನು ಉಪಯೋಗಿಸಲಾಗುತ್ತದೆ. ಇಂದಿಗೂ ಕೂಡ ದೇವಸ್ಥಾನಗಳಲ್ಲಿ ಹಾಕಿರುವ ಘಂಟೆಗಳು ಈ ಕಂಚುಗಳಿಂದ ತಯಾರಿಸಿದವುಗಳಾಗಿವೆ.

ಪ್ರಸ್ತುತ ಸಂದರ್ಭದಲ್ಲಿ ಈ ಲೋಹ ಬಳಸಿ ಕೆಲಸ ಮಾಡುವ ವೃತ್ತಿಯವರು ಬೇರೆ ಬೇರೆ ವೃತ್ತಿಯನ್ನು ಅರಸಿ ನಗರ ಕಡೆಗಳಿಗೆ ಹೋಗುತ್ತಿದ್ದಾರೆ. ಕೇವಲ ಮನೆಯ ಅಲಂಕಾರಿಕ ವಸ್ತುಗಳಿಗೆ ಮಾತ್ರ ಸೀಮಿತವಾಗಿರದೆ, ಆಧುನಿಕತೆಯ ಪ್ರಭಾವಕ್ಕೆ ಕಂಚುಗಾರಿಕೆಯ ವೃತ್ತಿ ಎದೆಯೊಡ್ಡಿ ನಿಲ್ಲಲಾರದೆ, ಈ ವೃತ್ತಿ ಇಂದು ಕಣ್ಮರೆಯಾಗುತ್ತಲಿದೆ. ಬೇರೆ ಬೇರೆ ಲೋಹಗಳಿಂದ ಸುಲಭವಾಗಿ ಮಾರುಕಟ್ಟೆಯಲ್ಲಿ ದೊರೆಯುವ ಸಾಮಗ್ರಿಗಳು ಲಭಿಸುವುದರಿಂದ ಕಂಚನ್ನು ಯಾರು ಕೇಳುವ ಪರಿಸ್ಥಿತಿ ಇಲ್ಲದಂತಾಗಿದೆ. ಹಲಕೆಲವು ಪೂಜಾ ವಿಧಾನಗಳಲ್ಲಿ ಮಾತ್ರ ಈ ಲೋಹವನ್ನು ಇಂದಿಗೂ ಉಪಯೋಗಿಸಲಾಗುತ್ತದೆ.

ಈ ಕಂಚುಗಾರಿಕೆಯ ವೃತ್ತಿಯ ಜನಸಮುದಾಯಕ್ಕೆ ನಿಕಟಸಂಬಂಧವನ್ನು ಹೊಂದಿಕೊಂಡಂತಹ ವೃತ್ತಿ. ಪ್ರಾಚೀನ ಕಾಲದಲ್ಲಿ ರಾಜಪರಿವಾರದವರ ಮೂರ್ತಿಗಳ ತಯಾರಿಕೆಯಲ್ಲಿ, ಜನಸಾಮಾನ್ಯರಿಗೆ ಆರಾಧಿಸುವ ದೇವರ ವಿಗ್ರಹ ಮೂರ್ತಿಗಳ ತಯಾರಿಕೆಯಲ್ಲಿ, ಗೃಹಪಯೋಗಿ ವಸ್ತುಗಳನ್ನು ತಯಾರಿಸಿಕೊಟ್ಟು ಜನಸಮುದಾಯದ ನಿಕಟ ಸಂಬಂಧವನ್ನು ಹೊಂದಿದ್ದರು ಎಂದು ಹೇಳಬಹುದು.

೪.೨. ಪಾಂಚಾಳರ ಭಾಷಾ ಬಳಕೆ - ಸಮಾಜೋಭಾಷಿಕ ಅಧ್ಯಯನ

ಒಂದು ಸಮಾಜ ವಿವಿಧ ಜಾತಿ, ವರ್ಗ, ಶ್ರೇಣಿ ಸ್ಥಾನಮಾನಗಳನ್ನು ಒಳಗೊಂಡಿರುವ ವ್ಯಕ್ತಿಗಳ ಸಮೂಹ. ಇವರೆಲ್ಲ ತಮ್ಮ ನಡುವಿನ ಸಂವಹನಕ್ಕಾಗಿ ಒಂದೇ ಭಾಷೆಯನ್ನು ಬಳಸುತ್ತಿದ್ದರೂ ವ್ಯಕ್ತಿಗಳ ಸಾಮಾಜಿಕ ನೆಲೆಯ ಅಂಶಗಳು ಅವರ ಭಾಷೆಯಲ್ಲಿ ಬಿಂಬಿತವಾಗುತ್ತಿರುತ್ತವೆ. ಒಂದು ಭಾಷೆಯಲ್ಲಿನ ವೈವಿಧ್ಯತೆ, ಬಹುರೂಪತೆಗೆ ಆಯಾ ಭಾಷೆಗಳನ್ನು ಬಳಸುವವರ ವ್ಯಕ್ತಿಗಳ ಸಾಮಾಜಿಕ ನೆಲೆ ಕಾರಣವಾಗಿರುತ್ತದೆ. ಸಮುದಾಯಗಳು ಹೊಂದಿರುವ ವಿಶಿಷ್ಟ ಆಚರಣೆ, ನಂಬಿಕೆ, ಬದುಕಿನ ವಿಧಾನಗಳು ಆ ಸಮುದಾಯದ ಭಾಷಾ ಬಳಕೆಯ ರೂಪಗಳ ಮೇಲೆ ಪ್ರಭಾವ ಬೀರುತ್ತಿರುತ್ತವೆ. ತಮ್ಮ ವಿಶಿಷ್ಟ ವೃತ್ತಿ ಅಥವಾ ಜೀವನ ವಿಧಾನದ ಕಾರಣಗಳಿಂದಾಗಿಯೇ ತಮ್ಮ ಭಾಷಾ ಬಳಕೆಯ ಸಾಮಗ್ರಿಯನ್ನು ಅದೇ ಭಾಷೆಯನ್ನಾಡುವ ಬೇರೊಂದು ಸಮುದಾಯಕ್ಕಿಂತ ಭಿನ್ನವಾಗಿ ರೂಪಿಸಿಕೊಂಡಿರುತ್ತದೆ. ಉದಾಹರಣೆಗೆ:- ಒಂದೇ ಭಾಷೆಯನ್ನಾಡುವ ಇಬ್ಬರು ವ್ಯಕ್ತಿಗಳು ಬೇರೆ ಬೇರೆ ಸಾಮಾಜಿಕ ಹಿನ್ನೆಲೆಯವರಾಗಿದ್ದರೆ ಅವರ ಆಹಾರ ಕ್ರಮ ಬೇರೆಯಾಗಿದ್ದರೆ ಅವರ ಆಹಾರ ಕ್ರಮಗಳಿಗೆ ಸಂಬಂಧಿಸಿದ ಹೆಸರುಗಳಾಗಲೀ, ತಯಾರಿಕೆಯ ವಿಧಾನಗಳಲ್ಲಿಯೂ ಬೇರೆ ಬೇರೆಯಾಗಿರುತ್ತವೆ.

'ಜಾತಿ ಸಮುದಾಯದ ಎಲ್ಲೆಯೊಳಗೆ ಮಾತ್ರ ಬಳಕೆಯಾಗಬಹುದಾದ ವಿಶಿಷ್ಟ ಪದಗಳು ಕ್ರಿಯಾತ್ಮಕತೆಯ, ಅರ್ಥದ ದೃಷ್ಟಿಯಿಂದ ಬೇರೆ ಜಾತಿ ಸಮುದಾಯಗಳ ಬಳಕೆಗಿಂತ ಭಿನ್ನವಾದ ಆಯಾಮವನ್ನು ಪಡೆದಿರುವುದನ್ನು ನೋಡಬಹುದು. ಉದಾಹರಣೆಗೆ:- ಬುವ್ವ ಎನ್ನುವ ಪದ ಕನ್ನಡದಲ್ಲಿ ಬಳಕೆಯಲ್ಲಿದ್ದರೂ ಅದು ಎಲ್ಲ ಕನ್ನಡಿಗರಲ್ಲಿಯೂ ಬಳಕೆಯಲ್ಲಿಲ್ಲ. ಕೆಲವು ಸಂದರ್ಭಗಳಲ್ಲಿ ಶಿಶುಭಾಷಾ ರೂಪವಾಗಿ 'ಅನ್ನ' ಪದಕ್ಕೆ ಪರ್ಯಾಯವಾಗಿ ಬಳಕೆಯಾಗಬಹುದು. ಅದೇ ಮೈಸೂರು ಪ್ರದೇಶದ ಆದಿ ಜಾಂಬವರ ಕನ್ನಡದಲ್ಲಿ ಅದೊಂದು ವಿಶಿಷ್ಟ ಪದ. ಕುಲ ಸಂಬಂಧಿಯಾದ ಹೆಸರುಗಳ ಸೂಚನೆಯಲ್ಲಿ ಮಾತ್ರ ವಿಶೇಷವಾಗಿ ಬಳಕೆಯಾಗುತ್ತದೆ. ಕುಲದ ಹೆಸರುಗಳು ಆದಿ ಜಾಂಬವರಲ್ಲಿ ಈ ರೀತಿ ಇವೆ. ಉದಾಹರಣೆಗೆ ಹೆಣದ ಬುವ್ವ, ಹೆಡಿಗೆ ಬುವ್ವ, ಮೊರದ ಬುವ್ವ ಇತ್ಯಾದಿ. ಹಾಗೆಯೇ ಕನ್ನಡದ ಸಾಮಾನ್ಯ ಪದಕೋಶದಲ್ಲಿ ನಿರ್ದಿಷ್ಟ ಅರ್ಥಗಳನ್ನು ಪಡೆದಿರುವ ಪದಗಳು ಜಾತಿ ಎಲ್ಲೆಯೊಳಗೆ ಭಿನ್ನಾರ್ಥಗಳನ್ನೋ, ಅರ್ಥವನ್ನು ಕುಗ್ಗಿಸಿಯೋ ಹಿಗ್ಗಿಸಿಯೋ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಉದಾ:- ಕುಲುಮೆ ಎನ್ನುವುದು ಕನ್ನಡದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದೆ. ವೃತ್ತಿನಿರತ ಕಮ್ಮಾರರ ಕನ್ನಡದಲ್ಲಿ ಅದನ್ನು 'ಕಾಳಮ್ಮ' ಎಂದು ಕರೆಯುತ್ತಾರೆ. ಹಾಗೆಯೇ 'ಹುಳಿ' ಎಂಬುದು ಕನ್ನಡದಲ್ಲಿ ಒಂದು ರುಚಿ ಸೂಚಕ ಪದ. ಆದರೆ ಕೆಲವು ಜಾತಿಗಳಲ್ಲಿ (ಉದಾ:- ಬ್ರಾಹ್ಮಣ) ಅದೊಂದು ಸೇವಿಸಲು ಸಿದ್ಧಗೊಂಡ ಆಹಾರದ ಹೆಸರೂ ಆಗಬಹುದು. ಉದಾ:- "ಅವರೆಕಾಳು ಹುಳಿಯಲ್ಲಿ ಅನ್ನ ತಿನ್ನಿ..." ಆದರೆ ಅದೇ ಆದಿಕರ್ನಾಟಕದ ಕನ್ನಡದಲ್ಲಿ ಇದೊಂದು ರುಚಿಸೂಚಕ ಮಾತ್ರವಾಗಿದೆ. (ಡಾ.ಡಿ.ಪಾಂಡುರಂಗಬಾಬು ಭಾಷೆ, ಭಾಷೆಯ ಸಾಮಾಜಿಕ ಚಹರೆಗಳು, ಪುಟ-೫೧) ಹೀಗೆ ಭಾಷೆಗಿರುವ ಸಾಮಾಜಿಕ ಆಯಾಮಗಳ ಹಿನ್ನೆಲೆಯಲ್ಲಿ ಪಾಂಚಾಳ ಸಮುದಾಯದಲ್ಲಿ ಬಳಕೆಯಲ್ಲಿರುವ ಭಾಷಿಕ

ಘಟಕಗಳಾದ ಗಾದೆ, ಒಗಟುಗಳು, ಸಂಬೋಧನಾ ರೂಪಗಳು, ವ್ಯಕ್ತಿನಾಮಗಳನ್ನು ಆಧರಿಸಿ ಚರ್ಚಿಸಲು ಪ್ರಯತ್ನಿಸಿದ್ದೇನೆ.

೪.೨.೧. ಗಾದೆ-ಒಗಟುಗಳು

ಗಾದೆ ಮತ್ತು ಒಗಟುಗಳು ಭಾಷಾ ಬಳಕೆಯ ವಿಶಿಷ್ಟ ರಚನೆಗಳು. ಜನಸಂಸ್ಕೃತಿಯನ್ನು ಅಡಕಗೊಳಿಸಿಕೊಂಡಿರುವ ಬದುಕಿನ ವಿಧಾನಗಳನ್ನು, ಸಾಮಾಜಿಕ ಸಂರಚನೆಯನ್ನು, ಸಮುದಾಯದ ನಡೆನುಡಿಯನ್ನು ಬಿಂಬಿಸುತ್ತವೆ.

ಗಾದೆ ಒಗಟುಗಳಿಗೆ ಸಾಂಸ್ಕೃತಿಕ ಮಹತ್ವವಿರುವಂತೆಯೇ ಒಂದು ಸಾಮಾಜಿಕ ಸಂರಚನೆಯಲ್ಲಿ ಬದುಕುತ್ತಿರುವ ಪರಸ್ಪರ ಅವಲಂಬಿತ ಸಮುದಾಯಗಳು ಪರಸ್ಪರರ ಬಗೆಗಿನ ತಿಳುವಳಿಕೆಗಳನ್ನು ಮನೋಭಾವಗಳನ್ನು ಗಾದೆ ಒಗಟುಗಳ ಮುಖಾಂತರ ಅಭಿವ್ಯಕ್ತಿಸುತ್ತಿರುತ್ತಾರೆ. ಜನ ಸಾಮಾನ್ಯರೊಡನೆ ಉತ್ಪಾದನಾ ಕಾರಣಗಳಿಗಾಗಿ ವೃತ್ತಿ ಸಮುದಾಯಗಳು ವ್ಯವಹರಿಸಬೇಕಾಗಿರುತ್ತದೆ. ಹಾಗೆಯೇ ಜನಸಾಮಾನ್ಯರು ವಿವಿಧ ವೃತ್ತಿಯ ಸಮುದಾಯಗಳೊಂದಿಗೆ ವ್ಯವಹರಿಸಬೇಕಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ವೃತ್ತಿ ಸಮುದಾಯಗಳ ವರ್ತನೆಯಿಂದ ಜನಸಾಮಾನ್ಯರು ಗ್ರಹಿಸಿರುವ ವಿಚಾರಗಳನ್ನು ಆ ಸಮುದಾಯಗಳ ಅಂದರೆ ವೃತ್ತಿ ಸಮುದಾಯಗಳೆಡೆಗಿನ ಸಾಮಾಜಿಕ ಮನೋಭಾವಗಳನ್ನು ಭಾಷಿಕವಾಗಿ ಅಭಿವ್ಯಕ್ತಿಸುತ್ತಾರೆ. ಅಂತಹ ಅಭಿವ್ಯಕ್ತಿಯ ರೂಪಗಳು ಗಾದೆ, ಬೈಗಳು, ಒಗಟುಗಳ ರೂಪದಲ್ಲಿಯೂ ಕಾಣಿಸಿಕೊಳ್ಳುತ್ತವೆ. ಪಾಂಚಾಳರಿಗೆ ಸಂಬಂಧಿಸಿದ ಅಂತಹ ಕೆಲವು ಗಾದೆ, ಒಗಟು, ಬೈಗಳ ರೂಪಗಳನ್ನು ಇಲ್ಲಿ ಗಮನಿಸುವ ಪ್ರಯತ್ನ ಮಾಡಲಾಗಿದೆ.

ಒಗಟುಗಳು ಬುದ್ಧಿವಂತಿಕೆಗೆ ಒಡ್ಡುವ ಸವಾಲುಗಳು. ಒಂದು ವಸ್ತುವನ್ನು ಮತ್ತೊಂದರ ಮೂಲಕ ಅಂದರೆ ಇನ್ನೊಂದು ಕ್ರಿಯೆಗೆ ಒಳಪಡಿಸಿ ತುಂಬಾ ಚಮತ್ಕಾರವಾಗಿ ವರ್ಣಿಸುವ ಕ್ರಿಯೆ ಇಲ್ಲಿ ನಡೆದಿರುತ್ತದೆ. ಈ ಕ್ರಿಯೆಯಲ್ಲಿ ನಿಜಕ್ಕೂ ಸಮುದಾಯದ ಬದುಕಿನ ಇತಿಹಾಸ ಒಳಗೊಂಡಿರುತ್ತದೆ. ಈ ಒಗಟುಗಳು ಸಮುದಾಯಗಳ ಆಚಾರ-ವಿಚಾರ-ನಡೆ-ನುಡಿ-ನಂಬಿಕೆಗಳನ್ನು ಗೂಡಾರ್ಥಗಳ ಮುಖಾಂತರ ಹಾಸ್ಯ ಭರಿತವಾಗಿ ಬಿಂಬಿಸುತ್ತವೆ. ಒಗಟುಗಳಿಗೆ ಒಡಪು, ಒಂಟು, ಒಡಗತೆ, ಒಡಚುವ ಕತೆ ಎಂದೆಲ್ಲ ಕರೆಯಲಾಗುತ್ತದೆ. ಒಗಟು ಎಂಬ ಪದವು ಒರ್+ಕಟ್ಟು (ಬಂಧ)>ಒರ್ಗಟ್ಟು>ಒಗ್ಗಟ್ಟು>ಒಗಟು ಎಂದು ಸುಲಭೀಕರಣಗೊಂಡಿದೆ ಎಂದು ಅನೇಕ ವಿದ್ವಾಂಸರು ತಿಳಿಸುತ್ತಾರೆ. 'ಜೀವನದ ಅನುಭವ ವಲಯವನ್ನೇ ವಸ್ತುವಾಗಿಸಿಕೊಳ್ಳುವ ಒಗಟು, ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರ ಇವೆರಡರ ಸಮ್ಮಿಲನದಿಂದ ರೂಪು ಪಡೆಯುತ್ತದೆ. ಇದರ ಪ್ರಾಸನು ಪ್ರಾಸಗಳು, ಲಯಗಳು ಒಂದು ವಸ್ತುವನ್ನು ಇನ್ನೊಂದೆಂಬ ಭ್ರಮೆ ಮೂಡಿಸುವಲ್ಲಿ ಪ್ರಭಾವ ಬೀರುವ ವಿಶೇಷಣಗಳು ಭಾಷೆಯ ಮಟ್ಟದಲ್ಲಿ ಆಕರ್ಷಕವಾದ ಗುಣಗಳು, ಒಂದನ್ನು ಇನ್ನೊಂದೆಂದು ಭ್ರಮಿಸುವಂತೆ ಒತ್ತಾಯಿಸುವಲ್ಲಿ ಕಾಣಿಸುವ ಚಮತ್ಕಾರ ಶಕ್ತಿಗಳೆಲ್ಲ ಮೂಲವಾಗಿ ಬುದ್ಧಿಯ ಕಸರತ್ತುಗಳೇ. ಒಂದು ವಸ್ತುವು ಯಾವುದರಂತಿದೆ ಎಂದು ಥಟ್ಟನೆ ನಿರ್ಧರಿಸಿಕೊಳ್ಳುವ ಅದರ ಆಕಾರ, ಸ್ವರೂಪ, ಲಕ್ಷಣಗಳನ್ನು ಥಟ್ಟನೆ ಗ್ರಹಿಸುವ ಬುದ್ಧಿಯು ಭಾಷಾ

ಮಾಧ್ಯಮದ ಮೂಲಕ ಅದಕ್ಕೊಂದು ರೂಪುಕೊಡುತ್ತದೆ ಎಂದು ವಿದ್ವಾಂಸರ ಅಭಿಪ್ರಾಯ ಪಡುತ್ತಾರೆ. (ಅಯ್ಯುಗಾದೆಗಳು ಹಾಗೂ ಒಗಟುಗಳು, (ಸಂ) ಡಾ.ವೀರಣ್ಣ ಎಸ್, ದಂಡೆ, ಪುಟ-೧೮)

ಒಗಟು ಮನುಷ್ಯನ ಕುತೂಹಲ ಹೆಚ್ಚಿಸುವುದರ ಜೊತೆಗೆ ಲೋಕಶಕ್ತಿ, ಲೋಕಜ್ಞಾನವನ್ನು ಅರಿತುಕೊಳ್ಳಬಹುದು. ಇಂತಹ ಒಗಟುಗಳನ್ನು ಸಮುದಾಯದವರು ಹಬ್ಬ ಹರಿದಿನಗಳು, ಕೆಲಸದ ಸಮಯದಲ್ಲಿ, ಬಿಡುವಿನ ವೇಳೆಯಲ್ಲಿ ಅವರಲ್ಲಿಯೇ ಎರಡು ಪಂಗಡಗಳಾಗಿ ಸೇರಿಕೊಂಡು ಪರಸ್ಪರ ಒಬ್ಬರಿಗೊಬ್ಬರ ಒಗಟುಗಳನ್ನು ಹಾಕಿಕೊಳ್ಳುತ್ತ ತಮ್ಮ ಬುದ್ಧಿ ಚಮತ್ಕಾರವನ್ನು ಪ್ರದರ್ಶಿಸುತ್ತಾರೆ. ಒಬ್ಬನು ಒಗಟನ್ನು ಹಾಕಿದ ನಂತರ ಎದುರಿಸುವರು ಎಂಥ ಚಾಣಕ್ಷರಿದ್ದರು ಕ್ಷಣ ಹೊತ್ತು ಮೌನವಾಗಿಬಿಡುತ್ತಾರೆ. ಅಂದರೆ ಅದರಲ್ಲಿ ಜನಸಮುದಾಯಗಳ ಬದುಕಿನ ದೈನಂದಿನ ಜೀವನ ಕ್ರಮಗಳು ಅಡಗಿರುತ್ತವೆ. ಆ ಒಗಟನ್ನು ಬಿಡಿಸಿ ಹೇಳಿದಾಗ ಅದರ ಅರ್ಥ ಇಷ್ಟೇನಾ ಎನಿಸುತ್ತದೆ. ಆದರೂ ಕೂಡ ಎಂತವರನ್ನು ಅದು ವಿಸ್ಮಯವಾಗಿ ಮಾಡುವ ಕೌಶಲ್ಯ ಒಗಟುಗಳಿಗೆ ಇರುತ್ತದೆ. ಕೇಳುಗರಿಗೆ ಕುತೂಹಲವಾಗಿ, ಕಾವ್ಯಮಯವಾಗಿ ಕೇಳುತಲಿರುತ್ತವೆ. ಈ ತರಹವಿರುವ ಒಗಟುಗಳು ಪಾಂಚಾಳ ಸಮುದಾಯಕ್ಕೆ ಸಂಬಂಧಿಸಿದಂತೆಯೂ ಬಳಕೆಯಾಗಿವೆ. ಅವುಗಳನ್ನು ಇಲ್ಲಿ ಗಮನಿಸುವ ಪ್ರಯತ್ನ ಮಾಡಲಾಗಿದೆ.

ಊಟಕ್ಕೆ ಮೊದಲು ಉಪ್ಪಿನಕಾಯಿ ಇದ್ದಂತೆ ಮಾತಿಗೆ ಮೊದಲು ಗಾದೆ ಎಂಬ ಮಾತು ಲೋಕಪ್ರಸಿದ್ಧವಾಗಿದೆ. ಇಂತಹ ಗಾದೆ ಮಾತುಗಳು ನಾಡಿನ ಜನ ಜೀವನಾನುಭವದ ನುಡಿಮುತ್ತುಗಳಾಗಿವೆ. ಈ ಕಾರಣಗಳಿಂದಾಗಿ ಗಾದೆಗಳನ್ನು ನಾಣ್ನುಡಿ, ಲೋಕೋಕ್ತಿ, ಶಾಸ್ತ್ರ ಹಾಗೂ ಜನಶ್ರುತಿ ಎಂದು ಗಾದೆಗಳಿಗೆ ಪರ್ಯಾಯ ಹೆಸರುಗಳಿವೆ. ಲೋಕೋಕ್ತಿ ಎಂಬುದು (ಲೋಕ+ಉಕ್ತಿ) ನಾಣ್ನುಡಿ ಎಂಬುದಕ್ಕೆ ಸಮಾನಾರ್ಥಕ ಸಂಸ್ಕೃತ ಶಬ್ದ. 'ನಾಡು+ನುಡಿ'ಯೇ ನಾಣ್ನುಡಿ. ಮಾನವ ತನ್ನ ಜೀವನದಲ್ಲಿ ಸುಖ, ದುಃಖಗಳೆರಡನ್ನು ಅನುಭವಿಸಿರುತ್ತಾನೆ. ತಾನು ಅನುಭವಿಸಿರುವ ನೋವು, ನಲಿವುಗಳನ್ನು ಉಪದೇಶಾತ್ಮಕವಾಗಿ ಸಂದೇಶ ರೂಪದಲ್ಲಿ, ಚಿಕ್ಕ ವಾಕ್ಯಗಳಲ್ಲಿ ತಿಳಿಸುತ್ತಾನೆ. ಈ ವಾಕ್ಯಗಳನ್ನೇ ಗಾದೆ, ನಾಣ್ನುಡಿ ಎಂದೆಲ್ಲಾ ಕರೆಯಬಹುದು. ಇವುಗಳನ್ನು ಹಲವರ ಅನುಭವಗಳು ಎಂದು ಹೇಳಬಹುದು. ಪ್ರಾಚೀನ ಕಾಲದಿಂದಲೂ ಗಾದೆಗಳ ಬಳಕೆ ನಾಡಿನಾದ್ಯಂತ ಜನ ಜೀವನದಲ್ಲಿ ಹಾಸುಹೊಕ್ಕಾಗಿ ಉಳಿದು ಬೆಳೆದುಕೊಂಡು ಬಂದಿವೆ.

ಗಾದೆಗಳು ಅನುಭವದಿಂದ ಹುಟ್ಟಿದಂತಹವುಗಳು ಎಂದು ಹೇಳಬಹುದು. ಈ ಅನುಭವ ಕೇವಲ ಒಬ್ಬನದೇ ಅಲ್ಲ ಜನ ಸಾಮಾನ್ಯರೆಲ್ಲರದೂ. ಆದರೆ ಈ ಗಾದೆಯನ್ನು ಕಟ್ಟುವನು ಒಬ್ಬನು ಮಾತ್ರ. ಆದರೆ ಅವುಗಳಿಗೆ ಹಲವರನ್ನು ಪ್ರಭಾವಿತರನ್ನಾಗಿ ಮಾಡುವ ಶಕ್ತಿ ಅವುಗಳಲ್ಲಿ ಅಡಕವಾಗಿರುತ್ತದೆ. ಅಂದರೆ ಲೋಕಾನುಭವ ಮೂಡಿಬಂದಿರುವುದು ಕಂಡುಬರುತ್ತದೆ. ಇವುಗಳ ಲಕ್ಷಣಗಳನ್ನು ಕುರಿತು ಹಲವು ವಿದ್ವಾಂಸರು ಹಲವಾರು ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಇವರುಗಳಲ್ಲಿ 'Earl Ryssel'ರು ಹೇಳುವಂತೆ 'ಗಾದೆಯನ್ನು ಕಟ್ಟಿದ ಮಾತ್ರಕ್ಕೆ ಅದು ಗಾದೆ ಅನಿಸಿಕೊಳ್ಳಲಾರದು.

ಜನಪ್ರಿಯತೆ ಹೊಂದಿ ಜನ ಜೀವನದಲ್ಲಿ ಚಲಾವಣೆ ಆಗಲೇಬೇಕು ಹಾಗೂ ಜೇಮ್ಸ್ ಎ ಕೆಲ್ಲೊರವರ ಹೇಳುವಂತೆ ಸಂಕ್ಷಿಪ್ತತೆ, ತೀಕ್ಷ್ಣತೆ, ಸಾರವತ್ತತೆ ಹಾಗೂ ಜನಪ್ರಿಯತೆಗಳೆ ಗಾದೆಯ ಲಕ್ಷಣಗಳೆಂದಿರುವುದನ್ನು ಒಪ್ಪಬಹುದು.

ಗಾದೆಗಳು ಭಾಷೆಯ ಜೀವಾಳವಿದ್ದಂತೆ. ಅನುಭವದ ವೇದಗಳು ಇದ್ದಂತೆ. ಇವು ಜನ ಜೀವನದ ಗುಣದೋಷಗಳನ್ನು ಎತ್ತಿ ತೋರಿಸಿ, ರೀತಿ-ನೀತಿಗಳನ್ನು ತಿಳಿಸಿಕೊಡುವಲ್ಲಿ ಶ್ರೇಷ್ಠ ಮಾರ್ಗದರ್ಶಿಗಳಾಗಿವೆ. ಗಾದೆಗಳಲ್ಲಿ ಪ್ರಾಸಬದ್ಧತೆ, ಶೈಲಿ, ಸೊಗಸು, ಸತ್ವ, ಅಲಂಕಾರಿಕ ಭಾಷೆಯನ್ನಾಗಿಸಿ ಆಕರ್ಷಿಸುತ್ತವೆ. ಗಾದೆಗಳು ಚಿಕ್ಕ ವಾಕ್ಯಗಳಂತೆ ಇದ್ದರೂ ಕೂಡ ಕೊಡುವ ಅರ್ಥ ಹಿರಿಯ ಅರ್ಥವನ್ನು ಕೊಡುತ್ತದೆ. ಆದ್ದರಿಂದ ಗಾದೆಗಳು ಜನ ಜೀವನವನ್ನು ವಿಮರ್ಶಿಸಿ ಪ್ರತಿಬಿಂಬಿಸುವ ಭಾಷೆಯಾಗಿದೆ.

ಗಾದೆಯನ್ನು ವೇದಕ್ಕೆ ಹೋಲಿಸಿದ್ದಾರೆ. 'ಗಾದೆ ವೇದಕ್ಕೆ ಸಮಾನ'ವೆಂದೂ 'ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ' ಎಂದೂ 'ಜನವಾಣಿಯೇ ಜನಾರ್ಧನವಾಣಿ' ಎಂಬ ಲೋಕೋಕ್ತಿಗಳಂತೆ ಇವುಗಳನ್ನು ಇಂತಹವರೆ ಪ್ರಯೋಗಿಸಬೇಕು ಎಂಬ ನಿಯಮಗಳಿಲ್ಲದೆ ಮಾನವನ ಸಹಜ ಮಾತುಕತೆಗಳಿಂದ ಹಿಡಿದು ಬೋಧನೆ, ಚರ್ಚೆ, ಬರಹ, ಭಾಷಣಗಳಲ್ಲಿ ಒಟ್ಟಿನಲ್ಲಿ ಭಾಷೆ ಬಳಸುವ ಕಡೆಯಲೆಲ್ಲ ಗಾದೆಗಳು ಆ ಸಂದರ್ಭಕ್ಕೆ ಅನುಗುಣವಾಗಿ ಆ ಮಾತು ಅನಿವಾರ್ಯ ಅಂಶವಾಗಿ ಪ್ರವೇಶವಾಗಿರುತ್ತದೆ. ಹಾಗೂ ನಾವು ಬದುಕಿನಲ್ಲಿ ಅಳವಡಿಸಿಕೊಂಡ ಸಂಪ್ರದಾಯ, ಆಚರಣೆ, ನಂಬಿಕೆ, ವಿಧಿ-ನಿಷೇಧ ಮುಂತಾದವುಗಳು ಗಾದೆಗಳಾಗಿ ರೂಪುಗೊಳ್ಳುತ್ತವೆ. ಗಾದೆಗಳಿಗೆ ಮೇಲ್ನೋಟಕ್ಕೆ ಕಾಣುವ ಅರ್ಥ ಬಂದಿದ್ದರೆ ಅದರ ಒಳಾರ್ಥ ಬೇರೊಂದು ಇರುತ್ತದೆ. ಆ ಒಳಾರ್ಥವನ್ನು ತಿಳಿದುಕೊಂಡಾಗ ಮಾತ್ರ ಗಾದೆಯ ಉದ್ದೇಶ ಸ್ಪಷ್ಟವಾಗಿ ತಿಳಿಯುತ್ತದೆ. ಹೀಗಾಗಿ ಗಾದೆಗಳನ್ನು ಒಳಹೊಕ್ಕು ಅದರ ಅರ್ಥವನ್ನು ಗ್ರಹಿಸುವ ಪ್ರಯತ್ನ ನಮ್ಮದಾಗಬೇಕು. ಗಾದೆಯನ್ನು ವಿಸ್ತರಿಸಲು ಕಲ್ಪನಾಶಕ್ತಿ ಅತ್ಯವಶ್ಯಕ. ಗಾದೆಯ ಬಗ್ಗೆ ವಿಚಾರ ಮಾಡುವಾಗ ಅದರ ಹಿನ್ನೆಲೆ ಏನು ಎಂದು ತೀಳಿದರೆ ಮಾತ್ರ ಅದರ ಮೌಲ್ಯ ಗೊತ್ತಾಗುತ್ತದೆ. ಇಂತಹ ಗಾದೆಗಳು ಅನುಭವದ ಸರ್ವಕಾಲಿಕ ಸಂಗಾತಿಯನ್ನು ಸಾರುತ್ತವೆ. ಇಂತಹವುಗಳು ಚಿರಂಜೀವಿಯಾಗಿ ಉಳಿಯುತ್ತವೆ.

ಗಾದೆ ಆಕಾರದಲ್ಲಿ ಚಿಕ್ಕದಾಗಿದ್ದರೂ ಸಾವಿರ ಮಾತಿನಲ್ಲಿ ಹೇಳಬಹುದಾದ್ದನ್ನು ನಾಲ್ಕು ಮಾತುಗಳಲ್ಲಿಯೇ ಒಳಗೊಂಡಿರುತ್ತದೆ. ಸಮುದಾಯಗಳ ಜೀವನಾನುಭವಗಳೇ ಅವುಗಳ ಉಸಿರು. ಕಲಾತ್ಮಕತೆ ಅವುಗಳ ಜೀವಾಳ, ಸಂಜೀವನ ಶಕ್ತಿ ಮತ್ತು ಲೋಕಪ್ರಿಯತೆ ಇವುಗಳ ಚಿರಂತನತೆಯೆಂದು ಹೇಳಬಹುದು. ನೂರಾರು ಜ್ಞಾನವೃದ್ಧರು, ವಿವೇಕಿಗಳ, ಅನುಭವಿಗಳ ಅನುಭವಾಮೃತದ ರಸಾಯನವೇ ಗಾದೆ. ಅದು ಪ್ರಾಚೀನ ಕಾಲದಿಂದಲೂ ಬೆಳೆದ ರಸಪಾಕ. ಹಲವು ತಿಳುವಳಿಕಸ್ತರ ಜೀವಸಾರ, ಅವು ಹಠಾತ್ತನೆ ಅನೈಚ್ಛಿಕವಾಗಿ ಚಿಮ್ಮಿದರೂ ಅವುಗಳ ಹಿಂದೆ ನೂರಾರು ಜನ್ಮಗಳ, ನೂರಾರು ಹಿರಿಯರ ಸಂಸ್ಕಾರ ಪರಂಪರೆಯಿದೆ. ಅನುಭವ ಮತ್ತು ಪ್ರಯೋಗಗಳೇ ಗಾದೆಯ ಉಗಮಕ್ಕೆ ಮೂಲ. ಆದ್ದರಿಂದಲೇ ಎಲ್ಲಾ ಜ್ಞಾನ-ವಿಜ್ಞಾನಗಳ ತವರೂರು ಎನ್ನುವುದು.

ಅನುಭವ ಕೇವಲ ಒಬ್ಬ ಮನುಷ್ಯನದಲ್ಲ. ಇಡಿ ಜನಸಾಮಾನ್ಯರೆಲ್ಲರದೂ. ಆದರೆ ಗಾದೆಯನ್ನು ಕಟ್ಟುವುದು ಒಬ್ಬನು ಮಾತ್ರ ಆದರೆ ಅವು ಹಲವರನ್ನು ಪ್ರಭಾವಿತರನ್ನಾಗಿ ಮಾಡುವ ಶಕ್ತಿ ಈ ಗಾದೆಗಳಿಗಿರುತ್ತದೆ. ಭಾವಾರ್ಥಗಳ ಸ್ಫುಟತ್ವಕ್ಕೆ, ಶೀಘ್ರ ಬೋಧನೆಗೆ, ಪರಿಣಾಮ ಸಾಧನೆಗೆ ಗಾದೆಗಳಿಂದ ಲಾಭವಾಗುವಂತೆ ಒಂದು ಜನಾಂಗದ ಸಾಹಿತ್ಯ, ಸಾಂಸ್ಕೃತಿಕ ಸ್ವರೂಪ, ಅವರ ಅನುಭವಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ಗಾದೆಗಳು ಸಹಾಯಕವಾಗುತ್ತವೆ. ಹಾಗೂ ಆಯಾ ವಿಷಯದ ಸಂಶೋಧಕನಿಗೆ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಸಮುದಾಯದ ವಿಚಾರ ತಿಳಿದುಕೊಳ್ಳಲು ಇವು ಸಹಾಯಕವಾಗುತ್ತವೆ. ಇಂತಹ ಮಹತ್ವವನ್ನು ಹೊಂದಿರುವ ಗಾದೆಗಳು ಆಯಾ ಜನರ ಸಂಸ್ಕೃತಿಯ ಪಾಶ್ವ ಭೂಮಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದ ಮೇಲೆ ಜನಜೀವನದ ಸಂಸ್ಕೃತಿಯ ಅಂತರಂಗವನ್ನು ಗಾದೆಗಳ ಮಾತಿನಲ್ಲಿ ಕಾಣಬಹುದು ಎಂದಾಯಿತು. ಗಾದೆಗಳು ಸಾಮಾಜಿಕ ಚಹರೆಯಾಗಿ ಕಾರ್ಯನಿರ್ವಹಿಸುತ್ತವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಗಾದೆಗಳು ಸಮುದಾಯಗಳ ಪ್ರತಿಮೆಗಳಂತೆ ನಿದರ್ಶನವಾಗಿರುವುದು ಕಾಣಬಹುದಾಗಿದೆ.

"ನಮ್ಮ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ನಾವು ಪಡೆಯುವ ಜಾತಿ ಮತ್ತು ಲಿಂಗ ವ್ಯವಸ್ಥೆಯ ಮೌಲ್ಯಗಳು ನಾವು ಕಲಿಯುವ ಗಾದೆಗಳ ಜೊತೆಯಲ್ಲೆ ನಮ್ಮೊಳಗನ್ನು ಸೇರಿರುತ್ತದೆ. ಜನ ಸಾಮಾನ್ಯರ ಅಪ್ರಜ್ಞಾಪೂರ್ವಕ ನೆಲೆಗಳಲ್ಲಿ ಕುಳಿತ ಈ ಗಾದೆಗಳೊಳಗೆ ಜಾತಿ ವ್ಯವಸ್ಥೆಯ ಮೌಲ್ಯಗಳು ಕುಳಿತಿರುವುದರಿಂದ ಅವು ಅತ್ಯಂತ ಸುಭದ್ರವಾಗಿದ್ದು ರೂಢಿಗೊಳ್ಳುತ್ತ ಹೋಗುತ್ತವೆ. ಜೀವನ ಸ್ವರೂಪ ಬದಲಾದಂತೆ ನಾಗರೀಕತೆಯ ವಿನ್ಯಾಸ ವ್ಯತ್ಯಾಸಗೊಂಡಂತೆ ವಿಚಾರ ದೃಷ್ಟಿ ಹೊಸದಾದಂತೆ ಕ್ರಮೇಣ ಕೆಲವು ಗಾದೆಗಳು ಒಂದು ಭಾಷಾ ಸಂಸ್ಕೃತಿಯಿಂದ ಕಳಚಿಕೊಂಡು ಬಿಡಬಹುದು. ಇಲ್ಲವೆ ಪಳಿಯುಳಿಕೆಗಳಾಗಿ ಬಿಡಬಹುದು. ಆದರೆ ಈ ಪ್ರಕ್ರಿಯೆ ಬಹಳ ನಿಧಾನ ಆದಾಗ್ಯೂ ಗಾದೆಗಳು ಬಳಸುವ ಹೊರ ಚೌಕಟ್ಟು ಒಂದು ಜೀವನ ವಿಧಾನದಿಂದ ಹೊರಗುಳಿದಾಗಲೂ ಅದರ ಒಳ ಅರ್ಥ ಪ್ರಸ್ತುತತೆಯನ್ನು ಕಳೆದುಕೊಳ್ಳದೆ ಇರಬಹುದು" (ವಿಜಯಾದಬ್ಬೆ, ಜಾನಪದ ಅನ್ವಯಿಕತೆ, ಪು-೪೪) ಕೇವಲ ಗಾದೆಗಳನ್ನು ಜಾತಿ ವ್ಯವಸ್ಥೆಯನ್ನು ತಿಳಿಯುವುದಕ್ಕೆ ಉಪಯೋಗಿಸಿದರೆ ಅದರ ಮೌಲ್ಯ ಅಪೂರ್ಣವಾಗುತ್ತದೆ. ಅದಕ್ಕಾಗಿ ಚಾರಿತ್ರಿಕ ಸಂಘಟನೆಗಳನ್ನು ಬೆಳಕಿಗೆ ತರಲು, ಭಾಷಾಶಾಸ್ತ್ರ ವಿಷಯಗಳನ್ನು ಪರಿಶೀಲಿಸಲು, ಸಮಾಜದಲ್ಲಿಯ ಸಂಪ್ರದಾಯ, ಪದ್ಧತಿಗಳನ್ನು ಇವುಗಳ ಮೂಲಕ ತಿಳಿದುಕೊಂಡಾಗ ಮಾತ್ರ ನಮಗೆ ಪೂರ್ಣವಾಗುತ್ತವೆ. ಈ ಹಿನ್ನೆಲೆಯಲ್ಲಿ ಪಾಂಚಾಳ ಸಮುದಾಯದ ಮೇಲೆ ಬಂದಿರುವ ಗಾದೆಗಳನ್ನು ಈ ಅಧ್ಯಯದಲ್ಲಿ ಚರ್ಚಿಸಲಾಗಿದೆ.

೧. ಚಳಿಜ್ವರ ಇಲ್ಲದೆ ಬೆಂಕಿ ಕಾಯಿಸುವನಾರು? (ಥಂಡಿ ಇಲ್ದೆ ಕಾಸ್ತಾನ)

ಈ ಒಗಟು ಕಮ್ಮಾರನನ್ನು ಕೇಂದ್ರ ಮಾಡಿಕೊಂಡು ರಚನೆಯಾಗಿದೆ. ಕಮ್ಮಾರನ ಕೆಲಸ ಕಬ್ಬಿಣದ ಕೆಲಸ. ಕಮ್ಮಾರ ರೈತರಿಗೆ ಬೇಕಾದ ಕೃಷಿ ಉಪಕರಣ, ವಸ್ತುಗಳನ್ನು ಮಾಡಿಕೊಡುತ್ತಾನೆ. ಈ ಉಪಕರಣ, ವಸ್ತುಗಳನ್ನು ತಯಾರಿಸುವಾಗ ತನ್ನ ಕುಲುಮೆಯಲ್ಲಿ ಕಬ್ಬಿಣವನ್ನು ಕಾಸಿ ಹದ ಬಂದ ಮೇಲೆ ಅಡಿಗಲ್ಲಿನ

ಮೇಲಿಟ್ಟು ತಾನು ತಯಾರಿಸಬೇಕೆಂದಿರುವ ಸಾಮಗ್ರಿಯನ್ನು ತಯಾರಿಸಿಕೊಡುತ್ತಾನೆ. ಈ ಕೆಲಸ ಮಾಡುವ ಸಂದರ್ಭದಲ್ಲಿ ಬಿಸಿಲು, ಚಳಿಯನ್ನದೆ ತನ್ನ ಜೀವನ ನಿರ್ವಹಿಸಿಕೊಳ್ಳಲು ಕುಲುಮೆಗೆ ಬೆಂಕಿಹಾಕಿ ಕೆಲಸವನ್ನು ಮಾಡಲು ತಯಾರು ಆಗುತ್ತಾನೆ. ಕೆಲಸದ ಸಂದರ್ಭದಲ್ಲಿ ಕಮ್ಮಾರ ಕುಲುಮೆಯ ಮುಂದೆ ಕುಳಿತುಕೊಂಡಿರುತ್ತಾನೆ. ಕಬ್ಬಿಣ ಚೆನ್ನಾಗಿ ಕಾಯಲು ಅದರ ಮೇಲೆ ಇದ್ದಿಲು, ನೆಲ್ಲುತ್ತ್ಯಾಡನ್ನು ಹಾಕುವುದು ಹಾಗೂ ಕುಲುಮೆಯ ಬೆಂಕಿ ಚೆನ್ನಾಗಿ ಉರಿಯಲು ಬಕ್ಕಸಗೋಲಿನಿಂದ ಇದ್ದಿಲನ್ನು ತಳ್ಳುತ್ತಿರುತ್ತಾನೆ. ಈ ತರಹದ ಕ್ರಿಯೆಯನ್ನು ಕಮ್ಮಾರ ಕುಲುಮೆಯ ಪಕ್ಕದಲ್ಲಿಯೇ ಕುಳಿತುಕೊಂಡು ಮಾಡುತ್ತಿರುತ್ತಾನೆ. ಈ ಸಂದರ್ಭದಲ್ಲಿ ಕುಲುಮೆಯಿಂದ ಬರುವ ಶಾಖ ಅವನಿಗೆ ಯಾವಾಗಲೂ ಮೈಗೆ ಸ್ಪರ್ಶವಾಗುತಲಿರುತ್ತದೆ. ರೈತರ ಕೆಲಸಗಳು ಚಳಿಗಾಲ, ಬೆಸಿಗೆ ಕಾಲ ಎನ್ನದೆ ಎಲ್ಲ ಸಂದರ್ಭಗಳಲ್ಲಿಯೂ ನಡೆಯುತಲಿರುತ್ತವೆ. ಯಾವ ಸಮಯದಲ್ಲಿಯಾದರು ಕುಲುಮೆ ಕೆಲಸ ಮಾಡಿದರು ಶಾಖ ಸ್ಪರ್ಶವಾಗುವುದು ಕಾಯಂ. ಮನುಷ್ಯನಿಗೆ ಚಳಿಜ್ವರ ಬಂದಾಗ ಒಂದು ಪುಟ್ಟಿಯಲ್ಲಿ ಬೆಂಕಿಯನ್ನು ಹಾಕಿ ತನ್ನ ಕೈಕಾಲುಗಳನ್ನು ಕಾಯಿಸಿಕೊಳ್ಳಲಿಕ್ಕೆ ಪುಟ್ಟಿಯನ್ನು ಮುಂದಿಡುತ್ತಾರೆ. ಚಳಿಜ್ವರ ಬಂದಾಗ ರೋಗಿಗೆ ಮನೆಯಲ್ಲಿಯೇ ಮಾಡುವ ಉಪಚಾರ, ಇದನ್ನೇ ಜನಸಮುದಾಯದವರು ಒಂದು ವೃತ್ತಿ ಮಾಡುವ ಸಮುದಾಯಕ್ಕೆ ಹೋಲಿಸಿ ಒಗಟನ್ನು ಕಟ್ಟಿದ್ದಾರೆ. ಅಂದರೆ ಯಾವಾಗಲೂ ಕುಲುಮೆಯ ಮುಂದೆ ಕುತು ಕೆಲಸ ಮಾಡುವ ಕಮ್ಮಾರನಿಗೆ ಶಾಖದ ಸ್ಪರ್ಶ ಇದ್ದೇ ಇರುತ್ತದೆ. ಈ ದೃಷ್ಟಿಯಿಂದ ಈ ಮೇಲಿನ ಒಗಟು ಬಳಕೆಯಾಗಿದೆ.

೨. ಒಬ್ಬನು ನಿಲ್ಲುತ್ತಾನೆ ಇನ್ನೊಬ್ಬನು ಬಡಿಯುತ್ತಾನೆ.

ಈ ಒಗಟು ಬಡಗಿಯ ವೃತ್ತಿಯ ಉಪಕರಣಗಳ ಕೆಲಸದ ಬಗ್ಗೆ ತಿಳಿಸುತ್ತದೆ. ಬಡಗಿಗೆ ಮುಖ್ಯವಾಗಿ ತಾನು ಕೆಲಸ ಮಾಡಲು ಉಳಿ, ಕೊಡತಿ ಬೇಕೆಬೇಕು. ಇವುಗಳಿಲ್ಲದೆ ಕಟ್ಟಿಗೆಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ. ಇಂತಹ ಉಪಕರಣಗಳನ್ನು ಇಟ್ಟುಕೊಂಡು ಒಗಟುಗಳನ್ನು ರಚನೆ ಮಾಡಿದ್ದಾರೆ. ಅಂದರೆ ವೃತ್ತಿಯನ್ನು ಕೈಗೊಳ್ಳುವಾಗ ಮುಖ್ಯವಾಗಿ ಈ ಉಪಕರಣಗಳು ಬೇಕೆಬೇಕು. ಇವು ಇಲ್ಲದಿದ್ದರೆ ಕೆಲಸ ಕೈಗೊಳ್ಳಲು ಸಾಧ್ಯವಿಲ್ಲ. ಒಬ್ಬನು ನಿಲ್ಲುತ್ತಾನೆ ಇನ್ನೊಬ್ಬನು ಬಡಿಯುತ್ತಾನೆ. ಅಂದರೆ ಕೆಲಸದ ಸಂದರ್ಭದಲ್ಲಿ ಬಡಗಿಯು ಉಳಿಕೊಡತಿಯನ್ನು ತೆಗೆದುಕೊಂಡು ಕಟ್ಟಿಗೆಯಲ್ಲಿ ಉಗುಲು ತೊಡುವಾಗ ಉಳಿಯನ್ನು ಕಟ್ಟಿಗೆಯ ಮೇಲಿಟ್ಟು ಕೊಡತಿಯಿಂದ ಬಡಿಯುತ್ತಾನೆ. ಅವಾಗ ಉಳಿಯು ಕಟ್ಟಿಗೆಯನ್ನು ಎಬ್ಬುತ್ತದೆ. ಕಟ್ಟಿಗೆ ಎಬ್ಬುವಾಗ ಕೊಡತಿಯ ಕೆಲಸ ಇರುವುದಿಲ್ಲ ಅದನ್ನು ಸುಮ್ಮನೆ ಕೈಯ್ಯಲ್ಲಿ ಇಡಿದುಕೊಂಡಿರುತ್ತಾನೆ. ಕೊಡತಿಯಿಂದ ಉಳಿಗೆ ಬಡಿಯುವಾಗ ಉಳಿಯನ್ನು ಕಟ್ಟಿಗೆಯ ಮೇಲೆ ಕೈಯಿಂದ ಇಡಿದುಕೊಂಡಿರುತ್ತಾರೆ. ಈ ಕ್ರಿಯೆಯನ್ನು ಗಮನಿಸಿದ ಅನುಭವಿಕರು ಒಬ್ಬನು ನಿಲ್ಲುತ್ತಾನೆ ಇನ್ನೊಬ್ಬನು ಬಡಿಯುತ್ತಾನೆ ಎಂದು ಒಗಟನ್ನು ಕಟ್ಟಿ ಅದಕ್ಕೆ ಉತ್ತರವಾಗಿ ಉಳಿ ಮತ್ತು ಕೊಡತಿಯನ್ನು ತಿಳಿಸಿದ್ದಾರೆ.

ಹೀಗೆ ಪಾಂಚಾಳ ವೃತ್ತಿಗಳಿಗೆ ಸಂಬಂಧಿಸಿದಂತೆ ಒಗಟುಗಳು ರಚನೆಯಾಗಿರುವುದನ್ನು ಕಾಣಬಹುದಾಗಿದೆ. ಪಾಂಚಾಳರಲ್ಲಿ ಶಿಲ್ಪಿ, ಕಂಚುಗಾರರಿಗೆ ಸಂಬಂಧಿಸಿದ ಹಾಗೆ ಗಾದೆ, ಒಗಟುಗಳು ಬಳಕೆಯಲ್ಲಿರುವುದು ತೀರ ಕಡಿಮೆ. ಇವರ ವೃತ್ತಿ ದೇವರ ವಿಗ್ರಹಗಳನ್ನು ತಯಾರು ಮಾಡಿಕೊಡುವುದಾಗಿರುವುದರಿಂದ ಇವರ

ಬಗ್ಗೆ ಒಗಟು, ಗಾದೆಗಳು ಬಳಕೆಯಾಗಿರುವುದು ಕಡಿಮೆ ಎಂದೇ ಹೇಳಬಹುದು. ಅದೇ ಕಮ್ಮಾರ, ಬಡಿಗ, ಅಕ್ಕಸಾಲಿಯರ ಬಗ್ಗೆ ಹೆಚ್ಚಾಗಿ ಒಗಟು ಗಾದೆಗಳು ಬಳಕೆಯಲ್ಲಿವೆ. ಇವರು ರೈತಾಪಿ ಕುಟುಂಬಗಳಿಗೆ ಹತ್ತಿರ ಹಾಗೂ ರೈತಾಪಿ ಸಮುದಾಯವನ್ನು ಅವಲಂಬಿಸಿ ಜೀವನ ನಡೆಸುವವರಾಗಿದ್ದಾರೆ. ಇವರ ಮೇಲೆ ರಚನೆ ಆದ ಹಾಗೆ ಶಿಲ್ಪಿ ಕಂಚುಗಾರನ ಮೇಲೆ ಬಂದಿಲ್ಲ ಎನ್ನುವುದಕ್ಕೆ ಅವರ ವೃತ್ತಿಯ ಶ್ರೇಣಿಕರಣವೇ ಎನ್ನಬಹುದು ಅಥವಾ ದೇವರ ಮೂರ್ತಿ ತಯಾರಕನಿಗೆ ಗಾದೆ ಒಗಟು ಕಟ್ಟುವುದು ಸರಿಯಲ್ಲ ಎಂಬ ಭಾವನೆ ಬೆಳೆದುಬಂದಿರಬಹುದು.

೧. ಅಕ್ಕಸಾಲಿಗಿಂತ ಕಳ್ಳನಿಲ್ಲ ಮೆಕ್ಕೆ ಗದ್ದೆಗಿಂತ ಬೆಳೆಯಿಲ್ಲ

ಈ ಗಾದೆಯು ಪಾಂಚಾಳರಲ್ಲಿ ಒಬ್ಬರಾದ ಅಕ್ಕಸಾಲಿಗನ ವೃತ್ತಿಗೆ ಸಂಬಂಧಿಸಿದಂತೆ ಬಳಕೆಯಾಗಿದೆ.ನಿಜವಾಗಲು ನೋಡಿದರೆ ಈ ಗಾದೆ ಅವನ ವೃತ್ತಿಗೆ ಮಾಡಿದ ಅವಮಾನದ ಗಾದೆ, ಯಾಕೆಂದರೆ ಬಂಗಾರದ ಕೆಲಸ ಅತ್ಯಂತ ನಾಜೂಕಿನ ಕೆಲಸ. ಆ ಕೆಲಸ ಮಾಡಿದಾಗ ಕೊನೆಯಲ್ಲಿ ಹುಡಿದು ರೂಪದಲ್ಲಿ ಉಳಿಯಬಹುದು. ಆ ಕಾರಣಕ್ಕಾಗಿ ಈ ಗಾದೆ ಹುಟ್ಟಿಕೊಂಡಿರಬಹುದು. ಈ ಗಾದೆಯನ್ನು ವೃತ್ತಿಯೇತರ ಸಮುದಾಯದವರು ಅಕ್ಕಸಾಲಿಗನ ವೃತ್ತಿ ಕಾರ್ಯವನ್ನು ಕುರಿತು ಕಟ್ಟಿರುವ ಗಾದೆಯಾಗಿದೆ. ಇದನ್ನು ವೃತ್ತಿಯೇತರ ಸಮುದಾಯದವರು ಸಮಾಜದಲ್ಲಿ ಬಳಸುವುದನ್ನು ಕಾಣಬಹುದು. ಸುಲಭವಾಗಿ ಕುಳಿತಲ್ಲಿಯೇ ಹಣಗಳಿಸುವವನೆಂದರೆ ಅಕ್ಕಸಾಲಿಗ. ಇವರ ವೃತ್ತಿ ಅಕ್ಕಸಾಲಿಕೆ ಅಂದರೆ ಲೋಹದ ಆಭರಣಗಳನ್ನು ತಯಾರಿಸುವುದು. ಸಾವಿರಾರು ರೂಪಾಯಿ ಬೆಲೆಬಾಳುವ ಬಂಗಾರ, ಮುತ್ತು, ರತ್ನಗಳನ್ನು ಅವನಲ್ಲಿ ಕೊಟ್ಟು ರಸೀದಿ ಪಡೆಯದೆ ಅವನನ್ನು ನಂಬಿ ತಮ್ಮ ಆಭರಣಗಳ ತಯಾರಿಕೆಗೆ ಬಂಗಾರವನ್ನು ಕೊಡುತ್ತಾರೆ. ಇಂತಹ ಸಂದರ್ಭದಲ್ಲಿ ಜನಸಮುದಾಯಗಳ ಆಭರಣಗಳ ತಯಾರಿಕೆಯಲ್ಲಿ ಬಂಗಾರವನ್ನು ಕದಿಯುವ ಪ್ರವೃತ್ತಿಯನ್ನು ರೂಢಿಸಿಕೊಂಡಿರುವುದು ಕಂಡುಬಂದಿದೆ. ಈ ದೃಷ್ಟಿಯಿಂದ ಸಮಾಜದಲ್ಲಿ ಇವರನ್ನು ಉಪಯೋಗಿಸಿಕೊಂಡು ಈ ಗಾದೆ ಬಳಕೆಗೆ ಬಂದಿದೆ.

ಹಾಗೆಯೇ ಮೆಕ್ಕೆಗದ್ದೆಗಿಂತ ಬೆಳೆಯಿಲ್ಲ ಅಂದರೆ ಮೆಕ್ಕೆಕಾಯಿ ಎನ್ನುವುದು ಒಂದು ಬಗೆಯ ವಿಷದ ಕಾಯಿ. ಹೋಲಿಕೆಯಲ್ಲಿ ಸವತೆಕಾಯಿಯ ಆಕರದಲ್ಲಿ ಬೆಳೆಯುತ್ತದೆ. ಇದು ಹೆಚ್ಚಾಗಿ ಹೊಲದ ಬದುವುಗಳಲ್ಲಿ ಬೆಳೆಯುವುದು. ಈ ಮೆಕ್ಕೆಕಾಯಿ ಬೆಳೆಯುವುದಕ್ಕೆ ರೈತ ಯಾವುದೇ ರೀತಿಯ ಬೀಜ, ಗೊಬ್ಬರ, ನೀರುಹಾಯಿಸುವ ಗೋಜಿಗೆ ಹೋಗುವುದಿಲ್ಲ ಹಾಗೂ ಅದರ ಉಪಯೋಗವು ರೈತನಿಗೆ ಇಲ್ಲ. ಹೊಲದಲ್ಲಿ ಹಾಕಿರುವ ಇನ್ನಿತರ ಬೆಳೆಗಳ ಜೊತೆಗೆ ಚೆನ್ನಾಗಿ ಬೆಳೆಯುತ್ತದೆ. ಅದರಂತೆಯೇ ಅಕ್ಕಸಾಲಿಗ ವೃತ್ತಿಯವರು ಕೂಡ ಕದಿಯಲಿಕ್ಕೆ (ಕಳ್ಳತನ ಮಾಡಲಿಕ್ಕೆ) ಹೊರಗಡೆ ಹೋಗುವ ಅವಶ್ಯಕತೆಯೇ ಇಲ್ಲ. ಜನಸಾಮಾನ್ಯರು ಆಭರಣಗಳ ತಯಾರಿಕೆಗೆ ಕೊಟ್ಟಂತಹ ಬಂಗಾರವನ್ನು ಕುಳಿತಲ್ಲಿಯೇ ಕದಿಯುತ್ತಾನೆ ಹಾಗೂ ಅದರ ತೂಕ ಸಮವಾಗಲಿಕ್ಕೆ ಅದರ ಜೊತೆಗೆ ಬೇರೆ ಲೋಹವನ್ನು ಬೆರಸಿ ಸಮತೂಕ ಮಾಡಿಕೊಡುತ್ತಾನೆ. ಇಂತಹ ಸಂದರ್ಭಗಳು ಜನಸಾಮಾನ್ಯರಿಗೆ ಗೊತ್ತಾದ ಮೇಲೆ ಈ ಮಾತನ್ನು ಅಕ್ಕ ಸಾಲಿಗ ವೃತ್ತಿಯವರಿಗೆ ಹೋಲಿಸಿ ತಮ್ಮ ತಮ್ಮಲ್ಲಿಯೇ ಉಪಯೋಗಿಸುವುದನ್ನು ನೋಡಬಹುದು. ಈ

ಹಿನ್ನೆಲೆಯಲ್ಲಿ 'ಅಕ್ಕನ ಚಿನ್ನವಾದರು ಅಕ್ಕಸಾಲಿಗ ಟೊಣೆಯದ ಬಿಡ' ಎಂಬ ಗಾದೆಯು ಕೂಡ ಪ್ರಚಲಿತದಲ್ಲಿದೆ.

೨. 'ಕಂಡರ ಮನೆ ಮುಂದೆ ಒಂದು ಮಾತು, ಆಚಾರಿ ಮನೆ ಮುಂದೆ ಮೂರು ಮಾತು'

ಈ ಗಾದೆಯನ್ನು ರೈತಾಪಿ ಸಮುದಾಯದವರು ಆಚಾರಿಯನ್ನು ಉಪಯೋಗಿಸಿಕೊಂಡು ಈ ಗಾದೆಯನ್ನು ಕಟ್ಟಿದ್ದಾರೆ. ಪಾಂಚಾಳರ ವೃತ್ತಿ ರೈತಾಪಿ ಸಮುದಾಯವನ್ನು ಅವಲಂಬಿಸಿರುತ್ತದೆ. ವೃತ್ತಿಯನ್ನು ತಮ್ಮ ತಮ್ಮ ಮನೆಯ ಪಕ್ಕದಲ್ಲಿಯೇ ಮಾಡುತ್ತಿರುತ್ತಾರೆ. ಯಾವ ರೈತನಾಗಿರಬಹುದು ತನ್ನ ಕೃಷಿ ಚಟುವಟಿಕೆಗೆ ಬೇಕಾದ ಸಾಮಾಗ್ರಿಗಳನ್ನು ತಯಾರಿಸಿಕೊಳ್ಳಲು ಆಚಾರಿಯ ಮನೆಯ ಮುಂದಕ್ಕೆ ಹೋಗಲೇಬೇಕು. ಅದರಂತೆಯೇ ರೈತರೆಲ್ಲರೂ ಆಚಾರಿ ಕೆಲಸ ಮಾಡುವ ಓಣೆಯಲ್ಲಿ ಅಥವಾ ಅವರ ಮನೆಯ ಪಕ್ಕದಲ್ಲಿ ರೈತರು ನೆರೆಯುವುದುಂಟು. ಇಂತಹ ಸಂದರ್ಭದಲ್ಲಿ ಊರಿನಲ್ಲಿ ನಡೆದಿರುವ ಗಲಾಟೆ, ಅಹಿತಕರ ಘಟನೆಗಳು ಇತ್ಯಾದಿ ವಿಷಯಗಳನ್ನು ರೈತರು ಆಚಾರಿಯನ್ನು ಕೇಂದ್ರವಾಗಿಟ್ಟುಕೊಂಡು ನಡೆದಿರುವ ಘಟನೆಗಳನ್ನು ಇನ್ನುಳಿದ ಪರಸ್ಪರ ರೈತರ ಜೊತೆಗೆ ಮಾತನಾಡುತ್ತಿರುತ್ತಾರೆ. ಈ ಮಾತುಗಳನ್ನು ಹಲವರು ಒಂದೊಂದು ರೀತಿಯಲ್ಲಿ ಮಾತನಾಡುತ್ತಿರುತ್ತಾರೆ. ಆ ಮಾತುಗಳಲ್ಲಿ ನಿಜ ಅಂಶದ ಜೊತೆಗೆ ಸುಳ್ಳು ಕೂಡ ಬಳಕೆಯಾಗುತ್ತಿರುತ್ತದೆ. ಹೀಗೆ ಆಚಾರಿಯ ಹತ್ತಿರ ಕೆಲಸ ಮಾಡಿಸಿಕೊಳ್ಳಲು ಬಂದಿರುವ ಎಲ್ಲಾ ರೈತಾಪಿ ಸಮುದಾಯದವರು ವಿಷಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಈ ಉದ್ದೇಶದಿಂದ 'ಆಚಾರಿಯ ಮನೆ ಮುಂದೆ ಮೂರು ಮಾತು' ಎಂದು ರೈತಾಪಿ ಸಮುದಾಯದವರು ಆಚಾರಿಯನ್ನು ಕೇಂದ್ರವಾಗಿಟ್ಟುಕೊಂಡು ಬಳಸುತ್ತಿರುತ್ತಾರೆ.

'ಕಂಡರ ಮನೆ ಮುಂದೆ ಒಂದು ಮಾತು' ಎನ್ನುವುದು ಊರಲ್ಲಿ ಗಲಾಟೆಯಾದಾಗ ಅಥವಾ ಏನಾದರೂ ಅಹಿತಕರ ಘಟನೆಗಳು ನಡೆದಾಗ ಯಾರಾದರೂ ಬಂದು ಇಂತವರ ಮನೆಯಲ್ಲಿ ಈ ತರಹ ನಡೆದಿದೆ ಎಂದು ಮಾತ್ರ ತಿಳಿಸುತ್ತಾರೆ. ಆದರೆ ಆಚಾರಿಯ ಹತ್ತಿರ ಸೇರುವ ರೈತಾಪಿ ಸಮುದಾಯಗಳು ಬೇರೆ ಕಡೆಯಲ್ಲಿ ಸೇರುವುದಿಲ್ಲ ದಿನಂ ಪ್ರತಿ ಹೀಗಾಗಿ ಆಚಾರಿಯನ್ನು ಕೇಂದ್ರವಾಗಿರಿಸಿಕೊಂಡು ರೈತಾಪಿ ಸಮುದಾಯದವರು ಈ ಗಾದೆಯನ್ನು ಕಟ್ಟಿರುವುದು ಕಾಣಬಹುದು.

೩. 'ಕೆಟ್ಟ ಬಡಗಿ ತನ್ನ ಆಯುಧಗಳನ್ನು ದೂಷಿಸುತ್ತಾನೆ'

ಕೆಲಸಗಾರನಿಗೆ ಕೌಶಲ್ಯದ ಜೊತೆಗೆ ಉಪಯೋಗಿಸುವ ಉಪಕರಣಗಳು ಮುಖ್ಯವಾಗಿರುತ್ತವೆ. ಕೌಶಲ್ಯಯುತವಾದ ಬಡಗಿ ಉಪಕರಣಗಳ ಗುಣವನ್ನೇ ಅವಲಂಬಿಸಿರುತ್ತಾನೆ. ಕುಶಲಕರ್ಮಿಗೆ ಉಪಕರಣ ಹಾಗೂ ಕೌಶಲ್ಯ ಅವರ ಭೂಷಣ. ಯಾವುದೇ ಕೆಲಸ ಮಾಡಬೇಕಾದರೂ ಕೆಲಸಕ್ಕೆ ತಕ್ಕಂತೆ ಉಪಕರಣಗಳನ್ನು ತಾನೇ ಸಿದ್ಧತೆ ಮಾಡಿಕೊಳ್ಳುತ್ತಾನೆ. ಇದರ ಜೊತೆಗೆಯೇ ಕೌಶಲ್ಯ ಸಮಯ ಪ್ರಜ್ಞೆ, ಕೈಚಳಕಗಳನ್ನು ಅವಲಂಬಿಸುತ್ತಾನೆ. ಇಂತಹ ಬಡಗಿ ತನ್ನ ಆಯುಧಗಳನ್ನು ಎಂದಿಗೂ ದೂಷಿಸುವುದಿಲ್ಲ. ಇದು ಇತರೆ ಸಮುದಾಯದವರು ಬಡಗಿಯ ಬಗ್ಗೆ ಕಟ್ಟಿರುವ ಅಪಪ್ರಚಾರದ ಗಾದೆಯಾಗಿದೆ. ಆದರೆ ಈ ಗಾದೆಯನ್ನು ನೆಪ ಹೇಳಿ ತನ್ನ ದೌರ್ಬಲ್ಯವನ್ನು ಮುಚ್ಚಿಟ್ಟುಕೊಳ್ಳಲು ಇತರರು ಇದನ್ನು ಕಟ್ಟಿದ್ದಾರೆ ಎನ್ನಬಹುದು.

೪. 'ಕಬ್ಬಿಣ ಯಾರಿಗೆ ಬಗ್ಗೋದು ಅಂದ್ರೆ ಕಮ್ಮಾರಗೆ'

ಕಬ್ಬಿಣ ಕೆಲಸ ಮಾಡುವನು ಕಮ್ಮಾರ, ಕಮ್ಮಾರನ ಕೇಂದ್ರವಾಗಿಟ್ಟುಕೊಂಡು ಈ ಗಾದೆ ಪ್ರಚಲಿತದಲ್ಲಿದೆ. ಇದನ್ನು ಬಳಸುವವರು ಜನಸಮುದಾಯದವರು ಹಾಗೂ ಈ ಗಾದೆ ರಚಿಸಿದವರು ಇವರೆ. ಈ ಮೇಲಿನ ಮಾತನ್ನು ಅನೇಕ ಅರ್ಥಗಳಿಗೆ ಹೋಲಿಸಿ ಹೇಳುವುದುಂಟು. ಮಾವುತನಿಗೆ ಆನೆಯನ್ನು ಪಳಗಿಸುವ ಕಲೆ ಗೊತ್ತಿರುತ್ತದೆ. ಮಾವುತ ಆನೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅಂಕುಶ ಬೇಕೇ ಬೇಕು. ಈ ಅಂಕುಶದಿಂದ ಆನೆಯ ಕಿವಿಯ ಪಕ್ಕದಲ್ಲಿ ತಿವಿದರೆ ಅವನು ಹೇಳಿದಂಗೆ ಅದು ಕೇಳುತ್ತೆ. ಇದು ಆನೆಯನ್ನು ಪಳಗಿಸುವ ಮಾವುತ ಇದರ ಬಗ್ಗೆ ತಿಳಿದುಕೊಂಡಿರುತ್ತಾನೆ. ಅದರಂತೆಯೇ ಕಮ್ಮಾರ ಕಬ್ಬಿಣ ಕೆಲಸ ಮಾಡುವ ವೃತ್ತಿಯನ್ನು ಮಾಡಿಕೊಂಡು ಬಂದಿರುವುದರಿಂದ ಕಬ್ಬಿಣದ ವಿಧ, ಅದರಲ್ಲಿ ಕೆಲಸ ಮಾಡುವ ವಿಧಾನವನ್ನು ಚೆನ್ನಾಗಿ ತಿಳಿದುಕೊಂಡವನಾಗಿರುತ್ತಾನೆ.

ಕಬ್ಬಿಣವನ್ನು ಕುಲುಮೆಯಲ್ಲಿಟ್ಟು ಎಷ್ಟು ಸಮಯದವರೆಗೆ ಕಾಯಿಸಿದರೆ ಅದಕ್ಕೆ ಹದ ಬರುತ್ತೆ, ಕಾದ ಕಬ್ಬಿಣದಿಂದ ಸಾಮಾಗ್ರಿ ತಯಾರಿಸುವಾಗ ಅದಕ್ಕೆ ಯಾವ ಪ್ರಮಾಣದಲ್ಲಿ ನೀರು ಕುಡಿಸಬೇಕು ಎಂಬೆಲ್ಲಾ ಕೌಶಲ್ಯಗಳು ವೃತ್ತಿಕಾರನಿಗೆ ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿರುತ್ತವೆ. ಸಾಮಾನ್ಯ ಜನರಿಗೆ ಕಬ್ಬಿಣ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲ. ಕಮ್ಮಾರ ಈ ಕೆಲಸದಲ್ಲಿ ಪ್ರವೀಣನಾಗಿರುತ್ತಾನೆ. ರೈತರಿಗೆ ಬೇಕಾದ ಮಾದರಿಯನ್ನು ತಮ್ಮ ಬುದ್ಧಿ ಶಕ್ತಿ ಕೌಶಲ್ಯದಿಂದ ಆ ವಸ್ತುವನ್ನು ವಿವೇಚನೆ ಮಾಡಿಕೊಂಡು ಕಬ್ಬಿಣದಲ್ಲಿ ತಯಾರಿಸಿ ಕೊಡುವ ಕೌಶಲ್ಯ ಕಮ್ಮಾರನಿಗೆ ಇರುತ್ತದೆ. ಇದು ಹಿರಿಯರಿಂದ ಬಳುವಳಿಯಾಗಿ ಬಂದಂತಹ ವಿದ್ಯೆಯಾಗಿರುತ್ತದೆ. ಹಾಗೆಯೇ ಮಕ್ಕಳು ಮನೆಯಲ್ಲಿ ಅಥವಾ ಬೇರೆ ಯಾವ ಸಂದರ್ಭದಲ್ಲಿಯಾಗಲಿ ತಾಯಿ ಹೇಳಿದ ಮಾತು ಕೇಳಲಿಲ್ಲ ಅಂದರೆ ತಾಯಿ ತನ್ನ ಮಗನಿಗೆ ಬಯ್ಯುತ್ತಾಳೆ. ಆದರು ಆ ಮಗು ತಾಯಿಗೆ ಎದರುವುದಿಲ್ಲ ಅಥವಾ ಹೇಳಿದ ಕೆಲಸವನ್ನು ನಿರ್ವಹಿಸುವುದಿಲ್ಲ. ಅಂತಹ ಸಂದರ್ಭದಲ್ಲಿ ತಾಯಿಯಾಗಿರಬಹುದು ಅಥವಾ ಬೇರೆ ಯಾರಾದರಿರಬಹುದು ಅವಾಗ 'ಕಬ್ಬಿಣ ಯಾರಿಗೆ ಬಗ್ಗೋದು ಅಂದ್ರೆ ಕಮ್ಮಾರಗೆ ಹಾಗೆ ನೀನು ಕೂಡ ನಿಮ್ಮಪ್ಪನಿಗೆ ಬಗ್ಗೋದು ಬರಲಿ ಹೇಳ್ತಿನಿ' ಎಂದು ಈ ಗಾದೆಯನ್ನು ಉಪಯೋಗಿಸುವುದರ ಮೂಲಕ ಮಕ್ಕಳನ್ನು ಎದುರಿಸಲಾಗುತ್ತದೆ. ಹೀಗೆ ವೃತ್ತಿಯನ್ನು ನಿರ್ವಹಿಸುವವನ ಹೆಸರಿನಲ್ಲಿ ಇತರೆ ಸಮುದಾಯದವರು ಬಳಕೆ ಮಾಡುವುದನ್ನು ಕಾಣಬಹುದು.

೫. 'ಹೆಣ್ಣು ಕೆಟ್ರೆ ತೌರುಮನೆಗೆ, ಹೊನ್ನುಕೆಟ್ರೆ ಅಕ್ಕಸಾಲೆರ ಮನೆಗೆ'

ಹೆಣ್ಣಿಗೆ ಸಮಾಜದಲ್ಲಿ ಮನ್ನಣೆ ನೀಡುವ ಮೂಲಕ ಗೌರವಯುತವಾದ ಸ್ಥಾನವನ್ನು ಕಲ್ಪಿಸಿದೆ. ಈ ಮನ್ನಣೆ, ಗೌರವಗಳ ಹಿಂದೆ ಮಿತಿಗಳು ಕೂಡ ಅವಳಿಗೆ ಸಮಾಜದಲ್ಲಿವೆ. ಅಂದರೆ ಹೆಣ್ಣು ಕೆಟ್ರೆ ತೌರುಮನೆಗೆ ಎಂಬರ್ಥವನ್ನು ಇಲ್ಲಿ ಬಳಸಲಾಗಿದೆ. ಹೆಣ್ಣು ತನ್ನ ಪತಿಯ ಬಿಟ್ಟು ಪರರ ಜೊತೆಗೆ ಲೈಂಗಿಕ ಸಂಪರ್ಕವನ್ನು ಬೆಳೆಸಿದರೆ ಪತ್ನಿಯ ಪತಿ ಹಾಗೂ ಮನೆಯವರು ಸಹಿಸಲಾರರು. ಆ ತರಹದ ಘಟನೆಗಳು ನಡೆದಾಗ ಪತಿ ಪತ್ನಿಯರಲ್ಲಿ ವಿರಸ ಉಂಟಾಗಿ ವಿಚ್ಛೇದನವಾಗುವುದು ಖಂಡಿತ. ಇಂತಹ ಸಂದರ್ಭದಲ್ಲಿ ಈ ಮಾತನ್ನು ಬಳಸಲಾಗಿದೆ.

ಹಾಗೆಯೆ ಅಕ್ಕಸಾಲಿಗನು ಆಭರಣಗಳನ್ನು ಮಾಡಿಕೊಡುವ ಕೆಲಸದವನು. ಮಾಡಿಕೊಟ್ಟಂತಹ ಆಭರಣಗಳು ಕೆಲಸ ಮಾಡುವ ಸಂದರ್ಭಗಳಲ್ಲಿ ಸವೆದು, ಮುರಿದಾಗ ಅವುಗಳಿಗೆ ಬೆಸಗೆ ಹಾಕಿಸಲಿಕ್ಕೆ ಅಕ್ಕಸಾಲಿಗನ ಹತ್ತಿರವೇ ಬರಬೇಕು. ಅಂದರೆ ಆಭರಣಗಳ ತಯಾರಿಸುವ ಬೆಸೆಯುವ ಕೌಶಲ್ಯಗಳು ಅಕ್ಕಸಾಲಿಗನಿಗೆ ಗೊತ್ತಿರುತ್ತವೆ. ಮುರಿದ ಆಭರಣಗಳನ್ನು ಬೆಸೆಯುವ ಸಂದರ್ಭಗಳಲ್ಲಿ ಯಾವ ಲೋಹವನ್ನು ಅದರ ಮೇಲೆ ಕರಗಿಸಿದರೆ ಅದು ಸೇರ್ಪಡೆಯಾಗುತ್ತದೆ. ಈ ವೃತ್ತಿ ಮಾಡುವವರಿಗೆ ತಿಳಿದಿರುತ್ತದೆ. ಇದರಿಂದಾಗಿ ಈ ಗಾದೆಯನ್ನು ಜನಸಮುದಾಯಗಳು ಮೇಲಿನ ಘಟನೆ ನಡೆದಾಗ ಹೆಣ್ಣನ್ನು ತೌರು ಮನೆಗೆ ಕಳಿಸುವುದು ಹಾಗೂ ಆಭರಣಗಳ ಬೆಸಗೆಗೆ ಅಕ್ಕಸಾಲಿಗರ ಹತ್ತಿರ ತರುವುದು ಇವೆರಡು ಕೂಡ ಅನಿವಾರ್ಯವೇ. ಇಂತಹ ಘಟನೆಗಳ ನಡೆದ ಸಂದರ್ಭದಲ್ಲಿ ಈ ತರಹದ ಗಾದೆಯನ್ನು ಉಪಯೋಗಿಸುವುದನ್ನು ಕಾಣುತ್ತೇವೆ.

೬. 'ಕಮ್ಮಾರನಿಗೆ ತುಂಡು ಕಬ್ಬಿಣ ಬೇಕು, ಬಡಗಿಗೆ ಉದ್ದ ಮರಬೇಕು'

ಕಬ್ಬಿಣ ಕೆಲಸ ಮಾಡುವವನಿಗೆ ಕಮ್ಮಾರ ಎಂದು ಕರೆಯಲಾಗುತ್ತದೆ. ಕಮ್ಮಾರಿಕೆಗೆ ಮೂಲವಸ್ತು ಕಬ್ಬಿಣ, ಕಬ್ಬಿಣದಿಂದಲೇ ವಸ್ತುಗಳನ್ನು ತಯಾರಿಸಿಕೊಡುತ್ತಾನೆ. ವಸ್ತುಗಳನ್ನು ತಯಾರಿಸಲಿಕ್ಕೆ (ಮಾಡಲಿಕ್ಕೆ) ಉದ್ದನೆಯ ಕಬ್ಬಿಣವೇ ಬೇಕು ಎನ್ನುವ ಹಾಗೆ ಇಲ್ಲ. ಒಂದು ತುಂಡು ಕಬ್ಬಿಣ ಸಿಕ್ಕರೆ ಸಾಕು ಅದರಲ್ಲಿ ಸಾಮಾಗ್ರಿಯನ್ನು ಮಾಡಿ ಕೊಡುತ್ತಾನೆ. ಅಂದರೆ ಕುಲುಮೆಯಲ್ಲಿ ತುಂಡು ಕಬ್ಬಿಣವನ್ನಿಟ್ಟು ಕಾಸಿ ಅಡಿಗಲ್ಲಿನ ಮೇಲೆ ಇಟ್ಟು ಕಾದ ತುಂಡು ಕಬ್ಬಿಣವನ್ನು ಹಿಗ್ಗಿಸಿ ರೈತಾಪಿ ಜನಗಳಿಗೆ ಬೇಕಾದ ಸಾಮಗ್ರಿಯನ್ನು ತಯಾರಿಸಿಕೊಡುತ್ತಾನೆ. ಇದು ಕಮ್ಮಾರನ ಕೌಶಲ್ಯ. ಆ ವಸ್ತುವನ್ನು ತನ್ನ ಕೌಶಲ್ಯದ ಮೂಲಕ ನೆನಪಿಗೆ ತಂದುಕೊಂಡು ಆ ತುಂಡು ಕಬ್ಬಿಣವನ್ನು ಆ ವಸ್ತುವಿನ ಆಕಾರಕ್ಕೆ ಹಿಗ್ಗಿಸಿ ವಸ್ತುವನ್ನು ತಯಾರಿಸುತ್ತಾನೆ. ಅಂದರೆ ಇಲ್ಲಿ ಕಬ್ಬಿಣಕ್ಕೆ ಹಿಗ್ಗುವ ಗುಣವಿರುತ್ತದೆ. ಆದರೆ ಮರದ ಕೆಲಸ ಮಾಡುವ ಬಡಗಿಗೆ ಉದ್ದನೆಯ ಮರ ಬೇಕಾಗುತ್ತದೆ. ತುಂಡು ಕಟ್ಟಿಗೆಯಿದ್ದರೆ ಅದು ಯಾವ ಕೆಲಸಕ್ಕೂ ಬರುವುದಿಲ್ಲ. ಹಾಗೂ ಅದರ ಸ್ವಭಾವ ಕಬ್ಬಿಣದ ಹಾಗೆ ಅಲ್ಲ. ಕಬ್ಬಿಣ ಕಾಸಿ ಬಡಿದರೆ ಹಿಗ್ಗುತ್ತದೆ. ಆದರೆ ಕಟ್ಟಿಗೆಯನ್ನು ಕಾಯಿಸಲಿಕ್ಕೆ ಬರುವುದಿಲ್ಲ. ಕಟ್ಟಿಗೆಯಲ್ಲಿ ಸಾಮಾನುಗಳನ್ನು ಮಾಡಲಿಕ್ಕೆ ಉದ್ದನೆಯ ಕಟ್ಟಿಗೆಯೇ ಬೇಕು. ನಂತರ ವಸ್ತುವಿನ ಅಳತೆಗೆ ಸಂಬಂಧಿಸಿದಂತೆ ಅದನ್ನು ಕೊರೆದುಕೊಂಡು ವಸ್ತುವನ್ನು ತಯಾರಿಸಿಕೊಡಲಾಗುತ್ತದೆ. ಹಾಗೆಯೇ ಯಾರಾದರೂ ಯಾವುದೇ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಆ ಕೆಲಸವನ್ನು ಕೆಡಿಸಿದರೆ ವೃತ್ತಿಯೇತರ ಸಮುದಾಯಗಳು ಅವರಿಗೆ ಬುದ್ಧಿ ಹೇಳುವ ಸಂದರ್ಭಕ್ಕಾಗಿ ಈ ಗಾದೆಯನ್ನು ಉಪಯೋಗಿಸುತ್ತಾರೆ. ಅಂದರೆ ಬಡಗಿಯ ಹಾಗೆ ಉದ್ದನೆಯ ಮರವೇ ಬೇಕು ಎಂಬುದಕ್ಕಿಂತ ಕಮ್ಮಾರನಂತೆ ಇದ್ದ ಕಬ್ಬಿಣದಲ್ಲಿ ತಮ್ಮ ಕೌಶಲ್ಯವನ್ನು ಉಪಯೋಗಿಸಿ ಸಾಮಾನು ತಯಾರಿಸಿಕೊಡಬೇಕು. ಹಾಗೆಯೇ ನೀವು ಕೂಡ ಈ ತರಹದ ಕೌಶಲ್ಯವನ್ನು ಉಪಯೋಗಿಸಬೇಕು ಎಂದು ಬುದ್ಧಿ ಹೇಳುವುದಕ್ಕೆ ಈ ಗಾದೆಯನ್ನು ಜನಸಮುದಾಯದವರು ಈ ಪಾಂಚಾಳರನ್ನು ಕೇಂದ್ರವಾಗಿರಿಸಿಕೊಂಡು ಕಟ್ಟಿದ್ದಾರೆ.

೭. 'ಆಚಾರಿಗೆ ಊಟದ ಚಿಂತೆ ಆದ್ರೆ, ಕುದುರಿಗೆ ಗೂಟದ ಚಿಂತೆ'

ವೃತ್ತಿ ಕೆಲಸ ಮಾಡುವವರಿಗೆ ಮಳೆಗಾಲದ ಸಂದರ್ಭದಲ್ಲಿ ತಮ್ಮ ಜೀವನವನ್ನು ನಿರ್ವಹಿಸಿಕೊಳ್ಳುವುದು ಕಷ್ಟದ ಕೆಲಸವಾಗಿರುತ್ತದೆ. ಮಳೆ ಭೂಮಿಗೆ ಬಿದ್ದ ಸಂದರ್ಭದಲ್ಲಿ ರೈತಾಪಿ ಜನರು ತಮ್ಮ ಭೂಮಿಯನ್ನು ಹದ ಮಾಡಿ ಬಿತ್ತಲಿಕ್ಕೆ ಹೊಲವನ್ನು ಸಜ್ಜುಗೊಳಿಸುತ್ತಿರುತ್ತಾರೆ. ಆ ಸಂದರ್ಭದಲ್ಲಿ ಆಚಾರಿಗಳಿಗೆ ಕೃಷಿ ಚಟುವಟಿಕೆಯ ವಸ್ತುಗಳನ್ನು ತಯಾರಿಸುವ ಕೆಲಸಗಳು ತುಂಬ ವಿರಳ ರೈತನನ್ನು ಅವಲಂಬಿಸಿ ಜೀವನ ನಡೆಸುವ ಪಾಂಚಾಳರಿಗೆ ರೈತ ತನ್ನ ಸಾಮಗ್ರಿಗಳನ್ನು ಮಡಿಸಿಕೊಳ್ಳಲಿಕ್ಕೆ ಬರಲಿಲ್ಲ ಅಂದರೆ ಅವನಿಗೆ ಜೀವನ ನಿರ್ವಹಿಸುವುದು ಕಷ್ಟಕರವಾಗುತ್ತದೆ. ಹಾಗೆಯೇ ಕುದುರೆಯ ಮೇಲೆ ನಾವು ಒಂದೇ ಸಮನೆ ಪ್ರಯಾಣ ಮಾಡಿದರೆ ಅದಕ್ಕೆ ಆಯಾಸವಾಗುವುದು. ಅದನ್ನು ದಣಿವಾರಿಸಲು ಆಹಾರ, ನೀರು, ವಿಶ್ರಾಂತಿ ಎಲ್ಲವನ್ನು ಕೊಡಬೇಕು. ಈ ವಿಶ್ರಾಂತಿಗಾಗಿಯೇ ಕುದುರೆಯು ತನ್ನ ನೆಲೆಯಾದ ಗೂಟವನ್ನು ಬಯಸುತಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಮಾತನ್ನು ಪಾಂಚಾಳರಿಗೆ ಕೇಂದ್ರವನ್ನಾಗಿ ಮಾಡಿಕೊಂಡು ಹೇಳಿದ್ದಾರೆ. ಅಂದರೆ ರೈತಾಪಿ ಸಮುದಾಯದವರು ಕೃಷಿ ಬಿತ್ತನೆಯ ಸಂದರ್ಭದಲ್ಲಿ ಮಳೆ ಬರಲಿಲ್ಲವೆಂದರೆ ಚಿಂತಿಸುವುದು ಸರ್ವೆಸಾಮಾನ್ಯ. ಅಂತಹ ಸಂದರ್ಭದಲ್ಲಿ ಗೊಬ್ಬರದ ಅಂಗಡಿಯವರು ಬಂದು ನಮ್ಮ ಬೀಜ ಚೆನ್ನಾಗಿ ಇಳುವರಿ ಬರುತ್ತವೆ ಇವನ್ನೇ ನೀವು ಬಿತ್ತನೆ ಮಾಡಿ ಎಂದು ರೈತಾಪಿ ಜನಗಳಿಗೆ ತಿಳಿಸುತ್ತಾರೆ. ಬಿತ್ತನೆ ಬೀಜ ಖರೀದಿಯಾದರೆ ಸಾಕು ಎಂಬ ಭಾವನೆ ಅಂಗಡಿಯವರದು ಆದರೆ ರೈತನಿಗೆ ಮಳೆಯೇ ಬಂದಿಲ್ಲ ಬಿತ್ತಿದರೆ ಬೀಜ ಸುಮ್ಮನೆ ಭೂಮಿಯಲ್ಲಿ ಹಾಳಾಗುತ್ತವೆ ಎಂಬ ಅಂಶ ತಿಳಿದಿರುತ್ತದೆ. ಇಂತಹ ಸಂದರ್ಭದಲ್ಲಿ ರೈತರು 'ಆಚಾರಿಗೆ ಊಟದ ಚಿಂತೆ ಆದ್ರೆ, ಕುದುರೆಗೆ ಗೂಟದ ಚಿಂತೆ' ಎಂಬ ಗಾದೆಯನ್ನು ಬಳಸುವುದು ಕಾಣಬಹುದು. ಹಾಗೂ ಇದರಲ್ಲಿ ಆಚಾರಿಯ ಜೀವನ ನಿರ್ವಹಣೆಯ ಸಂಬಂಧಿಸಿದ ಅಂಶವು ವ್ಯಕ್ತವಾಗುತ್ತದೆ.

೮. 'ಇರಿವೆ ಬುದ್ಧಿ ಕಮ್ಮಾರಗ, ಗೊರವನ ಬುದ್ಧಿ ಮಡಿವಾಳಗ'

ಈ ಗಾದೆಯ ಮಾತಿನಲ್ಲಿ ಇರಿವೆಗೆ ಕಮ್ಮಾರನನ್ನು ಹೋಲಿಸಿ ಹೇಳಲಾಗಿದೆ. ಇರಿವೆ ತನ್ನ ಜೀವನ ನಿರ್ವಹಣೆಗಾಗಿ ಭೂಮಿಯ ಮೇಲೆ ಇರುವ ಆಹಾರವನ್ನು ದಿನಂಪ್ರತಿಯು ತನ್ನ ಗುಡಿನೊಳಗೆ ಶೇಖರಿಸಿಡುತ್ತದೆ. ಮಳೆಗಾಲದ ಸಂದರ್ಭದಲ್ಲಿ ಶೇಖರಿಸಿದ ಆಹಾರವನ್ನು ತಮ್ಮ ಜೀವನಕ್ಕೆ ಉಪಯೋಗಿಸಿಕೊಳ್ಳುತ್ತವೆ. ಅದರಂತೆಯೇ ಕಮ್ಮಾರನಾದವನು ಕೆಲಸ ಮಾಡುವ ಸಂದರ್ಭದಲ್ಲಿ ರೈತರು ಕೊಟ್ಟಂತಹ ಕಬ್ಬಿಣವು ಉಳಿದಿರುತ್ತದೆ. ಆ ತರಹ ಉಳಿದ ಕಬ್ಬಿಣವನ್ನು ದಿನಂಪ್ರತಿ ಕಲೆಹಾಕಿ ಅವುಗಳಿಂದಲೇ ಬಿಡುವಿನ ಸಮಯದಲ್ಲಿ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸಿ ಅವುಗಳನ್ನು ರೈತರಿಗೆ ಮಾರಾಟ ಮಾಡುತ್ತಾನೆ. ಅಂದರೆ ಇರಿವೆ ಹೇಗೆ ಆಹಾರ ಸಂಗ್ರಹಿಸುವಂತೆ ಕಮ್ಮಾರ ಕೆಲಸದ ಸಂದರ್ಭದಲ್ಲಿ ಉಳಿದ ತುಂಡು ಕಬ್ಬಿಣವನ್ನು ತನ್ನಲ್ಲಿಯೇ ಇಟ್ಟುಕೊಳ್ಳುತ್ತಾನೆ. ಅದಕ್ಕಾಗಿಯೇ 'ಇರಿವೆ ಬುದ್ಧಿ ಕಮ್ಮಾರಗ' ಎಂದು ಹೇಳಲಾಗಿದೆ.

'ಗೊರವನ ಬುದ್ಧಿ ಮಡಿವಾಳಗ' ಎಂದರೆ ಗೊರವ ಎಂಬುದಕ್ಕೆ ಬಿಕ್ಷುಕ ಎಂಬ ಅರ್ಥವಿದೆ. ಬಿಕ್ಷುಕನು ಕೂಡ ಆಹಾರಕ್ಕಾಗಿ ತಿರುಗುತ್ತಿರುತ್ತಾನೆ. ಅದರಂತೆಯೇ ಮಡಿವಾಳನ ವೃತ್ತಿ ಬಟ್ಟೆಯನ್ನು ಮಾಡಿ ಮಾಡುವುದು. ಮಡಿವಾಳ ತನ್ನ ಜೀವನವನ್ನು ನಿರ್ವಹಿಸಲು ಮನೆ ಮನೆಗೆ ಹೋಗಿ ಬಟ್ಟೆಗಳನ್ನು ತೆಗೆದುಕೊಂಡು ಬಂದು ಅವುಗಳನ್ನು ಮಡಿ ಮಾಡಿಕೊಟ್ಟು ಅದರಿಂದ ಬಂದ ಹಣದಿಂದ ಜೀವನವನ್ನು ಸಾಗಿಸುತ್ತಾನೆ. ಅದಕ್ಕಾಗಿ ಅನುಭವಿಕರು ಗೊರವನಿಗೆ ಹೋಲಿಸಿದ್ದಾರೆ.

೯. 'ಕೂಸು ಹುಟ್ಟಿದರೆ ಕಮ್ಮಾರ ಬೇಕು, ಸತ್ತರೆ ಕಮ್ಮಾರ ಬೇಕು'

ರೈತಾಪಿ ಜನಸಮುದಾಯಗಳ ಆಚರಣೆ, ಸಂಪ್ರದಾಯಗಳಲ್ಲಿ ಕಮ್ಮಾರ ಯಾವುದೇ ರೂಪದಲ್ಲಿಯಾದರು ಬಳಕೆಯಾಗಿರಬಹುದು. ಅಂತಹ ಸನ್ನಿವೇಷಗಳನ್ನಿಟ್ಟುಕೊಂಡು ಅನುಭವಿಕರು 'ಕೂಸು ಹುಟ್ಟಿದರೆ ಕಮ್ಮಾರಬೇಕು, ಸತ್ತರೆ ಕಮ್ಮಾರಬೇಕು' ಎಂಬ ಗಾದೆಯನ್ನು ಕಮ್ಮಾರನ್ನು ಉಪಯೋಗಿಸಿಕೊಂಡು ಕಟ್ಟಿದ್ದಾರೆ. ಮಗು ಜನಿಸಿದಾಗ ತಾಯಿ ಮತ್ತು ಮಗುವನ್ನು ಒಕ್ಕಳ ಬಳ್ಳಿಯಿಂದ ಬೇರ್ಪಡಿಸಬೇಕಾದರೆ ಕಮ್ಮಾರನಿಂದ ತಯಾರಾದ ಕುಡುಗೋಲು ಬೇಕೇ ಬೇಕು. ಇದರಿಂದಲೇ ತಾಯಿ ಮತ್ತು ಮಗುವಿನ ಮಧ್ಯೆಯಿರುವ ಒಕ್ಕಳ ಬಳ್ಳಿಯನ್ನು ಕೊಯ್ಯುವುದು. ಈ ಕುಡುಗೋಲನ್ನು ತಯಾರು ಮಾಡಿಕೊಡುವವರು ಕಮ್ಮಾರ. ಈ ದೃಷ್ಟಿಯಿಂದ ಕೂಸು ಹುಟ್ಟಿದರೆ ಕಮ್ಮಾರ ಬೇಕು ಎಂದು ಅನುಭವಿಕರು ಹೇಳಿದ್ದಾರೆ.

'ಸತ್ತರೆ ಕಮ್ಮಾರ ಬೇಕು' ಎನ್ನುವ ಮಾತು ಕೂಡ ಇವರನ್ನೇ ಅವಲಂಬಿಸಿದೆ. ಅಂದರೆ ಯಾವುದೇ ವ್ಯಕ್ತಿ ತೀರಿಕೊಂಡಾಗ ಆ ವ್ಯಕ್ತಿಯನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ಚಟ್ಟವನ್ನು ಇವರೇ ನಿರ್ಮಾಣ ಮಾಡಬೇಕು ಹಾಗೂ ಸತ್ತವ್ಯಕ್ತಿ ಪಿಶಾಚಿಯಾಗಿ ತಿರುಗಬಾರದೆಂಬ ನಂಬಿಕೆಯಿಂದ ವ್ಯಕ್ತಿಯ ತಲೆಗೆ ಕಬ್ಬಿಣದ ಮೊಳೆಯನ್ನು ಬಡಿಯುತ್ತಾರೆ. ಈ ಮೊಳೆಯನ್ನು ತಯಾರಿಸುವನು ಕಮ್ಮಾರನೇ ಈ ದೃಷ್ಟಿಯಿಂದ ಕಮ್ಮಾರನನ್ನು ಈ ಗಾದೆಯಲ್ಲಿ ಬಳಸಿಕೊಳ್ಳಲಾಗಿದೆ. ಇಲ್ಲಿ ಮುಖ್ಯವಾಗಿ ಈ ಗಾದೆ ಹುಟ್ಟಿರುವುದು ಕಮ್ಮಾರನು ತಯಾರಿಸುವ ಸಾಮನುಗಳನ್ನಿಟ್ಟುಕೊಂಡು. ತಾನು ತಯಾರಿಸುವ ಸಾಮಾನುಗಳನ್ನು ರೈತಾಪಿ ಜನಸಮುದಾಯಗಳು ಆಚರಣೆಯ ಸಂದರ್ಭದಲ್ಲಿ ಏತಕ್ಕಾಗಿ ಇವುಗಳನ್ನು ಉಪಯೋಗಿಸುತ್ತಾರೆ ಹಾಗೂ ಕಮ್ಮಾರನ ಮಹತ್ವವನ್ನು ತಿಳಿಸುವ ದೃಷ್ಟಿಯಿಂದ ಈ ಗಾದೆಯನ್ನು ರೈತಾಪಿ ಸಮುದಾಯದವರು ರಚಿಸಿದ್ದಾರೆ.

೪.೨.೨. ಸಂಬೋಧನಾ ರೂಪ ಮತ್ತು ವ್ಯಕ್ತಿನಾಮಗಳ ಬಳಕೆ

ಸಂಬೋಧನಾ ರೂಪಗಳು ಮತ್ತು ಉಲ್ಲೇಖ ರೂಪಗಳು ಹಾಗೂ ಹೆಸರುಗಳು ಬಳಕೆ ರೂಪಗಳು ವ್ಯಕ್ತಿಗಳ ನಡುವಿನ ಪರಸ್ಪರ ಸಂಬಂಧವನ್ನು ಹಾಗೆಯೇ ವ್ಯಕ್ತಿಗಿರುವ ಸಾಮಾಜಿಕ ಸ್ಥಾನಮಾನವನ್ನು ಅವಲಂಬಿಸಿರುತ್ತದೆ. ಕುಟುಂಬ ವಲಯದಲ್ಲಿ ಸಾಮಾನ್ಯವಾಗಿ ಬಂಧು ಸೂಚಕ ರೂಪಗಳೇ ಸಂಬೋಧನಾ ರೂಪಗಳೂ ಆಗಿದ್ದರೂ ಸಾಮಾಜಿಕವಾಗಿ ಬಹಳಷ್ಟು ಸಂದರ್ಭಗಳಲ್ಲಿ ವೃತ್ತಿ ಸಮುದಾಯದ ಹೆಸರು ಬಳಕೆಯಾಗುತ್ತದೆ. ಹಾಗೆಯೇ ವ್ಯಕ್ತಿಯ ಗೈರುಹಾಜರಿಯಲ್ಲಿ ಉಲ್ಲೇಖಿಸುವಾಗ ವ್ಯಕ್ತಿಯನ್ನು ಬೇರೆ ಬಗೆಯಲ್ಲಿ ಸಂಬೋಧಿಸಬಹುದು. ಈ ವಿಚಾರಗಳು ವ್ಯಕ್ತಿಗಳ, ವೃತ್ತಿಗಳ ಸಾಮಾಜಿಕ ನೆಲೆಗಳನ್ನು ಆ

ಸಮಾಜದ ವ್ಯವಸ್ಥೆಯೊಳಗೆ ವ್ಯಕ್ತಿಗಳಿಗೆ ಆರೋಪಿತವಾಗಿರುವ ಸ್ಥಾನಮಾನ ಸೂಚಕಗಳಾಗಿಯೂ ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಪಾಂಚಾಳರಲ್ಲಿ ಐದು ವೃತ್ತಿಗಳನ್ನು ನಿರ್ವಹಿಸುತ್ತಾರೆ ಎನ್ನುವ ವಿಷಯ ಈಗಾಗಲೇ ತಿಳಿದಿರುವುದೇ ಆಗಿದೆ. ಈ ಐದು ಸಮುದಾಯಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಾನಮಾನಗಳು ಭಿನ್ನವಾಗಿವೆ. ಇದನ್ನು ಸಾಮಾನ್ಯವಾಗಿ ಒಂದೇ ಕುಟುಂಬದಲ್ಲಿ ಐದು ವೃತ್ತಿಗಳನ್ನು ನಿರ್ವಹಿಸುವವರು ಇದ್ದರೂ ಒಂದೊಂದೇ ವೃತ್ತಿಯನ್ನು ನಿರ್ವಹಿಸುತ್ತಿರುವ ಸಮುದಾಯಗಳನ್ನು ಇಲ್ಲಿ ಉದಾಹರಣೆಗಾಗಿ ವಿವರಿಸಲು ಪ್ರಯತ್ನ ಮಾಡಲಾಗಿದೆ.

ಪಾಂಚಾಳ ಸಮುದಾಯದಲ್ಲಿ ಇರುವ ಐದು ವೃತ್ತಿಗಳಿಗೂ ಸಮಾನ ಸ್ಥಾನಮಾನಗಳಿಲ್ಲ. ಇದರಲ್ಲಿ ಶಿಲ್ಪಿಗಳು ಮತ್ತು ಚಿನ್ನದ ಆಭರಣ, ಕಂಚಿನ ಕೆಲಸ ಮಾಡುವವರು ಸಾಮಾನ್ಯವಾಗಿ ಸಾಮಾಜಿಕವಾಗಿ ಮೇಲುಸ್ತರದಲ್ಲಿರುತ್ತಾರೆ. ಕಮ್ಮಾರರು ಹಾಗೂ ಬಡಗಿಗಳು ಸಾಮಾನ್ಯವಾಗಿ ಹೆಚ್ಚು ಶ್ರಮಿಕರಾಗಿದ್ದು ಇವರು ಸಮಾಜದ ಸಾಮಾನ್ಯ ದುಡಿಯುವ ವರ್ಗದವರೊಡನೆ ಹೆಚ್ಚಿನ ಸಾಮಾಜಿಕ ವ್ಯಾವಹಾರಿಕ ಸಂಬಂಧಗಳನ್ನು ಇಟ್ಟುಕೊಂಡಿರುತ್ತಾರೆ.

ಸಾಮಾಜಿಕವಾಗಿ ಮೇಲು ವರ್ಗವಾಗಿರುವ ಮೊದಲ ಮೂರು ವೃತ್ತಿಗಳವರು ಅದರಲ್ಲಿಯೂ ಶಿಲ್ಪಿಗಳೂ ಮತ್ತು ಯಾವುದೇ ಲೋಹದ ದೇವತಾ ಮೂರ್ತಿಗಳನ್ನು ನಿರ್ಮಿಸುವವರು ಉನ್ನತ ಸ್ಥಾನದಲ್ಲಿರುತ್ತಾರೆ. ಅವರಿಗೆ ಸಾಮಾಜಿಕವಾಗಿಯಲ್ಲದೇ ಪಾಂಚಾಳ ಸಮುದಾಯದಲ್ಲಿಯೇ ವಿಶಿಷ್ಟ ಸ್ಥಾನಮಾನಗಳಿವೆ. ಅವರಿಗೆ ವೇದ, ಉಪನಿಷತ್ತು, ಪಂಚಾಂಗ, ವಾಸ್ತು, ಶಿಲ್ಪಗಳ ಪರಿಚಯವಿರಬೇಕು. ಕೆಲವು ನಿರ್ಬಂಧ ನಿಷೇಧಗಳನ್ನು ಆಚರಿಸುತ್ತಾರೆ. ಅಂದರೆ ಶಿಲ್ಪಿಯು ಎಲ್ಲಾ ಸಮಯದಲ್ಲಿಯೂ ತನ್ನ ಕೆಲಸವನ್ನು ಮಾಡುವುದಿಲ್ಲ. ಅದಕ್ಕೆ ಸೂಕ್ತ ಕಾಲಮಾನಗಳನ್ನು ಗುರುತಿಸುವುದು. ಮೂರ್ತಿ ಪ್ರತಿಷ್ಠಾಪನೆಯ ಆಚರಣೆ ನಿಯಮಗಳನ್ನು ಪಾಲಿಸುವುದು ಮುಂತಾದ ಧಾರ್ಮಿಕ ವಿಷಯಗಳ ಅರಿವಿರಬೇಕಾಗುತ್ತದೆ. ಹಾಗಾಗಿಯೇ ಇವರ ಸಮುದಾಯದ ಒಳಗೆ ಹಾಗೂ ಸಾಮಾಜಿಕವಾಗಿ ಉನ್ನತ ಸ್ಥಾನಗಳಲ್ಲಿರುತ್ತಾರೆ. ಹಾಗಾಗಿಯೇ ಇವರು ಹೆಸರುಗಳು, ಇವರನ್ನು ಸಂಬೋಧಿಸುವ ಸಂಬೋಧನಾ ರೂಪಗಳು, ಉಲ್ಲೇಖಿಸುವ ರೂಪಗಳು ಗೌರವ ಪೂರ್ವಕವಾಗಿರುತ್ತವೆ. ಹಾಗೆಯೇ ಮರದ ಕೆಲಸ ಮಾಡುವ ಹಾಗೂ ಕಬ್ಬಿಣದ ಸಲಕರಣೆಗಳನ್ನು ತಯಾರಿಸುವವರಿಗೆ ಬಳಕೆಯಾಗುವ ಹೆಸರುಗಳು, ಸಂಬೋಧಿಸಲು ಬಳಸುವ ಸಂಬೋಧನಾ ರೂಪಗಳು, ಉಲ್ಲೇಖಿಸಲು ಬಳಸುವ ರೂಪಗಳು ಬೇರೆ ಬೇರೆಯಾಗಿರುತ್ತವೆ. ಹಾಗೆಯೇ ಕೌಟುಂಬಿಕವಾಗಿ ಒಳವಲಯಗಳಲ್ಲಿ ಬಳಕೆಯಾಗುವ ಸಂಬೋಧನಾ ರೂಪಗಳು ಸಮುದಾಯದ ಒಳಗಿನ ವೃತ್ತಿಗಳು ಅದರಲ್ಲಿ ಸಮಾನ ವೃತ್ತಿಗಳವರು, ಸಮುದಾಯದ ಒಳಗಿನ ಕೆಳ ವೃತ್ತಿಗಳವರು ಹಾಗೂ ಸಮುದಾಯಗಳ ಹೊರಗಿನ ಇತರ ಸಮುದಾಯಗಳವರು ಬಳಸುವ ಹೆಸರುಗಳ ಬಳಕೆ, ಸಂಬೋಧನಾ ರೂಪಗಳ ಬಳಕೆ, ಉಲ್ಲೇಖ ರೂಪಗಳ ಬಳಕೆ ಬೇರೆ ಬೇರೆಯಾಗಿರುತ್ತವೆ.

ಸಮುದಾಯಗಳ ಒಳಗೆ

ಭಾಷಾ ಸಮುದಾಯಗಳಲ್ಲಿ ಭಾಷಿಕರನ್ನು ಒಗ್ಗೂಡಿಸುವ ಕೆಲಸವನ್ನು ಸಂಬೋಧನಾ ರೂಪಗಳು ನಿರ್ವಹಿಸುತ್ತವೆ. ಇವುಗಳ ಹಿಂದೆ ಭಾಷಿಕರ ಪ್ರಪಂಚವಿದೆ. ಇಲ್ಲಿ ಸಾಮಾಜಿಕ ಮನ್ನಣೆ

ಬಹುಮುಖ್ಯವಾದುದಾಗಿದೆ. ಸಂಬೋಧನಾ ರೂಪಗಳು ಭಾಷಿಕರು ನಿರ್ವಹಿಸುವ ಸಾಮಾಜಿಕ ಕಾರ್ಯವನ್ನು ನಿರ್ಧರಿಸುತ್ತವೆ. ವ್ಯಕ್ತಿಗಳ ಮಧ್ಯೆ ಉದ್ಭವಿಸುವ ಘರ್ಷಣೆ ಹಾಗೂ ವ್ಯಕ್ತಿಗಳ ನೆಮ್ಮದಿಯ ಬಾಳ್ವೆಗೆ ಸಹಕರಿಸುತ್ತ ಸಾಮಾಜಿಕ ಸಂಬಂಧವನ್ನು ಬೆಸೆಯುತ್ತವೆ. 'ಭಾಷೆಯಲ್ಲಿ ಸಂಬೋಧನಾ ರೂಪಗಳಿಗೆ ಭಾಷಿಕ ಮೌಲ್ಯಗಳನ್ನು ಹೊರತುಪಡಿಸಿ ವಿಶೇಷವಾದ ಸಾಮಾಜಿಕ ಸಾಂಸ್ಕೃತಿಕ ಮೌಲ್ಯವಿದೆ. ಸಾಮಾಜಿಕ ಸಂವಹನದ ಸಂದರ್ಭದಲ್ಲಿ ಸಂಬೋಧನಾ ರೂಪಗಳು ವ್ಯಕ್ತಿಗಳನ್ನು ಸಂಬೋಧಿಸುವ ಅಂಶಗಳಷ್ಟೇ ಆಗಿರದೇ ಬಳಸುವ ವ್ಯಕ್ತಿಗಳ ಮತ್ತು ಬಳಸಲ್ಪಡುವ ವ್ಯಕ್ತಿಗಳ ನಡುವಿನ ಸ್ಥಾನಮಾನ ಮತ್ತು ಸಂಬಂಧಗಳು ತಿಳಿಯುತ್ತವೆ. ಅಲ್ಲದೆ ಬಳಕೆಯಾಗುವ ಸಂಬೋಧನಾ ರೂಪಗಳನ್ನು ಸಮಾಜ ಹೇಗೆ ನಿಯಂತ್ರಿಸುತ್ತದೆ ಮತ್ತು ನಿರ್ದೇಶಿಸುತ್ತದೆ ಎಂಬುದೂ ತಿಳಿಯುತ್ತದೆ. ಅದುದರಿಂದಲೇ ಭಾಷೆಯಲ್ಲಿನ ಸಂಬೋಧನಾ ರೂಪಗಳು ಸಾಮಾಜಿಕ ರಚನೆಯನ್ನು ಪ್ರತಿನಿಧಿಸುವ ಅಂಶಗಳಾಗಿರುತ್ತವೆ. ಸಾಮಾಜಿಕ ಸ್ಥಿರವಾದ ಲಿಂಗ, ಜಾತಿಯಂತಹ ಅಂಶಗಳಲ್ಲಿ ಮತ್ತು ಚಲನೆಯುಳ್ಳ ಸಾಮಾಜಿಕ ಅಂಶಗಳಾದ ವಯಸ್ಸು, ಸಾಮಾಜಿಕ ಸ್ಥಾನಮಾನದಂತಹ ಅಂಶಗಳಲ್ಲಿ ಭಿನ್ನವಾಗಿರುತ್ತವೆ' (ಭಾಷಾ ವಿಶ್ವಕೋಶ, ಪು.೫೦) ಎಂಬುದನ್ನು ಪಾಂಚಾಳರ ಸಮುದಾಯದ ಮೂಲಕ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

i) ಕೌಟುಂಬಿಕ ವಲಯ

ತಂದೆ-ತಾಯಿ:-

ಸಾಮಾನ್ಯವಾಗಿ ಹೆತ್ತವರಿಗೆ ಮಾತ್ರ ತಂದೆ-ತಾಯಿ ಎಂಬ ರೂಪಗಳು ಬಳಕೆಯಾಗುತ್ತಿದ್ದರೂ ಸಂಬೋಧಿಸುವ ಸಂದರ್ಭದಲ್ಲಿ ತಂದೆ-ತಾಯಿ ರೂಪಗಳು ಬಳಕೆಗೆ ತರುವುದಿಲ್ಲ. ಪಾಂಚಾಳ ಸಮುದಾಯದಲ್ಲಿ ತಂದೆ-ತಾಯಿಯನ್ನು ಸಂಬೋಧಿಸುವಾಗ **ಯಪ, ಅಪ್ಪ, ಯವ, ಯವ್ವ, ಅವ್ವ** ಎಂದು ಉತ್ತರ ಕರ್ನಾಟಕದಲ್ಲಿ ಸಂಬೋಧಿಸಿದರೆ, ದಕ್ಷಿಣ ಕರ್ನಾಟಕದಲ್ಲಿ **ಅಯ್ಯ, ಅಣ್ಣ, ಅಮ್ಮ, ಅಕ್ಕ** ಎಂದು ಮಕ್ಕಳು ಸಂಬೋಧಿಸುವುದನ್ನು ಕಾಣಬಹುದು.

ಉದಾಹರಣೆಗೆ:-

* **ಯವಾ ಅಡಿಗಿ ಆಯ್ತಾ**
* **ಯಪಾ ಕೆಲ್ಸಕ ಹೋಕಿಯಾ ಇವತ್ತು**
* **ಆಮ ಊಟಕ ನೀಡಬಾರಮ**
* **ಅಕ ಅಣ್ಣ ಕೆಲ್ಸಕ ಹೋದ್ರು**
* **ಅಣ ನಿಮ್ನ ಹುಡಿಕೊಂಡು ಕುಲುಮಿತಕ ಗೌಡ್ರು ಬಂದಿದ್ರು**

ಹೀಗೆ ಮಕ್ಕಳು ತಂದೆ ತಾಯಿಯನ್ನು ಸಂಬೋಧಿಸುವುದನ್ನು ಕಾಣಬಹುದು. ಈ ಮೇಲಿನ ಪದಗಳು ತಂದೆ ತಾಯಿ ಪದಗಳಿಗಿಂತಲೂ ಹೆಚ್ಚು ಬದುಕಿಗೆ ಹತ್ತಿರವಾಗಿರುವುದನ್ನು ಕಾಣಬಹುದು. ಹಾಗೆಯೆ ತಂದೆಯ ಸಹೋದರ ಸಂಬಂಧದವರನ್ನು ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ ಎಂದು ಉತ್ತರ ಕರ್ನಾಟಕದಲ್ಲಿ ಸಂಬೋಧಿಸುವುದರ ಜೊತೆಗೆ ಕಾಕಾ, ಕಾಕಿ ಎಂದು ಕರೆಯುವುದು ಕಂಡುಬರುತ್ತದೆ.

ದಕ್ಷಿಣ ಕರ್ನಾಟಕದಲ್ಲಿ ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ ಎಂದು ಸಂಬೋಧಿಸುವುದನ್ನು ಪಾಂಚಾಳರಲ್ಲಿ ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ಆಂಟಿ, ಆಂಕಲ್ ಎಂಬ ರೂಪಗಳು ಬಳಕೆಗೆ ಬಂದಿರುವುದನ್ನು ಕಾಣಬಹುದು.

ಮಗ-ಮಗಳು:-

ಪಾಂಚಾಳ ಸಮುದಾಯದಲ್ಲಿ ಬಹುತೇಕ ತಮ್ಮ ಮಕ್ಕಳಿಗೆ ಹಿರಿಯರ ಹೆಸರನ್ನು ನಾಮಕರಣ ಮಾಡಿರುವುದನ್ನು ಕಾಣುತ್ತೇವೆ. ಅದರಲ್ಲಿಯೂ ತಮ್ಮ ವೃತ್ತಿ ದೇವತೆ, ಮನೆ ದೇವ್ರು ಹೆಸರು ನಾಮಕರಣ ಮಾಡಿರುವುದನ್ನು ಕಾಣಬಹುದು. ಈ ಉದ್ದೇಶದಿಂದಲೇ ಮಗ-ಮಗಳನ್ನು ಸಂಬೋಧಿಸುವ ಸಮುದಾಯದಲ್ಲಿ ಗೌರವ ಪೂರ್ವಕವಾಗಿಯೇ ಸಂಬೋಧಿಸುವುದನ್ನು ಕಾಣಬಹುದು.

ಉದಾಹರಣೆಗೆ:-

* ನಮ್ಮಪ್ಪ ಕಾಳಪ್ಪ ಬಲುಜಾಣ ಕುಡಿಯಾಕ್ ನೀರ ತರಾಪ

* ಕಾಳಮ್ಮ ಕೊಲುಮಿಗೆ ನೀರು ಹಾಕ್ಕ್ಯನವ

* ಇವತ್ತು ಅಣ್ಣ ಕೆಲ್ಸಕ ಹೋಕಾನೇನು ಕೇಳಾ ಮೌನಪ್ಪ

ಹಾಗೆಯೇ ತಾಯಿಯು ಕೂಡಾ

* ಪ್ರೇಮಿಲವ್ವ ನಿಮ್ಮಪ್ಪನಿಗೆ ಚಾವು ಹಾಕಿಕೊಡವ್ವ

* ಶಾರದ ನೀರ ತರೋಗವಾ, ಕುಡಿಯಾಕ ನೀರಿಲ್ಲ

ಹೀಗೆ ಸಂಬೋಧಿಸುವುದನ್ನು ಕಾಣಬಹುದು. ಇಲ್ಲಿ ನಿರ್ದಿಷ್ಟ ಪದದ ಜೊತೆಗೆ ವಾರ್ಗಿಕ ಪದಗಳಾದ ಅಪ್ಪ, ಅಮ್ಮ, ಅವ್ವ ಬಳಕೆಯಾಗುವುದನ್ನು ಕಾಣಬಹುದು.

ಗಂಡ-ಹೆಂಡತಿ:-

ಗಂಡ ಹೆಂಡತಿ ಪರಸ್ಪರ ಮಾತನಾಡುವಾಗ ಪರಸ್ಪರ ಹೆಸರನ್ನು ಬಳಸಿ ಕರೆಯುವುದಿಲ್ಲ. ಒಂದು ವೇಳೆ ತಮ್ಮ ಗಂಡನ ಹೆಸರಿಡಿದು ಕರೆದರೆ ಅವರಿಗೆ ಆಯುಷ್ಯ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇವರಲ್ಲಿರುವುದನ್ನು ಕಾಣಬಹುದು ಹೆಂಡತಿ ಗಂಡನನ್ನು ಸಂಬೋಧಿಸುವಾಗ ಬಹುವಚನದಲ್ಲಿ ಮಾತನಾಡಿಸುವುದನ್ನು, ಪರಿಚಯ ಮಾಡಿಕೊಡುವುದನ್ನು ಕಾಣುತ್ತೇವೆ. ಉದಾಹರಣೆಗೆ ನಮ್ಮವರು, ಯಜಮಾನ್ರು, ಆಚಾರ್ರು, ಯೆನ್ ರೀ ಎಂದೆಲ್ಲಾ ಸಂಬೋಧಿಸುವುದನ್ನು ಕಾಣುತ್ತೇವೆ. ಹಾಗೆಯೇ ಗಂಡ ಹೆಂಡತಿಯ ಬಗೆಗೆ ಹೇಳುವಾಗ ನಮ್ಮವಳು, ನಮ್ಮ ಹೆಂಗಸರು, ಮನಿಯವರು, ಯನೆ ಎಂದು ಬಳಸುವುದನ್ನು ಕಾಣಬಹುದು.

* ನಮ್ಮ ಮನಿಯವರು ಇವತ್ತು ಊರಾಗ ಕೆಲ್ಯ ಮಾಡಕತ್ತಾರ

* ನಮ್ಮ ಯಜಮಾನ್ರು ಹೇಳಿದ್ರು, ಆ ಕುಂಟಿನ ದುಡ್ಡು ಕೊಟ್ಟು ಹೊಯ್ಯತ್ತರೆ ಅಂತ ಹೇಳಿದ್ರು

ಕೆಲವೊಮ್ಮೆ ಮಕ್ಕಳ ಮೇಲೆ ಹಾಕಿ ಸಂಬೋಧಿಸುವುದನ್ನು ಕಾಣುತ್ತೇವೆ ಉದಾಹರಣೆಗೆ

* ಇವರ್ ಅಜ್ಜಗ ಆರಾಮ ಇಲ್ಲ ಇವತ್ತು ಒಬ್ಬರೆ ಕೆಲ್ಸಕ ಹೋಗ್ಯಾರ್

* ಇವರ್ ಮಾವನ ಕೆಲ್ಸಕ ಕರ್‍ಕೊಂಡು ಹೋಗ್ಯಾರ್

ದಕ್ಷಿಣ ಕರ್ನಾಟಕದಲ್ಲಿ ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ ಎಂದು ಸಂಬೋಧಿಸುವುದನ್ನು ಪಾಂಚಾಳರಲ್ಲಿ ಕಾಣಬಹುದು. ಪ್ರಸ್ತುತ ಸಂದರ್ಭದಲ್ಲಿ ಆಂಟಿ, ಅಂಕಲ್ ಎಂಬ ರೂಪಗಳು ಬಳಕೆಗೆ ಬಂದಿರುವುದನ್ನು ಕಾಣಬಹುದು.

ಮಗ-ಮಗಳು:-

ಪಾಂಚಾಳ ಸಮುದಾಯದಲ್ಲಿ ಬಹುತೇಕ ತಮ್ಮ ಮಕ್ಕಳಿಗೆ ಹಿರಿಯರ ಹೆಸರನ್ನು ನಾಮಕರಣ ಮಾಡಿರುವುದನ್ನು ಕಾಣುತ್ತೇವೆ. ಅದರಲ್ಲಿಯೂ ತಮ್ಮ ವೃತ್ತಿ ದೇವತೆ, ಮನೆ ದೇವ್ರು ಹೆಸರು ನಾಮಕರಣ ಮಾಡಿರುವುದನ್ನು ಕಾಣಬಹುದು. ಈ ಉದ್ದೇಶದಿಂದಲೇ ಮಗ-ಮಗಳನ್ನು ಸಂಬೋಧಿಸುವ ಸಮುದಾಯದಲ್ಲಿ ಗೌರವ ಪೂರ್ವಕವಾಗಿಯೇ ಸಂಬೋಧಿಸುವುದನ್ನು ಕಾಣಬಹುದು.

ಉದಾಹರಣೆಗೆ:-

* ನಮ್ಮಪ್ಪ **ಕಾಳಪ್ಪ** ಬಲುಜಾಣ ಕುಡಿಯಾಕ್ ನೀರ ತರಾಪ

* **ಕಾಳಮ್ಮ** ಕೊಲುಮಿಗೆ ನೀರು ಹಾಕ್ಬ್ಯನವ

* ಇವತ್ತು ಅಣ್ಣಾ ಕೆಲ್ಸಕ ಹೋಕಾನೇನು ಕೇಳಾ **ಮೌನಪ್ಪ**

ಹಾಗೆಯೇ ತಾಯಿಯು ಕೂಡಾ

* **ಪ್ರೇಮಿಲವ್ವ** ನಿಮ್ಮಪ್ಪನಿಗೆ **ಚಾವು** ಹಾಕಿಕೊಡವ್ವ

* **ಶಾರದ** ನೀರ ತರೋಗವಾ, ಕುಡಿಯಾಕ ನೀರಿಲ್ಲ

ಹೀಗೆ ಸಂಬೋಧಿಸುವುದನ್ನು ಕಾಣಬಹುದು. ಇಲ್ಲಿ ನಿರ್ದಿಷ್ಟ ಪದದ ಜೊತೆಗೆ ವಾರ್ಗಿಕ ಪದಗಳಾದ **ಅಪ್ಪ, ಅಮ್ಮ, ಅವ್ವ** ಬಳಕೆಯಾಗುವುದನ್ನು ಕಾಣಬಹುದು.

ಗಂಡ-ಹೆಂಡತಿ:-

ಗಂಡ ಹೆಂಡತಿ ಪರಸ್ಪರ ಮಾತನಾಡುವಾಗ ಪರಸ್ಪರ ಹೆಸರನ್ನು ಬಳಸಿ ಕರೆಯುವುದಿಲ್ಲ. ಒಂದು ವೇಳೆ ತಮ್ಮ ಗಂಡನ ಹೆಸರಿಡಿದು ಕರೆದರೆ ಅವರಿಗೆ ಆಯುಷ್ಯ ಕಡಿಮೆಯಾಗುತ್ತದೆ ಎಂಬ ನಂಬಿಕೆ ಇವರಲ್ಲಿರುವುದನ್ನು ಕಾಣಬಹುದು ಹೆಂಡತಿ ಗಂಡನನ್ನು ಸಂಬೋಧಿಸುವಾಗ ಬಹುವಚನದಲ್ಲಿ ಮಾತನಾಡಿಸುವುದನ್ನು, ಪರಿಚಯ ಮಾಡಿಕೊಡುವುದನ್ನು ಕಾಣುತ್ತೇವೆ. ಉದಾಹರಣೆಗೆ **ನಮ್ಮವರು, ಯಜಮಾನ್ರು, ಆಚಾರ್ರು, ಯೆನ್** ರೀ ಎಂದೆಲ್ಲಾ ಸಂಬೋಧಿಸುವುದನ್ನು ಕಾಣುತ್ತೇವೆ. ಹಾಗೆಯೇ ಗಂಡ ಹೆಂಡತಿಯ ಬಗೆಗೆ ಹೇಳುವಾಗ **ನಮ್ಮವಳು, ನಮ್ಮ ಹೆಂಗಸರು, ಮನಿಯವರು, ಯನೆ** ಎಂದು ಬಳಸುವುದನ್ನು ಕಾಣಬಹುದು.

* ನಮ್ಮ **ಮನಿಯವರು** ಇವತ್ತು ಊರಾಗ ಕೆಲ್ಸ ಮಾಡಕತ್ತಾರ

* ನಮ್ಮ ಯಜಮಾನ್ರು ಹೇಳಿದ್ರು, ಆ ಕುಂಟಿನ ದುಡ್ಡು ಕೊಟ್ಟು ಹೊಯ್ಯತ್ತರೆ ಅಂತ ಹೇಳಿದ್ರು

ಕೆಲವೊಮ್ಮೆ ಮಕ್ಕಳ ಮೇಲೆ ಹಾಕಿ ಸಂಬೋಧಿಸುವುದನ್ನು ಕಾಣುತ್ತೇವೆ ಉದಾಹರಣೆಗೆ

* **ಇವರ್** ಅಜ್ಜಗ ಆರಾಮ ಇಲ್ಲ ಇವತ್ತು ಒಬ್ಬರೆ ಕೆಲ್ಸಕ ಹೋಗ್ಯಾರ್

* **ಇವರ್** ಮಾವನ ಕೆಲ್ಸಕ ಕರ್‍ಕೊಂಡು ಹೋಗ್ಯಾರ್

ಗಂಡ ಹೆಂಡತಿಯನ್ನು ಪರಿಚಯಿಸುವಾಗ ಅಥವಾ ಹೆಂಡತಿ ಬಗೆಗೆ ಹೇಳುವಾಗ ಅವಳ ಹೆಸರೇಳಾದೆ **ನಮ್ಮಾಕಿ,** ನಮ್ಮ **ಹೆಣ್ಣುಮಕ್ಕಳು,** ನಮ್ಮವರು, ನಮ್ಮ ಯಜಮಾನಿ ಎಂದೆಲ್ಲಾ ಕರೆಯುವುದನ್ನು ಕಾಣಬಹುದು.

ಉದಾಹರಣೆಗೆ

* ನಮ್ಮ **ಹೆಣ್ಣುಮಕ್ಕಳು** ನಾವು ಕೆಲ್ಸಕ ಹೋಗವತ್ತಿಗೆ ಅಡಿಗೆ ಮಾಡಿ ಕೊಡ್ತಾರೆ.

* ನಾನು ಇದ್ರೇನು ಬಿಟ್ರೇನು **ನಮ್ಮಕೀಗೆ** ಹೇಳಿರ್ತಿನಿ ದುಡ್ಡುಕೊಟ್ಟು ರಂಟೆಕುಳ ಒಯ್ಯಿ

ಗಂಡ-ಹೆಂಡತಿ ಸಂಬೋಧನಾ ಮಾದರಿಗಳಲ್ಲಿ ಹೆಂಡತಿ ಗಂಡನನ್ನು ಸಂಬೋಧಿಸುವಾಗ ಹಾಗೂ ಉಲ್ಲೇಖಿಸುವ ಸಂದರ್ಭದಲ್ಲಿ ಗೌರವ ಸೂಚಕ ಬಹುವಚನದಲ್ಲಿ ಸಂಬೋಧಿಸಿರುವುದು ಕಂಡುಬರುತ್ತದೆ. ಹಾಗೆಯೇ ಕೌಟುಂಬಿಕದಲ್ಲಿರುವ ಸಮಯದಲ್ಲಿ ತಮಗೆ ಪ್ರಿಯವಾದ ಹೆಸರನ್ನು ಕರೆಯುವುದು ಕಂಡು ಬರುತ್ತವೆ. ಉದಾ: **ಯಾನ, ಯಾನೆ, ಮರಿ** ಇತ್ಯಾದಿ

ಸಹೋದರ-ಸಹೋದರಿಯರು:-

ಸಾಮಾನ್ಯವಾಗಿ ಒಡಹುಟ್ಟಿದವರಲ್ಲಿ ಹಿರಿಯರು ಅಂದರೆ ಅಕ್ಕ ಇಲ್ಲವೆ ಅಣ್ಣನಾಗುತ್ತಾನೆ. ಕಿರಿಯವರು ತಮ್ಮ ಇಲ್ಲವೆ ತಂಗಿಯಾಗುತ್ತಾಳೆ. ತಮ್ಮ ಇಲ್ಲವೆ ತಂಗಿ ಅಣ್ಣನನ್ನು ಸಂಬೋಧಿಸುವಾಗ ಪ್ರೀತಿಯಿಂದ ಅಥವಾ ಗೌರವದಿಂದಲೇ ಸಂಬೋಧಿಸುವುದನ್ನು ಕಾಣುತ್ತೇವೆ. ಉದಾಹರಣೆ ಗಂಡಸರ ಹೆಸರಿನ ಕೊನೆಯಲ್ಲಿ ಗೌರವ ರೂಪವಾಗಿ **ಯಣ್ಣ, ಅಣ್ಣ** ಸೇರುತ್ತವೆ. **ಸುಭಾಷಣ್ಣ, ಉದಯಣ್ಣ, ಕೊಟ್ರೇಶಣ್ಣ** ಎಂದು ಸಂಬೋಧಿಸುವುದನ್ನು ಪಾಂಚಾಳ ಸಮುದಾಯದಲ್ಲಿ ಕಾಣುತ್ತೇವೆ.

ಹಿರಿಯರು ಕಿರಿಯರನ್ನು ಸಂಬೋಧಿಸುವಾಗ ಪ್ರೀತಿ ಪೂರ್ವಕವಾಗಿ ಅವನ ಹೆಸರಿನಿಂದ ಸಂಬೋಧಿಸಿರುವುದನ್ನು ಕಾಣುತ್ತೇವೆ. ಉದಾಹರಣೆಗೆ:

* **ರಾಜ** ಇವತ್ತು ಬರ್‍ತಾರೆ ಕುಂಟಿ ಹಾಸಿ ಇಟ್ಟುಬಿಡು

* **ಮೌನೇಶ** ಬೆಳಗ್ಗೆ ಹೋಗಿ ಸ್ವಾಮಿಯರ ಮರದ ತುಂಡುಹಾಕಿ ಬರನಾ,

ಕೆಲವೊಂದು ಸಂದರ್ಭ ಲೇ ತಮ್ಮ ಎಂಬ ಪದವನ್ನು ಹಚ್ಚಿ ಸಂಬೋಧಿಸುವುದನ್ನು ಕಾಣಬಹುದು

* **ಲೇ ತಮ** ಆ ಉಳಿ ಮಸೇದು ಕೊಡು ಬೇಗ

* **ತಮ್ಮಣ್ಣ** ಹಿಡಿಸ್ವಾಳು ತರಾಪ

ಹಾಗೆಯೇ ತಂಗಿ ತಮ್ಮಂದಿರು ಅಕ್ಕನನ್ನು ಸಂಬೋಧಿಸುವಾಗಲೂ ಕೂಡ ಗೌರವ ಪೂರ್ವಕವಾಗಿ **ಯಕ್ಕ, ಅಕ್ಕಯೆಂತಲೂ** ಸಂಬೋಧಿಸುವುದನ್ನು ಕಾಣಬಹುದು ಉದಾಹರಣೆಗೆ:

* **ಭೀಮಕ್ಕ** ಅಪ್ಪ ಕೆಲ್ಸಕ ಹೋತ

* **ಮೈತ್ರಕ್ಕ** ಅಪ್ಪಂದು ಊಟ ಆಯ್ತು

* **ಯಕಾ** ಊರಿಂದ ಯಾವಾಗ ಬಂದೀ

* **ಯಕಾ** ಅವ್ವ ಎಲ್ಲಿಗೆ ಹೋಗ್ಯಾಳ

ತಂಗಿಯನ್ನು ಹಿರಿಯರು ಸಂಬೋಧಿಸುವಾಗಲೂ ಏಕವಚನದಲ್ಲಿ ಸಂಬೋಧಿಸುವುದನ್ನು ಕಾಣುತ್ತೇವೆ. ಆದರೂ ಅಲ್ಲಿ ಗೌರವ ಭಾವನೆ ಇದ್ದೆ ಇರುತ್ತದೆ.

ಉದಾಹರಣೆಗೆ:

* ತಂಗಿ ಅಪ್ಪಗ ನೀರಂತೆ ಒಯ್ಯವ

* **ಕೆತ್ತಿದ ಚೆಕ್ಕೆ ಆದಾವು ತಂಗೊಂದು ಬಾರವ.**

ಹೀಗೆ ಸಹೋದರ-ಸಹೋದರಿಯರು ನಡುವೆ ಗೌರವಯುತವಾಗಿ ಸಂಬೋಧಿಸುವುದನ್ನು ಕಾಣಬಹುದು. ಈ ಪಾಂಚಾಳ ಸಮುದಾಯದಲ್ಲಿ ಹಿರಿಯರ ನಿರ್ದಿಷ್ಟ ಹೆಸರಿನ ಜೊತೆಗೆ **ಯಣ್ಣ, ಅಣ್ಣ, ಅಕ್ಕ, ಯಕ್ಕ** ಎಂಬ ವಾರ್ಗಿಕ ಪದಗಳು ಗೌರವಯುತವಾಗಿ ಬರುವುದನ್ನು ಕಾಣುತ್ತೇವೆ. ಕಿರಿಯರನ್ನು ಹಿರಿಯರು ಸಂಬೋಧಿಸುವಾಗ ಕಿರಿಯರು ನಿರ್ದಿಷ್ಟ 'ಸರಿನ ಜೊತೆಗೆ **ಅವ, ಯವ, ತಂಗೆಮ್ಮ, ತಂಗಿ** ಪದಗಳು ಗೌರವಯುತವಾಗಿ ಬರುವುದನ್ನು ಕಾಣಬಹುದು.

ಅತ್ತೆ-ಮಾವ, ಅಳಿಯ-ಸೊಸೆ:-

ಸಾಮಾನ್ಯವಾಗಿ ತಂದೆಯ ಒಡಹುಟ್ಟಿದವಳು ಇಲ್ಲವೆ ಹೆಂಡತಿಯ ಅಥವಾ ಗಂಡನ ತಾಯಿ ಇಲ್ಲವೆ ಸೋದರ ಮಾವನ ಹೆಂಡತಿ ಅತ್ತೆಯಾಗುವುದುಂಟು. ಹಾಗೆಯೇ ಗಂಡನ ತಂದೆ, ತಾಯಿಯ ಒಡಹುಟ್ಟಿದವರು, ಸೋದರತ್ತೆಯ ಗಂಡ ಮಾವನಾಗುತ್ತಾನೆ. ಇಲ್ಲಿ ತಂದೆ ತಾಯಿಯ ಒಡಹುಟ್ಟಿದವರು ಆದ್ದರಿಂದ ಅಳಿಯ ಸೊಸೆಯ ಮೇಲೆ ತುಂಬ ಸಲಿಗೆಯಿಂದ ಪ್ರೀತಿಯನ್ನು ಬೆಳೆಸುತ್ತಾರೆ. ಅಳಿಯ, ಸೊಸೆಯು ಕೂಡ ಅತ್ತೆ-ಮಾವನ ಜೊತೆಗೆ ಪರಸ್ಪರ ಸಲಿಗೆಯಿಂದಲೇ ಮಾತನಾಡುತ್ತಿರುತ್ತಾರೆ. ಅಳಿಯ ಅಥವಾ ಸೊಸೆ ಅತ್ತೆಯನ್ನು ಸಂಬೋಧಿಸುವಾಗ ನಿರ್ದಿಷ್ಟ ಹೆಸರಿನ ಜೊತೆ ಅತ್ತೆ ಎಂಬ ಸಂಬೋಧನಾ ಪದವನ್ನು ಹಚ್ಚಿ ಕರೆಯುತ್ತಾರೆ. ಕೆಲವೊಂದು ಸಂದರ್ಭದಲ್ಲಿ **ಅತ್ತ್ಯಾ, ಅತ್ತೇಮ್ಮ** ಎಂದು ಕೂಡ ಸಂಬೋಧಿಸುತ್ತಾರೆ. ಉದಾಹರಣೆಗೆ : **ಮೈತ್ರತ್ತೆ, ಕಾಳವತ್ತೆ, ರತ್ನವತ್ತೆ, ಪಾರತ್ತೆ** ಹಾಗೆಯೇ **ಸುಭಶ್‌ಮಾವ, ಷಡಕಪ್ಪಮಾವ, ದೇವಪ್ಪಮಾವ** ಎಂದು ಮಾವಂದಿರಿಗೆ ತಮ್ಮ ಹೆಸರಿನ ಜೊತೆಗೆ 'ಮಾವ' ಎಂಬ ಸಂಬೋಧನ ರೂಪವನ್ನು ಹಚ್ಚಿ ಕರೆಯುವುದು ಕಂಡು ಬರುತ್ತದೆ. ಇಲ್ಲಿ 'ಸಣ್ಣ' 'ದೊಡ್ಡ' ಎಂಬ ವಿಶೇಷ ಪದಗಳು ಬಳಕೆಯಾಗುವುದನ್ನು ಕಾಣುತ್ತೇವೆ

ಉದಾಹರಣೆಗೆ:

* **ದೊಡ್ಡಮಾವನ ಜೊತ್ಗೆ** ಕೆಲ್ಸಕ ಹೋಗ್ಯಾರ್

* **ಸಣ್ಣ ಮಾವರಿಗೆ** ಆರಾಮ ಇಲ್ಲ ಕೆಲ್ಸಕ ಹೋಗಿಲ್ಲ

ಕೌಟುಂಬಿಕ ವಲಯದಲ್ಲಿ ಅಳಿಯ ಹಾಗೂ ಸೊಸೆ ತುಂಬ ಪ್ರಿಯವಾದ ವ್ಯಕ್ತಿಗಳು. ಸಂಬೋಧಿಸುವ ಸಂದರ್ಭದಲ್ಲಿ ಅಯ, ಸೊಸೆ ಎಂದು ಸಂಬೋಧಿಸುವುದಿಲ್ಲ. ಇಲ್ಲಿ ಇನ್ನೊಬ್ಬರಿಗೆ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಮಾತ್ರ ಅಳಿಯ, ಸೊಸೆ ಪದಗಳು ಬಳಕೆಯಾಗುವುದನ್ನು ಕಾಣುತ್ತೇವೆ.

ಉದಾಹರಣೆಗೆ:

* **ಮೌನೇಶಪ್ಪನಿಗೆ** ಇಬ್ಬರು ಅಳ್ಯಾರು.

* **ಹೇಮಣ್ಣನಿಗೆ** ಒಬ್ಬಳೆ **ಸೊಸೆ** ಇರೋದು. ಹೀಗೆ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ.

ಅತ್ತಿಗೆ:-

ಪಾಂಚಾಳ ಸಮುದಾಯದಲ್ಲಿ ಅತ್ತಿಗೆ ಎಂದರೆ ಅಣ್ಣನ ಹೆಂಡತಿ ಎಂದಾರ್ಥ. ಉತ್ತರ ಕರ್ನಾಟಕದಲ್ಲಿ ಅತ್ತಿಗೆ ಪದದ ಬದಲಾಗಿ ವೈನಿ ಎಂದು ಕರೆಯುವುದು ಇವರಲ್ಲಿ ಕಂಡು ಬರುತ್ತದೆ. ಆದರೆ ದಕ್ಷಿಣ ಕರ್ನಾಟಕದಲ್ಲಿ **ಅತ್ತಿಗೆ** ಎಂದು ಸಂಬೋಧಿಸುವುದನ್ನು ಕಾಣುತ್ತೇವೆ.

ಉದಾಹರಣೆಗೆ:

*** ನಮ್ಮ ಅಣ್ಣ ವೈನಿ ಊರಿಗೆ ಹೋಗ್ಯಾರ್**

*** ಅತ್ತಿಗೆಮ್ಮ ಅಣ್ಣ ಊರಿಗೆ ಹೋಗ್ಯಾರ್.**

ಈ ರೀತಿ ಬಳಕೆಯಾಗುವುದನ್ನು ಕಾಣಬಹುದು. ದಕ್ಷಿಣ ಕರ್ನಾಟಕದಲ್ಲಿ ಅತ್ತಿಗೆಗೆ ಅಮ್ಮ ಅಥವಾ ಅಪ್ಪನ ಸಮಾನ ಗೌರವದಿಂದ ಕಾಣುವುದರಿಂದ **ಅತ್ತಿಗೆಮ್ಮ, ಅತ್ತಿಗೆವ್ವ,** ಎಂದು ಸಂಬೋಧಿಸುವುದು ಕಂಡುಬರುತ್ತದೆ.

ಭಾವ-ಮೈದುನ:-

ಮಾವ, ಭಾವ ಎನ್ನುವ ಪದ ಹಲವಾರು ಗೊಂದಲಗಳನ್ನು ಉಂಟುಮಾಡುತ್ತದೆ. ಹೆಣ್ಣು ಕೊಟ್ಟ ತಂದೆಗೂ ಭಾವ, ಮಾವ ಎಂದು ಸಂಬೋಧಿಸುವುದುಂಟು. ಹಾಗೂ ತಾಯಿಯ ಒಡಹುಟ್ಟಿದವನಿಗೂ ಭಾವ, ಮಾವ ಎಂದು ಸಂಬೋಧಿಸುವುದನ್ನು ಕಾಣುತ್ತೇವೆ. ಕೆಲವು ವೇಳೆ ಬಂಧುತ್ವವಿಲ್ಲದಿದ್ದರೂ ಆತ್ಮೀಯತೆಯಿಂದ ಸೂಚಿಸುವಾಗಲೂ ಈ ಪದ ಪಾಂಚಾಳರಲ್ಲಿ ಬಳಕೆಯಾಗುವುದನ್ನು ಕಾಣಬಹುದು.

ಮೈದುನ ಎಂಬ ಪದವು ಅಣ್ಣನ ತಮ್ಮಂದಿರಿಗೆ ಉಪಯೋಗಿಸುವುದನ್ನು ಪಾಂಚಾಳ ಸಮುದಾಯದಲ್ಲಿ ಕಾಣುತ್ತೇವೆ. ಈ ಸಂಬೋಧನ ರೂಪವು ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಮಾತ್ರ ಈ ಪದ ಬಳಕೆಯಾಗುತ್ತದೆ.

ಉದಾಹರಣೆಗೆ:

*** ಇವರು ಇಬ್ಬರು ನನ್ನ ಮೈದುನರು**

*** ನಮ್ಮರ್ ಜೊತ್ಗೆ ಮೈದುನರು ಕೆಲ್ಸಕ ಹೋಗ್ತಾರ್**

ನಾದಿನಿ-ನೆಗಣ್ಣಿ:-

ಗಂಡನ ಅಕ್ಕ ತಂಗಿಯರು ನಾದುನಿಯರಾಗುತ್ತಾರೆ. ಈ ಪದವು ಕೂಡ ಪರಿಚಯದ ಸಂದರ್ಭದಲ್ಲಿ ಮಾತ್ರ ಸಂಬೋಧಿಸುವುದನ್ನು ಕಾಣುತ್ತೇವೆ. ಉತ್ತರ ಕರ್ನಾಟಕದಲ್ಲಿ ನಾದುನಿಗೆ **ಚಿಗವ್ವ** ಎಂದು ಪಾಂಚಾಳರು ಸಂಬೋಧಿಸುವುದನ್ನು ನೋಡಬಹುದು

ಉದಾಹರಣೆಗೆ:

*** ನಮ್ಮವರ ಜೊತೆ ಚಿಗವ್ವನು ಊರಿಗೆ ಹೋಗ್ಯಾಳೆ**

*** ನಮಗೆ ಒಬ್ಬ ನಾದುನಿ ಇದ್ಯಾಳೆ**

ನೆಗಣ್ಣೆ ಎಂಬ ಪದವು ಉತ್ತರ ಕರ್ನಾಟಕದಲ್ಲಿ ಪಾಂಚಾಳ ಸಮುದಾಯದಲ್ಲಿ ಅಕ್ಕ ಎಂಬ ರೂಪದಿಂದ ಬಳಕೆಯಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ **ಒರೆಗಿತ್ತಿ** ಎಂದು ಸಂಬೋಧಿಸುವುದನ್ನು ಕಾಣಬಹುದು. ನೆಗಣ್ಣೆ ಎಂದರೆ ಗಂಡನ ಸಹೋದರನ ಹೆಂಡತಿಗೆ ನೆಗಣ್ಣೆ ಎಂದು ಕರೆಯುವ ವಾಡಿಕೆ. ಈ ಪದವು ಅಕ್ಕ ತಂಗಿಯರು ಎಂದು ಸೂಚಿಸುತ್ತದೆ. ಅಣ್ಣ ತಮ್ಮಂದಿರ ಹೆಂಡತಿಯರು ಕೂಡ ಅಕ್ಕ ತಂಗಿಯರು ಇದ್ದಂತೆ. ಆದ್ದರಿಂದ ದಕ್ಷಿಣ ಕರ್ನಾಟಕದಲ್ಲಿ ಒರೆಗಿತ್ತಿ ಎಂಬ ಪದವು ಒರಗಿನಿಂದ ಬಂದವರ ಜೊತೆಗೆ ವ್ಯವಹಾರಿಸುವರು ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಬಂದವರು ಒರಗಿನವರು ಆದ್ದರಿಂದ ಇವರಿಗೆ ಅಕ್ಕ ತಂಗಿಯರು ಎಂದು ಸಂಬೋಧಿಸುವುದು ಪಾಂಚಾಳರಲ್ಲಿ ಕಂಡುಬರುತ್ತದೆ.

ಅಜ್ಜ-ಅಜ್ಜಿ, ಮೊಮ್ಮಗ-ಮೊಮ್ಮಗಳು:-

ಸಾಮಾನ್ಯವಾಗಿ ತಂದೆ-ತಾಯಿಯ ಅಪ್ಪ ಅಮ್ಮಂದಿರನ್ನು ಅಜ್ಜ ಅಜ್ಜಿ ಎಂದು ಸಂಬೋಧಿಸುವುದನ್ನು ಕಾಣುತ್ತೇವೆ. ಹಿರಿಯರು ತೀರಿಹೋದಾಗ ಅವರ ಹೆಸರನ್ನೇ ಮೊಮ್ಮಕ್ಕಳಿಗೆ ಇಡುವುದುಂಟು. ಅಲ್ಲಿಯೂ ಕೂಡ ಗೌರವ ಭಾವನೆಯಿಂದಲೇ ಹೆಸರನ್ನು ಸೂಚಿಸುತ್ತಾರೆ ಹಾಗೂ ಸಂಬೋಧಿಸುತ್ತಾರೆ ಉದಾಹರಣೆಗೆ **ಕಾಳಜ್ಜ, ಮಾನಜ್ಜ, ಮಾರ್ತಾಂಡಜ್ಜ, ನಿಂಗಜ್ಜ.**

ಮಧ್ಯ ಕರ್ನಾಟಕದ ಭಾಗದಲ್ಲಿ ಅಜ್ಜನಿಗೆ **ತಾತ** ಎಂದು ಸಂಬೋಧಿಸುವುದು ಕಂಡು ಬರುತ್ತದೆ. ಆದರೆ ನಾಮಕರಣ ಮಾಡುವಾಗ ಈ ಪದ ಬಳಕೆಗೆ ಬರುವುದಿಲ್ಲ

ಅಜ್ಜಿ ಎಂಬ ಪದವನ್ನು ಸಂಬೋಧಿಸುವಾಗ ಗೌರವವಾಗಿ ಸಂಬೋಧಿಸುವುದನ್ನು ಕಾಣುತ್ತೇವೆ. ಈ ಪದಕ್ಕೆ ಕೆಲವೊಂದು ಸಂದರ್ಭದಲ್ಲಿ **ಅಮ್ಮ** ಎಂದು ಸಂಬೋಧಿಸುವುದನ್ನು ಕಾಣುತ್ತೇವೆ. ಇಲ್ಲಿ ನಿರ್ದಿಷ್ಟ ಪದದ ಜೊತೆಗೆ ವಾರ್ಗಿಕ ಪದವನ್ನು ಬಳಸಿ ಸಂಬೋಧಿಸುತ್ತಾರೆ

ಉದಾಹರಣೆಗೆ: **ಬೀಮಮ್ಮ, ಕಾಳಮ್ಮ, ರತ್ನಮ್ಮ** ಹೀಗೆ ಸಂಬೋಧಿಸುವುದನ್ನು ಪಾಂಚಾಳರಲ್ಲಿ ಕಾಣುತ್ತೇವೆ. ಹಾಗೆಯೇ ಹುಟ್ಟುವ ಮಕ್ಕಳಿಗೂ ಕೂಡ ಈ ಮೇಲಿನ ತರಹದಲ್ಲಿ ನಾಮಕರಣ ಮಾಡುವುದನ್ನು ಕಾಣುತ್ತೇವೆ.

ವ್ಯಕ್ತಿ ನಾಮಗಳ ಬಳಕೆ

ಪ್ರತಿಯೊಂದು ಸಮುದಾಯಗಳನ್ನು ಗಮನಿಸಿದಾಗ ಆ ಸಮುದಾಯಗಳ ವ್ಯಕ್ತಿಯನ್ನು ಕರೆಯಲಿಕ್ಕೆ (ಸಂವಹನ ಕ್ರಿಯೆಗೆ) ಅವರಿಗೆ ಆದಂತಹ ನಿರ್ದಿಷ್ಟವಾದ ಹೆಸರು ಇರುತ್ತದೆ. ಇದಕ್ಕೆ ವ್ಯಕ್ತಿನಾಮ ಎಂದು ಕರೆಯುತ್ತೇವೆ. ಈ ವ್ಯಕ್ತಿನಾಮಗಳು ಆ ಸಮುದಾಯದ ಸಂಸ್ಕೃತಿಯ ಹಿನ್ನಲೆಯಲ್ಲಿ ರಚನೆಗೊಂಡಿರುತ್ತವೆ. ಈ ಹಿನ್ನಲೆಯಲ್ಲಿ ಆ ವ್ಯಕ್ತಿಯ ಜಾತಿ, ಧರ್ಮ, ಸಾಮಾಜಿಕ ಪರಿಸರವನ್ನು ಗುರುತಿಸಬಹುದು ಉದಾ:- **ಚಾರೆಮ್ಮ** ಹಾಗೂ **ದುರ್ಗಮ್ಮ** ಕೆಳಸ್ತರ ಸಮುದಾಯಗಳ ದೇವತೆಗಳು ಎಂಬುದು ನಮಗೆ ಗ್ರಹಿಕೆಯಾಗಿರುತ್ತದೆ. ಈ ಸಮುದಾಯದವರು ತಮ್ಮ ಮಕ್ಕಳಿಗೆ **ಚಾರೆಪ್ಪ, ದುರ್ಗಪ್ಪ** ಇತ್ಯಾದಿ ಹೆಸರುಗಳನ್ನು ಕಟ್ಟಿರುತ್ತಾರೆ. ಈ ಹೆಸರುಗಳನ್ನು ಕೇಳಿದರೆ ಸಾಕು ನಮಗೆ ಇವರು ಯಾವ ಸಾಮಾಜಿಕ ಹಿನ್ನಲೆಯವರು ಎನ್ನುವುದು ಅರ್ಥವಾಗುತ್ತದೆ. ಹಾಗೆಯೇ ಈ ಕೆಳಸ್ತರದ ಸಮುದಾಯಗಳ ದೇವತೆಗೆ

ನಡೆದುಕೊಳ್ಳುವ ಮೇಲ್‌ಸ್ತರದ ಸಮುದಾಯದವರು ಈ ದೇವತೆಗಳ ಹೆಸರನ್ನು ಇಡುತ್ತಾರೆ. ಉದಾ: ದುರ್ಗೇಶ್, ಚಾರುಲತಾ ಇತ್ಯಾದಿ ಈ ನಾಮಗಳ ಮೂಲಕವೇ ಧರ್ಮ, ಜಾತಿಗಳನ್ನು ಸುಲಭವಾಗಿ ತಿಳಿಯಬಹುದು. ಹೆಸರಿನ ಮೊದಲ ಭಾಗದಲ್ಲಿ ನಿರ್ದಿಷ್ಟದಲ್ಲಿ ಮೇಲ್ ವರ್ಗಗಳ ವರ್ಗದವರು ದೈವನಾಮವನ್ನಿಟ್ಟರು ಕಡೆಯದಲ್ಲಿ ಬಳಸಿರುವ ವಾರ್ಗಿಕದಲ್ಲಿ ನಿರ್ದಿಷ್ಟಕ್ಕೆ ಸೇರುವ ಅಪ್ಪ, ಅಮ್ಮಗಳು ಕೆಳವರ್ಗದ ಸಾಮಾಜಿಕ ಹಿನ್ನೆಲೆಯನ್ನು ಸೂಚಿಸಿದರೆ ಮೇಲ್‌ವರ್ಗದಲ್ಲಿ ಇವುಗಳು ಕಂಡುಬರುವುದಿಲ್ಲ. ಹಾಗೆಯೇ ಈ ಹೆಸರುಗಳನ್ನು ಕರೆಯುವಲ್ಲಿ ಸಮುದಾಯಗಳಿಂದ ಸಮುದಾಯಗಳಿಗೆ ಭಿನ್ನವಾಗಿರುತ್ತವೆ. ಅದರಲ್ಲಿಯೂ ಸಮುದಾಯಗಳಲ್ಲಿಯೇ ಆರ್ಥಿಕ, ಸಾಮಾಜಿಕವಾಗಿ ಮೇಲ್‌ಸ್ತರದಲ್ಲಿರುವ ವ್ಯಕ್ತಿಗಳನ್ನು ಕರೆಯುವಿಕೆ ಅದೆ ಸಮುದಾಯದ ಸಂಬಂಧದಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಕೆಳಸ್ತರದಲ್ಲಿರುವರಿಗೆ ಸಂಬೋಧಿಸುವ ಕ್ರಮವೇ ಬೇರೆ ಬೇರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಪಾಂಚಾಳ ಸಮುದಾಯಗಳ ವ್ಯಕ್ತಿಗಳನ್ನು ವೃತ್ತಿ ಸಂದರ್ಭಗಳಲ್ಲಿ, ಪೌರೋಹಿತ್ಯ ಸಂದರ್ಭದಲ್ಲಿ ಇತ್ಯಾದಿ ಸಂದರ್ಭಗಳಲ್ಲಿ ಇತರೇ ಸಮುದಾಯದವರು ವೃತ್ತಿ ನಾಮಗಳ ಬಳಕೆಯನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಾರೆ ಎಂಬುದನ್ನು ಈ ಅಧ್ಯಯದಲ್ಲಿ ವಿಶ್ಲೇಷಿಸಲಾಗಿದೆ.

ಪಾಂಚಾಳ ಸಮುದಾಯದ ಕುಲದೇವರುಗಳು ಉದಾ:- **ಮೌನೇಶ, ಕಾಳಿಕದೇವಿ, ನಾಗಲಿಂಗಜ್ಜ, ಸಿರಸಂಗಿ ಕಾಳಮ್ಮ, ಬರ್ಮಪ್ಪ** ಹಾಗೂ ಮನೆಯ ದೇವರುಗಳು ಆಯಾ ಪ್ರದೇಶಕ್ಕನುಗುಣವಾಗಿ ಮನೆಯ ದೇವರುಗಳಿಗೆ ನಡೆದುಕೊಳ್ಳುತ್ತಿರುತ್ತಾರೆ. ಉದಾಹರಣೆಗೆ **ಮೈಲಾರ ಲಿಂಗೇಶ್ವರ, ಕೊಟ್ಟೂರೇಶ್ವರ, ವೀರುಪಾಕ್ಷೇಶ್ವರ** ಇತ್ಯಾದಿ. ಈ ದೇವರುಗಳ ಹೆಸರುಗಳನ್ನು ಹಾಗೂ ತಮ್ಮ ಹಿರಿಯರ ಹೆಸರುಗಳನ್ನು ಮಕ್ಕಳಿಗೆ ಹೆಸರನ್ನು ಕಟ್ಟಿರುತ್ತಾರೆ. ಉದಾ:- **ನಾಗೇಶಚಾರಿ, ಮೌನೇಶಚಾರಿ, ಮೌನ, ಕಾಳಮ್ಮ, ಸಿರಸಮ್ಮ** ಇತ್ಯಾದಿ ಇವು ವೃತ್ತಿದೇವರುಗಳ ಹೆಸರು ಹಾಗೂ ಮನೆ ದೇವರುಗಳ ಹೆಸರನ್ನು ಕೂಡ ಕಟ್ಟುತ್ತಾರೆ. **ಕೋಟ್ರೇಶಚಾರಿ, ವೀರುಪಾಕ್ಷಚಾರಿ, ಲಿಂಗಾಚಾರಿ** ಹೀಗೆ ಮನೆಯ ದೇವರು ಹಾಗೂ ವೃತ್ತಿಯ ದೇವರುಗಳ ಹೆಸರನ್ನು ಕಟ್ಟಿರುತ್ತಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಮನೆಯ ದೇವರುಗಳಾದ **ಮೈಲಾರ ಲಿಂಗೇಶ್ವರ, ಕೊಟ್ರೇಶ್ವರ** ಈ ಹೆಸರುಗಳಲ್ಲಿ **ಲಿಂಗೇಶ, ಕೊಟ್ರೇಶ** ಇವು ನಿರ್ದಿಷ್ಟ ಪದಗಳಾಗಿವೆ. ಈ ನಿರ್ದಿಷ್ಟ ಪದಗಳಿಗೆ ಪಾಂಚಾಳ ಸಮುದಾಯದ ವಾರ್ಗಿಕ ಪದವಾದ **ಆಚಾರಿ** ಎಂಬ ವಾರ್ಗಿಕ ಅಚ್ಚಿ ಹೆಸರನ್ನು ಕಟ್ಟುತ್ತಾರೆ. ಈ ಹೆಸರು ಬಳಕೆ ಯಾವ ರೀತಿಯಲ್ಲಿ ಬೇರೆ ಬೇರೆ ಸಮುದಾಯಗಳು ಅವುಗಳನ್ನು ಬಳಕೆ ಮಾಡುತ್ತಾರೆ ಎಂಬುದು ಇಲ್ಲಿನ ಮುಖ್ಯ ವಿಶ್ಲೇಷಣೆಯಾಗಿದೆ. ತಮ್ಮ ತಮ್ಮಲ್ಲಿ ಅಂದರೆ ತಮ್ಮ ಸಮುದಾಯಗಳಲ್ಲಿಯೇ ಆ ಹೆಸರು ದೇವರು ಹೆಸರು, ಹಿರಿಯರ ಹೆಸರುಗಳು ಎಂಬುದು ಪರಿಚಯವಿರುತ್ತದೆ. ಇಂತಹ ಸಂದರ್ಭಗಳಲ್ಲಿ ಆ ಹೆಸರುಗಳಿಗೆ ಕೆಳಮಟ್ಟದಲ್ಲಿ ಅವುಗಳನ್ನು ಉಚ್ಚಾರಣೆ ಮಾಡುವುದಿಲ್ಲ. ಉದಾ:- ಹಿರಿಯರ ಹೆಸರನ್ನು ತಮ್ಮ ಮಕ್ಕಳಿಗೆ ಇಟ್ಟಿದ್ದಾರೆ ಆ ಹೆಸರು ನಿಂಗಪ್ಪಚಾರಿ ಎಂದಿರಬಹುದು. ಆ ಸಂದರ್ಭದಲ್ಲಿ **ನಿಂಗ, ಲೇ ನಿಂಗ** ಎಂದು ಕರೆಯುವುದಿಲ್ಲ. ಆ ಹೆಸರನ್ನು ಗೌರವ ಪೂರ್ವಕವಾಗಿಯೇ ಕರೆಯುವುದನ್ನು ಕಾಣಬಹುದು. ಉದಾ:-

ಹಿರಿಯರ ಹೆಸರು

ನಿಂಗಪ್ಪಚಾರಿ	ನಿಂಗಪ್ಪ	ನಿಂಗಪ್ಪಣ್ಣ	ನಿಂಗಣ್ಣ
ಬ್ರಹ್ಮಾಚಾರಿ	ಬ್ರಹ್ಮಣ್ಣ	ಬ್ರಹ್ಮಪ್ಪ	ಬ್ರಹ್ಮಪ್ಪಣ್ಣ
ಶಿರಸಮ್ಮ	ಶಿರಸಕ್ಕ	ಶಿರಸಮ್ಮ	ಶಿರಸಮ್ಮಕ್ಕ
ಕಾಳಮ್ಮ	ಕಾಳಕ್ಕ	ಕಾಳಮ್ಮ	ಕಾಳಮ್ಮಕ್ಕ

ಈ ತರದಲ್ಲಿ ಗೌರವಪೂರ್ವಕವಾಗಿ ಹೆಸರನ್ನು ಬಳಕೆ ಮಾಡುವುದನ್ನು ಕಾಣಬಹುದು. ಹಾಗೆಯೇ ಇಲ್ಲಿ ಅವರ ಸಂಬಂಧಗಳಲ್ಲಿಯೇ ಆರ್ಥಿಕವಾಗಿ ಉನ್ನತ ಮಟ್ಟದಲ್ಲಿದ್ದರು ಅಥವಾ ಇಲ್ಲದೆ ಇದ್ದರೂ ಆ ಹೆಸರಿನ ಮೂಲಕ ಅಂದರೆ ದೇವರ, ಹಿರಿಯರ, ಹೆಸರುಗಳು ಆ ವ್ಯಕ್ತಿಗೆ ಇಟ್ಟಿದ್ದಾರೆ. ಆ ವ್ಯಕ್ತಿಗೆ ಗೌರವ ಕೊಡದಿದ್ದರೂ ಆ ಹೆಸರಿಗೆ ಗೌರವ ಕೊಡುವುದನ್ನು ಕಾಣಬಹುದು.

ಪಾಂಚಾಳ ಸಮುದಾಯದವರು ಯಥೇಚ್ಛವಾಗಿ ರೈತಾಪಿ ಕುಟುಂಬದವರೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡಿರುತ್ತಾರೆ. ಅದರಲ್ಲಿಯೂ ಬಡಿಗ, ಕಮ್ಮಾರ ಹೆಚ್ಚಾಗಿ ರೈತರ ನಿಕಟವರ್ತಿಗಳು ಇವರು ಅತಿ ಹೆಚ್ಚಾಗಿ ಕಮ್ಮಾರ ಬಡಿಗನೊಂದಿಗೆ ಸಲಿಗೆಯೊಂದಿಗಿರುತ್ತಾರೆ. ಈ ರೈತಾಪಿ ಸಮುದಾಯಗಳು ಇವರ ಹೆಸರುಗಳನ್ನು ಬಳಕೆ ಮಾಡುವ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಾಗಿರುತ್ತವೆ. ಅವುಗಳು ಈ ಕೆಳಗಿನಂತಿವೆ.

ಒಬ್ಬ ರೈತಾಪಿ ಸಮುದಾಯದ ಯಜಮಾನ ತನ್ನ ಕೃಷಿ ಚಟುವಟಿಕೆಗೆ ಸಂಬಂಧಿಸಿದಂತೆ ಸಾಮಾಗ್ರಿ ಮಾಡಿಸಿಕೊಳ್ಳಲಿಕ್ಕೆ ಹೋಗುವ ಸಂದರ್ಭದಲ್ಲಿ ತಮ್ಮ ಮನಿಯವರಿಗೆ ಅಥವಾ ತನ್ನನ್ನು ಕೇಳುವರಿಗೆ **'ಕೊಲ್ಮಿಕ ಹೋಗಿದ್ದೆ', 'ಕೊಲ್ಮಿ ಮನಿಗೆ ಹೋಗಿದ್ದೆ', 'ಕಮ್ಮಾರುನುತಾಕ ಹೋಗಿದ್ದೆ', 'ಬಡಿಗೆಟ್ಯಾಕ ಹೋಗಿದ್ದೆ', 'ಆಚಾರಿತಾಕ ಹೋಗಿದ್ದೆ'** ಎಂದು ಬಳಕೆಯಾಗುವುದನ್ನು ನೋಡಬಹುದು. ಇಲ್ಲಿ ಪಾಂಚಾಳ ಪದ ಪ್ರಯೋಗ ಬಳಕೆಯಾಗುವುದಿಲ್ಲ. ಸಾಮಾನ್ಯವಾಗಿ ವೃತ್ತಿನಿರತ ಕಮ್ಮಾರರು ಮತ್ತು ಬಡಿಗರಿಗೆ ನಿರ್ದಿಷ್ಟ ಹೆಸರುಗಳು ಇದ್ದರೂ ಸಹ ಅದು ಕುಟುಂಬ ವಲಯಕ್ಕೆ ಮತ್ತು ತಮ್ಮ ಸಮುದಾಯಕ್ಕೆ ಹೆಚ್ಚು ಸೀಮಿತವಾಗಿರುತ್ತದೆ. ಜನಸಾಮಾನ್ಯರು ಅವರೊಂದಿಗೆ ವ್ಯವಹಾರಿಸುವವರು. ವ್ಯಕ್ತಿಗಳ ಹೆಸರುಗಳಿಗಿಂತ ಮುಖ್ಯವಾಗಿ ಅವರ ವೃತ್ತಿ ವರ್ಗಿಕಗಳನ್ನೇ ಹೆಸರಿಗೆ ಪರ್ಯಾಯವಾಗಿ ಉಲ್ಲೇಖ ಸಂದರ್ಭದಲ್ಲಿ ಮತ್ತು ಸಂಬೋಧನಾ ಸಂದರ್ಭದಲ್ಲಿ ಬಳಸುತ್ತಾರೆ.

ಆದರೆ ರೈತಾಪಿ ಸಮುದಾಯದವರು ತಮಗೆ ಬೇಕಾದ ಸಾಮಾಗ್ರಿಯನ್ನು ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಅವರ ಜೊತೆಗೆ ಉಪಸ್ಥಿತಿಯಲ್ಲಿರುವಾಗ **ಆಚಾರೇಪ್ಪ, ಬಡಿಗೇಪ್ಪಾ, ಆರ್ಚಾರೇ** ಎಂದು ಬಳಕೆ ಮಾಡುವುದನ್ನು ಕಾಣುತ್ತೇವೆ. ಆದರೆ ಅದೇ ವೃತ್ತಿ ಸಮುದಾಯ ಕುಟುಂಬದವರು ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದರೆ ಅವರನ್ನು ಸಂಬೋಧಿಸುವ ಸ್ವರೂಪವೇ ಬೇರೆ ತೆರನಾಗಿರುತ್ತದೆ. ಅಂದರೆ **'ಆಚಾರಪ್ಪ', 'ಬಡಿಗೇಪ್ಪಾ'** ಅನ್ನುವ ಬಳಕೆಯ ರೂಪಗಳು ಬದಲಾಗಿ **'ಲೇ ಆಚಾರಿ'** ಎಂದು ಬಳಕೆಯಾಗುವುದನ್ನು ಕಾಣುತ್ತೇವೆ. ಉದಾ:- **ಆಚಾರಿ ನಮ್ಮ ಕೂಡಾ ಅಣೆದ್ಯಾ, ಆಚಾರಿ ಬಂಡಿಗಾಲಿಗೆ ಒಂಕಿ ಅಕಿದ್ಯಾ** ಎಂದು

ಬಳಕೆಯಾಗುವುದನ್ನು ಕಾಣುತ್ತವೆ. ಇಲ್ಲಿ ಆರ್ಥಿಕವಾಗಿ ವೃತ್ತಿ ಸಮುದಾಯದವರು ಮಧ್ಯಮ ಅಥವಾ ಮೇಲಸ್ತರದಲ್ಲಿದ್ದರೆ ಗೌರವ ಪೂರ್ವಕವಾಗಿ ಕರೆಯುವುದು ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದರೆ ಅವರನ್ನು ವಾರ್ಗಿಕ ಪದದ ಜೊತೆ ಏಕವಚನದಲ್ಲಿ ಸಂಬೋಧಿಸುತ್ತಾರೆ. ಹಾಗೂ ಈ ವೃತ್ತಿ ಸಮುದಾಯದಲ್ಲೇ ಬಡಗಿತನ ಕೆಲಸದಲ್ಲಿ ಕೃಷಿ ಉಪಕರಣ ಕೆಲಸಗಳನ್ನು ಬಿಟ್ಟು ಬರಿ ಕುಸಿರಿ ಕೆಲಸಗಳಲ್ಲಿ ನಿರತರಾಗಿದ್ದರೆ ಅವರನ್ನು ಸಮಾಜ ಸಂಬೋಧಿಸುವ ಕ್ರಮವೇ ಬೇರೆಯಾಗಿದೆ. ಉದಾ:- **ಬಡಿಗೇರ ಸುಭಶ್ ಡಿಜೆನ್ ಕೆಲಸ ಬೆಸ್ ಮಾಡ್ತಾ**ನ ಕೆಲಸ ಅಲ್ಲೇ ಹಾಕಿ. ಅಂದರೆ ನಮಗೆ ಇಲ್ಲಿ ಗೋಚರಿಸುವ ಮುಖ್ಯ ಅಂಶಗಳೆಂದರೆ ಕೃಷಿ ಚಟುವಟಿಕೆಗಳಿಗೆ ಸಾಮಗ್ರಿ ತಯಾರಿಸುವ ಕಮ್ಮಾರ, ಬಡಿಗ, ಸಾಮಾಜಿಕವಾಗಿ ಮಧ್ಯಮ ಹಾಗೂ ಮೇಲ್‌ಸ್ತರದಲ್ಲಿದ್ದರೆ ಅವರಿಗೆ ಗೌರವಪೂರ್ವವಾಗಿ ಹಾಗೂ ಕೆಳಸ್ತರದಲ್ಲಿದ್ದರೆ ವಾರ್ಗಿಕ ಪದಕ್ಕೆ ಏಕವಚನ ಹಚ್ಚುವುದು ಹಾಗೂ ಬಡಗಿತನದ ಕೆಲಸದಲ್ಲಿಯೇ ಕುಶರಿ ಕೆಲಸ ನಿರ್ವಹಿಸುವರಿಗೆ ವೃತ್ತಿಯ ಹೆಸರಿನ ಜೊತೆಗೆ ಗೌರವ ಕೊಡುವುದನ್ನು ಕಾಣಬಹುದು.

ಉದಾಹರಣೆಗೆ:

ಕೆಳಸ್ತರ	-	**ಮೇಲ್ಸ್ತರ**
ಲೇ ಆಚಾರಿ	-	**ಆಚಾರಪ್ಪ**
ಬಡಗಿ	-	**ಬಡಿಗೇರ ಶುಭಶ**
ಲೇ ಕಮ್ಮಾರ	-	**ಕಮ್ಮಾರ ಕಾಳಪ್ಪ**

ಪಾಂಚಾಳರು ಗ್ರಾಮದೇವತೆಗಳ ಪುರೋಹಿತದ ಜೊತೆಗೆ ಕಮ್ಮಾರಿಕೆ, ಬಡಗಿತನ, ಶಿಲ್ಪಿ, ಅಕ್ಕಸಾಲಿಗ ಹಾಗೂ ಕಂಚುಗಾರಿಕೆ ವೃತ್ತಿಗಳನ್ನು ಕೂಡ ಮಾಡುತ್ತಾರೆ. ಕಮ್ಮಾರಿಕೆ, ಬಡಗಿತನ, ಅಕ್ಕಸಾಲಿಕೆ, ಶಿಲ್ಪಿ ವೃತ್ತಿಗಳನ್ನು ನಿರ್ವಹಿಸುವರು ಆ ಗ್ರಾಮಗಳ ಗ್ರಾಮದೇವತೆಗಳ ಪುರೋಹಿತವನ್ನು ಕೂಡ ನಿರ್ವಹಿಸುತ್ತಾರೆ. ಇಂತಹ ವೃತ್ತಿ ಕುಟುಂಬಗಳನ್ನು ಸಮಾಜದವರು ಕಾಣುವ ದೃಷ್ಟಿಯೇ ಬೇರೆಯಾಗಿರುತ್ತದೆ. ಇಲ್ಲಿ ಆರ್ಥಿಕವಾಗಿ ಕೆಳಸ್ತರ, ಮೇಲ್‌ಸ್ತರ, ಎನ್ನುವ ಭಾವನೆ ಬರುವುದಿಲ್ಲ ಆ ದೇವತೆಯ ಪುರೋಹಿತವನ್ನು ನಡೆಸುತ್ತಿದ್ದರೆ **'ಪೂಜಾರಪ್ಪ'**, **'ಪೂಜಾರಪ್ಪನ ಮನೆಯವರು'**, **'ಪೂಜಾರಪ್ಪನ ಮಗ'** ಎಂದೆಲ್ಲಾ ಬಳಕೆ ಮಾಡುವುದನ್ನು ಕಾಣುತ್ತೇವೆ. ಇಲ್ಲಿ ಎಲ್ಲಾ ಸಮುದಾಯಗಳು ಗೌರವ ಪೂರ್ವಕವಾಗಿಯೇ ಕಾಣುವುದನ್ನು ನೋಡಬಹುದು.

ಈ ಸಮುದಾಯದಲ್ಲಿ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಪೌರೋಹಿತ್ಯ ನಡೆಸುವರು ಆ ಸಮುದಾಯದ ವ್ಯಕ್ತಿಯೇ ಆಗಿರುತ್ತಾರೆ. ಹಾಗೂ ಪೌರೋಹಿತ್ಯದ ಜೊತೆಗೆಯೇ ವೃತ್ತಿ ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ. ಇಂತಹವರಿಗೆ ಸಮುದಾಯದಲ್ಲಿ ಹಾಗೂ ಸಮುದಾಯೇತರವರು ಇವರನ್ನು ಗುರುತಿಸುವ ಕ್ರಮ ಇಂತಿವೆ. ಸಮುದಾಯದಲ್ಲಿ ಧಾರ್ಮಿಕ ಆಚರಣೆಗಳನ್ನು ಪೌರೋಹಿತ್ಯ ನಡೆಸುವ ಸಂದರ್ಭದಲ್ಲಿ ತಮ್ಮ ಸಮುದಾಯದವರೆಲ್ಲ **ಆಚಾರ್ಯಸ್ವಾಮಿಗಳು** ಎಂದೇ ನಾಮವನ್ನು ಬಳಸುತ್ತಾರೆ. ಆದರೆ ಪೌರೋಹಿತ್ಯ ಇಲ್ಲದ ಸಂದರ್ಭದಲ್ಲಿಯೂ ಅವರನ್ನು **ಆಚಾರ್ಯಸ್ವಾಮಿಗಳು** ಎಂದು

ಗುರುತಿಸುತ್ತಾರೆ. ಆದರೆ ವೃತ್ತಿಯೇತರ ಸಮುದಾಯದವರು ಅವರನ್ನು **ಆಚಾರ್ಯಸ್ವಾಮಿಗಳು** ಎಂದು ಕರೆಯುವುದಿಲ್ಲ ಇವರು ಯಾವ ವೃತ್ತಿಯನ್ನು ನಿರ್ವಹಿಸುತ್ತಿರುತ್ತಾರೆಯೋ ಅದಕ್ಕೆ ಸಂಬಂಧಿಸಿದಂತೆ ಅವರ ನಾಮವನ್ನು ಬಳಸುವುದನ್ನು ಕಾಣಬಹುದು. ಈ ಪುರೋಹಿತ ಆರ್ಥಿಕವಾಗಿ ಮೇಲ್‌ಸ್ತರದಲ್ಲಿ ಇರಲಿ ಇಲ್ಲದೆ ಇರಲಿ ಹಾಗೂ ಸಮುದಾಯದವರು ಎಷ್ಟೇ ಉನ್ನತ ಮಟ್ಟದಲ್ಲಿದ್ದರು **ಆಚಾರ್ಯಸ್ವಾಮಿಗಳು** ಎಂದು ಅವರ ನಾಮವನ್ನು ಬಳಸುವುದು ಕಾಣುತ್ತೇವೆ. ಇಲ್ಲಿ ಅವರ ಹೆಸರು ಹಾಗೂ ವೃತ್ತಿ ಗೌಣವಾಗಿ ಅವರ ವಾಸಿಸುವ ಊರಿನ ಜೊತೆಗೆ ಸಮುದಾಯವು ಸೂಚಿಸಿರುವ **ಆಚಾರ್ಯಸ್ವಾಮಿ** ಪದ ಪ್ರಯೋಗವಾಗುವುದನ್ನು ಕಾಣಬಹುದು. ಉದಾ:- **ಇಟಗಿ ಆಚಾರ್ಯಸ್ವಾಮಿ, ಕೊಟ್ಟೂರು ಆಚಾರ್ಯಸ್ವಾಮಿ.**

ಅಕ್ಕಸಾಲಿ ವೃತ್ತಿಯವರನ್ನು ಸಮುದಾಯೇತರರು ಅವರ ಬಗ್ಗೆ ತಮ್ಮ ತಮ್ಮಲ್ಲಿಯೇ ಮಾತನಾಡುವ ಸಂದರ್ಭಗಳಲ್ಲಿ ಈ ತೆರನಾಗಿರುತ್ತದೆ. ಉದಾ:- **'ಅಕ್ಕಸಾಲೇರ ಮನಿ'**, **'ಅಕ್ಕಸಾಲಿಚಾಯಪ್ಪ'** ಎಂಬ ಬಳಕೆಯ ರೂಪಗಳನ್ನು ಕಾಣಬಹುದು. ಇಲ್ಲಿ ವೃತ್ತಿ ಹಾಗೂ ಅವರ ಹೆಸರುಗಳು ಉಲ್ಲೇಖವಾಗುತ್ತವೆ. ಈ ಸಂದರ್ಭದಲ್ಲಿ ವೃತ್ತಿ ನಿರ್ವಹಿಸುವ ವ್ಯಕ್ತಿಗಳು ಅನುಪಸ್ಥಿತಿಯಲ್ಲಿರುತ್ತಾರೆ ಎಂಬ ಅಂಶ ಮುಖ್ಯವಾಗುತ್ತದೆ.

ಅಕ್ಕಸಾಲಿಯವರನ್ನು ಸಾಮಾನ್ಯವಾಗಿ ಜನಸಾಮಾನ್ಯರು ಗೈರು ಹಾಜರಿಯಲ್ಲಿ ಉಲ್ಲೇಖಿಸುವಾಗ ಹಾಗೂ ವೃತ್ತಿಯೇತರ ಸಮುದಾಯಗಳು **ಅಕ್ಕಸಾಲೇರ** ಹತ್ತಿರ ತಮ್ಮ ಕೆಲಸವನ್ನು ನಿರ್ವಹಿಸಿಕೊಳ್ಳುವ ಸಂದರ್ಭದಲ್ಲಿ ವೃತ್ತಿ ಸಮುದಾಯದ ವ್ಯಕ್ತಿ ಹಾಗೂ ವೃತ್ತಿಯೇತರ ವ್ಯಕ್ತಿ ಮುಖಾಮುಖಿಯಾದಾಗ ಅವರನ್ನು ಸಂಬೋಧಿಸುವ ರೀತಿ **'ಆಚಾರಿ'**, **'ಆಚಾರ್ಯ'**, **'ಆಚಾರ್ಯರು'** ಎಂದು ಬಳಕೆಯಾಗುತ್ತದೆ. ಆದರೆ ಇಲ್ಲಿ ಈ ಅಕ್ಕಸಾಲಿ ವೃತ್ತಿಯು ಬಡಗಿತನ ಹಾಗೂ ಕಮ್ಮಾರಿಕೆ ವೃತ್ತಿಗಿಂತ ಮೇಲ್ ದರ್ಜೆಯಲ್ಲಿರುವುದರಿಂದ ಹಾಗೂ ದೇವರುಗಳ ಆಭರಣಗಳನ್ನು ಇವರೇ ಮಾಡುವುದರಿಂದ ಈ ಹಿನ್ನೆಲೆಯ ಮೂಲಕ ಅಕ್ಕಸಾಲಿಗರಿಗೆ **ಆಚಾರಿ** ಎಂದು ಗೌರವ ಪೂರ್ವಕವಾಗಿಯೇ ಕರೆಯುವುದನ್ನು ಕಾಣಬಹುದು.

ಹಾಗೆಯೇ ಶಿಲ್ಪ, ಕಂಚುಗಾರಿಕೆ ವೃತ್ತಿ ನಿರ್ವಹಿಸುವರಿಗೆ ಆಚಾರಿ ಎಂದು ಬಳಕೆಯಾಗುತ್ತದೆ. ಆದರೆ. ಪಾಂಚಾಳ ಸಮುದಾಯದಲ್ಲಿ ಅವರ ಪಾರಂಪರಿಕ ವೃತ್ತಿ ಕಮ್ಮಾರಿಕೆ, ಬಡಿಗಿತನ ಆಗಿದ್ದರೂ ಅವರು ನಿರ್ವಹಿಸುವ ವೃತ್ತಿ ಶಿಲ್ಪಗಾರಿಕೆಯಾಗಿರಬಹುದು ಅಥವಾ ಕಂಚುಗಾರಿಕೆಯಾಗಿರಬಹುದು ಅಂತಹ ಸಂದರ್ಭಗಳಲ್ಲಿ ತಾವು ಸಮಾಜದಲ್ಲಿ ಗುರುತಿಸಿಕೊಳ್ಳುವುದಕ್ಕೆ ತಮ್ಮ ಹೆಸರುಗಳ ಮುಂದೆ **ಶಿಲ್ಪಿ, ಕಂಚುಗಾರ** ವೃತ್ತಿಯ ಪದವನ್ನು ಸೇರಿಸಿಕೊಳ್ಳುತ್ತಾರೆ. ಉದಾ:- **ಶಿಲ್ಪಿ ಹಂಸನಂದಾಚಾರ್ಯ, ಶಿಲ್ಪಿ ಈಶ್ವರಾಚಾರಿ, ಕಂಚುಗಾರ ಶರಣಪ್ಪ, ಕಂಚುಗಾರ ಮೌನೇಶಚಾರಿ.** ಈ ಮೂರು ವೃತ್ತಿಗಳ ಹೆಸರುಗಳನ್ನು ಉಲ್ಲೇಖಿಸುವಾಗ ಜನಸಾಮಾನ್ಯರು ಬಳಸಿದರು ಸಂಬೋಧನೆಯ ಸಂದರ್ಭದಲ್ಲಿ **ಆಚಾರಿ** ಎನ್ನುವ ವಾರ್ಗಿಕವನ್ನು ಮಾತ್ರ ಬಳಸುತ್ತಾರೆ.

ಇವು ಅವರು ನಿರ್ವಹಿಸುವ ವೃತ್ತಿಯನ್ನು ಗುರುತಿಸುತ್ತವೆ. ಆದರೆ ಕಮ್ಮಾರ, ಬಡಿಗನನ್ನು ಆರ್ಥಿಕ ಹಿನ್ನೆಲೆಯಲ್ಲಿ ಪಾಚಾಳರೇತರ ಸಮುದಾಯಗಳು ಗುರುತಿಸುವಂತೆ ಶಿಲ್ಪಿ, ಕಂಚುಗಾರ, ಅಕ್ಕಸಾಲಿಯ ವೃತ್ತಿಯವರನ್ನು ಗುರುತಿಸುವುದಿಲ್ಲ. ಇದರ ಉದ್ದೇಶ ಇಷ್ಟೇ ಇವರು ಸಮಾಜದಲ್ಲಿ ಈ ಮೇಲಿನ ಮೂರು ವೃತ್ತಿಗಳು ಧಾರ್ಮಿಕ ವಿಧಿಗನುಗುಣವಾಗಿ ಕೈಗೊಳ್ಳುವ ವೃತ್ತಿಯಾಗಿರುವುದರಿಂದ ಇವುಗಳನ್ನು ನಿರ್ವಹಿಸುವ ವೃತ್ತಿಯವರಿಗೆ ಸಾಮಾಜಿಕ ವ್ಯವಹಾರ ಮತ್ತು ಜನಸಾಮಾನ್ಯರ ನಡುವೆ ವ್ಯವಹಾರವು ಅತ್ಯಂತ ಕಡಿಮೆಯಾಗಿರುತ್ತದೆ. ಕೆಳಸ್ತರದಲ್ಲಿ ಅವರ ಹೆಸರುಗಳನ್ನು ಬಳಕೆ ಮಾಡುವುದಿಲ್ಲ.

೪.೨.೩. ವ್ಯಕ್ತಿನಾಮಗಳ ಬಳಕೆ ಪರಂಪರೆ ಮತ್ತು ಆಧುನಿಕ ಸಂದರ್ಭ.

ವ್ಯಕ್ತಿಯನ್ನು ಗುರುತಿಸಲು ಜಗತ್ತಿನ ಎಲ್ಲ ಭಾಷೆಗಳಲ್ಲಿ ವ್ಯಕ್ತಿನಾಮಗಳಿವೆ. ಇವುಗಳ ಮೂಲಕ ಒಂದು ಜನಾಂಗದ ಅಧ್ಯಯನಕ್ಕೆ ಆಕರ ಸಾಮಾಗ್ರಿಯಾಗಿ ಭಾಷಿಕ ಹಾಗೂ ಸಾಮಾಜಿಕ ಸ್ತರಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಈ ವ್ಯಕ್ತಿ ನಾಮಗಳಿಂದ ಲಭ್ಯವಾಗುತ್ತದೆ. ವ್ಯಕ್ತಿನಾಮಗಳು ಸಾಮಾಜಿಕ ವ್ಯವಹಾರದ ಫಲಗಳು. ವ್ಯಕ್ತಿನಾಮಗಳು ಇಲ್ಲದ ವ್ಯವಹಾರ ಒಂದಿತ್ತು. ಆದರೆ ಕಾಲಕ್ರಮೇಣ ವ್ಯಕ್ತಿಗಳನ್ನು ಗುರುತಿಸುವಲ್ಲಿ ನಾಮಗಳು ಬಂದವು. ಈ ದೃಷ್ಟಿಯಿಂದಲೇ ನಾಮಕರಣಗಳು ಪ್ರತಿಯೊಂದು ಸಮುದಾಯದಲ್ಲಿ ವಿಶೇಷ ಆಚರಣೆಗಳಾಗಿ ಪ್ರಚಲಿತದಲ್ಲಿವೆ.

ಸಮುದಾಯವೊಂದರಲ್ಲಿ ಒಪ್ಪಿತನಾಮವಿಲ್ಲದಿದ್ದರೂ ಕೊನೆ ಪಕ್ಷ ಪರ್ಯಾಯ ನಾಮದೊಂದಿಗೆ ಸಂಬೋಧನೆ ನಡೆಯುತ್ತಿರುತ್ತದೆ. ಅಂದರೆ ವ್ಯಕ್ತಿಗಳು ಸಮಾಜದ ಸದಸ್ಯರು, ಅವರಿಲ್ಲದೆ ಸಮಾಜವಿಲ್ಲ. ಒಬ್ಬ ವ್ಯಕ್ತಿ ಇನ್ನೊಬ್ಬನಿಂದ ಭಿನ್ನ ಎಂಬುದನ್ನು ಅವನ ಹೆಸರಿನಿಂದ ನಾವು ತಿಳಿಯಬಹುದು. ಅಂದರೆ ತನ್ನ ಹೆಸರಿನಿಂದ ಸಮಾಜಕ್ಕೆ ಪರಿಚಯವಾಗುತ್ತಾನೆ. ವ್ಯಕ್ತಿಗೆ ಹೆಸರು ಇಲ್ಲವಾದರೆ ಅವನು ತಾನಿರುವ ಸಮಾಜದಲ್ಲೇ ಅಜ್ಞಾತನಾಗಿ ನಿಲ್ಲುತ್ತಾನೆ. ಹೀಗೆ ವ್ಯಕ್ತಿಗಳ ಪ್ರತ್ಯೇಕತೆಗೂ ಹಾಗೂ ಪರಸ್ಪರ ವ್ಯಕ್ತಿಗಳ ಪರಿಚಯಕ್ಕೂ ವ್ಯಕ್ತಿನಾಮವೇ ಆದಿ, ಆಧಾರವಾಗುತ್ತದೆ. ಒಂದೇ ಹೆಸರು ಅನೇಕ ವ್ಯಕ್ತಿಗಳಿಗೆ ಕೆಲವು ಸಲ ಪುನರಾವರ್ತನೆಗೊಳ್ಳುತ್ತವೆ. ಆದ್ದರಿಂದ ಹೆಸರುಗಳ ಮುಂದೆ, ಹಿಂದೆ ಅವರ ಮನೆತನದ, ಊರು, ವೃತ್ತಿ ಕುಟುಂಬದ ಹೆಸರುಗಳನ್ನು ಜೋಡಿಸಲಾಗುತ್ತದೆ. ಒಂದೊಂದು ವ್ಯಕ್ತಿನಾಮಕ್ಕೂ ತನ್ನದೇ ಆದ ಸಾಂಸ್ಕೃತಿಕ ಪರಿಸರವಿರುತ್ತದೆ. ಸಂಸ್ಕೃತಿಯಲ್ಲಿ ಸಮಾವೇಶವಾಗುವ ಭಿನ್ನ ಭಿನ್ನ ಸಂಗತಿಗಳೆಲ್ಲವನ್ನು ನಾವು ಸಾಂಸ್ಕೃತಿಕ ಆಕರವೆಂದು, ಆ ಆಕರಗಳಿಂದ ನಿಷ್ಪನ್ನಗೊಳಿಸಲಾದ ಮತ್ತು ಸಂಬೋಧಿಸಲಾಗುವ ಹೆಸರನ್ನು ವ್ಯಕ್ತಿನಾಮವೆಂದು ಕರೆಯಬಹುದು.

"ವ್ಯಕ್ತಿಗೆ ತಕ್ಕಂತೆ ಹೆಸರು ಇಡಬೇಕು. ಇಲ್ಲವೆ ಹೆಸರಿಗೆ ತಕ್ಕಂತೆ ವ್ಯಕ್ತಿ ಇರಬೇಕು ಎಂಬ ನಿಯಮಗಳೇನು ಇಲ್ಲ. ಆದರೂ ಇವೆರಡರ ನಡುವಿನ ಸಂಬಂಧ ಕೇವಲ ಸಂಬೋಧನೆಗಾಗಿ ಇದೆಯೇ ಹೊರತು, ಅದರಿಂದಾಚೆಗೆ ಏನು ಇರುವುದಿಲ್ಲ. ವ್ಯಕ್ತಿ ನಾಮಗಳು ಯಾವಾಗಲೂ ಭಾಷೆಯೊಂದರಲ್ಲಿ ಬೆಳವಣಿಗೆಯ ಹಾದಿಯಲ್ಲಿರುತ್ತವೆ. ಹಾಗಾಗಿ ವ್ಯಕ್ತಿನಾಮಗಳು ಹೆಸರಿಸುತ್ತವೋ ಅಥವಾ ವರ್ಣಿಸುತ್ತವೋ ಎಂಬುದು ಭಾಷೆಯಲ್ಲಿ ಚರ್ಚೆಯ ವಿಚಾರ. ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತಿನಾಮಗಳು ಹೆಸರಿಸುತ್ತವೆ.

ಕೆಲವು ಸಂದರ್ಭದಲ್ಲಿ ವರ್ಣಿಸುತ್ತವೆ." (ಡಾ.ಪಿ.ಮಹಾದೇವಯ್ಯ, ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ, ಪುಟು-೭೨) ಉದಾಹರಣೆಗೆ ಭೀಮ ಎಂಬ ಹೆಸರಿರುವ ವ್ಯಕ್ತಿ ಭೀಮನ ಹಾಗೆ ಬಲಿಷ್ಟವಾಗಿರಬೇಕು ಎಂದೇನಿಲ್ಲ ಹಾಗೂ ಕರ್ಣ ಎಂಬ ಹೆಸರಿನ ವ್ಯಕ್ತಿ ದಾನಿಯಾಗಿರಬೇಕು ಎಂಬ ಅಭಿಪ್ರಾಯವು ಇರುವುದಿಲ್ಲ. ಆದರೂ ಕೂಡ ವ್ಯಕ್ತಿಗೆ ಇರುವ ಹೆಸರಿನಿಂದ ಅವರ ಜೀವನದುದ್ದಕ್ಕೂ ಅವರ ಸ್ಥಾನಮಾನವನ್ನು ರಕ್ಷಿಸುವಲ್ಲಿ ಕಾರಣಗಳಾಗಿವೆ. ಅಂದರೆ ವ್ಯಕ್ತಿಯನ್ನು ಯಾವ ಮಟ್ಟದಲ್ಲಿದ್ದಾನೆ ಎಂಬುದನ್ನು ಅವರ ಹೆಸರಿನಿಂದಲೇ ಗ್ರಹಿಸಬಹುದು. ಹೀಗೆ ವ್ಯಕ್ತಿಯ ವ್ಯಕ್ತಿತ್ವವನ್ನು ಸೂಚಿಸಲು ನಾಮಪದವು ಸಹಾಯಕವಾದಂತೆ ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ವ್ಯಕ್ತಿನಾಮಗಳು ಸಹಾಯಕವಾಗುತ್ತವೆ. ಪ್ರಾಚೀನ ಮತ್ತು ಮಧ್ಯಕಾಲೀನ ಚಾರಿತ್ರಿಕ ವ್ಯಕ್ತಿನಾಮಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿದೆ. ಆದರಲ್ಲಿಯೂ ಕೂಡ ಪ್ರಾಚೀನಕ್ಕಿಂತ ಮಧ್ಯಕಾಲೀನ ವ್ಯಕ್ತಿನಾಮಗಳು ಜನ ಸಾಮಾನ್ಯರ ಮೇಲೆ ಹೆಚ್ಚು ಪ್ರಭಾವ ಬೀರಿವೆ. ಈ ರೀತಿಯಾಗಿಯೂ ಪಾಂಚಾಳ ಸಮುದಾಯದಲ್ಲಿರುವ ವ್ಯಕ್ತಿನಾಮಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಪಾಂಚಾಳ ಸಮುದಾಯದ ಅನೇಕ ಹೆಸರುಗಳು ಶಾಸನಗಳಲ್ಲಿ ಉಲ್ಲೇಖಗಳಾಗಿವೆ ಅವು ಇಂತಿವೆ.

ಪಟ್ಟದಕಲ್ಲಿನ ಕ್ರಿ.ಶ.ಸು.೭ನೇ ಶತಮಾನದ ಮಂಗಳೇಶನ ಕನ್ನಡ ಶಾಸನದ ಬಳಿ ಬಂಡೆಯ ಮೇಲೆ ಅಜು ಆಚಾರ ಸಿದ್ಧಿಯೆಂಬುವನನ್ನು ಹೆಸರಿಸುತ್ತದೆ.[೧೦]

ಪಟ್ಟದಕಲ್ಲಿನ ಕ್ರಿ.ಶ.ಸು ೮ನೇ ಶತಮಾನದ ಪೂರ್ವಾರ್ಧದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಮುಂದೆ ನದಿಗೆ ಹೋಗುವ ದಾರಿಯಲ್ಲಿ ಅರ್ಧ ಮಂಟಪದ ಎಡಗಡೆಯ ಕಂಬದ ಮೇಲೆ ಹೀಗೆ ಉಲ್ಲೇಖವಾಗಿದೆ. ವಿಕ್ರಮಾದಿತ್ಯನ ರಾಜನ ಮಹಾರಾಣಿಯು ಕಟ್ಟಿಸಿದ ದೇವಾಲಯವನ್ನು ರಚನೆ ಮಾಡಿದ ಗುಣ್ಣಾನ್ ಅನಿವಾರಿತಾಚಾರಿ ಎಂಬ ಶಿಲ್ಪಿಗೆ ರಾಜನು ಮೂರುಬಾರಿ ಪೆರ್ಜ್ಜೆಪನ್ನೂ, ಪಟ್ಟವನ್ನೂ ಕಟ್ಟಿ ತ್ರಿಭವನಾಚಾರಿಯೆಂದು ಹೆಸರಿಟ್ಟ.[೧೧]

ಕ್ರಿ.ಶ.ಸು. ೮ನೇ ಶತಮಾನದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಮುಂದೆ ನದಿಗೆ ಹೋಗುವ ದಾರಿಯಲ್ಲಿ ಅರ್ಧ ಮಂಟಪದ ದೇವಾಲಯದ ಮುಂದಿನ ನಂದಿ ಮಂಟಪದ ಹೊರಗಡೆಯ ಮೇಲೆ ದಕ್ಷಿಣ ಭಾಗದ ಸೂತ್ರಧಾರಿ ಸ್ಥಪತಿಯ ಸರ್ವಸಿದ್ಧಿ ಆಚಾರ್ಯ್ಯ ಎಂಬುವನು ಎಂದಿವೆ.[೧೨]

ಕ್ರಿ.ಶ.ಸು ೮ನೇ ಶತಮಾನದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ದಕ್ಷಿಣ ದಿಕ್ಕಿನ ಅರ್ಧ ಮಂಟಪದ ಬಲಗಡೆಯ ದ್ವಾರಪಾಲಕನ ಮೂರ್ತಿಯ ಮೇಲೆ ದುಗ್ಗಿ ಆಚಾರಿಯ ಮಗನಾದ ಬಲದೇವನು ಈ ವಿಗ್ರಹವನ್ನು ಮಾಡಿದಂತೆ ತಿಳಿಸುತ್ತದೆ.[೧೩]

ಕ್ರಿ.ಶ. ೯ನೇ ಶತಮಾನದ ಪಟ್ಟದ ಕಲ್ಲಿನ ಪಾಪನಾಥನ ಗುಡಿಯ ಆಗ್ನೇಯ ಮೂಲೆಯ ಗೊಡೆಯ ಮೇಲೆ ಶಿಲೆ ಮುದ್ದನ ಮೊಮ್ಮಗನಾದ ಸರ್ವಸಿದ್ಧಿ ಆಚಾರ್ಯನ ಶಿಷ್ಯನಾದ ರೇವಡಿ ಓವಜ್ಜ ಓಜನು ದೇವಾಲಯದ ದಕ್ಷಿಣ ದಿಕ್ಕಿನ ಭಾಗವನ್ನು ನಿರ್ಮಿಸಿದನು.[೧೪]

ಕ್ರಿ.ಶ.೯ನೇ ಶತಮಾನದ ಪಟ್ಟದಕಲ್ಲಿನ ಪಾಪನಾಥನ ಗುಡಿಯ ದಕ್ಷಿಣದ ಗೋಡೆಯ ಮೇಲೆ ನಟರಾಜ ಶಿಲ್ಪದ ಮೇಲೆ ಹೀಗೆ ಉಲ್ಲೇಖವಾಗುತ್ತದೆ ದೇವಾಚಾರ್ಯ.[೧೫]

ಈ ಮೇಲಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ವ್ಯಕ್ತಿನಾಮಗಳನ್ನು ಹೀಗೆ ಹೇಳಬಹುದು. ಪಾಂಚಾಳ ಸಮುದಾಯದ ವ್ಯಕ್ತಿಗಳಿಗೆ ಮೊದಲನೆಯ ತಲೆಮಾರುಗಳಲ್ಲಿ **ಆಚಾರ್ಯ, ಆಚಾರಿ** ಎಂಬ ಪದಗಳು ನಿರ್ದಿಷ್ಟ ಪದಗಳ ಜೊತೆಗೆ ವಾರ್ಗಿಕ ರೂಪಗಳಾಗಿ ಪ್ರವೇಶ ಪಡೆದಿರುವುದನ್ನು ಕಾಣಬಹುದು.

ಉದಾಹರಣೆಗೆ ಕ್ರಿ.ಶ.ಸು ೭ನೇ ಶತಮಾನದಿಂದ ೯ನೇ ಶತಮಾನದ ಪೂರ್ವಾರ್ದದವರೆಗೆ ಪಾಂಚಾಳ ಸಮುದಾಯಗಳ ವ್ಯಕ್ತಿಗಳ ಹೆಸರುಗಳಿಗೆ **ಆಚಾರಿ, ಆಚಾರ್ಯ** ಎಂಬ ವಾರ್ಗಿಕ ರೂಪ ಹಚ್ಚಿಕೊಂಡು ಹೆಸರಿಸಿರುವುದು ಕಾಣುತ್ತೇವೆ.

ವ್ಯಕ್ತಿನಾಮ	ನಿರ್ದಿಷ್ಟಪದ	ವಾರ್ಗಿಕ ಪದ
ಅಜು ಆಚಾರಿಸಿದ್ದಿ	**ಅಜು**	**ಆಚಾರಿಸಿದ್ದಿ**
ಅನಿವಾರಿತಾಚಾರಿ	**ಅನಿವಾರಿತ**	**ಆಚಾರಿ**
ಸಿದ್ದಿ ಆಚಾರ್ಯ	**ಸಿದ್ದಿ**	**ಆಚಾರ್ಯ**
ದೇವ ಆಚಾರ್ಯ	**ದೇವ**	**ಆಚಾರ್ಯ**
ದುಗ್ಗಿ ಆಚಾರಿ	**ದುಗ್ಗಿ**	**ಆಚಾರಿ**

ಮೊದಲ ಕಾಲಘಟ್ಟದಲ್ಲಿ **ಆಚಾರ್ಯ, ಆಚಾರಿ** ಎಂಬ ವಾರ್ಗಿಕದ ಜೊತೆಗೆ ತಮ್ಮ ನಿರ್ದಿಷ್ಟ ಹೆಸರುಗಳನ್ನು ಸೇರಿಸಿ ಹೆಸರಿಸಿರುವುದನ್ನು ಕಾಣಬಹುದಾಗಿದೆ. **ಆಚಾರಿ** ಅಥವಾ **ಆಚಾರ್ಯ** ಎಂದರೆ **"ಆಚಾರೋಹಿ ಪ್ರಥಮೋ ಧರ್ಮ"** ಎಂಬುದು ಶ್ರುತಿ ವಾಕ್ಯ ವಿಶ್ವಬ್ರಾಹ್ಮಣರು ಪ್ರಾಚೀನ ಕಾಲದಿಂದಲೂ ಆಚಾರವಂತರಾಗಿದ್ದರು ಎಂಬುದಕ್ಕೆ ಅವರ **'ಆಚಾರಿ'** ಮತ್ತು **'ಆಚಾರ್ಯ'** ಎಂಬ ಉಪನಾಮಗಳೇ ಸಾಕ್ಷಿ. **"ಆಕಾರೋ ಆಗಮಾರ್ಥಂಚ ಚಕಾರೋ ಸರ್ವಶಾಸ್ತ್ರ ಕೋವಿದ: | ರಿಕಾರೋ ದೇವತೋತ್ಪತ್ತಿ: ಆಚಾರೀ ಅಕ್ಷರ ತ್ರಯಂ"** ಆಗಮಾರ್ಥವನ್ನು ಅರಿತವನು, ಸರ್ವ ಶಾಸ್ತ್ರಕೋವಿದನು. ದೇವತಾದಿ ವಿಗ್ರಹಗಳನ್ನು ನಿರ್ಮಿಸುವನು **ಆಚಾರಿ. "ಆಚಾರೋ** ಅಸ್ಸ ಆಸ್ತಿ ಇತಿ**"** ಅಂದರೆ ಶಾಸ್ತ್ರೋಕ್ತವಾದ ಕರ್ಮಾಚರಣೆಯುಳ್ಳವನು. ಸದಾಚಾರಿ ಸಂಪನ್ನನಾದವನು **ಆಚಾರಿ.**[೨೦] ಎಂದು ಅನೇಕ ವಿದ್ವಂಸರು ತಿಳಿಸುತ್ತಾರೆ.

"ಸ್ಥಪತಿ ಸ್ಥಾಪಕಶ್ಚೈವೇತ್ಯಾಚಾರ್ಯೋ ವಿಶ್ವಕರ್ಮಣ" ಎಂದು ಸ್ಕಂದ ಪುರಾಣದ ನಾಗರ ಖಂಡದಲ್ಲಿ ಹೇಳಿದೆ. **ಸ್ಥಪತಿ, ಸ್ಥಾಪಕ, ಆಚಾರ್ಯ** ಪಾಂಚಾಳರ ಅಭಿದಾನಗಳು. **"ಆಚಿನೋತಿ ಚ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ | ಸ್ವಯಮಾಚರತೇ ಯಸ್ಮಾತ್ ತಸ್ಮಾದಾಚಾರ್ಯ ಉಚ್ಯತೆ||"** ಶಾಸ್ತ್ರದ ಅರ್ಥವನ್ನು ಅರಿತು ಸ್ವತಃ ಆಚರಿಸಿ ಇತರರನ್ನು ಆಚರಣೆಯಲ್ಲಿ ತೊಡಗಿಸುವವನು **ಆಚಾರ್ಯ.** ಆಚಾರ್ಯನೆಂದರೆ **ಗುರು** ಒಂದು ಕಾಲದಲ್ಲಿ **"ವಿಶ್ವಬ್ರಾಹ್ಮಣರು ಜಗದ್ಗುರು"** ಎಂಬ ವಿಶಿಷ್ಟಾಭಿದಾನವನ್ನು ಪಡೆದು ಮೆರೆದಿದ್ದರು ಎಂಬುದು ಸರ್ವವಿಧಿತ ಎಂದು ತಿಳಿಸುತ್ತಾರೆ.[೨೧] ಒಟ್ಟಾರೆಯಾಗಿ **ಆಚಾರಿ** ಅಥವಾ **ಆಚಾರ್ಯ** ಎಂದರೆ ಜಗತ್ತಿನ ಜನರ ಹಿತ ಬಯಸಿ ಅವರ ಶ್ರೇಯೊಭಿವೃದ್ಧಿಗಾಗಿ ದುಡಿದವರು ಎಂದು ಹೇಳಬಹುದು.

ಈ ಆಚಾರಿ ವಾರ್ಗಿಕ ಪದದ ಜೊತೆಗೆ ದೈವ, ಪುರಾಣ, ನಿಸರ್ಗ, ಚರಿತ್ರೆ, ಮನೆತನದ ಹಿರಿಯರ ಹೆಸರು ಇತ್ಯಾದಿಯಾಗಿ ನಿರ್ದಿಷ್ಟ ಪದದಲ್ಲಿ ತಮ್ಮ ಹೆಸರನ್ನು ಗುರುತಿಸಿಕೊಂಡು ಬಂದಿದ್ದಾರೆ.

ನಂತರದ ಕಾಲಘಟ್ಟದಲ್ಲಿ ಅಂದರೆ ಕ್ರಿ.ಶ.ಸು. ೧೧ನೇ ಶತಮಾನದಿಂದ ಆಚಾರಿ, ಆಚಾರ್ಯ ಎಂಬ ವಾರ್ಗಿಕ ಪದದ ಬದಲಾಗಿ 'ಓಜ' ಎಂಬ ಪದ ವಾರ್ಗಿಕ ಸ್ಥಾನದಲ್ಲಿ ಅಲಂಕರಿಸಿರುವುದನ್ನು ಕಾಣಬಹುದು. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕ್ರಿ.ಶ. ೧೦೭೪ರ ಕಡೂರು ತಾಲೂಕಿನ ಸೋಮನಹಳ್ಳಿ ಶಾಸನದಲ್ಲಿ ಕಾಳೋಜ, ಬೀನೋಜ.

ಕ್ರಿ.ಶ. ೧೦೭೫ರ ಕಡೂರು ಶಾಸನದಲ್ಲಿ ಬೀರೋಜ, ಸುರೋಜ, ಹರಿಯೋಜ.

ಕ್ರಿ.ಶ. ೧೧೧೪ರ ಕಡೂರು ಶಾಸನದಲ್ಲಿ ಕೇಲೋಜ.

ಕ್ರಿ.ಶ. ೧೧೩೪ರ ಧಾರವಾಡ ಜಿಲ್ಲೆಯ ಮತ್ತೂರ ಗ್ರಾಮದ ಶಾಸನದಲ್ಲಿ ಕಮ್ಮಾರ ಮಾಚ.

ಕ್ರಿ.ಶ. ೧೧೩೪ರ ಹೊಯ್ಸಳರ ವಿಷ್ಣುವರ್ಧನನ ಕಾಲದ ಶಾಸನದಲ್ಲಿ ಕಿರಿಯ ಬಸವಾಚಾರಿ.

ಕ್ರಿ.ಶ. ೧೧೫೨ರ ಧಾರವಾಡ ಜಿಲ್ಲೆಯ ಶಾಸನದಲ್ಲಿ ಕಮ್ಮಾರ ಗಳಯಾ.

ಕ್ರಿ.ಶ. ೧೫೫೯ರ ಶಾಸನದಲ್ಲಿ ಕಮ್ಮಾರ ಎಲ್ಲೋಜ, ಕಮ್ಮಾರ ತಿಮ್ಮೋಜ, ಕಮ್ಮಾರ ಉಲ್ಲೋಜ.

ಕ್ರಿ.ಶ. ೧೨ನೇ ಶತಮಾನದ ಹುಬ್ಬಳಿ ತಾಲೂಕಿನ ಮಂಟೂರು ಗ್ರಾಮದ ಶಾಸನದಲ್ಲಿ ಕಮ್ಮಾರ ದೇವೋಜ.

ಕ್ರಿ.ಶ. ೧೨೧೫ರ ಗದಗ ತಾಲೂಕಿನ ನಾಗಾವಿಯ ಯಾದವ ಸಿಂಘಣನ ಕಾಲದ ಶಾಸನದಲ್ಲಿ ಕಮ್ಮಾರ ಬೋಮ್ಮಜ ಹೀಗೆ ಮುಂದುವರೆಯುತ್ತವೆ. ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ವ್ಯಕ್ತಿನಾಮಗಳನ್ನು ಹೀಗೆ ಹೇಳಬಹುದು. ಪಾಂಚಾಳ ಸಮುದಾಯದ ವ್ಯಕ್ತಿಗಳಿಗೆ ಓಜ ಎಂಬ ವಾರ್ಗಿಕದ ಜೊತೆಗೆ ತಮ್ಮ ನಿರ್ದಿಷ್ಟ ಹೆಸರುಗಳನ್ನು ಸೇರಿಸಿ ಹೆಸರಿಸಿರುವುದನ್ನು ಕಾಣಬಹುದಾಗಿದೆ. ಮೇಲಿನ ಮೊದಲ ಮೂರು ಶಾಸನಗಳಲ್ಲಿ ಕಾಳೋಜ, ಬೀನೋಜ, ಬೀರೋಜ, ಸುರೋಜ, ಹರಿಯೋಜ ಹಾಗೂ ಕೇಲೋಜ ಎಂಬ ಉಲ್ಲೇಖಗಳಾಗಿವೆ. 'ಓಜ' ಎಂದರೆ ಶಿಲ್ಪಿ, ಕಮ್ಮಾರ, ಬಡಿಗ, ಅಕ್ಕಸಾಲಿಗ, ಕಂಚುಗಾರ, ಗುರು ಎಂಬೆಲ್ಲಾ ಅರ್ಥವನ್ನು ಕೊಡುತ್ತದೆ. ಅಂದರೆ ಓಜ ಎಂಬುದು ಆಚಾರಿ ಪದಕ್ಕೆ ಸಮಾನವಾದದ್ದು. ಗುರು ಎಂಬರ್ಥದ ಉಪನಾಮದೊಂದಿಗೆ ಎರಡನೆಯ ಕಾಲಘಟ್ಟದಲ್ಲಿ ಬಳಕೆಯಾಗಿದೆ.

ವ್ಯಕ್ತಿನಾಮಗಳು	-	ನಿರ್ದಿಷ್ಟ	+	ವಾರ್ಗಿಕ
ಕಾಳೋಜ	-	ಕಾಳ	+	ಓಜ
ಬೀನೋಜ	-	ಬೀನ	+	ಓಜ
ಬೀರೋಜ	-	ಬೀರ	+	ಓಜ
ಸುರೋಜ	-	ಸುರ	+	ಓಜ
ಹರಿಯೋಜ	-	ಹರಿ	+	ಓಜ
ಕೇಲೋಜ	-	ಕೇಲ	+	ಓಜ

ಈ ಮೇಲಿನ ವ್ಯಕ್ತಿನಾಮಗಳು ಪಾಂಚಾಳ ಸಮುದಾಯದಲ್ಲಿ ಯಥೇಚ್ಛವಾಗಿ ಅಂದರೆ ಹತ್ತನೆಯ ಶತಮಾನದ ನಂತರದಲ್ಲಿ ಕಂಡುಬರುತ್ತದೆ. ಪಾಂಚಾಳ ಎಂದರೆ ಐದು ವೃತ್ತಿಯನ್ನು ನಿರ್ವಹಿಸುವನು ಎಂದರ್ಥ. ಹಾಗೆಯೇ ಈ ಮೇಲಿನ ಹೆಸರುಗಳಲ್ಲಿ ವಾರ್ಗಿಕ ಪದವಾದ ಓಜ ಎಂಬ ಪದದ ಅರ್ಥ ಕಮ್ಮಾರ, ಬಡಿಗ, ಅಕ್ಕಸಾಲಿಗ, ಶಿಲ್ಪಿ, ಕಂಚುಗಾರ, ಗುರು ಎಂಬರ್ಥಗಳು ಬರುತ್ತವೆ. ಪಾಂಚಾಳರ ದೇವರುಗಳಾದ ಕಾಳಮ್ಮ, ಬರಮಪ್ಪ ಇತ್ಯಾದಿ ಶೈವ ದೇವರುಗಳಾದ ಹರ, ಬೀರಪ್ಪ ಇತ್ಯಾದಿ ಆ ಪ್ರದೇಶಕ್ಕೆ ಅನುಗುಣವಾಗಿ ಅಲ್ಲಿಯ ಪ್ರಭಲ ದೇವರುಗಳ ಹೆಸರಿನ ಜೊತೆಗೆ ತಮ್ಮ ವೃತ್ತಿಯ ಪದವನ್ನೇ ಉಪಯೋಗಿಸಿ ವ್ಯಕ್ತಿನಾಮಗಳು ಪ್ರಚಲಿತಕ್ಕೆ ಬಂದಿರುವುದನ್ನು ಕಾಣಬಹುದಾಗಿದೆ.

ಇನ್ನುಳಿದ ಶಾಸನಗಳಲ್ಲಿ ತಮ್ಮ ವೃತ್ತಿಯ ಜೊತೆಗೆ ಹೆಸರು ಹಾಗೂ ಸಮುದಾಯವನ್ನು ಸೂಚಿಸುವ ಓಜ ಪದದೊಂದಿಗೆ ವ್ಯಕ್ತಿನಾಮಗಳು ಬಳಕೆಗೆ ಬಂದಿರುವುದನ್ನು ಕಾಣಬಹುದು. ಉದಾಹರಣೆಗೆ

ಹೆಸರು	-	ವೃತ್ತಿ	+	ನಿರ್ದಿಷ್ಟ
ಕಮ್ಮಾರ ಮಾಚ	-	ಕಮ್ಮಾರ	+	ಮಾಚ
ಕಮ್ಮಾರ ಗಳಯಾ	-	ಕಮ್ಮಾರ	+	ಗಳಯಾ
ಕಮ್ಮಾರ ತಿಮ್ಮೋಜ	-	ಕಮ್ಮಾರ	+	ತಿಮ್ಮೋಜ
ಕಮ್ಮಾರ ಉಲ್ಲೋಜ	-	ಕಮ್ಮಾರ	+	ಉಲ್ಲೋಜ
ಕಮ್ಮಾರ ದೇವೋಜ	-	ಕಮ್ಮಾರ	+	ದೇವೋಜ
ಕಮ್ಮಾರ ಬೋಮ್ಮಜ	-	ಕಮ್ಮಾರ	+	ಬೋಮ್ಮಜ
ಬಡಗಿ ಕಲ್ಲೋಜ	-	ಬಡಗಿ	+	ಕಲ್ಲೋಜ
ಬಡಗಿ ಸಂಕೋಜ	-	ಬಡಗಿ	+	ಸಂಕೋಜ
ಬಡಗಿ ಮಲ್ಲೋಜ	-	ಬಡಗಿ	+	ಮಲ್ಲೋಜ
ಬಡಗಿ ಲಿಂಗೋಜ	-	ಬಡಗಿ	+	ಲಿಂಗೋಜ
ಬಡಗಿ ಬುತೋಜ	-	ಬಡಗಿ	+	ಬುತೋಜ
ಬಡಗಿ ಹಿರೋಜ	-	ಬಡಗಿ	+	ಹಿರೋಜ
ಅಕ್ಕಸಾಲಿ ದಾಸೋಜ	-	ಅಕ್ಕಸಾಲಿ	+	ದಾಸೋಜ
ಅಕ್ಕಸಾಲಿ ಮಾರೋಜ	-	ಅಕ್ಕಸಾಲಿ	+	ಮಾರೋಜ
ಅಕ್ಕಸಾಲಿ ಕಾಳೋಜ	-	ಅಕ್ಕಸಾಲಿ	+	ಕಾಳೋಜ

ಈ ಮೇಲಿನ ವ್ಯಕ್ತಿ ನಾಮಗಳು ವಿಶಿಷ್ಟತೆಯಿಂದ ಕೂಡಿರುವುದು ಕಂಡು ಬರುತ್ತದೆ. ತನ್ನ ವೃತ್ತಿಯ ಜೊತೆಗೆ ಸಮುದಾಯವನ್ನು ಕೂಡ ಪ್ರತಿನಿಧಿಸಬಲ್ಲ ಹೆಸರುಗಳು ಕಾಣಸಿಗುತ್ತವೆ. ಕಮ್ಮಾರ, ಬಡಗಿ, ಅಕ್ಕಸಾಲಿ ಇವು ವೃತ್ತಿಯನ್ನು ಪ್ರತಿ ನಿಧಿಸಿದರೆ 'ಓಜ' ಎಂಬ ಪದ ಸಮುದಾಯವನ್ನು ಪ್ರತಿನಿಧಿಸುವ ಪದವಾಗಿದೆ. ಈ ಎರಡು ಪದಗಳು ಒಟ್ಟಿಗೆ ಹನ್ನೊಂದನೆಯ ಶತಮಾನದ ಈಚೆಗೆ ಬಂದಿರುವುದನ್ನು

ಕಾಣಬಹುದು. ಇಲ್ಲಿ ನಿರ್ದಿಷ್ಟ ಪದದ ಜೊತೆಗೆ 'ಓಜ' ಎಂಬ ಪದ ನಿಷ್ಕ್ರಿಯವಾಗಿರುವುದನ್ನು ಕಾಣಬಹುದು. (ತಿಮ್ಮ+ ಓಜ - ತಿಮ್ಮೋಜ) ಆದರೆ ಅವರು ಕೈಗೊಂಡಿರುವ ವೃತ್ತಿ ಸಕ್ರೀಯವಾಗಿ ಹೆಸರಿನ ಮುಂದೆ ಬಳಕೆಯಾಗುತ್ತಲಿದೆ. ಇಲ್ಲಿ ಸಮುದಾಯದ ಪದ ನಿರ್ದಿಷ್ಟ ಪದಗಳ ಜೊತೆ ನಿಷ್ಕ್ರೀಯವಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಹಾಗೂ ನಿರ್ದಿಷ್ಟ ಪದಗಳು ಬಹುತೇಕ ಅಲ್ಲಿಯ ಪ್ರದೇಶಕ್ಕೆ ಅನುಗುಣವಾಗಿ ಅಂದರೆ ಧಾರ್ಮಿಕ ಪರಂಪರೆಯಿಂದ ಪ್ರೇರಣೆ ಪಡೆದವುಗಳಾಗಿವೆ. ಮತ್ತು ಅವುಗಳು ಪಾಂಚಾಳ ಸಮುದಾಯಕ್ಕೆ ಸಂಬಂಧಿಸಿದ ದೈವಗಳ ಹೆಸರುಗಳಾಗಿವೆ.

ಕ್ರಿ.ಶ. ೭ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ವಾರ್ಗಿಕ ಪದದಲ್ಲಿ 'ಆಚಾರಿ' ಎಂದು ನಂತರ 'ಓಜ' ಎಂಬ ಪದ ಬಳಕೆಯಾಗಿರುವುದನ್ನು ಕಾಣುತ್ತೇವೆ. ಆದರೆ ೧೨ನೆಯ ಶತಮಾನದ ನಂತರ 'ಓಜ' ಪದ ಕಣ್ಮರೆಯಾಗಿ 'ಆಚಾರಿ' ಎಂಬ ಪದ ಬಳಕೆಗೆ ಬಂದಿರುವುದನ್ನು ನೋಡಬಹುದು. ಈ ಕಾಲಘಟ್ಟದಿಂದಲೇ ಇಲ್ಲಿಯ ತನಕ ಸಂಪೂರ್ಣವಾಗಿ 'ಓಜ' ಪದ ಕಾಣಸಿಗುವುದಿಲ್ಲ. ಆದರೆ ಪಾರಂಪರಿಕವಾಗಿ ಬಂದಂತಹ 'ಆಚಾರಿ' ಪದವು ಬಳಕೆಯಾಗುತ್ತದೆ. ಪ್ರಸ್ತುತದಲ್ಲಿಯೂ ಕೂಡ 'ಆಚಾರಿ' ಎಂಬ ಪದವು ಈಡಿ ಕರ್ನಾಟಕದಾದ್ಯಂತ ಹೆಚ್ಚಾಗಿ ಬಡಗಿ, ಕಮ್ಮಾರಿಕೆ ಕೆಲಸ ಮಾಡುವ ವೃತ್ತಿಯವರು ಮಾತ್ರ ತಮ್ಮ ನಿರ್ದಿಷ್ಟ ಹೆಸರಿನ ಜೊತೆ ಸೇರಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಶಿಲ್ಪಿ, ಅಕ್ಕಸಾಲಿಕೆ ಹಾಗೂ ಕಂಚುಗಾರಿಕೆಯ ವೃತ್ತಿಯವರು ತಮ್ಮ ನಿರ್ದಿಷ್ಟ ಹೆಸರಿನ ಮುಂದೆ 'ಆಚಾರಿ' ಪದವು ಬರುವುದು ತುಂಬಾ ವಿರಳ.

ಉದಾಹರಣೆಗೆ:-

ಹೆಸರು	-	ವೃತ್ತಿ	+	ನಿರ್ದಿಷ್ಟ
ಅಕ್ಕಸಾಲಿ ಚಾಯಪ್ಪ	-	ಅಕ್ಕಸಾಲಿ	+	ಚಾಯಪ್ಪ
ಅಕ್ಕಸಾಲಿ ದೀವಕಾರಪ್ಪ	-	ಅಕ್ಕಸಾಲಿ	+	ದೀವಕಾರಪ್ಪ
ಅಕ್ಕಸಾಲಿ ಗುಂಡಪ್ಪ	-	ಅಕ್ಕಸಾಲಿ	+	ಗುಂಡಪ್ಪ
ಅಕ್ಕಸಾಲಿ ಬೋಜಪ್ಪ	-	ಅಕ್ಕಸಾಲಿ	+	ಬೋಜಪ್ಪ
ಅಕ್ಕಸಾಲಿ ವಾಸಪ್ಪ	-	ಅಕ್ಕಸಾಲಿ	+	ವಾಸಪ್ಪ

ಹಾಗೆಯೇ ಉತ್ತರ ಕರ್ನಾಟಕದಲ್ಲಿ ಅಕ್ಕಸಾಲಿಕೆ ವೃತ್ತಿಯವರನ್ನು ಅಕ್ಕಸಾಲಿಯೆಂತಲೂ, ದೈವಜ್ಞಯೆಂತಲೂ ಕರೆಯುವುದು ಪ್ರಚಲಿತವಿದೆ.

ಉದಾಹರಣೆಗೆ:-

ಗಂಗಾಧರ ದೈವಜ್ಞ

ಮಾನಪ್ಪ ದೈವಜ್ಞ

ಕಾಳಪ್ಪ ದೈವಜ್ಞ

ಮೌನೇಶ ದೈವಜ್ಞ

ದೈವಜ್ಞ ಎಂದರೆ ಜ್ಯೋತಿಷ್ಯ ಹೇಳುವವ ಎಂದು ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ ತಿಳಿಸಿದ್ದಾರೆ. ಅಂದರೆ ಶಾಸ್ತ್ರವನ್ನು ಕಲಿತವರು ಎಂಬ ಅರ್ಥ ಬರುತ್ತದೆ. ಅಕ್ಕಸಾಲಿಕೆಯ ವೃತ್ತಿ ನಿರ್ವಹಿಸುವವರು ಮುಖ್ಯವಾಗಿ ಶಾಸ್ತ್ರವನ್ನು ಕಲಿಯಲೇಬೇಕು. ಏಕೆಂದರೆ ದೇವರ ಆಭರಣಗಳನ್ನು ತಯಾರಿಸುವಾಗ ಶಾಸ್ತ್ರಗಳ ಮೂಲಕವೇ ಪಠಣ ಮಾಡುತ್ತ ಆಭರಣಗಳನ್ನು ತಯಾರಿಸಬೇಕು ಎಂಬ ನಿಯಮವಿದೆ. ಈ ಉದ್ದೇಶದಿಂದಾಗಿ ದೈವಜ್ಞ ಎಂಬ ಹೆಸರು ಬಂದಿರಬಹುದು ಹಾಗೂ ಪಾಂಚಾಳ ಸಮುದಾಯಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳನ್ನು ನಡೆಸಿಕೊಡುವ ಆಚಾರ್ಯ ಸ್ವಾಮಿಗಳು ಆಗಿರಬಹುದು.

ಹಾಗೆಯೇ ಕಂಚುಗಾರ ವೃತ್ತಿ ಮತ್ತು ಶಿಲ್ಪಿ ವೃತ್ತಿಯನ್ನು ನಿರ್ವಹಿಸುವರ ವ್ಯಕ್ತಿನಾಮಗಳು ಈ ರೀತಿಯಾಗಿ ಬಳಕೆಯಾಗುತ್ತಲಿವೆ.

ಉದಾಹರಣೆಗೆ:-

ಶಿಲ್ಪಿ ಈಶ್ವರಾಚಾರಿ

ಶಿಲ್ಪಿ ಚಂದ್ರಮೂರ್ತಿ

ಶಿಲ್ಪಿ ನಾಗಲಿಂಗಾಚಾರಿ

ಶಿಲ್ಪಿ ವೀರೂಚಾರಿ

ಶಿಲ್ಪಿ ಶ್ರೀಕಂಠಚಾರಿ

ಇಲ್ಲಿ ತಾವು ನಿರ್ವಹಿಸುವ ವೃತ್ತಿ ಹಾಗೂ ನಿರ್ದಿಷ್ಟ ಪದದಲ್ಲಿ ಸಮುದಾಯವನ್ನು ಗುರುತಿಸುವ 'ಆಚಾರಿ' ಪದ ಬಳಕೆಯಾಗಿರುವುದನ್ನು ಕಾಣುತ್ತೇವೆ. ಈ ಪದ ಇಲ್ಲಿ ನಿರ್ದಿಷ್ಟಪದದ ಜೊತೆಗೆ ನಿಷ್ಕ್ರೀಯವಾಗಿರುವುದನ್ನು ಕಾಣಬಹುದು. ಆದರೆ ತಾವು ನಿರ್ವಹಿಸುವ ವೃತ್ತಿ ಮುಖ್ಯವಾಗಿ ಕಾಣಸಿಕೊಳ್ಳುತ್ತದೆ. ಆದರೆ ಬಳ್ಳಾರಿ, ದಾವಣಗೇರಿ ಪ್ರದೇಶದಲ್ಲಿ ಶಿಲ್ಪಿ ವೃತ್ತಿಯನ್ನು ನಿರ್ವಹಿಸುವವರು ಹೆಸರಿನಲ್ಲಿ ಸಮುದಾಯ ಸೂಚಕ ಪದ ಬಳಕೆಯಾಗುವುದನ್ನು ಮಾತ್ರ ಕಾಣಬಹುದು.

ಉದಾಹರಣೆಗೆ:-

ಹಂಸನಂದಾಚಾರಿ

ಕಾಳಾಚಾರಿ

ಹನುಮಂತಚಾರಿ

ಲಕ್ಷ್ಮಣಚಾರಿ

ಪಾಂಚಾಳ ಸಮುದಾಯದಲ್ಲಿ ಕಂಚುಗಾರಿಕೆ ವೃತ್ತಿಯನ್ನು ನಿರ್ವಹಿಸುವರ ಸಂಖ್ಯೆ ಕಡಿಮೆ. ಈ ವೃತ್ತಿಯನ್ನು ಕೈಗೊಳ್ಳುವರು ಹೆಚ್ಚಾಗಿ ಗುಲ್ಬರ್ಗ, ದಾವಣಗೇರಿ, ನೆಲಮಂಗಲ ಸುತ್ತಮುತ್ತಲಿನ ಪ್ರದೇಶದಲ್ಲಿ ಮಾತ್ರ ಕಾಣಸಿಗುವರು. ಇನ್ನಿತರ ಪ್ರದೇಶಗಳಲ್ಲಿ ಸಿಕ್ಕರೂ ಕೂಡ ಆ ಈಡಿ ಪ್ರದೇಶಕ್ಕೆ ಒಂದು ಅಥವಾ ಎರಡು ಮನೆಗಳು ಕಂಡು ಬರುತ್ತವೆ. ಈ ವೃತ್ತಿ ಕೈಗೊಳ್ಳುವರು ಹೆಸರುಗಳು ಈ ತೆರನಾಗಿವೆ.

ಉದಾಹರಣೆಗೆ:-

ಕಂಚುಗಾರ ಮೌನೇಶ

ಕಂಚುಗಾರ ಶರಣಪ್ಪ

ಕಂಚುಗಾರ ವೀರಭದ್ರಚಾರಿ

ಕಂಚುಗಾರ ಪರಮೇಶ್ವರಚಾರಿ

ಕಂಚುಗಾರ ನಾಗಪ್ಪಚಾರಿ

ಇಲ್ಲಿಯೂ ಸಹ ಮೊದಲು ತಾವು ನಿರ್ವಹಿಸುವ ವೃತ್ತಿ ನಂತರ ನಿರ್ದಿಷ್ಟ ಪದದ ಜೊತೆಗೆಯೇ ಸಮುದಾಯವನ್ನು ಪ್ರತಿನಿಧಿಸುವ **'ಆಚಾರಿ'** ಪದವು ಬಳಕೆಯಾಗುವುದನ್ನು ಕಾಣುತ್ತೇವೆ. ಈ ಪದವು ಎಲ್ಲಾ ಸಂದರ್ಭಗಳಲ್ಲಿಯೂ ನಿಷ್ಕ್ರಿಯವಾಗಿಯೇ ಬಳಕೆಯಾಗಿರುವುದನ್ನು ಕಾಣಬಹುದು.

ಕಮ್ಮಾರಿಕೆ, ಬಡಗಿತನ ಹಾಗೂ ಅಕ್ಕಸಾಲಿಕೆ ವೃತ್ತಿಯನ್ನು ನಿರ್ವಹಿಸುವರ ವ್ಯಕ್ತಿನಾಮಗಳು ದಕ್ಷಿಣ ಕರ್ನಾಟಕದಲ್ಲಿ ನಿರ್ದಿಷ್ಟ ಪದದ ಜೊತೆಗೆಯೇ ಸಮುದಾಯವನ್ನು ಪ್ರತಿನಿಧಿಸುವ **'ಆಚಾರಿ'** ಪದ ನಿಷ್ಕ್ರೀಯವಾಗಿ ಬಳಕೆಯಾಗುವುದನ್ನು ಕಾಣಬಹುದು ಆದರೆ ಇಲ್ಲಿ ವೃತ್ತಿಯನ್ನು ನಿರ್ವಹಿಸುವರು ಎಂಬುದು ಖಚಿತವಾಗಿ ತಿಳಿಯುವುದಿಲ್ಲ ಆದರೆ ಸಮುದಾಯವನ್ನು ಮಾತ್ರ ಗುರುತಿಸಬಹುದು.

ಉದಾಹರಣೆಗೆ:-

ರೇವಣ್ಣಾಚಾರಿ

ಎ.ಪಿ.ನಾಗೇಶಚಾರಿ

ಪಿ.ಆರ್.ಮಾನಾಚಾರಿ

ಎ.ಚಂದ್ರಚಾರಿ

ಹೆಚ್.ಆರ್.ಚಂದ್ರಶೇಖರಾಚಾರಿ

ಹೆಚ್.ಬಿ.ರಾಘುವೇಂದ್ರಚಾರಿ

ಈ ಮೇಲಿನ ವ್ಯಕ್ತಿನಾಮಗಳಲ್ಲಿ ಅವರ ಪೂರ್ವಜರ ಊರು ಹಾಗೂ ತಂದೆಯ ಹೆಸರಿನ ಜೊತೆಗೆ ತಮ್ಮ ಹೆಸರು ಬಂದಿರುವುದನ್ನು ಕಾಣಬಹುದು. ಇಲ್ಲಿ ಪ್ರಧಾನವಾಗಿರುವುದು ನಿರ್ದಿಷ್ಟ ಮಾತ್ರ ಅದರ ಜೊತೆಗೆಯೇ **'ಆಚಾರಿ'** ಎಂಬ ಪದವು ನಿಷ್ಕ್ರೀಯವಾಗಿರುವುದನ್ನು ಕಾಣಬಹುದು. ಆದರೆ ಪೂರ್ವಜರ ಊರು ಹಾಗೂ ತಂದೆಯ ಹೆಸರು ಗೌಣವಾಗಿರುತ್ತವೆ. ಆದರೆ ಬಳ್ಳಾರಿ, ದಾವಣಗೇರಿ ಪ್ರದೇಶದಲ್ಲಿ ಬಡಗಿತನ, ಕಮ್ಮಾರಿಕೆ ಹಾಗೂ ಅಕ್ಕಸಾಲಿಕೆ ವೃತ್ತಿಯನ್ನು ನಿರ್ವಹಿಸುವವರಿಗೆ ವೃತ್ತಿಪದದ ಜೊತೆಗೆ ಸಮುದಾಯ ಪ್ರತಿನಿಧಿಸುವ ಪದವು ಬಳಕೆಯಾಗುವುದನ್ನು ಕಾಣಬಹುದು.

ಕಮ್ಮಾರ ನಿಂಗಪ್ಪಚಾರಿ

ಕಮ್ಮಾರ ಕಾಳಪ್ಪಚಾರಿ

ಕಮ್ಮಾರ ಕಾಳಿಂಗಪ್ಪಚಾರಿ

ಕಮ್ಮಾರ ಮರ್ತಾಂಡಚಾರಿ

ಕಮ್ಮಾರ ಕೃಷ್ಣಚಾರಿ

ಬಡಿಗೇರ ಬಸವರಾಜಚಾರಿ

ಬಡಿಗೇರ ಮಾನಾಚಾರಿ

ಬಡಿಗೇರ ಶ್ರೀನಿವಾಸಚಾರಿ

ಬಡಿಗೇರ ಷಡಕ್ಷರಚಾರಿ

ಬಡಿಗೇರ ಮೌನೇಶಚಾರಿ

ಇಲ್ಲಿ ವೃತ್ತಿಯನ್ನು ನಿರ್ವಹಿಸುವವರಿಗೆ ವೃತ್ತಿಯ ಪದದ ಜೊತೆಗೆ ಸಮುದಾಯದ ಪದವು ನಿರ್ದಿಷ್ಟದ ಜೊತೆಗೆ ಬೇರೆತಿರುವುದನ್ನು ಕಾಣಬಹುದು. ಹಾಗೆಯೇ ನಿರ್ದಿಷ್ಟ ಪದಗಳು ಆ ಸಮುದಾಯಗಳ ವೃತ್ತಿ ದೇವರುಗಳು, ಅವರು ವಾಸವಾಗಿರುವ ಪ್ರದೇಶದಲ್ಲಿ ಪ್ರಭಾವವಿರುವ ದೇವರ ಹೆಸರುಗಳನ್ನಿಟ್ಟು ಹೆಸರನ್ನು ಕಟ್ಟಿದ್ದಾರೆ. ಇದಕ್ಕೆ ಕಾರಣ ಹಿಂದಿನವರಲ್ಲಿ ಇದ್ದ ದೈವಭಕ್ತಿಯಿಂದ ಅಲ್ಲಿರುವ ಶೈವ, ವೈಷ್ಣವ ಸಾಧು ಸಂತರ ಹೆಸರುಗಳು ಜೊತೆಗೆ ವಾರ್ಗಿಕ ಪದವನ್ನು ಹಚ್ಚಿ ಹೆಸರು ಕಟ್ಟಿರುವುದನ್ನು ಕಾಣಬಹುದು.

ಪ್ರಸ್ತುತ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಬಹುತೇಕ ಪಾಂಚಾಳ ಸಮುದಾಯಗಳ ಹೆಸರಿನಲ್ಲಿ ಈ ಕೆಳಗಿನಂತೆ ಬದಲಾವಣೆಯಾಗಿರುವುದನ್ನು ಕಾಣಬಹುದು.

ಉದಾಹರಣೆಗೆ:-

ವಿ.ಎಸ್.ಬಡಿಗೇರ

ಜಿ.ಎನ್.ಕಮ್ಮಾರ

ಸಿ.ಎನ್.ಅಕ್ಕಸಾಲಿ

ಬಿ.ಎನ್.ಬಡಿಗೇರ

ಎ.ಎಸ್.ಕಮ್ಮಾರ

ಎಚ್.ಎಚ್.ಕಮ್ಮಾರ

ವಿ.ಎಸ್.ಕಂಚುಗಾರ

ಈ ಮೇಲಿನ ವ್ಯಕ್ತಿನಾಮಗಳನ್ನು ಈ ರೀತಿಯಾಗಿ ನೋಡಬಹುದು.

ಜನ್ಮನಾಮ	ತಂದೆಯ ಹೆಸರು	ವೃತ್ತಿ
ವೀರೇಶ	ಶಂಕ್ರಪ್ಪ	ಬಡಿಗೇರ
ಗುರುಲಿಂಗಾಚಾರಿ	ನಿಂಗಪ್ಪಚಾರಿ	ಕಮ್ಮಾರ
ಚಾಯಪ್ಪ	ನಿಂಗಪ್ಪ	ಅಕ್ಕಸಾಲಿ
ಅಭಿಜಿತ್	ಸುಭಕಾರ	ಕಮ್ಮಾರ
ಹಾಲೇಶಚಾರಿ	ಹಲಗಪ್ಪ	ಕಮ್ಮಾರ
ವೀರಭದ್ರಪ್ಪ	ಸಿದ್ದಪ್ಪ	ಕಂಚುಗಾರ

ಇಲ್ಲಿ ಜನ್ಮನಾಮ ಮತ್ತು ಪಿತೃ ನಾಮಗಳನ್ನು ಇಂಗ್ಲೀಶ್ ಅದ್ಯಕ್ಷರಗಳಿಂದ ಸೂಚಿಸಿ ಅವರ ವೃತ್ತಿನಾಮವನ್ನು ಪ್ರಧಾನವಾಗಿ ಬಳಸುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಈ ಐದು ವೃತ್ತಿಗಳಲ್ಲಿ ಯಾವ ವೃತ್ತಿಯನ್ನೆ ಕೈಗೊಂಡಿರಲಿ ಅಥವಾ ವೃತ್ತಿ ಮಾಡುವುದನ್ನು ನಿಲ್ಲಿಸಿರಲಿ, ತಮ್ಮ ಸಮುದಾಯದ ಮೌಲ್ಯ ಉಳಿಸಿಕೊಳ್ಳುವ ದೃಷ್ಟಿಯಿಂದ ಇವತ್ತಿನ ಸಂದರ್ಭದಲ್ಲಿ ಮೇಲಿನ ತರಹದ ಹೆಸರುಗಳ ನ್ನಿಡುವುದನ್ನು ಕಾಣಬಹುದು.

ತಮ್ಮ ಮಕ್ಕಳ ಹೆಸರಿನ ಜೊತೆಗೆ ವೃತ್ತಿಯನ್ನು ಸೇರಿಸುವುದು ಕೆಲವೇ ಕೆಲವು ಕುಟುಂಬಗಳು ಮಾತ್ರ ಈ ಮೇಲಿನ ತರಹದ ಹೆಸರುಗಳನ್ನಿಡುತ್ತಿದ್ದಾರೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಪಾಂಚಾಳರು 'ಅಖಿಲ ಭಾರತ ವಿಶ್ವಕರ್ಮರ ಮಹಾಸಭಾ' ಎಂಬ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘದ ಸೂಚನೆಯಂತೆ ತಮ್ಮ ಸಮುದಾಯದ ಮೌಲ್ಯವನ್ನು ಉಳಿಸುವ ಹಿನ್ನೆಲೆಯಲ್ಲಿ ಯಾವುದೇ ವೃತ್ತಿಯನ್ನು ಕೈಗೊಂಡಿರಲಿ ಅಥವಾ ವೃತ್ತಿಯನ್ನು ಕೈಗೊಂಡಿರದೆ ಇರಲಿ ಸಮೂಹವನ್ನು ಸೂಚಿಸುವ ಪದವಾದ **'ವಿಶ್ವಕರ್ಮ'** ಅಥವಾ **'ಪಾಂಚಾಳ'** ಎಂಬ ಜಾತಿ ಸೂಚಕ ಪದವನ್ನು ಹೆಸರಿಸಬೇಕು ಎಂದು ಸಮುದಾಯಕ್ಕೆ ತಿಳಿಸುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಇವತ್ತಿನ ಸಂದರ್ಭದಲ್ಲಿ ಜನಿಸುವ ಮಕ್ಕಳಿಗೆ ಸಮೂಹ ಪದವನ್ನು ಹಚ್ಚಿ ನಾಮಕರಣ ಮಾಡುವುದನ್ನು ಕಾಣುತ್ತೇವೆ.

ಉದಾಹರಣೆಗೆ:-

ಮನೋಜಕುಮಾರ ವಿಶ್ವಕರ್ಮ

ಕೃತಿಕ ವಿಶ್ವಕರ್ಮ

ಹರ್ಷಿತ ವಿಶ್ವಕರ್ಮ

ಪಾರ್ವತಿ ವಿಶ್ವಕರ್ಮ

ಪವನ್ ವಿಶ್ವಕರ್ಮ

ಹೀಗೆ ಪ್ರಸ್ತುತ ಸಂದರ್ಭದಲ್ಲಿ ಆಧುನಿಕತೆಯ ಸ್ಪರ್ಶದಿಂದ ಪಾಂಚಾಳರಲ್ಲಿ ನವೀನ ರೀತಿಯ ಹೆಸರನ್ನು ಇಡುವುದರ ಜೊತೆಗೆ ಸಮುದಾಯದ ಸಮೂಹವನ್ನು ಗುರುತಿಸುವ ಪದವಾದ ವಿಶ್ವಕರ್ಮ ಪದವನ್ನು ನಾಮಕರಣ ಮಾಡುವುದು ಕಾಣಬಹುದು.

ಪಾಂಚಾಳ ಸಮುದಾಯದ ಸ್ತ್ರೀಯರ ಹೆಸರುಗಳನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿ ಪಾಂಚಾಳ ದೇವತೆಗಳ ಹೆಸರನ್ನು ಇಟ್ಟು ನಾಮಕರಣ ಮಾಡಿರುವುದು ಕಾಣಬಹುದು. ಆದರೆ ಪುರುಷರಿಗೆ ನಾಮಕರಣ ಮಾಡುವ ಹಾಗೆ ಅಂದರೆ **ಕಮ್ಮಾರ, ಬಡಿಗೇರ, ಅಕ್ಕಸಾಲಿ, ಶಿಲ್ಪಿ, ಕಂಚುಗಾರ, ಓಜ, ಆಚಾರಿ, ದೈವಜ್ಞ** ಈ ತರಹದ ರೀತಿಯಲ್ಲಿ ಸ್ತ್ರೀಯರಿಗೆ ನಾಮಕರಣ ಮಾಡಿಲ್ಲ. ಏಕೆಂದರೆ ಈ ಪದಗಳು ವೃತ್ತಿಯ ಕೆಲಸವನ್ನು ನಿರ್ವಹಿಸುವಂಥವು ಹಾಗೂ ಜಗತ್ತಿನ ಜನರ ಹಿತ ಬಯಸಿ ಅವರ ಶ್ರೇಯೋಭಿವೃದ್ಧಿಗಾಗಿ ದುಡಿಯುವಂತವರು ಹಾಗೂ ಶಾಸ್ತ್ರದ ಅರ್ಥವನ್ನು ಅರಿತು ಸ್ವತಃ ಆಚರಿಸಿ ಇತರರನ್ನು ಆಚರಣೆಯಲ್ಲಿ ತೊಡಗಿಸುವರು ಆಗಿದ್ದರು. ಇಂತಹ ಕೆಲಸ ಪುರುಷರಿಗೆ ಅಷ್ಟೇ ಮೀಸಲು ಆಗಿದ್ದರಿಂದ ಅವರ ನಿರ್ದಿಷ್ಟ

ಹೆಸರಿನ ಜೊತೆಗೆ ವಾರ್ಗಿಕ ಪದಗಳನ್ನು ಹಚ್ಚಿ ನಾಮಕರಣ ಮಾಡುತ್ತಿದ್ದರು. ಈ ದೃಷ್ಟಿಯಿಂದ ಮಹಿಳೆಯರಿಗೆ ಮೇಲೆ ಹೇಳಿದ ವಾರ್ಗಿಕ ಪದಗಳನ್ನು ಎಲ್ಲಿಯೂ ಕೂಡ ಹಚ್ಚಿ ನಾಮಕರಣ ಮಾಡಿಲ್ಲವೆಂದು ಹೇಳಬಹುದು. ಪ್ರಾಚೀನ ಕಾಲದ ಸ್ತ್ರೀಯರ ಹೆಸರುಗಳು ಪಾಂಚಾಳ ದೇವತೆಗಳ ಹೆಸರುಗಳಾಗಿವೆ. ಈ ಹಿನ್ನೆಲೆಯಲ್ಲಿ ಸ್ತ್ರೀಯರನ್ನು ಪಾಂಚಾಳ ಸಮುದಾಯದವರೆಂದು ಗುರುತಿಸಬಹುದಾಗಿದೆ.

ಉದಾಹರಣೆಗೆ:-

ಕಾಳವ್ವ

ಭೀಮಕ್ಕ

ದ್ಯಾಮವ್ವ

ಶಿರಸಮ್ಮ

ಕೊಮಲವ್ವ

ಗಂಗಮ್ಮ

ಶಂಕ್ರಮ್ಮ

ಸಾವಿತ್ರಮ್ಮ

ಮಹಾಂಕಾಳಮ್ಮ

ಹೀಗೆ ಮೊದಲ ತಲೆಮಾರಿನಲ್ಲಿ ಪಾಂಚಾಳ ಸಮುದಾಯದ ಮಹಿಳೆಯರ ಹೆಸರುಗಳು ಉಲ್ಲೇಖವಾಗಿರುವುದನ್ನು ಕಾಣಬಹುದು. ನಂತರದಲ್ಲಿ ಈ ಮೇಲಿನ ರೀತಿಯ ನಾಮಗಳ ನೆಲೆಗಳು ಕೆಲವು ಮಟ್ಟಿಗೆ ಬದಲಾವಣೆಗಳಾದವು. ಅಂದರೆ ಮಹಿಳೆಯರ ಹೆಸರಿನ ಮುಂದೆ ತಂದೆ ಅಥವಾ ಪತಿಯ ಹೆಸರನ್ನು ಇಟ್ಟುಕೊಳ್ಳುವುದು ಚಲಾವಣೆಗೆ ಬಂದುದನ್ನು ಕಾಣಬಹುದು. ಅಂದರೆ ಇಲ್ಲಿ ಸಮಾಜ ವ್ಯವಸ್ಥೆಯಲ್ಲಿ ಇಂತಹ ವೃತ್ತಿಯವರು ಅಥವಾ ಸಮುದಾಯದವರು ಎಂದು ನಿರ್ಧರಿಸಲಿಕ್ಕೆ ತಮ್ಮ ಹೆಸರಿನ ಜೊತೆ ಮೇಲೆ ತಿಳಿಸಿದ ಪದಗಳನ್ನು ಬಳಸುತ್ತಾರೆ.

ಉದಾಹರಣೆಗೆ:-

ಭೀಮಕ್ಕ ನಿಂಗಪ್ಪಚಾರಿ

ವನಜಾಕ್ಷಿ ಸುಭಕಾರಚಾರಿ

ಲಕ್ಷಮ್ಮ ಕೃಷ್ಣಚಾರಿ

ಅನ್ನಪೂರ್ಣ ಮಾನಪ್ಪಚಾರಿ

ಅಂದರೆ ಇಲ್ಲಿ ಸಮುದಾಯದ ಮಹಿಳೆಯನ್ನು ಗುರುತಿಸಲಿಕ್ಕೆ ತಮ್ಮ ಪತಿಯ ಅಥವಾ ತಂದೆಯ ಹೆಸರು ಮಹಿಳೆಯ ಹೆಸರಿನ ಜೊತೆ ಜೊತೆಗೆ ಬಂದಿರುವುದನ್ನು ಕಾಣಬಹುದು.

ಮನುಷ್ಯನ ಅವಿಭಾಜ್ಯ ಅಂಗವಾಗಿರುವ ವ್ಯಕ್ತಿನಾಮಗಳು ಮೂಲದಿಂದ ಪ್ರಸ್ತುತದವರೆಗೂ ಮನುಷ್ಯ ನಾಗರಿಕತೆಯ ಕಡೆಗೆ ಸಾಗುತ್ತಿದ್ದಂತೆ ಪ್ರಾಚೀನ ವ್ಯಕ್ತಿ ನಾಮಗಳು ಕಣ್ಮರೆಯಾಗಿ ನಾಗರಿಕತೆಗೆ

ಹೊಂದಿಕೊಳ್ಳುವ ಹೆಸರಿನ ಜೊತೆಗೆ ಸಮುದಾಯದ ಉಳಿಯುವಿಕೆಗೆ ಅನ್ವಯವಾಗುವಂತೆ ಹೆಸರುಗಳು ಕಾಲಕಾಲಕ್ಕೆ ಹೇಗೆ ಬದಲಾಗುತ್ತ ಬಂದಿರುವುದನ್ನು ಕಾಣಬಹುದು. ಹಾಗೂ ಪ್ರಸ್ತುತ ಸಂದರ್ಭದಲ್ಲಿ ಪಾಂಚಾಳ ವೃತ್ತಿಗಳಾದ ಕಮ್ಮಾರಿಕೆ, ಬಡಗಿತನ, ಅಕ್ಕಸಾಲಿಕೆ, ಕಂಚುಗಾರ ಹಾಗೂ ಶಿಲ್ಪ ಇವುಗಳಲ್ಲಿ ಯಾವುದೇ ವೃತ್ತಿಯನ್ನು ನಿರ್ವಹಿಸಲಿ ಅಥವಾ ನಿರ್ವಹಿಸದೆ ಇರಲಿ ಸಮೂಹವನ್ನು ಗುರುತಿಸುವ ಪದವಾದ **ಪಾಂಚಾಳ** ಅಥವಾ ವಿಶ್ವಕರ್ಮ ಎನ್ನುವ ಸಮುದಾಯ ಪದವನ್ನು ಮಹಿಳೆಯರಿಗೂ ಹಾಗೂ ಪುರುಷರಿಗೂ ಬಳಸುವುದನ್ನು ಕಾಣಬಹುದಾಗಿದೆ.

೪.೨.೪. ಬೈಯ್ಗುಳ, ವ್ಯಂಗ್ಯ, ಮೂದಲಿಕೆ

ಸಮುದಾಯ ಹಾಗೂ ವ್ಯಕ್ತಿಗಳೆಡೆಗಿನ ಸಾಮಾಜಿಕ ಮನೋಭಾವಗಳು ಸಮುದಾಯ ಹಾಗೂ ವ್ಯಕ್ತಿಗಳ ವ್ಯಾವಹಾರಿಕ ಸಾಮಾಜಿಕ ನಡೆನುಡಿಗಳಿಂದ ರೂಪುಗೊಂಡಿರುತ್ತವೆ. ಇದು ಎಷ್ಟೋವೇಳೆ ಇತರ ವ್ಯಕ್ತಿ ಸಮುದಾಯಗಳಿಗೆ ಒಪ್ಪಿತವಾಗದ ನಡೆನುಡಿ ವರ್ತನೆಗಳ ಆಧರಿಸಿ ಮೂದಲಿಕೆ, ವ್ಯಂಗ್ಯ, ಬೈಯ್ಗುಳಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಇದರಲ್ಲಿ ಪ್ರೀತಿ, ಆತ್ಮೀಯತೆ, ದ್ವೇಷ, ಅಸಹನೆ ಎಲ್ಲಾ ಭಾವಗಳಿಗೂ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗುತ್ತವೆ. ಉದಾ: ಪೋಷಕರು, ಮಕ್ಕಳ ನಡುವೆ, ಗೆಳೆಯರು, ಆತ್ಮೀಯರು, ಪ್ರೀತಿ ಪಾತ್ರರ ನಡುವೆ ಹಾಗೆಯೇ ವಿವಿಧ ಸಮುದಾಯಗಳ ನಡುವೆ ಬೇರೆ ಬೇರೆ ರೀತಿಯಲ್ಲಿ ಬಳಕೆಯಾಗುತ್ತವೆ. ಈ ಅಭಿವ್ಯಕ್ತಿಗೆ ಭಾಷಿಕ ರೂಪ ನೀಡುವಾಗ ವ್ಯಕ್ತಿಗಳ ಸಮುದಾಯ ವೃತ್ತಿ, ಅಂಗಹೀನತೆ, ವರ್ತನೆ, ಸಾಮಾಜಿಕ ನಡುವಳಿಕೆ, ಸಾಮಾಜಿಕ ಸ್ಥಾನಮಾನ, ಸಾಮುದಾಯಿಕ ಚಹರೆ, ವಯಸ್ಸು ಮುಂತಾದ ಅಂಶಗಳು ವಸ್ತುವಾಗುತ್ತವೆ. ಇವು ಶಾಪ ರೂಪದಲ್ಲಿ, ಆಕ್ರಮಣ ಕಾರಕ ರೂಪದಲ್ಲಿ, ವ್ಯಂಗ್ಯ, ಮೂದಲಿಕೆಯ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ.

"ಬೈಯ್ಗುಳು ಭಾಷಿಕವಾಗಿ ಒಂದು ಬಗೆಯಲ್ಲಿ ಸ್ಥಿರ ಘಟಕಗಳು. ಪ್ರಯೋಗಗಳಲ್ಲಿ, ಪರಿಣಾಮಗಳಲ್ಲಿ ಕ್ರಿಯಾತ್ಮಕತೆ ಇದ್ದರೂ ರಚನಾತ್ಮಕವಾಗಿ ಕ್ರಿಯಾ ಶೀಲವಾಗಿರುವುದಿಲ್ಲ. ಅಂದರೆ ಬೈಯ್ಗುಳು ಪದ. ಪದಪುಂಜ, ವಾಕ್ಯ ಮಾದರಿಗಳಲ್ಲಿದ್ದರೂ ಇವೊಂದು ಸಿದ್ಧ ಮಾದರಿಗಳೇ. ಸಂದರ್ಭ, ವ್ಯಕ್ತಿ, ನಡೆದ ಘಟನೆ, ಘಟನೆಯಲ್ಲಿ ಪಾಲ್ಗೊಂಡ ವ್ಯಕ್ತಿಗಳು, ಅವರ ಬೈಯ್ಗುಳ ಸಾಮರ್ಥ್ಯ, ಘಟನೆಯ ತೀವ್ರತೆ, ಪಾಲ್ಗೊಂಡವರ ಸಾಮಾಜಿಕ ಸ್ಥಾನಮಾನ, ವಯಸ್ಸು, ಲಿಂಗ ಮುಂತಾದ ಅಂಶಗಳನ್ನು ಅವಲಂಬಿಸಿ ಬೈಯ್ಗುಳ ಸ್ವರೂಪವಿರುತ್ತದೆ. (ಡಾ.ಡಿ.ಪಾಂಡುರಂಗಬಾಬು ನುಡಿನೋಟ, ಪುಟ-೫೩) ಒಂದರ್ಥದಲ್ಲಿ ಬೈಯ್ಗುಳು ದೈಹಿಕ ಹೊಡೆತವಾದುದು. ಎದುರಾಳಿಯನ್ನು ಹೊಡೆಯಲು ಯಾವುದಾದರು ವಸ್ತುವನ್ನು ಬಳಸಬೇಕಾಗುತ್ತದೆ. (ಕೈಯಿಂದ, ಕಾಲಿನಿಂದ, ಉಪಕರಣ) ಆದರೆ ಬೈಯ್ಗುಳಗಳಿಗೆ ಆಡುವ ಮಾತುಗಳೇ ಅವರ ಮನಸ್ಸಿನ ಮೇಲೆ ಅಸ್ತ್ರವಾಗಿ ಪರಿಣಮಿಸುತ್ತವೆ. ತನ್ನ ವಿರೋಧಿಗಳಿಗೆ ದೈಹಿಕವಾಗಿ ನೋವುಂಟು ಮಾಡುವುದು ಹೊಡೆತದ ಉದ್ದೇಶವಾಗಿದ್ದರೆ, ಬೈಯ್ಗುಳ ಮುಖ್ಯ ಉದ್ದೇಶ ತನ್ನ ವಿರೋಧಿಗಳಿಗೆ ಮಾನಸಿಕ ನೋವನ್ನು ಕೊಡುವುದಾಗಿದೆ.

ಬೈಯ್ಗುಳು ಇಬ್ಬರ ವ್ಯಕ್ತಿಗಳ ನಡುವೆ ಮಾನಸಿಕ ನೋವನ್ನು ಹೆಚ್ಚಿಸುತ್ತ ಹೋಗುತ್ತವೆ ಆದ್ದರಿಂದಲೇ ಈ ಬೈಯ್ಗುಳಗಳಿಗೆ ಹೊಡೆತಕ್ಕಿಂತಲೂ ಸೂಕ್ಷ್ಮವಾದುದು, ಸಂಕೀರ್ಣವಾದುದು, ನುಣಚಿಕೊಳ್ಳಲು ಉಪಯೋಗಿಸುವಂಥದ್ದಾಗಿದೆ. ಆದ್ದರಿಂದಲೇ, ಹೊಡೆತದ ನೋವನ್ನು ಮನುಷ್ಯ ಮರೆಯಬಹುದು ಆದರೆ ಬೈಯ್ಗುಳ ನೋವು ಬೈದ ವ್ಯಕ್ತಿಯನ್ನು ನೋಡಿದಾಗಲೆಲ್ಲ ಅದು ಹೆಚ್ಚಾಗಿ ಬೆಳೆಯುತ್ತದೆಯೇ ಹೊರತು ಹೊಡೆತದ ಹಾಗೆ ಸುಲಭವಾಗಿ ಹೋಗುವಂತಹುದಲ್ಲ. ಇಂತಹ ಬೈಯ್ಗುಳಗಳನ್ನು ಸಮುದಾಯಗಳು ನಿರ್ಧರಿಸುತ್ತವೆ. ಹಾಗೆಯೇ ಇತರೇ ಸಮುದಾಯಗಳು ಪಾಂಚಾಳ ಸಮುದಾಯವನ್ನು ಇಟ್ಟುಕೊಂಡು ಅನೇಕ ಬೈಯ್ಗುಳನ್ನು ಕಟ್ಟಿವೆ. ಅಂತಹ ಬೈಯ್ಗುಳನ್ನು ಇಲ್ಲಿ ಚರ್ಚಿಸಲಾಗಿದೆ.

೧. 'ಆಚಾರಿ ಪುಕ್ಕ ದೊಣ್ಣೆ ತಕ್ಕೊಂಡು ನೆಕ್ಕ'

ಈ ಬೈಯ್ಗುಳನ್ನು ನೋಡಿದರೆ ಇದು ಪಾಂಚಾಳ ಸಮುದಾಯವನ್ನು ಉಪಯೋಗಿಸಿಕೊಂಡು ಬೈದಿರುವುದು ನೇರವಾಗಿ ತಿಳಿಯುತ್ತದೆ. ಆದರೆ ಇದನ್ನು ಪಾಂಚಾಳ ಸಮುದಾಯದವರಿಗೆ ಮಾತ್ರ ಬೈಯಲ್ಲಿಕ್ಕೆ ಬಳಸುತ್ತಾರೆ ಎನ್ನುವುದು ಸುಳ್ಳು. ಇದನ್ನು ಇತರೇ ಸಮುದಾಯದವರಿಗೂ ಬಳಸುವುದನ್ನು ಕಾಣಬಹುದು. ಇಲ್ಲಿ **'ಆಚಾರಿ ಪುಕ್ಕ ದೊಣ್ಣೆತಕ್ಕೊಂಡು ನೆಕ್ಕ'** ಎಂದು ಬಳಸಲಾಗಿದೆ. **ಪುಕ್ಕ** ಎಂದರೆ ಅಂಜುಬುರಕ, ಎದರುವ ಎಂಬರ್ಥಗಳನ್ನು ಕೊಡುತ್ತದೆ. ಹಾಗೆಯೇ **ದೊಣ್ಣೆ** ಎಂದರೆ ಕೋಲು ಎಂಬರ್ಥವನ್ನು ಕೊಡುತ್ತವೆ. ಈ ಎರಡು ಪದಗಳನ್ನು ಈ ಪಾಂಚಾಳ ಸಮುದಾಯಕ್ಕೆ ಸೇರಿಸಿ ಈ ಬೈಯ್ಗುಳನ್ನು ಕಟ್ಟಿದ್ದಾರೆ. ಅಂದರೆ ಇಲ್ಲಿ ಆಚಾರಿ ಎಂಬುವನು ಹೆದರಿಕೆ ಸ್ವಭಾವದವನು, ಅಂಜುಬುರುಕ ತನ್ನಷ್ಟಕ್ಕೆ ತಾನು ಇರುವನು ಎಂಬುದು ವಿಧಿತವಾಗುತ್ತದೆ. ಇಂತಹವನಿಗೆ ದೊಣ್ಣೆ ಎತಕ್ಕೆ. ಕೊಲು ಬೇಕಾಗುವುದು ಅಂಜುಬುರುಕನಿಗೆ ಅಲ್ಲ. ಅಂದರೆ ಇಬ್ಬರು ವ್ಯಕ್ತಿ ಹೊಡೆದಾಡುವ ಸಂದರ್ಭದಲ್ಲಿ ಉಪಕರಣಗಳನ್ನು ಉಪಯೋಗಿಸಿ ಬಡಿದಾಡುತ್ತಾರೆ. ಈ ಉಪಕರಣ ಉಪಯೋಗಿಸಿ ಬಡಿದಾಡುವರು ಅಂಜುಬರುಕರು ಆಗಿರುವುದಿಲ್ಲ ಅವರಿಗೆ ಆ ಸಮಯದಲ್ಲಿ ತಾವು ಏನು ಮಾಡುತ್ತೀವಿ ಅನ್ನುವ ಪ್ರಜ್ಞೆ ಅವರಲ್ಲಿ ಇರುವುದಿಲ್ಲ ಅಂತಹವರು ಧೈರ್ಯಶಾಲಿಗಳು. ಅಂತಹವರು ಮಾತ್ರ ದೊಣ್ಣೆಯನ್ನು ಇಡಿದುಕೊಂಡು ಬಡಿದಾಡುತ್ತಾರೆ. ಆದರೆ ಪುಕ್ಕನ ತರ ಇರುವವರಿಗೆ ದೊಣ್ಣೆ ಏತಕ್ಕೆ ಅದನ್ನು ಇಡಿದುಕೊಂಡು ನೆಕ್ಕು ಎಂದು ವ್ಯಂಗ್ಯರ್ಥವಾಗಿ ಈ ಬೈಯ್ಗುಳನ್ನು ಬಳಸಿದ್ದಾರೆ. ಇದನ್ನು ಪಾಂಚಾಳರಿಗೆ ಉಪಯೋಗಿಸಿ ಇತರೆ ಸಮುದಾಯದವರು ಕಟ್ಟಿದ್ದಾರೆ.

೨. 'ಕೆಲಸವಿಲ್ಲದ (ಉದ್ಯೋಗವಿಲ್ಲದ) ಬಡಗಿ ಮಗನ ಮುಕಳಿ ಕೆತ್ತಿದ'

ಇಲ್ಲಿ ಬಳಸಿರುವ ವ್ಯಕ್ತಿಗೂ ಹಾಗೂ ವಸ್ತುಗಳಿಗೂ ನೇರ ಸಂಬಂಧವಿಲ್ಲದಿದ್ದರೂ ಆ ವಸ್ತುವಿನಿಂದ ನಿರ್ವಹಿಸುವ ಕೆಲಸಕ್ಕೂ ವ್ಯಕ್ತಿಯ ನಡೆವಳಿಕೆಗೂ ಸಂಬಂಧವಿರುತ್ತದೆ. ಈ ಹಿನ್ನೆಲೆಯಲ್ಲಿಯೇ ಈ ಬೈಯ್ಗುಳನ್ನು ಬೇರೆ ಸಮುದಾಯಗಳು ಪಾಂಚಾಳ ಸಮುದಾಯದ ಬಡಗಿ ವೃತ್ತಿಯನ್ನು ಉಪಯೋಗಿಸಿಕೊಂಡು ಬೈಯ್ಗುಳ ಕಟ್ಟಿರುವುದು ಕಂಡುಬರುತ್ತದೆ. ಈ ಬೈಯ್ಗುಳನ್ನು ಪಾಂಚಾಳರೇತರ

ಸಮುದಾಯಗಳು ಉಪಯೋಗಿಸುವುದು ಕಂಡುಬರುತ್ತದೆ. ಬಡಗಿಗೆ ಮಳೆಗಾಲದ ಸಂದರ್ಭದಲ್ಲಿ ರೈತಾಪಿ ಕೆಲಸಗಳು ಹೆಚ್ಚಾಗಿರುತ್ತವೆ. ಮಳೆಗಾಲ ಮುಗಿತೆಂದರೆ ಈ ರೈತಾಪಿ ಕೆಲಸಗಳು ಸಾಧಾರಣ ರೀತಿಯಲ್ಲಿರುತ್ತವೆ. ಅಂತಹ ಸಂದರ್ಭಗಳಲ್ಲಿ ಬಡಗಿಯು ತನ್ನ ಜೀವನದ ನಿರ್ವಹಣೆಗಾಗಿ ಚಿಕ್ಕ ಪುಟ್ಟ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾನೆ. ಅಂದರೆ ಗೃಹೋಪಯೋಗಿ ಕೆಲಸಗಳಿಗೆ ಸಂಬಂಧಿಸಿದಂತೆ, ಆರತಿ ಮಣೆಗಳನ್ನು ಕೆತ್ತುವುದು, ಕಡಗಲ್ಲು ಕೆತ್ತುವುದು ಇತ್ಯಾದಿ ಕೆಲಸಗಳನ್ನು ಇಂತಹ ಬಿಡುವಿನ ಸಂದರ್ಭಗಳಲ್ಲಿ ನಿರ್ವಹಿಸುತ್ತಾನೆ. ಇಂತಹವುಗಳನ್ನು ಗಮನದಲ್ಲಿಟ್ಟುಕೊಂಡು ಈ ಬೈಯ್ಗುಳನ್ನು ಕಟ್ಟಿದ್ದಾರೆ ಇದರಿಂದ ವ್ಯಕ್ತವಾಗುವ ವಿಷಯವೆಂದರೆ ಬಡಗಿಯ ಕೆಲಸದ ನಿರ್ವಹಣೆ ಹೇಗಿರುತ್ತದೆ ಎಂಬುದು ಗಮನಕ್ಕೆ ಬರುತ್ತದೆ. ಇದನ್ನೇ ವ್ಯಂಗ್ಯಾರ್ಥವಾಗಿ ಅಂದರೆ ಹೇಳಿದ ಕೆಲಸವನ್ನು ಬಿಟ್ಟು ಬೇರೆ ಕೆಲಸದಲ್ಲಿ ನಿರತರಾದಗ ಇಂತಹ ವ್ಯಂಗ್ಯಾರ್ಥವಾದ ಬೈಯ್ಗುಳನ್ನು ಉಪಯೋಗಿಸುವುದು ಕಂಡುಬರುತ್ತದೆ.

೩. 'ಕಮ್ಮಾರಂದ್ರೆ ಮೂರು ಕಾಸಿನ ಕಬ್ಬಿಣಕ್ಕೆ ನಾಲಿಗೆ ಹಚ್ಕೋನು'

ಈ ಬೈಯ್ಗುಳಲ್ಲಿಯು ಕೂಡ ವೃತ್ತಿ ನಿರ್ವಹಣೆಯ ಚಾಣಕ್ಷತೆಯನ್ನು ಹೇಳಲಾಗಿದೆ. ಕಮ್ಮಾರನ ಕೆಲಸ ಕಬ್ಬಿಣದಿಂದ ವಸ್ತುಗಳನ್ನು ನಿರ್ಮಾಣ ಮಾಡುವುದು. ಕಮ್ಮಾರನ ಹತ್ತಿರ ರೈತಾಪಿ ಸಮುದಾಯಗಳು ಕೃಷಿ ಚಟುವಟಿಕೆ, ಗೃಹೋಪಯೋಗಿ ವಸ್ತುಗಳನ್ನು ನಿರ್ಮಾಣ ಮಾಡಿಸಿಕೊಳ್ಳಲು ಕಬ್ಬಿಣವನ್ನು ಕೊಡುತ್ತಾರೆ. ಈ ಕಬ್ಬಿಣದಿಂದ ವಸ್ತುಗಳನ್ನು ನಿರ್ಮಾಣ ಮಾಡಿಕೊಡುತ್ತಾನೆ. ಕೆಲಸದ ಸಂದರ್ಭದಲ್ಲಿ ಕಬ್ಬಿಣದ ತುಂಡುಗಳು ಉಳಿಯುವುದು ಸಹಜ ಈ ಕಬ್ಬಿಣದ ತುಂಡುಗಳನ್ನು ತೆಗೆದುಕೊಂಡು ಅವುಗಳಿಂದಲೇ ಚಿಕ್ಕಪುಟ್ಟ ವಸ್ತುಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡುತ್ತಾನೆ. ಈ ಉದ್ದೇಶದಿಂದಲೇ **'ಕಮ್ಮಾರಂದ್ರೆ ಮೂರು ಕಾಸಿನ ಕಬ್ಬಿಣಕ್ಕೆ ನಾಲಿಗೆ ಹಚ್ಕೋನು'** ಎಂದು ಕಟ್ಟಿದ್ದಾರೆ. ಇಲ್ಲಿ ನಾಲಿಗೆ ಹಚ್ಕೋನು ಎಂದರೆ ಬೆಂಕಿ ಹಚ್ಚುವನು ಎಂದರ್ಥ ಕೊಡುತ್ತದೆ. ಮೂರು ಕಾಸಿನ ಅಂದರೆ ಕಬ್ಬಿಣದ ತುಂಡುಗಳು ಎಂಬರ್ಥ. ಕೆಲಸವನ್ನು ಸರಿಯಾಗಿ ನಿರ್ವಹಿಸದೆ ಇದ್ದಾಗ ಈ ಬೈಯ್ಗುಳನ್ನು ಉಪಯೋಗಿಸುತ್ತಾರೆ. ಅಂದರೆ ಇದು ಕೆಲಸದ ಚಾಣಾಕ್ಷತೆಯನ್ನು ತಿಳಿಹೇಳುವುದಾಗಿದೆ.

೪. 'ದಣಿ ಹೇಳಾಟ ಬಡಗಿ ಮಾಡಾಟ'

ಇಲ್ಲಿ ವೃತ್ತಿ ಸಮುದಾಯ ಹಾಗೂ ವೃತ್ತಿಯೇತರ ಸಮುದಾಯಗಳ ನಡುವೆ ಕೆಲಸದ ನಿರ್ವಹಣೆಯ ರೂಪವನ್ನು ಇಲ್ಲಿ ಕಾಣಬಹುದು. ಬಡಗಿ ರೈತಾಪಿ ಸಮುದಾಯದವರು ಹೇಳಿದ ವಸ್ತುವನ್ನು ನಿರ್ಮಾಣ ಮಾಡಿಕೊಡುವುದು ಮಾತ್ರರ ಬಡಗಿಯ ಕೆಲಸ. ಅದರ ಕಾರ್ಯವೈಖರಿ ಅಂದರೆ ಅದನ್ನು ನೀವು ಏತಕ್ಕೆ ಉಪಯೋಗಿಸುತ್ತೀರಿ ಎಂಬೆಲ್ಲಾ ಪ್ರಶ್ನೆಗಳು ನಿರ್ಮಾಣ ಮಾಡುವ ಬಡಗಿಗೆ ಅನವಶ್ಯಕವಾಗಿರುತ್ತದೆ. ಉದಾ:- ಮಾಟ, ಮಂತ್ರ ಮಾಡುವ ಕೆಲವು ವರ್ಗಗಳು ತಮಗೆ ಬೇಕಾದ ಗೊಂಬೆ ಇತ್ಯಾದಿ ನಿರ್ಮಾಣಗಳನ್ನು ಮಾಡಿಸಿಕೊಳ್ಳುತ್ತಾರೆ. ಆದರೆ ಇಲ್ಲಿ ಕಾರ್ಯ ನಿರ್ವಹಿಸುವುದು ಇವರ ಮುಖ್ಯ ಉದ್ದೇಶ. ಹಾಗೂ ವೃತ್ತಿಯೇತರ ಸಮುದಾಯಗಳ ತಮಗೆ ಬೇಕಾದ ನಿರ್ಮಾಣದ ಬಗ್ಗೆ ಮಾಹಿತಿಯನ್ನು ಕೊಡುತ್ತಾರೆ. ಇದರ ಹಿನ್ನೆಲೆಯಲ್ಲಿಯೇ ನಿರ್ಮಾಣ ಮಾಡುತ್ತಾನೆ. ಸಮುದಾಯಗಳಿಂದ ಅದರ ಬಗ್ಗೆ

ಮಾಹಿತಿ ಪಡೆದು ಅವುಗಳನ್ನು ನಿರ್ಮಿಸುತ್ತಾರೆ. ಈ ಹಿನ್ನೆಲೆಯಲ್ಲಿ ಈ ಬೈಯ್ಗುಳ ಹುಟ್ಟಿಕೊಂಡಿದೆ. ಹಾಗೆಯೇ ಸಮುದಾಯಗಳಲ್ಲಿ ಏನಾದರು ಕೆಲಸ ಮಾಡುವ ಸಂದರ್ಭಗಳಲ್ಲಿ ಆ ಕೆಲಸ ಕುರಿತು ಅದರ ಬಗ್ಗೆ ಏನಾದರೂ ಸೂಚಿಸಿದಾಗ ಇಲ್ಲ ಈ ಕೆಲಸವನ್ನು ನಿರ್ವಹಿಸುವರು ಹೀಗೆ ಮಾಡು ಎಂದು ಹೇಳಿದ್ದಾರೆ. ಅದಕ್ಕಾಗಿಯೇ ನಾವು ಈ ರೀತಿಯಲ್ಲಿ ಮಾಡುತ್ತೇವೆ ಎಂದು ತಿಳಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ನಾವು ಈ ರೀತಿಯಲ್ಲಿ ಮಾಡಿದ್ದೇವೆ ಎಂದು ತಿಳಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಲ್ಲಿರುವರು **'ದಣಿ ಹೇಳಾಟ ಬಡಗಿ ಮಾಡಾಟ'** ಅದರಲ್ಲಿ ನಮ್ಮದೇನು ಎನ್ನುವ ಮೂದಲಿಕೆ ವ್ಯಕ್ತಪಡಿಸುವುದು ಕಾಣಬಹುದು.

೫. 'ಕಮ್ಮಾರನ ಬುದ್ದಿ ಕುಂಡಿಮ್ಯಾಗ ಮೂರು ಬರೆ'

ಇಲ್ಲಿ ಪಾಂಚಾಳರಲ್ಲಿ ಒಬ್ಬರಾದ ಕಮ್ಮಾರನನ್ನು ಉಪಯೋಗಿಸಿಕೊಂಡು ಈ ಬೈಯ್ಗುಳನ್ನು ಇತರೆ ಸಮುದಾಯದವರು ಕಟ್ಟಿದ್ದಾರೆ. ಇಲ್ಲಿ ಬುದ್ಧಿ ಎಂದರೆ ತಿಳಿವು, ಅರಿವು ಎಂಬರ್ಥ ಕೊಡುತ್ತಾದೆ. 'ಕುಂಡಿ' ಎಂದರೆ ಯಾವುದೇ ವಸ್ತುವಿನ ತಳಭಾಗ ಎಂದಾಗುತ್ತದೆ. 'ಬರೆ' ಎಂದರೆ ತೀಡು ಎಂಬರ್ಥವನ್ನು ಕೊಡುತ್ತದೆ.

ಕಮ್ಮಾರ ಕೆಲಸದ ಸಂದರ್ಭದಲ್ಲಿ ತಾನು ನಿರ್ಮಾಣ ಮಾಡುವ ವಸ್ತುವನ್ನು ತನ್ನ ಆಕೃತಿಗೆ ಬರುವ ತನಕ ಕುಲುಮೆಯಲ್ಲಿ ಕಬ್ಬಿಣವನ್ನು ಹದಮಾಡಿ ಅಡಿಗಲ್ಲಿನ ಮೇಲಿಟ್ಟು ಅದನ್ನು ತಿದ್ದುತಿರುತ್ತಾನೆ. ಅದು ತಾನು ಅಂದುಕೊಂಡು ಆಕೃತಿಗೆ ಬಂದಿದೆ ಅನಿಸಿದಾರೆ ಮಾತ್ರ ಆ ವಸ್ತು ಸಿದ್ಧವಾಯಿತು ಎಂದಾರ್ಥ. ಇಲ್ಲವಾದರೆ ಅದನ್ನು ಕಾಯಿಸುವುದು ಮತ್ತೆ ತಿದ್ದುವುದು ಈ ಪ್ರಕ್ರಿಯೆ ನಡೆಯುತ್ತಿರುತ್ತದೆ. ಈ ಹಿನ್ನೆಲೆಯನು ಉಪಯೋಗಿಸಿಕೊಂಡು ಬಳಸಿಕೊಳ್ಳಲಾಗಿದೆ.

೬. 'ಕೊಡ್ತಿ'

ಇದು ಬಡಗಿ ಕೆಲಸದಲ್ಲಿ ಉಪಯೋಗವಾಗುವ ಉಪಕರಣ ಇದು ಇದ್ದರೆ ಮಾತ್ರ ಅವರ ಕೆಲಸ ಸಾಗುತ್ತಿರುತ್ತದೆ. ಇದು ಉಳಿಯ ಮೇಲೆ ಬಡಿತ ಹಾಕಲು ಬಳಸುವ ಉಪಕರಣ. ಇದು ಬಾರ ಹಾಗೂ ದಪ್ಪವಾಗಿರುತ್ತದೆ. ಇದರ ಆಕೃತಿಯನ್ನು ವ್ಯಕ್ತಿಗೆ ಹೋಲಿಸಿ ಬಯ್ಯುತ್ತಾರೆ. ಅಂದರೆ ತಮ್ಮ ಮಕ್ಕಳಿರಬಹುದು ಇಲ್ಲವೆ ಕೆಲಸಕ್ಕೆ ಬಂದಂತಹ ಆಳುಗಳಿರಬಹುದು. ಇವರಿಗೆ ಹೇಳಿದ ಕೆಲಸವನ್ನು ಸರಿಯಾಗಿ ನಿರ್ವಹಿಸದಿರುವ ಸಂದರ್ಭದಲ್ಲಿ ಈ ಪದವನ್ನು ಉಪಯೋಗಿಸಿ ಬಯ್ಯುತ್ತಾರೆ. ಉದಾಹರಣೆಗೆ **'ನೋಡಾಕ ಕೊಡ್ತಿಯಂಗ ಕಾಣ್ತಿಯ ನಿನ್ನ ಕೈಲಿ ಏನು ಕೆಲಸ ಮಾಡಕ ಆಗಲ್ಲ'** ಎಂದು ಉಪಯೋಗಿಸಿ ಬೈಯುವುದನ್ನು ಕಾಣಬಹುದು. ಈ ಪದವನ್ನು ವ್ಯಂಗ್ಯವಾಗಿ ಹಿಯ್ಯಾಳಿಸಲು ಇತ್ಯಾದಿಯಾಗಿ ಬಳಕೆಯಾಗುವುದನ್ನು ಕಾಣಬಹುದು.

೭. 'ಗರಗಸ'

ಇದು ಬಡಗಿ ವೃತ್ತಿಯಲ್ಲಿ ಉಪಯೋಗವಾಗುವ ಉಪಕರಣ. ಬಡಗಿ ವೃತ್ತಿಯ ಸಂದರ್ಭದಲ್ಲಿ ತಾವು ಮಾಡಬೇಕಾದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಟ್ಟಿಗೆಯನ್ನು ಕೊಯ್ದುಕೊಳ್ಳಲು ಗರಗಸವನ್ನು

ಬಳಸಲಾಗುತ್ತದೆ. ಅಂದರೆ ಇದರ ಕೆಲಸ ಕಟ್ಟಿಗೆಯನ್ನು ಕೊಯ್ಯುವುದು. ಈ ಕೊಯ್ಯುವ ಕ್ರಿಯೆಯನ್ನು ಮಾತಿಗೆ ಹೋಲಿಸಿ ಬಳಕೆ ಮಾಡಲಾಗುತ್ತದೆ. ಯಾವುದೇ ವಿಷಯವನ್ನು ವ್ಯಕ್ತಿ ನಾಲ್ಕಾರು ವ್ಯಕ್ತಿಗಳ ಮುಂದೆ ವಿಷಯವನ್ನು ಮಾತನಾಡುತ್ತಿರುವಾಗ ಅದಕ್ಕೆ ಸಂಬಂಧಿಸಿದಂತೆ ಸೂಕ್ಷ್ಮವಾಗಿ ಹೇಳಿ ಆ ವಿಷಯವನ್ನು ನಿಲ್ಲಿಸಬೇಕು. ಆದರೆ ಆ ವಿಷಯವನ್ನು ಬಿಟ್ಟು ಬೇರೆ ಯಾವುದು ವಿಷಯವನ್ನು ಹೇಳುತ್ತ ಅಲ್ಲಿರುವ ವ್ಯಕ್ತಿಗಳಿಗೆ ತಲೆನೋವನ್ನುಂಟು ಮಾಡುತ್ತಾರೆ ಅಂತಹ ಸಂದರ್ಭದಲ್ಲಿ ಈ ವೃತ್ತಿ ಉಪಕರಣ ಪದವಾದ ಗರಗಸವನ್ನು ಅವರಿಗೆ ಹೋಲಿಕೆಯಾಗಿ ಬಳಸಿ ಬೈಯುವುದನ್ನು ಕಾಣುತ್ತೇವೆ ಉದಾಹರಣೆಗೆ **'ದೊಡ್ಡ ಕೊರುಕ, ಕೊಯ್ಯಾಕ ಹತ್ತಿದರೆ ಬಿಡುದೆ ಇಲ್ಲ'** ಎಂದು ಆ ವ್ಯಕ್ತಿಯು ಅನುಪ ಸ್ಥಿತಿಯಲ್ಲಿದ್ದಾಗ ಬೈಯುವುದನ್ನು, ಮುದಲಿಸುವುದನ್ನು ಕಾಣಬಹುದು.

೮. 'ಉಳಿಮಸಿ'

ಉಳಿಮಸಿ ಎನ್ನುವ ಪದ ಜಗಳಕ್ಕೆ ಆಹ್ವಾನವನ್ನು ಮಾಡಿಕೊಡುತ್ತದೆ. ಈ ಪದವನ್ನು ಬಳಸುವುದು ಬಡಗಿ ವೃತ್ತಿಯಲ್ಲಿ. ಬಡಗಿ ಕಟ್ಟಿಗೆಯಲ್ಲಿ ಕೆಲಸ ಮಾಡಲು ಉಳಿಗಳು ಹರಿತವಾಗಿರಬೇಕು. ಉಳಿಗಳು ಹರಿತವಾಗಬೇಕಾದರೆ ಅವುಗಳನ್ನು ಸಾಣೆಕಲ್ಲು (ಮಸಗಲ್ಲು)ಗೆ ಮಸೆಯಬೇಕು. ಈ ಮಸೆಯುವ ಕ್ರಿಯೆಯಿಂದ ಉಳಿಯ ಬಾಯಿ ಹರಿತವಾಗುತ್ತದೆ. ನಂತರ ಕಟ್ಟಿಗೆಯಲ್ಲಿ ಕೆಲಸ ಮಾಡಬಹುದು. ಇಲ್ಲಿ ಮಸೆಯುವ ಕ್ರಿಯೆ ನಡೆಯುತ್ತದೆ. ಅಂದರೆ ಉಳಿಯನ್ನು ಸಾಣೆಕಲ್ಲುಗೆ ತಿಕ್ಕುವುದು. ಹಾಗೆಯೇ ಈ ಕ್ರಿಯೆಯನ್ನು ಹೊರಗಿನ ಸಮಾಜದವರು ಜಗಳ ಆಹ್ವಾನ ನೀಡಲು ಪದವನ್ನು ಬಳಸಲು ಉಪಯೋಗಿಸುವುದನ್ನು ಕಾಣಬಹುದು. ಎರಡು ಗುಂಪುಗಳ ನಡುವೆ ಜಗಳ ಸಂಭವಿಸಿದಾಗ ಮೂರನೆಯ ವ್ಯಕ್ತಿ ಬಂದು ತನ್ನ ಗುಂಪಿನ ಕಡೆಗೆ ನಿಂತು **'ನೀವು ಅಂದ್ರೆ ಅವರ್ರು ಉಳಿಮಸಿದಂಗ ಮಡ್ತಾರ, ಅವರ್ನ ಒಂದು ಕೈ ನೋಡೆ ಬೀಡೋಣ ವಿನ್ ಆಗುತ್ತೈತಿ'** ಎಂದು ಹೇಳುವುದನ್ನು ಕೇಳಬಹುದು. ಈ ಹಿನ್ನೆಲೆಯಲ್ಲಿ 'ಉಳಿಮಸಿ' ಎಂಬ ಪದವು ಬಳಕೆಯಾಗುತ್ತದೆ. ಅಂದರೆ ಕಟ್ಟಿಗೆಯಲ್ಲಿ ಕೆಲಸ ಮಾಡಲು ಉಳಿಯ ಬಾಯಿ ಮೊಂಡು ಆದ ತಕ್ಷಣವೇ ಮಸೆದು ಕಟ್ಟಿಗೆಯಲ್ಲಿ ಬಡಗಿ ಕೆಲಸ ಮಾಡುತ್ತಾನೆ. ಹಾಗಾದರೆ ಮಾತ್ರ ಕೆಲಸ ಮಾಡಲು ಸಾಧ್ಯ. ಹಾಗೆಯೇ ಯಾವಾಗಲೂ ಜಗಳಕ್ಕೆ ಆಹ್ವಾನವನ್ನು ಕೂಡುವುದೆ ಅವನ ಕೆಲಸವಾಗಿರುತ್ತದೆ ಎಂದು ತಿಳಿಸುತ್ತದೆ.

೪.೨.೫. ಭಾಷಾ ಬಳಕೆ ಮತ್ತು ಆಚರಣೆ ನಂಬಿಕೆಗಳು

ಒಂದು ಬೃಹತ್ ಭಾಷಿಕ ಸಮುದಾಯ ಪ್ರಾದೇಶಿಕ, ಸಾಮಾಜಿಕವಾಗಿ ವಿವಿಧ ಕಿರುಘಟಕಗಳಲ್ಲಿ ವಿಭಜನೆಗೊಂಡಿರುತ್ತದೆ. ಇಂತಹ ಸಾಮಾಜಿಕ ವಿಭಜನೆಗೆ ಕಾರಣ ಸಮುದಾಯಗಳು ಪರಂಪರೆಯಿಂದ ನಂಬಿಕೊಂಡು ಆಚರಿಸಿಕೊಂಡು ಬಂದ ತಮಗೆ ವಿಶಿಷ್ಟವಾದ ಜೀವನ ವಿಧಾನ, ವೃತ್ತಿ, ನಂಬಿಕೆ ಆಚರಣೆಗಳು ಕಾರಣವಾಗಿರುತ್ತವೆ. ಈ ಕಾರಣಗಳಿಂದ ಒಂದು ಸಮುದಾಯವನ್ನು ಬೇರೊಂದು ಸಮುದಾಯದಿಂದ ಪ್ರತ್ಯೇಕಿಸಲು ಸಾಧ್ಯವಾಗುತ್ತದೆ. ಈ ಪ್ರತ್ಯೇಕತೆಗೆ ಕಾರಣವಾಗುವ ಅಂಶಗಳು ಭಾಷಾಬಳಕೆಯ ವಿಶಿಷ್ಟ ರಚನೆಗಳಲ್ಲಿಯೂ ಬಿಂಬಿತವಾಗಿರುತ್ತವೆ. ಅಂತಹ ಆಚರಣಾತ್ಮಕ, ನಂಬಿಕೆ, ವೃತ್ತಿಗೆ ಸಂಬಂಧಿಸಿದ ಭಾಷಿಕರಚನೆಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಒಂದು ಜನಸಮುದಾಯದ ವೃತ್ತಿಯಂತೆ ಆಚರಣೆ, ನಂಬಿಕೆ, ಬದುಕಿನ ವಿಧಾನಗಳು ಆ ಸಮುದಾಯದ ಭಾಷಾ ಬಳಕೆಗೆ ವಿಶಿಷ್ಟ ಅನನ್ಯತೆಯನ್ನು ತಂದುಕೊಡುತ್ತವೆ. ಒಂದು ಭಾಷೆಯ ಬಳಕೆಯ ಸಾಮಾಜಿಕ ವ್ಯವಹಾರಗಳಲ್ಲಿ ಭಾಷಾರೂಪಗಳಿಗೆ ಒಂದು ಅರ್ಥವಿದ್ದರೆ ಅದೇ ನಿರ್ದಿಷ್ಟ ಆಚರಣಾತ್ಮಕ ಸಂದರ್ಭ, ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ಬೇರೊಂದು ಅರ್ಥವನ್ನು ಪಡೆದುಕೊಳ್ಳುತ್ತವೆ. ಸಮುದಾಯಗಳ ಸಾಂಸ್ಕೃತಿಕ ನೆಲೆಗಳನ್ನು ಗ್ರಹಿಸಲು ಅರ್ಥ ಮಾಡಿಕೊಳ್ಳಲು ಅವುಗಳನ್ನು ಅಭಿವ್ಯಕ್ತಿಸುವ ಭಾಷಿಕ ಆಕರಗಳೂ ಮುಖ್ಯವಾಗಿರುತ್ತವೆ. ಉದಾಹರಣೆಗೆ:- ಸಾಮಾನ್ಯ ವ್ಯಾವಹಾರಿಕ ಬಳಕೆಯಲ್ಲಿರುವ 'ನೀರು' ದೇವಸ್ಥಾನದ ಆವರಣದಲ್ಲಿ 'ತೀರ್ಥ' ವಾಗುತ್ತದೆ. ಹಾಗೆಯೇ ತಿಂಡಿ ಅಥವಾ ಊಟ ಪ್ರಸಾದವೆನಿಸಿಕೊಳ್ಳುತ್ತದೆ. ಹೀಗೆ ಪಾಂಚಾಳರ ವೃತ್ತಿಯೇತರವಾದ ವಿವಿಧ ಸಂದರ್ಭಗಳ ಆಚರಣೆಯಲ್ಲಿ ಬಳಕೆಯಾಗುವ ಭಾಷಿಕ ವಿವರಗಳನ್ನು ಗಮನಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಭಾಷೆ ಸಂಪೂರ್ಣವಾಗಿ ಮಾನವಾವಲಂಬಿ. ಸಮುದಾಯದ ಇಚ್ಛೆಗೆ ತಕ್ಕಂತೆ ಅದು ರೂಪುಗೊಳ್ಳುತ್ತಾ ಹೋಗುತ್ತದೆ. ಆದ್ದರಿಂದಲೇ ಭಾಷೆಗೆ ಅಸ್ತಿತ್ವಸಿಗುವುದು ಅದನ್ನು ದುಡಿಸಿಕೊಳ್ಳುವ ವ್ಯಕ್ತಿಗಳಿಂದ. ಸಾಮಾನ್ಯವಾಗಿ ಒಂದು ಸಮುದಾಯದ ವೃತ್ತಿಭಾಷೆ ಅಂದರೆ ವೃತ್ತಿಪದಗಳು ಆ ಸಮುದಾಯದ ವೈಶಿಷ್ಟ್ಯಗಳನ್ನು ಸಹಜವಾಗಿ ಅವು ತಿಳಿಸುವಂತಹವುಗಳಾಗಿವೆ. ಇಂತಹ ವೃತ್ತಿ ಪದಗಳು ಸಾಮಾಜಿಕ ವಲಯದಲ್ಲಿಯೂ ತಮ್ಮ ವೃತ್ತಿವಲಯಾದಾಚೆಯೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತವೆ. ಈ ವೃತ್ತಿ ಪದಗಳ ಮೂಲಕ ಒಬ್ಬ ವ್ಯಕ್ತಿಯ ಸ್ವಭಾವವನ್ನು ಹಿಯಾಳಿಸಲು, ಪ್ರಶಂಸಿಸಲು ಇತ್ಯಾದಿ ಕಾರ್ಯಗಳನ್ನು ಈ ವೃತ್ತಿ ಪದಗಳಿಗೆ ಹೋಲಿಸಿ ಬಳಕೆ ಮಾಡುತ್ತಾರೆ. ಇಂತಹ ಪದಗಳು ಪಾಂಚಾಳ ವೃತ್ತಿಯ ಮೂಲದಿಂದ ಬಂದಂತಹವುಗಳಾಗಿವೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. **ಅಡಿಗಲ್ಲು**:- ಪಾಂಚಾಳರು ಲೋಹದ ವಸ್ತುಗಳನ್ನಿಟ್ಟು ಬಡಿಯಲು ಆಸರೆಯಾಗಿ ಉಪಯೋಗಿಸುವ ಕಬ್ಬಿಣದ ಹುಂಡಿ.

ಸಾಮಾಜಿಕ ವಲಯದಲ್ಲಿ ಕಟ್ಟಡಗಳ ಅಡಿಪಾಯ ಹಾಕುವ ಸಂದರ್ಭದಲ್ಲಿ ಈ ಪದವನ್ನು ಬಳಕೆ ಮಾಡಲಾಗುತ್ತದೆ. ಉದಾಹರಣೆಗೆ ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾಲಯದ **ಅಡಿಗಲ್ಲು** ಸಮಾರಂಭವನ್ನು ನೆರವೇರಿಸಿದರು. ಅಂದರೆ ಕಟ್ಟಡವನ್ನು ಕಟ್ಟಲಿಕ್ಕೆ ಮೊದಲು ಬುನಾದಿಯನ್ನು ಹಾಕಬೇಕು. ಈ ಬುನಾದಿಯೇ **ಅಡಿಗಲ್ಲು** ಎಂದು ಉಪಯೋಗಿಸಲಾಗುತ್ತದೆ.

ಪಾಂಚಾಳರಲ್ಲಿ ಅಡಿಗಲ್ಲು ಇಲ್ಲದೆ ತಮ್ಮ ಲೋಹದ ಕೆಲಸವನ್ನು ನಿರ್ವಹಿಸಲು ಸಾಧ್ಯವಿಲ್ಲ ಅಂದರೆ ಇದು ಅವರು ಕೆಲಸ ನಿರ್ವಹಿಸಲಿಕ್ಕೆ ಬುನಾದಿ. ಹಾಗೆಯೇ ಕಟ್ಟಡವನ್ನು ಕಟ್ಟಲು ಬುನಾದಿಯಿಂದಲೇ ಪ್ರಾರಂಭಿಸಬೇಕು. ಬುನಾದಿ ಇಲ್ಲದಿದ್ದರೆ ಕಟ್ಟಡ ಭದ್ರಗೊಳ್ಳುವುದಿಲ್ಲ. ಹೀಗೆ ಸಾಮಾಜಿಕ ವಲಯದಲ್ಲಿ ಪಾಂಚಾಳರ ವೃತ್ತಿ ಪದವನ್ನು ಉಪಯೋಗಿಸುವುದನ್ನು ಕಾಣಬಹುದು. ಬುನಾದಿಯನ್ನೆ **ಅಡಿಗಲ್ಲು** ಎಂದು ಕರೆಯಲಾಗುತ್ತದೆ.

ಪದ ಪ್ರಯೋಗ:- ಮಾನ್ಯ ಸಚಿವರು ಕನ್ನಡ ವಿಶ್ವವಿದ್ಯಾಲಯದ ಅಡಿಗಲ್ಲು ಸಮಾರಂಭವನ್ನು ನೆರವೇರಿಸಿದರು.

೨. ಕೊಡ್ತಿ:- ಪಾಂಚಾಳರು ಕೆಲಸ ಮಾಡುವಾಗ ಉಳಿಯ ಮೇಲೆ ಏಟು ಹಾಕಲು ಬಳಸುವ ಉಪಕರಣ. ಇದು ಭಾರ ಹಾಗೂ ದಪ್ಪವಾಗಿರುತ್ತದೆ.

ಸಾಮಾಜಿಕ ವಲಯದಲ್ಲಿ ಈ ಪದವನ್ನು ವ್ಯಕ್ತಿಯ ಆಳನ್ನು ನೋಡಿ ಅವನನ್ನು ಹಿಯಾಳಿಸಲು ಹೆಚ್ಚಾಗಿ ಈ ಪದವನ್ನು ಉಪಯೋಗಿಸಲಾಗುತ್ತದೆ. ಅಂದರೆ ವ್ಯಕ್ತಿ ತುಂಬ ದಪ್ಪಗೆ ಇದ್ದರೆ **'ಕೊಡ್ತಿ ಇದ್ದಂಗೆ ಇದಾನೆ ನೋಡು'** ಎಂದು ಸರ್ವೇ ಸಾಮಾನ್ಯವಾಗಿ ಪ್ರಯೋಗಿಸುತ್ತಾರೆ.

ಪದ ಪ್ರಯೋಗ:- ಕೊಡ್ತಿ ಇದ್ದಂಗ ಇದೀಯ ಈ ಚೀಲ ಎತ್ತಕ ಆಗಲ್ಲ ನೀನಾಗೆ.

೩. ಗರಗಸ:- ಪಾಂಚಾಳರು ಕಟ್ಟಿಗೆ ಕೆಲಸ ಮಾಡುವ ಸಂದರ್ಭದಲ್ಲಿ ಕಟ್ಟಿಗೆಯನ್ನು ಕೊಯ್ಯಲು ಈ ಉಪಕರಣವನ್ನು ಬಳಸುತ್ತಾರೆ.

ಯಾವುದೇ ವಿಷಯವನ್ನು ಸಾಮಾಜಿಕವಾಗಿ ವ್ಯಕ್ತಿ ನಾಲ್ಕಾರು ವ್ಯಕ್ತಿಗಳ ಮುಂದೆ ಮಾತನಾಡುತ್ತಿರುವಾಗ ಆ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ಷ್ಮವಾಗಿ ಹೇಳುವುದನ್ನು ಬಿಟ್ಟು ಅದರ ಬಗ್ಗೆ ಹೆಚ್ಚು ಮಾತನಾಡಿದಾಗ ಅಥವಾ ವಿಷಯವನ್ನು ಬಿಟ್ಟು ಬೇರೆ ಏನನ್ನೂ ಮಾತನಾಡಿದಾಗ ಇತರರು ಆ ವ್ಯಕ್ತಿಯ ಬಗ್ಗೆ **'ಗರಗಸದಂತೆ'** ಕೊಯ್ಯುತ್ತಾನೆ ಯಾವಾಗ ಮಾತು ಮುಗಿಸುತ್ತಾನೋ ಎಂದು ವ್ಯಂಗ್ಯವಾಗಿ ಮಾತನಾಡಿಕೊಳ್ಳುತ್ತಾರೆ.

ಇಲ್ಲಿ ವ್ಯಕ್ತಿಯು ಹೆಚ್ಚು ಮಾತನಾಡುವುದಕ್ಕೆ **'ಗರಗಸ'**ದ ಹೋಲಿಕೆಯನ್ನು ಕೊಡಲಾಗಿದೆ. ಗರಗಸದ ನಿರ್ದಿಷ್ಟಕೆಲಸ ಕಟ್ಟಿಗೆಯನ್ನು ಕೊಯ್ಯುವುದು. ಅದೇ ಕೆಲಸವನ್ನು ವ್ಯಕ್ತಿಯ ಮಾತಿಗೆ ಅಳವಡಿಸಿ ಈ ಪದವನ್ನು ಇಲ್ಲಿ ಉಪಯೋಗಿಸುತ್ತಾರೆ.

ಪದ ಪ್ರಯೋಗ:- ಗರಗಸಬಂದ ಕೊಯ್ಯುತ್ತಾನೆ ಮೊದಲು ನಾವು ಇಲ್ಲಿಂದ ತಪ್ಪಿಸಿಕೊಬೇಕು.

೪. ಬಾಚಿ:- ಪಾಂಚಾಳರು ಕಟ್ಟಿಗೆಯನ್ನು ಕೆತ್ತಲಿಕ್ಕೆ ಈ ಉಪಕರಣವನ್ನು ಬಳಸುತ್ತಾರೆ.

ಈ ಪದವನ್ನು ಸಾಮಾಜಿಕ ವಲಯದಲ್ಲಿ ಬಳಸಲಾಗುತ್ತದೆ. ಬಾಚಿಯಿಂದ ಬಡಗಿ ತನ್ನ ಆಕೃತಿಗೆ ಬೇಕಾದ ಹಾಗೆ ಕಟ್ಟಿಗೆಯನ್ನು ಕೆತ್ತಿಕೊಳ್ಳುತ್ತಾನೆ. ಕೆತ್ತಲಿಕ್ಕೆ ಬಾಚಿಯು ಆರಿತವಾಗಿರಬೇಕು. ಹಾಗಾದರೆ ಮಾತ್ರ ಕಟ್ಟಿಗೆಯನ್ನು ಕೆತ್ತಲಿಕ್ಕೆ ಸಾಧ್ಯ. ಅದು ಅರಿತವಿಲ್ಲದಿದ್ದರೆ ಬಡಗಿಯು ಕಟ್ಟಿಗೆಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ. ಹಾಗೆಯೇ ಈ ಪದವನ್ನು ಹೆಚ್ಚಾಗಿ ಚಿಕ್ಕ ಮಕ್ಕಳ ಹಲ್ಲುಗಳಿಗೆ ಹೋಲಿಸಿ ಮಾತನಾಡಲಾಗುತ್ತದೆ. ಮಗು ಸಿಟ್ಟು ಬಂದಾಗ ತಾಯಿ, ತಂದೆ, ಸಂಬಂಧಿಕರು ಇತರೇ ಯಾರೆ ಇರಬಹುದು ಅವರನ್ನು ತನ್ನ ಹಲ್ಲುಗಳಿಂದ ಕಡಿಯುತ್ತಾನೆ. ಅವಾಗ ಕಚ್ಚಿದ ಜಾಗದ ಮೇಲೆ ಕೈ ಸವರತ್ತು ಗಾಯವನ್ನು ನೋಡಿಕೊಂಡು ಅವನ ಹಲ್ಲು **'ಬಾಚಿ'** ಇದ್ದಂಗ ಇದಾವೆ ಅವನ್ನ ನಾವು ತಡುವುಬಾರ್ದು. ಅವನು ಮತ್ತೆ ಕಡೆಚಾಳಿ ಕಲಿತು ಬಿಡುತ್ತಾನೆ ಎಂದು ಮಾತನಾಡಿಕೊಳ್ಳುತ್ತೇವೆ. ಅಂದರೆ ಇಲ್ಲಿ ಚರ್ಮದ ಮೇಲೆ ಕಡಿದಾಗ ಆ ಮಗುವಿನ ಹಲ್ಲುಗಳಿಗೆ ಬಾಚಿಯನ್ನು ಹೋಲಿಸಲಾಗುತ್ತದೆ. ಹೋಲಿಸುವ ಉದ್ದೇಶ ಬಾಚಿಯಷ್ಟೇ ಅವನು ಹಲ್ಲು ಹರಿತ (ಚೂಪು)ವಾಗಿವೆ ಎಂದು ಅರ್ಥಗೋಚರಿಸುತ್ತದೆ.

ಹಾಗೆಯೇ ಈ ಪದವನ್ನು ಇನ್ನೊಂದು ಅರ್ಥದಲ್ಲಿ ಬಳಸಲಾಗುತ್ತದೆ. ಮಗುವಿನ ಹಲ್ಲು ದೊಡ್ಡದಾಗಿ ಬೆಳೆದಿದ್ದರೆ ಅವುಗಳನ್ನು ಕುರಿತು ಇವನ ಹಲ್ಲು **'ಬಾಚಿ'** ಇದ್ದಾಂಗ ಬೆಳೆದ್ಯಾವ ನೋಡು ಎಂದು ಮಾತನಾಡ ತೊಡಗುತ್ತಾರೆ.

ಪದ ಪ್ರಯೋಗ:- ಈ ಹುಡುಗನ ಹಲ್ಲು **ಬಾಚಿಯುಂಗ** ಇವೆ.

೫. ಬೈರ್ಗಿ:- ಪಾಂಚಾಳರು ಕಟ್ಟಿಗೆಯಲ್ಲಿ ರಂಧ್ರವನ್ನು ಕೊರೆಯಲು ಈ ಉಪಕರಣವನ್ನು ಬಳಸಲಾಗುತ್ತದೆ.

ಈ ಪದವನ್ನು ಸಾಮಾಜಿಕ ವಲಯದಲ್ಲಿ ಹೆಚ್ಚು ಮಾತನಾಡುವ ವ್ಯಕ್ತಿಗೆ ಹೋಲಿಸಿ ಪದವನ್ನು ಬಳಕೆ ಮಾಡಲಾಗುತ್ತದೆ. ಈ ಉಪಕರಣವನ್ನು ಬಡಗಿಯು ಕಟ್ಟಿಗೆಯಲ್ಲಿ ರಂಧ್ರ ಕೊರೆಯಲು ಉಪಯೋಗಿಸುತ್ತಾನೆ. ಹಾಗೆಯೇ ವ್ಯಕ್ತಿ ನಾಲ್ಕಾರು ವ್ಯಕ್ತಿಗಳ ಮುಂದೆ ಮಾತನಾಡುವಾಗ ಯಾವುದೇ ವಿಷಯದ ಬಗ್ಗೆ ನೇರವಾಗಿ ಹೇಳದೆ ಸುತ್ತಿ ಬಳಸಿ ಮಾತನಾಡುತ್ತಾನೆ. ಅಂದರೆ ವಿಷಯದ ಬಗ್ಗೆ ತಿಳಿದುಕೊಳ್ಳದೆ ಏನೇನೊ ಹೇಳುತ್ತಿರುತ್ತಾನೆ. ಆವಾಗ ಇತರರು ಆ ವ್ಯಕ್ತಿಯ ಬಗ್ಗೆ **'ಬೈರ್ಗಿ ಕೊರೆ'**ದಂಗ ಕೊರೆಯುತ್ತಾನೆ ಎಂದು ವ್ಯಂಗವಾಗಿ ಮಾತನಾಡಿಕೊಳ್ಳುತ್ತಾರೆ.

ಇಲ್ಲಿ ವ್ಯಕ್ತಿಯು ಹೆಚ್ಚು ಮಾತನಾಡುವುದಕ್ಕೆ ಬೈರ್ಗಿಗೆ ಹೋಲಿಕೆಯನ್ನು ಕೊಡಲಾಗಿದೆ. ಬೈರ್ಗಿಯ ನಿರ್ದಿಷ್ಟ ಕೆಲಸ ಕಟ್ಟಿಗೆಯಲ್ಲಿ ರಂಧ್ರವನ್ನು ಕೊರೆಯುವುದು. ಅದೇ ಕೆಲಸವನ್ನು ವ್ಯಕ್ತಿಯ ಮಾತಿಗೆ ಅಳವಡಿಸಿ ಈ ಪದವನ್ನು ಉಪಯೋಗಿಸಲಾಗಿದೆ.

ಪದ ಪ್ರಯೋಗ:- ಅವನು **ಬೈರ್ಗಿಕೊರದಂಗ** ಕೊರಿತಾನ ನಾ ಹೋಕಿನಿ.

೬. ಬ್ಲೇಡು (ಅಲಗು):- ಕಟ್ಟಿಗೆಯ ಒರಟಾದ ಮೇಲ್ಮೈಯನ್ನು ಉಜ್ಜಿ ನಯಗೊಳಿಸಲು ಉಜ್ಜುಗೊರಡುನಲ್ಲಿ ಅಳವಡಿಸಿರುವ ಒಂದು ಉಪಕರಣ. ಇದು ಇದ್ದರೆ ಮಾತ್ರ ಒರಟಾದ ಕಟ್ಟಿಗೆಯನ್ನು ನಯಗೊಳಿಸಬಹುದು ಇಲ್ಲದಿದ್ದರೆ ಸಾಧ್ಯವಿಲ್ಲ. ಬ್ಲೇಡ್‌ನ ಕೆಲಸ ನಯಗೊಳಿಸುವುದು.

ಈ ಪದವು ಸಾಮಾಜಿಕ ವಲಯದಲ್ಲಿ ವ್ಯಕ್ತಿಯನ್ನು ಮೋಸಗೊಳಿಸುವುದಕ್ಕೆ ಬಳಸಲಾಗುವುದು. ವ್ಯಕ್ತಿಯ ಒಳ್ಳೆಯ ನಯ ನಾಜೂಕಿನಿಂದ ವ್ಯಕ್ತಿಯ ಜೊತೆ ಮಾತನಾಡುತ್ತ ತಾವು ಏನು ಖರ್ಚು ಮಾಡದೆ ಎಲ್ಲ ಖರ್ಚನ್ನು ಆ ವ್ಯಕ್ತಿಯ ಮೇಲೆ ಹಾಕಿ ನಯವಾಗಿ ಜಾರಿಕೊಳ್ಳುವುದಕ್ಕೆ ಈ ಪದವನ್ನು ಬಳಸುತ್ತಾರೆ. ಇಲ್ಲಿ ಈ ಪದವು ಬೇರೆಯವರು ತನಗೆ **ಮೋಸ-ವಂಚನೆ** ಮಾಡಿದರು ಎಂಬ ಅರ್ಥವನ್ನು ಕೊಡುತ್ತದೆ.

ಪದ ಪ್ರಯೋಗ:- ಇವತ್ತು ನನಗೆ ಸರಿಯಾಗಿ **ಬ್ಲೇಡು** ಬಿತ್ತು.

೭. ಮಸಗಲ್ಲು:- ಪಾಂಚಾಳರು ತಮ್ಮ ಉಪಕರಣವನ್ನು ಹರಿತ ಮಾಡಿಕೊಳ್ಳಲು ಉಪಯೋಗಿಸುವ ಒಂದು ಸಾಧನ. ಅಂದರೆ ಈ ಕಲ್ಲಿನ ಮೇಲೆ ನೀರನ್ನು ಹಾಕಿ ತಮ್ಮ ಉಪಕರಣವನ್ನು ಆ ಕಲ್ಲಿಗೆ ತಿಕ್ಕುತ್ತಾರೆ. ತಿಕ್ಕುವುದರಿಂದ ಲೋಹದ ಉಪಕರಣಗಳು ಹರಿತ (ಚೂಪು)ವಾಗುತ್ತವೆ. ಇಲ್ಲಿ ಮಸಗಲ್ಲು ಹಾಗೂ ಉಪಕರಣಗಳನ್ನು ಒಂದಕ್ಕೊಂದು ತಿಕ್ಕಲಿಕ್ಕೆ ಪ್ರಾರಂಭಿಸಿದಾಗ ಉಪಕರಣ ಮಾತ್ರ ಹರಿತವಾಗುತ್ತದೆ. ಮಸಗಲ್ಲು ಯಥಾಸ್ಥಿತಿಯಲ್ಲಿರುತ್ತೆ.

ಹಾಗೆಯೇ ಈ ಮಸಗಲ್ಲು ಎಂಬ ಪದವನ್ನು ಚೂರುಕಾಗಿ (ಮಬ್ಬು ಇರುವ ವ್ಯಕ್ತಿ) ಕೆಲಸ ಮಾಡದೆ ಇರುವ ವ್ಯಕ್ತಿಗೆ **'ಮಸಗಲ್ಲು ಇದ್ದಂಗ ಇದಿಯಾ'** ಎಂದು ಬೈಯುತ್ತಾರೆ. ಈ ಮಸಗಲ್ಲುನ ಉದ್ದ ಕೇವಲ ಒಂದು ಅಡಿ ಮಾತ್ರ. ಉಪಕರಣವನ್ನು ಆ ಒಂದು ಅಡಿಯಲ್ಲಿಯೆ ತಿಕ್ಕಬೇಕು. ಹಾಗಾದರೆ ಮಾತ್ರ ಉಳಿಯು ಹರಿತವಾಗುವುದು. ಹಾಗೆಯೇ ವ್ಯಕ್ತಿಯು ಕೂಡ ಕೆಲಸ ಮಾಡದೆ ಕುಂತ ಜಾಗವನ್ನು ಬಿಡದೆ ಅಲ್ಲಿಂದಲೇ ಎಲ್ಲ ಕೆಲಸವನ್ನು ಮಾಡಲು ಪ್ರಯತ್ನಿಸುತ್ತಾನೆ. ಆ ಸಂದರ್ಭದಲ್ಲಿ ಈ ಪದವನ್ನು ಬಳಸಲಾಗುತ್ತದೆ.

ಪದಪ್ರಯೋಗ :- **ಮಸಗಲ್ಲ ನಂತವನೆ ಸ್ವಲ್ಪ ಅಡ್ಡಾಡಿ ಕೆಲಸ ಮಾಡೊದು ಕಲಿ.**

ಭಾಷಾ ಬಳಕೆ ಮತ್ತು ಆಚರಣೆ ನಂಬಿಕೆಗಳು

ಅರಿಶಿಣಶಾಸ್ತ್ರ :- ವಧುವರರಿಗೆ ಅರಿಶಿಣ ಹಚ್ಚಿ, ಕೊರೂಟಕ್ಕೆ ಸಿದ್ಧತೆ ಮಾಡುವುದನ್ನು ಅರಿಶಿಣಶಾಸ್ತ್ರ ಎಂದು ಹೇಳಲಾಗುತ್ತದೆ.

ಪ್ರಯೋಗ :- ನಮ್ಮ ಸಮುದಾಯದಾಗ ಮದುವೆ ಹಿಂದಿನ ದಿವಸ **ಅರಿಶಿಣಶಾಸ್ತ್ರ** ಮಾಡುತ್ತೀವಿ.

ಅಕ್ಷತೆಕಾಳು :- ಅಕ್ಕಿಕಾಳನ್ನು ಕುಂಕುಮ ಹಾಗೂ ಅರಿಶಿಣದಲ್ಲಿ ಬೆರೆಸಿರುತ್ತಾರೆ. ಇದನ್ನು ವಧುವರರಿಗೆ ಆರ್ಶೀವದಿಸಲು ಉಪಯೋಗಿಸುತ್ತಾರೆ.

ಪ್ರಯೋಗ :- ವಧುವರರಿಗೆ **ಅಕ್ಷತೆಕಾಳು** ಹಾಕಿ ಆರ್ಶೀವದಿಸಿ.

ಇಳೆದೆಗೆ :- ಅನ್ನ ಹಾಗೂ ಇದ್ದಿಲು ಮಿಶ್ರಿತ ನೀರಿನಿಂದ ಶುಭ ಕಾರ್ಯಗಳ ಸಂದರ್ಭದಲ್ಲಿ ಇಳೆದೆಗೆಯುತ್ತಾರೆ. ವಧುವರರಿಗೆ ದೃಷ್ಟಿತಾಕೀರಬಹುದು ಎಂಬ ಉದ್ದೇಶದಿಂದ ಇದನ್ನು ಮಾಡಲಾಗುತ್ತದೆ.

ಪ್ರಯೋಗ :- ಮನೆಯ ಹತ್ತಿರ ಬಂದ ತಕ್ಷಣ **ಇಳೆದೆಗೆದು** ಒಳಗಡೆಗೆ ಕರ್‍ಕೊಳವ್ವ.

ಉಡಿತುಂಬು :- ಈ ಶಾಸ್ತ್ರವನ್ನು ಮದುವೆಯಾದ ಮಗಳು ಹೊಸತರಲ್ಲಿ ಗಂಡನ ಮನೆಗೆ ಹೋಗುವಾಗ (ನಡೆಯಲಿಕ್ಕೆ) ಸಮುದಾಯಗಳ ಐದು ಅಥವಾ ಒಂಭತ್ತು ಮನೆಗಳಿಂದ ಉಡಿಯನ್ನು ತುಂಬಿಸುತ್ತಾರೆ. ಅಂದರೆ ಹೆಣ್ಣು ಮಗಳ ಸೀರೆಯ ಸೆರಗಿನಲ್ಲಿ ಐದು ಹಿಡಿ ಅಕ್ಕಿಕಾಳನ್ನು, ಕೊಬ್ಬರಿ ಬಟ್ಟಲು, ಉತ್ತುತ್ತಿ, ಎಲೆ ಅಡಿಕೆಯನ್ನು ಸೆರಗಿನಲ್ಲಿ ಹಾಕಿ ಕುಂಕುಮ, ಅರಿಶಿಣ ಹಚ್ಚಿ ಉಡಿತುಂಬುತ್ತಾರೆ.

ಪ್ರಯೋಗ :- ಇನ್ನು ಐದು ಮನೆ ಇದಾವೆ ಬೇಗ **ಉಡಿ ತುಂಬಿ.**

ಎಳ್ಳುನೀರು :- ಶವದ ಮೇಲೆ ತಮ್ಮ ಬಂಧು ಬಳಗದವರೆಲ್ಲರೂ ಎಳ್ಳು ನೀರನ್ನು ಬಿಡುತ್ತಾರೆ. ಇದರ ಉದ್ದೇಶ ಸತ್ತ ವ್ಯಕ್ತಿಗೂ ನಮಗೂ ಸಂಬಂಧ ಮುಗಿಯಿತು ಎಂದಾರ್ಥ.

ಪ್ರಯೋಗ :- ಎಲ್ಲರು ಬನ್ರಿಪ ಹೆಣ ಎತ್ತುತೀವಿ ಎಳ್ಳು ನೀರು ಬಿಡ್ರೀ.

ಐರಾಣಿ :- ಮದುವೆಯ ಕಾರ್ಯಕ್ಕೆ ಬೇಕಾಗುವ ಮಣ್ಣಿನ ಮಡಿಕೆಗಳು. ಇವುಗಳನ್ನು ಕುಂಬಾರನ ಕೈಯಿಂದಲೇ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಸುರಗಿ, ತಾಳಿಕಟ್ಟುವ ಸಂದರ್ಭ, ಗಂಗಮ್ಮನ ಶಾಸ್ತ್ರದಲ್ಲಿ ಉಪಯೋಗಿಸುತ್ತಾರೆ.

ಪ್ರಯೋಗ :- ಕುಂಬಾರನ ಮನೆಗೆ ಹೋಗಿ ಐರಾಣಿ ತಗೊಂಡು ಬರಬೇಕು.

ಕರುಗಲ್ಲು :- ಊರ ದ್ವಾರಬಾಗಿಲ ಮುಂದೆಯಿರುವ ಕಲ್ಲು. ಪಾಂಚಾಳ ಸಮುದಾಯದಲ್ಲಿ ಯಾವುದೇ ಕಾರ್ಯಗಳು ನಡೆದರು ಈ ಕರಗಲ್ಲುನ್ನು ಪೂಜೆ ಮಾಡಲೇಬೇಕು.

ಪ್ರಯೋಗ :- ಕರುಗಲ್ಲಿಗೆ ಹೋಗಿ ಎಣ್ಣೆ ಬೀರಿ ಬನ್ರೀ.

ಕಳಶ :- ಶುಭ ಕಾರ್ಯಗಳಲ್ಲಿ ಕಳಶ ಬೇಕೆ ಬೇಕು. ಇದನ್ನು ಒಂದು ತಾಮ್ರದ ಚರಿಗೆಯ ಕಂಟದ ಸುತ್ತಲು ಐದು ಅಥವಾ ಒಂಭತ್ತು ವೀಳ್ಯಾದೆಲೆಯನ್ನು ಇಟ್ಟು ಅದರ ಮೇಲೆ ಟೆಂಗಿನಕಾಯಿಯನ್ನು ಇಡುತ್ತಾರೆ. ಇದಕ್ಕೆ ಕಳಶ ಎಂದು ಕರೆಯುತ್ತಾರೆ. ದೇವರಿಗೆ ಬೆಳಗಲು, ಮದುಮಕ್ಕಳಿಗೆ ಬೆಳಗಲು, ವೃತ್ತಿ ಉಪಕರಣಗಳಿಗೆ ಬೆಳಗಲು ಉಪಯೋಗಿಸುತ್ತಾರೆ.

ಪ್ರಯೋಗ :- ಕಾಳಮ್ಮಗ ಕಳಶ ಬೆಳಗಿ ಅಕ್ಷತೆ ಕಾಳು ಹಾಕಿ.

ಕಾಶೀಯಾತ್ರೆ :- ಪಾಂಚಾಳರು ಉಪನಯನ, ಮದುವೆಯ ಸಂದರ್ಭದಲ್ಲಿ ವಟು, ವರನನ್ನು ಕಾಶೀಯಾತ್ರೆಗೆ ಕಳಿಸುತ್ತಾರೆ. ಇಲ್ಲಿಕಾಶೀಯಾತ್ರೆ ಎಂದರೆ ಬ್ರಹ್ಮಚಾರ್ಯ ಸ್ವೀಕರಿಸುವುದು ಎಂದಾರ್ಥ. ಈ ಸಂದರ್ಭಗಳಲ್ಲಿ ಕಾಶೀಯಾತ್ರೆ ವೃತ್ತಿ ದೇವತೆಯ ದೇವಸ್ಥಾನಗಳಾಗಿರುತ್ತವೆ.

ಪ್ರಯೋಗ :- ವರನನ್ನು ಸುರಿಗಿ ಎರೆದ ಮ್ಯಾಲೆ ಕಾಶೀಯಾತ್ರೆ ಕಳಿಸಬೇಕು ಎಲ್ಲಾ ವಸ್ತುಗಳನ್ನು ಸಿದ್ಧಮಾಡ್ರಿ.

ಕಿಚ್ಚು :- ಕಿಚ್ಚು ಅಂದರೆ ಶವಕ್ಕೆ ಇಡುವ ಅಗ್ನಿ. ಈ ಸಮಯದಲ್ಲಿ ಕಿಚ್ಚು ಎಂದು ಉಪಯೋಗಿಸುತ್ತಾರೆ.

ಪ್ರಯೋಗ :- ಚಟ್ಟನ ಮೂರುಸುತ್ತು ಸುತ್ತಿ ಕಿಚ್ಚು ಇಡಪಾ.

ಕುಲದೇವತೆ :- ಸಮುದಾಯದ ದೇವತೆಯನ್ನು ಕುಲದೇವತೆ ಎಂದು ಕರೆಯುತ್ತಾರೆ. ಉದಾಹರಣೆಗೆ ಬರ್ಮಪ್ಪ, ಮೌನೇಶ್ವರ, ಕಾಳಿಕದೇವಿ.

ಪ್ರಯೋಗ :- ಬೇಗ ಸ್ನಾನಮಾಡಿ ಕಾಳಿಕದೇವಿ ಗುಡಿಗೆ ಹೋಗಿ ಪೂಜೆ ಮಾಡಿಕೊಂಡು ಬರ್ರಿ ಇಬ್ಬರು.

ಕಂಕಣ :- ಪಾಂಚಾಳ ಸಮುದಾಯದಲ್ಲಿ ಪ್ರತಿಯೊಂದು ಶುಭಕಾರ್ಯಕ್ಕೂ ಕಂಕಣವನ್ನು ಕಟ್ಟುತ್ತಾರೆ. ಕಂಕಣ ಅಂದರೆ ವೀಳ್ಯಾದೆಲೆಯನ್ನು ಸುತ್ತಿ ಅದಕ್ಕೆ ಒಂದು ಮೊಳ ಉದ್ದದ ಐದು ಸುತ್ತು ದಾರವನ್ನು ಕಟ್ಟುತ್ತಾರೆ.

ಪ್ರಯೋಗ :- ಎಲ್ಲಾ ಐರಾಣಿಗಳಿಗೂ ಕಂಕಣವನ್ನು ಕಟ್ಟೀ.

ಗೋಮೂತ್ರ :- ಆಕಳ ಮೂತ್ರಕ್ಕೆ ಗೋಮೂತ್ರ ಎಂದು ಕರೆಯುತ್ತಾರೆ. ಶುಭ ಕಾರ್ಯಗಳ ಸಂದರ್ಭದಲ್ಲಿ ಉಪಯೋಗಿಸುತ್ತಾರೆ. ಗೋಮೂತ್ರವನ್ನು ಪಾಂಚಾಳರು ತಮ್ಮ ಮನೆ ಸೂತಕವಾದ ಸಂದರ್ಭದಲ್ಲಿ ಗೋಮೂತ್ರವನ್ನು ಮನೆಗೆ ಸಿಂಪಡಿಸಿ ಸೂತಕವನ್ನು ಕಳೆದುಕೊಳ್ಳುತ್ತಾರೆ.

ಪ್ರಯೋಗ :- ಗೋಮೂತ್ರನ ಮನೆಗೆಲ್ಲ ಸಿಂಪಡಿಸಿ ನೀವು ಬಾಯಲ್ಲಿ ಹಾಕಿಕೊಳ್ಳಿ.

ಚಟ್ಟ :- ಶವವನ್ನು ಹೊಯ್ಯಲಿಕ್ಕೆ ಮಾಡುವ ಒಂದು ಸಾಮಾಗ್ರಿ. ಇದನ್ನು ಕಟ್ಟಿಗೆ ಹಾಗೂ ಜೋಳದ ಸಪ್ಪೆಗಳಿಂದ ತಯಾರು ಮಾಡುತ್ತಾರೆ.

ಪ್ರಯೋಗ :- ಚಟ್ಟಕಟ್ಟಿದ ಮ್ಯಾಲೆ ಹೆಣನ ಬಳಹೊತ್ತು ಮನಿಮುಂದೆ ಇಟ್ಟುಕ್ಕೊಬಾರ್ದು.

ಚಂಡಿಕೆ :- ಚಂಡಿಕೆ ಎಂದರೆ ತಲೆಯ ನೆತ್ತಿಯ ಮೇಲೆ ಚಿಕ್ಕದಾದ ಕೊಬ್ಬರಿ ಬಟ್ಟಲನ್ನು ಇಡುತ್ತಾರೆ. ಕೊಬ್ಬರಿ ಬಟ್ಟಲನ್ನು ಇಟ್ಟ ಭಾಗವನ್ನು ಬಿಟ್ಟು ಉಳಿದೆಲ್ಲಾ ಭಾಗದ ತಲೆ ಕೂದಲನ್ನು ಬೋಳಿಸುತ್ತಾರೆ. ಕೊಬ್ಬರಿ ಬಟ್ಟಲು ಇಟ್ಟ ಜಾಗದ ಕೂದಲಿಗೆ ಚಂಡಿಕೆ ಎಂದು ಕರೆಯುತ್ತಾರೆ.

ಪ್ರಯೋಗ :- ತಲೆ ನೆತ್ತಿಯ ಮೇಲೆ ಚಂಡಿಕೆಯನ್ನು ಮಾತ್ರ ಬಿಟ್ಟು ಉಳಿದ ಕೂದಲುಗಳನ್ನು ಬೋಳಿಸಿ

ಜನಿವಾರ :- ಜನಿವಾರವು ಮೂರು, ಆರು, ಒಂಭತ್ತು ಎಳೆಗಳ ಜನಿವಾರವನ್ನು ಪಾಂಚಾಳರು ಹಾಕಿಕೊಳ್ಳುತ್ತಾರೆ. ಮೊದಲ ಮೂರು ಎಳೆಯ ಜನಿವಾರ ಸತ್, ರಜಸ್ ಹಾಗೂ ತಮಸ್ ಎಂಬ ಗುಣಗಳನ್ನು ಸೂಚಿಸುತ್ತದೆ. ಹೀಗೆ ಜನಿವಾರವು ಗುಣಗಳನ್ನು ಸೂಚಿಸುವುದಾಗಿದೆ.

ಪ್ರಯೋಗ :- ಜನಿವಾರ ಧರಿಸಿದ ಮ್ಯಾಲೆ ನಿಮ್ಮ ಸಮುದಾಯದ ಆಚಾರ ವಿಚಾರಗಳನ್ನು ತಪ್ಪದೆ ಪಾಲಿಸಬೇಕು.

ತಿಥಿ :- ವ್ಯಕ್ತಿ ತೀರಿಕೊಂಡ ಹನ್ನೊಂದನೆಯ ಹಾಗೂ ಹನ್ನೆರಡನೆಯ ದಿವಸಗಳಂದು ವೈದಿಕಾಚರಣೆಗಳಿಗನುಸಾರವಾಗಿ ಕ್ರಿಯೆಗಳನ್ನು ಮಾಡುವುದಕ್ಕೆ ತಿಥಿ ಎಂದು ಕರೆಯುವರು.

ಪ್ರಯೋಗ :- ಇವತ್ತಿಗೆ ಸತ್ತು ಹನ್ನೊಂದು ದಿನವಾಯ್ತು ಇವತ್ತು ತಿಥಿ ಮಾಡಿವಿ.

ದಕ್ಷಿಣೆ :- ಶುಭಕಾರ್ಯಗಳಲ್ಲಿ ಎಲೆ, ಅಡಕೆಯ ಜೊತೆಗೆ ಹಣವನ್ನು ಕೊಡುವುದಕ್ಕೆ ದಕ್ಷಿಣೆ ಎಂದು ಕರೆಯುತ್ತಾರೆ.

ಪ್ರಯೋಗ :- ಪೂಜಾಕ ದಕ್ಷಿಣೆ ಇಟ್ಟರೆ ನಾವು ಪೂಜೆ ಮಾಡೋದು.

ದೈವ :- ಪಾಂಚಾಳ ಸಮುದಾಯದ ಹಿರಿಯ ವ್ಯಕ್ತಿಗಳ ಗುಂಪು.

ಪ್ರಯೋಗ :- ದೈವದ ಎಲ್ಲಾರನ್ನು ಕರೆದರೇನು ಕೇಳ್ರಪಾ.

ನೀರುಶಾಸ್ತ್ರ :- ವಧುವರರಿಗೆ ಸುರಿಗೆ ಎರೆಯುವುದಕ್ಕೆ ನೀರುಶಾಸ್ತ್ರ ಎಂದು ಕರೆಯಲಾಗುತ್ತದೆ.

ಪ್ರಯೋಗ :- ತಾಳಿಕಟ್ಟಕ ಸಮಯ ಮೀರುತೈತಿ ಬೇಗ ನೀರುಶಾಸ್ತ್ರ ಮುಗಿಸಿ.

ಪಣಿವಾರ :- ಮಂಡಾಳು, ಹುರುಕಡ್ಲಿ, ಬೆಲ್ಲವನ್ನು ಮಿಶ್ರಣ ಮಾಡಿ ಬರ್ಮಪ್ಪ ದೇವರಿಗೆ ಪೂಜೆ ಸಲ್ಲಿಸುವುದಕ್ಕೆ ಪಣಿವಾರ ಎಂದು ಕರೆಯುತ್ತಾರೆ. ಬರ್ಮಪ್ಪ ದೇವರು ಮಕ್ಕಳಿಗೆ ಯಾವುದೇ ಕಾಟ ಕೊಡಬಾರದು ಎಂಬ ನಂಬಿಕೆಯಿಂದ ಪಣಿವಾರವನ್ನು ಪೂಜೆ ಮಾಡುತ್ತಾರೆ.

ಪ್ರಯೋಗ :- ಬರ್ಮಪ್ಪ ದೇವರಿಗೆ ಪಣಿವಾರ ಇಡುಕೊಂಡು ಬನ್ನಿ.

ಪಂಚಲೋಹ :- ಪಂಚಲೋಹ ಎಂದರೆ ಬಂಗಾರ, ಬೆಳ್ಳಿ, ತಾಮ್ರ, ಕಂಚು ಹಾಗೂ ಹಿತ್ತಳೆ ಈ ಐದು ಲೋಹಗಳ ಮಿಶ್ರಣಕ್ಕೆ ಪಂಚಲೋಹ ಎಂದು ಕರೆಯುತ್ತಾರೆ.

ಪ್ರಯೋಗ :- ಹಂದ್ರಗೂಟ ಹುಗಿಯುವಾಗ ಪಂಚಲೋಹ ಹಾಕಿ ಹುಗೀರಿ.

ಪಂಕ್ತಿ :- ಪಾಂಚಾಳ ಸಮುದಾಯದ ಹಿರಿಯರೆಲ್ಲರೂ ಶುಭಕಾರ್ಯಗಳಲ್ಲಿ ಒಟ್ಟಿಗೆ ಸೇರಿ ಊಟಕ್ಕೆ ಕುಳಿತುಕೊಳ್ಳುವುದಕ್ಕೆ ಪಂಕ್ತಿ ಎಂದು ಕರೆಯಲಾಗುತ್ತದೆ.

ಪ್ರಯೋಗ :- ಮೊದಲ ಪಂಕ್ತಿಯಲ್ಲಿಯೇ ಆಚಾರ್ಯ ಸ್ವಾಮಿಯವರಿಗೆ ಊಟಕ ಬಡಿಸಿ.

ಪಾಂಚಾಳ ಕುಲ:- ಕಮ್ಮಾರ, ಬಡಿಗ, ಅಕ್ಕಸಾಲಿಗ, ಕಂಚುಗಾರ ಹಾಗೂ ಶಿಲ್ಪಿಯವರನ್ನು ಪಾಂಚಾಳ ಕುಲದವರು ಎಂದು ಕರೆಯುತ್ತಾರೆ.

ಪ್ರಯೋಗ :- ಉಪನಯನ ಆದಮ್ಯಾಲೆಯೆ ಪಾಂಚಾಳ ಕುಲದ ಅಧಿಕೃತ ವಕ್ತಾರನಾಗುತ್ತನೆ.

ಬಯಕೆ ಬುತ್ತಿ :- ಬಸುರಿಯ ಇಷ್ಟವಾದ ಸೀರೆ, ಕುಪ್ಪಸ, ಅಡಿಗೆ ಪದಾರ್ಥ, ಹೂವು, ಹಣ್ಣು ಇತ್ಯಾದಿಗಳನ್ನು ತವರು ಮನೆಯಿಂದ ತೆಗೆದುಕೊಂಡು ಬಂದು (ಆಕೆಯ ಬಯಕೆಗಳನ್ನು ತೀರಿಸುವುದಕ್ಕೆ) ಮಗಳಿಗೆ ಕೊಡುವುದಕ್ಕೆ ಬಯಕೆ ಬುತ್ತಿ ಎಂದು ಕರೆಯುತ್ತಾರೆ.

ಪ್ರಯೋಗ :- ನಮ್ಮ ಮಗಳು ಮೂರು ತಿಂಗಳು ಬಸುರಿ ಬಯಕೆ ಬುತ್ತಿ ಬಯಸ್ಸಳ ಹೊಯ್ಯಬೇಕು.

ಬಾಣಂತಿ ಖಾರ:- ಹೆರಿಗೆಯಿಂದ ನಿಶಕ್ತಿಯಾಗಿರುವ ಬಾಣಂತಿಗೆ ಪ್ರತಿನಿತ್ಯ ಬೆಳಗಿನ ಸಮಯದಲ್ಲಿ ಒಣಕೊಬ್ಬರಿ, ಉತ್ತತ್ತಿ, ಬೆಲ್ಲ, ಗೋಡಂಬಿ ಇವುಗಳನ್ನು ತುಂಬ ಜಿನುಗಾಗುವಂತೆ ಕುಟ್ಟಿ ತುಪ್ಪದಲ್ಲಿ ಬೆರಸಿ ತಿನ್ನಲು ಕೊಡುವರು.

ಪ್ರಯೋಗ :- ಅಳುಹೊಟ್ಟಿಗೆ ಖಾರ ತಿನ್ನಕ ಕೊಡ್ರಿ.

ಮದುಮಕ್ಕಳು :- ವಧುವರರಿಗೆ ಅರಿಶಿಣ ಹಚ್ಚಿ ಮದುವೆಗೆ ಸಿದ್ಧತೆಗೊಳಿಸುವರು. ಮದುಮಗ, ಮದುವಣಗಿತ್ತಿಯನ್ನು ಮದುಮಕ್ಕಳು ಎನ್ನುವರು.

ಪ್ರಯೋಗ :- ಮದುಮಕ್ಕಳ ಶಾಸ್ತ್ರನ ಬೇಗ ಮುಗಿಸಿದ್ರ ಕೋರೂಟಕ್ಕೆ ಕಳ್ಸಲಿಕ್ಕೆ ಅನುಕೂಲ ಆಗತ್ತೈತಿ.

ಮುತ್ತೈದೆಯರು :- ಪತಿಯನ್ನು ಹೊಂದಿರುವ ಮಹಿಳೆಯರು, ಸುಮಂಗಲೆಯರು.

ಪ್ರಯೋಗ :- ಐದು ಮುತ್ತೈದೆಯರು ಮೊದ್ಲು ಕಳಶ ಬೆಳಗ್ರಿ.

ಮುರುವು :- ಹಸುಮಕ್ಕಳ ಕಿವಿಯ ಆಭರಣ.

ಪ್ರಯೋಗ :- ನಾಳೆ ಶನಿವಾರಕ ಮಗುವಿಗೆ ಮೂರು ತಿಂಗಳು ತುಂಬುತಾವು ಮುರುವು ಚುಚ್ಚಿಸಬೇಕು.

ಮೈಲಿಗೆ :- ಮಕ್ಕಳು ಋತುಮತಿಯಾದಾಗ, ಮಹಿಳೆಯರು ಮುಟ್ಟು (ವರಗ) ಆದಾಗ ಅವರನ್ನು ಮೈಲಿಗೆಯಾದವರು ಎಂದು ತಿಳಿಯುತ್ತಾರೆ.

ಪ್ರಯೋಗ :- ಮೈಲಿಗೆ ಆಗ್ಯಾಳೆ ಆಕಿಗೆ ತಟ್ಟೆ, ಲೋಟ, ಚೆಂಬು, ಹಾಸಿಗೆ ಎಲ್ಲವನ್ನು ಆಕಿಗೆ ಕೊಟ್ಟುಬಿಡ್ರೀ ಅವನ್ನ ನೀವು ಮುಟ್ಟಾಕ ಹೋಗಬ್ಯಾಡ್ರೀ.

ಮೊರ :- ದವಸ ದಾನ್ಯಗಳನ್ನು ಸ್ವಚ್ಛಗೊಳಿಸಲು ಬಳಸುವ ಸಾಮಾಗ್ರಿ. ಪಾಂಚಾಳ ಸಮುದಾಯದಲ್ಲಿ ಮೊರವನ್ನು ಮನೆಯ ವ್ಯಕ್ತಿ ತೀರಿಕೊಂಡಾಗ ಆ ವ್ಯಕ್ತಿಯನ್ನು ಸ್ಮಶಾಣಕ್ಕೆ ಹೊಯ್ಯುವ ಸಂದರ್ಭದಲ್ಲಿ ಮನೆಯ ಮಾದಿಗರು ಮೊರದಲ್ಲಿ ಉಪ್ಪು ಹಾಗೂ ಒಣ ಮೆಣಸಿನ ಕಾಯಿಯನ್ನು ಅದರಲ್ಲಿ ಹಾಕಿಕೊಂಡು ಹೆಣದ ಮುಂದೆ ನಡೆಯುತ್ತಿರುತ್ತಾರೆ. ಆ ಮೊರವನ್ನು ಊರಮುಂದೆ ಇಟ್ಟು ಸ್ಮಶಾಣಕ್ಕೆ ಹೋಗುತ್ತಾರೆ.

ಪ್ರಯೋಗ :- ಮೊರದಲ್ಲಿ ಒಣಮೆಣಸಿನಕಾಯಿ, ಉಪ್ಪು ಹಾಕಿ ಮಾದಿಗನ ಕೈಯಲ್ಲಿ ಕೊಡ್ರಿ.

ಮಾಂಗಲಸೂತ್ರ :- ಮದುಮಗ ಮದುಮಗಳ ಕೊರಳಿಗೆ ಶಾಸ್ತ್ರೋಕ್ತವಾಗಿ ಕಟ್ಟುವ ತಾಳಿ.

ಪ್ರಯೋಗ :- ಮಂಗಲಸೂತ್ರ ಎಲ್ಲರೂ 'ಮುಟ್ಟಿ ನಮಸ್ಕಾರ ಮಾಡಿ.

ಮುಂಜಿಕಾರ್ಯ :- ಪಾಂಚಾಳ ಸಮುದಾಯದಲ್ಲಿ ಹುಟ್ಟಿದ ಗಂಡು ಮಗುವಿಗೆ ಶಾಸ್ತ್ರೀಯವಾಗಿ ಜನಿವಾರವನ್ನು ಧರಿಸುವುದಕ್ಕೆ ಮುಂಜಿಕಾರ್ಯ (ಉಪನಯನ) ಎನ್ನುತ್ತಾರೆ.

ಪ್ರಯೋಗ :- ನಮ್ಮ ಕುಲ್ದಾಗ ಯಾರು ಶಾಸ್ತ್ರೋಕ್ತವಾಗಿ ಮುಂಜಿ ಮಾಡಿಸಿಕೊಳ್ಳಲೊ ಅವರು ಸೂರ್ಯ ಚಂದ್ರರಿರುವವರೆಗೂ ಕಷ್ಟನ ಅನುಭವಿಸುತ್ತಾರೆ.

ಯಜ್ಞಕುಂಡ :- ಪಾಂಚಾಳ ಸಮುದಾಯದಲ್ಲಿ ಮಾಂಗಲ್ಯ ದಾರಣ ವಿಧಿಯ ಸಂದರ್ಭದಲ್ಲಿ ಯಜ್ಞಕುಂಡವನ್ನು ರಚಿಸಿ ಶಾಸ್ತ್ರೋಕ್ತವಾಗಿ ಯಜ್ಞಕುಂಡಕ್ಕೆ ಪೂಜೆ ಸಲ್ಲಿಸುತ್ತಾರೆ.

ಪ್ರಯೋಗ :- ಯಜ್ಞಕುಂಡ ಪೂಜೆಗೆ ಬೇಕಾದ ಮಾಂಗಲ್ಯ ದ್ರವ್ಯಗಳೆನೆಲ್ಲ ಆಚಾರ್ಯ ಸ್ವಾಮಿಯವರ ಕೈಯಲ್ಲಿ ಕೊಟ್ಟುಬಿಡಿ.

ಲಗ್ನದ
ಅಕ್ಕಿಗಂಟು :- ಈ ಲಗ್ನದ ಅಕ್ಕಿಯ ಗಂಟಿನಲ್ಲಿ ಐದುಸೇರು ಅಕ್ಕಿ, ಐದು ಒಣ ಕೊಬ್ಬರಿ ಬಟ್ಟಲು, ಐದು ಉತ್ತತ್ತಿ, ಐದು ಅರಿಶಿಣಕೊಂಬು, ಐದು ಕೇರು ಬೀಜ, ಐದು ಚೋಲಿಪೀಸು, ಐದು ತೆಂಗಿನಕಾಯಿ, ಐದು ನಿಂಬೇಹಣ್ಣು, ಎಲೆ ಅಡಕೆ, ಬೆಟ್ಟ ಅಡಕಿ ಹಾಗೂ ಇದರ ಜೊತೆಗೆ ಒಂದು ಪತ್ರ ಇವೆಲ್ಲವುಗಳನ್ನು ಹೊಸ ಬಿಳಿ ಬಟ್ಟೆಯಲ್ಲಿ ಹಾಕಿ ಗಂಟು ಕಟ್ಟಿರುತ್ತಾರೆ.

ಪ್ರಯೋಗ :- ಬೀಗ್ರು ಊರಿಗೆ ಲಗ್ನದ ಅಕ್ಕಿಗಂಟು ಕಳ್ಸಿಕೊಡ್ರಿ.

ಲಂಗೋಟಿ :- ಕೌಮೀನ, ಉಪನಯನ ಸಂದರ್ಭದಲ್ಲಿ ಧರಿಸುವ ಬಟ್ಟೆ.

ಪ್ರಯೋಗ :- ವಟುಗಳಿಗೆ ಹುಟ್ಟುಕೊಳ್ಳಲಿಕ್ಕೆ ಲಂಗೋಟಿ ಕೊಡ್ರಿ.

ವರಗ ಆಗ್ಯಾಳೆ :- ಮಹಿಳೆಯರು ಮುಟ್ಟು (ಋತು) ಆಗುವುದಕ್ಕೆ ವರಗ ಆಗ್ಯಾಳೆ ಎನ್ನುತ್ತಾರೆ.

ಪ್ರಯೋಗ :- ಈ ಸಲನು ಮುಟ್ಟು ನಿಲ್ಲಿಲ್ಲ ವರಗ ಆಗಿಬಿಟ್ಲು.

ಸೂಸು ಅಕ್ಕಿ :- ಮದುಮಕ್ಕಳಿಗೆ, ವಟುಗಳಿಗೆ, ಋತುಮತಿಯಾದ ಹುಡುಗಿಯರಿಗೆ ಮೊಣಕಾಲು, ಭುಜ, ತಲೆಗೆ ಅಕ್ಷತೆ ಕಾಳುಗಳನ್ನು ಎರಡು ಕೈಗಳಿಂದ ಇಟ್ಟು ಎರಚುತ್ತಾರೆ. ಇದಕ್ಕೆ ಸೂಸ ಅಕ್ಕಿಯಿಡುವುದು ಎನ್ನುತ್ತಾರೆ.

ಪ್ರಯೋಗ :- **ಸೂಸು ಅಕ್ಕಿಯಿಟ್ಟು** ಕಳಶ ಬೆಳಗಿರಿ.

ಸುರಗಿ :- ಮದುವೆ, ಉಪನಯನ ಸಂದರ್ಭದಲ್ಲಿ ಮದುಮಕ್ಕಳು, ವಟುಗಳಿಗೆ ಓಕುಳಿ ನೀರನ್ನು ಎರೆಯುವ ಶಾಸ್ತ್ರಕ್ಕೆ (ಮೈ ತೊಳೆಯುವುದು) ಸುರಗಿ ಎಂದು ಕರೆಯುತ್ತಾರೆ.

ಪ್ರಯೋಗ :- **ಸುರಗಿಯಲ್ಲಿ** ಹೊತ್ಯಾಗ ಯಾರಾನ್ನ ಕುದ್ರಿಸುತ್ತೀರಿ.

ಸುರಿಗೆ ದಾರ :- ಸುರಗಿ ಎರೆಯುವ ಸಂದರ್ಭದಲ್ಲಿ ಸುರಗಿಯ ಐದು ಚರಿಗೆಗಳಿಗೆ ಅಂದರೆ ನಾಲ್ಕು ದಿಕ್ಕುಗಳಿಗೆ ಒಂದೊಂದು ಚರಿಗೆ ಹಾಗೂ ಮೊದಲ ಸಾಲಿನ ಮಧ್ಯದಲ್ಲಿ ಒಂದು ಚರಿಗೆ ಈ ಐದು ಚರಿಗೆಗಳಿಗೆ ಬಲಕ್ಕೆ ಮಾಡಿಕೊಂಡು ಒಂಭತ್ತು ಸುತ್ತು ದಾರವನ್ನು ಸುತ್ತುತ್ತಾರೆ ಇದಕ್ಕೆ ಸುರಿಗೆದಾರ ಎನ್ನುತ್ತಾರೆ.

ಪ್ರಯೋಗ :- **ಸುರಿಗೆದಾರ** ಮ್ಯಾಕ ಎತ್ತಿ ಮಡಚಿ ಯಾರಿಗೂ ಬಡಿಸಬ್ಯಾಡರಿ.

ಸೂತಕ :- ಮನೆಯಲ್ಲಿ ಯಾರಾದರು ತೀರಿಕೊಂಡಾಗ, ಮಗಳು ಋತುಮತಿಯಾದಾಗ ತಮ್ಮ ಮನೆ ಸೂತಕವಾಗಿದೆ ಎಂದು ತಿಳಿಯುತ್ತಾರೆ. ಅಂದರೆ ಋತು, ಜನನ, ಮರಣಗಳಿಂದುಂಟಾಗುವ ಮೈಲಿಗೆ.

ಪ್ರಯೋಗ :- ಒಂಭತ್ತನೆಯ ದಿವಸ ಮನೆಯನ್ನೆಲ್ಲಾ ಗೋಮಯದಿಂದ ಸಾರಿಸಿ ಗೋಮೂತ್ರವನ್ನು ಸಿಂಪಡಿಸಿ **ಸೂತಕ** ಕಳೆದುಕೊಳ್ಳಿ.

ಹಣೆ ಸೂಳಿ :- ವರ ಮೊದಲಬಾರಿಗೆ ಹೆಣ್ಣು ನೋಡಲಿಕ್ಕೆ ಹೋದಾಗ ಆ ಹೆಣ್ಣು ಮಗಳ ಕೈ, ಕಾಲು, ಹಣೆ ಇತ್ಯಾದಿ ಭಾಗಗಳನ್ನು ನೋಡುವ ಶಾಸ್ತ್ರವಿದೆ. ಅದರಲ್ಲಿ ಇದು ಹಣೆಗೆ ಸಂಬಂಧಿಸಿದಾಗಿದೆ. ಈ ಹಣೆ ಸುಳಿಯಲ್ಲಿಯೇ ಅನೇಕ ವಿಧಗಳಿವೆ.

ಪ್ರಯೋಗ :- **ಹಣೆ ಸುಳಿ** ನೋಡಿಕೊಂಡು ಬರ್ರೀ ಆ ಮಗಳ್ದು.

ಹಸಿರುಗಂಬ :- ಮದುವೆಯ ಮನೆಯ ದ್ವಾರಬಾಗಿಲ ಎಡತೋಳಿನ ಸಮೀಪವಾಗಿ ನೆಟ್ಟಿರುವ ಮರದ ಕೊಂಬೆ. ಇದನ್ನು ನೆಟ್ಟರೆ ಮದುವೆಯಲ್ಲಿ ಉಂಟಾಗುವ ಲೋಪದೋಷಗಳು ನಿವಾರಣೆಯಾಗುತ್ತವೆ ಹಾಗೂ ಮದುಮಕ್ಕಳಿಗೆ ದೃಷ್ಟಿತಾಗಬಾರದೆಂದು ಈ ಗಿಡದ ಕೊಂಬೆಯನ್ನು ನೆಡುತ್ತಾರೆ.

ಪ್ರಯೋಗ :- ಹಸಿರುಗಂಬ ತರಲಿಕ್ಕೆ ಸೋದರಮಾವನ ಕಳ್ಸಬೇಕು.

ಹಾಲುಗಂಬ :- ಮದುವೆಯ ಮನೆಯ ದ್ವಾರಬಾಗಿಲ ಎಡತೋಳಿನ ಸಮೀಪವಾಗಿ ನೆಟ್ಟಿರುವ ಮರದ ಕೊಂಬೆ. ಇದನ್ನು ನೆಟ್ಟರೆ ಮದುವೆಯಲ್ಲಿ ಉಂಟಾಗುವ ಲೋಪದೋಷಗಳು ನಿವಾರಣೆಯಾಗುತ್ತವೆ ಹಾಗೂ ಮದುಮಕ್ಕಳಿಗೆ ದೃಷ್ಟಿತಾಗಬಾರದೆಂದು ಈ ಗಿಡದ ಕೊಂಬೆಯನ್ನು ನೆಡುತ್ತಾರೆ.

ಪ್ರಯೋಗ :- **ಹಾಲುಗಂಬನ** ತರಲಿಕ್ಕೆ ಸೋದರಮಾವನ ಕಳ್ಸಬೇಕು.

ಆರ್ಘ್ಯ :- ಉಪನಯನ ಸಂದರ್ಭದಲ್ಲಿ ವಟುಗಳಿಗೆ ಹೇಳಿಸುವ ಮಂತ್ರ ಹಾಗೂ ಉಪನಯನ ಸಿದ್ಧತೆಗೆ ಬೇಕಾದ ಸಾಮಾನುಗಳನ್ನು ಆರ್ಘ್ಯ ಎನ್ನುತ್ತಾರೆ.

ಪ್ರಯೋಗ :- ಆರ್ಘ್ಯಕ್ಕೆ ಸಂಬಂಧಿಸಿದ ಎಲ್ಲ ಸಾಮಾನುಗಳನ್ನು ಆಚಾರ್ಯಸ್ವಾಮಿಗಳ ಕೈಯಲ್ಲಿ ಕೊಡಿ.

ಉಲಿಪಿ :- ಶುಭಕಾರ್ಯಗಳಲ್ಲಿ ಪೂಜೆಗೆ ಬೇಕಾದ ವಸ್ತುಗಳು. ಅಂದರೆ ಒಂದು ಹೊಸ ಮೊರದಲ್ಲಿ ಗೋಧಿಹಿಟ್ಟು, ಬೆಲ್ಲ, ತೊಗರಿಬ್ಯಾಳಿ, ಅಕ್ಕಿ, ಎಲೆ-ಅಡಕಿ, ಉತ್ತತ್ತಿ, ದಕ್ಷಿಣೆ ಹಾಗೂ ಬಟ್ಟೆ ಇವುಗಳೆಲ್ಲವನ್ನು ಈ ಮೊರದಲ್ಲಿ ಇಟ್ಟು ಪೂಜೆ ಮಾಡುವ ವ್ಯಕ್ತಿಗೆ ಕೊಡುವುದು ಇದಕ್ಕೆ ಉಲಿಪಿ ಎನ್ನುತ್ತಾರೆ.

ಪ್ರಯೋಗ :- ಐರಾಣಿ ಪೂಜೆ ಮಾಡಿಸಿಕೊಂಡು ಬರಲಿಕ್ಕೆ ಉಲಿಪಿಯನ್ನು ಹೊಯ್ರಿ.

ಉಳಾಗಡ್ಡಿ ಸರ:- ಬೀಗರನ್ನು ಎದುರುಗೊಳ್ಳುವ ಸಂದರ್ಭದಲ್ಲಿ ಮೋಜಿನ ಆಟಕ್ಕಾಗಿ ಬಳಸುವ ಸರ.

ಪ್ರಯೋಗ :- ನಿಮ್ಮ ಮಗಳಿಗೆ ನಾವು ಉಳಾಗಡ್ಡಿಸರ ಹಾಕ್ತಿವಿ.

ಬದನೆಕಾಯಿಸರ:- ಬೀಗರನ್ನು ಎದುರುಗೊಳ್ಳುವ ಸಂದರ್ಭದಲ್ಲಿ ಬದನೆಕಾಯಿಂದ ಮಾಡಿದ ಸರ. ಇದನ್ನು ಮೋಜಿನ ಆಟಕ್ಕೆ ಆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ.

ಪ್ರಯೋಗ :- ನಾವು ನಿಮ್ಗೆ ಬದನೆಕಾಯಿ ಸರ ಹಾಕ್ತೀವಿ ನೀವೇನು ಹಾಕ್ತೀರ ನಮ್ಮ ಹುಡ್ಗ.

ಬೆಂಡಿನ ಸರ :- ಬೀಗರನ್ನು ಎದುರುಗೊಳ್ಳುವ ಸಂದರ್ಭದಲ್ಲಿ ಜೋಳದ ದಂಟಿನ ಬೆಂಡಿನಿಂದ ಮಾಡಿದ ಸರ. ಇದನ್ನು ಮೋಜಿನ ಆಟಕ್ಕೆ ಆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ.

ಪ್ರಯೋಗ :- ನಾವು ವರದಕ್ಷಿಣೆಯಾಗಿ ನಿಮ್ಮ ಹುಡ್ಗನಿಗೆ ಈ ಬೆಂಡಿನ ಸರ ಹಾಕ್ತೀವಿ.

ಮಂಡಕ್ಕಿ ಸರ :- ಬೀಗರನ್ನು ಎದುರುಗೊಳ್ಳುವ ಸಂದರ್ಭದಲ್ಲಿ ಮಂಡಾಳುನಿಂದ ಮಾಡಿದ ಸರ. ಇದನ್ನು ಮೋಜಿನ ಆಟಕ್ಕೆ ಆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ.

ಪ್ರಯೋಗ :- ನಿಮ್ಮ ಹುಡುಗಿಗೆ ನಾವು ಕೂಡ ಮಂಡಕ್ಕಿಸರ ಹಾಕ್ತೀವಿ.

ಬೆಂಡಿನ ಚಾಳಸ:- ಬೀಗರನ್ನು ಎದುರುಗೊಳ್ಳುವ ಸಂದರ್ಭದಲ್ಲಿ ಜೋಳದ ದಂಟಿನ ಬೆಂಡಿನಿಂದ ಮಾಡಿದ ಸರ. ಇದನ್ನು ಮೋಜಿನ ಆಟಕ್ಕೆ ಆ ಸಂದರ್ಭದಲ್ಲಿ ಉಪಯೋಗಿಸುತ್ತಾರೆ.

ಪ್ರಯೋಗ :- ನಾವು ನಿಮ್ಮ ಹುಡುಗನಿಗೆ ಬೆಂಡಿನ ಚಾಳಸನ ಉಡುಗೊರೆಯಾಗಿ ಕೊಡ್ತೀವಿ.

ಎಲೆಕತ್ತರಿ :- ಮಗುವಿನ ಹುಟ್ಟುಗೂದಲು ಕತ್ತರಿಸುವುದಕ್ಕೆ ಎಲೆಕತ್ತರಿ ಮುಟ್ಟಿಸುವುದು ಎನ್ನುತ್ತಾರೆ.

ಪ್ರಯೋಗ :- ನಮ್ಮ ಮನೆದೇವ್ರು ದೇವಸ್ಥಾನದಲ್ಲಿ ನಮ್ಮ ಮಗುವಿಗೆ ಎಲೆಕತ್ತರಿ ಶಾಸ್ತ್ರ ಮಾಡಿಸಿದಿವಿ.

ಏನ್‌ಸ್ವಾಮಿ :- ಪಾಂಚಾಳರು ಈ ಸಂಬೋಧನಾ ರೂಪವನ್ನು ಮದುವೆಯಲ್ಲಿ ವರನು ಕಾಶೀಯಾತ್ರೆ ಕೈಗೊಂಡಾಗ ಆತನನ್ನು ಸಂಬೋಧಿಸಲು ಈ ಪದವನ್ನು ಉಪಯೋಗಿಸುತ್ತಾರೆ.

ಪ್ರಯೋಗ :- ಏನ್‌ಸ್ವಾಮಿ ಎಲ್ಲಿಗೊಂಟರಿ ಅಂತ ನೀನು ಅವರ್ನ ಕೇಳಬೇಕು.

ಐದುಗಿತ್ತಿಯರು:- ಐದು ಮಂದಿ ಸುಮಂಗಲಿಯರ ಗುಂಪಿಗೆ ಐದುಗಿತ್ತಿಯರು ಎಂದು ಕರೆಯುತ್ತಾರೆ. ಇವರನ್ನು ಮದುವೆಯ ಮನೆಯವರು ನೇಮಿಸಿರುತ್ತಾರೆ. ಮದುವೆಯ ಸಮಸ್ತ ಕಾರ್ಯಗಳಲ್ಲಿ ಐದುಗಿತ್ತಿಯರು ಮುಂಚೂಣಿಯಲ್ಲಿದ್ದು ಕಾರ್ಯಗಳನ್ನು ನಿರ್ವಹಿಸಬೇಕು.

ಪ್ರಯೋಗ :- **ಐದುಗಿತ್ತಿಯುರ ಕೈಗೆ ಕಂಕಣ ಕಟ್ಟಿ.**

ಕುಟಟ್‌ಕುರ್ :- ಮಗುವಿಗೆ ಹೆಸರು ಕಟ್ಟುವ ಸಂದರ್ಭದಲ್ಲಿ ಸೋದರ ಅತ್ತೆ ಮಗುವಿನ ಕಿವಿಯಲ್ಲಿ ಕುಟಟ್ ಕುರ್ ಎಂದು ಮೂರು ಬಾರಿ ಹೇಳಿ ಆ ಮಗುವಿಗೆ ಹೆಸರನ್ನು ಸೂಚಿಸುತ್ತಾಳೆ. ಇದರ ಉದ್ದೇಶ ಆ ಮಗುವನ್ನು ಸ್ವಾಗತಿಸಲು ಇದನ್ನು ಕಿವಿಯಲ್ಲಿ ಕೂಗಲಾಗುತ್ತದೆ.

ಪ್ರಯೋಗ :- ಮೂರುಬಾರಿ ಪಾಪು ಕಿವಿಯಲ್ಲಿ **ಕುಟಟ್ ಕುರ್** ಎಂದು ಹೆಸರುಯಿಡವ್ವ.

ಕೈಗೆ ಬಂದಳು :- ಮಗಳು ಋತುಮತಿಯಾದರೆ (ವಯಸ್ಸಿಗೆ ಬಂದರೆ) ಕೈಗೆ ಬಂದಳು ಎಂದು ಕರೆಯುತ್ತಾರೆ. ಅಂದರೆ ಮದುವೆಗೆ ಸಿದ್ಧಳಾಗಿದ್ದಾಳೆ ಎಂಬರ್ಥ.

ಪ್ರಯೋಗ :- ಏನಾಪ ಮಾವ ಮಗಳು **ಕೈಗೆ ಬಂದ್ಲು** ಎಲ್ಲೆರಾವರ ನೋಡಿ ಏನು?

ಕೋರೂಟ :- ಮದುಮಕ್ಕಳನ್ನು ಊಟಕ್ಕೆ ಕರೆಯುವುದಕ್ಕೆ ಕೋರೂಟ ಎಂದು ಕರೆಯುತ್ತಾರೆ.

ಪ್ರಯೋಗ :- ಬೇಗ ಮದುಮಕ್ಕಳಶಾಸ್ತ್ರ ಮುಗಿಸಿದರೆ **ಕೋರೂಟ** ಮಾಡಿಸಲಿಕ್ಕೆ ಅನುಕೂಲ ಆಗುತ್ತೈತಿ.

ಗಂಗಿಕೂಡ :- ಗಂಗಮ್ಮನ ಶಾಸ್ತ್ರ ಮಾಡಿಕೊಂಡು ಬರಲಿಕ್ಕೆ ಹೊಯ್ಯುವಕೊಡ.

ಪ್ರಯೋಗ :- ಮೊದಲು **ಗಂಗಿಕೊಡಕಾ** ಕಂಕಣಕಟ್ಟಿ ಪೂಜೆ ಮಾಡಿ.

ಗಂಗಿಶಾಸ್ತ್ರ :- ಪಾಂಚಾಳ ಸಮುದಾಯದಲ್ಲಿ ಶುಭ ಕಾರ್ಯಗಳಲ್ಲಿ ಗಂಗೆಗೆ ಅಗ್ರಸ್ಥಾನ ಹಾಗೂ ಪೂಜಿಸಲ್ಲಿಸುತ್ತಾರೆ. ಇದಕ್ಕೆ ಗಂಗಿಶಾಸ್ತ್ರ ಎನ್ನುತ್ತಾರೆ.

ಪ್ರಯೋಗ :- ಕಂಬಳಿ ತನ್ನಿ **ಗಂಗಿಶಾಸ್ತ್ರಕ.**

ಚಾಜ :- ಚಾಜ ಎಂದರೆ ದಕ್ಷಿಣೆ ಕೊಡುವುದು ಎಂದಾರ್ಥ.

ಪ್ರಯೋಗ :- **ಚಾಜ** ನೋಡಿ ಇಡ್ರಿ, ಹಿಂದಿನ ಪೂಜೆಗೂ ಕಮ್ಮಿ ಇಟ್ಟಿದ್ರಿ.

ಚೊಚ್ಚಲು ಹೆರಿಗೆ :- ಮೊದಲ ಹೆರಿಗೆಗೆ ಚೊಚ್ಚಲು ಹೆರಿಗೆ ಎಂದು ಕರೆಯುತ್ತಾರೆ.

ಪ್ರಯೋಗ :- **ಚೊಚ್ಚಲ ಹೆರಿಗೆ** ತವರು ಮನಿಯಲ್ಲೇ ಆಗಬೇಕು.

ಜ್ಞಾನದ ಕಣ್ಣು :- ಉಪನಯನ ಅನ್ನುವುದಕ್ಕೆ ನಯನ ಎಂದರೆ ಕಣ್ಣು, ಉಪ ಎಂದರೆ ಮತ್ತೊಂದು, ಅಂದರೆ ಮೂರನೇ ಕಣ್ಣು ಎಂಬರ್ಥ ಕೊಡುತ್ತದೆ. ಈ ಮೂರನೇ ಕಣ್ಣೆ ಜ್ಞಾನದ ಕಣ್ಣು ಎಂದು ಹೇಳುತ್ತಾರೆ.

ಪ್ರಯೋಗ :- ಉಪನಯನ ಆದ ವಟುಗಳಿಗೆ **ಜ್ಞಾನದ ಕಣ್ಣು** ತನ್ನತಾನೇ ಬರುತ್ತದೆ.

ನಾಗೋಲಿ ಸುರಗಿ :- ಮಾಂಗಲ್ಯಶಾಸ್ತ್ರ ಮುಗಿದ ಮಾರನೆಯ ದಿವಸ ವದುವರರಿಗೆ ಎರೆಯುವ ಸುರಗಿಯನ್ನು ನಾಗೋಲಿ ಸುರಗಿ ಎನ್ನುತ್ತಾರೆ.

ಪ್ರಯೋಗ :- ನಾಗೋಲಿ ಸುರಗಿ ಎರೆದು ಗಂಗಿಶಾಸ್ತ್ರಕ ಕಳ್ಸಿಕೊಡಿ.

ಪಾದರಕ್ಷೆ :- ರಕ್ಷಣಾರ್ಥವಾಗಿ ಪಾದಗಳಲ್ಲಿ ತೊಡುವ ಸಾಧನ.

ಪ್ರಯೋಗ :- ಪೂಜಾಕ ನಮಗೆ ಬಟ್ಟೆ ಕೊಟ್ರೆ ಮಾತ್ರ ನಾವು ಪಾದರಕ್ಷೆ ಪೂಜೆ ಮಾಡೋದು ನೋಡಪಾ.

ಬರ್ಮಪ್ಪ :- ಪಾಂಚಾಳ ಸಮುದಾಯದ ಕುಲ ದೇವರು.

ಪ್ರಯೋಗ :- ಇವತ್ತು ಮಂಗಳವಾರ ಬರ್ಮಪ್ಪಗ ಹೋಗಿ ಪಣಿವಾರ ಹಂಚಿಕೊಂಡು ಬನ್ನಿ.

ಬಾಣಂತನ :- ಹೆರಿಗೆಯ ಆರೈಕೆಯನ್ನು ಬಾಣಂತನ ಎನ್ನುವರು.

ಪ್ರಯೋಗ :- ಚೊಚ್ಚಲ ಬಾಣಂತನಕ ನಮ್ಮ ಮನಿಗೆ ಕರ್‍ಕೊಂಡ ಬರ್‍ತೀವಿ.

ಮದ್ಲಿಂಗ :- ಅರಿಶಿಣಶಾಸ್ತ್ರ ಮುಗಿದ ಮೇಲೆ ಕೋರೋಟಕ್ಕೆ ಸಿದ್ಧನಾಗಿರುವ ವರನಿಗೆ ಮದ್ಲಿಂಗ ಎಂದು ಕರೆಯುತ್ತಾರೆ.

ಪ್ರಯೋಗ :- ಮದ್ಲಿಂಗನ ಹುಣಸೆ ಮರದಡಿಗೆ ಕರ್‍ಕೊಂಡು ಹೋಗಬ್ಯಾಡಿ.

ಮದ್ಲಿಂಗಿತ್ತಿ :- ಅರಿಶಿಣಶಾಸ್ತ್ರ ಮುಗಿದ ಮೇಲೆ ಕೋರೋಟಕ್ಕೆ ಸಿದ್ಧವಾಗಿರುವ ವದುವಿಗೆ ಮದ್ಲಿಂಗಿತ್ತಿ ಎಂದು ಕರೆಯುತ್ತಾರೆ.

ಪ್ರಯೋಗ :- ಮದ್ಲಿಂಗಿತ್ತಿಯು ಕೈಯಲ್ಲಿ ಒಂದು ನಿಂಬೆಹಣ್ಣು ಕೊಟ್ಟೀರಿ.

ಮರಿತೊಟ್ಲು :- ತೊಟ್ಲು ಕಾರ್ಯ ಮುಗಿದು ಐದಾರು ದಿವಸದೊಳಗೆ ಮಗು ಹಾಗೂ ತಾಯಿ ತವರು ಮನೆಗೆ ಹೋಗಿ ಅಲ್ಲಿಂದ ಉಡಿ ತುಂಬಿಸಿಕೊಂಡು ವಾಪಾಸು ಬರುವುದಕ್ಕೆ ಮರಿತೊಟ್ಲು ಕಾರ್ಯ ಮುಗಿಸಿಕೊಂಡು ಬಂದರು ಎನ್ನುತ್ತಾರೆ.

ಪ್ರಯೋಗ :- ನಮ್ಮ ಮಗಳ್ನ ಮರಿ ತೊಟ್ಲುಕೆ ಕರ್‍ಕೊಂಡು ಬರಬೇಕು.

ಮರುಹಾಸಿಗೆ :- ಸೋಬಾನ ಶಾಸ್ತ್ರದ ಎರಡನೆಯ ದಿವಸಕ್ಕೆ ಮರುಹಾಸಿಗೆ ಎಂದು ಕರೆಯುತ್ತಾರೆ. ಅಂದರೆ ಸೋಬಾನ ಶಾಸ್ತ್ರದ ದಿನ ಮೊದಲಹಾಸಿಗೆ, ಎರಡನೆಯ ದಿನ ಮರುಹಾಸಿಗೆ ಎಂದು ತಿಳಿದುಕೊಂಡಿರುತ್ತಾರೆ.

ಪ್ರಯೋಗ :- ನೋಡಪ ಶಾಸ್ತ್ರ ಆದ ಮ್ಯಾಲೆ ಮರುಹಾಸಿಗೆ ನೋಡಬಾರ್‍ದು ಹೆಣ್ಣಿನ ಮ್ಯಾನೆಲಿ, ಅವತ್ತೆ ವಾಪಾಸು ಬಂದು ಬಿಡಿ.

ಲಗ್ನದ

ಅಕ್ಕಿಗಂಟು :- ವದುವರರಿಗೆ ಅರಿಶಿಣ ಹಚ್ಚಬೇಕಾದವರ ಹೆಸರನ್ನು ಒಂದು ಪತ್ರದಲ್ಲಿ ಸೂಚಿಸಿರುತ್ತಾರೆ. ಇದರ ಜೊತೆಗೆ ಐದು ಸೇರು ಅಕ್ಕಿ, ಐದು ಒಣಕೊಬ್ಬರಿ ಬಟ್ಟಲು, ಐದು ಉತ್ತತ್ತಿ, ಐದು ಅರಿಶಿಣಕೊಂಬು, ಐದು ಕೇರು ಬೀಜ, ಐದು ಚೋಲಿಪೀಸು, ಐದು ತೆಂಗಿನಕಾಯಿ, ಐದು ನಿಂಬೇಹಣ್ಣು, ಎಲೆ ಅಡಕಿ, ಬೆಟ್ಟ ಅಡಕಿ ಇವುಗಳೆಲ್ಲವನ್ನು ಹೊಸ ಬಿಳಿ ಬಟ್ಟೆಯಲ್ಲಿ ಹಾಕಿ ಗಂಟುಕಟ್ಟಿ, ಹೆಣ್ಣಿನ ಮನೆಯವರು ಗಂಡಿನ

ಮನೆಯವರಿಗೆ, ಗಂಡಿನ ಮನೆಯವರು ಹೆಣ್ಣಿನ ಮನೆಯವರಿಗೆ ಕೊಟ್ಟು ಕಳಿಸುತ್ತಾರೆ. ಇದರ ಉದ್ದೇಶವಿಷ್ಟೇ ಇದರಲ್ಲಿ ಸೂಚಿಸಿರುವ ಹೆಸರಿನವರು ಹರಿಶಿಣ ಹಚ್ಚಿದರೆ ವಧುವರರಿಗೆ ಸುಖ ಸಂತೋಷ ದೊರೆಯುತ್ತದೆ ಎಂಬ ನಂಬಿಕೆ.

ಪ್ರಯೋಗ :- ಲಗ್ನದ ಅಕ್ಕಿಗಂಟನ್ನ ಬೀಗ್ರು ಊರಿಗೆ ಇವತ್ತು ಹೋಗಿ ಕೊಟ್ಟು ಬರ್ರೀ.

ಸೂಲಗಿತ್ತಿ :- ಹೆರಿಗೆಯನ್ನು ಮಾಡಿಸಲು ಸಹಾಯ ಮಾಡುವವಳು.

ಪ್ರಯೋಗ :- ಹೆರಿಗೆ ನೋವು ಕಾಣಿಸಿಕೊಂಡೈತಿ ಸೂಲಗಿತ್ತಿ ಕರ್‍ಕೊಂಡು ಬರ್ರೀ.

ಹಂದ್ರಗೂಟ :- ಮದುವೆಯ ಸಂದರ್ಭದಲ್ಲಿ ಹಾಕುವ ಚಪ್ಪರದ ಗೂಟಗಳಿಗೆ ಹಂದ್ರಗೂಟ ಎನ್ನುತ್ತಾರೆ.

ಪ್ರಯೋಗ :- ಹಂದ್ರಗೂಟಕ ವರನ ಕೈಯಿಂದ ಪಂಚಲೋಹ ಹಾಕ್ಸಿ ಪೂಜೆ ಮಾಡ್ಸಿ.

ಹೊಲಿಮನಿ :- ಜನನ, ಮರಣ, ಮುಟ್ಟುಗಳಿಂದುಂಟಾಗುವ ಮೈಲಿಗೆ.

ಪ್ರಯೋಗ :- ನಮ್ಮದು ಹೊಲಿಮನಿ ಆಗೈತಿ ನಾವು ಯಾವುದೇ ಕಾರ್ಯಕಟ್ಟಲುಗಳನ್ನು ಒಂಭತ್ತು ದಿನ ಮಾಡಕ ಬರಲ್ಲ.

ಕಾಳಮ್ಮ :- ಪಾಂಚಾಳರ ವೃತ್ತಿ ದೇವತೆ. ಉಪಕರಣಗಳಿಗೆ ಕಾಳಮ್ಮ ಎಂದು ಕರೆಯುತ್ತಾರೆ.

ಪ್ರಯೋಗ :- ಯುಗಾದ್ಯಗ ಕಾಳಮ್ಮಗ ಉಡಿತುಂಬಿತ್ತಿವಿ ಕುಲುಮೆನ ಮೂರು ದಿವಸ ಹಚ್ಚಲ.

ಮುಡಿಪು :- ವೃತ್ತಿ ದೇವತೆಗೆ ಅರ್ಪಿಸುವ ಸಾಮಾಗ್ರಿಗಳು.

ಪ್ರಯೋಗ :- ನಮ್ಮವ್ವ ದಾರಿ ಕೊಟ್ರ ಈ ಸಲ ಮುಡಿನ ಸಲ್ಲಿಸಬೇಕು.

ಬುತ್ತಿ :- ಅನ್ನವನ್ನು ಅರಿಶಿಣ, ಕುಂಕುಮದಲ್ಲಿ ಕಲೆಸಿ ಹುಂಡಿಗಳನ್ನು ಮಾಡುವರು ಇದಕ್ಕೆ ಬುತ್ತಿ ಎನ್ನುತ್ತಾರೆ. ಇದನ್ನು ಶಿರಸಂಗಿ ಕಾಳಮ್ಮನ ಜಾತ್ರೆಗೆ ಹೋದಾಗ ಅಲ್ಲಿ ಪ್ರಸಾದ ರೂಪದಲ್ಲಿ ಕೊಡುತ್ತಾರೆ. ಇದನ್ನು ತೆಗೆದುಕೊಂಡು ಬಂದು ದೇವರ ಜಗಲಿಯ ಮೇಲೆ ಇಟ್ಟು ಪೂಜೆ ಮಾಡುತ್ತಾರೆ.

ಪ್ರಯೋಗ :- ಅಮ್ಮನ ಬುತ್ತಿನ ಮರೆದೆ ತಗಂಡು ಬನ್ನಿರಿ.

ವಿಶ್ವಕರ್ಮ :- ಪಾಂಚಾಳರ ವೃತ್ತಿ ದೇವತೆ, ಸೃಷ್ಟಿಕರ್ತ ಎಂದು ಕರೆಯುತ್ತಾರೆ.

ಪ್ರಯೋಗ :- ವಿಶ್ವಕರ್ಮ ಜಯಂತಿನ ಈ ಸಲ ಪ್ರತಿ ತಾಲೂಕುಗಳಲ್ಲಿ ನಡೆಸಬೇಕು.

ಅಮವಾಸ್ಯೆ :- ಅಶುಭದಿನ, ಪಾಂಚಾಳರು ವೃತ್ತಿ ಉಪಕರಣಗಳನ್ನು ಪೂಜೆ ಮಾಡಿ ಕೆಲಸಕ್ಕೆ ಬಿಡುವು ಕೊಡುವರು.

ಪ್ರಯೋಗ :- ಅಮವಾಸೆ ದಿವಸ ಕೆಲಸ ಮಾಡಬಾರ್ದು ಏನಾದರು ಪೆಟ್ಟು ಆಗಿಬಿಡ್ತಾವು.

ವಿಜಯದಶಮಿ :- ಪ್ರಮುಖವಾದ ಹಬ್ಬ, ಪಾಂಚಾಳರು ಒಂಭತ್ತು ದಿನಗಳ ಕಾಲ ದೇವಿಯ ಪುರಾಣವನ್ನು ಪಠಣಮಾಡಿ ಹತ್ತು ಹನ್ನೊಂದನೆಯ ದಿವಸದಲ್ಲಿ ವೃತ್ತಿ ಉಪಕರಣಗಳನ್ನು ಪೂಜೆ ಮಾಡಿ ಕೆಲಸಕ್ಕೆ ಬಿಡುವು ಕೊಡುವರು.

ಪ್ರಯೋಗ :- ವಿಜಯದಶಮಿಯಲ್ಲಿ ಕಾಳಮ್ಮಗ ಉಡಿ ತುಂಬಿತಿವಿ.

ಅಂಗುನೂಲು :- ಒಂದು ಮೊಳ ಉದ್ದವಿರುವ ಐದು ಸುತ್ತುದಾರ. ಮುತ್ತೈದೆಯರು, ದೇವತೆಗಳಿಗೆ, ಉಪಕರಣಗಳಿಗೆ ಪೂಜೆಯ ಸಂದರ್ಭದಲ್ಲಿ ಹಾಕುವ ದಾರ.

ಪ್ರಯೋಗ :- ಅಂಗುನೂಲನ ಎಲ್ಲಾ ಮುತ್ತೈದೆಯರು ಹಾಕಿಕೊಳ್ಳಿರಿ.

ಚರಗ :- ಹೊಲ-ಗದ್ದೆಗಳಲ್ಲಿ ಪೈರು ಬೆಳೆದಾಗ ಭೂಮಿತಾಯಿಗೆ ನೈವೇದ್ಯವೆಂದು ಹೊಲದ ತುಂಬೆಲ್ಲಾ ಚೆಲ್ಲುವ ಆಹಾರ. ಇದನ್ನು ಚೆಲ್ಲುವ ಸಂದರ್ಭದಲ್ಲಿ ಉಲಿಗ್ಯೂ, ಉಲಿಗ್ಯೂ ಎಂದು ಕೂಗುತ್ತ ಉಗ್ಗುವರು.

ಪ್ರಯೋಗ :- ಹೊಲಕ್ಕೆ ಹೋಗಿ ಚರಗ ಉಗ್ಗಿಕೊಂಡು ಬನ್ನಿ.

ಗೌರಿಹಬ್ಬ :- ಪಾಂಚಾಳರಿಗೆ ವಿಶೇಷ ಹುಣ್ಣಿಮೆ. ಹುಣ್ಣಿಮೆಯ ದಿವಸ ಗುರ್ಜಿಯನ್ನು (ಹಟ್ಟಿ) ಹಾಕಿ ಗೌರಿ ಪೂಜೆ ಮಾಡುತ್ತಾರೆ.

ಪ್ರಯೋಗ :- ನಾಳೆ ಗೌರಿಹಬ್ಬ ಹಟ್ಟಿಹಾಕಬೇಕು. ಹಟ್ಟಿ ಸಾಮನನ ಹೊಲಕ್ಕೆ ಹೋಗಿ ತಗೊಂಡು ಬನ್ನಿ.

ಹಟ್ಟಿ (ಗುರ್ಜಿ):- ಗೋಮಯದಿಂದ ಹುಂಡೆ ಮಾಡಿ ಈ ಹುಂಡೆಗೆ ಉತ್ರಾಣಿ ಕಡ್ಡಿ, ತೋಗರಿ ಹೂ, ನವಣಿ ತೆನಿ, ಬ್ರಹ್ಮದಂಡಿ, ಹೊನ್ನಾರಿಕೆ ಹೂ ಹಾಗೂ ಚೆಂಡು ಹೂಗಳನ್ನು ಚುಚ್ಚಿರುತ್ತಾರೆ ಇದಕ್ಕೆ ಗುರ್ಜಿ ಎಂದು ಕರೆಯುತ್ತಾರೆ.

ಪ್ರಯೋಗ :- ಹಟ್ಟೆವ್ವನ ಪೂಜೆ ಮಾಡಿ ಬಾಗಿಲ ಮುಂದೆ ಇಡಿರಿ.

ಪಾಂಡವರು :- ಪಾಂಡವರು ವನವಾಸಕ್ಕೆ ಹೋಗುವಾಗ ತಮ್ಮ ಆಯುಧಗಳನ್ನೆಲ್ಲ ಬನ್ನಿಮರದಲ್ಲಿ (ಕಾಳಮ್ಮ) ಇಟ್ಟು ಹೋಗಿದ್ದರು ಎಂಬ ನಂಬಿಕೆಯಿಂದ ವಿಜಯದಶಮಿಯ ದಿವಸದಂದು ಹೊಲದಲ್ಲಿ ಐದು ಚಿಕ್ಕ ಚಿಕ್ಕ ಕಲ್ಲುಗಳನ್ನು ತೆಗೆದುಕೊಂಡು ಅವುಗಳಿಗೆ ಸುಣ್ಣ ಹಚ್ಚಿ ಪೂಜೆ ಮಾಡುತ್ತಾರೆ. ಇದಕ್ಕೆ ಪಾಂಡವರನ ಮಾಡೋದು ಎಂದು ಕರೆಯುತ್ತಾರೆ.

ಪ್ರಯೋಗ :- ಹೊಲಕ್ಕೆ ಹೋಗಿ ಪಾಂಡವರನ ಮಾಡಿಕೊಂಡು ಬನ್ನಿ.

ಹಿರಿಯರ ಹಬ್ಬ:- ಹಿರಿಯರ ಆತ್ಮಶಾಂತಿಗಾಗಿ ಹಾಗೂ ಅವರ ಮಾರ್ಗದರ್ಶನ ನಮ್ಮನ್ನು ಸದಾ ಕಾಪಡಲಿ ಎಂಬ ನಂಬಿಕೆಯಿಂದ ಇದನ್ನು ಆಚರಿಸುತ್ತಾರೆ.

ಪ್ರಯೋಗ :- ನಾಳೆ ಬರೋ ಹುಣ್ಣಿಮ್ಯಾಗ ಹಿರಿಯರಿಗೆ ಎಡೆ ಹಾಕ್ತೀವಿ ಮಗಳ್ನ ಕಳ್ಸಿಕೊಡಿ.

ಎತ್ತು :- ಬಡಗಿಗಳು ಕೆಲಸ ಮಾಡುವ ಸಂದರ್ಭದಲ್ಲಿ ರೈತರಿಗೆ, ಇಲ್ಲವೇ ತನ್ನ ಸಹಾಯಕನಿಗೆ ಎತ್ತು ಎಂದು ಹೇಳುತ್ತಾನೆ. ಅಂದರೆ ಇಲ್ಲಿ ನೊಗ ಎತ್ತಿ ಹಿಡಿದುಕೊ, ಈಚು(ಗಳು) ಎತ್ತಿಹಿಡಿದುಕೊ ಅಂದರೆ ಮೇಲಕ್ಕೆತ್ತು ಎಂಬರ್ಥವನ್ನು ಕೊಡುತ್ತದೆ.

ಪ್ರಯೋಗ :- ಈಚು(ಗಳು) ಎತ್ತಿಹಿಡಿ ಕೆತ್ತುತ್ತಿನಿ.

ಕೆತ್ತು :- ಬಡಗಿ ಕಟ್ಟಿಗೆಯನ್ನು ತನಗೆ ಬೇಕಾದ ಆಕೃತಿಗೆ ಬಾಚಿಯಿಂದ ಸಜ್ಜುಗೊಳ್ಳುವುದಕ್ಕೆ ಕೆತ್ತು ಎಂದು ಉಪಯೋಗಿಸುತ್ತಾನೆ.

ಪ್ರಯೋಗ :- ಮರ ಈ ಡೊಂಕು ಇದ್ದಾರೆ ಕುಂಟಿಕೆತ್ತಕ ಬರೋಲ್ಲ.

ಜಡಿ (ಬಡಿ) :- ಕುಂಟೆಯಲ್ಲಿ ಬಡಗಿ ಈಚು ಸೀಗಿಸಿದಾಗ ರೈತನಿಗೆ ಈಚಾನ್ನು ಅಥವಾ ಇತರೆ ಯಾವುದೇ ಇರಬಹುದು ಬಡಿಯಲು ಹೇಳುತ್ತಾನೆ. ಅಂದರೆ ಕುಂಟೆಗೆ ಈಚು ಬಿಗಿಯಾಗಲೆಂದು.

ಪ್ರಯೋಗ :- ಮೇಳಿಯನ್ನು ಕುಂಟಿಗೆ ಜಡಿ.

ತಗಿ :- ಕುಂಟಿಯನ್ನು ಹಾಸುವ ಸಂದರ್ಭದಲ್ಲಿ ಈಚು, ಮೇಳಿ, ತಾಳನ್ನು ಕೆತ್ತುತ್ತಿರುತ್ತಾನೆ ಆ ಸಂದರ್ಭದಲ್ಲಿ ಕುಂಟಿಯಲ್ಲಿರುವ ರಂಧ್ರಕ್ಕೆ ಸರಿಹೊಂದುವಂತೆ ಈಚು, ಮೇಳಿ, ತಾಳನ್ನು ಕೆತ್ತಬೇಕು. ಕೆತ್ತಿ ಆ ರಂಧ್ರಕ್ಕೆ ಈಚಾನ್ನು ಇಡುತ್ತಾರೆ. ಅವಾಗ ಅದು ಸರಿಹೊಂದಲಿಲ್ಲ ಎಂದರೆ ತಗಿ ಎನ್ನುತ್ತಾರೆ. ಮತ್ತೆ ಅದನ್ನು ಕೆತ್ತಿ ಕುಂಟಿಗೆ ಸಿಗುಸು ಎನ್ನುತ್ತಾರೆ.

ಪ್ರಯೋಗ :- ಈಚು ತಗಿ ಸ್ವಲ್ಪ ಬಳುದು ಮಾಡೋಣ.

ಕಟ್ಟು :- ಕುಂಟಿ, ರಂಟಿಯನ್ನು ಹಾಸುವಾಗ ಈಚು, ತಾಳು, ಮೇಳಿಗಳನ್ನು, ರಂಟೆ, ಕುಂಟಿಯಲ್ಲಿ ಬಿಗಿಯಾಗಿರುವುದಕ್ಕೆ ಸೆಕ್ಕೆ ತುಂಡುಗಳನ್ನು ಬಡಿಯುತ್ತಾರೆ. ಇದಕ್ಕೆ ಸೆಕ್ಕೆ ಕಟ್ಟು ಎಂದು ಕರೆಯುತ್ತಾರೆ.

ಪ್ರಯೋಗ :- ಕುಂಟಿ ಬಳಕಡುದೈತಿ ಸೆಕ್ಕಿ ಕಟ್ಟಿ ಬಳುದು ಮಾಡಿಕೋಡಪಾ.

ಹಾಕು :- ಕುಂಟಿ, ರಂಟಿಯನ್ನು ಕೆತ್ತುವಾಗ ಬಡಿಗ ಹಾಕು, ತಗಿ ಎನ್ನುತ್ತಿರುತ್ತಾನೆ. ಅಂದರೆ ಇಲ್ಲಿ ರೈತನಿಗೆ ಈಚು ಹಾಕು ಈಚು ತಗಿ ಎಂದು ಹೇಳುತ್ತಾನೆ. ಹಾಕು ಎಂದರೆ ರಂಟಿಗೆ ಈಚನ್ನು ತುರುಕು, ಸೇರಿಸು ಎಂದರ್ಥ.

ಪ್ರಯೋಗ :- ಕುಂಟಿಗೆ ಈಚನ ಹಾಕು.

ಹಣಿ :- ಹಣಿ ಎಂದರೆ ರೈತ ಕೃಷಿ ಉಪಕರಣಗಳಾದ ಕುಡ, ಗುದ್ದಲಿ, ಕುರ್ಚಿಗೆ ಇತ್ಯಾದಿಗಳನ್ನು ಕುಲುಮೆಯಲ್ಲಿ ಕಾಸಿ ಹರಿತ ಮಾಡಿಕೊಡುವುದಕ್ಕೆ ಹಣಿ ಎಂದು ಕರೆಯುತ್ತಾರೆ.

ಪ್ರಯೋಗ :- ಕುಡ ಹಣಿಯಾಕ ಇದ್ದಿ ಇಲ್ಲ ನಾಳೆ ಹಣಿದಾರಯ್ತು ಬೀಡು.

ನೀರ್ಕುಡ್ಸು :- ಕಮ್ಮಾರ ಕಬ್ಬಿಣ ಕೆಲಸ ಮಾಡುವಾಗ ಗುದ್ದಲಿ, ಉಳಿ, ಕತ್ತಿ, ಹರಿಕೋಲು ಮುಂತಾದ ಸಾಮಾಗ್ರಿಗಳನ್ನು ಕಾಯಿಸಿ ಬಡಿದು ಮುಂದಿನ ತುದಿಗೆ ನೀರನ್ನು ಉಣಿಸುವನು. ಇದರಿಂದ ಆ ಭಾಗ ಬೀರುಸು ಆಗುತ್ತದೆ. ಕೆಲಸ ಮಾಡುವ ಸಂದರ್ಭದಲ್ಲಿ ಅದು ಬೇಗ ಸವೆಯುವುದಿಲ್ಲ. ಇದಕ್ಕೆ ನೀರ್ಕುಡ್ಸು ಎಂದು ಕರೆಯುವರು.

ಪ್ರಯೋಗ :- ಜಾಸ್ತಿ ನೀರ್ಕುಡ್ಸುಬಹುದು ಆದರೆ ತುದಿ ಬೀರುಸು ಬರೋಲ್ಲ.

ತೋಳ್ಸು :- ಕಬ್ಬಿಣದ ವಸ್ತುಗಳನ್ನು ಕಮ್ಮಾರರು ಹರಿತಗೊಳಿಸುವುದಕ್ಕೆ ತೋಳ್ಸಾ ಎಂದು ಕರೆಯುತ್ತಾರೆ. ಅಂದರೆ ಆಯುಧಗಳಿಗೆ ಬಾಯಿ ಮಾಡುವುದು.

ಪ್ರಯೋಗ :- ಕೊಡ್ಲಿನ ತೋಳ್ಸು ಕೊಡು ಆಚಾರೆಪ್ಪ.

ಅಡಿಟಿಪ್ಪಣಿ

೦೧. ಡಾ.ಡಿ.ಪಾಂಡುರಂಗಬಾಬು, ಪಾಂಚಾಳ ವೃತ್ತಿಪದಕೋಶ, ೨೦೦೦, ಪ್ರಸ್ತಾವನೆ

೦೨. ಡಾ.ಕೆ.ರವೀಂದ್ರನಾಥ, ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ, ೨೦೦೭, ಪುಟ.೩೪

೦೩. ಡಾ.ಡಿ.ಪಾಂಡುರಂಗಬಾಬು, ಪಾಂಚಾಳ ವೃತ್ತಿಪದಕೋಶ, ೨೦೦೦, ಪ್ರಸ್ತಾವನೆ

೦೪. ಡಾ.ವೀರೇಶ ಬಡಿಗೇರ, ಅಡಿಗಲ್ಲು, ೧೯೯೭, ಪುಟ.೦೭

೦೫. ಡಾ.ವೀರೇಶ ಬಡಿಗೇರ, ಅಡಿಗಲ್ಲು, ೧೯೯೭, ಪುಟ.೦೭

೦೬. ಜಿ.ಜ್ಞಾನನಂದ, ಶಿಲ್ಪಾದರ್ಶ ಸಂಪುಟ-೧, ೨೦೦೧, ಪುಟ.೧೧

೦೭. ಡಾ.ಡಿ.ಪಾಂಡುರಂಗಬಾಬು, ಪಾಂಚಾಳ ವೃತ್ತಿಪದಕೋಶ, ೨೦೦೦, ಪ್ರಸ್ತಾವನೆ

೦೮. ಡಾ.ಕೆ.ರವೀಂದ್ರನಾಥ, ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ, ೨೦೦೭, ಪುಟ.೩೪

೦೯. ಕುಮಾರಸ್ವಾಮಿ, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ೧೯೯೪, ಪುಟ.೨೦

೧೦. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಿಕ್ಕಂತಹ ಮಾಹಿತಿ ಪಾಂಚಾಳ ಸಮುದಾಯವರಿಂದ

೧೧. ಜಿ.ಜ್ಞಾನನಂದ, ಶಿಲ್ಪಾದರ್ಶ (ಸಂ-೧), ೨೦೦೧, ಪುಟ.೩

೧೨. ಜಿ.ಜ್ಞಾನನಂದ, ಶಿಲ್ಪಾದರ್ಶ (ಸಂ-೧), ೨೦೦೧, ಪುಟ.೭

೧೩. ತಿಪ್ಪೇಸ್ವಾಮಿ ಪಿ.ಆರ್ (ಸಂ), ಶಿಲ್ಪಕಲಾ ಪ್ರಪಂಚ, ೧೯೯೪, ಪುಟ.೩೨

೧೪. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೬೯, ಬದಾಮಿ (ತಾ), ಪಟ್ಟದಕಲ್ಲು

೧೫. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೭೦, ಬದಾಮಿ (ತಾ), ಪಟ್ಟದಕಲ್ಲು

೧೬. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೭೧, ಬದಾಮಿ (ತಾ), ಪಟ್ಟದಕಲ್ಲು

೧೭. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೮೮, ಬದಾಮಿ (ತಾ), ಪಟ್ಟದಕಲ್ಲು

೧೮. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೪೧, ಬದಾಮಿ (ತಾ), ಪಟ್ಟದಕಲ್ಲು

೧೯. ಡಾ.ದೇವರಕೊಂಡ ರೆಡ್ಡಿ (ಸಂ), ಬಾಗಲಕೋಟೆ ಜಿಲ್ಲಾ ಶಾಸನಸಂಪುಟ, ಶಾಸನ ಸಂಖ್ಯೆ ೫೯, ಬದಾಮಿ (ತಾ), ಪಟ್ಟದಕಲ್ಲು

೨೦. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೧೩

೨೧. ಕೆ.ವಾಸುದೇವಾಚಾರ್ ಶಿವಮೊಗ್ಗ (ಸಂ), ಶಿಲ್ಪ ಸಹ್ಯಾದ್ರಿ, ೧೯೯೧, ಪುಟ.೧೩

ಅಧ್ಯಾಯ - ಐದು

ಆಚರಣೆ, ಸಂಪ್ರದಾಯಗಳು

೫.೧. ಸಮುದಾಯದ ಸಾಮಾನ್ಯ ದೈವ, ನಂಬಿಕೆ, ಆಚರಣೆಗಳು

೫.೧.೧. ದೈವಗಳು

೫.೧.೨. ಆಚರಣೆಗಳು

೧. ಜನನ

೨. ಬಾಣಂತನ

೩. ನಾಮಕರಣ

೪. ಜವುಳ

೫. ಋತುಮತಿಯಾದಾಗಿನ ಕಾರ್ಯಕ್ರಮ

೬. ಉಪನಯನ

೭. ವಿವಾಹ ಪದ್ಧತಿ

೮. ಸೀಮಂತ

೯. ಸಾವು-ಸಂಸ್ಕಾರ

೫.೧.೩. ಹಬ್ಬಗಳು

೫.೧.೪. ಪಾಂಚಾಳರ ಧಾರ್ಮಿಕ, ಸಾಮಾಜಿಕ ಸ್ಥಾನಮಾನ

೫.೨. ವೃತ್ತಿಯಾಧಾರಿತ ನಂಬಿಕೆ, ನಿಷೇಧ, ಆಚರಣೆಗಳು

೫.೨.೧. ವೃತ್ತಿ ಸಂಬಂಧಿ ಆಚರಣೆ

೫.೨.೨. ವೃತ್ತಿ ಸಂಬಂಧಿ ಹಬ್ಬ-ಆಚರಣೆಗಳು

೫.೨.೩. ವೃತ್ತಿ ಸಂಬಂಧಿ ನಂಬಿಕೆ, ನಿಷೇಧಗಳು

ಅಧ್ಯಾಯ - ಐದು

ಆಚರಣೆ, ಸಂಪ್ರದಾಯಗಳು

ಮನುಷ್ಯನಿಗೆ ಹುಟ್ಟು ಆಕಸ್ಮಿಕ ಸಾವು ಅನಿವಾರ್ಯ ಎಂಬ ನಾಣ್ಣುಡಿಯಂತೆ ಮನುಷ್ಯ ಹುಟ್ಟಿನಿಂದ ಸಾಯುವ ತನಕ ಒಂದಲ್ಲ ಒಂದು ರೀತಿಯಲ್ಲಿ ಬದುಕುತ್ತಾ ತನ್ನ ಜೀವನವನ್ನು ಸವೆಸಿ ಕೊನೆಯುಸಿರೆಳೆಯುತ್ತಾನೆ. ಹೀಗೆ ಮನುಷ್ಯ ಬದುಕುವ ರೀತಿಯನ್ನು ಜೀವನ ಎನ್ನುತ್ತೇವೆ. ಮನುಷ್ಯ ಜೀವನದ ಹಂತಗಳಾದ ಜನನ, ನಾಮಕರಣ, ಜವುಳ, ಮುಂಜಿ, ಒಸಗೆ, ಮದುವೆ, ಸೀಮಂತ ಹಾಗೂ ಸಂಸ್ಕಾರ ಇವುಗಳನ್ನು ಮನುಷ್ಯನು ಬದುಕುತ್ತಿರುವ ಬದುಕಿನ ತೀರಾ ಹತ್ತಿರಕ್ಕೆ ಬಂದು ಅವಲೋಕಿಸಿದರೆ, ಒಂದು ಸಮುದಾಯದ ಜೀವನ ಕ್ರಮಕ್ಕೂ ಮತ್ತೊಂದು ಸಮುದಾಯದ ಜೀವನ ಕ್ರಮಕ್ಕೂ ವ್ಯತ್ಯಾಸವಿರುವುದು ಕಂಡುಬರುತ್ತದೆ. ಅಂದರೆ ಮನುಷ್ಯನು ಆಚರಿಸುವ ಆಚರಣೆ ಆ ಸಮುದಾಯದ ಕಟ್ಟಲೆಯಲ್ಲಿ ಅನುಸರಿಸಲಾಗುತ್ತಿರುವ ನಡಾವಳಿಗಳು ಎನ್ನಬಹುದು.

ಆಯಾ ಜನಾಂಗದ ಜೀವನ ವಿಧಾನದ ಮೂಲಕ ಆಚರಣೆಗಳು ರೂಪುಗೊಳ್ಳುತ್ತವೆ. ಏಕೆಂದರೆ ವ್ಯಕ್ತಿಯ ಬದುಕಿನಲ್ಲಿ ಅನೇಕ ರೀತಿಯ ಸಂಕ್ರಮಣಗಳು ನಡೆಯುತ್ತವೆ. ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಬದಲಾವಣೆಯಾಗುವುದು ಸಂಕ್ರಮಣದ ಲಕ್ಷಣ. ಇದೊಂದು ಮಹತ್ವದ ಬದಲಾವಣೆಯಾದುದರಿಂದ ಆಚರಣೆಗಳು ಸುಸೂತ್ರವಾಗಿ ಜರುಗಬೇಕು. ಅದಕ್ಕೆ ಯಾವುದೇ ತರಹದ ವಿಘ್ನವಾಗಬಾರದೆಂದು ಮನುಷ್ಯ ಕಾಳಜಿವಹಿಸುತ್ತಾನೆ. ಈ ಕಾಳಜಿಯೇ ಆಚರಣೆಗಳ ಹುಟ್ಟಿಗೆ ಕಾರಣವಾಗುತ್ತದೆ. ಉದಾಹರಣೆಗೆ ವಿವಾಹವೆಂಬುದು ಅವಿವಾಹಿತ ಬದುಕಿನಿಂದ ದಾಂಪತ್ಯ ಬದುಕಿನ ಕಡೆಗೆ ಸಾಗುವುದು ಇದು ಸುಸೂತ್ರವಾಗಿ ನಡೆಯಬೇಕೆಂದು ಈ ಆಚರಣೆಗಳು ಜನ್ಮ ತಾಳಿದವು. ಅಂದರೆ ಇದರ ಉದ್ದೇಶ ಎಲ್ಲವು ಸಂತೋಷದಾಯಕವಾಗಿ ನಡೆಯಬೇಕೆಂಬುದಾಗಿದೆ. ಈ ಮೇಲೆ ತಿಳಿಸಿದಂತೆ ಜನರು ಸಂಪ್ರದಾಯಗಳಿಗೆ ತಲೆಬಾಗುತ್ತಲೇ ಬಂದಿದ್ದಾರೆ. ಈ ಭದ್ರ ಬುನಾದಿಯ ಮೇಲೆ ಪರಂಪರಾಗತವಾಗಿ ಮುಂದುವರೆಯುವ ಸಂಪ್ರದಾಯ, ನಂಬಿಕೆಗಳು ಅವರ ಬದುಕಿನ ಪ್ರತೀಕ. ಒಂದು ಸಮುದಾಯದ ಸಾಮಾಜಿಕ ಅಸ್ತಿತ್ವ, ಅನನ್ಯತೆ, ಅದು ನಂಬಿದ ಮೌಲ್ಯ, ಆಚರಿಸುವ ಆಚರಣೆ, ನಂಬಿಕೆಗಳ ಹಾಗೂ ಬದುಕಿನ ರೀತಿ

ನೀತಿಗಳಲ್ಲಿ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಾಂಚಾಳ ಸಮುದಾಯದ ದೈವ, ಆಚರಣೆ, ನಂಬಿಕೆಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಪಾಂಚಾಳರೆಂದರೆ ನಿರ್ದಿಷ್ಟವಾಗಿ ಸಾಂಪ್ರದಾಯಿಕವಾಗಿ ಸಸ್ಯಹಾರಿಗಳಾಗಿದ್ದು ವೃತ್ತಿ ಸಂಬಂಧಿಯಾದ ಪಾರಂಪರಿಕ ನಿಯಮ ಪಾಲನೆ, ಆಚರಣೆಗಳನ್ನು ನಿರ್ವಹಿಸುತ್ತಿರುವ ಐದೂ ವೃತ್ತಿಗಳಾದ ಸಾಂಪ್ರದಾಯಿಕ ಶಿಲ್ಪಗಾರಿಕೆ, ಸಾಂಪ್ರದಾಯಿಕ ಅಕ್ಕಸಾಲಿಕೆ, ಸಾಂಪ್ರದಾಯಿಕ ಕಂಚುಗಾರಿಕೆ, ಸಾಂಪ್ರದಾಯಿಕ ಬಡಗಿಗಾರಿಕೆ ಹಾಗೂ ಸಾಂಪ್ರದಾಯಿಕ ಕಮ್ಮಾರಿಕೆಯಲ್ಲಿ ತೊಡಗಿರುವವರನ್ನು ಮಾತ್ರ ಈ ಅಧ್ಯಯನದಲ್ಲಿ ಗಮನಿಸಲಾಗಿದೆ. ಪರಂಪರೆಯ ಸಮುದಾಯ ಸಂಬಂಧಿಯಲ್ಲದ ಮುಖ್ಯವಾಗಿ ವೃತ್ತಿ ಸಂಬಂಧಿ ಸಮುದಾಯವೇ ಆಗಿ ಕೆಲವು ನಿರ್ದಿಷ್ಟ ಹಂತದ ನಿರ್ದಿಷ್ಟ ಕೆಲಸಗಳಲ್ಲಿ ತೊಡಗಿರುವ ಆದರೆ ಪಾಂಚಾಳರಿಂದ ಭಿನ್ನವಾದ ಸಮುದಾಯಗಳೂ ಕೆಲವು ವೃತ್ತಿ ನಿರತವಾಗಿವೆ. ಉದಾ:- ಕಮ್ಮಾರಿಕೆ ಮತ್ತು ಅಕ್ಕಸಾಲಿಕೆ ಕೆಲವು ಕಡೆ ಬಿಡಿಯಾಗಿ ಬಡಗಿತನ ವಿಶೇಷವಾಗಿ ಈ ಮೂರು ವೃತ್ತಿಗಳೂ ರೈತ ಸಂಬಂಧೀ, ಸಮಾಜ ಸಂಬಂಧೀ, ವ್ಯವಹಾರ ಸಂಬಂಧೀ ವೃತ್ತಿಗಳಾಗಿದ್ದು ಪಾರಂಪರಿಕ ಸಂಪ್ರದಾಯ ಮತ್ತು ಆಚರಣೆಗಳಿಗೆ ಅಂತಹ ಮಹತ್ವವಿರುವುದಿಲ್ಲ. ಆದರೆ ಶಿಲ್ಪಗಾರಿಕೆ ಹಾಗೂ ಕಂಚುಗಾರಿಕೆ ಪರಂಪರಾಗತವಾದ ಕಲಾ ಸಂಬಂಧಿಯಾದ ಸಂಸ್ಕೃತಿ ಸಂಬಂಧಿ ನಿರ್ಮಾಣಗಳಾಗಿದ್ದು ಇವರ ಸಾಮಾಜಿಕ ಸ್ಥಾನಮಾನ ಮೇಲ್ಮಟ್ಟದಲ್ಲಿರುತ್ತದೆ. ಇವರು ಕೆಲವು ನಿರ್ದಿಷ್ಟ ಆಚರಣೆ, ನಂಬಿಕೆ, ನಿಷೇಧಗಳನ್ನು ಪಾಲಿಸಲೇ ಬೇಕಾಗಿರುತ್ತದೆ. ಆದ್ದರಿಂದ ವೃತ್ತಿ ವಲಯದೊಳಗೆ ಇತರರಿಗೆ ಪ್ರವೇಶವಿಲ್ಲದೆ ನಿಷೇಧಿತವಾಗಿದೆ. ಆದರೆ ಕಮ್ಮಾರಿಕೆ ಮತ್ತು ಅಕ್ಕಸಾಲಿಕೆಯ ಕ್ಷೇತ್ರ ಒಂದು ರೀತಿಯಲ್ಲಿ ಮುಕ್ತವಾಗಿದ್ದು ಇಲ್ಲಿ ಪರಂಪರೆಯೇತರ ವ್ಯಕ್ತಿಗಳ ಪ್ರವೇಶವಾಗಿದ್ದು ಕಾಲಾನುಕ್ರಮದಲ್ಲಿ ಪ್ರತ್ಯೇಕ ಸಮುದಾಯವಾಗಿರಬಹುದು ಕೆಲವು ವಿಚಾರಗಳಲ್ಲಿ ಆಹಾರ, ನಂಬಿಕೆ, ಆಚರಣೆಗಳಲ್ಲಿ ಭಿನ್ನವಾಗಿದ್ದು ಇವರ ವಿಚಾರಗಳನ್ನು ಸಾಂದರ್ಭಿಕವಾಗಿ ಅಲ್ಲಲ್ಲಿ ಚರ್ಚಿಸಿದೆ.

೫.೧. ಸಮುದಾಯದ ಸಾಮಾನ್ಯ ದೈವ, ನಂಬಿಕೆ, ಆಚರಣೆಗಳು

೫.೧.೧. ದೈವಗಳು

೧. ಕಾಳಮ್ಮ

ಪಾಂಚಾಳರ ವೃತ್ತಿ ದೇವತೆ ಬನ್ನಿಮರ, ಕಳಶ, ವೃತ್ತಿಯ ಉಪಕರಣ ಇವುಗಳಿಗೆ ಕಾಳಮ್ಮ ಎಂದು ಕರೆಯುತ್ತಾರೆ. ಕುಲುಮೆಗೂ ಕೂಡ ಕಾಳಮ್ಮ ಎಂತಲೇ ಕರೆಯುತ್ತಾರೆ. ಕಾಳಮ್ಮ ಎಂದರೆ ಬೆಂಕಿಯೆಂದೇ ಹೇಳಬಹುದು. ಈ ಕುಲುಮೆಯನ್ನು ಪ್ರತಿಷ್ಠಾಪಿಸುವಾಗ ಮಂಗಳವಾರ ಹಾಗೂ ಶುಕ್ರವಾರದಂದು ಮಾತ್ರ ಪ್ರತಿಷ್ಠಾಪಿಸುತ್ತಾರೆ. ಈ ವಾರಗಳು ಕಾಳಮ್ಮನ ಪೂಜೆಸಲಿಕ್ಕೆ ಶುಭದಿನಗಳು ಎಂಬ ನಂಬಿಕೆ. ಈ ವಾರದ ದಿವಸದ ಶುಭ ಸಮಯದಲ್ಲಿ ತಮ್ಮ ಮನೆಯವರು ಹಾಗೂ ಸಮುದಾಯದವರೆಲ್ಲರೂ ಸೇರಿ ಕುಲುಮೆ ಸ್ಥಾಪಿಸುವ ಜಾಗಕ್ಕೆ ಪೂಜೆಯನ್ನು ಕೈಗೊಳ್ಳುವರು. ಕುಲುಮೆಗೆ ಸಂಬಂಧಿಸಿದಂತೆ ವಾಸ್ತುವನ್ನು ನೋಡಿ ಆ ವಾಸ್ತುವಿಗೆ ಅನುಗುಣವಾಗಿ ಗೋಡೆ (ಗೋಡೆ ಅಂದರೆ ಕುಲುಮೆಗಡ್ಡೆ)ಯನ್ನು ಉತ್ತರಭಿಮುಖವಾಗಿ ಕಟ್ಟುತ್ತಾರೆ. ಇದನ್ನು ಗೋಪುರದ ಆ ಕೃತಿಯಲ್ಲಿ ನಿರ್ಮಾಣ ಮಾಡುತ್ತಾರೆ. ಇದರ ಮುಂದೆ ತಗ್ಗನ್ನು

(ಗುಂಡಿ) ತೋಡಿ ಅದರಲ್ಲಿ ಪಂಚಲೋಹ ಹಾಗೂ ಹಾಲು ತುಪ್ಪವನ್ನು ಹಾಕಿ ಕುಲುಮೆಯ ಗಡ್ಡೆಗೆ ಮುತ್ತೈದೆಯರೆಲ್ಲರೂ ಸೇರಿ ಹೊಸ ಸೀರೆ ಉಡಿಸಿ, ಉಡಕ್ಕಿಹಾಕಿ ತಾವು ಉಡಕ್ಕಿಯನ್ನು ತುಂಬಿಕೊಂಡು ಕಂಕಣಕಟ್ಟಿ ಅರಿಶಿಣ, ಕುಂಕುಮ ಹಚ್ಚಿ ಪೂಜೆ ಮಾಡಿ ಕಳಶ ಬೆಳಗಿ ಅಕ್ಷತೆ ಕಾಳನ್ನು ಗೋಪುರಕ್ಕೆ ಹಾಕುತ್ತಾರೆ. ನಂತರ ಕುಲುಮೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸುವರು. ಅಂದಿನಿಂದಲೇ ಕಾಳಮ್ಮ ಎಂದು ಕುಲುಮೆ ಗಡ್ಡೆಯನ್ನು ಆರಾಧಿಸುತ್ತಾರೆ. ಈ ಕುಲುಮೆ ಸ್ಥಳಕ್ಕೆ ಚಪ್ಪಲಿಯನ್ನು ಹಾಕಿಕೊಂಡು ಬರುವಂತಿಲ್ಲ. ವರಗಾದ ಹೆಣ್ಣು ಮಕ್ಕಳು ಕುಲುಮೆಯ ಸ್ಥಳಕ್ಕೆ ಬರುವಂತಿಲ್ಲ. ಹಾಗೂ ಪೂಜೆ ಮಾಡುವಂತಿಲ್ಲ. ಸಮುದಾಯದ ಸಂಬಂಧಿಕರು ತೀರಿಕೊಂಡ ಸಂದರ್ಭದಲ್ಲಿ ಕುಲುಮೆಯ ಕೆಲಸವನ್ನು ಪ್ರಾರಂಭಿಸುವುದಿಲ್ಲ. ಬೆಳಗ್ಗೆ ಕೆಲಸವನ್ನು ಪ್ರಾರಂಭಿಸುವಾಗ ಕುಲುಮೆಯನ್ನು ಸ್ವಚ್ಛಗೊಳಿಸಿ ಪೂಜೆ ಮಾಡಿಯೇ ಕೆಲಸವನ್ನು ಪ್ರಾರಂಭಿಸುತ್ತಾರೆ. ಕೆಲಸ ಮುಗಿದ ನಂತರ ಕುಲುಮೆಯಲ್ಲಿರುವ ಬೆಂಕಿಯನ್ನು ಹೊರಗಡೆಗೆ ಎಳೆದು ನೀರನ್ನು ಹಾಕಿ ನಂದಿಸುವರು. ಇಲ್ಲವೆ ಬೂದಿಯನ್ನು ಅದರ ಮೇಲೆ ಹಾಕಿ ಮುಚ್ಚುತ್ತಾರೆ. ಕೆಲಸ ಮಾಡುವ ಅಡಿಗಲ್ಲು ಮೇಲೆ ಯಾರು ಕೂಡುವಂತಿಲ್ಲ. ಅದರ ಮೇಲೆ ಯಾರಾದರೂ ಕುತರೆ ವೃತ್ತಿ ದೇವತೆಗೆ ಅವಮಾನ ಮಾಡಿದಂತೆ. ಅದಕ್ಕಾಗಿ ಅದರ ಮೇಲೆ ಯಾರನ್ನು ಕುರುವುದಕ್ಕೆ ಬಿಡುವುದಿಲ್ಲ. ಯಾರಾದರೂ ಕುತರೆ ಅದರ ಮೇಲೆ ತಯಾರಾಗುವ ಸಾಮಾನುಗಳು ಸರಿಯಾಗುವುದಿಲ್ಲ ಹಾಗೂ ಕುಳಿತ ವ್ಯಕ್ತಿಗೆ ಅಶುಭವಾಗುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಪಾಂಚಾಳರು ಕೆಲಸದಲ್ಲಿ ಯಾವುದೇ ಉಪಕರಣ ತಮ್ಮ ಕಾಲುಗಳಿಗೆ ಬಡಿದಾಗ ಅವುಗಳಿಗೆ ನಮಸ್ಕರಿಸಿಯೇ ಮುಂದಿನ ಕೆಲಸ ಮಾಡುತ್ತಾರೆ.

೨. ಭರಮಪ್ಪ

ಬ್ರಹ್ಮನು ವೇದಗಳ ಪ್ರಜಾಪತಿ, ವಿಶ್ವಕರ್ಮ, ವಿಶ್ವನಿರ್ಮಾತೃ ಎಂದೆಲ್ಲಾ ಕರೆದಿದೆ. ಆ ಕಾರಣದಿಂದಲೇ ಬ್ರಹ್ಮ ವಿಶ್ವಕರ್ಮರಿಗೆ ಮೂಲ ದೇವರಾಗುತ್ತಾನೆ. ಬ್ರಹ್ಮನಿಗೆ ಭರಮಪ್ಪ ಎಂದು ಕರೆಯುತ್ತಾರೆ. ಈ ಜಗತ್ತನ್ನು ಸೃಷ್ಟಿಸಿದವನು ಬ್ರಹ್ಮ ಎಂಬ ನಂಬಿಕೆಯನ್ನಿಟ್ಟಿಕೊಂಡು ಬಂದಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರತಿಷ್ಠಾಪನೆ ಸಂದರ್ಭದಲ್ಲಿ ವಿಶೇಷ ಆಚರಣೆಗಳು ಕಂಡು ಬರುವುದಿಲ್ಲ. ಹಾಗೂ ಸರಳ ರೀತಿಯಲ್ಲಿಯೇ ಗುಡಿಯನ್ನು ರಚನೆ ಮಾಡಿರುತ್ತಾರೆ. ಈ ಗುಡಿಯ ಒಳಗಡೆಗೆ ದುಂಡಾದ ಕಲ್ಲುಗಳಿಗೆ ಸುಣ್ಣವನ್ನು ಬಳಿದು ಅವುಗಳನ್ನೇ ಭರಮಪ್ಪ ಎಂದು ಪೂಜೆ ಮಾಡುವುದನ್ನು ಕಾಣಬಹುದು. ಈ ದೇವರನ್ನು ಪೂಜೆ ಮಾಡುವುದು ಗೌರಿಹುಣ್ಣಿಮೆ, ಯುಗಾದಿ, ನವರಾತ್ರಿ ಹಾಗೂ ಮಕ್ಕಳು ಜನಿಸಿದ ಸಂದರ್ಭದಲ್ಲಿ ಪಣಿವಾರ ಪೂಜೆ ಮಾಡಿಕೊಂಡು ಬರಲಿಕ್ಕೆ ಇಂತಹ ಸಂದರ್ಭದಲ್ಲಿ ಆರಾಧಿಸುವುದನ್ನು ಕಾಣಬಹುದು. ಪೂಜೆಗೆ ತಂದಿರುವ ಪ್ರಸಾದ, ತೆಂಗಿನಕಾಯಿ ಇತ್ಯಾದಿ ಯಾವುದನ್ನು ಮನೆಗೆ ಮರಳಿ ಒಯ್ಯುವುದಿಲ್ಲ. ಅವುಗಳನ್ನು ಅಲ್ಲಿಯೇ ತಿಂದು ಮುಗಿಸಿ ಮನೆಗೆ ಮರಳುತ್ತಾರೆ. ಇದರ ಉದ್ದೇಶ ಭರಮಪ್ಪ ದೇವರಿಗೆ ಅರ್ಪಿಸಿದ ಪದಾರ್ಥವನ್ನು ಮರಳಿ ಮನೆಗೆ ತಂದರೆ ಆ ಮನೆಗೆ ಶುಭವಾಗಲಾರದೆಂಬ ನಂಬಿಕೆಯನ್ನಿಟ್ಟು ಕೊಂಡಿದ್ದಾರೆ. ಈ ಉದ್ದೇಶದಿಂದಲೇ ಆ ಪಣಿವಾರವನ್ನು ಅಲ್ಲಿಯೇ ತಿಂದು ಬರುತ್ತಾರೆ.

೩. ವಿಶ್ವಕರ್ಮ

ಪಾಂಚಾಳರ ಮೂಲ ಪುರುಷ, ಈತನ ಹೆಸರೇ ಜನಾಂಗಕ್ಕೂ ಬಂದಿದೆ. ಈತನು ಭುವನನ ಮಗ ಅಥವಾ ಭೂಮಿಯ ಮಗ ಎಂಬ ನಂಬಿಕೆಯಿದೆ. ವಿಶ್ವದ ಶಿಲ್ಪಿ, ಸರ್ವ ಶಕ್ತ ಪರಮಾತ್ಮನೆಂದು ಸ್ಥಾನಕೊಡಲಾಗಿದೆ. ಈತನಿಗೆ ಐದು ತಲೆಗಳಿವೆ. ಅವುಗಳೆಂದರೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ. ಒಂದೊಂದರಿಂದಲೂ ಒಬ್ಬೊಬ್ಬ ಪುತ್ರನು ಹುಟ್ಟಿದ. ಅವರೇ ಕ್ರಮವಾಗಿ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಅವರನ್ನೇ ಸಾನಗ-ಕಮ್ಮಾರ, ಸನಾತನ-ಬಡಿಗ, ಪ್ರತ್ನಸ-ಅಕ್ಕಸಾಲಿಗ, ಅಭೌನಸ-ಶಿಲ್ಪಿ ಮತ್ತು ಸುಪರ್ಣಸ-ಕಂಚುಗಾರ ಎಂದು ಕರೆಯುತ್ತಾರೆ. ಆತನನ್ನು ಸರ್ವಶಕ್ತ ಸರ್ವದರ್ಶಕ ಸೃಷ್ಟಿಕರ್ತನೆಂದು ವರ್ಣಿಸಲಾಗಿದೆ. ವಿಶ್ವಕರ್ಮನಿಗೆ ಎಲ್ಲ ಕಡೆಗೂ ಕಣ್ಣು, ಮುಖ, ಕೈ, ಕಾಲುಗಳನ್ನು ಹೊಂದಿರುವನೆಂದೂ, ಅವನು ಸರ್ವಜ್ಞನೂ, ಸರ್ವಶಕ್ತನೂ, ಆಕಾಶ-ಭೂಮಿಗಳನ್ನು ಸೃಷ್ಟಿಸಿದವನೆಂದು ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ವಿಶ್ವಕರ್ಮ ಜನಾಂಗದ ಮೂಲ ಪುರುಷನಾದ ವಿಶ್ವಕರ್ಮನಿಗೆ ಸೃಷ್ಟಿಕರ್ತ ಎಂದು ಕೂಡ ಕರೆಯುತ್ತಾರೆ. ಈ ಉದ್ದೇಶದಿಂದ ಪಾಂಚಾಳರು ತಮ್ಮ ಮೂಲ ಪುರುಷನನ್ನು ಆರಾಧಿಸುತ್ತಾರೆ.

೪. ಮೌನೇಶ್ವರ

ತಮ್ಮ ಕುಲದಲ್ಲೇ ಜನಿಸಿ ಪವಾಡ ಪುರುಷನಾಗಿ ಮೆರೆದ ಮೌನೇಶ್ವರ ಸಾನಗ ಗೋತ್ರದ ಕಮ್ಮಾರ ಮನೆತನದ ಗೋನಾಳ ಎಂಬ ಗ್ರಾಮದಲ್ಲಿ ಜನಿಸಿದರು. ಈತನು ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ತೊರೆದು ದೇಶ ಸಂಚಾರವನ್ನು ಕೈಗೊಂಡು ಪಾಠ ಪ್ರವಚನದ ಮೂಲಕ ಜನತೆಗೆ ಆಧ್ಯಾತ್ಮ ಬೋಧನೆಯನ್ನು ಉಣಬಡಿಸಿದ ಮಹಾಪುರುಷ ೧೬ನೆಯ ಶತಮಾನದಲ್ಲಿ ವಚನ ಚಳುವಳಿ ಆರಂಭವಾಗಲಿಕ್ಕೆ ಪ್ರಮುಖ ಚಾರಿತ್ರಿಕ ಅಂಶಗಳನ್ನು ತನ್ನ ವೃತ್ತಿಯ ಉಪಕರಣಗಳ ಮೂಲಕ ಹೋಲಿಕೆಯನ್ನು ಕೊಡುತ್ತ ಅನೇಕ ಮೌಢ್ಯತೆಯನ್ನು ಜನರಿಂದ ದೂರ ತೊಲಗಿಸಿದ ಹಾಗೂ ಅನೇಕ ಪವಾಡಗಳನ್ನು ಮಾಡಿ ದೈವಿಪುರುಷನಾದುದರ ಬಗ್ಗೆ ಅನೇಕ ಮೌಖಿಕ ಕಥೆಗಳು ಮೋನಪ್ಪಯ್ಯನ ಬಗ್ಗೆ ಜನಪದರ ಬಾಯಿಯಲ್ಲಿರುವುದನ್ನು ಕಾಣಬಹುದು. ಈತ ಸರ್ವಧರ್ಮಸಮನ್ವಯವನ್ನು ಸಾರಿದ ವಿರಾಟ್ ಪುರುಷ. ಇವತ್ತಿಗೂ ಕೂಡ ಕೇವಲ ಪಾಂಚಾಳರಿಗೆ ಮಾತ್ರ ಸೀಮಿತವಾಗಿರದೆ ಎಲ್ಲ ಸಮುದಾಯದವರು ಆರಾಧಿಸುವ ದೈವನಾಗಿರುವುದು ಕಂಡು ಬರುತ್ತದೆ. ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಪಾಂಚಾಳರು ಆರಾಧ್ಯ ದೈವನಾಗಿ ಪೂಜಿಸುವುದನ್ನು ಕಾಣಬಹುದಾಗಿದೆ. ವಿಶ್ವಕರ್ಮ ಕುಲದಲ್ಲಿ ಜನಿಸಿ ತಮ್ಮ ಸಮಾಜಕ್ಕೂ, ವಿಶಾಲ ಸಮಾಜಕ್ಕೂ ಆಧ್ಯಾತ್ಮಿಕ ವಿದ್ಯೆಯನ್ನು ನೀಡಿ. ತತ್ತ್ವ ಸಂದೇಶದಿಂದ ಜನಜೀವನವನ್ನು ಪುನೀತಗೊಳಿಸಿದ ಮಹಾಪುರುಷ.

೫. ನಾಗಲಿಂಗಜ್ಜ

ಪಾಂಚಾಳ ಕುಲದಲ್ಲಿ ಜನಿಸಿದ ನಾಗಲಿಂಗಜ್ಜ ಸಮಾಜದಲ್ಲಿ ಬೇರೂರಿದ್ದ ಅನೇಕ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕುವ ಮೂಲಕ ದೈವಿ ಪುರುಷನಾಗಿ ಪಾಂಚಾಳ ಸಮುದಾಯದ ಆರಾಧಕನಾಗಿದ್ದಾನೆ.

ಈತ ಚಿಕ್ಕವನಿರುವಾಗಲೇ ಮನೆ ಬಿಟ್ಟು ಅನೇಕ ಪವಾಡಗಳನ್ನು ಮಾಡಿ ಪ್ರಖ್ಯಾತಿಯನ್ನು ಪಡೆದ ನವಲಗುಂದದ ನಾಗಲಿಂಗಜ್ಜ ತಮ್ಮ ಸಮುದಾಯದ ಆರಾಧನಾ ಪುರುಷನನ್ನಾಗಿ ಆಚರಿಸುವುದನ್ನು ಕಾಣಬಹುದು. ಈ ಪವಾಡ ಪುರುಷನನ್ನು ಕೂಡ ಉತ್ತರ ಕರ್ನಾಟಕದ ಪಾಂಚಾಳರು ಹೆಚ್ಚಾಗಿ ಆರಾಧಿಸುವುದನ್ನು ಕಾಣಬಹುದು.

೫.೧.೨. ಆಚರಣೆಗಳು

೧. ಜನನ

ವಂಶಾಭಿವೃದ್ಧಿ ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಕ್ರಿಯೆ. ಇದು ಪ್ರತಿಯೊಂದು ಜೀವಿ ಮತ್ತು ಸಸ್ಯಗಳಲ್ಲಿ ಸರ್ವೆ ಸಮಾನ್ಯ. ಸೃಷ್ಟಿಯು ಮಾನವನಿಗೆ ಆಶ್ಚರ್ಯವನ್ನುಂಟು ಮಾಡಿದಾಗ ಅವನು ಈ ಕುರಿತು ಅನೇಕ ಆಚರಣೆ, ನಂಬಿಕೆಗಳನ್ನು ಒಪ್ಪಿಕೊಂಡು ಅವುಗಳನ್ನು ಕಾರ್ಯ ರೂಪದಲ್ಲಿ ಅನುಸರಿಸುತಲಿದ್ದಾನೆ. ಈಗಲೂ ಭೂಮಿಯ ಮೇಲಿರುವ ಸಮುದಾಯಗಳಲ್ಲಿ ಜನನ ಕುರಿತಾದ ನಂಬಿಕೆ, ಆಚರಣೆಗಳು ಜೀವಂತವಾಗಿವೆ. ಕೆಲವು ಆಚರಣೆಗಳು ಎಲ್ಲರಲ್ಲಿಯೂ ಒಂದೇ ರೀತಿಯಾಗಿ ಕಂಡರೂ ಕೆಲವು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುವುದನ್ನು ಕಾಣುತ್ತೇವೆ.

ವೈದಿಕಾಚರಣೆಯನ್ನು ಅನುಸರಿಸುವ ಪಾಂಚಾಳರು ಜನನಕ್ಕೆ ಸಂಬಂಧಿಸಿದಂತೆ ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಆಚರಣೆಗಳು ಹೆಣ್ಣಿನ ತಿಂಗಳ ಮುಟ್ಟಿನ ದಿನದಿಂದಲೇ ಪ್ರಾರಂಭವಾಗುತ್ತದೆ. ಅಂದರೆ ಮದುವೆಯಾಗಿ ಮೊದಲ ದಿನ ಅಥವಾ ಒಂಭತ್ತನೇ ದಿನ ಇಲ್ಲವೆ ಮೂರು ತಿಂಗಳಲ್ಲಿ ಸೋಬಾನ ಪ್ರಸ್ತ (ಕಾರ್ಯ)ವನ್ನು ಹೆಣ್ಣಿನ ಮನೆಯವರು ಮಾಡಿಕೊಡುತ್ತಾರೆ. ಈ ಕಾರ್ಯವನ್ನು ಮಾಡಿಕೊಟ್ಟ ನಂತರ ಆ ಹೆಣ್ಣುಮಗಳ ತಿಂಗಳ ಮುಟ್ಟಿನ ಆವರ್ತನೆಯನ್ನು ಮನೆಯ ಹಿರಿಯ ಹೆಣ್ಣುಮಕ್ಕಳು ಗಮನಿಸುತ್ತಲೇ ಇರುತ್ತಾರೆ. ಗರ್ಭನಿಂತ (ಮುಟ್ಟುನಿಂತ) ತಕ್ಷಣವೇ ತವರು ಮನೆಗೆ ವಿಷಯವನ್ನು ತಿಳಿಸುತ್ತಾರೆ. ನಂತರ ಗರ್ಭಧರಿಸಿದ ಹುಡುಗಿ ತನಗೆ ಬಯಕೆ ಬುತ್ತಿ ತರಲು ತವರಿಗೆ ಹೇಳಿಕಳಿಸುತ್ತಾಳೆ. ಇದರ ಉದ್ದೇಶ ತವರು ಮನೆಯಿಂದ ಅವರಿಗೆ ಇಷ್ಟವಾದ ಅಡುಗೆ, ಸೀರೆ, ಕುಪ್ಪಸ, ಹೂವು ಇತ್ಯಾದಿಗಳನ್ನು ತೆಗೆದುಕೊಂಡು ಬಂದು ಆಕೆಯ ಬಯಕೆಗಳನ್ನು ತೀರಿಸುತ್ತಾರೆ. ಬಯಕೆ ಬುತ್ತಿಯನ್ನು ತಂದ ಸಂದರ್ಭದಲ್ಲಿ ಅವರ ಸಮುದಾಯದ ಇನ್ನಿತರ ಮನೆಗಳಿಗೂ ಬಯಕೆ ಬುತ್ತಿಯನ್ನು ಕೊಡುತ್ತಾರೆ. ಇದರಿಂದ ಅವರ ಸೊಸೆ ಬಸುರಿ (ಗರ್ಭಿಣಿ) ಎಂಬ ವಿಷಯ ಆ ಸಮುದಾಯದವರಿಗೆ ತಿಳಿಯುತ್ತದೆ.

ಗರ್ಭಿಣಿ ಸ್ತ್ರೀಯ ಸುರಕ್ಷತೆಯ ದೃಷ್ಟಿಯಿಂದ ಕ್ರಮವಾಗಿ ಊಟೋಪಚಾರಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಾರೆ. ಉದಾಹರಣೆಗೆ ಪಪ್ಪಾಯಿ ಹಣ್ಣು, ಗಿಣ್ಣದಹಾಲು, ಕುಂಬಳಕಾಯಿ, ಹಸಿಕೊಬ್ಬರಿ ಮುಂತಾದ ನಂಜು ಪದಾರ್ಥಗಳನ್ನು ಸೇವಿಸಲು ಕೊಡುವುದಿಲ್ಲ. ದೂರದ ಪ್ರಯಾಣ ಮಾಡಿಸುವುದಿಲ್ಲ. ಸಮುದಾಯದ ಸಂಬಂಧಿಕರ ಶವವಿರಬಹುದು ಇಲ್ಲವೆ ಬೇರೆ ಸಮುದಾಯದವರ ಶವಗಳನ್ನು ನೋಡಲು, ಶವಸಂಸ್ಕಾರಕ್ಕೆ ಹೋಗಲು ನಿಷೇಧಿಸುತ್ತಾರೆ. ಮನೆಯವರು ಶವವನ್ನು ನೋಡಲಿಕ್ಕೆ

ಹೋದಾಗ ಅವರು ಪುನಃ ಮನೆಗೆ ಮರಳಿದಾಗ ಕೈ ಕಾಲು ಮುಖ ತೊಳೆದುಕೊಂಡೆ ಅವರನ್ನು ಸ್ಪರ್ಶ ಮಾಡಬೇಕು. ಗ್ರಹಣ ಹಿಡಿದ ಸಂದರ್ಭಗಳಲ್ಲಿ ಮನೆಯ ಹೊರಗಡೆಗೆ ಕಳಿಸುವುದಿಲ್ಲ. ಈ ಎಲ್ಲಾ ಅಂಶಗಳನ್ನು ಜನನ ಮುಂಜಾಗ್ರತೆಯಾಗಿ ಪಾಲಿಸುವುದು ಕಂಡುಬರುತ್ತದೆ.

ಸಮುದಾಯಗಳಲ್ಲಿ ಹೆಣ್ಣು ಮಕ್ಕಳಿಗೆ ಹೆರಿಗೆ ಸಮಯ ಹತ್ತಿರ ಬರುವ ಮುಂಚೆಯೇ ಗರ್ಭಿಣಿ ಸ್ತ್ರೀಗೆ ಮನೆಯ ಹಿರಿಯರಾದ ಅಜ್ಜಿ, ಅವ್ವ, ಅತ್ತೆ ಮುಂತಾದವರು ಧೈರ್ಯವನ್ನು ಹೇಳುತ್ತಾರೆ. ಹೆರಿಗೆಯ ಸೂಚನೆ ಕಂಡು ಬಂದ ಕೂಡಲೇ ಮನೆಯ ಹಿರಿಯ ಹೆಣ್ಣುಮಕ್ಕಳು ಮತ್ತು ಸೂಲಗಿತ್ತಿ ಮುಂತಾದವರು ಹೆರಿಗೆಯನ್ನು ಮಾಡಿಸುತ್ತಾರೆ. ಹುಟ್ಟುವ ಮಗು ಗಂಡಾಗಿ ಜನಿಸಿದರೆ ತಕ್ಷಣವೇ ಮನೆಯ ಹಿರಿಯರು ಸಂತೋಷಕ್ಕಾಗಿ ಹೆಚ್ಚು ಶಬ್ದ ಬರುವಂತೆ ತಟ್ಟೆಯನ್ನು ಬಾರಿಸುತ್ತಾರೆ. ಮಗು ಹೆಣ್ಣಾಗಿದ್ದಾರೆ ಏನನ್ನು ಬಾರಿಸುವುದಿಲ್ಲ. ಇದರ ಆಧಾರದ ಮೇಲೆ ಹುಟ್ಟಿದ ಮಗು ಗಂಡು ಅಥವಾ ಹೆಣ್ಣು ಎಂಬುದನ್ನು ಹೊರಗಡೆಯ ಇರುವ ತಮ್ಮ ಸಂಬಂಧಿಕರು ತಿಳಿದುಕೊಳ್ಳುತ್ತಾರೆ. ನಂತರ ಸೂಲಗಿತ್ತಿಯು ಮಗು ಮತ್ತು ತಾಯಿಯ ಸಂಬಂಧವಾದ ಒಕ್ಕಳ ಬಳ್ಳಿಯನ್ನು ಹೊಸಬ್ಲೇಡ್‌ನಿಂದ ಇಲ್ಲವೆ ಕುಡುಗೋಲಿನಿಂದ ಕೊಯ್ಯುವಳು. ಮಗುವಿನ ಜೊತೆಗೆ ಬಂದ ಮಾಸವನ್ನು (ಮಾಂಸದ ಮುದ್ದೆ) ಮಗುವಿನ ಮೈಗೆಲ್ಲಾ ಸವರುತ್ತಾರೆ. ಇದರ ಉದ್ದೇಶ ಕೂದಲು ಬೆಳೆಯಬಾರದು ಎಂದು ಹೆಚ್ಚಾಗಿ ಮಾಸವನ್ನು ಹೆಣ್ಣು ಮಗುವಿಗೆ ಹಚ್ಚಲಾಗುತ್ತದೆ. ಆ ಮಾಸವನ್ನು ಮನೆಯ ಮುಂದೆ ೨ ಅಡಿ ಆಳದ ತಗ್ಗನ್ನು (ಗುಂಡಿಯನ್ನು) ತೆಗೆದು ಪೂಜೆ ಮಾಡಿ ಮಾಸವನ್ನು ಗುಂಡಿಯಲ್ಲಿ ಹಾಕಿ ಮುಚ್ಚಲಾಗುತ್ತದೆ. ನಂತರ ಆ ಜಾಗದ ಮೇಲೆ ತೆಂಗಿನ ಸಸಿಯನ್ನು ನೆಡುತ್ತಾರೆ. ಇದರ ಉದ್ದೇಶ ಮಾಸವನ್ನು ಯಾವುದೇ ಪ್ರಾಣಿ ಪಕ್ಷಿಗಳು ತಿನ್ನಬಾರದೆಂದು ಹೂಳಲಾಗುತ್ತದೆ.

ನಂತರ ಊರಿನ ಸಮುದಾಯದ ಹೆಣ್ಣುಮಕ್ಕಳಿಗೆ ಹೆರಿಗೆಯಾದ ಹೆಣ್ಣುಮಕ್ಕಳ ಮನೆಯವರ ಸೀರೆಯನ್ನು ಉಟ್ಟುಕೊಳ್ಳುವುದಕ್ಕೆ ಕೊಡುತ್ತಾರೆ. ಇದರಿಂದ ನಮಗೆ ಗಂಡು ಮಗು ಜನಿಸಿದೆ ಎಂಬ ಸಂದೇಶವನ್ನು ನೀಡುವುದಾಗಿದೆ.

ಮಗು ಜನಿಸಿದ ಮೂರು ದಿನಗಳವರೆಗೂ ಮಗುವಿನ ಮೈಗೆ ನೀರನ್ನು ಮುಟ್ಟಿಸಿರುವುದಿಲ್ಲ. ಮೂರನೆಯ ದಿನ ಸೂಲಗಿತ್ತಿ ಇಲ್ಲವೆ ಮನೆಯ ಹಿರಿಯ ಹೆಣ್ಣುಮಗಳು ತನ್ನ ಕಾಲುಗಳನ್ನು ಚಾಚಿ ಕಾಲಿನ ಮೇಲೆ ಮಗುವನ್ನು ಹಾಕಿಕೊಂಡು ಮೈಗೆಲ್ಲಾ ಎಣ್ಣೆಹಾಕಿ ತಿಕ್ಕುತ್ತಾರೆ. ನಂತರ ನಸುಬೆಚ್ಚಗಿನ ನೀರಿನಿಂದ ಮಗುವನ್ನು ಎರೆಯುತ್ತಾರೆ. ಇಲ್ಲಿಯವರೆಗೂ ಮಗುವಿಗೆ ತಾಯಿಯ ಎದೆಹಾಲನ್ನು ಕುಡಿಸಿರುವುದಿಲ್ಲ. ಕಾರಣ ಆ ಹಾಲು ಮಗುವಿನ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬ ನಂಬಿಕೆ. ಮೂರನೆಯ ದಿವಸ ಮಗುವನ್ನು ಎರೆದ ನಂತರ ಎದೆಯ ಹಾಲನ್ನು ಕುಡಿಸುತ್ತಾರೆ. ಈ ಮೇಲೆ ತಿಳಿಸಿದ ಅಂಶಗಳನ್ನು ಈ ಸಮುದಾಯದವರು ಜನನ ಸಂದರ್ಭದಲ್ಲಿ ಅನುಸರಿಸುವ ನಂಬಿಕೆಗಳಾಗಿವೆ.

೨. ಬಾಣಂತನ

ಹೆರಿಗೆಯ ನಂತರದ ದಿನಗಳನ್ನು ಅಂದರೆ ಹೆರಿಗೆಯ ದಿನದಿಂದ ಒಂದುವರೆ ಅಥವಾ ಎರಡುವರೆ ತಿಂಗಳವರೆಗಿನ ಅವಧಿಯನ್ನು ಬಾಣಂತನದ ಅವಧಿ ಎಂದು ಕರೆಯಲಾಗುತ್ತದೆ. ಈ ಅವಧಿಯಲ್ಲಿ ಹೆರಿಗೆಯಾದವಳಿಗೆ ಹಾಗೂ ಮಗುವಿಗೆ ಆರೋಗ್ಯ ರಕ್ಷಣೆಯ ಹಿತದೃಷ್ಟಿಯಿಂದ ಬಾಣಂತನ ಮಾಡುವರು.

ಬಾಣಂತಿಗೆ ಸುಲಭವಾಗಿ ನಂಜು ಸೋಂಕುವ ಅಪಾಯ ಹೆಚ್ಚು. ಈ ದೃಷ್ಟಿಯಿಂದ ಹೆರಿಗೆಯಾದ ತಕ್ಷಣವೇ ಬಾಣಂತಿಯನ್ನು ವರಸಿನ ಮೇಲೆ ಮಲಗಿಸುತ್ತಾರೆ. ನಂತರ ಬಾಣಂತಿಗೆ ಅರಿಸಿಣ, ಬೇವಿನಸೊಪ್ಪು, ಲವಂಗ, ಬಜೆ, ಬೆಳ್ಳುಳ್ಳಿ ಇವುಗಳನ್ನು ಮಿಶ್ರಣ ಮಾಡಿ ಚೆನ್ನಾಗಿ ಅರೆಯುತ್ತಾರೆ. ಇದನ್ನು ಮೈಗೆಲ್ಲಾ ಹಚ್ಚಿ ನಸುಬೆಚ್ಚಗಿನ ಬಿಸಿ ನೀರಿನಿಂದ ಸ್ನಾನ ಮಾಡಿಸಿ ವರಸಿನ ಮೇಲೆ ಕೂಡಿಸುವರು. ಈ ಸಂದರ್ಭದಲ್ಲಿ ಹಸಿಸೆಗಣೆಯಿಂದ ಮಾಡಿದ ಕುಳ್ಳುಗಳನ್ನು ಒಂದು ಕಬ್ಬಿಣದ ಪುಟ್ಟಿಯಲ್ಲಿ ಹಾಕಿ ಬೆಂಕಿ ಹಚ್ಚಿ ಕೆಂಡ ಮಾಡುತ್ತಾರೆ. ಇದರಿಂದ ಬರುವ ಶಾಖವನ್ನು ಕಾಯಿಸಿಕೊಳ್ಳಲು ಬಾಣಂತಿಗೆ ಸೂಚಿಸುತ್ತಾರೆ. ಈ ಪ್ರಕ್ರಿಯೆಯು ಕನಿಷ್ಟ ಒಂದು ತಿಂಗಳವರೆಗೆ ಮಾಡುತ್ತಾರೆ. ಮೆದುವಾದ ಬಿಸಿ ಆಹಾರವನ್ನು ಸೇವಿಸಲಿಕ್ಕೆ ಕೊಡುತ್ತಾರೆ. ಈ ಸಂದರ್ಭದಲ್ಲಿ ನಂಜಿನ ಆಹಾರ ಪದಾರ್ಥಗಳನ್ನು ಕೊಡುವುದಿಲ್ಲ. ಕನಿಷ್ಟ ಎರಡರಿಂದ ಮೂರುತಿಂಗಳ ತನಕ ನಸುಬೆಚ್ಚಗಿನ ಬಿಸಿನೀರನ್ನೇ ಉಪಯೋಗಿಸಲು ಕೊಡುತ್ತಾರೆ.

ಹೆರಿಗೆಯಿಂದ ನಿಶಕ್ತಿಯಾಗಿರುವ ಬಾಣಂತಿಗೆ ಪ್ರತಿನಿತ್ಯ ಬೆಳಗಿನ ಸಮಯದಲ್ಲಿ ಬಾಣಂತಿಖಾರ ತಿನ್ನಲು ಕೊಡುವರು. ಅಂದರೆ ಒಣಕೊಬ್ಬರಿ, ಉತ್ತತ್ತಿ, ಬೆಲ್ಲ, ಗೋಡಂಬಿ ಇವುಗಳನ್ನು ತುಂಬ ಹದಬರುವಹಾಗೆ ಕುಟ್ಟಿ ತುಪ್ಪದಲ್ಲಿ ಬೆರೆಸಿ ತಿನ್ನಲು ಕೊಡುತ್ತಾರೆ. ಹೆರಿಗೆಯಾದ ಐದು, ಒಂಭತ್ತು ಅಥವಾ ಹನ್ನೊಂದನೇ ದಿನದಂದು ಗಂಡನ ಮನೆಯವರು ಕೂಡ ಬಂದು ಶಕ್ತಿವರ್ಧಕ ಪದಾರ್ಥಗಳಾದ ಕೊಬ್ಬರಿ, ಉತ್ತತ್ತಿ, ಗೋಡಂಬಿ, ದ್ರಾಕ್ಷಿ, ಬೆಲ್ಲ ಮುಂತಾದವುಗಳನ್ನು ತಂದುಕೊಡುತ್ತಾರೆ. ಬಾಣಂತಿಯನ್ನು ಮನೆಯ ಒಂದು ರೂಮಿನಲ್ಲಿ ಅಥವಾ ಒಂದು ಮೂಲೆಯಲ್ಲಿ ಪ್ರತ್ಯೇಕವಾದ ಸ್ಥಳವಾಕಾಶ ಮಾಡಿ ಆರೈಕೆಯನ್ನು ಮಾಡುತ್ತಿರುತ್ತಾರೆ.

ಒಂಭತ್ತನೆಯ ದಿನ ಮಗುವಿಗೂ ಮತ್ತು ಬಾಣಂತಿಗೂ ಬರ್ಮಪ್ಪ ದೇವರ ಪೂಜೆ ಮಾಡಿಸುತ್ತಾರೆ. ಈ ಪೂಜೆಯ ಉದ್ದೇಶ ಯಾವುದೇ ರೀತಿಯ ಕಾಡಾಟಗಳು ಮಗು ಮತ್ತು ಮಗುವಿನ ತಾಯಿಗೆ ಕಾಡಬಾರದೆಂದು ಈ ಪೂಜೆಯನ್ನು ಹಮ್ಮಿಕೊಳ್ಳುತ್ತಾರೆ. ಈ ಪೂಜೆಯನ್ನು ಅಪ್ರಾಪ್ತವಯಸ್ಕ ಮಕ್ಕಳು ಮಾತ್ರ ಬರ್ಮಪ್ಪ ದೇವರಿಗೆ ಹೋಗಿ ಪೂಜೆಯನ್ನು ಮಾಡಿಕೊಂಡು ಬರಬೇಕು. ಈ ಪೂಜೆಗೆ ಮಕ್ಕಳ ಕೈಯಲ್ಲಿ ಮಂಡಾಳು, ಬೆಲ್ಲ, ಹುರುಕಡ್ಲಿ, ಉತ್ತತ್ತಿ ಇವುಗಳಿಂದ ತಯಾರಿಸಿದ ಪಣಿವಾರವನ್ನು ಕೊಟ್ಟು ಪೂಜೆಗೆ ಕಳಿಸುತ್ತಾರೆ. ಮಕ್ಕಳು ಬರ್ಮಪ್ಪ ದೇವರಿಗೆ ಪೂಜೆ ಸಲ್ಲಿಸುತ್ತಾರೆ.

ಆ ಪಣಿವಾರವನ್ನು ಅಲ್ಲಿಯೇ ತಿಂದು ಬರಬೇಕು. ಈ ತರಹದ ಪಣಿವಾರವನ್ನು ಮೂರರಿಂದ ಐದು ಬರ್ಮಪ್ಪಗಳಿಗೆ ಸಲ್ಲಿಸುತ್ತಾರೆ. ಈ ಪ್ರಕ್ರಿಯೆ ಮುಗಿಸಿದ ಮೇಲೆ ಮಕ್ಕಳು ಕೈ ಕಾಲು ಮುಖ ತೊಳೆದುಕೊಂಡು ಮನೆಯ ಒಳಗಡೆಗೆ ಪ್ರವೇಶಿಸಬೇಕು ಎಂಬ ನಿಯಮವಿದೆ. ಈ ಬಾಣಂತನವನ್ನು ಕಡ್ಡಾಯವಾಗಿ ಚೊಚ್ಚಲ ಹೆರಿಗೆಯಲ್ಲಿ ತವರು ಮನೆಯವರೇ ಮಾಡಬೇಕು ಎಂಬ ಸಂಪ್ರದಾಯವು ಕೂಡ ಇದೆ.

೩. ನಾಮಕರಣ

ಮಗುವಿನ ನಾಮಕರಣ ಪ್ರತಿಯೊಂದು ಸಮುದಾಯಗಳಲ್ಲಿ ಒಂದಿಲ್ಲೊಂದು ಸಂಪ್ರದಾಯ ಆಚರಣೆಗಳ ಮೂಲಕ ನಡೆಯುತ್ತವೆ. ಹೆಸರು ಇಡುವುದು, ತೊಟ್ಟಿಲಲ್ಲಿ ಹಾಕುವ ಕಾರ್ಯ, ನಾಮಕರಣ ಎಂದೆಲ್ಲಾ ಇದಕ್ಕೆ ಪರ್ಯಾಯ ನಾಮಗಳಿವೆ.

ಮಗು ಹುಟ್ಟಿದ ಮೂರನೇ, ಐದನೇ, ಒಂಭತ್ತನೇ ಅಥವಾ ಹನ್ನೊಂದನೇ ತಿಂಗಳಲ್ಲಿ ಮಗುವಿಗೆ ನಾಮಕರಣವನ್ನು ಮಗುವಿನ ತಂದೆಯ ಮನೆಯಲ್ಲಿ ಮಾಡುತ್ತಾರೆ. ಮಗು ಜನಿಸಿದ ಸಮಯ, ತಿಥಿ, ವಾರ, ನಕ್ಷತ್ರ, ತಾರೀಖು ಮುಂತಾದ ವಿಷಯಗಳನ್ನು ತಮಗೆ ನಂಬಿಕೆಯಿರುವ ಜ್ಯೋತಿಷ್ಯರು ಇಲ್ಲವೆ ಅವರ ಸಮುದಾಯದ ಆಚಾರ್ಯರ ಬಳಿಹೋಗಿ ಅವರಿಗೆ ಚಾಜವನ್ನು ಕೊಟ್ಟು ಜ್ಯೋತಿಷ್ಯವನ್ನು ಕೇಳಿಸುತ್ತಾರೆ. ಆಚಾರ್ಯರರು ಮಗುವಿನ ಜಾತಕವನ್ನು ನೋಡಿ ಇಂತಹ ದಿನ ಶುಭದಿನವಿದೆ ಅವತ್ತಿನ ದಿವಸ ಮಗುವಿಗೆ ನಾಮಕರಣ ಮಾಡಬಹುದು ಎಂದು ತಿಳಿಸುತ್ತಾರೆ. ಮಗುವಿನ ಹೆಸರಿಗೆ ಸಂಬಂಧಿಸಿದಂತೆ ಮನೆಯ ದೇವರು ಇಲ್ಲವೆ ವೃತ್ತಿಯ ದೇವರ ಹೆಸರು ಮೊದಲು ಕರೆಯಲು ತಿಳಿಸುತ್ತಾರೆ. ನಂತರ ಅವರ ಜಾತಕದ ಹೆಸರನ್ನು ಕರೆಯಲು ತಿಳಿಸುತ್ತಾರೆ. ಇದರ ನಂತರ ತಮಗೆ ಇಷ್ಟವಾದ ಪ್ರೀತಿನಾಮವನ್ನು ಕರೆಯಲು ತಿಳಿಸುತ್ತಾರೆ.

ಆಚಾರ್ಯರರು ತಿಳಿಸಿದ ಶುಭ ದಿವಸಕ್ಕೆ ಸಕಲ ಸಿದ್ಧತೆಗಳನ್ನು ಹೆಣ್ಣಿನ ಮತ್ತು ಗಂಡಿನ ಮನೆಯವರು ಮಾಡಿಕೊಳ್ಳುತ್ತಾರೆ. ನಾಮಕರಣ ಇನ್ನು ಒಂದು ವಾರ ಮುಂಚಿತವಾಗಿರುವಾಗಲೇ ಹೆಣ್ಣಿನ ಮನೆಯವರು ಮಗುವಿಗೆ ಮುರುವನ್ನು ಚುಚ್ಚಿಸುವುದು, ಕಾಲುಗಡುಗ, ದೃಷ್ಟಿ ಮಣಿ, ತೊಟ್ಟಿಲು ತರುವುದು ಇಂತಹ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ನಾಮಕರಣದ ದಿನದಂದು ಹೆಣ್ಣಿನ ಕಡೆಯವರು ತಮ್ಮ ಸಂಬಂಧಿಕರೊಂದಿಗೆ ಗಂಡನ ಊರಿಗೆ ಬರುತ್ತಾರೆ. ಬಂದ ಮೇಲೆ ನೇರವಾಗಿ ಗಂಡನ ಮನೆಗೆ ಹೋಗದೆ ಊರಿನ ದೇವಸ್ಥಾನದಲ್ಲಿ ತಂಗುತ್ತಾರೆ. ನಂತರ ಗಂಡನ ಮನೆಯವರು ತಮ್ಮ ಸಂಬಂಧಿಕರ ಜೊತೆಗೆ ಕಳಶವನ್ನು ತೆಗೆದುಕೊಂಡು ಅವರು ತಂಗಿರುವ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ತೊಟ್ಟಿಲನ್ನು ಅಲಂಕರಿಸಿ ಮಗುವಿನ ಸೋದರ ಮಾವನ ಹೆಗಲ ಮೇಲೆ ಹೊರಿಸಿಕೊಂಡು ಆ ಊರಿನಲ್ಲಿರುವ ದೇವಸ್ಥಾನಗಳಿಗೆ ಹೋಗಿ ಮಗುವಿಗೆ ದರ್ಶನ ಮಾಡಿಸಿಕೊಂಡು ಬರುತ್ತಾರೆ. ಮನೆಯ ಹತ್ತಿರ ಸಮೀಪಿಸುತ್ತಿದ್ದಂತೆ ಮಗುವಿಗೆ ದೃಷ್ಟಿ ತಾಕಿರಬಹುದು ಎಂಬ ಉದ್ದೇಶದಿಂದ ಮಗುವಿಗೆ ಇಳೆದೆಗೆಯುತ್ತಾರೆ. ನಂತರ ಪೂಜೆಮಾಡಿಕೊಂಡು ಮನೆಯೊಳಗಡೆಗೆ ಕರೆದುಕೊಳ್ಳುತ್ತಾರೆ. ಈ ಪೂಜೆಯಾದ ತಕ್ಷಣವೇ ತೊಟ್ಟಿಲನ್ನು ಹೊತ್ತ ಸೋದರಮಾವನಿಗೆ ಲುಂಗಿ, ಅಂಗಿ, ಟವಲು ಮುಂತಾದವುಗಳನ್ನು ಉಡುಗೊರೆಯಾಗಿ ಕೊಡುತ್ತಾರೆ.

ತವರು ಮನೆಯವರು ತಂದಿರುವ ತೊಟ್ಟಿಲನ್ನು ಮನೆಯ ಅಂಕಣದಲ್ಲಿ ಇಡುತ್ತಾರೆ. ತೊಟ್ಟಿಲಲ್ಲಿ ಮಗುವನ್ನು ಹಾಕಿ ಮಗುವಿನ ಸೋದರ ಅತ್ತೆ ಅಂದರೆ ಮಗುವಿನ ತಂದೆಯ ತಂಗಿ ಇಲ್ಲವೆ ಅಕ್ಕ ಮಗುವಿಗೆ ನಾಮಕರಣವನ್ನು ಮಾಡುತ್ತಾರೆ. ಈ ಸಂದರ್ಭದಲ್ಲಿ ಮೊದಲೇ ಸೂಚಿಸಿದಂತೆ ಸೋದರ ಅತ್ತೆ ಮಗುವಿನ ಕಿವಿಯಲ್ಲಿ ಕುಟಟ್ ಕುರ್‌.... ಕುಟಟ್ ಕುರ್‌ ಎಂದು ಐದು ಸಲ ಹೇಳಿ ದೇವರ ಹೆಸರನ್ನು ನಂತರ ಜನ್ಮನಾಮವನ್ನು ಕರೆಯುತ್ತಾಳೆ. ಇದಾದ ನಂತರ ಪ್ರೀತಿಯ ಹೆಸರನ್ನು ಕರೆಯುತ್ತಾಳೆ. ಈ ಸಮಯದಲ್ಲಿ ನೆರೆದಿರುವ ಹೆಣ್ಣುಮಕ್ಕಳು ಜೋಗುಳದ ಹಾಡನ್ನು ಹೇಳಲು ಪ್ರಾರಂಭಿಸುವರು. ಮಗುವಿಗೆ ಹೆಸರನ್ನು ಇಟ್ಟ ಸೋದರ ಅತ್ತೆಗೆ ಮಗುವಿನ ತಂದೆತಾಯಿಯು ಉಡುಗೊರೆಯನ್ನು ಕೊಡುತ್ತಾರೆ. ನಂತರ

ನೆರೆದಿರುವ ಮುತ್ತೈದೆಯರೆಲ್ಲರೂ ಮಗು ಮತ್ತು ತಾಯಿಗೆ ಅಕ್ಷತೆಯನ್ನು ಹಾಕಿ ಕಳಶ ಬೆಳಗಿ ತಾವು ತಂದಿರುವ ಉಡುಗೊರೆಯನ್ನು ಕೊಡುತ್ತಾರೆ. ಇವರಿಗೆ ಮನೆಯವರು ಸಹ ಉಡಿತುಂಬಿ ಉಡುಗೊರೆಯನ್ನು ನೀಡುತ್ತಾರೆ. ನಂತರ ಎಲ್ಲರಿಗೂ ತಾವು ಮಾಡಿದ ಸಿಹಿ ಅಡುಗೆಯನ್ನು ಸಂಪ್ರದಾಯಿಕವಾಗಿ ಉಣಬಡಿಸುತ್ತಾರೆ.

ಈ ಸಮುದಾಯದಲ್ಲಿ ತೊಟ್ಟಿಲು ನಾಮಕರಣ ಆದ ಐದಾರು ದಿವಸದೊಳಗೆ ಮರಿತೊಟ್ಟಿಲು ಕಳಿಸುವ ಪದ್ಧತಿ ಇರುತ್ತದೆ. ಅಂದರೆ ಮಗು ಮತ್ತು ತಾಯಿ ತವರು ಮನೆಗೆ ಹೋಗಿ ವಾಪಾಸು ಬರುವುದು ಇದಕ್ಕೆ ಮರಿತೊಟ್ಟಿಲು ಎಂದು ಕರೆಯುತ್ತಾರೆ. ಇದು ಮುಗಿದರೆ ನಾಮಕರಣ ಕಾರ್ಯ ಮುಗಿದಂತೆಯೇ. ಪಾಂಚಾಳರು ಮಗುವಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಹಿರಿಯ ಹೆಣ್ಣು ಮಕ್ಕಳಿಂದ ಜೋಗಳು ಹಾಡುಗಳನ್ನು ಹಾಡಿಸುತ್ತಾರೆ. ಈ ಸಂದರ್ಭದಲ್ಲಿ ಜೋಗುಳದ ಹಾಡು ಹಾಡದಿದ್ದರೆ ಮಗುವಿಗೆ ಮಾತನಾಡಲು ಬಾಯಿ ಬರುವುದಿಲ್ಲ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ.

೪. ಜವುಳ

ಪಾಂಚಾಳರಲ್ಲಿ ಮಗು ಹುಟ್ಟಿದ ಮೂರುವರ್ಷಗಳ ಒಳಗೆ ತಮಗೆ ಅನುಕೂಲವಾದ ಶುಭ ದಿವಸದಂದು ಜವುಳ ಕಾರ್ಯವನ್ನು ಇಟ್ಟುಕೊಳ್ಳುತ್ತಾರೆ. ಮಗುವಿನ ಹುಟ್ಟುಗೂದಲು ಕತ್ತರಿಸುವುದಕ್ಕೆ ಜವುಳ ಮಾಡಿಸುವುದು, ಎಲೆಕತ್ರಿ ಮುಟ್ಟಿಸುವುದು, ಕೂದಲು ತೆಗೆಸುವುದು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.

ಎಲ್ಲಾ ಸಮುದಾಯಗಳಲ್ಲಿ ಹುಟ್ಟಿದ ಮಗು ಹೆಣ್ಣಾಗಲಿ, ಗಂಡಾಗಲಿ ಜವುಳ ಕಾರ್ಯವನ್ನು ಮಾಡುವುದು ಕಡ್ಡಾಯವಾಗಿದೆ. ಈ ಜವುಳ ಕಾರ್ಯಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಲು ತಾವು ನೇಮಿಸಿಕೊಂಡ ಆಚಾರ್ಯ ಸ್ವಾಮಿಯವರ ಹತ್ತಿರ ಕೇಳಿಸಿಕೊಂಡು ಬಂದು ಅವರು ಸೂಚಿಸಿಕೊಟ್ಟ ದಿವಸದಂದು ಕಾರ್ಯವನ್ನು ನೆರವೇರಿಸುತ್ತಾರೆ.

ಈ ಶಾಸ್ತ್ರಕ್ಕೆ ತಮ್ಮ ಸಂಬಂಧಿಕರು, ಊರಿನ ಆಪ್ತರು, ಸಮುದಾಯದವರನ್ನು ಕರೆಸುತ್ತಾರೆ. ಪಾಂಚಾಳರಲ್ಲಿ ಜವುಳ ಶಾಸ್ತ್ರವನ್ನು ಮನೆಯ ದೇವರ ದೇವಸ್ಥಾನದಲ್ಲಿ ಇಲ್ಲವೆ ಕುಲದೇವರ ದೇವಸ್ಥಾನಗಳಲ್ಲಿ ಅಂದರೆ ತಿಂಥಿಣಿ, ವರವಿ, ಶಿರಸಂಗಿ ಇಂತಹ ಕ್ಷೇತ್ರಗಳಲ್ಲಿ ಜವುಳ ಕಾರ್ಯವನ್ನು ಹಮ್ಮಿಕೊಳ್ಳುತ್ತಾರೆ. ತಮ್ಮ ಬಂಧು ಬಳಗದವರೊಂದಿಗೆ ಜವುಳ ಕಾರ್ಯವನ್ನು ಹಮ್ಮಿಕೊಂಡಿರುವ ಸ್ಥಳಕ್ಕೆ ಒಂದು ದಿವಸ ಮುಂಚಿತವಾಗಿಯೇ ಹೋಗಿ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಮಾರನೆಯ ದಿನ ಜವುಳ ಕಾರ್ಯವನ್ನು ಕೈಗೊಳ್ಳುವರು. ಬಂದಿರುವಂತಹ ಬಳಗದವರು ಬೆಳಗ್ಗೆಯೇ ಎಲ್ಲರೂ ಮಡಿಯಾಗಿ ಕಳಶದೊಂದಿಗೆ ಮಗುವನ್ನು ಕರೆದುಕೊಂಡು ದೇವಸ್ಥಾನದ ಆವರಣಕ್ಕೆ ಬರುತ್ತಾರೆ. ನಂತರ ದೇವಸ್ಥಾನದ ಪೂಜಾರಿಯ ಸಮ್ಮುಖದಲ್ಲಿ ದೇವರ ಮುಂದೆ ಕರಿಯ ಕಂಬಳಿಯನ್ನು ಹಾಸಿ ಕಂಬಳಿಯ ಮೇಲೆ ಐದು ಕಳಶಗಳನ್ನು ಹೂಡುತ್ತಾರೆ. ಐದು ಕಳಶಗಳಿಗೆ ಎಲೆ-ಅಡಕೆ, ಬಟ್ಟೆ, ಒಣಕೊಬ್ಬರಿ ಬಟ್ಟಲು, ಉತ್ತತ್ತಿ, ದಕ್ಷಿಣೆಯನ್ನು ಇಟ್ಟು ಪೂಜೆ ಮಾಡುತ್ತಾರೆ. ನಂತರ ಮಗು ಹಾಗೂ ಮಗುವಿನ ತಂದೆ ತಾಯಿಗಳಿಗೆ ಆರತಿ ಬೆಳಗಿ ಮಗುವಿನ ತಲೆಗೂದಲಿಗೆ ಎಲೆಕತ್ತರಿಯನ್ನು ಮುಟ್ಟಿಸುತ್ತಾರೆ.

ಈ ಸಂದರ್ಭದಲ್ಲಿ ಬಂದಿರುವಂತಹ ಬಳಗದವರೆಲ್ಲರೂ ಮಗುವಿಗೆ, ಮಗುವಿನ ತಂದೆ ತಾಯಿಗಳಿಗೆ ಆರತಿಯನ್ನು ಬೆಳಗಿ ತಾವು ತಂದಿರುವಂತಹ ಉಡುಗೊರೆಯನ್ನು ಕೊಡುತ್ತಾರೆ. ನಂತರ ತಾವು ಮಾಡಿಸಿದ ಸಿಹಿ ಅಡುಗೆಯನ್ನು ಉಣ ಬಡಿಸಲಾಗುತ್ತದೆ. ಊರಿಗೆ ಬಂದ ಮೇಲೆ ಕ್ಷೌರಿಕರನ್ನು ಕರೆಯಿಸಿ ತಲೆಯ ಎಲ್ಲಾ ಕೂದಲನ್ನು ಕತ್ತರಿಸಿ ಕೊಳ್ಳುತ್ತಾರೆ. ಕತ್ತರಿಸಿದ ಈ ಕೂದಲನ್ನು ನದಿ ಅಥವಾ ಹಳ್ಳಕ್ಕೆ ಬಿಡಲಾಗುತ್ತದೆ.

೫. ಋತುಮತಿಯಾದಾಗಿನ ಕಾರ್ಯಕ್ರಮ

ಹೆಣ್ಣುಮಗು ಬೆಳೆದು ಋತು ಚಕ್ರಕ್ಕೆ ಒಳಗಾಗುವುದು ಒಂದು ಸಹಜ ನೈಸರ್ಗಿಕ ಕ್ರಿಯೆ. ಇದಕ್ಕೆ ಪಾಂಚಾಳ ಸಮುದಾಯದಲ್ಲಿ ಪ್ರಾದೇಶಿಕವಾಗಿ ಮೈ ನೆರೆದಿದ್ದಾಳೆ, ದೊಡ್ಡಕಿ ಆಗ್ಯಾಳೆ, ಋತುಮತಿ ಆಗ್ಯಾಳೆ, ಒಸಗೆ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಸಂದರ್ಭದಲ್ಲಿ ಹುಡಿಗಿ ಕನ್ಯೆಯಾದಳು, ಪ್ರಾಯಕ್ಕೆ ಬಂದಳು, ಹದಿಹರೆಯಕ್ಕೆ ಕಾಲಿಟ್ಟಳು, ಸಂತೋನ್ಪತ್ತಿ ಕ್ರಿಯೆಗೆ ಸಿದ್ಧಳಾದಳು ಎಂದು ಗ್ರಹಿಸಲಾಗುತ್ತದೆ. ಮೈನೆರೆದ ಹುಡುಗಿಯನ್ನು ಹನ್ನೆರೆಡು ದಿನಗಳ ಕಾಲ ಪ್ರತ್ಯೇಕವಾಗಿಡುತ್ತಾರೆ. ಆ ದಿನಗಳಲ್ಲಿ ಆಕೆಯನ್ನು ಮೈಲಿಗೆಯಾದವಳೆಂದು ಭಾವಿಸಿ ಅವಳಿಗೆ ಮನೆಯಲ್ಲಿಯೇ ಪ್ರತ್ಯೇಕವಾದ ಸ್ಥಳಾವಕಾಶವನ್ನು ಮಾಡಿಕೊಟ್ಟಿರುತ್ತಾರೆ. ಅವಳಿಗೆ ಕಲ್ಪಿಸಿದ ಸ್ಥಳಕ್ಕೆ ಊಟವನ್ನು ತಂದುಕೊಡುತ್ತಾರೆ. ಪ್ರತಿನಿತ್ಯವು ಬಾಣಂತಿಗೆ ನೀಡುವ ಕೊಬ್ಬರಿಖಾರವನ್ನೇ (ಕೊಬ್ಬರಿ, ಉತ್ತತ್ತಿ, ಏಲಕ್ಕಿ, ಬೆಲ್ಲವನ್ನು ಕುಟ್ಟಿಕೊಡುವುದು) ತುಪ್ಪದಲ್ಲಿ ಬೇರಿಸಿ ಬೆಳಗಿನ ಉಪಹಾರಕ್ಕೆ ಕೊಡುವರು.

ಹುಡುಗಿಯು ಮೊದಲ ಬಾರಿ ಮೈ ನೆರೆದಾಗ ಧರಿಸಿದ ಬಟ್ಟೆಯನ್ನು ಮಡಿವಾಳರಿಗೆ (ಮನೆಯ ಅಗಸರು) ಕೊಡುತ್ತಾರೆ. ನಂತರದ ೧೦ ದಿನಗಳವರೆಗಿನ ಹುಡುಗಿಯ ಬಟ್ಟೆಯನ್ನು ಮಡಿವಾಳರು ಸೆಳೆದುಕೊಡಬೇಕು. ಈ ಸಂದರ್ಭದಲ್ಲಿ ಹುಡುಗಿಯು ಮನೆಯನ್ನು ಬಿಟ್ಟು ಹೊರ ಹೋಗುವಂತಿಲ್ಲ ಪರರನ್ನು ಮಾತನಾಡಿಸುವಂತಿಲ್ಲ. ಮೈ ನೆರೆದ ಹುಡುಗಿಯ ಮನೆ (ಸೂತಕ) ಹೊಲಿಮನೆಯಾಗಿರುತ್ತದೆ. ಈ ಸಂದರ್ಭದಲ್ಲಿ ಯಾವುದೇ ಶುಭಕಾರ್ಯಗಳನ್ನಾಗಲೀ, ಮನೆಯಲ್ಲಿ ದೇವರ ಪೂಜೆ, ದೇವಸ್ಥಾನಕ್ಕೆ ಹೋಗುವುದಾಗಲಿ ಮಾಡುವಂತಿಲ್ಲ. ಇದನ್ನು ಆ ಮನೆಯ ಕಳ್ಳುಬಳ್ಳಿ ಸಂಬಂಧದವರು ಕೂಡ ಅನುಸರಿಸಬೇಕು. ಹುಡುಗಿ ಮೈನೆರೆದ ತಕ್ಷಣವೇ ಹುಡುಗಿಯ ಸೋದರತ್ತೆಗೆ ಹೇಳಿ ಕಳಿಯಿಸಿ ಕರೆಸಿಕೊಳ್ಳುತ್ತಾರೆ. ಸೋದರತ್ತೆ ಬಂದ ತಕ್ಷಣವೇ ಸಮುದಾಯದ ಮುತ್ತೈದೆಯರೊಂದಿಗೆ ಸೋದರತ್ತೆ ಹುಡುಗಿಗೆ ಎಣ್ಣೆ, ಅರಿಶಿಣ ಹಚ್ಚಿ ಬಿಸಿನೀರಿನಿಂದ ಸ್ನಾನ ಮಾಡಿಸಿ ಸೋದರತ್ತೆ ತಂದಿರುವಂತಹ ಹೂವನ್ನು ಮೂಡಿಸಿ ಆರತಿಯನ್ನು ಬೆಳಗುತ್ತಾರೆ.

ಮೈನೆರೆದ ಹುಡುಗಿಯನ್ನು ಹನ್ನೊಂದು ದಿನ ಸಾಯಂಕಾಲದ ಹೊತ್ತಿನಲ್ಲಿ ಪ್ರತಿದಿವಸ ಒಂದೊಂದು ವೇಷ ಹಾಕಿಸಿ ಸಮುದಾಯದವರು ಮತ್ತು ಅವರ ಮನೆಯ ಸುತ್ತಮುತ್ತಲಿನ ಮುತ್ತೈದರನ್ನು ಕರೆದು ತಮ್ಮ ಮಗಳಿಗೆ ಆರತಿ ಮಾಡಿಸುತ್ತಾರೆ. ಈ ಸಮಯದಲ್ಲಿ ಹುಡುಗಿಯ ಮೇಲೆ ಹಾಡನ್ನು ಕಟ್ಟಿ ಹಾಡುತ್ತಿರುತ್ತಾರೆ.

ಒಂಭತ್ತನೆಯ ದಿನದ ಹೊತ್ತಿಗೆ ಮನೆಯನ್ನೆಲ್ಲಾ ಸಾರಿಸಿ ಮಡಿಮಾಡುತ್ತಾರೆ. ಹನ್ನೆರಡನೆಯ ದಿವಸ ಮನೆಗೆಲ್ಲಾ ಗೋಮೂತ್ರವನ್ನು ಸಿಂಪಡಿಸಿ ಸೂತಕವನ್ನು ಕಳೆದುಕೊಳ್ಳುತ್ತಾರೆ. ನಂತರ ಹುಡಿಗಿಯೊಂದಿಗೆ ತಮ್ಮ ಮನೆಯ ಬಂಧು-ಬಳಗದವರೆಲ್ಲರೂ ಸೇರಿ ಗಂಗಿಶಾಸ್ತ್ರ ಮಾಡಿಕೊಂಡು ಬರಲಿಕ್ಕೆ ಊರಿನಲ್ಲಿರುವ ಕೆರೆ, ನದಿ, ಬಾವಿ ಇಲ್ಲವೆ ನಳದ ಹತ್ತಿರ ಹೋಗಿ ಮೈ ನೆರೆದ ಹುಡುಗಿಯಿಂದ ಗಂಗಮ್ಮನ ಪೂಜೆ ಮಾಡಿಸಿ ಎಡೆಹಾಕಿಸುತ್ತಾರೆ. ಅವಾಗ ಎಲ್ಲ ಮುತ್ತೈದೆಯರು ಹುಡುಗಿಗೆ ಆರತಿ ಬೆಳಗಿ ಆಕೆಯ ತಲೆಯ ಮೇಲೆ ಗಂಗಿಕೊಡ (ನೀರು ತುಂಬಿದ ಕೊಡ)ವನ್ನು ಹೊರಿಸಿಕೊಂಡು ಮನೆಗೆ ಬರುತ್ತಾರೆ. ಮನೆಯ ಮುಂದೆ ಸೋದರತ್ತೆ ಹುಡುಗಿಗೆ ಇಳೆದೆಗೆದು ಅವಳ ಗಂಗಿಕೊಡವನ್ನು ಇಳಿಸಿಕೊಂಡು ಮನೆಯ ಒಳಗಡೆಗೆ ಕರೆದುಕೊಳ್ಳುತ್ತಾಳೆ. ಇಲ್ಲಿಗೆ ಆ ಹುಡುಗಿಗೆ ಇದ್ದಂತಹ ಸೂತಕವೆಲ್ಲ ಮುಗಿದಂತೆ. ಹುಡಿಗಿಯನ್ನು ಅಲಂಕೃತವಾಗಿರುವ ಕುರ್ಚಿಯ ಮೇಲೆ ಕುಳ್ಳಿರಿಸುತ್ತಾರೆ. ನಂತರ ಬಂದಂತಹ ಬಳಗದವರೆಲ್ಲರೂ ಆರತಿ ಮಾಡಿ ತಂದಿರುವಂತ ಉಡುಗೊರೆಯನ್ನು ಕೊಡುತ್ತಾರೆ. ನಂತರ ಸಮೂಹಿಕವಾಗಿ ಊಟವನ್ನು ಮಾಡುತ್ತಾರೆ.

೬. ಉಪನಯನ

ಪಾಂಚಾಳ ಸಮುದಾಯದಲ್ಲಿ ನಾಲ್ಕು ವರ್ಷದಿಂದ ಎಂಟು ವರ್ಷದ ಒಳಗಡೆ ಸಮುದಾಯದ ಆಚಾರ್ಯ ಸ್ವಾಮಿಗಳ ಮೂಲಕ ಸಂಸ್ಕಾರ ಕೊಡಿಸುವ ಪದ್ಧತಿ ರೂಢಿಯಲ್ಲಿದೆ. ಇದಕ್ಕೆ ಉಪನಯನ, ಮುಂಜಿ ಕಾರ್ಯ, ಸಂಸ್ಕಾರ ಎಂದೆಲ್ಲಾ ಕರೆಯುತ್ತಾರೆ.

ಸಮುದಾಯದಲ್ಲಿ ಉಪನಯನ ಕಾರ್ಯವನ್ನು ಮದುವೆಯಂತೆ ಆಚರಿಸಲಾಗುತ್ತದೆ. ಗಂಡು ಮಕ್ಕಳ ಜೀವನದಲ್ಲಿ ಉಪನಯನ ಅವಿಭಾಜ್ಯ ಅಂಗ. ಉಪನಯನವೆಂಬುದು ಮತ್ತೊಂದು ಹುಟ್ಟು. ಆ ಕಾರಣದಿಂದಲೇ ದ್ವಿಜ ಎನ್ನುತ್ತಾರೆ. ಅಂದರೆ ಎರಡನೆಯ ಬಾರಿ ಹುಟ್ಟಿಬರುವುದು. ಗುರುವಿನ ಮೂಲಕ ಎನ್ನಬಹುದು. ಅಲ್ಲಿಯವರೆಗೆ ಅವನಿಗೆ ಯಾವುದೇ ಕಾರ್ಯನಿರ್ವಹಿಸಲು ಅಧಿಕಾರವಿರುವುದಿಲ್ಲ.

ಉಪನಯನ ಕಾರ್ಯಕ್ರಮವನ್ನು ಅವರ ಮನೆಯ ಮುಂದೆ, ಕುಲದೇವರ ದೇವಸ್ಥಾನಗಳಲ್ಲಿ, ಸಂಬಂಧಿಕರ ಮದುವೆ ಕಾರ್ಯಕ್ರಮಗಳಲ್ಲಿ ಇಲ್ಲವೆ ಸಾಮೂಹಿಕ ಉಪನಯನ ಕಾರ್ಯಗಳಲ್ಲಿ ಮಾಡಿ ಮುಗಿಸುತ್ತಾರೆ. ಡಾ.ಕೆ.ಪಿ.ವೀರಣ್ಣನವರು ಬಾಲ ವಿಶ್ವಕರ್ಮ ಎಂಬ ಕೃತಿಯಲ್ಲಿ ಉಪನಯನ ಅನ್ನುವುದಕ್ಕೆ ನಯನ ಎಂದರೆ ಕಣ್ಣು, ಉಪ ಎಂದರೆ ಮತ್ತೊಂದು ಅಂದರೆ ಮೂರನೇ ಕಣ್ಣು ಎಂಬರ್ಥ ಕೊಡುತ್ತದೆ. ಈ ಮೂರನೇ ಕಣ್ಣೇ ಜ್ಞಾನದ ಕಣ್ಣು ಎಂದು ಹೇಳುತ್ತಾರೆ.[೧]

ಮಗುವಿಗೆ ಬಾಲ್ಯದಲ್ಲಿಯೇ ಉಪನಯನ ಮಾಡುವುದರಿಂದ ಆ ಮಗು ಆಚರಣೆಗಳನ್ನು ಮೈಗೂಡಿಸಿಕೊಂಡು ಬರುತ್ತದೆ. ವಯಸ್ಸಿಗೆ ಬಂದ ಮೇಲೆ ಆಚರಣೆಗಳನ್ನು ದಿಕ್ಕರಿಸಬಹುದು ಎಂಬ ಉದ್ದೇಶದಿಂದ ಬಾಲ್ಯದಲ್ಲಿಯೇ ಈ ಕಾರ್ಯವನ್ನು ಮುಗಿಸಿ ಮಕ್ಕಳಿಗೆ ಅವರ ಸಂಪ್ರದಾಯಗಳೆನ್ನೆಲ್ಲಾ ಹೇಳಿಕೊಡುತ್ತಾರೆ.

೬.೧. ಉಪನಯನದ ಪದ್ಧತಿ

ಉಪನಯನಕ್ಕೆ ಮುಹೂರ್ತವನ್ನು ಗೊತ್ತುಪಡಿಸಿಕೊಂಡು ಆ ದಿವಸಕ್ಕೆ ತಮ್ಮ ಬಂಧುಬಳಗದವರಿಗೆಲ್ಲಾ ಹೇಳಿ ಕಳುಹಿಸುತ್ತಾರೆ. ಆ ದಿವಸ ಆಚಾರ್ಯ ಸ್ವಾಮಿಗಳು ಅರ್ಘ್ಯಕ್ಕೆ ಸಂಬಂಧಿಸಿದ ಮಂತ್ರವನ್ನು ಪಠಿಸುತ್ತ ಮಗುವಿಗೆ ಸ್ನಾನವನ್ನು ಮಾಡಿಸುತ್ತಾರೆ. ನಂತರ ಹಡಪದವರನ್ನು ಕರೆಕಳಿಸಿ ತಲೆಯ ನೆತ್ತಿಯ ಮೇಲೆ ಚಿಕ್ಕದಾದ ಕೊಬ್ಬರಿ ಬಟ್ಟಲನ್ನು ಇಡುತ್ತಾರೆ. ಕೊಬ್ಬರಿ ಬಟ್ಟಲನ್ನು ಇಟ್ಟ ಭಾಗವನ್ನು ಬಿಟ್ಟು ಉಳಿದೆಲ್ಲಾ ಭಾಗದ ತಲೆ ಕೂದಲನ್ನು ಬೋಳಿಸುತ್ತಾರೆ. ಕೊಬ್ಬರಿ ಬಟ್ಟಲು ಇಟ್ಟ ಭಾಗದ ಕೂದಲಿಗೆ ಚಂಡಿಕೆ ಎಂದು ಕರೆಯುತ್ತಾರೆ.

ಮಗುವಿಗೆ ಅರಿಶಿಣ, ಕುಂಕುಮವನ್ನು ಹಚ್ಚಿ ಎಲ್ಲಾ ಮುತ್ತೈದೆಯರು ಅಕ್ಷತೆಕಾಳನ್ನು ಹಾಕಿ ಆರತಿ ಬೆಳಗುತ್ತಾರೆ. ಇದಾದ ಮೇಲೆ ಹುಡುಗನಿಗೆ ಸುರಿಗಿ ಎರೆಯುತ್ತಾರೆ. ಸುರಿಗೆಯಾದ ಮೇಲೆ ಹುಡುಗನಿಗೆ ಲಂಗೋಟಿಯನ್ನು ಹಾಕಿಕೊಳ್ಳಲಿಕ್ಕೆ ಕೊಡುತ್ತಾರೆ. ಸುರಿಗೆ ಸ್ಥಳದಿಂದ ಆರತಿಯ ಮೂಲಕ ಬಾಲಕನನ್ನು ಕರೆದುಕೊಂಡು ಆಚಾರ್ಯ ಸ್ವಾಮಿಯ ಇರುವ ಸ್ಥಳಕ್ಕೆ ಬರುತ್ತಾರೆ.

ಮನೆಯ ದೇವರ ಸಮ್ಮುಖದಲ್ಲಿ ಕೂಡಿಸಿ ಆಚಾರ್ಯ ಸ್ವಾಮಿಯವರು ಯಜ್ಞಕುಂಡದ ಎದುರಿಗೆ ಮಂತ್ರವನ್ನು ಪಠಿಸುತ್ತಾ ಪೂಜೆ ಮಾಡುತ್ತಾರೆ. ಅವರು ಪೂಜೆ ಮಾಡಿದಂತೆ ಹುಡುಗ ಕೂಡ ಮಂತ್ರ ಪಠಿಸುತ್ತ ಯಜ್ಞಕುಂಡಕ್ಕೆ ಪೂಜೆ ಮಾಡಬೇಕು. ನಂತರ ಮನೆಯವರೆಲ್ಲರೂ ಮೆರವಣಿಗೆಯ ಜೊತೆಗೆ ಆರತಿ ತೆಗೆದುಕೊಂಡು ಹೋಗಿ ಮಗುವಿಗೆ ಸೋದರ ಮಾವ ಪಾದಪೂಜೆ ಮಾಡಿ ಮನೆಗೆ ಕರೆದುಕೊಂಡು ಬರುತ್ತಾರೆ.

ಮನೆಯ ಮುಂದೆ ಅನ್ನ ಕುಂಕುಮ ಹಾಗೂ ಇದ್ದಿಲು ಬೆರೆಸಿದ ನೀರಿನಿಂದ ಬಾಲಕನಿಗೆ ಇಳಿದೆಗೆಯುತ್ತಾರೆ. ನಂತರ ಆಚಾರ್ಯ ಸ್ವಾಮಿಯವರ ಸಮ್ಮುಖದಲ್ಲಿ ಕೂಡಿಸಿ ಬಾಲಕನಿಗೆ ಮೂರು ಎಳೆಯ ಜನಿವಾರವನ್ನು ಹಾಕುತ್ತಾರೆ. ಜನಿವಾರ ಹಾಕುವ ಮುಂಚೆಯೇ ಬಾಲಕನ ನಾಲಿಗೆಯನ್ನು ಉತ್ತರಾಣಿಯ ಕಡ್ಡಿಯಿಂದ ಅಥವಾ ಗಂಧದ ತುಂಡಿಗೆ ಬೆಂಕಿಯನ್ನು ಹಚ್ಚಿಕೊಂಡು ಮೂರು ಬಾರಿ ಸುಡುತ್ತಾರೆ. ನಂತರ ಬಾಲಕನ ನಾಲಿಗೆ ಶುದ್ಧ ಎಂದು ತಿಳಿದು ಕಿವಿಯಲ್ಲಿ ಗಾಯತ್ರಿ ಮಂತ್ರವನ್ನು ಪಠಿಸುತ್ತಾ ನಾನು ಇಂದಿನಿಂದ ಪಾಂಚಾಳ ಸಮುದಾಯದ ಎಲ್ಲಾ ಆಚರಣೆಗಳನ್ನು ಮಾಡುತ್ತೇನೆ. ದಿನಾಲು ಮೈ ತೊಳೆದು ದೇವರ ಪೂಜೆ ಮಾಡಿ ಮುಂದಿನ ಕೆಲಸಗಳನ್ನು ಕೈಗೊಳ್ಳುತ್ತೇನೆ. ಯಾವುದೇ ರೀತಿಯ ತಪ್ಪನ್ನು ಸಮಾಜಕ್ಕೆ ಮಾಡುವುದಿಲ್ಲ. ನನ್ನ ತಂದೆ ತಾಯಿ ಬಂಧು ಬಳಗವನ್ನು ಪ್ರೀತಿಯಿಂದ ಆರಾಧಿಸುತ್ತೇನೆ ಇತ್ಯಾದಿ ಆಚಾರ ವಿಚಾರಗಳನ್ನು ಆ ಮಗುವಿನ ಬಾಯಿಂದ ಹೇಳಿಸಿ ಅವನ್ನು ಪಾಲನೆ ಮಾಡಲು ತಿಳಿಸುತ್ತಾರೆ. ಜನಿವಾರವನ್ನು ಧರಿಸುವಾಗ ಎಡಗೈಯಿಂದ ಎಡಕಿವಿಯನ್ನು ಮುಚ್ಚಿಕೊಂಡು ಜನಿವಾರ ಹಾಕಿಸುತ್ತಾರೆ.

ಜನಿವಾರವು ಮೊದಲಿಗೆ ಮೂರು ಎಳೆಯದ್ದನ್ನು ಮಾತ್ರ ಹಾಕುತ್ತಾರೆ. ಇದನ್ನು ಕುರಿತು ಆಚಾರ್ಯ ಸ್ವಾಮಿಗಳು ಈ ಮೂರು ಎಳೆಗಳು ಸತ್, ರಜಸ ಹಾಗೂ ತಮಸ್ ಎಂಬ ಗುಣಗಳನ್ನು ಸೂಚಿಸುತ್ತವೆ.

ಈ ಮೂರು ಗುಣಗಳ ಸಂಗಮವೇ ಜನಿವಾರ. ಪಾಂಚಾಳ ಸಮುದಾಯದಲ್ಲಿ ಹುಟ್ಟಿದವನು ಶಾಸ್ತ್ರೀಯವಾಗಿ ಯಾರು ಜನಿವಾರವನ್ನು ಧರಿಸುವುದಿಲ್ಲವೋ ಅವರು ಸೂರ್ಯ ಚಂದ್ರರಿರುವರೆಗೂ ಅನೇಕ ನರಕ ಭಾದೆಗಳನ್ನು ಅನುಭವಿಸುತ್ತಾರೆಂದು ಮೂಲಸ್ತಂಭ ಪುರಾಣವು ತಿಳಿಸುತ್ತದೆ ಎಂದು ಹೇಳುತ್ತಾರೆ. ನಂತರ ಅಲ್ಲಿ ನೆರೆದವರೆಲ್ಲರೂ ಬಾಲಕನಿಗೆ ಆರತಿಯನ್ನು ಬೆಳಗಿ ತಾವು ತಂದಂತಹ ಉಡುಗೊರೆಯನ್ನು ಕೊಡುತ್ತಾರೆ. ಒಂಭತ್ತನೆಯ ದಿನದಂದು ಬಿಟ್ಟಂತಹ ಚಂಡಿಕೆಯನ್ನು ಕತ್ತರಿಸುತ್ತಾರೆ.

೭. ವಿವಾಹ ಪದ್ಧತಿ

ವಿವಾಹವೆಂಬುದು ಸ್ವರ್ಗದಲ್ಲಿಯೇ ಒಂದು ಗಂಡಿಗೆ ಹೆಣ್ಣು, ಒಂದು ಹೆಣ್ಣಿಗೆ ಗಂಡು ನಿರ್ಧಾರವಾಗಿರುತ್ತದೆ ಎಂಬ ಆಡುಮಾತು ಅಥವಾ ನಂಬಿಕೆ ಎಲ್ಲಾ ಸಮುದಾಯಗಳಲ್ಲಿಯೂ ಇದೆ. ಅಥವಾ ಒಂದು ಗಂಡಿಗೆ ಒಂದು ಹೆಣ್ಣು ಇದ್ದೆ ಇರುತ್ತದೆ ಎಂಬ ನಂಬಿಕೆಯೂ ನಮ್ಮಲ್ಲಿ ಬೆಳೆದು ಬಂದಿರುವುದು ನಿಜ ಅದರಂತೆಯೇ ನಡೆಯುತ್ತದೆ. ಈ ಮಾತು ಪಾಂಚಾಳ ಸಮುದಾಯದವರಿಗೂ ಕೂಡ ಅನ್ವಯಿಸುತ್ತದೆ. ಮದುವೆ ಎಂದರೆ ಸಾಮಾನ್ಯವಾಗಿ ಹುಡುಗಿಗೆ ಹಂದಿನೆಂಟು ವರ್ಷ, ಹುಡುಗನಿಗೆ ಇಪ್ಪತ್ತೊಂದು ವರ್ಷ ತುಂಬಿದ ಮೇಲೆ ನಿಗದಿತವಾದ ದಿನ, ಸಮಯದಲ್ಲಿ ಎಲ್ಲರ ಒಪ್ಪಿಗೆಯ ಸಮ್ಮುಖದಲ್ಲಿ ಸಂಪ್ರದಾಯ ಬದ್ಧವಾಗಿ ಹೆಣ್ಣನ್ನು ಗಂಡಿಗೆ ಧಾರೆ ಎರೆದು ಕೊಡುವುದಕ್ಕೆ ವಿವಾಹ ಅಥವಾ ಮದುವೆ ಎಂದು ಹೇಳಬಹುದು. ಇತ್ತೀಚಿನ ದಿನಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿಂದ ಕೂಡ ವಿವಾಹಗಳು ನಡೆಯುತ್ತವೆ. ಅಂದರೆ ಸಂತಾನಾಪೇಕ್ಷೆಯುಳ್ಳ ಗಂಡು ಹೆಣ್ಣಿನ ನಡುವೆ ಏರ್ಪಟ್ಟ ನಂಟು.

ಪಾಂಚಾಳರಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಬಾಲ್ಯವಿವಾಹ ಪದ್ಧತಿಯು ಆಚರಣೆಯಲ್ಲಿತ್ತು. ಆದರೆ ಈಗ ಜಾರಿಯಲಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಕಾನೂನಿನ ನಿಯಮದಂತೆ ವಿವಾಹದ ವಯಸ್ಸನ್ನು ಗೊತ್ತುಪಡಿಸಿಕೊಂಡೆ ಮದುವೆ ಮಾಡುತ್ತಾರೆ. ವಿವಾಹವು ಬ್ರಹ್ಮತ್ವದಿಂದ ಗೃಹಸ್ಥಾಶ್ರಮಕ್ಕೆ ಕಾಲಿಡುವ ಸಂದರ್ಭವಾಗಿದೆ. ವಿವಾಹವು ಮನುಷ್ಯನ ಬದುಕಿನ ಅವಿಭಾಜ್ಯ ಅಂಗ ಎಂದು ಹೇಳಿದರೆ ತಪ್ಪೇನು ಇಲ್ಲ. ವಿವಾಹವೂ ಅನಿವಾರ್ಯ, ಮನುಷ್ಯನ ಹುಟ್ಟು ಪ್ರಾಚೀನದಂತೆ ವಿವಾಹ ಪದ್ಧತಿ ಪ್ರಾಚೀನ ಅಲ್ಲ. ಏಕೆಂದರೆ ಮನುಷ್ಯನಿಗೆ ನಾಗರಿಕ ಪ್ರಜ್ಞೆ ಬಂದ ಮೇಲೆ ವಿವಾಹ ಪದ್ಧತಿ ಸೃಷ್ಟಿಸಿಕೊಂಡನು.

ಸಾಮಾನ್ಯವಾಗಿ ಇವರಲ್ಲಿ ಸೋದರ ಸಂಬಂಧಿಯಲ್ಲಿಯೇ ಮದುವೆ ಆಗುವ ರೂಢಿಯಿದೆ. ತಂಗಿಯ ಅಥವಾ ಅಕ್ಕನ ಮಗಳು, ಸೋದರಮಾವನ ಇಲ್ಲವೆ ಅತ್ತೆಯ ಮಗಳು ಇಲ್ಲವೆ ಅವರ ಕಳ್ಳುಬಳ್ಳಿಯಲ್ಲಿಯೇ ಹುಡುಗ ಅಥವಾ ಹುಡುಗಿಯನ್ನು ನೋಡಿ ಮದುವೆಯಾಗುವುದುಂಟು. ಪ್ರಸ್ತುತ ಸಂದರ್ಭದಲ್ಲಿ ವಿಧವಾ ಪುನರ್ ವಿವಾಹ ಹಾಗೂ ಅಂತರಜಾತಿಯ ವಿವಾಹಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಬೇರೆ ಬೇರೆ ಸಮುದಾಯಗಳು ತಮ್ಮ ಸಂಸ್ಕೃತಿಗೆ ಹೊಂದಿಕೊಂಡಂತೆ ವಿವಾಹ ಪದ್ಧತಿಗಳನ್ನು ನಡೆಸಿಕೊಂಡು ಬಂದಿವೆ. ಅದಕ್ಕೇನೂ ಹೊರತಾಗಿಲ್ಲ ಪಾಂಚಾಳ ಸಮುದಾಯ. ಈ ಸಮುದಾಯದಲ್ಲಿ ಬಾಲ್ಯವಿವಾಹ, ಬಹುಪತ್ನಿತ್ವ, ವಿವಾಹ ವಿಚ್ಛೇದನ, ಪುನರ್ ವಿವಾಹ, ಅಂತರ್ ಜಾತಿಯ ಮದುವೆ ಹಾಗೂ ವಿಧವಾ ವಿವಾಹಕ್ಕೆ ಸಮುದಾಯದ ಅಧಿಕೃತ ಒಪ್ಪಿಗೆಯಿಲ್ಲ ಕೆಲವೊಂದು ಸಂದರ್ಭದಲ್ಲಿ ಮೇಲೆ

ತಿಳಿಸಿದ ಎಲ್ಲಾ ಪದ್ಧತಿಗಳು ನಡೆದ ಸಂದರ್ಭಗಳು ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ಬೆಳಕಿಗೆ ಬಂದಿವೆ. ಬಹುಪತ್ನಿತ್ವ ಪಡೆಯುವರು ಮೊದಲನೇ ಹೆಂಡತಿ ಅಕಾಲ ಮರಣಕ್ಕೆ ತುತ್ತಾದಾಗ, ಇಲ್ಲವೆ ಪುತ್ರಸಂತಾನ ಪ್ರಾಪ್ತಿ ಇಲ್ಲದಾಗ ಬಹುಪತ್ನಿತ್ವ ಆಗಿರುವುದುಂಟು. ವಿವಾಹ ವಿಚ್ಛೇದನಗಳು ಪತಿ ಮತ್ತು ಪತ್ನಿಯ ನಡುವೆ ಭಾವನಾತ್ಮಕ ಸಂಬಂಧಗಳು ಬೆಳೆಯದಿದ್ದ ಪಕ್ಷದಲ್ಲಿ (ಸಂದರ್ಭದಲ್ಲಿ) ವಿವಾಹ ವಿಚ್ಛೇದನವು ಕೂಡ ಕಡಿಮೆ ಪ್ರಮಾಣದಲ್ಲಿ ಆಗಿವೆ. ವಿಧವಾ ವಿವಾಹಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡಿರುವ ಸಂದರ್ಭದಲ್ಲಿ ಪುರುಷ ಮರುಮದುವೆ ಆದ ಸಂದರ್ಭಗಳಿವೆ. ಆದರೆ ಸ್ತ್ರೀ ಮರುಮದುವೆ ಆದ ಸಂದರ್ಭಗಳು ಕಾಣಿಸಿಕೊಂಡಿಲ್ಲ. ವಿಧವೆಯಾದ ಸ್ತ್ರೀಯು ಕೂಡಿಕೆಯನ್ನು ಮಾಡಿಕೊಂಡ ಸಂದರ್ಭಗಳಿವೆ.

ಪಾಂಚಾಳರಿಗೆ ಐದು ಗೋತ್ರಗಳಿವೆ. ಅವುಗಳೆಂದರೆ ಕಮ್ಮಾರ-ಸನಾತನ, ಬಡಿಗ-ಸಾನಗ, ಅಕ್ಕಸಾಲಿಗ-ಅಹಭೂನ, ಶಿಲ್ಪಿ-ಪ್ರತ್ನಸ ಹಾಗೂ ಕಂಚುಗಾರ-ಸುಪರ್ಣಸ ಎಂದಿವೆ. ಈ ಗೋತ್ರಗಳಲ್ಲಿ ಸ್ವಗೋತ್ರ ವಿವಾಹ ಪದ್ಧತಿ ಇಲ್ಲ. ತನ್ನ ಗೋತ್ರ ಬಿಟ್ಟು ಉಳಿದ ನಾಲ್ಕು ಗೋತ್ರಗಳಲ್ಲಿ ಯಾವುದಾದರೂ ಒಂದರ ಜೊತೆಗೆ ಸಂಬಂಧ ಬೆಳಸಬಹುದು.

ಇವರಲ್ಲಿ ವರ ಮೊದಲಿಗೆ ಕನ್ಯೆ (ವಧುವಿನ) ಮನೆಗೆ ಹೋಗಿ ವಧುವನ್ನು ನೋಡಿಕೊಂಡು ಬರುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ವರ ವಧುವನ್ನು ನೋಡಲಿಕ್ಕೆ ಹೋದ ಸಂದರ್ಭದಲ್ಲಿ ವಧುವಿಗೆ ಹೂವು, ಬಾಳೆಹಣ್ಣು ಟೆಂಗಿನ ಕಾಯಿಯನ್ನು ತೆಗೆದುಕೊಂಡು ಹೋಗಿ ವಧುವಿಗೆ ಉಡಿತುಂಬಿ ಕನ್ಯೆಯನ್ನು ನೋಡಿಕೊಂಡು ಬರುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ಮೊದಲಿಗೆ ಕನ್ಯೆಯನ್ನು ನೋಡಲಿಕ್ಕೆ ಹೋಗುವ ಸಂದರ್ಭದಲ್ಲಿ ವರನನ್ನು ಸೇರಿಕೊಂಡು ಇಬ್ಬರು ಹೋಗಿ ಅಂದರೆ ಸರಿ ಸಂಖ್ಯೆಯಲ್ಲಿ ಹೋಗಿ ಕನ್ಯೆಯನ್ನು ನೋಡಿಕೊಂಡು ಬರುತ್ತಾರೆ. ವರ ಹಾಗೂ ಅವನ ಜೊತೆಗೆ ನೋಡಲಿಕ್ಕೆ ಹೋದ ಸಂಬಂಧಿಕರಿಗೆ ಕನ್ಯೆ ಮನಸ್ಸಿಗೆ ಬಂದರೆ, ಕನ್ಯೆಯ ಮನೆಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ಅವರ ಹತ್ತಿರದ ಸಂಬಂಧಿಕರಿಂದ ತಿಳಿದುಕೊಳ್ಳುತ್ತಾರೆ. ಅಂದರೆ ಈ ಸಮುದಾಯದಲ್ಲಿ ಹಿರೆಮನೆಯವರು ಹಾಗೂ ಚಿಕ್ಕಮನೆಯವರು ಎಂಬ ಪಂಗಡಗಳಿವೆ. ಈ ಎರಡು ಪಂಗಡಗಳಲ್ಲಿ ಪರಸ್ಪರ ಊಟ ಉಪಚಾರ ನಡೆಯುತ್ತವೆ. ಆದರೆ ಹೆಣ್ಣು ಗಂಡು ಕೊಡುಕೊಳ್ಳುವಿಕೆಯ ಸಂಬಂಧ ನಡೆಯುವುದಿಲ್ಲ. ಏಕೆಂದರೆ ಚಿಕ್ಕ ಮನೆಯವರು ಶ್ರೇಷ್ಠ ಎಂದು ಹೇಳಿಕೊಳ್ಳುತ್ತಾರೆ. ನಾವು ಮಾಂಸ, ಮಧ್ಯವನ್ನು ಮುಟ್ಟುವುದಿಲ್ಲ, ಆದರೆ ಹಿರಿಯಮನೆಯವರು ಇವುಗಳನ್ನು ಸೇವಿಸುತ್ತಾರೆ ಆದ್ದರಿಂದ ವೈದಿಕಚರಣೆಯ ಅನುಸಾರವಾಗಿ ಇವರು ನಮಗಿಂತಲೂ ಕೆಳಗೆ ಎಂಬ ಭಾವನೆ ಇವರಲ್ಲಿದೆ. ಹಾಗೂ ಮನೆಯ ದೇವರುಗಳಿಗೆ ಸಂಬಂಧಿಸಿದಂತೆ ಅಂದರೆ ಮನೆಯ ದೇವರು ವೀರಭದ್ರೇಶ್ವರ ಇದ್ದರೆ ಮೈಲಾರಲಿಂಗೇಶ್ವರ ಮನೆಯ ದೇವರಿಗೆ ಹೆಣ್ಣು ಕೊಡಲಿಕ್ಕೆ ಹಿಂಜರಿಯುವುದು. ಇಂತಹ ವಿಷಯಗಳನ್ನೆಲ್ಲ ಈ ಸಂದರ್ಭದಲ್ಲಿ ಸೂಕ್ಷ್ಮವಾಗಿ ಗಮನಿಸುತ್ತಾರೆ. ಇಂತಹ ವಿಷಯಗಳನ್ನೆಲ್ಲಾ ಸ್ಪಷ್ಟವಾಗಿ ತಿಳಿದುಕೊಂಡ ಮೇಲೆಯೆ ವರನ ಕಡೆಯವರಾಗಲಿ ಅಥವಾ ಕನ್ಯೆಯ ಕಡೆಯವರಾಗಲಿ ಮುಂದಿನ ಕೆಲಸಕ್ಕೆ ಕೈ ಹಾಕುವರು.

ವರನ ಮನೆಯ ಹಿರಿಯರು ಹಾಗೂ ಸಂಬಂಧಿಕರೆಲ್ಲರೂ ಸೇರಿ ಕನ್ಯೆಯನ್ನು ನೋಡಲು ಹೋಗುವರು. ಈ ಸಂದರ್ಭದಲ್ಲಿ ವರನ ಕಡೆಯವರು ಹಣ್ಣು, ಕಾಯಿ, ಹೂವನ್ನು ಕನ್ಯೆಗೆ ಉಡಿ

ತುಂಬಿ ಕನ್ಯೆಯನ್ನು ನೋಡುವರು. ವರನ ಜೊತೆಗೆ ಬಂದ ಹೆಣ್ಣು ಮಕ್ಕಳು ಕನ್ಯೆಯ ಹಸ್ತರೇಖೆ, ಕಾಲು, ಹಣೆಯ ಸುಳಿ, ತನ್ನು ಇಂತಹವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಇವು ಅವರಿಗೆ ಯಾವುದೇ ದೋಷವಿಲ್ಲವೆಂಬುದು ಖಾತ್ರಿಯಾದರೆ ಕನ್ಯೆ ನಮ್ಮ ಮನಸ್ಸಿಗೆ ಬಂದಿದೆ ಎಂದು ಹೇಳಿ ಬರುತ್ತಾರೆ. ಇಲ್ಲವಾದಲ್ಲಿ ಆ ಸಂಬಂಧವನ್ನು ಮುರಿದುಕೊಳ್ಳುತ್ತಾರೆ. ಒಂದು ನಿರ್ದಿಷ್ಟ ದಿನದಂದು ಕನ್ಯೆಯ ಮನೆಯವರು ವರನ ಮನೆಯನ್ನು ನೋಡಲು ಬರುತ್ತಾರೆ. ಈ ಎರಡು ಮನೆತನಗಳಿಗೆ ಪರಸ್ಪರ ಗಂಡು ಹೆಣ್ಣು ಒಪ್ಪಿಗೆಯಾದರೆ ಮಾತುಕತೆಗೆ (ಖಾಯಂ ಮಾಡಿಕೊಳ್ಳಲಿಕ್ಕೆ) ಮುಂದಾಗುತ್ತಾರೆ.

ಮಾತುಕತೆಯನ್ನು ವರನ ಮನೆಯಲ್ಲಿಯೇ ಇಟ್ಟುಕೊಳ್ಳಲಾಗುತ್ತದೆ. ಮಾತುಕತೆಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ದಿನದಂದು ಕನ್ಯೆಯ ಸಂಬಂಧಿಕರೆಲ್ಲರೂ ವರನ ಮನೆಗೆ ಬರುವರು ಅಲ್ಲಿ ಸಮುದಾಯದ ಹಿರಿಯರ ಸಮ್ಮುಖದಲ್ಲಿ ಕನ್ಯೆ ಮತ್ತು ವರನ ಬೀಗರ ನಡುವೆ ವರೋಪಚಾರ, ಒಡವೆ, ವಸ್ತ್ರ, ತೆರ ಮತ್ತು ವರದಕ್ಷಿಣೆ ಕುರಿತಂತೆ ಮಾತುಕತೆಯಾಡುವರು. ಪ್ರಸ್ತುತ ಸಂದರ್ಭದಲ್ಲಿ ವರದಕ್ಷಿಣೆಯ ಪದ್ಧತಿ ಪ್ರಚಲಿತದಲ್ಲಿದೆ. ಅವರ ಆರ್ಥಿಕತೆಗೆ ಅನುಸಾರವಾಗಿ ವರನಿಗೆ ವರ ದಕ್ಷಿಣೆಯನ್ನು ಕೊಡುವುದರ ಬಗ್ಗೆ ಮಾತನಾಡುತ್ತಾರೆ. ನಂತರ ಕನ್ಯೆಯ ಸಂಬಂಧಿಕರು ನಮ್ಮ ಹುಡುಗಿಗೆ ನೀವು ಏನು ಕೊಡುತ್ತೀರಿ ಎಂಬ ವಿಷಯ ಪ್ರಸ್ತಾಪ ಪಡಿಸುವರು. ಹೀಗೆ ಇಬ್ಬರಲ್ಲಿಯೂ ಪರಸ್ಪರ ವರದಕ್ಷಿಣೆಗೆ ಸಂಬಂಧಿಸಿದಂತೆ ಮಾತುಕತೆ ಒಪ್ಪಿಗೆಯಾದರೆ, ಮದುವೆಯ ಒಪ್ಪಂದಕ್ಕೆ ಸೂಚನೆ ಕೊಟ್ಟ ಹಾಗೆಯೇ ನಂತರ ವರನ ತಂದೆ ಹಾಗೂ ಕನ್ಯೆಯ ತಂದೆ ಪರಸ್ಪರ ಬಾಯಿಯಲ್ಲಿ ಸಕ್ಕರೆಯನ್ನು ಹಾಕಿಕೊಂಡು ತಾಂಬೂಲವನ್ನು ಬದಲಾಯಿಸಿಕೊಳ್ಳುತ್ತಾರೆ. ಇದಾದ ಮೇಲೆ ಅಲ್ಲಿ ನೆರೆದ ಸಮುದಾಯದ ಹಿರಿಯರೆಲ್ಲರಿಗೂ ಸಕ್ಕರೆ, ಎಲೆ-ಅಡಿಕೆ ಕೊಡುತ್ತಾರೆ. ನಂತರ ವರನ ಮನೆಯವರು ಮಾಡಿದ ಹುಗ್ಗಿ ತುಪ್ಪವನ್ನು ಊಟ ಮಾಡುತ್ತಾರೆ. ಇಲ್ಲಿಂದ ನಾವು ನೀವು ಬೀಗರಾದೆವೆಂದು ಸಂತೋಷದಿಂದ ತಮ್ಮ ಊರಿಗೆ ನಿರ್ಗಮಿಸುತ್ತಾರೆ. ನಂತರ ನಿಶ್ಚಿತಾರ್ಥದ ದಿನವನ್ನು ಗೊತ್ತುಪಡಿಸುವರು.

೭.೧. ವೀಳ್ಯೆಶಾಸ್ತ್ರ

ಪಾಂಚಾಳ ಸಮುದಾಯದಲ್ಲಿ ವೀಳ್ಯೆ ಶಾಸ್ತ್ರವು ಮದುವೆಯ ಪ್ರಾರಂಭದ ಒಂದು ಪ್ರಮುಖವಾದ ಆಚರಣೆ. ಇದಕ್ಕೆ ನಿಶ್ಚಿತಾರ್ಥ ಎಂದು ಕೂಡ ಕರೆಯುತ್ತಾರೆ. ಈ ನಿಶ್ಚಿತಾರ್ಥವನ್ನು ಕನ್ಯೆಯ ಮನೆಯ ಮುಂದೆ ನಡೆಸಿಕೊಡಬೇಕು. ಇದು ಆ ಊರಿನ ಪಾಂಚಾಳ ಸಮುದಾಯದ ಹಿರಿಯರ ಸಮ್ಮುಖದಲ್ಲಿ ನಡೆಯುತ್ತದೆ. ಹುಡುಗಿಯನ್ನು ಖಾಯಂ ಮಾಡಿಕೊಂಡ ಮೇಲೆ ಮೂರು ಅಥವಾ ನಾಲ್ಕು ತಿಂಗಳಲ್ಲಿ ಈ ಕಾರ್ಯವನ್ನು ಮಾಡುತ್ತಾರೆ. ತಮಗೆ ನಂಬಿಕೆಯಿರುವ ಜ್ಯೋತಿಷ್ಯರ ಬಳಿ ಹೆಣ್ಣಿನ ತಂದೆ ಹಾಗೂ ಗಂಡಿನ ಮನೆಯ ಯಜಮಾನರು ಹೋಗಿ ನಿಶ್ಚಿತಾರ್ಥದ ದಿನವನ್ನು ಗೊತ್ತುಪಡಿಸಿಕೊಂಡು ಬರುತ್ತಾರೆ. ನಂತರ ಎರಡು ಮನೆಯವರು ತಮ್ಮ ಬಂಧು ಬಳಗದವರಿಗೆ ನಿಶ್ಚಿತಾರ್ಥದ ವಿಷಯವನ್ನು ತಿಳಿಸಿ ಆ ದಿವಸ ಬರಬೇಕೆಂದು ಹೇಳುತ್ತಾರೆ.

ನಿಶ್ಚಿತಾರ್ಥದ ದಿವಸದ ಬೆಳಿಗ್ಗೆಯೇ ವರನ ಕಡೆಯ ಬಂಧು ಬಳಗದವರೆಲ್ಲರೂ ಕನ್ಯೆಯ ಊರಿಗೆ ಬರುತ್ತಾರೆ. ಬಂದಂತಹ ವರನ ಬಂಧು ಬಳಗದವರಿಗೆ ಉಪಹಾರವನ್ನು ಕೊಟ್ಟು ಉಪಚರಿಸುವರು.

ನಂತರ ಹೆಣ್ಣಿನ ಮನೆಯವರು ತಮ್ಮ ಬಂಧು ಬಳಗದೊಂದಿಗೆ ಕಳಶವನ್ನು ತೆಗೆದುಕೊಂಡು ಬಂದು ಮೆರವಣಿಗೆಯ ಮೂಲಕ ವರನ ಕಡೆಯ ಬಂಧುಬಳಗವನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಕನ್ಯೆಯ ಮನೆಯ ಮುಂದೆ ವರನನ್ನು ಪೂಜೆ ಮಾಡಿ ಮನೆಯ ಒಳಕ್ಕೆ ಬಂಧು ಬಳಗದವರೊಂದಿಗೆ ಕರೆದುಕೊಳ್ಳುತ್ತಾರೆ. ನಂತರ ಗಂಡಿನವರು ತಂದಂತಹ ವೀಳ್ಯದೆಲೆ, ಅಡಕೆ, ಒಣಕೊಬ್ಬರಿ ಬಟ್ಟಲು, ಸೀರೆ, ಕುಪ್ಪಸ, ಹಸಿರು ಬಳೆ ಹಾಗೂ ಸಕ್ಕರೆ ಇವು ಎಲ್ಲವನ್ನು ಹೆಣ್ಣಿನವರಿಗೆ ಕೊಡುತ್ತಾರೆ. ಎರಡು ಕಡೆಯ ದೈವದ ಹಿರಿಯರು ಕುಳಿತುಕೊಂಡು ಕರಿಯ ಕಂಬಳಿಯ ಮೇಲೆ ತಂದಂತಹ ಮಂಗಲ ದ್ರವ್ಯಗಳನ್ನು ಇಟ್ಟು, ಅವುಗಳ ಮುಂಭಾಗದಲ್ಲಿ ದೀಪವನ್ನು ಹಚ್ಚಿ ಇಟ್ಟಿರುತ್ತಾರೆ.

ಗಂಡು ಮತ್ತು ಹೆಣ್ಣಿನ ಕಡೆಯ ಸಮಸ್ತ ದೈವದವರ ಎದುರು ಮಾತು ಕತೆ ನಡೆಸಿ ಶಾಸ್ತ್ರ ಮಾಡಿ ವೀಳ್ಯವನ್ನು ಹಂಚಲಾಗುತ್ತದೆ. ಈ ವೀಳ್ಯವನ್ನು ಮೊದಲಿಗೆ ಕನ್ಯೆ ಮತ್ತು ವರನ ಮನೆಯ ದೇವರ ಹೆಸರಿಗೆ ಮೀಸಲು ಮಾಡಿ ವೀಳ್ಯದೆಲೆ ಸಕ್ಕರೆಯನ್ನು ತೆಗೆದಿಡುತ್ತಾರೆ. ನಂತರ ಊರಿನ ಪಾಂಚಾಳ ಸಮುದಾಯದ ದೈವಕ್ಕೆ ವೀಳ್ಯವನ್ನು ತೆಗೆಯುತ್ತಾರೆ. ಕೊನೆಗೆ ಅಲ್ಲಿ ಸೇರಿದ ಸಮಸ್ತ ದೈವಕ್ಕೂ ವೀಳ್ಯವನ್ನು ಸಕ್ಕರೆಯೊಂದಿಗೆ ಹಂಚಲಾಗುತ್ತದೆ. ಕುಲದೇವತೆಯ ಪೂಜೆಯೊಂದಿಗೆ ಪೂಜೆ ನೆರವೇರಿಸುತ್ತಾರೆ. ಹೆಣ್ಣಿನ ತಂದೆ ಗಂಡಿನ ತಂದೆಯನ್ನು ಮಂಗಲ ದ್ರವ್ಯ ಪೂಜೆ ಮಾಡಿದ ಸ್ಥಳಕ್ಕೆ ಕರೆದು ಹೆಣ್ಣು ತೆಗೆದುಕೊಂಡ ಬಗ್ಗೆ ಮತ್ತು ಗಂಡು ತೆಗೆದುಕೊಂಡ ಬಗ್ಗೆ ದೈವದ ಸಮ್ಮುಖದಲ್ಲಿ ವಾಗ್ದಾನ ಮಾಡಿಸುತ್ತಾರೆ. ಅಂದರೆ ಇಂತಹ ಗೋತ್ರದ ಇಂತಹ ಮನೆತನದ ಇಂತಹ ಮನೆಯದೇವರ ಕುಲದ ಕನ್ಯೆಯನ್ನು ಹಾಗೂ ಇಂತಹ ಗೋತ್ರದ ಈ ಮನೆತನದ ಇಂತಹ ದೇವರ ಕುಲದ ವರನಿಗೆ ಕೊಟ್ಟಿರುತ್ತೇವೆ ಎಂದು ದೈವದ ಮುಂದೆ ಹೇಳಿಸುತ್ತಾರೆ. ಇವರು ತಂದಂತಹ ಸೀರೆಯನ್ನು ಹುಡುಗಿ ಉಟ್ಟುಕೊಳ್ಳುತ್ತಾಳೆ. ಹುಡುಗ ಅವರು ತಂದಂತಹ ಬಟ್ಟೆಯನ್ನು ಹಾಕಿಕೊಳ್ಳುತ್ತಾನೆ. ಇದಾದ ಮೇಲೆ ಹುಡುಗನಿಗೆ ಹೆಣ್ಣಿನ ತಂದೆ ಉಂಗುರವನ್ನು ಹುಡುಗನಿಗೆ ಇಡುತ್ತಾನೆ. ಈ ಉಂಗುರವನ್ನು ಹೊಸಮದುಮಗ ಹೊಕ್ಕು ಉಂಗುರ ಎಂದು ಕರೆಯುತ್ತಾರೆ. ನಂತರ ಗಂಡಿನ ಮನೆಯವರು ತಂದಂತಹ ವೀಳ್ಯದಲೆ ಅಡಕೆ ಮತ್ತು ಸಕ್ಕರೆಯನ್ನು ಎರಡು ಕಡೆಯ ಬಳಗದವರಿಗೆ ಕೊಡುತ್ತಾರೆ.

ಅಲಂಕಾರಿಸಿದ ಚೇರ್‌ಗಳಲ್ಲಿ ಇಬ್ಬರನ್ನು ಕುಳ್ಳಿರಿಸಿರುತ್ತಾರೆ. ಬಂದಂತಹ ಬಂಧು ಬಳಗದವರು ಅಕ್ಷತೆ ಕಾಳುಗಳನ್ನು ಹಾಕಿ ಆರತಿಯನ್ನು ಬೆಳಗಿ ತಾವು ತಂದಂತಹ ಉಡುಗೊರೆಯನ್ನು ಕೊಡುತ್ತಾರೆ. ನಂತರ ಬಂದಂತಹ ಬಳಗದವರಿಗೆ ಸಿಹಿ ಭೋಜನವನ್ನು ಉಣಬಡಿಸುತ್ತಾರೆ. ಈ ಶಾಸ್ತ್ರ ಮುಗಿದರೆ ಪಾಂಚಾಳರ ಸಮುದಾಯದಲ್ಲಿ ಅರ್ಧ ಮದುವೆ ಮುಗಿದಂತೆಯೇ ಎಂದು ತಿಳಿಯುತ್ತಾರೆ. ನಿಶ್ಚಿತಾರ್ಥ ಮುಗಿದ ಮೇಲೆ ವರನ ಕಡೆಯವರು ತಮ್ಮ ಊರಿಗೆ ನಿರ್ಗಮಿಸುತ್ತಾರೆ.

೭.೨. ಮದುವೆಯ ನಿಶ್ಚಯ

ನಿಶ್ಚಿತಾರ್ಥ ಮಾಡಿಕೊಂಡ ನಂತರ ಮದುವೆಗೆ ಶುಭ ಮುಹೂರ್ತವನ್ನು ಇಟ್ಟುಕೊಳ್ಳುತ್ತಾರೆ. ತಮಗೆ ನಂಬಿಕೆಯಿರುವ ಪುರೋಹಿತರ ಬಳಿ ಎರಡು ಕಡೆಯವರು ವರನ ಹಾಗೂ ಕನ್ಯೆಯ ಹಿರಿಯರು ಹೋಗಿ

ವಧುವರರ ಜಾತಕವನ್ನು ಪುರೋಹಿತರಿಗೆ ತೋರಿಸಿ ಗ್ರಹಗತಿಗಳನ್ನು ವಿಚಾರಮಾಡಿಕೊಂಡು ಮದುವೆಯ ಶುಭ ಮುಹೂರ್ತವನ್ನು ತಿಳಿದುಕೊಂಡು ಬರುತ್ತಾರೆ. ಪುರೋಹಿತರು ತಿಳಿಸಿದ ಶುಭ ಮುಹೂರ್ತಕ್ಕೆ ಸರಿಯಾಗಿ ಲಗ್ನ ಮಾಡಲು ಸಕಲ ಸಿದ್ಧತೆಗಳನ್ನು ಎರಡು ಕಡೆಯವರು ಮಾಡಿಕೊಳ್ಳುತ್ತಾರೆ. ಅಂದರೆ ಮದುವೆಗೆ ಬೇಕಾದ ಬಟ್ಟೆಬರಿಗಳು, ಆಹಾರ ಸಮಾಗ್ರಿ, ಆಭರಣಗಳು, ಮದುವೆಯ ಪುರೋಹಿತ್ಯಕ್ಕಾಗಿ ಪುರೋಹಿತರು, ಲಗ್ನ ಪತ್ರಿಕೆಗಳು, ಮೇಳದವರು, ಮಡಿವಾಳರು, ಕುಂಬಾರರು ಹಾಗೂ ಮಾದಿಗರು ಇವರೆಲ್ಲರಿಗೂ ಲಗ್ನದ ದಿವಸವನ್ನು ಹೇಳಿ ಅವರಿಗೆ ಕೊಡಬೇಕಾದ ಚಾಜವನ್ನು (ಚಾಜ ಅಂದರೆ ಎಲೆ ಅಡಕಿ, ಉತ್ತತ್ತಿ, ದಕ್ಷಿಣೆಯನ್ನು ಕೂಡಿಸಿ ಕೊಡುವುದು) ಕೊಟ್ಟು ಅವತ್ತಿನ ದಿವಸ ಬಂದು ಕಾರ್ಯಗಳನ್ನು ನಡೆಸಿಕೊಡಲು ತಿಳಿಸುತ್ತಾರೆ. ಅಂದರೆ ಕುಂಬಾರನಿಗೆ ಮದುವೆಗೆ ಬೇಕಾದಂತಹ ಐರಾಣಿಗಳನ್ನು ಕೊಡಲು, ಮಡಿವಾಳರಿಗೆ ಸುರಿಗೆ ಎರೆದ ಮೇಲೆ ಬಿಟ್ಟಂತಹ ಬಟ್ಟೆಗಳನ್ನು ಸೆಳೆದುಕೊಡಲು, ಮಾದಿಗರು ವಧು ವರರಿಗೆ ತಂದಿರುವಂತಹ ಹೊಸ ಪಾದರಕ್ಷೆಗಳನ್ನು ಪೂಜೆ ಮಾಡಲು, ಲಗ್ನದ ಅಕ್ಕಿ ಗಂಟನ್ನು ಪೂಜೆ ಮಾಡಲು ಜ್ಯೋತಿಷಿಗಳನ್ನು ಹಾಗೂ ಮದುವೆಯ ಹಿಂದಿನ ದಿವಸ ಮತ್ತು ಪ್ರಸ್ತುತ ದಿನದಂದು ಪುರೋಹಿತ್ಯಕ್ಕಾಗಿ ಪುರೋಹಿತರನ್ನು ಇವರೆಲ್ಲರಿಗೂ ತಿಳಿಸಿ ಕೆಲಸ ಕಾರ್ಯಗಳನ್ನು ನಡೆಸಿಕೊಡಬೇಕೆಂದು ಹೇಳಿ ಬರುತ್ತಾರೆ.

ಈ ಸಮುದಾಯದಲ್ಲಿ ಲಗ್ನ ಪತ್ರಿಕೆಯನ್ನು ಗಂಡಿನ ಮನೆಯವರು ಅಚ್ಚು ಹಾಕಿಸಿ ಹೆಣ್ಣಿನ ಮನೆಯವರಿಗೆ ಮದುವೆ ಇನ್ನು ಒಂದು ತಿಂಗಳ ಮುಂಚಿತವಾಗಿರುವಾಗಲೇ ಕಳಿಯಿಸಿಕೊಡಬೇಕು. ಅಲ್ಲಿಂದ ಲಗ್ನ ಪತ್ರಿಕೆಗಳನ್ನು ತಮ್ಮ ಬಂಧು ಬಳಗದವರಿಗೆ ಕೊಡಲಿಕ್ಕೆ ಪ್ರಾರಂಭಿಸುತ್ತಾರೆ. ಗಂಡಿನ ಕಡೆಯವರು ಲಗ್ನ ಪತ್ರಿಕೆಗಳನ್ನು ಕಳಿಸುವ ತನಕ ಹೆಣ್ಣಿನ ಮನೆಯವರು ಅಚ್ಚು ಹಾಕಿಸಿದ್ದರು ಕೊಡುವಂತಿಲ್ಲ.

ಮದುವೆಯ ದಿನಗಳನ್ನು ಅಧ್ಯಯನದ ದೃಷ್ಟಿಯಿಂದ ನಾವು ಹೀಗೆ ವಿಂಗಡಿಸಿಕೊಳ್ಳಬಹುದು.

೧. ಮದುವೆಯ ಪೂರ್ವದಿನಗಳ ಆಚರಣೆಗಳು

೨. ಮದುವೆಯ ದಿನದ ಆಚರಣೆಗಳು

೩. ಮದುವೆಯ ನಂತರದ ಆಚರಣೆಗಳು

೧. ಮದುವೆಯ ಪೂರ್ವದಿನಗಳ ಆಚರಣೆಗಳು

ಅ. ಚಪ್ಪರ ಹಾಕುವುದು

ಮದುವೆಯು ಇನ್ನು ಎರಡು ದಿನ ಮುಂಚಿತವಾಗಿರುವಾಗಲೇ ಹೆಣ್ಣು ಮತ್ತು ಗಂಡಿನ ಮನೆಯ ಮುಂದೆ ಹಂದರವನ್ನು ಹಾಕುತ್ತಾರೆ. ಈ ಸಮುದಾಯಗಳಲ್ಲಿ ಮದುವೆಯನ್ನು ಗಂಡಿನ ಮನೆಯ ಮುಂದೆ ಮಾಡುವುದು ಕಂಡು ಬರುತ್ತದೆ. ಆದರೆ ಹಂದರವನ್ನು ಎರಡು ಮನೆಯ ಮುಂದೆಯು ಹಾಕಬೇಕು. ಹಿಂದೆ ಹಂದರಕ್ಕೆ ಹನ್ನೆರಡು ಕಂಬಗಳನ್ನು (ಬಿದಿರಿನ ಗೂಟ) ನೆಟ್ಟು ಮದುವೆ ಹಂದರವನ್ನು ಹಾಕುತ್ತಿದ್ದರು. ಆದರೆ ಪ್ರಸ್ತುತ ಸಂದರ್ಭದಲ್ಲಿ ಹಂದರಕ್ಕೆ ನಾಲ್ಕು ಗೂಟಗಳನ್ನು ಮಾತ್ರ ನೆಟ್ಟು

ಹಂದರವನ್ನು ಹಾಕುತ್ತಾರೆ. ಇದರ ಉದ್ದೇಶ ನಡೆಯುವ ಕಾರ್ಯಗಳೆಲ್ಲವೂ ಈ ಹಸಿರು ಹಂದರಲ್ಲಿಯೇ ನಡೆಯಬೇಕು. ಅವರ ಬಾಳು ಕೂಡ ಹಸಿರು ಆಗಿರುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಈ ಹಂದರವನ್ನು ಹಾಕುತ್ತಾರೆ. ತಮಗೆ ನಂಬಿಕೆಯಿರುವ ಜ್ಯೋತಿಷ್ಯರ ಬಳಿಹೋಗಿ ಹಂದರಕ್ಕೆ ಸಂಬಂಧಿಸಿದ ಆಯ (ವಾಸ್ತು)ವನ್ನು ಹಾಗೂ ಸಮಯವನ್ನು ಕೇಳಿಕೊಂಡು ಬಂದು ಅದರ ಪ್ರಕಾರವಾಗಿಯೇ ಹಂದರವನ್ನು ಹಾಕಲಾಗುತ್ತದೆ.

ಹಂದರ ಹಾಕುವ ದಿನದಂದು ತಮ್ಮ ಊರುಗಳಲ್ಲಿರುವ ಸಮುದಾಯದ ಎಲ್ಲಾ ಮನೆಗಳಿಗೆ ಮದುವೆ ಮನೆಯ ಯಜಮಾನ ಇಲ್ಲವೆ ಆತನ ಮಕ್ಕಳು ಇವರಲ್ಲಿ ಯಾರಾದರೂಬ್ಬರು ಹೋಗಿ ಸಮುದಾಯದ ಮನೆಯ ಹಿರಿಯರೆಲ್ಲರನ್ನು ಹಂದರ ಹಾಕುವುದಕ್ಕೆ ಕರೆದುಕೊಂಡುಬರುತ್ತಾರೆ. ಈ ಹಂದರ ಶಾಸ್ತ್ರಕ್ಕೆ ಎಲ್ಲರೂ ತಪ್ಪದೆ ಹಾಜರಿರಬೇಕು ಹಾಗೂ ಇವರ ಸಲಹೆಯ ಮೇರೆಗೆಯೆ ಹಂದರವನ್ನು ಹಾಕಲಾಗುತ್ತದೆ. ಹಂದರ ಆಯಕ್ಕೆ ಸಂಬಂಧಿಸಿದಂತೆ ಹಿರಿಯರು ತಮ್ಮ ಕೈಯ ಮೊಳದಿಂದ ಉದ್ದ ಮತ್ತು ಅಗಲವನ್ನು ಅಳತೆ ಮಾಡಿ ಈಶಾನ್ಯ ದಿಕ್ಕಿಗೆ ಮೊದಲ ಹಂದರಗೂಟ ನೆಡುತ್ತಾರೆ. ನಂತರ ಇನ್ನು ಮೂರು ಗೂಟಗಳನ್ನು ನೆಟ್ಟು ಹಂದರವನ್ನು ಹಾಕುತ್ತಾರೆ. ಈ ಹಂದರಕ್ಕೆ ಹಸಿ ತೆಂಗಿನ ಗರಿ ಅಥವಾ ಹರಿವಿ ಸೊಪ್ಪನ್ನು ಹಂದರದ ಮೇಲ್ಭಾವಣಿಗೆ ಹಾಕಲಾಗುತ್ತದೆ. ನಂತರ ಹಂದರದ ಮಧ್ಯದಲ್ಲಿ ಅಂತರ ಕಾಯಿಯನ್ನು ಕಟ್ಟಲಾಗುತ್ತದೆ. ಈ ಕಾಯಿಯನ್ನು ತೆಂಗಿನ ಮರದಿಂದ ನೇರವಾಗಿ ಅರಿದುಕೊಂಡು ಬಂದಿರಬೇಕು ಹಾಗೂ ಆ ಕಾಯಿಯನ್ನು ನೆಲಕ್ಕೆ ಸ್ಪರ್ಶಿಸುವಂತಿಲ್ಲ. ಹಂದರದ ಸುತ್ತಲೂ ಮಾವಿನ ತೋರಣವನ್ನು ಕಟ್ಟಲಾಗುತ್ತದೆ. ಇದಾದ ನಂತರ ಹೆಣ್ಣುಮಕ್ಕಳು ಕಳಶವನ್ನು ತೆಗೆದುಕೊಂಡು ಹಂದರಕ್ಕೆ ಬರುತ್ತಾರೆ ಹಂದರದಲ್ಲಿ ಈಶಾನ್ಯ ದಿಕ್ಕಿನಲ್ಲಿರುವ ಕಂಬಕ್ಕೆ ಕುರುಬನ ಕೈಯಲ್ಲಿ ಶಾಸ್ತ್ರೋಕ್ತವಾಗಿ ಪೂಜೆ ಮಾಡಿಸುತ್ತಾರೆ. ಅಂದರೆ ಕಂಬಗಳಿಗೆ ಹಾಲು, ತುಪ್ಪ, ಪಂಚಲೋಹಗಳೆನ್ನಲ್ಲ ಹಾಕಿಸುತ್ತಾರೆ. ಅಲ್ಲಿ ನೆರದಿರುವರಿಗೆ ಹಾಗೂ ಹಂದರಗೂಟಕ್ಕೆ ಕಂಕಣವನ್ನು ಕಟ್ಟುತ್ತಾರೆ. ನಾಲ್ಕು ಕಂಬಗಳಿಗೆ ಸುಣ್ಣ ಹಾಗೂ ಕೆಮ್ಮಣ್ಣಿನಿಂದ ಮೂರು ಪಟ್ಟಿಯಲ್ಲಿ ಬಳಿಯುತ್ತಾರೆ. ನಂತರ ಎಲ್ಲರೂ ಹಂದರದ ಕಂಬಗಳಿಗೆ ಕಳಶವನ್ನು ಬೆಳಗುತ್ತಾರೆ. ಈ ಹಂದರದ ಮಧ್ಯದಲ್ಲಿ ಸಣ್ಣಗೆ ದೀಪವನ್ನು ಹಚ್ಚಿ ಕಂದಿಲನ್ನು ತೂಗು ಹಾಕುವರು. ಬಂದಿರುವ ಸಮುದಾಯದ ಎಲ್ಲರಿಗೂ ಮಂಡಾಳು, ಕಾರ, ಟೀ, ವ್ಯವಸ್ಥೆ ಮಾಡಿರುತ್ತಾರೆ.

ಆ. ಕ್ಷೌರಶಾಸ್ತ್ರ

ಮದುವೆಯ ಸಂದರ್ಭದಲ್ಲಿ ಮದುಮಗನ ಜೊತೆಗೆ ಮನೆಯವರೆಲ್ಲರೂ ಕ್ಷೌರಮಾಡಿಸಿಕೊಳ್ಳುವ ಸಂಪ್ರದಾಯವನ್ನು ಬೆಳಸಿಕೊಂಡು ಬಂದಿದ್ದಾರೆ. ಈ ಕ್ಷೌರಶಾಸ್ತ್ರಕ್ಕೆ ಸಂಬಂಧಿಸಿದಂತೆ ಅವರ ಮನೆಯ ಹಡಪದವರನ್ನೇ ಕರೆಯಿಸಿ ಕ್ಷೌರ ಮಾಡಿಸಿಕೊಳ್ಳಬೇಕು. ಅಂದರೆ ತಾತ ಮುತ್ತಾತನ ಕಾಲದಿಂದಲೂ ಅವರೇ ಈ ಮನೆಯವರಿಗೆ ಕ್ಷೌರ ಮಾಡುತ್ತ ಬಂದಿರುತ್ತಾರೆ. ಈ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಮದುವೆಯ ಮನೆಯವರು ಬೆಲ್ಲ, ಗೋಧಿಹಿಟ್ಟು, ಕಡ್ಲಿಬೆಳೆ, ಕೊಬ್ಬರಿ, ಅಕ್ಕಿ, ಗೋಧಿ, ಜೋಳ, ಬಟ್ಟೆ ಇವುಗಳೆಲ್ಲವನ್ನು ಒಂದು ಹೊಸ ಮೊರದಲ್ಲಿ ಇಟ್ಟು ಅದರ ಜೊತೆಗೆ ದಕ್ಷಿಣೆಯನ್ನು ಕೊಡುತ್ತಾರೆ.

ನಂತರ ಕ್ಷೌರಿಕ ತನ್ನ ವೃತ್ತಿ ಉಪಕರಣಗಳನ್ನು ಪೂಜೆ ಮಾಡಿ ಮದುಮಗನಿಗೆ ಹಾಗೂ ಮನೆಯವರಿಗೆ ಕ್ಷೌರವನ್ನು ಮಾಡುತ್ತಾನೆ.

ಇ. ಬಳೆಶಾಸ್ತ್ರ

ಹಂದರ ಹಾಕಿದ ದಿನದ ಸಾಯಂಕಾಲ ಮದುವೆಯ ಮನೆಗೆ ಬಳೆಗಾರನನ್ನು ಕರೆದುಕೊಂಡು ಬರುತ್ತಾರೆ. ಮೊದಲು ಬಳೆಯ ಪುಟ್ಟಿಯನ್ನು ವಧುವಿನ ಮೂಲಕ ಚಾಜಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಇಟ್ಟು ಪೂಜೆ ಮಾಡಿಸುತ್ತಾರೆ. ಪೂಜೆ ಮಾಡಿದ ಮೇಲೆ ವಧುವಿನ ಕೈಗೆ ಹಸಿರು ಬಳೆಗಳನ್ನು ತೊಡಿಸುತ್ತಾರೆ. ವಧುವಿನ ಎರಡು ಕೈಗಳಿಗೆ ಹನ್ನೆರಡು ಇಲ್ಲವೆ ಒಂಭತ್ತು ಬಳೆಗಳನ್ನು ತೊಡಿಸಲಾಗುತ್ತದೆ. ವಧುವಿಗೆ ಬಳೆತೊಡಿಸಿದ ನಂತರ ನೆರೆದಿರುವ ಮನೆಯ ಅಕ್ಕ ಪಕ್ಕದ ಮುತ್ತೈದೆಯರು, ಸಮುದಾಯದ ಮುತ್ತೈದೆಯರು ಹಾಗೂ ಪ್ರೌಢ ವ್ಯವಸ್ಥೆಯಲ್ಲಿರುವ ಹೆಣ್ಣು ಮಕ್ಕಳಿಗೂ ಹಸಿರು ಬಳೆಯನ್ನು ತೊಡಿಸುತ್ತಾರೆ. ಯಾವುದೇ ಕಾರಣಕ್ಕೂ ವಧು ಕೈಯಲ್ಲಿ ಹಾಕಿಕೊಂಡಿರುವ ಬಳೆಗಳನ್ನು ಒಡೆದುಕೊಳ್ಳುವಂತಿಲ್ಲ. ಒಡೆದರೆ ಅಪಶಕುನವೆಂದು ತಿಳಿದುಕೊಂಡು ಅದಕ್ಕೆ ಶಾಂತಿ ಮಾಡಿಸುತ್ತಾರೆ. ಹಾಗೂ ಈ ವಿಷಯವನ್ನು ಅವರಲ್ಲಿಯೇ ಮುಚ್ಚಿಟ್ಟುಕೊಳ್ಳುವರು. ಈ ಶಾಸ್ತ್ರವನ್ನು ಹೆಣ್ಣಿನ ಮತ್ತು ಗಂಡಿನ ಮನೆಯ ಇಬ್ಬರು ಕೂಡ ಈ ಶಾಸ್ತ್ರವನ್ನು ಮಾಡುತ್ತಾರೆ.

ಪಾಂಚಾಳ ಸಮುದಾಯದಲ್ಲಿ ಶ್ಯಾವಿಗೆ ಮಣೆ, ಬೀಸುವಕಲ್ಲು ಹಾಗೂ ಒಳಕಲ್ಲು ಶಾಸ್ತ್ರವನ್ನು ಮಾಡುತ್ತಾರೆ. ಸಮುದಾಯದ ಮುತ್ತೈದೆಯರು ಸೇರಿ ಬಳೆಶಾಸ್ತ್ರ ಮುಗಿದ ನಂತರ ಈ ಶಾಸ್ತ್ರವನ್ನು ಕೈಗೊಳ್ಳುವರು. ಬೀಸುವಕಲ್ಲು, ಶ್ಯಾವಿಗೆ ಮಣೆ, ಒಳಕಲ್ಲು ಮತ್ತು ಒಣಕೆಗೆ ಸುಣ್ಣ ಹಾಗೂ ಕೆಮ್ಮಣ್ಣನ್ನು ಮೂರು ಬಳ್ಳಿಗೆ ಹಚ್ಚಿಕೊಂಡು ಬಳಿಯುತ್ತಾರೆ. ಒಣಕೆಗೆ ಹಾಗೂ ಬೀಸುವ ಕಲ್ಲಿನ ಗೂಟಕ್ಕೆ ಕಂಕಣವನ್ನು ಕಟ್ಟಿ ಪೂಜೆ ಮಾಡಿ ಮುತ್ತೈದೆಯರೆಲ್ಲರೂ ಉಡಿ ತುಂಬಿಕೊಂಡು ಕಳಶವನ್ನು ಬೆಳಗುವರು. ನಂತರ ಶ್ಯಾವಿಗೆ ಮಣೆಯ ಮೇಲೆ ಕುಳಿತುಕೊಂಡು ಶ್ಯಾವಿಗೆ ಹೊಸೆಯುತ್ತಾರೆ. ಆ ಸಂದರ್ಭದಲ್ಲಿ ಶ್ಯಾವಿಗೆ ಎಳೆಯು ಚೆನ್ನಾಗಿ ಬಂದರೆ ಶುಭ ಸಂಕೇತವೆಂದು ಭಾವಿಸುತ್ತಾರೆ. ನಂತರ ಒಳಕಲ್ಲು ಹಾಗೂ ಬೀಸುವ ಕಲ್ಲಿನ ಹತ್ತಿರ ಬಂದು ದೇವರ ಹೆಸರಿನಲ್ಲಿ ಮುತ್ತೈದೆಯರು ಕುಟ್ಟಲು ಬೀಸಲು ಪ್ರಾರಂಭಿಸುವರು. ಈ ಆಚರಣೆಗಳೇ ಶ್ಯಾವಿಗೆ ಮಣೆ, ಬೀಸುವ ಕಲ್ಲು ಹಾಗೂ ಒಳಕಲ್ಲು ಶಾಸ್ತ್ರದ ಪೂಜೆಗಳಾಗಿವೆ.

ಈ. ಲಗ್ನದ ಅಕ್ಕಿಶಾಸ್ತ್ರ

ಈ ಸಮುದಾಯದಲ್ಲಿ ಲಗ್ನದ ಅಕ್ಕಿಗಂಟು ಕಟ್ಟುವ ಶಾಸ್ತ್ರ ರೂಢಿಯಲ್ಲಿದೆ. ಈ ಶಾಸ್ತ್ರವನ್ನು ಮದುವೆ ಇನ್ನೆರಡು ದಿನ ಮುಂಚಿತವಾಗಿರುವಾಗಲೇ ಈ ಕಾರ್ಯವನ್ನು ಮಾಡಿ ನೆರವೇರಿಸುತ್ತಾರೆ. ಲಗ್ನದ ಅಕ್ಕಿಗಂಟನ್ನು ಪರಸ್ಪರ ಗಂಡಿನ ಮತ್ತು ಹೆಣ್ಣಿನ ಮನೆಯವರು ವಿನಿಮಯ ಮಾಡಿಕೊಳ್ಳುತ್ತಾರೆ. ಈ ಲಗ್ನದ ಅಕ್ಕಿಯ ಗಂಟಿನಲ್ಲಿ ಐದು ಶೇರು ಅಕ್ಕಿ, ಐದು ಒಣಕೊಬ್ಬರಿ ಬಟ್ಟಲು, ಐದು ಉತ್ತತ್ತಿ, ಐದು ಅರಿಶಿಣಕೊಂಬು, ಐದು ಕೇರುಬೀಜ, ಐದು ಚೋಲಿಪೀಸು, ಐದು ತೆಂಗಿನ ಕಾಯಿ, ಐದು ನಿಂಬೇಹಣ್ಣು, ಎಲೆ ಅಡಕಿ, ಬೆಟ್ಟ ಅಡಕಿ ಹಾಗೂ ಇದರ ಜೊತೆಗೆ ಒಂದು ಪತ್ರವನ್ನು ಬರೆದು ಹೊಸ ಬಿಳಿಬಟ್ಟೆಯಲ್ಲಿ

ಈ ಮೇಲಿನ ಎಲ್ಲವುಗಳನ್ನು ಹಾಕಿ ಗಂಟುಕಟ್ಟಿ ಕಳುಹಿಸಿಕೊಡುತ್ತಾರೆ. ಈ ಪತ್ರದಲ್ಲಿ ವಧುವರರಿಗೆ ಇಂತಹ ಹೆಸರುಳ್ಳವರು ಅರಿಶಿಣವನ್ನು ಮೊದಲು ಹಚ್ಚಿದರೆ ಸುಖ, ಸಂತೋಷ ದೊರೆಯುತ್ತದೆ ಎಂಬ ನಂಬಿಕೆ. ಈ ಗಂಟನ್ನು ಪೂಜೆ ಮಾಡಿ ವಧುವಿನ ಸಂಬಂಧಿಕರ ಕೈಯಲ್ಲಿ ವರನ ಊರಿಗೆ ಹಾಗೂ ವರನ ಸಂಬಂಧಿಕರ ಕೈಯಲ್ಲಿ ವದುವಿನ ಊರಿಗೆ ಕೊಟ್ಟು ಕಳಿಯಿಸುತ್ತಾರೆ. ಹೀಗೆ ಪಾಂಚಾಳ ಸಮುದಾಯದಲ್ಲಿ ಲಗ್ನದ ಅಕ್ಕಿಯ ಗಂಟು ಪರಸ್ಪರ ವರ್ಗಾವಣೆ ಮಾಡಿಕೊಳ್ಳಲಾಗುತ್ತದೆ.

ಉ. ದೇವರಿಗೆ ಮಾಡುವುದು ಹಾಗೂ ದೈವದ ಊಟ

ಈ ಸಮುದಾಯದಲ್ಲಿ ಮದುವೆಯ ಮುನ್ನ ಅಂದರೆ ಮದುವೆಯು ಇನ್ನು ಎರಡು ದಿನ ಇರುವಾಗಲೇ ಎರಡು ಮನೆಯವರು ದೇವರಿಗೆ ಮಾಡುವುದು ಹಾಗೂ ದೈವದ ಊಟವನ್ನು ಈ ಎರಡು ಕಾರ್ಯಗಳನ್ನು ಒಟ್ಟಿಗೆ ಮಾಡುವರು. ಈ ಶಾಸ್ತ್ರವನ್ನು ಇವರು ಕಡ್ಡಾಯವಾಗಿ ಮಾಡಲೇಬೇಕು. ಮಾಡದೇ ಇದ್ದಾರೆ ಮದುವೆಯ ಕಾರ್ಯಗಳಿಗೆ ಆ ಊರಿನ ಪಾಂಚಾಳ ಸಮುದಾಯದವರು ಯಾರು ಕೂಡ ಭಾಗವಹಿಸುವುದಿಲ್ಲ. ಈ ಶಾಸ್ತ್ರದ ದಿನದ ಮುಂಜಾನೆ ಅಥವಾ ರಾತ್ರಿ ಅವರ ಮನೆಯ ದೇವರನ್ನು ಶಾಸ್ತ್ರೋಕ್ತವಾಗಿ ಮೊದಲು ವರನ ಕಡೆಯಿಂದ ಪೂಜೆ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಮನೆಯ ದೇವರ ಪೂಜಾರಿಗಳು ಅಥವಾ ದೇವರನ್ನು ಹೊತ್ತಿರುವವರನ್ನು ಕರೆಯಿಸುತ್ತಾರೆ. ಇವರ ಮುಖಾಂತರವೇ ವರನ ಕಡೆಯಿಂದ ಮನೆಯ ದೇವರಿಗೆ ಪೂಜೆ ನಡೆಯುತ್ತದೆ. ಪೂಜೆಯ ಸಂದರ್ಭದಲ್ಲಿ ಅಲ್ಲಿ ನೆರೆದಿರುವ ಸಮುದಾಯದ ಬಂಧು ಬಳಗದವರೆಲ್ಲರಿಗೂ ಕಂಕಣವನ್ನು ಕಟ್ಟಲಾಗುತ್ತದೆ. ಇದಾದ ಮೇಲೆ ಪೂಜೆ ನಡೆಯುತ್ತದೆ. ಪೂಜೆಯ ನಂತರ ದೈವಕ್ಕೆ ಊಟವನ್ನು ಹಾಕುತ್ತಾರೆ. ಈ ದೈವದ ಊಟದ ಸಂದರ್ಭದಲ್ಲಿ ಆ ಊರಿನಲ್ಲಿರುವ ಪಾಂಚಾಳ ಸಮುದಾಯಗಳ ಮನೆಯವರು ದೈವದ ಊಟದಿಂದ ಹಿಡಿದು ಮದುವೆ ಮುಗಿಯುವವರೆಗೂ ಮದುವೆಯ ಮನೆಯಲ್ಲಿಯೇ ಊಟವನ್ನು ಮಾಡಬೇಕು ಅವರ ಮನೆಗಳಲ್ಲಿ ಅಡುಗೆಯನ್ನು ಮಾಡುವಂತಿಲ್ಲ.

ದೈವದ ಊಟದ ದಿವಸ ಸಮುದಾಯದವರ ಮನೆಗಳಿಗೆ ಮದುವೆ ಮನೆಯ ಹೆಣ್ಣು ಮಕ್ಕಳು ಅಕ್ಷತೆ ಮತ್ತು ಕುಂಕುಮವನ್ನು ತೆಗೆದುಕೊಂಡು ಹೋಗಿರುತ್ತಾರೆ. ಅವರ ಮನೆಯ ದ್ವಾರಬಾಗಿಲಿಗೆ ಅಕ್ಷತೆ ಕಾಳುಗಳನ್ನು ಇಟ್ಟು ಆ ಮನೆಯ ಹೆಣ್ಣುಮಕ್ಕಳಿಗೆ ಕುಂಕುಮ ಅರಿಶಿಣವನ್ನು ಹಚ್ಚುತ್ತಾರೆ. ನಂತರ ನಿಮ್ಮ ಮನೆಯವರೆಲ್ಲರೂ ಮದುವೆ ಕಾರ್ಯ ಮುಗಿಯುವವರೆಗೂ ನಮ್ಮ ಮನೆಯಲ್ಲಿಯೇ ಇರಬೇಕು ಹಾಗೂ ನಿಮ್ಮ ಮನೆಗಳಲ್ಲಿ ಅಡುಗೆ ಮಾಡಬಾರದು ಎಂದು ಹೇಳಿ ಬರುತ್ತಾರೆ. ಅವರು ಕೂಡ ಇವರು ಹೇಳಿದಂತೆಯೇ ನಡೆದುಕೊಳ್ಳುತ್ತಾರೆ. ಈ ದೈವದ ಊಟದ ಸಂದರ್ಭದಲ್ಲಿ ಸಮುದಾಯದ ಯಾರದರೊಬ್ಬರನ್ನು ಕರೆಯುವುದು ಬಿಟ್ಟರೆ ಇನ್ನುಳಿದವರೆಲ್ಲರು ಆ ವ್ಯಕ್ತಿಯನ್ನು ಕರೆದುಕೊಂಡು ಬರುವ ತನಕ ದೈವದ ಊಟವನ್ನು ಯಾರು ಮುಟ್ಟುವಂತಿಲ್ಲ. ಈ ಸಂದರ್ಭದಲ್ಲಿ ಏನೇ ದ್ವೇಷ, ಅಸೂಯೆ, ಕೆಲಸಗಳಿದ್ದರೂ ದೈವದ ಮಾತಿಗೆ ಒಪ್ಪಿ ಬರಬೇಕು. ಹಾಗೂ ಮದುವೆಯ ಮನೆಯ ಹಿರಿಯರು ಹೋಗಿ ಕರೆದುಕೊಂಡು ಬರಲೇಬೇಕು. ಊಟವನ್ನು ಮಾಡುವ ಸಂದರ್ಭದಲ್ಲಿ ದೈವದ ಕಾಣಿಕೆಯನ್ನು ಕೊಡಬೇಕೆಂದು

ಸಮುದಾಯದ ಮುಖಂಡರು ಕೇಳುತ್ತಾರೆ. ಆ ಸಮುದಯದಲ್ಲಿ ಮಗಳ ಮದುವೆ ನಡೆಯುತ್ತಿದ್ದಾರೆ ಎಪ್ಪತ್ತು ರೂಪಾಯಿ ಕಾಣಿಕೆಯನ್ನು, ಮಗನ ಮದುವೆ ನಡೆಯುತ್ತಿದ್ದಾರೆ ನೂರ ಇಪ್ಪತ್ತೈದು ರೂಪಾಯಿ ಕಾಣಿಕೆಯನ್ನು ಕೊಡಬೇಕು. ಕೊಟ್ಟ ನಂತರವೇ ಮತ್ತೊಂದು ಸಲ ಎಲ್ಲಾರೂ ಊಟಕ್ಕೆ ಬಂದರೇನಪ್ಪ ಅಂತ ಕೇಳುತ್ತಾರೆ. ಪಂತಿಯಲ್ಲಿ ಕುಳಿತಿರುವ ಯಾರಾದರೂ ಒಬ್ಬರು ಎಲ್ಲಾರೂ ಬಂದಿದ್ದಾರೆ ಅಂತ ಹೇಳುತ್ತಾರೆ. ಅವಾಗ ಮದುವೆ ಮನೆಯ ಹಿರಿಯ ಯಜಮಾನ ಊಟದ ಪಂತಿಯಲ್ಲಿ ಕುಳಿತಿರುವ ದೈವಕ್ಕೆ ಪೂಜೆ ಮಾಡಿ ಕೈ ಮುಗಿದು ದೈವದವರ ಊಟ ಸಾಗಲಿ ಎಂದು ವಿನಂತಿಸಿಕೊಳ್ಳುತ್ತಾನೆ. ದೈವದ (ಪುರುಷರ) ಊಟ ಮುಗಿದ ನಂತರ ಸಮುದಾಯದ ಮಹಿಳೆಯರನ್ನು ಕರೆದುಕೊಂಡು ಬಂದು ಊಟಕ್ಕೆ ಹಾಕುತ್ತಾರೆ. ಹೀಗೆ ಪಾಂಚಾಳ ಸಮುದಾಯದಲ್ಲಿ ದೇವರಿಗೆ ಮಾಡುವುದು ಹಾಗೂ ದೈವದ ಊಟದ ಆಚರಣೆಗಳು ನಡೆಯುತ್ತವೆ.

ಉ. ಲಗ್ನ ಪತ್ರಿಕೆ ಹಂಚುವ ಕಾರ್ಯ

ಮದುವೆಯ ಹಿಂದಿನ ದಿವಸ ಆ ಊರಿನ ಇತರ ಸಮುದಾಯದವರಿಗೆಲ್ಲಾ ಲಗ್ನ ಪತ್ರಿಕೆಯನ್ನು ಕೊಟ್ಟು ನಾಳೆ ನಡೆಯಲಿರುವ ಮದುವೆಗೆ ತಾವು ಬರಬೇಕೆಂದು ಹೇಳಿ ಬರುತ್ತಾರೆ. ಇದರ ಉದ್ದೇಶ ಪಾಂಚಾಳರು ಇತರ ಸಮಾಜದವರೊಂದಿಗೆ ತಮ್ಮ ನಿಕಟ ಪೂರ್ವ ಸಂಬಂಧವನ್ನು ಹೊಂದಿರುತ್ತಾರೆ. ಇದರಿಂದ ಈ ಸಮುದಾಯಗಳ ಪ್ರೋತ್ಸಾಹ, ಸಹಕಾರ, ಆರ್ಥಿಕತೆಯ ಸೌಲಭ್ಯ ಪಾಂಚಾಳರಿಗೆ ಸದಾ ಇದ್ದೆ ಇರುತ್ತದೆ.

ಊ. ಮದುಮಕ್ಕಳ ಶಾಸ್ತ್ರ

ಪಾಂಚಾಳ ಸಮುದಾಯದಲ್ಲಿ ಈ ಶಾಸ್ತ್ರವನ್ನು ಮದುವೆಯ ಹಿಂದಿನ ದಿವಸ ಮಾಡಲಾಗುತ್ತದೆ. ಮದುಮಕ್ಕಳ ಶಾಸ್ತ್ರ ಎಂದರೆ ವಧು-ವರರಿಗೆ ಅರಿಶಿಣ ಹಚ್ಚಿ, ಕೋರೂಟಕ್ಕೆ ಸಿದ್ಧತೆ ಮಾಡುವುದನ್ನು ಮದುಮಕ್ಕಳ ಶಾಸ್ತ್ರ ಎಂದು ಕರೆಯಲಾಗುತ್ತದೆ. ಕೋರೂಟ ಎಂದರೆ ವಧುವರರನ್ನು ಅವರ ಊರಲ್ಲಿ ಕುರುಬರ ಮನೆಯಲ್ಲಿ ಈ ಶಾಸ್ತ್ರ ಮಾಡುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಮದುಮಕ್ಕಳನ್ನು ಮಾಡುವ ಸಂದರ್ಭದಲ್ಲಿ ವಧು ಅಥವಾ ವರನ ಮನೆಯಿಂದ ವಾದ್ಯಗಳೊಂದಿಗೆ ಸಮುದಾಯದವರೆಲ್ಲ ಸೇರಿ ಕಂಬಳಿ, ಅರಿಶಿಣ, ಔಷ್ಲ ಎಣ್ಣೆ, ಎಲೆ ಅಡಕಿ, ನಿಂಬೆಹಣ್ಣು, ಅಕ್ಕಿ, ಸೇರು, ಕಳಶ ಹಾಗೂ ಜೋಳ ಇವುಗಳನ್ನೆಲ್ಲ ತೆಗೆದುಕೊಂಡು ಮೊದಲೇ ಸೂಚಿಸಿರುವ ಕುರುಬರ ಮನೆಗೆ ಮದುಮಗ ಅಥವಾ ಮದುಮಗಳೊಂದಿಗೆ ಮುತ್ತೈದೆಯರೆಲ್ಲರೂ ಸೇರಿ ಆ ಮನೆಗೆ ಹೋಗುತ್ತಾರೆ. ಮದುಮಗನನ್ನು ಕಂಬಳಿಯ ಮೇಲೆ ಕುಳ್ಳಿರಿಸಿ ಮುತ್ತೈದೆಯರೆಲ್ಲರೂ ಪೂಜೆ ಮಾಡಿ ಕಳಶವನ್ನು ಬೆಳಗುವರು. ನಂತರ ಮೊದಲೇ ಸೂಚಿಸಿದಂತೆ ಅಂದರೆ ಲಗ್ನದಕ್ಕಿಯ ಗಂಟಿನಲ್ಲಿ ಒಂದು ಚಿಕ್ಕ ಹಾಳೆಯ ಮೇಲೆ ಮದುಮಗನ ಹೆಸರಿಗೆ ಹೊಂದಿಕೊಂಡಂತೆ ಅಂದರೆ ಸಾಲಾವಳಿ ಬರುವ ಮುತ್ತೈದೆಯರ ಹೆಸರನ್ನು ಸೂಚಿಸಿರುತ್ತಾರೆ. ಅವರು ಮೊದಲು ತಲೆಗೆ ಎಣ್ಣೆಯನ್ನು ಹಚ್ಚಿ ಅರಿಶಿಣ ಹಚ್ಚುತ್ತಾಳೆ. ನಂತರ ಇನ್ನುಳಿದ ಮುತ್ತೈದೆಯರೆಲ್ಲರೂ ಅರಿಶಿಣವನ್ನು ಹಚ್ಚಲಿಕೆ ಪ್ರಾರಂಭಿಸುವರು. ಮದುಮಗನ ಜೊತೆಗೆಯೇ ಅತ್ತೆಯರು ಅಳಿಯಂದಿರಗೆ,

ಸೊಸೆಯರಿಗೆ, ನೆರೆದಿರುವ ಸಮುದಾಯದವರು ಇವರೆಲ್ಲರೂ ಸೇರಿ ಪರಸ್ಪರ ಒಬ್ಬರಿಗೊಬ್ಬರು ಅರಿಶಿಣ ಹಚ್ಚುತ್ತಾ ಸಂತೋಷದಲ್ಲಿ ಪಾಲ್ಗೊಳ್ಳುವರು. ನಂತರ ಮದುಮಗನನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಮನೆಗೆ ಮದುಮಗನನ್ನು ಕರೆದುಕೊಂಡು ಹೋದ ಮೇಲೆ ಸಮುದಾಯದವರು ಹಾಗೂ ಇತರೇ ಸಮುದಾಯದವರು ಮದುಮಗ ಅಥವಾ ಮದುಮಗಳನ್ನು ಕೋರೂಟಕ್ಕೆ ವಾದ್ಯಗಳೊಂದಿಗೆ ಕರೆದುಕೊಂಡು ಹೋಗುವರು. ಕರೆದವರ ಮನೆಗೆಲ್ಲಾ ಕಳಶದ ಜೊತೆಗೆ ಹೋಗಿ ಅವರ ಮನೆಯಲ್ಲಿ ಕಳಶವನ್ನು ಬೆಳಗಿಸಿಕೊಂಡು ಕೋರೂಟವನ್ನು ತಿಂದು ಬರುತ್ತಾನೆ. ಇದು ಪಾಂಚಾಳ ಸಮುದಾಯದಲ್ಲಿ ನಡೆಯುವ ಮದುಮಕ್ಕಳು ಮಾಡುವ ಶಾಸ್ತ್ರವಾಗಿದೆ.

ಎ. ಬೀಗರನ್ನು ಎದುರುಗೊಳ್ಳುವುದು

ಪಾಂಚಾಳರಲ್ಲಿ ಮನೆಯ ಹಿರಿಯ ಮಗನ ಮದುವೆಯನ್ನು ಮನೆಯ ಮುಂದೆ ಮಾಡಿಕೊಡುತ್ತಾರೆ. ನಾಳೆ ಮದುವೆಯ ದಿನವೆಂದರೆ ಮದುವೆಯ ಹಿಂದಿನ ದಿವಸ ಬೀಗರು ಬರುತ್ತಾರೆ. ಬೀಗರು ಎಂದರೆ ಮದುವೆಯ ಹೆಣ್ಣು ಅಥವಾ ಗಂಡಿನ ಸಂಬಂಧಿಕರು ಅಥವಾ ಬಂಧು ಬಳಗದವರು. ಮದುವೆಯ ಹಿಂದಿನ ದಿನ ಬೀಗರು ಸುಮಾರು ಸಾಯಂಕಾಲ ೫ ರಿಂದ ರಾತ್ರಿ ೭ ಗಂಟೆಯ ಹೊತ್ತಿಗೆ ಬರುತ್ತಾರೆ. ಮುಂಚಿತವಾಗಿಯೇ ಅವರಿಗೆ ಊರಲ್ಲಿರುವ ಸರ್ಕಾರಿ ಶಾಲೆ, ಸಮುದಾಯ ಭವನ ಇಲ್ಲವೆ ಪ್ರತ್ಯೇಕ ಮನೆಯಲ್ಲಿ ತಂಗಲು ಮದುವೆಯ ಮನೆಯವರು ವ್ಯವಸ್ಥೆ ಮಾಡಿರುತ್ತಾರೆ. ಬೀಗರು ಬಂದ ತಕ್ಷಣವೇ ಊರಲ್ಲಿರುವ ಯಾವುದಾದರೂ ಒಂದು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಇರಲು ತಿಳಿಸುತ್ತಾರೆ. ಬಂದಂತಹ ಬೀಗರಿಗೆ ನೀರು, ಮಂಡಾಳು, ಟೀ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ. ಬೀಗರನ್ನು ಎದುರುಗೊಳ್ಳುವುದಕ್ಕೆ ಪಾಂಚಾಳ ಸಮುದಾಯದ ಮನೆಗಳಿಗೆ ಹಾಗೂ ಮನೆಯ ಅಕ್ಕ ಪಕ್ಕವಿರುವ ಇತರೇ ಸಮುದಾಯಗಳ ಮನೆಗೆ ಹೋಗಿ ವೀಳ್ಯದೆಲೆಯನ್ನು ಕೊಟ್ಟು ಬೀಗರನ್ನು ಎದುರುಗೊಳ್ಳುವುದಕ್ಕೆ ಕಳಶವನ್ನು ತೆಗೆದುಕೊಂಡು ಬರಬೇಕು ಎಂದು ತಿಳಿಸುತ್ತಾರೆ. ನಂತರ ವೀಳ್ಯಾದೆಲೆಯನ್ನು ಕೊಟ್ಟು ಬಂದಿರುವ ಮನೆಯವರೆಲ್ಲರೂ ಕಳಶವನ್ನು ಹಿಡಿದುಕೊಂಡು ಬಂದು ಮದುವೆಯ ಮನೆಯ ಹತ್ತಿರ ಎಲ್ಲರು ಬರುತ್ತಾರೆ.

ಈ ಕಾರ್ಯಕ್ಕಾಗಿ ಇಬ್ಬರು ಹುಡುಗರಿಗೆ ಹೆಂಗಸರ ಉಡುಗೆಗಳನ್ನು ಹಾಕಿಸಿ, ಒಬ್ಬ ಹುಡಗನಿಗೆ ಪ್ಯಾಂಟು ಅಂಗಿಯನ್ನು ತೊಡಿಸಿ ಅವರ ಕೊರಳಿಗೆ ಉಳಾಗಡ್ಡಿಸರ, ಬೆಂಡಿನ ಸರ, ಬದನೆಕಾಯಿ ಸರ, ಮಂಡಕ್ಕಿ ಸರಗಳನ್ನು ಮೂವರಿಗೂ ಹಾಕುತ್ತಾರೆ. ಅವರ ಕಣ್ಣುಗಳಿಗೆ ಬೆಂಡಿನ ಚಾಳಸವನ್ನು ಮಾಡಿ ಕಣ್ಣಿಗೆ ಹಾಕಿಕೊಳ್ಳಲಿಕ್ಕೆ ಕೊಡುತ್ತಾರೆ. ಅವರ ಕೈಯಲ್ಲಿ ಛತ್ರಿ, ಸೇರು ಹಾಗೂ ಗೂಟವನ್ನು ಹಿಡಿದುಕೊಳ್ಳಲು ಕೊಟ್ಟಿರುತ್ತಾರೆ. ಈ ಮೂವರನ್ನು ಕರೆದುಕೊಂಡು ಮುತ್ತೈದೆಯರು ಕಳಶದೊಂದಿಗೆ ಮೆರವಣಿಗೆಯ ಮೂಲಕ ಕೇಕೆ ಹಾಕುತ್ತಾ ಸಂತೋಷದಿಂದ ಬೀಗರಿದ್ದ ದೇವಸ್ಥಾನಕ್ಕೆ ಬರುತ್ತಾರೆ. ದೇವಸ್ಥಾನದಲ್ಲಿ ಕಂಬಳಿಯನ್ನು ಹಾಸಿ ಅದರ ಮೇಲೆ ಮೂವರು ಹುಡುಗರನ್ನು ಹಾಗೂ ಮೂರು ಮಂದಿ ಬೀಗರನ್ನು ಎದುರು ಬದರು ಕುಳ್ಳಿರುಸುತ್ತಾರೆ. ಮೊದಲು ಗಂಡಿನ ಕಡೆಯವರು ಹುಡುಗಿಯ

ಕಡೆಯವರನ್ನು ಪೂಜೆ ಮಾಡುತ್ತಾರೆ. ಪೂಜೆ ಮಾಡುವ ಸಂದರ್ಭದಲ್ಲಿ ವಿಭೂತಿ, ಕುಂಕುಮ, ಗಂಧ, ಅರಿಶಿಣ ಇವುಗಳೆಲ್ಲವನ್ನು ಚೇಷ್ಟೆಗಾಗಿ ಮುಖಕ್ಕೆ, ಕೈಗೆ, ಮೈಗೆಲ್ಲಾ ಹಚ್ಚುವರು. ಆ ಮೇಲೆ ಕಳಶವನ್ನು ಬೆಳಗುವರು. ಕಳಶ ಬೆಳಗುವ ಸಂದರ್ಭದಲ್ಲಿ ಕಳಶದ ತಟ್ಟೆ ಹಿಡಿದು ಗಂಡನ್ಹೆಸರೇನು ಎಂದೆಲ್ಲಾ ಕೇಳುವರು. ಆ ಹುಡುಗರಿಗೆ ತಿನ್ನಲು ಏನಾದರೂ ಕೊಡುವಂತೆ ಮಾಡಿ ಅವರಿಗೆ ಕೊಡದೇ ತಾವೇ ತಿನ್ನುವುದು. ಎಲೆ ಅಡಕಿ ಬಹಳ ಕೊಟ್ಟು ತಿನ್ನುವಂತೆ ಬಾಯಲ್ಲಿಡುವುದು. ಅವರು ತಂದ ಅಣಕು ಸಾಮಗ್ರಿಗಳನ್ನು ಹೆಸರಿಸುತ್ತಾ ಅವರಿಗೆ ಕೊಡುಗೆಯಾಗಿ ನೀಡುವರು. (ಚಾಳಿಸು, ತರಕಾರಿ ಸರ, ಚಿಬ್ಬಲಿ, ಕೊಡೆ) ನಂತರ ಬೀಗರನ್ನು ಸಹ ಪೂಜಿಸಿ ಒಬ್ಬೊಬ್ಬರು ಬಂದು ಕಳಶ ಬೆಳಗುತ್ತಾರೆ. ಇಂತಹ ಹಾಸ್ಯ ಪ್ರಸಂಗಗಳು ಅಲ್ಲಿ ನಡೆಯುತ್ತವೆ. "ಹೀಗೆ ಎದುರು ಬದರು ಕುಳಿತವರನ್ನು ಪೂಜೆ ಮಾಡಿದ ಮೇಲೆ ಒಬ್ಬರಿಗೊಬ್ಬರು ಅಪ್ಪಿಕೊಂಡು ಆ ಕಡೆಯವರು ಈ ಕಡೆಗೆ ಈ ಕಡೆಯವರು ಆ ಕಡೆಗೆ ಹೋಗುತ್ತಾರೆ. ಇದನ್ನೇ ಬೀಗರನ್ನು ಎದುರುಗೊಳ್ಳುವ ಪದ್ಧತಿ ಎಂದು ಕರೆಯುತ್ತಾರೆ."[೨] ಇವೆಲ್ಲ ಮುಗಿದ ಮೇಲೆ ಮದುಮಗಳು ಅಥವಾ ಮದುಮಗನನ್ನು ಕೂಡಿಸಿ ಆರತಿ ಬೆಳಗಿ ಮನೆಗೆ ಕರೆದುಕೊಂಡು ಬರುತ್ತಾರೆ. ಮನೆಯ ದ್ವಾರಬಾಗಿಲ ಮುಂದೆ ನಿಲ್ಲಿಸಿ ಕಳಶ ಬೆಳಗಿ ಒಳಗೆ ಕರೆದುಕೊಳ್ಳುತ್ತಾರೆ. ನಂತರ ಬಂದಂತಹ ಬೀಗರಿಗೆಲ್ಲ ಸಿಹಿಭೋಜನವನ್ನು ಉಣಬಡಿಸುತ್ತಾರೆ. ಊಟವಾದ ಮೇಲೆ ಮತ್ತೇ ಬೀಗರನ್ನು ಅವರಿಗೆ ನಿರ್ದಿಷ್ಟ ಪಡಿಸಿದ ಬಿಡದಿ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬರುತ್ತಾರೆ.

೨. ಮದುವೆ ದಿನದ ಆಚರಣೆಗಳು

ಅ. ಎಣ್ಣೆ ಬೀರುವ ಶಾಸ್ತ್ರ

ಮದುವೆ ದಿನದ ಬೆಳಗಿನಜಾವ ಸುಮಾರು ನಾಲ್ಕು ಗಂಟೆ ಸಮಯದಲ್ಲಿ ಮನೆಯವರೆಲ್ಲರೂ ಸ್ನಾನಮಾಡುತ್ತಾರೆ. ಮನೆಯ ಹಿರಿಯ ವ್ಯಕ್ತಿ ಕಳಶವನ್ನು ಹಿಡಿದುಕೊಂಡು ಊರಲ್ಲಿ ಇರುವ ಎಲ್ಲ ದೇವಸ್ಥಾನಗಳಿಗೆ ಹೋಗಿ ಎಣ್ಣೆಯನ್ನು ಹಾಕಿ ದೀಪ ಹಚ್ಚಿ ಪೂಜೆ ಮಾಡಿಕೊಂಡು ಬರುತ್ತಾರೆ. ಇದಕ್ಕೆ ಈ ಸಮುದಾಯದಲ್ಲಿ ಎಣ್ಣೆ ಬೀರುವ ಶಾಸ್ತ್ರ ಎಂದು ಕರೆಯುತ್ತಾರೆ. ಎಣ್ಣೆ ಬೀರುವ ಶಾಸ್ತ್ರ ಮುಗಿದ ನಂತರ ಹಸಿರು ಗಂಬ, ಹಾಲಗಂಬ ನೆಡುವ ಶಾಸ್ತ್ರವನ್ನು ಮಾಡುತ್ತಾರೆ. ಮದುಮಕ್ಕಳ ಸೋದರಮಾವ ಎನಿಸಿಕೊಂಡಿರುವನು ಆಲದ ಮರದಿಂದ ಹಸಿರು ತಪ್ಪಲನ್ನು ಕಿತ್ತುಕೊಂಡು ಬಂದು ದೇವಸ್ಥಾನದಲ್ಲಿ ಇರುತ್ತಾನೆ. ದೇವಸ್ಥಾನದಿಂದ ಆತನನ್ನು ಕರೆದುಕೊಂಡು ಬಂದು ಮನೆಯ ದ್ವಾರಬಾಗಿಲಿನ ಎಡತೋಳಿನ ಬಳಿ ಪೂಜೆ ಮಾಡಿ ನೆಡುತ್ತಾನೆ. ಇದರ ಉದ್ದೇಶವೆಂದರೆ ಮದುವೆಯ ಸಂದರ್ಭದಲ್ಲಿ ಲೋಪದೋಷಗಳು ಉಂಟಾಗುವುದು ಸಹಜ. ಈ ಲೋಪದೋಷಗಳ ನಿವಾರಣೆಯ ಉದ್ದೇಶದಿಂದ ಹಾಗೂ ಮದುಮಕ್ಕಳಿಗೆ ದೃಷ್ಟಿತಾಗಬಾರದೆಂದು ಈ ಗಿಡವನ್ನು ಬಾಗಿಲ ಎಡಗಡೆಗೆ ನೆಡುತ್ತಾರೆ.

ಆ. ಐರಾಣಿ ತರುವುದು

ಮೆರವಣಿಗೆಯ ಮುಖಾಂತರ ಮುತ್ತೈದೆಯರು ಹಾಗೂ ಪುರುಷರು ಉಲಿಪಿಯನ್ನು ತೆಗೆದುಕೊಂಡು ಕುಂಬಾರನ ಮನೆಗೆ ಹೋಗುತ್ತಾರೆ. ಮದುವೆಯ ಕಾರ್ಯಕ್ಕೆ ಬೇಕಾಗುವ ಮಣ್ಣಿನ ಮಡಿಕೆಗಳನ್ನು

ಕುಂಬಾರನ ಕೈಯಿಂದ ಪೂಜೆ ಮಾಡಿಸಿಕೊಂಡು ತರುವುದಕ್ಕೆ ಐರಾಣಿ ತರುವುದು ಎಂದು ಕರೆಯುತ್ತಾರೆ. ಐರಾಣಿಗಳನ್ನು ಸುರಿಗಿ, ತಾಳಿಕಟ್ಟುವ ಸಂದರ್ಭದಲ್ಲಿ ಹಾಗೂ ಗಂಗಮ್ಮನ ಶಾಸ್ತ್ರದಲ್ಲಿ ಉಪಯೋಗಿಸಲಾಗುತ್ತದೆ. ಮನೆಯಿಂದ ಒಯ್ದು ಉಲಿಪಿಯನ್ನು ಕುಂಬಾರನ ಕೈಗೆ ಕೊಟ್ಟು ಐರಾಣಿಯನ್ನು ಪೂಜೆ ಮಾಡಿಸುತ್ತಾರೆ. ಈ ಐದು ಮಡಿಕೆಗಳಿಗೆ ಹಾಗೂ ಅಲ್ಲಿ ನೆರದಿರುವ ಸಮೂಹಕ್ಕೆ ಕಂಕಣವನ್ನು ಕಟ್ಟಿ ಕುಂಬಾರ ಮಡಿಕೆಗಳನ್ನು ಕೊಟ್ಟು ಕಳಿಸುತ್ತಾನೆ. ಐರಾಣಿ ಎಂದರೆ ಐದು ಮಂದಿ ರಾಣಿಯರು ಹೊರುವ ಮಗಿಗಳ ಸಮೂಹಕ್ಕೆ ಐರಾಣಿ ಎಂದು ಕರೆಯಲಾಗುತ್ತದೆ. ಇವುಗಳನ್ನು ಹೋರುವವರಿಗೆ ಐದು ಗಿತ್ತಿಯರು ಎಂದು ಕರೆಯಲಾಗುತ್ತದೆ. ಈ ಐದುಗಿತ್ತಿಯರು ಮದುವೆಯ ಸಮಸ್ತ ಕಾರ್ಯದಲ್ಲಿ ಮುಂಚೂಣಿಯಾಗಿ ಭಾಗವಹಿಸಬೇಕು. ಇವುಗಳನ್ನು ತೆಗೆದುಕೊಂಡು ಬಂದು ಮನೆಯ ದೇವರ ಜಗುಲಿಯ ಪಕ್ಕದಲ್ಲಿ ಇಡುತ್ತಾರೆ. ಕುಂಬಾರನ ಮನೆಯಲ್ಲಿ ಪೂಜೆ ಮಾಡುವ ಸಂದರ್ಭ ಈ ಕೆಳಗಿನ ಸೋಬಾನ ಪದವನ್ನು ಹಾಡಲಾಗುತ್ತದೆ.

ಜಾಣ ಕುಂಬಾರನೆ ಮನೆ ಯಾವ ಕಡಿಗದ
ಕಪ್ಪರದ ತಿಪ್ಪಿ ಎಡ ಬಲ | ಸೋ
ಕಪ್ಪರದ ತಿಪ್ಪಿ ಎಡ ಬಲ ಮಾಡಿಕೊಂಡು
ಜಾಣ ಕುಂಬಾರನ ಮನಿಗ್ಯಾದ | ಸೋ
ಮುಂಜಾನಿ ಕುಂಬಾರಣ್ಣಾ ಮಸುರ ಬಾನುಂಡಾನ
ಹಾರ್ಯಾರಿ ಕೆಸರ ತುಳದಾನ | ಸೋ
ಹಾರಿ ಹಾರಿ ಕೆಸರ ತುಳುದು ತಾ ಮಾಡ್ಯಾನ |
ನಾರ್ಯಾರ ಹೂರುವ ಒಂದ್ರೆ ರಾಣಿ | ಸೋ
ಕಡಗದ ಕೈಯಲ್ಲಿ ಕೊಡವಿ ಕುಂಬಾರವ್ವಾ|
ಕೊಡದ ಮ್ಯಾಲ್ಯನ ಬರದಾಳ | ಸೋ
ಕೂಡದಗೆ ಮ್ಯಾಲ್ಯಾನ ಬರದಾಳ ನಮ್ಮೂರ |
ಬಾಳಿ ಬನದಾಗೊಂಡರಗಿಣಿಯ | ಸೋ

೩. ಅರಿಶಿಣ ಶಾಸ್ತ್ರ

ಅರಿಶಿಣಶಾಸ್ತ್ರವನ್ನು ಮದುವೆಯ ಮುಂಚೆ ಅಂದರೆ ಸುರಿಗಿ ಎರೆಯುವುದಕ್ಕಿಂತ ಮುಂಚಿತವಾಗಿ ಈ ಕಾರ್ಯವನ್ನು ಮುಗಿಸಿ ಸುರಿಗಿ ಎರೆಯುತ್ತಾರೆ. ಅರಿಶಿಣ ಕಾರ್ಯಕ್ಕೆ ಮುತ್ತೈದೆಯರೆಲ್ಲರೂ ಸೇರಿ ವಧು-ವರರ ಜೊತೆಗೆ ವಧುವಿನ ಹಾಗೂ ವರನ ಚಿಕ್ಕಪ್ಪ ಚಿಕ್ಕಮ್ಮಳನ್ನು ಜೊತೆಗೆ ಕೂಡಿಸುತ್ತಾರೆ. ಇವರಿಗೆ ಹೊತ್ಯಾಲಿಕುಳಿತವರು ಎನ್ನುವರು. ಈ ಆರು ಜನರಿಗೆ ಮೊದಲು ತಲೆಗೆ ಎಣ್ಣೆ ಹಾಕಿ ಅರಿಶಿಣವನ್ನು ಹಚ್ಚುವರು. ನಂತರ ಕಳಶವನ್ನು ಬೆಳಗುತ್ತಾರೆ. ಈ ಕಾರ್ಯದಲ್ಲಿ ವಧುವರರ ಇಬ್ಬರ ಬಂಧುಗಳು ಸೇರಿರುತ್ತಾರೆ. ಅರಿಶಿಣ ಹಚ್ಚಿದ ಮೇಲೆ ಸುರಿಗಿ ಎರೆಯಲು ಆರು ಮಂದಿಯನ್ನು ಕರೆದುಕೊಂಡು ಹೋಗುತ್ತಾರೆ.

ಈ. ಸುರಿಗಿ ನೀರು ಹಾಕುವುದು

ಪ್ರತಿಯೊಂದು ಸಮುದಾಯಗಳಲ್ಲಿ ಒಂದಿಲ್ಲೊಂದು ಆಚರಣೆಯ ಮುಖಾಂತರ ಈ ಶಾಸ್ತ್ರವನ್ನು ಮಾಡುತ್ತಾರೆ. ಮನೆಯ ಹಂದರದಲ್ಲಿ ನೀರು ತುಂಬಿದ ಚರಿಗೆಗಳನ್ನು ಕ್ರಮವಾಗಿ ನಾಲ್ಕು ದಿಕ್ಕುಗಳಲ್ಲಿ ಹಾಗೂ ಮುಂದೊಂದು ಸಗಣಿಯ ಕುಳ್ಳಿನ ಮೇಲೆ ಇಡುವರು. ಕ್ರಮವಾಗಿ ಇಟ್ಟಂತಹ ಚರಿಗೆಗಳನ್ನು ಒಬ್ಬಬ್ಬರು ಹಿಡಿದುಕೊಂಡು ಕುಳಿತಿರುತ್ತಾರೆ. ಇವರು ತಲೆಗೆ ರುಮಾಲನ್ನು ಸುತ್ತಿಕೊಂಡಿರಬೇಕು. ಸ್ತ್ರೀಯರಾದರೆ ತಲೆಯ ಮೇಲೆ ಸೀರೆಯ ಸೆರಗನ್ನು ಹಾಕಿಕೊಂಡು ಹಿಡಿದುಕೊಂಡಿರಬೇಕು. ಈ ಚರಿಗೆಯಲ್ಲಿ ಗಂಗೆಯಿಂದ ತಂದಿರುವಂತಹ ನೀರನ್ನು ಅದರಲ್ಲಿ ಹಾಕಿರುತ್ತಾರೆ. ಈ ಐದು ಚರಿಗೆಗಳಿಗೆ ಕಂಕಣವನ್ನು ಕಟ್ಟಿ ಮೂಲ ಹಂದರದ ಕಂಬದ ಚರಿಗೆಯಿಂದ ಸುರಿಗಿ ಚರಿಗೆಯನ್ನು ಬಲಕ್ಕೆ ಮಾಡಿಕೊಂಡು ಒಂಭತ್ತು ಸುತ್ತು ದಾರವನ್ನು ಸುತ್ತುತ್ತಾರೆ.

ವಧು-ವರರು ಹಾಗೂ ಅವರ ಚಿಕ್ಕಪ್ಪ ಚಿಕ್ಕಮ್ಮರು ಸುರಿಗೆಯಲ್ಲಿ ಕುಳಿತುಕೊಳ್ಳಲು ಶ್ಯಾವಿಗೆ ಮಣೆಗಳನ್ನು ಹಾಕಲಾಗಿರುತ್ತದೆ. ಸುರಿಗಿಯ ಒಳಕ್ಕೆ ಮೊದಲು ಕಳಶ ಹಿಡಿದುಕೊಂಡ ಮಹಿಳೆ, ವರ ಹಾಗೂ ವರನ ಚಿಕ್ಕಪ್ಪ ಚಿಕ್ಕಮ್ಮ ಸುರಿಗೆಯ ದಾರವನ್ನು ನಮಸ್ಕರಿಸಿ ಒಳಗಡೆಗೆ ಬರುತ್ತಾರೆ. ಅಲ್ಲಿ ಹಾಕಿರುವ ಶ್ಯಾವಿಗೆ ಮಣೆಯ ಮೇಲೆ ಕುಕ್ಕರಗಾಲಿನಲ್ಲಿ ವರನನ್ನು ಮದ್ಯದಲ್ಲಿ ಮಾಡಿಕೊಂಡು ಕುಳಿತುಕೊಳ್ಳುತ್ತಾರೆ. ನಂತರ ಹೆಣ್ಣಿನ ಕಡೆಯವರು ಅದೇ ತೆರನಾಗಿ ಬಂದು ಕುಳಿತುಕೊಳ್ಳುತ್ತಾರೆ. ಅಲ್ಲಿ ನೆರೆದಿರುವ ಮುತ್ತೈದೆಯರೆಲ್ಲರು ಅವರಿಗೆ ಕಳಶವನ್ನು ಬೆಳಗುತ್ತಾರೆ. ಕಳಶದಲ್ಲಿ ನೀರು ಹಾಗೂ ಮೂಗುತಿಯನ್ನು ಇಟ್ಟುಕೊಂಡು ವಧುವರರ ಮೇಲೆ ನೀರನ್ನು ಚುಮುಕಿಸುತ್ತಾರೆ. ಈ ಸಮಯದಲ್ಲಿ ಪಕ್ಕದಲ್ಲಿ ಕುಳಿತಿರುವ ಚಿಕ್ಕಪ್ಪ ಚಿಕ್ಕಮರು ವಧುವರರ ತಲೆಯ ಮೇಲೆ ಕೈಯನ್ನು ಇಡುತ್ತಾರೆ. ನಂತರ ಮೊದಲೇ ಸಂಗ್ರಹಿಸಿ ಇಟ್ಟಿರುವ ನಸುಬೆಚ್ಚಗಿನ ನೀರನ್ನು ಅವರ ಮೈ ಮೇಲೆ ಹಾಕಿ ಎರೆಯುತ್ತಾರೆ.

ವಧುವರರಿಗೆ ಹಾಗೂ ಅವರ ಜೊತೆಗಿರುವವರಿಗೆ ಹೊಸ ಬಟ್ಟೆಯನ್ನು ಉಡಿಸುತ್ತಾರೆ. ಅವರಿಗೆ ಕುಂಕುಮ, ಅರಿಶಿಣ, ಗಂಧವನ್ನು ಹಚ್ಚಿ ಕಳಶ ಬೆಳಗುವರು. ಸುತ್ತಿದ ಸುರಿಗೆಯ ದಾರವನ್ನು ಯಾರಿಗೂ ಸ್ಪರ್ಶಿಸದಂತೆ ಮೇಲಕ್ಕೆತ್ತಿ ಮಡಚುತ್ತಾರೆ. ಮಡಚುವ ಸಂದರ್ಭದಲ್ಲಿ ಯಾರಿಗೂ ಕೂಡ ಬಡಿಸುವುದಿಲ್ಲ. ನಂತರ ಕಳಶದೊಂದಿಗೆ ಮದುಮಕ್ಕಳನ್ನು ದೇವರ ಕೋಣೆಗೆ ಕರೆದುಕೊಂಡು ಹೋಗುವರು. ಸುರಿಗೆ ಎರೆಯುವ ಸಂದರ್ಭದಲ್ಲಿ ಬೇರೆ ಸಮುದಾಯದವರನ್ನು, ವಿಧವೆಯರನ್ನು, ದೇಹದ ಅಂಗ ಊನವಾದವರನ್ನು ಸುರಿಗೆಯನ್ನು ಮುಟ್ಟುವುದಕ್ಕೆ ಬಿಡುವುದಿಲ್ಲ. ಅಪಶಕುನ ಪ್ರಾಣಿಗಳಾದ ನಾಯಿ, ಬೆಕ್ಕು, ಕಾಗೆ ಇಂತಹ ಪ್ರಾಣಿ ಪಕ್ಷಿಗಳನ್ನು ಕಾಯುವರು.

ಉ. ಕಾಶೀಯಾತ್ರೆ

ಸುರಿಗಿ ಎರೆದ ಮೇಲೆ ಅವರು ಕಾಶೀಯಾತ್ರೆಯನ್ನು ಕೈಗೊಳ್ಳಬೇಕು. ಸುರಿಗಿ ಎರೆದ ತಕ್ಷಣ ವರನು ಒಂದು ಜೋಳಿಗೆಯನ್ನು ಹಾಕಿಕೊಂಡು ಸಮಾನ ವಯಸ್ಕರ ಜೊತೆಗೆ ಹತ್ತಿರದ ಕಾಳಿಕದೇವಿ ದೇವಸ್ಥಾನ ಇಲ್ಲವೇ ಆಂಜನೇಯ ದೇವಸ್ಥಾನಕ್ಕೆ ಹೋಗಿ ಕುಳಿತುಕೊಂಡಿರುತ್ತಾರೆ. ಈ ಮದುವೆಯ ಸಂದರ್ಭದಲ್ಲಿ ಕಾಶೀಯಾತ್ರೆ ಈ ದೇವಸ್ಥಾನಗಳಾಗಿರುತ್ತವೆ.

ಪಾಂಚಾಳ ಸಮುದಾಯದಲ್ಲಿ ಕಾಶೀಯಾತ್ರೆ ಅಂದರೆ ಬ್ರಹ್ಮಚರ್ಯ ಎಂದರ್ಥ. ಸುರಿಗೆ ಎರೆದ ತಕ್ಷಣ ಬಗಲಲ್ಲಿ ಒಂದು ಜೋಳಿಗೆಯನ್ನು ಹಾಗೂ ಕೊಡೆಯನ್ನು ಇಡಿದುಕೊಂಡು ವಿದ್ಯಾರ್ಜನೆಗೆ ಹೋದವ ಮರಳಿ ಮನೆಗೆ ಬರುವ, ನಂತರ ವೈವಾಹಿಕ ಜೀವನಕ್ಕೆ ಸಿದ್ಧನಾಗುವ ಪ್ರಕ್ರಿಯೇ 'ಭವತಿ ಭಿಕ್ಷಾಂ ದೇಹಿ' 'ಭಿಕ್ಷಾಂದೇಹಿ' ಎನ್ನುತ್ತ ಭಿಕ್ಷೆಗೆ ಹೋಗಬೇಕು. ತನ್ನ ಜೋಳಿಗೆಯಲ್ಲಿ ಭಿಕ್ಷೆಯನ್ನು ಹಾಕಿಸಿಕೊಳ್ಳುತ್ತ ದೇವಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳುತ್ತಾನೆ. ಮನೆಯ ಬಂದು ಬಳಗದವರೆಲ್ಲರೂ ಆಚಾರ್ಯ ಸ್ವಾಮಿ ಜೊತೆಗೆ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಹೋಗಿ ಅಲ್ಲಿ ಕುಳಿತುಕೊಂಡಿರುವ ವರನನ್ನು ಮಾತನಾಡಿಸುತ್ತಾರೆ. ಮುಂಚೆಯೇ ಗೊತ್ತು ಪಡಿಸಿದ ಹೆಣ್ಣಿನ ಸಂಬಂಧಿಕರು ಬಂದು "ಏನ್ ಸ್ವಾಮಿ ಎಲ್ಲಿಗೊಂಟಿರಿ" ಎಂದು ಕೇಳುತ್ತಾನೆ.

ವಟು :- ಕಾಶೀಯಾತ್ರೆಗೆ ಹೋಗುತ್ತಿದ್ದೇನೆ

ಮಾವ :- ಅಲ್ಲಿ ಏನು ಕೆಲಸ?

ವಟು :- ಬ್ರಹ್ಮಚರ್ಯವನ್ನು ಸ್ವೀಕರಿಸಲು

ಮಾವ :- ಹೌದು, ನೀವು ಯಾವ ಜಾತಿಯವರು ಯಾವ ಗೋತ್ರ? ಎಂದು ಕೇಳುತ್ತಾನೆ

ವಟು :- ನಾವು ಪಾಂಚಾಳ ಕುಲದವರು, ನಮ್ಮ ಗೋತ್ರ ಸನಾತನ

ಮಾವ :- ಸ್ವಾಮಿ ನೀವು ಕಾಶೀಯಾತ್ರೆಗೆ ಹೋಗುವುದು ಬೇಡಾ ನಾನು ಕೂಡ ಪಾಂಚಾಳ ಕುಲದವನು. ನಮಗೆ ಒಬ್ಬ ಮಗಳು ಇದ್ದಾಳೆ. ನಿಮಗೆ ಕೊಟ್ಟು ಮದುವೆ ಮಾಡ್ತಿನಿ, ನೀವು ಕೇಳಿದಷ್ಟು ಹಣ, ಒಡವೆ ಕೊಡುತ್ತೀನಿ, ದಯಮಾಡಿ ನನ್ನ ಮಗಳನ್ನು ಮದುವೆಯಾಗಿ ಸುಖದಿಂದಿರಿ ಎಂದು ಹೇಳುತ್ತಾನೆ

ಹೀಗೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯುತ್ತದೆ. ಆಗ ಅಲ್ಲಿದ್ದವರೆಲ್ಲ ವರನ ಮನವೊಲಿಸಿ ಮದುವೆಗೆ ಒಪ್ಪಿಸುತ್ತಾರೆ. ಅತ್ತೆ ಮಾವ ಅಲ್ಲಿಯೇ ವರನ ಪಾದವನ್ನು ಪೂಜೆ ಮಾಡಿ ಮೆರವಣಿಗೆಯ ಮುಖಾಂತರ ಮನೆಗೆ ಕರೆದುಕೊಂಡು ಬರುತ್ತಾರೆ.

ಈ ಕಾರ್ಯವನ್ನು ಪಾಂಚಾಳ ಸಮುದಾಯದ ಆಚಾರ್ಯ ಸ್ವಾಮಿಯು ನಿಂತಿದ್ದು ವರನು ಹಾಗೂ ಮಾವನ ನಡುವೆ ಸಂಭಾಷಣೆಯಲ್ಲಿ ತೊಡಗಿಸುತ್ತಾನೆ. ವರನ ಕೈಯಲ್ಲಿರುವ ಜೋಳಿಗೆಯನ್ನು ಆಚಾರ್ಯ ಸ್ವಾಮಿಯವರಿಗೆ ಕೊಡಬೇಕು. ಈ ಕಾರ್ಯವು ವಿಶಿಷ್ಟವಾಗಿ ಕಂಡುಬರುತ್ತದೆ.

ಊ. ಮಾಂಗಲ್ಯ ಧಾರಣ ವಿಧಿ

ಪಾಂಚಾಳ ಸಮುದಾಯದಲ್ಲಿ ಮಾಂಗಲ್ಯ ಧಾರಣ ವಿಧಿಗೆ ಸಂಬಂಧಿಸಿದಂತೆ ಸಮುದಾಯದ ಆಚಾರ್ಯ ಸ್ವಾಮಿಯವರು ಎಲ್ಲಾ ಶಾಸ್ತ್ರಗಳನ್ನು ನಡೆಸಿಕೊಡುವರು. ಆಚಾರ್ಯ ಸ್ವಾಮಿಯವರು ಈ ಕಾರ್ಯಕ್ಕಾಗಿ ಮದುವೆ ಮನೆಯಲ್ಲಿ ಯಜ್ಞಕುಂಡ ಹಾಗೂ ಐದು ಕಳಶಗಳನ್ನು ಪ್ರತಿಷ್ಠಾಪಿಸಿಕೊಳ್ಳುತ್ತಾರೆ. ಈ ಯಜ್ಞಕುಂಡದ ಅಕ್ಕಪಕ್ಕದಲ್ಲಿ ವಧು-ವರರು ಹಾಗೂ ಆಚಾರ್ಯ ಸ್ವಾಮಿಗಳು ಕುಳಿತುಕೊಂಡು

ಶಾಸ್ತ್ರಗಳನ್ನು ಮಾಡುತ್ತಾರೆ. ಮೊದಲಿಗೆ ವಧು-ವರರಿಗೆ ಬಾಸಿಂಗವನ್ನು ಕಟ್ಟಿಸುತ್ತಾರೆ. ವಧು-ವರರ ಕೈಯಲ್ಲಿ ಕಾಯಿ ಇಟ್ಟು ಮಂತ್ರವನ್ನು ಪಠಿಸುತ್ತಾ ಕಾಯಿಯ ಮೇಲೆ ಹಾಲು, ತುಪ್ಪ, ಮೊಸರು ಹಾಕಿಸಿ ಕಳಶಗಳಿಗೆ ಪೂಜೆ ಮಾಡುತ್ತಾರೆ. ನಂತರ ಪೂಜೆ ಮಾಡಿ ಒಂದು ಕಾಯಿಯನ್ನು ವರನ ಕೈಯ್ಯಲ್ಲಿ ಇಡಿದುಕೊಳ್ಳುವುದಕ್ಕೆ ಕೊಡುತ್ತಾರೆ. ವಧುವಿನ ತಂದೆ-ತಾಯಿಯರಿಂದ ವರನಿಗೆ ಕನ್ಯಾದಾನ ಮಾಡಿಸುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿಕಾಳುಗಳನ್ನು ಹಾಕಿ ಅದರ ಮಧ್ಯದಲ್ಲಿ ಒಂದು ಕಾಯಿಯನ್ನು ಇಟ್ಟು ಅದರ ಮೇಲೆ ಮುತ್ತೈದೆಯರಿಂದ ಪೋಣಿಸಿದ ಮಂಗಲ ಸೂತ್ರವನ್ನು ಕೈ ಕಡಗ ಹಾಗೂ ಕಾಲುಂಗುರವನ್ನು ಇಟ್ಟಿರುತ್ತಾರೆ. ಇವುಗಳನ್ನು ಅಲ್ಲಿ ನೆರೆದಿರುವ ಹಿರಿಯ ಬಂಧು ಬಳಗದವರೆಲ್ಲರೂ ಅವುಗಳನ್ನು ಮುಟ್ಟಿ ಆರ್ಶೀವದಿಸಿ, ನಮಸ್ಕರಿಸುವಂತೆ ಆಚಾರ್ಯ ಸ್ವಾಮಿಯವರು ತಿಳಿಸುತ್ತಾರೆ ಆದರಂತೆಯೇ ಎಲ್ಲರು ಆರ್ಶೀವದಿಸಿ ನಮಸ್ಕರಿಸುವರು.

ವರನು ವಧುವಿನ ಕೈಗೆ ಕಡಗವನ್ನು, ಕಾಲಿನ ಬೆರಳಿಗೆ ಕಾಲುಂಗುರವನ್ನು ತೊಡಿಸುವನು. ನಂತರ ವಧುವರನನ್ನು ಎದುರುಬದುರು ಕುಳ್ಳಿರಿಸಿ ಅವರ ಮಧ್ಯದಲ್ಲಿ ಒಂದು ಬಿಳಿ ಬಟ್ಟೆಯನ್ನು ಅಡ್ಡಲಾಗಿ ಬಿಡುತ್ತಾರೆ. ವರನ ಕೈಯಿಂದ ವಧುವಿನ ಕೊರಳಿಗೆ ಮಂಗಳ ಸೂತ್ರವನ್ನು ಕಟ್ಟಲು ಸೂಚಿಸುತ್ತಾರೆ. ಆ ಸಂದರ್ಭದಲ್ಲಿ ಆಚಾರ್ಯ ಸ್ವಾಮಿಯವರು ಈ ಮಂತ್ರವನ್ನು ಹೇಳುವರು.

"ಮಾಂಗಲ್ಯ ತಂತುನಾನೇನ | ಮಮ ಜೀವನ ಹೇತುನಾ
ಕಂಠೇ ಭದ್ನಾಮಿ ಶುಭಗೇ | ತ್ವಂ ಜೀಗೀ ರ್ಘಯೆಶರದಃ ಶತಂ
ಮಾಯಾಬದ್ನಾಂ ದಾಕ್ಷಾಯಣೀ | ಹಿರಣ್ಯಂ ಸದೇಟೀ ಘ್ರುಣ್ಯಾ ತಾಂ
ದೀರ್ಘಮಾರ್ಯ | ಇತಿ ಮಾಂಗಲ್ಯ ಧಾರೆಯೇತ್||"[16]

ಈ ಸಮಯದಲ್ಲಿ ನೆರೆದಿರುವರೆಲ್ಲರು ಅಕ್ಷತೆಕಾಳುಗಳನ್ನು ಹಾಕುತ್ತಾರೆ. ಗುರುಹಿರಿಯರು, ಮುತ್ತೈದೆಯರು ಮತ್ತು ಪತಿ ಹಸ್ತಂಗತವಾಗಿ ಬಂದ ಮಂಗಲ ಸೂತ್ರವು ಸತಿಯ ಕೊರಳಿಗೆ ಶೋಭಾಯ ಮಾನವಾಗಿ ದೀರ್ಘಯುಷ್ಯ ಹಾಗೂ ಶಾಂತಿಯನ್ನುಂಟು ಮಾಡಲಿ, ಪತಿವ್ರತಾ ಧರ್ಮವನ್ನು ಪಾಲಿಸಬೇಕು, ಸಂಸಾರದಲ್ಲಿ ಸರಿಯಾದ ಹೆಸರುಗಳಿಸಬೇಕು ಎಂಬೆಲ್ಲಾ ಮಾತುಗಳನ್ನು ಆಚಾರ್ಯ ಸ್ವಾಮಿಯವರು ತಿಳಿ ಹೇಳುತ್ತಾರೆ. ನಂತರ ಒಂದು ಪಾತ್ರೆಯಲ್ಲಿ ಹಾಲು ಹಾಗೂ ಮುತ್ತನ್ನು ಹಾಕಿ ವಧುವರರಿಗೆ ಆ ಮುತ್ತನ್ನು ಹುಡುಕಲು ತಿಳಿಸುತ್ತಾರೆ. ಮುತ್ತು ಮೊದಲು ವಧುವಿಗೆ ಸಿಕ್ಕರೆ ವಧುವಿನ ಕಡೆಯಿಂದ ಹೀಗೆ ಹೇಳಿಸುತ್ತಾರೆ.

ಅತ್ತಿ ಅತ್ತಿ ಹಾಲುಕಂಡೆ
ಹಾಲಿನೊಳಗೆ ಮುತ್ತುಕಂಡೆ, ರತ್ನಕಂಡೆ
ಮುತ್ತಿನಂತ ಗಂಡನ ಕಂಡೆ, ಎಂದು ಹೇಳಿಸುತ್ತಾರೆ

ಆ ಮುತ್ತು ವರನಿಗೆ ಸಿಕ್ಕರೆ

ಅತ್ತಿ ಅತ್ತಿ ಹಾಲು ಕಂಡೆ
ಹಾಲಿನೊಳಗೆ ಮುತ್ತುಕಂಡೆ, ರತ್ನಕಂಡೆ
ರತ್ನದಂತ ಹೆಂಡತಿ ಕಂಡೆ ಎಂದು ಹೇಳಿಸುತ್ತಾರೆ

ಹೀಗೆ ಹೇಳಿಸುವ ಉದ್ದೇಶ ಇಬ್ಬರಲ್ಲಿಯೂ ಭಾವನೆಗಳು ಮೂಡಿ ಬದುಕು ಸುಗಮವಾಗಿ ಸಾಗಲೇಂದು, ಜೀವನದ ಕೊನೆಯ ಹಂತದವರೆಗೂ ಸುಖ-ದುಃಖಗಳಲ್ಲಿ ಸಮನಾಗಿ ಇಬ್ಬರು ಬಾಗಿಯಾಗುವುದು. ನಂತರ ಇಬ್ಬರನ್ನು ಅಗ್ನಿ ಕುಂಡದ ಸುತ್ತಲೂ ಸಪ್ತಪದಿ ತುಳಿಸುತ್ತಾರೆ. ಸಪ್ತಪದಿ ತುಳಿದ ಮೇಲೆ ತಂದೆ ತಾಯಿಗಳಿಗೆ, ಹಿರಿಯರಿಗೆ, ಮನೆಯ ದೇವರಿಗೆ ಹಾಗೂ ಆಚಾರ್ಯ ಸ್ವಾಮಿಗಳಿಗೆ ಪಾದ ಮುಟ್ಟಿ ನಮಸ್ಕರಿಸುತ್ತಾರೆ.

ಐ. ಧಾರೆ ಎರೆಯುವುದು

ಅಕ್ಷತಾರೋಹಣವಾದ ಮೇಲೆ ವಧುವರರು ಅಲಂಕಾರಗೊಂಡಿರುವ ಮಂಟಪದ ಮೇಲೆ ಬಂದು ಕುಳಿತುಕೊಳ್ಳುತ್ತಾರೆ. ಆಗ ಹುಡುಗಿಯ ಸೋದರ ಮಾವ, ಸೋದರತ್ತೆ ಇಬ್ಬರು ವಧುವರರ ಪಾದಗಳನ್ನು ತೊಳೆದು ಪೂಜೆ ಮಾಡುತ್ತಾರೆ. ಅಂದರೆ ನಮ್ಮ ಹುಡುಗಿಯನ್ನು ಸಂಪೂರ್ಣವಾಗಿ ನಿಮ್ಮ ಮನೆಗೆ ನಾವು ನಿಮ್ಮ ಕಾಲು ತೊಳೆದು ಕೊಡುತ್ತೇವೆ ಎಂದು ನುಡಿಯುತ್ತಾರೆ ಇದಕ್ಕೆ ಧಾರೆ ಎರೆಯುವುದು ಎಂದರ್ಥ. ನಂತರ ಅಲ್ಲಿ ನೆರೆದಿರುವ ಬಂದು ಬಳಗದವರು ಮದು ಮಕ್ಕಳನ್ನು ಬೇಟೆ ಮಾಡಿ ಅವರಿಗೆ ತಂದಿರುವ ಉಡುಗೊರೆಯನ್ನು ಕೊಟ್ಟು ಅಕ್ಷತೆಕಾಳನ್ನು ಹಾಕುತ್ತಾರೆ.

ಎ. ಕಾಲು ತೊಳೆಯುವ ಕಾರ್ಯಕ್ರಮ

ಮದುವೆಯ ದಿನದ ಸಾಯಂಕಾಲ ಮದುಮಕ್ಕಳನ್ನು ಊರಲ್ಲಿರುವ ಎಲ್ಲಾ ದೇವಸ್ಥಾನಗಳಿಗೆ ಮೆರವಣಿಗೆಯ ಮುಖಾಂತರ ಕರೆದೊಯ್ದು ಪೂಜೆ ಮಾಡಿಕೊಂಡು ಮನೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ಸಹೋದರಿಯರು ನವದಂಪತಿಗಳ ಕಾಲು ತೊಳೆಯುವರು. ಮನೆಯ ಬಾಗಿಲನ ಹೊಸ್ತಿಲ ಮೇಲೆ ಬಂದು ತಟ್ಟೆಯನ್ನು ಇಟ್ಟು ಅದರಲ್ಲಿ ನವದಂಪತಿಗಳ ವರನ ಬಲಗಾಲು ಹಾಗೂ ವಧುವಿನ ಎಡಗಾಲನ್ನು ಇರಿಸುತ್ತಾರೆ. ಅವರ ಪಾದಗಳನ್ನು ಸಹೋದರಿಯರು ಪೂಜೆ ಮಾಡಿ ಅವರಿಂದ ಉಡುಗೊರೆಯನ್ನು ಕೇಳುತ್ತಾರೆ. ಆ ಸಮಯದಲ್ಲಿ ಅವರಿಗೆ ಹಣ, ಬಂಗಾರವನ್ನು ಕೊಡುತ್ತೇವೆ ಎಂದು ತಿಳಿಸುತ್ತಾರೆ. ಇವು ಯಾವು ನಮಗೆ ಬೇಡ. ನಿಮಗೆ ಹುಟ್ಟಲಿರುವ ಮಗುವನ್ನು ನಮ್ಮ ಮನೆಗೆ ತಂದುಕೊಳ್ಳುತ್ತೇವೆ ಎಂದು ಕೇಳುತ್ತಾರೆ. ಅದಕ್ಕೆ ನವದಂಪತಿಗಳು ಒಪ್ಪಿಗೆ ಸೂಚಿಸುತ್ತಾರೆ. ಈ ಸಮಯದಲ್ಲಿ ಸಹೋದರತ್ವದ ಸಂಬಂಧ ಮುಂದುವರೆಯುವ ಆಶ್ವಾಸನೆಗಳು ಕೇಳಿಬರುತ್ತವೆ.

ಅಲ್ಲಿಯೇ ಹೊಸ್ತಿಲ ಮೇಲೆ ಜೋಳ ತುಂಬಿದ ಸೇರನ್ನು ತಟ್ಟೆಯಲ್ಲಿ ಇಡುತ್ತಾರೆ. ಈ ಸೇರನ್ನು ವಧುವಿಗೆ ಎಡಗಾಲಿನಿಂದ ಮೂರು ಬಾರಿ ಒದೆಸುತ್ತಾರೆ. ನಂತರ ನವದಂಪತಿಗಳನ್ನು ಮನೆಯ ಒಳಗಡೆಗೆ ಕರೆದುಕೊಳ್ಳುವರು. ಪಾಂಚಾಳರಲ್ಲಿ ವಧುವಿನ ಮೂಲಕ ಸೇರು ಒದೆಸುವುದು ವಿಶಿಷ್ಟ ಪದ್ಧತಿಯಾಗಿದೆ. ಈ ಸೇರಿನಲ್ಲಿ ತುಂಬಿರುವ ಜೋಳವನ್ನು ಎಷ್ಟು ದೂರ ಒದೆಯುತ್ತಾಳೋ ಅಷ್ಟು ಮಧುರವಾಗಿ ಪತಿ ಪತ್ನಿಯರ ಸಂಬಂಧ ಮಧುರವಾಗಿರುತ್ತದೆ ಎಂದು ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಹಾಗೂ ಮನೆಯ ಅಭಿವೃದ್ಧಿಯು ಹಾಗೆ ಆಗುತ್ತದೆ ಎಂದು ತಿಳಿಯುತ್ತಾರೆ.

೩. ಮದುವೆ ನಂತರದ ಆಚರಣೆಗಳು

ಅ. ಗಂಗಿಶಾಸ್ತ್ರ

ಮಾಂಗಲ್ಯ ಶಾಸ್ತ್ರ ಮುಗಿದ ಮಾರನೆಯ ದಿವಸ ವಧುವರರಿಗೆ ನಾಗೋಲಿ ಸುರಿಗಿಯನ್ನು ಎರೆಯುತ್ತಾರೆ. ಇದಾದ ಮೇಲೆ ಮುತ್ತೈದೆಯರೆಲ್ಲರೂ ಸೇರಿ ವಧುವನ್ನು ಗಂಗಿ ಪೂಜೆಗೆ ಕರೆದುಕೊಂಡು ಹೋಗುವರು. ಊರಲ್ಲಿರುವ ನದಿ, ಕೆರೆ ಅಥವಾ ಬಾವಿಯ ನೀರಿಗೆ ಪೂಜೆ ಸಲ್ಲಿಸಿ, ನೀರನ್ನು ಬಿಂದಿಗೆಯಲ್ಲಿ ಹೊರಿಸಿಕೊಂಡು ಬರುತ್ತಾರೆ. ಮನೆಯ ಹತ್ತಿರ ಬಂದ ಮೇಲೆ ವಧುವಿಗೆ ಇಳಿದೆಗೆದು ಹಾಕುತ್ತಾರೆ. ಆ ಸಂದರ್ಭದಲ್ಲಿ ವರ ವಧುವಿನ ಪೂಜೆ ಮಾಡಿ ಹೊಸ್ತಿಲ ಮೇಲೆ ಅವಳ ಬಲಗಾಲನ್ನು ಇರಿಸಿ ಹೆಬ್ಬೆರಳು ಹಾಗೂ ನಡುಬೆರಳಿನ ಸಂದಿಯಲ್ಲಿ ಹೊಸ್ತಿಲಿಗೆ ಮಳೆ ಬಡಿಯುತ್ತಾರೆ. ನಂತರ ತಲೆಯ ಮೇಲಿನ ಬಿಂದಿಗೆಯನ್ನು ಕೆಳಗೆ ಇಳಿಯಿಸಿಕೊಂಡು ಒಳಗಡೆ ಕರೆದುಕೊಳ್ಳುತ್ತಾರೆ.

ಆ. ಸೋಬಾನ ಶಾಸ್ತ್ರ

ಪಾಂಚಾಳ ಸಮುದಾಯದಲ್ಲಿ ಒಂಭತ್ತನೆಯ ಇಲ್ಲವೆ ಹದಿನಾರನೆಯ ದಿವಸದಲ್ಲಿ ಸೋಬಾನ ಶಾಸ್ತ್ರವನ್ನು ಹೆಣ್ಣಿನವರ ಮನೆಯಲ್ಲಿ ನಡೆಸಿಕೊಡುತ್ತಾರೆ. ಈ ಸೋಬಾನ ಶಾಸ್ತ್ರ ಅಥವಾ ಪ್ರಸ್ತ ಗಂಡು ಹೆಣ್ಣುಗಳ ಜೀವನದಲ್ಲಿ ಸಂಭ್ರಮದ ಹಂತ ಎನ್ನಬಹುದು. ಮೊದಲ ಬಾರಿಗೆ ಹುಡುಗಿ ಕನ್ಯೆಯಾದಾಗ ಭಯ, ನಾಜೂಕು, ಜವಾಬ್ದಾರಿ ಇಂತಹವುಗಳೆಲ್ಲವೂ ಅವಳ ತೆಕ್ಕೆಗೆ ಗೊತ್ತಿಲ್ಲದಂತೆಯೆ ಮನೆಯ ಹಿರಿಯರು ತಿಳಿಸಲು ಪ್ರಯತ್ನಿಸುತ್ತಾರೆ. ಈ ಸಂದರ್ಭದಲ್ಲಿಯೂ ಅವಳ ತೆಕ್ಕೆಗೆ ಎಲ್ಲಾ ವಿಚಾರಗಳನ್ನು ತಿಳಿಸುತ್ತಾರೆ. "ಸೋಬಾನ ಶಾಸ್ತ್ರ ಎಂದರೆ ಮದುವೆಯಾದ ಗಂಡು ಹೆಣ್ಣನ್ನು ಮೊದಲನೇ ಸಲ ದೈಹಿಕವಾಗಿ ಕೂಡಿಸುವ ಸಂದರ್ಭವನ್ನು ಸೋಬಾನ ಶಾಸ್ತ್ರ ಎನ್ನುವರು." ಈ ಶಾಸ್ತ್ರಕ್ಕೆ ಹೆಣ್ಣಿನ ಮನೆಯವರು ಒಂಭತ್ತನೆಯ ದಿನ ಇಲ್ಲವೆ ಹದಿನಾರನೆಯ ದಿವಸದಂದು ಸೋಬಾನ ಶಾಸ್ತ್ರಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ.

ನಿಗದಿ ಪಡಿಸಿದ ದಿನದಂದು ಹಣ್ಣು, ಹೂವು, ಕಾಯಿ ಇತ್ಯಾದಿಗಳೊಂದಿಗೆ ತನ್ನ ಸಂಬಂಧಿಕರ ಜೊತೆಗೆ ನವವಧುವಿನ ಮನೆಗೆ ತೆರಳುತ್ತಾನೆ. ಅಂದು ರಾತ್ರಿ ಇವರು ತಂದಿರುವ ಹೂವನ್ನು ವಧುವಿನ ತಲೆಗೆ ಮುಡಿಸಿ ನವದಂಪತಿಗಳಿಗೆ ಮುತ್ತೈದೆಯರಿಂದ ಆರತಿ ಬೆಳಗಿಸುವರು. ಮನೆಯಲ್ಲಿ ಮಾಡಿದ ಸಿಹಿ ಅಡುಗೆಯನ್ನು ನವ ವಧುವರರಿಗೆ ಉಣಬಡಿಸುವರು. ನಂತರ ನವವಧುವರರಿಗೆ ಒಂದು ಕೋಣೆಯಲ್ಲಿ ಹೊಸಹಾಸಿಗೆಗಳನ್ನು ಹಾಸಿರುತ್ತಾರೆ. ಅದರ ಬಳಿ ಹಣ್ಣು, ಹಂಪಲ, ಹಾಲು, ಒಂದು ಚರಿಗೆಯಲ್ಲಿ ನೀರು ಇಟ್ಟಿರುತ್ತಾರೆ. ಮದುಮಕ್ಕಳನ್ನು ಈ ಕೋಣೆಯಲ್ಲಿ ಮಲಗಿಕೊಳ್ಳಲು ಬಿಡುತ್ತಾರೆ.

ಬೆಳಗ್ಗೆ ನವದಂಪತಿಗಳು ಎದ್ದ ತಕ್ಷಣವೇ ಹಾಸಿಗೆಗಳನ್ನು ಮುಟ್ಟದೆ, ಆ ಹಾಸಿಗೆಯಲ್ಲಿ ತಮಗೆ ತಿಳಿದಷ್ಟು ದಕ್ಷಿಣೆ (ಹಣ)ಯನ್ನು ಹಾಕಿ ಹೊರಬರುತ್ತಾರೆ. ನವದಂಪತಿಗಳು ಸ್ನಾನ ಮಾಡಿ ಅವರ ವೃತ್ತಿ ದೇವತೆಯಾದ ಕಾಳಿಕಾದೇವಿಗೆ ಪೂಜೆ ಮಾಡುತ್ತಾರೆ. ನಂತರ ವರನು ಎರಡನೆಯ ದಿನ ಮರು

ಹಾಸಿಗೆಯನ್ನು ಹೆಣ್ಣಿನ ಮನೆಯಲ್ಲಿ ನೋಡಬಾರದೆಂದು ತಿಳಿದು ಅವತ್ತೇ ತಮ್ಮ ಊರಿಗೆ ವಾಪಸ್ಸು ಆಗುತ್ತಾನೆ. ನವದಂಪತಿಗಳು ಮಲಗಿಕೊಂಡಿರುವ ಹಾಸಿಗೆಗಳನ್ನು ಅವರ ಮನೆಯ ಅಗಸರಿಗೆ ಸೆಳೆದುಕೊಂಡು ಬರಲು ಕೊಡುತ್ತಾರೆ. ಅವರಿಗೆ ಏನಾದರೂ ಉಡುಗೊರೆಯನ್ನು ಕೊಡುವ ಸಂಪ್ರದಾಯವನ್ನು ಇಟ್ಟುಕೊಂಡು ಬಂದಿದ್ದಾರೆ.

೯. ಕಡೆ ನೀರು ಶಾಸ್ತ್ರ

ನವದಂಪತಿಗಳಿಗೆ ಎರಡು ಕಡೆಯ ಮನೆಯವರು ನೀರು ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಈ ಶಾಸ್ತ್ರವನ್ನು ಈ ಸಮುದಾಯದಲ್ಲಿ ಬುಧವಾರ ದಿನದಂದೇ ಮಾಡಬೇಕು ಎಂದು ಹಿರಿಯರು ತಿಳಿಸುತ್ತಾರೆ. ನವದಂಪತಿಗಳ ಮನೆಯ ಹಂದರದ ಅಂಗಳದಲ್ಲಿ ಕುಳ್ಳಿರಿಸಿ ಮುತ್ತೈದೆಯರೊಂದಿಗೆ ಆರತಿ ಬೆಳಗಿಸಿ ಈ ಕಾರ್ಯವನ್ನು ಮುಗಿಸುತ್ತಾರೆ. ಮಾರನೆಯ ದಿನ ಹಂದರ ಪೂಜೆ ಮಾಡಿ ಹಂದರವನ್ನು ಬಿಚ್ಚುತ್ತಾರೆ. ನಂತರದ ದಿನಗಳಲ್ಲಿ ಉಡಕ್ಕಿ ಹಾಕಿಕೊಂಡು ಹೊಸಮದುಮಗಳಿಗಿತ್ತಿಯಾಗಿ ಗಂಡನ ಮನೆಗೆ ನಡೆಯಲಿಕ್ಕೆ (ಬಾಳ್ವೆ ಮಾಡಲಿಕ್ಕೆ) ಬರುತ್ತಾಳೆ.

೮. ಸೀಮಂತ ಕಾರ್ಯ

ವಿವಾಹವಾದ ಹೆಣ್ಣು ತನ್ನ ಗಂಡನ ಮನೆಗೆ ಹೋಗಿ ಒಂದು ವರ್ಷದೊಳಗೆ ಗರ್ಭಿಣಿಯಾಗುವುದನ್ನು ಶುಭ ಸೂಚಕವೆಂದು ಪಾಂಚಾಳರು ಭಾವಿಸುತ್ತಾರೆ. ಈ ಕಾರ್ಯಕ್ಕೆ ಸೀಮಂತ, ಬಯಕೆ, ಮಾಡಿಕ್ಕುವುದು, ಹೂ ಮುಡಿಸುವ ಕಾರ್ಯ ಮುಂತಾಗಿ ಕರೆಯುತ್ತಾರೆ. ಹೆಣ್ಣು ಮಗಳು ಮೂರು ವರ್ಷಗಳಲ್ಲಿ ಗರ್ಭಿಣಿಯಾಗದಿದ್ದಲ್ಲಿ ಆತಂಕಕ್ಕೆ ಒಳಗಾಗುತ್ತಾರೆ. ಅದಕ್ಕಾಗಿಯೇ ಅನೇಕ ಹರಕೆಗಳನ್ನು ತಮ್ಮ ವೃತ್ತಿದೇವತೆಗಳಿಗೆ ಕಟ್ಟಿಕೊಳ್ಳುವುದನ್ನು ಈ ಸಮುದಾಯದಲ್ಲಿ ಕಾಣಬಹುದು.

ಈ ಶಾಸ್ತ್ರವನ್ನು ಗಂಡನ ಮನೆಯಲ್ಲಿ ಮಾಡಲಾಗುತ್ತದೆ. ಆದರೆ ಆ ದಿವಸದ ಖರ್ಚನ್ನೆಲ್ಲಾ ಗರ್ಭಿಣಿ ಮಹಿಳೆಯ ತಂದೆ ನೋಡಿಕೊಳ್ಳಬೇಕು ಎಂಬ ನಿಯಮವಿದೆ. ಈ ಕಾರ್ಯವನ್ನು ಗರ್ಭಿಣಿಯಾದ ಏಳನೇ ತಿಂಗಳಲ್ಲಿ ಮಾಡುತ್ತಾರೆ. ಒಂದು ಗೊತ್ತಾದ ದಿವಸದಂದು ತಮ್ಮ ಸಂಬಂಧಿಕರೆಲ್ಲರನ್ನು ಕರೆಯಿಸಿ ಈ ಕಾರ್ಯವನ್ನು ಮಾಡಿ ಮುಗಿಸುತ್ತಾರೆ.

ಅಂದು ಗರ್ಭಿಣಿಗೆ ಎಣ್ಣೆ ಸ್ನಾನ ಮಾಡಿಸಿ ಹೊಸ ಸೀರೆ, ಕುಪ್ಪಸ, ಹಸಿರು ಬಳೆ ಹಾಕಿಸಿ ಸಾಯಾಂಕಾಲದ ಸಮಯದಲ್ಲಿ ಗಂಡ ಹೆಂಡತಿಯಿಬ್ಬರನ್ನು ಕೂರಿಸಿ ಅಂಗುನೂಲು ಹಾಕಿ, ಆರತಿ ಬೆಳಗಿ ತವರಿನಿಂದ ತಂದಿರುವಂತಹ ಅಕ್ಕಿ, ಎಲೆ, ಅಡಿಕೆ, ಕೊಬ್ಬರಿ, ನಿಂಬೇಹಣ್ಣು, ಅರಿಷಿಣ ಕೊಂಬು ಇತ್ಯಾದಿಗಳನ್ನು ಗರ್ಭಿಣಿ ಹೆಣ್ಣಿಗೆ ಉಡಿ ತುಂಬಲಾಗುತ್ತದೆ. ನಂತರ ಎಲ್ಲಾ ಮುತ್ತೈದೆಯರು ಅಕ್ಷತೆ ಕಾಳು ಹಾಕಿ, ಆರತಿ ಬೆಳಗಿ ಶುಭಹಾರೈಸುವರು ಬಂದಿರುವಂತಹ ಸಂಬಂಧಿಕರೆಲ್ಲರಿಗೂ ತವರಿನವರು ಮಾಡಿಸಿರುವಂತಹ ಸಿಹಿ ಭೋಜನವನ್ನು ಉಣ ಬಡಿಸುತ್ತಾರೆ. ಮಾರನೇಯ ದಿವಸ ಚೊಚ್ಚಲ ಹೆರಿಗೆಗೆ ತವರ ಮನೆಗೆ ಬಸುರಿಯನ್ನು ಕರೆದುಕೊಂಡು ಹೋಗುತ್ತಾರೆ. ಪಾಂಚಳರಲ್ಲಿ ಈ ತರಹ ಕಾರ್ಯಕ್ರಮವನ್ನು ಮಾಡಿ ಮುಗಿಸುತ್ತಾರೆ.

೯. ಸಾವು ಸಂಸ್ಕಾರ

ಸಾವಿನ ಸಂದರ್ಭದಲ್ಲಿ ಮಾಡುವ ಸಂಸ್ಕಾರಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುವುದನ್ನು ಕಾಣಬಹುದು. ಮಾನವನ ಜೀವಿತದ ಅವಧಿಯಲ್ಲಿ ಸಾವು ಅಂತಿಮ ಘಟ್ಟ. ಈ ಅಂತಿಮ ಘಟ್ಟದ ಪೂಜೆ ಪುರಸ್ಕಾರವೇ ಸಂಸ್ಕಾರ ಎಂದು ಹೇಳಬಹುದು.

“ಮರದ ಮ್ಯಾಲನ ಹಕ್ಕಿ ಬುರ‍್ರಂತ ಹಾರಿದ್ರ

ಸ್ಥಿರವಲ್ಲ ಜೀವ ಅನಕೊಂಡೆ | ಈ ಮಾತ

ನನ್ನೊಳಗ ನಾನು ತಿಳಕೊಂಡೆ”.

ಎನ್ನುವ ಈ ಜನಪದರು ಕಟ್ಟಿಕೊಡುವ ಹಾಡನ್ನು ಕೇಳಿದರೆ ಅವರು ತುಂಬಾ ಅನುಭವಿಕರು ಎಂದೆನಿಸುತ್ತದೆ. ಮೂಳೆ ಮಾಂಸಗಳಿಂದ ಕೂಡಿದ ಈ ದೇಹ ಇಹಲೋಕಕ್ಕೆ ಬರುವಾಗ, ಇಹಲೋಕದಿಂದ ಹೋಗುವಾಗ ಬತ್ತಲೆಯಾಗಿರುತ್ತದೆ. ಇವೆರಡರ ನಡುವೆ ಏನೆಲ್ಲಾ ಆಸೆ ಆಕಾಂಕ್ಷೆಗಳನ್ನು ತೀರಿಸಿಕೊಳ್ಳಲು ಸೆಣಸಾಟವನ್ನು ಮಾಡುತ್ತಾನೆ. ಹುಟ್ಟಿದ್ದು ಹೊಲಮನಿ ಬಿಟ್ಟೋಂಟಿ ಕಾಯಮನಿ ಎಷ್ಟಾದ್ದರೇನಿದು ಮರಮ್ಯಾಲನ ಹಕ್ಕಿಯಂತೆ ಈ ಜೀವ ಹಾರಿ ಹೋಗುತ್ತದೆ ಎನ್ನುತ್ತಾರೆ.” ಈ ಜೀವ ಹಾರಿ ಹೋದ ಸಂದರ್ಭದಲ್ಲಿ ಈ ಸಮುದಾಯವು ಅನುಸರಿಸುವ ವಿಧಿಕ್ರಿಯೆಗಳು ಈ ಕೆಳಕಂಡಂತಿವೆ.

ಸಮುದಾಯದ ವ್ಯಕ್ತಿ ಸಾಯುವ ಸ್ಥಿತಿಯಲ್ಲಿರುವಾಗ ಅವರ ಮಕ್ಕಳು, ಸಹೋದರರು, ಮನೆಯ ಅಕ್ಕಪಕ್ಕದವರು ಆ ವ್ಯಕ್ತಿ ಇನ್ನು ಬದುಕಿ ಉಳಿಯಲು ಅಸಾಧ್ಯ ಎಂಬ ಸ್ಥಿತಿ ಕಂಡುಬಂದ ಕೂಡಲೇ ವ್ಯಕ್ತಿಯ ಬಾಯಿಯೊಳಗೆ ಅವರ ಮಕ್ಕಳು, ಹೆಂಡತಿ, ಸಹೋದರರು ಎಲ್ಲರು ಸೇರಿ ತುಳಸಿ ಎಲೆ ಬೆರಸಿದ ನೀರನ್ನು ಕುಡಿಸುವರು. ನೀರು ಕುಡಿಸಿದ ತಕ್ಷಣವೇ ಮನೆಯ ಹೊರಗಡೆಗೆ ತಂದು ಹಾಕುತ್ತಾರೆ. ವ್ಯಕ್ತಿಯ ಜೀವ ಹೋದ ನಂತರ ಆ ಊರಿನಲ್ಲಿರುವ ಸಮುದಾಯದವರಿಗೆ ತಿಳಿಸುತ್ತಾರೆ. ಸಮುದಾಯದ ಹಿರಿಯರೆಲ್ಲರೂ ಬಂದು ತಮ್ಮ ತಲೆಗೆ ಟವಾಲನ್ನು ಸುತ್ತಿಕೊಂಡು ಹೆಣದ ಮೈಯನ್ನು ತೊಳೆದು ಬಟ್ಟೆ ಹಾಕುತ್ತಾರೆ. ನಂತರ ಹೆಣದ ಎರಡು ಕಾಲುಗಳನ್ನು ಮಡಚಿ ಹಾಸಿಗೆಯ ಮೇಲೆ ತಲೆದಿಂಬನ್ನಿಟ್ಟು ಶವಾಸನದಲ್ಲಿಡುತ್ತಾರೆ. ನಂತರ ಪೂಜೆಯನ್ನು ಮಾಡಿ ಪಕ್ಕದಲ್ಲಿಯೇ ಕಳಶವನ್ನು ತುಂಬಿ ಇಡುತ್ತಾರೆ.

ಶವವನ್ನು ಮೈ ತೊಳೆದ ವ್ಯಕ್ತಿಗಳನ್ನು ಯಾರು ಮುಟ್ಟುವಂತಿಲ್ಲ ಹಾಗೂ ಅವರು ಶವವನ್ನು ಸಂಸ್ಕಾರ ಮಾಡುವ ತನಕ ಯಾರ ಮನೆಗಳಿಗೂ ಪ್ರವೇಶಿಸುವಂತಿಲ್ಲ. ಸತ್ತ ವ್ಯಕ್ತಿಯ ಸಂಬಂಧಿಕರಿಗೆಲ್ಲಾ ಮನೆಯ ಮಾದಿಗರ ಮೂಲಕ ಸುದ್ದಿಯನ್ನು ಹೇಳಿ ಕಳಿಸಲಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸತ್ತ ಸುದ್ದಿಯನ್ನು ಜಂಗಮವಾಣಿ ಇಲ್ಲವೆ ದೂರವಾಣಿ ಕರೆಗಳ ಮುಖಾಂತರ ತಿಳಿಸುತ್ತಾರೆ. ಈ ಸಮುದಾಯದಲ್ಲಿ ಶವವನ್ನು ಸುಡುವ ಸಂಪ್ರದಾಯವಿದೆ. ಶವವನ್ನು ಸುಡುವುದಕ್ಕೆ ಮಾದಿಗರಿಗೆ ಹೇಳಲಾಗುತ್ತದೆ. ಮನೆಯವರ ಹತ್ತಿರ ಶವವನ್ನು ಸುಡಲಿಕ್ಕೆ ಬೇಕಾದ ವಸ್ತುಗಳನ್ನು ತರಲಿಕ್ಕೆ ಹಣವನ್ನು ಇಸಿದುಕೊಂಡು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಸ್ಮಶಾಣದಲ್ಲಿ ಕಟ್ಟಿಗೆಯಿಂದ ಚಟ್ಟವನ್ನು ಹೊಂದಿಸಿರುತ್ತಾರೆ.

ಶವದ ಮೈಯನ್ನು ತೊಳೆದ ತಕ್ಷಣವೇ ಯಾರಾದರೊಬ್ಬರು ಕುಂಬಾರರ ಮನೆಗೆ ಹೋಗಿ ಮಗಿ ಹಾಗೂ ಬಿಂದಿಗೆಯನ್ನು ತೆಗೆದುಕೊಂಡು ಬಂದು ಆ ಮಗಿಯ ಸುತ್ತಲೂ ರಂದ್ರವನ್ನು ಮಾಡಿ ಅದರೊಳಗೆ ಬೆಂಕಿಯನ್ನು ಹಾಕಿ ಇಡಲಾಗುತ್ತದೆ. ಬಂದಂತಹ ಶವದ ಬಂಧು ಬಳಗದವರು ಶವಕ್ಕೆ ಹೂವು ಕಾಯಿ ಊದುಬತ್ತಿಯನ್ನು ಅರ್ಪಿಸಿ ನಮಸ್ಕರಿಸುವರು. ಇದರ ಉದ್ದೇಶ ಶವ ಹಾಗೂ ನಮ್ಮಗಳ ಸಂಬಂಧ ಕೊನೆಯದು ಎಂದರ್ಥ. ಸುಮಾರು ಮಧ್ಯಾಹ್ನ ೧ ಗಂಟೆಯ ಹೊತ್ತಿಗೆ ಸಮುದಾಯದ ಹಿರಿಯರು ಶವವನ್ನು ಒಯ್ಯಲಿಕ್ಕೆ ಎರಡು ಉದ್ದನೆಯ ಗಳಗಳು ಇಲ್ಲವೆ ಬಿದಿರಿನ ಗಳಗಳನ್ನು ತೆಗೆದುಕೊಂಡು ಆ ಗಳಗಳನ್ನು ಹೊಂದಿಸುವಂತೆ ನಾಲ್ಕು ಭಾಗಗಳಲ್ಲಿ ಅಡ್ಡಗಳಗಳನ್ನಿಟ್ಟು ಕಟ್ಟಲಾಗುತ್ತದೆ. ಅದರ ಮೇಲ್ಭಾಗದಲ್ಲಿ ಜೋಳದ ಸಪ್ಪೆಯನ್ನು ಹರಡಿ ಚಟ್ಟವನ್ನು ಮಾಡುತ್ತಾರೆ. ಚಟ್ಟಮಾಡಿ ಬಹಳ ಸಮಯದವರೆಗೆ ಕಾಯುವುದಿಲ್ಲ. ತಮ್ಮ ಬಳಗದವರೆಲ್ಲರೂ ಬಂದಿದ್ದಾರೆ ಎಂದು ಗೊತ್ತಾದ ತಕ್ಷಣವೇ ಶವವನ್ನು ಮಾಡಿರುವ ಚಟ್ಟದ ಮೇಲೆ ಮಲಗಿಸುತ್ತಾರೆ. ಮಲಗಿಸಿದ ಮೇಲೆ ನೆರೆದಿರುವ ಬಂಧು ಬಳಗದವರೆಲ್ಲರೂ ಶವದ ಹತ್ತಿರ ಬಂದು ಮುಖದ ಮೇಲೆ ಎಳ್ಳು ನೀರನ್ನು ಬಿಡುತ್ತಾರೆ. ಇದರ ಉದ್ದೇಶ ಸತ್ತ ವ್ಯಕ್ತಿಗೂ ನಮಗೂ ಸಂಬಂಧ ಮುಗಿಯಿತು ಎಂದರ್ಥ. ತಕ್ಷಣವೇ ಶವದ ಮೇಲೆ ಉದ್ದನೆಯ ಬಿಳಿಯ ಬಟ್ಟೆಯಿಂದ ಶವವನ್ನು ಮುಚ್ಚಿ ಹುರಿಯಿಂದ ಕತ್ತರಿಯಾಕಾರದಲ್ಲಿ ಕಟ್ಟುತ್ತಾರೆ. ಶವವನ್ನು ಕಟ್ಟುವ ಸಮಯದಲ್ಲಿ ಸತ್ತ ವ್ಯಕ್ತಿ ತಂದೆ ಅಥವಾ ತಾಯಿಯಾಗಿದ್ದಾರೆ ಇವರ ಹಿರಿಯ ಮಗ, ಇಲ್ಲವೆ ಹೆಣ್ಣುಮಗಳು ಸತ್ತಿದ್ದರೆ ಆಕೆಯ ಪತಿಯು, ಇಲ್ಲವೆ ಮಕ್ಕಳು ಸತ್ತಿದ್ದರೆ ತಂದೆಯನ್ನು ಶವದ ಚಟ್ಟದ ಹತ್ತಿರ ಕುಳ್ಳಿರಿಸಿ ತಲೆಯ ಮೇಲಿಂದ ನೀರನ್ನು ಹಾಕುತ್ತಾರೆ. ಈ ಒದ್ದೆ ಬಟ್ಟೆಯಲ್ಲಿಯೇ ಬೆಂಕಿಯನ್ನು ಹಾಕಿರುವ ಮಗಿಯನ್ನು ಎಡಗೈಯಲ್ಲಿ ಹಾಗೂ ಬಲಭುಜದ ಮೇಲೆ ನೀರು ತುಂಬಿರುವ ಬಿಂದಿಗೆಯನ್ನು ಹೊತ್ತುಕೊಂಡು ಹೆಣದ ಮುಂಭಾಗದಲ್ಲಿ ನಡೆಯುತ್ತಿರಬೇಕು.

ಮನೆಯ ಮಾದಿಗ ಹಳೆಯ ಮೊರದಲ್ಲಿ ಎಲೆ ಅಡಿಕೆ, ದಕ್ಷಿಣೆ, ಒಣಮೆಣಸಿನಕಾಯಿ ಹಾಗೂ ಉಪ್ಪನ್ನು ಹಾಕಿಕೊಂಡು ಮುಂದೆ ಮುಂದೆ ಹೋಗುತ್ತಿರುತ್ತಾನೆ. ಅವನ ನಂತರ ಮೆರವಣಿಗೆಯವರು ನಡೆಯುತ್ತಿರುತ್ತಾರೆ. ಇವರ ನಂತರ ಮನೆಯ ಹಿರಿಯ ಮಗ ಮಗಿ ಹಾಗೂ ಬಿಂದಿಗೆಯನ್ನು ಹೊತ್ತುಕೊಂಡು ನಡೆಯುತ್ತಿರುತ್ತಾನೆ. ಈತನ ಹಿಂದೆ ನಾಲ್ಕು ಮಂದಿ ತಲೆಗೆ ಟವಾಲನ್ನು ಸುತ್ತಿಕೊಂಡು ಶವವನ್ನು ಹೊತ್ತುಕೊಂಡು ಬರುತ್ತಿರುತ್ತಾರೆ. ಶವದ ಹಿಂಭಾಗದಲ್ಲಿ ಸತ್ತ ವ್ಯಕ್ತಿಯ ಸಂಬಂಧಿಕರು ಬಂಧು ಬಳಗದವರು ಬರುತ್ತಿರುತ್ತಾರೆ. ಇವರ ಜೊತೆಯಲ್ಲಿಯೆ ಒಬ್ಬ ಹಿರಿಯ ವಿಧವೆ ತನ್ನ ಕೈಯಲ್ಲಿರುವ ಜೋಳಿಗೆಯಿಂದ ವಿಳ್ಯಾದೆಲೆ, ಮಂಡಾಳನ್ನು ನೆಲಕ್ಕೆ ಹಾಕುತ್ತ ಹೊಗುತ್ತಿರುತ್ತಾಳೆ. ಶವದ ಚಟ್ಟವನ್ನು ಬಂದಿರುವ ತಮ್ಮ ಬಳಗದವರೆಲ್ಲರೂ ಸ್ಮಶಾಣ ಬರುವ ತನಕ ಸ್ವಲ್ಪ ಸ್ವಲ್ಪ ಹೊತ್ತುಕೊಳ್ಳುತ್ತ ಹೋಗುತ್ತಿರುತ್ತಾರೆ. ಶವವನ್ನು ಊರಲ್ಲಿರುವ ಕರುಗಲ್ಲಿನ ಮುಂದೆಯೇ ಒಯ್ಯಬೇಕು ಹಾಗೂ ಕರುಗಲ್ಲಿನ ಮುಂದೆ ಹೆಣವನ್ನು ಹಿಂದಕ್ಕೆ ಮುಂದಕ್ಕೆ ಮಾಡಿ ಸ್ಮಶಾನಕ್ಕೆ ಒಯ್ಯುತ್ತಾರೆ. ಸ್ಮಶಾನದಲ್ಲಿ ಶವವನ್ನು ಉತ್ತರ ದಕ್ಷಿಣ ದಿಕ್ಕಿನಲ್ಲಿ ಇಳಿಸಿ ಪೂಜೆ ಮಾಡುತ್ತಾರೆ. ಪತಿ ಸತ್ತರೆ ಪತ್ನಿಯನ್ನು, ಪತ್ನಿ ಸತ್ತರೆ ಪತಿಯನ್ನು

ಜೊತೆಗೆ ಕುಳ್ಳಿರಿಸಿ ಪೂಜೆ ಮಾಡುತ್ತಾರೆ. ಪತಿ ಸತ್ತಿದ್ದಾರೆ ಶವದ ಮುಂದೆ ತಾಳಿ, ಮೂಗುತಿ, ಕಾಲುಂಗುರುವನ್ನು ಬಿಚ್ಚಿ, ಬಳೆಯನ್ನು ಒಡೆಯುತ್ತಾರೆ. ನಂತರ ಶವವನ್ನು ಬೆತ್ತಲೆ ಮಾಡಿ ಅಲ್ಲಿ ಹಾಕಿರುವ ಕಟ್ಟಿಗೆಯ ಚಟ್ಟದ ಮೇಲೆ ಉತ್ತರ ದಕ್ಷಿಣವಾಗಿ ಹಾಕುತ್ತಾರೆ. ಮನೆಯ ಹಿರಿಯ ಮಗ ಮಗಿ ಹಾಗೂ ಬಿಂದಿಗೆಯನ್ನು ಒತ್ತುಕೊಂಡು ಚಟ್ಟದ ಸುತ್ತಲೂ ಮೂರು ಸುತ್ತನ್ನು ಸುತ್ತುತ್ತಾನೆ. ಒಂದೊಂದು ಸುತ್ತಿಗೆ ಒತ್ತುಕೊಂಡಿರುವ ಬಿಂದಿಗೆಯನ್ನು ಒಂದೊಂದು ರಂಧ್ರವನ್ನು ಮಾಡುತ್ತಾರೆ. ಅಂದರೆ ಒಟ್ಟು ಮೂರು ಸುತ್ತಿಗೂ ಮೂರು ರಂಧ್ರವನ್ನು ಕಡೆಯುವರು ಕೊನೆಗೆ ಹಿಂಬದಿಯಿಂದಲೇ ಬಿಂದಿಗೆಯನ್ನು ಕೈ ಬಿಡುತ್ತಾನೆ. ನಂತರ ಮಗಿಯಲ್ಲಿರುವ ಬೆಂಕಿಯನ್ನು ತೆಗೆದುಕೊಂಡು ಶವಕ್ಕೆ ಕಿಚ್ಚನ್ನು ಇಡುವನು.

ಸತ್ತ ವ್ಯಕ್ತಿಗೆ ಉಪನಯನ ಹಾಗೂ ಮದುವೆ ಆಗಿರದಿದ್ದರೆ ಚಟ್ಟದ ಮೇಲೆ ಶವವನ್ನು ಬೋರಲು ಹಾಕಿ ಸುಡುವರು. ಶವಕ್ಕೆ ಕಿಚ್ಚು ಇಟ್ಟು ತಕ್ಷಣವೇ ಮನೆಯ ಹಿರಿಯ ಮಗ ಅಲ್ಲಿ ನೆರೆದಿರುವ ಬಂಧುಬಳಗದವರಿಗೆಲ್ಲಾ ಹನ್ನೊಂದನೆಯ ಮತ್ತು ಹನ್ನೆರಡನೆಯ ದಿವಸಗಳಂದು ದಿನಕರ್ಮವನ್ನು ನೆರವೇರಿಸುತ್ತೇವೆ ಎಲ್ಲರು ತಪ್ಪದೇ ಬರಬೇಕೆಂದು ಕೇಳಿಕೊಳ್ಳುತ್ತಾನೆ. ನಂತರ ಎಲ್ಲರೂ ಅಲ್ಲಿಯೇ ಸಮೀಪವಿರುವ ಹಳ್ಳ, ಪಂಪ್‌ಸೆಟ್ ಇಲ್ಲವೆ ಮನೆಯ ಹೊರಗಡೆ ಸ್ನಾನಮಾಡಿ ಜನಿವಾರವನ್ನು ಬದಲಾಯಿಸಿಕೊಂಡು ದೇವಸ್ಥಾನಕ್ಕೆ ಹೋಗಿ ದೇವಸ್ಥಾನದ ಹೊರಗಡೆಯ ನಿಂತುಕೊಂಡು ದೀಪಹಚ್ಚಿ, ಊದಿನ ಕಡ್ಡಿಯನ್ನು ಬೆಳಗಿ, ಕೈ ಮುಗಿದು ಬರುತ್ತಾರೆ.

ಹೆಣಕ್ಕೆ ಕಿಚ್ಚು ಹಚ್ಚಿ ವಾಪಸು ಬರುವುದರೊಳಗೆ ಸಮುದಾಯದ ಹುಡುಗರೆಲ್ಲರೂ ಸೇರಿ ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ಅಂದರೆ ಮನೆಯಲ್ಲಿರುವ ನೀರನ್ನೆಲ್ಲ ಚೆಲ್ಲುತ್ತಾರೆ. ಸತ್ತ ವ್ಯಕ್ತಿಯ ಹಾಸಿಗೆಗಳನ್ನೆಲ್ಲಾ ಎಸೆಯುತ್ತಾರೆ. ಮನೆಯನ್ನೆಲ್ಲಾ ಕಸಗುಡಿಸಿ ಮನೆಯವರಿಗೆಲ್ಲಾ ಸ್ನಾನ ಮಾಡಲಿಕ್ಕೆ ನೀರಿನ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ. ನಂತರ ಸಮುದಾಯದ ಬಂಧುಗಳು ಅಡಿಗೆಯನ್ನು ಮಾಡಿಕೊಂಡು ಬಂದು ಕೊಡುತ್ತಾರೆ. ವ್ಯಕ್ತಿ ಸತ್ತ ಮನೆಯಲ್ಲಿ ದೀಪವನ್ನು ಹಚ್ಚಿಡುತ್ತಾರೆ. ಸತ್ತ ವ್ಯಕ್ತಿಯ ಮನೆಯ ಸೋದರ ಸಂಬಂಧದವರಿಗೂ ದಿನಕರ್ಮ ಮಾಡುವ ದಿವಸದವರೆಗೂ ಅವರ ಮನೆಯು ಸೂತಕವಾಗಿರುತ್ತವೆ. ಈ ಸೂತಕದ ಸಂದರ್ಭದಲ್ಲಿ ಬೇರೆಯವರ ಮನೆಗೆ ಪ್ರವೇಶಿಸುವಂತಿಲ್ಲ, ದೇವಸ್ಥಾನಕ್ಕೆ ಹೋಗುವಂತಿಲ್ಲ, ಮನೆಯಲ್ಲಿ ಪೂಜೆ ಮಾಡುವಂತಿಲ್ಲ ಒಟ್ಟಾರೆಯಾಗಿ ಶುಭಸಂದರ್ಭಕ್ಕೆ ಭಾಗವಹಿಸುವಂತಿಲ್ಲ. ಈ ಎಲ್ಲಾ ನಿಯಮಗಳನ್ನು ಈ ಸಂದರ್ಭದಲ್ಲಿ ಪಾಲಿಸುತ್ತಾರೆ.

೯.೧. ದಿನಕರ್ಮ

ಪಾಂಚಾಳ ಸಮುದಾಯದಲ್ಲಿ ವ್ಯಕ್ತಿ ತೀರಿಕೊಂಡ ಹನ್ನೊಂದನೆಯ ಹಾಗೂ ಹನ್ನೆರಡನೆಯ ದಿವಸಗಳಂದು ವೈದಿಕಾಚರಣೆಗಳಿಗನುಸಾರವಾಗಿ ಕ್ರಿಯೆಗಳನ್ನು ಮಾಡುವರು. ಇದಕ್ಕೆ ತಿಥಿ ಮಾಡುವುದು, ದೈವದಾಗ ಹಾಕಿಕೊಳ್ಳುವುದು, ಒಳಗಡೆ ತೆಗೆದುಕೊಳ್ಳುವುದು ಎಂದೆಲ್ಲಾ ಕರೆಯುತ್ತಾರೆ. ಐದನೆಯ ದಿನದಂದು ಸ್ಮಶಾನಕ್ಕೆ ಹೋಗಿ ಸುಟ್ಟಂತಹ ವ್ಯಕ್ತಿಯ ಬೂದಿಯನ್ನು ಬಳಿದುಕೊಂಡು ಹತ್ತಿರದ ಹಳ್ಳ, ಹೊಳೆ ಅಥವಾ ನದಿಯಲ್ಲಿ ಪೂಜೆ ಮಾಡಿ ಬೂದಿಯನ್ನು ನದಿಗೆ ಬಿಡಲಾಗುತ್ತದೆ. ದಿನಕರ್ಮದ ದಿನಕ್ಕೆ

ಮನೆಯನ್ನೆಲ್ಲಾ ಸುಣ್ಣ ಬಣ್ಣವನ್ನು ಹಚ್ಚುತ್ತಾರೆ. ಮನೆಯಲ್ಲಿರುವ ಹಾಸಿಗೆಗಳನ್ನೆಲ್ಲಾ ಮಡಿಮಾಡಿಕೊಳ್ಳುತ್ತಾರೆ. ಇದರಂತೆಯೇ ಅವರ ಸೋದರ ಸಂಬಂಧದವರು ಕೂಡ ಮಡಿಯನ್ನು ಮಾಡುತ್ತಾರೆ.

ದಿನಕರ್ಮದ ಪುರೋಹಿತ್ಯಕ್ಕಾಗಿ ಸಮುದಾಯದ ಆಚಾರ್ಯ ಸ್ವಾಮಿಯವರನ್ನು ಕರೆಸಿಕೊಳ್ಳುತ್ತಾರೆ. ಹನ್ನೊಂದನೆಯ ದಿನ ಶವಕ್ಕೆ ಕಿಚ್ಚಯಿಟ್ಟ ವ್ಯಕ್ತಿಯ ತಲೆಯ ಕೂದಲನ್ನು ಬೋಳಿಸುತ್ತಾರೆ. ಈ ವ್ಯಕ್ತಿಯನ್ನು ಸಮುದಾಯದವರು ಸ್ಪರ್ಶಿಸುವಂತಿಲ್ಲ ಹಾಗೂ ಆತನು ಕೂಡ ಯಾರನ್ನು ಮುಟ್ಟುವಂತಿಲ್ಲ. ಹನ್ನೊಂದನೆಯ ದಿನದ ಬೆಳಗ್ಗೆಯೇ ಆಚಾರ್ಯ ಸ್ವಾಮಿಯವರು ಮಂತ್ರ ಪಠಿಸುತ್ತ ಮನೆಗೆಲ್ಲಾ ಗೋಮೂತ್ರವನ್ನು ಸಿಂಪಡಿಸಿ ಮನೆಯ ಸೂತಕ ಕಳೆಯುತ್ತಾರೆ. ಅದರಂತೆಯೇ ಸೋದರ ಸಂಬಂಧದವರು ಆಚಾರ್ಯ ಸ್ವಾಮಿಗಳ ಹತ್ತಿರ ಬಂದು ಗೋಮೂತ್ರವನ್ನು ತೆಗೆದುಕೊಂಡು ಹೋಗಿ ಅವರ ಮನೆಗಳಿಗೆ ಸಿಂಪಡಿಸಿಕೊಂಡು ಸೂತಕವನ್ನು ಕಳೆದುಕೊಳ್ಳುತ್ತಾರೆ.

ಬೆಳಗ್ಗೆಯೇ ಮನೆಯ ಮಂದಿಗೆಲ್ಲಾ ಗೋಮೂತ್ರವನ್ನು ಕೊಟ್ಟು, ತಲೆಗೆ ಅಕ್ಷತೆ ಕಾಳು ಹಾಕಿ ಜನಿವಾರವನ್ನು ಹಾಕುತ್ತಾರೆ. ಹೆಣ್ಣು ಮಕ್ಕಳಿಗೆ ಅಕ್ಷತೆಕಾಳನ್ನು ಹಾಕಿ ಗೋಮೂತ್ರವನ್ನು ಮಾತ್ರ ಕೊಡುತ್ತಾರೆ. ಸೋದರ ಸಂಬಂಧದವರು ಬಂದು ಗೋಮೂತ್ರವನ್ನು ಸ್ವೀಕರಿಸಿ ಜನಿವಾರವನ್ನು ಹಾಕಿಸಿಕೊಳ್ಳಬೇಕು. ನಂತರ ಸಮುದಾಯದ ಎಲ್ಲಾ ಹಿರಿಯರನ್ನು ಕರೆದುಕೊಂಡು ಬರುತ್ತಾರೆ. ಆಮೇಲೆ ಆಚಾರ್ಯ ಸ್ವಾಮಿಯವರು ಕಿಚ್ಚು ಹಚ್ಚಿದ ವ್ಯಕ್ತಿಯಿಂದ ಸತ್ತ ವ್ಯಕ್ತಿಯ ಫೋಟೋಕ್ಕೆ ವಿಧಿವತ್ತಾಗಿ ಪೂಜೆ ಮಾಡಿಸುತ್ತಾರೆ. ಮೊದಲನೆಯ ದಿನಕರ್ಮಕ್ಕಾಗಿ ರೊಟ್ಟಿ, ಅನ್ನ-ಸಂಬಾರು, ಹುಗ್ಗಿ, ಬದನೆಕಾಯಿ ಪಲ್ಯ ಹಾಗೂ ಸತ್ತ ವ್ಯಕ್ತಿ ಇಷ್ಟಪಡುತಿದ್ದ ಪದಾರ್ಥಗಳೆಲ್ಲವನ್ನು ಮಾಡಿರುತ್ತಾರೆ. ಇವುಗಳೆಲ್ಲವನ್ನು ಒಂದು ಪುಟ್ಟಿಯಲ್ಲಿ ಹಾಕಿಕೊಂಡು ಆ ಪುಟ್ಟಿಗೆ ಬಿಳಿ ಬಟ್ಟೆಯನ್ನು ಕಟ್ಟಿಕೊಂಡು ಸ್ಮಶಾಣಕ್ಕೆ ಕಾಗೆ ಪಿಂಡಕ್ಕಾಗಿ ಹೊಯ್ಯುತ್ತಾರೆ. ಸ್ಮಶಾಣದಲ್ಲಿ ಸುಟ್ಟಂತಹ ಜಾಗವನ್ನು ಪೂಜೆ ಮಾಡಿ ತೆಗೆದುಕೊಂಡು ಹೋಗಿರುವ ನೈವೇದ್ಯವನ್ನು ಕಾಗೆಗಳು ತಿನ್ನಲಿಕ್ಕೆ ಇಡುತ್ತಾರೆ. ಆ ಬುತ್ತಿಯನ್ನು ಕಾಗೆಗಳು ಬಂದು ಮುಟ್ಟಿದರೆ ಸತ್ತ ವ್ಯಕ್ತಿಯ ಆಸೆ ಆಕಾಂಕ್ಷೆಗಳು ಈಡೇರಿದವೆಂದರ್ಥ. ಆ ಬುತ್ತಿಯನ್ನು ಕಾಗೆಗಳು ಮುಟ್ಟದಿದ್ದರೆ ಮನೆಯ ಹಿರಿಯ ಮತ್ತೊಂದು ಬಾರಿ ಬೇಡಿಕೊಳ್ಳುತ್ತಾನೆ. ನಿನಗೆ ಆಸೆ ಆಕಾಂಕ್ಷೆಗಳೇನಿದ್ದರೂ ನಾವು ಅವನ್ನ ಈಡೇರಿಸುತ್ತೇವೆ ಎಂದು ಬುತ್ತಿಯನ್ನು ಮುಟ್ಟಿ ಬೇಡಿಕೊಳ್ಳುತ್ತಾನೆ. ಆವಗ ಕಾಗೆಗಳು ಬಂದು ಬುತ್ತಿಯನ್ನು ಮುಟ್ಟುತ್ತವೆ. ಆದಾಗ್ಯೂ ಕಾಗೆಗಳು ಬುತ್ತಿಯನ್ನು ಮುಟ್ಟದಿದ್ದರೆ ಹತ್ತಿರವಿರುವ ಕೆರೆ, ಬಾವಿ, ನದಿ, ಹಳ್ಳಕ್ಕೆ ಹಾಕಿ ಮನೆಗೆ ಬರುತ್ತಾರೆ. ಅಲ್ಲಿಯವರೆಗೆ ದಿನಕರ್ಮಕ್ಕೆ ಬಂದಂತಹ ಬಂಧುಬಳಗದವರಿಗೆ ಊಟವನ್ನು ಬಡಿಸಿರುವುದಿಲ್ಲ. ಇವರು ಬಂದ ನಂತರ ಸತ್ತವ್ಯಕ್ತಿಯು ಇಷ್ಟಪಡುತ್ತಿದ್ದ ಎಲ್ಲಾ ಆಹಾರ ಪದಾರ್ಥಗಳನ್ನು ಫೋಟೋದ ಮುಂದೆ ನೈವೇದ್ಯಕ್ಕೆ ಇಟ್ಟು ಮಗನ ಕೈಯಿಂದ ಆಚಾರ್ಯ ಸ್ವಾಮಿಯವರು ಶಾಸ್ತ್ರೋಕ್ತವಾಗಿ ಪೂಜೆ ಮಾಡಿಸುತ್ತಾರೆ. ನಂತರ ಊಟಕ್ಕೆ ಬಡಿಸುತ್ತಾರೆ.

ಊಟಕ್ಕೆ ಕುಳಿತಾಗ ಎಲ್ಲಾರೂ ಮೈಯಲ್ಲಿನ ಮೇಲು ವಸ್ತ್ರವನ್ನು ಬಿಚ್ಚಿ ಹಣೆಗೆ ಗಂಧವನ್ನು ಅರ್ಧಚಂದ್ರಕೃತಿಯಲ್ಲಿ ಹಚ್ಚಿಕೊಂಡು ಕುಳಿತುಕೊಳ್ಳುತ್ತಾರೆ. ಕುಳಿತವರಿಗೆಲ್ಲಾ ಜನಿವಾರವನ್ನು ಮೊದಲು ಕೊಟ್ಟುಕೊಂಡುಬರುತ್ತಾರೆ. ಆಚಾರ್ಯ ಸ್ವಾಮಿಯವರಿಗೆ ಮೊದಲು ಊಟದ ಎಲೆಯನ್ನು ಹಾಕಲಾಗುತ್ತದೆ. ಅವರಿಗೆ ಎಲ್ಲ ಆಹಾರದ ಪದಾರ್ಥಗಳನ್ನು ಬಡಿಸಿದ ಮೇಲೆಯೇ ಇನ್ನುಳಿದವರಿಗೆ ಬಡಿಸಬೇಕು. ಎಲ್ಲಾರಿಗೂ ಊಟ ಬಡಿಸಿದ ಮೇಲೆ ಮನೆಯ ಹಿರಿಯ ಮಗ ಬಂದು ಊಟಕ್ಕೆ ಕುಳಿತ ದೈವಕ್ಕೆ ಪೂಜೆ ಮಾಡಿ, ಊಟ ಸಾಗಲಿ ಎಂದು ದೈವಕ್ಕೆ ಅಡ್ಡುಬಿಳುತ್ತಾನೆ. ನಂತರ ಎಲ್ಲಾರದೂ ಊಟ ಸಾಗುತ್ತದೆ. ಈ ಮೊದಲನೆಯ ದಿವಸ ತಿಥಿಯ ಊಟಕ್ಕೆ ಸಂಬಂಧಿಸಿದಂತೆ ಬೇರೆ ಸಮುದಾಯದವರನ್ನು ಊಟಕ್ಕೆ ಕರೆಯುವುದಿಲ್ಲ. ಹನ್ನೆರಡನೆಯ ದಿವಸ ಸಿಹಿ ಊಟದ ಏರ್ಪಾಡನ್ನು ಮಾಡಲಾಗಿರುತ್ತದೆ. ಸತ್ತವ್ಯಕ್ತಿಯ ಜೊತೆಗೆ ನಿಕಟ ಸಂಬಂಧವನ್ನಿಟ್ಟುಕೊಂಡಿರುವ ವ್ಯಕ್ತಿಗಳಿಗೆಲ್ಲ ಕರೆದು ಊಟ ಹಾಕಿಸುತ್ತಾರೆ.

೫.೧.೩. ಹಬ್ಬಗಳು

ಪಾಂಚಾಳ ಸಮುದಾಯದವರು ಬಡಗಿತನ, ಕಮ್ಮಾರಿಕೆ, ಅಕ್ಕಸಾಲಿಕೆ, ಕಂಚುಗಾರಿಕೆ ಹಾಗೂ ಶಿಲ್ಪಿ ಈ ವೃತ್ತಿಗಳನ್ನೇ ಪ್ರಧಾನವಾಗಿ ಮಾಡುತ್ತ ಬಂದಿರುವ ಇವರಿಗೆ ಬಿಡುವಿನ ವೇಳೆ ಅತ್ಯಂತ ಕಡಿಮೆ. ಅನುಗಾಲವೂ ಈ ವೃತ್ತಿಗಳಲ್ಲಿ ಕೆಲಸಯಿದ್ದೆಯಿರುತ್ತದೆ. ಇಂತಹ ಸಂದರ್ಭಗಳಲ್ಲಿಯೂ ಸುಖ-ಸಂತೋಷಗಳಿಂದಿರಲು ಕೆಲವು ದಿನಗಳನ್ನು ಗುರುತಿಸಿಕೊಂಡಿದ್ದಾರೆ. ಅವುಗಳೇ ಹಬ್ಬ ಹರಿದಿನಗಳು ಎಂದು ಕರೆಯಬಹುದು.

'ಹಬ್ಬ ಎಂದರೆ ಧಾರ್ಮಿಕ ವಿಧಿಗಳಿಗನುಸಾರವಾಗಿ ಆಚರಿಸುವ ಒಂದು ವಿಶಿಷ್ಟವಾದ ದಿನ. ಪರ್ವಕಾಲ, ಉತ್ಸವ, ತೃಪ್ತಿ, ಔತಣ'[೬] ಎಂದಿದ್ದಾರೆ. ಹಬ್ಬ ಎಂಬ ಪದವು ಸಂಸ್ಕೃತದ 'ಪರ್ವನ್' ಶಬ್ದದ ತದ್ಭವ ರೂಪ. ಪರ್ವ ಎಂದರೆ ಒಂದು ಮತ್ತೊಂದರ ಜೊತೆಗೆ ಸಂಧಿಸುವುದು ಎಂದರ್ಥ. ಸೂರ್ಯ ಚಂದ್ರರ ದಿಕ್ಕು ಬದಲಾಗುವುದೇ ಪರ್ವ. ಅದನ್ನೇ ನಮ್ಮ ಪೂರ್ವಜರು ಅಮವಾಸ್ಯೆ, ಹುಣ್ಣಿಮೆಯೆಂದು ಹೆಸರಿಸಿಕೊಂಡಿದ್ದಾರೆ. ಮಾನವ ತನ್ನ ಬಯಕೆಗಳ ಈಡೇರಿಕೆಗಾಗಿ ಒಂದು ಸಿಮೀತವಾದ ಅವಧಿಯಲ್ಲಿ ಕೈಗೊಳ್ಳುವ ಹರಕೆ, ರೂಢಿ ಸಂಪ್ರದಾಯ, ಆಚರಣೆ, ಉತ್ಸವಗಳೇ ಹಬ್ಬಗಳಾಗಿವೆ. ಮಹಾಕವಿ ಕಾಳಿದಾಸ ತನ್ನ 'ವಿಕ್ರಮೋರ್ವಶಿಯ' ಕೃತಿಯಲ್ಲಿ 'ಉತ್ಸವ ಪ್ರಿಯಾಹಿ ಮನುಷ್ಯ' ಎಂದು ಹೇಳಿದ್ದನ್ನು ನೋಡಿದರೆ ಮಾನವ ಐಹಿಕ ಸುಖ, ಸಂತೋಷ, ಮುಕ್ತಿ ಸಾಧನೆಗಾಗಿ ಹಬ್ಬದ ಆಚರಣೆಯಲ್ಲಿ ಬಂದಂತೆ ತೋರುತ್ತದೆ. ಸಮಾಜದಲ್ಲಿ ಹಾನಿಯುಂಟಾದಾಗ ನಾನಾರೂಪಗಳಿಂದ ಅವತರಿಸಿ ಸಮಾಜವನ್ನು ಕಾಪಾಡಿದ್ದಕ್ಕೆ ಅವನ ರೂಪವನ್ನು ಸ್ಮರಿಸಿ ಅವನಿಗೆ ಎಲ್ಲರೂ ಕೃತಜ್ಞತೆ ಅರ್ಪಿಸುವರು. ಈ ತೆರನಾದ ದಿವಸಗಳನ್ನು ನಮ್ಮ ಜನಪದರು ಹಬ್ಬ-ಹರಿದಿನಗಳೆಂದು ಕರೆಯುತ್ತ ಬಂದಿರಬೇಕು. "ಮಾನವ ತನ್ನ ಲೌಕಿಕ ಜೀವನದಿಂದ ಅಲೌಕಿಕ ಜೀವನದತ್ತ ಮುನ್ನೆಡೆಯಲು ಸನಾತನವಾಗಿ ಆಚರಿಸುತ್ತ ಬಂದ ಈ ಹಬ್ಬಗಳು ಸಹಾಯಕವಾಗಿವೆ. ಹೀಗಾಗಿ ಹಬ್ಬದ ದಿನವೆಂದರೆ ಪವಿತ್ರ ದಿನವಾಗಿವೆ. ಅದನ್ನು ಬಡವ ಬಲ್ಲಿದರೆನ್ನದೆ ಎಲ್ಲರೂ ಹರುಷದಿಂದ ಆಚರಿಸುತ್ತಾ ಬಂದಿದ್ದಾರೆ."[೭]

'ಬಾಗ್ಸ್' ಎಂಬ ವಿದ್ವಾಂಸರು ಹಬ್ಬವನ್ನು ಕುರಿತು ಬರೆಯುತ್ತ 'Festival is a complex unit of cystoms and other folkore to celebrate a special accasion, usually annually: and the public interest'[೮] ಎಂದು ಹೇಳಿದ್ದಾರೆ. ಸಮಾಜದ ಒಳಿತಿಗಾಗಿ ಮತ್ತು ಸಾಮಾಜಿಕ ಹೊಂದಾಣಿಕೆಗಾಗಿ ಪ್ರತಿವರ್ಷ ವಿಶೇಷ ದಿನಗಳಲ್ಲಿ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬಗಳು. ಹಬ್ಬ ಸಾಮಾನ್ಯವಾಗಿ ಸಾಮೂಹಿಕ ಸ್ವರೂಪದ ಆಚರಣೆಯಾಗಿರುತ್ತದೆ. ತನ್ನ ಬದುಕಿನ ಎಲ್ಲ ಆಗುಹೋಗುಗಳಿಗೂ ದೈವವೇ ಕಾರಣವೆಂದು ನಂಬಿದ ಮಾನವ 'ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನ ನಡೆಸುದುದರ ಫಲದಿಂದಾಗಿ ಹಬ್ಬಗಳು ಹುಟ್ಟಿಕೊಂಡವು'[೯]

ಹಬ್ಬಗಳು ವಿಧಿ ವಿಹಿತವಾದ ಕ್ರಿಯೆಗಳನ್ನೊಳಗೊಂಡಿದ್ದರೂ ಅವುಗಳ ಎಲ್ಲಾ ನಡಾವಳಿಗಳೂ ವಿಧಿವಿಹಿತವಾಗಿರುವುದಿಲ್ಲ. ಸಮಾಜ ನಿಯಮಿಸಿದ ಕೆಲವು ಕಟ್ಟಳೆಗಳಷ್ಟನ್ನೆ ಅವು ಒಳಗೊಂಡಿರಬಹುದು. ಹಬ್ಬ, ಆಚರಣೆ ಮುಕ್ಕಾಲು ಪಾಲು ವ್ಯಕ್ತಿಗೆ ಅಥವಾ ಘಟನೆಗೆ ನಿರ್ದೇಶಿತವಾಗಿರುತ್ತದೆ. ಆದರೆ ಎಲ್ಲ ಹಬ್ಬಗಳ ನಡಾವಳಿಗಳು ನೇರ ಸಾಂಕೇತಿಕ ಸಂಬಂಧವನ್ನು ಹೊಂದಿರುತ್ತವೆಂದು ಹೇಳಲಾಗುವುದಿಲ್ಲ. ಉಳಿದು ಬಂದಿರುವ ಹಬ್ಬಗಳು ತಮ್ಮ ಮೂಲರೂಪದಲ್ಲಿ ಆಚರಣೆಗೊಳ್ಳುತ್ತಿದ್ದರು ಮೂಲ ಉದ್ದೇಶಗಳನ್ನು ಕಳೆದುಕೊಂಡಿರುವವು.

ಪ್ರತಿಯೊಂದು ಸಮುದಾಯದಲ್ಲಿ ತಮ್ಮದೇ ಆದ ರೂಢಿ ಸಂಪ್ರದಾಯ, ಸಂಸ್ಕೃತಿ, ಆಚಾರ, ವಿಚಾರ, ವೇಷಭೂಷಣ, ಊರದೇವತೆ, ನಾಡದೇವತೆ, ಆರಾಧ್ಯ ದೇವರು, ಕುಲದೇವರುಗಳೆಂದು ಹಲವಾರು ರೀತಿಗಳಲ್ಲಿ ತಮ್ಮ ತಮ್ಮ ಸಂಪ್ರದಾಯಕ್ಕನುಗುಣವಾಗಿ ಹಬ್ಬ, ಪೂಜೆ, ಪುರಸ್ಕಾರ, ಸಂಭ್ರಮವನ್ನು ಆಚರಿಸಿಕೊಳ್ಳುತ್ತ ಬಂದಿರುವುದನ್ನು ಕಾಣುತ್ತೇವೆ. ಏಕೆಂದರೆ ಭಾರತವು ವಿವಿಧ ಧರ್ಮ ಮತ್ತು ಜಾತಿಗಳ ಸಂಗಮ ಕ್ಷೇತ್ರವಾಗಿದೆ. ಈ ರೀತಿಯಾಗಿ ಪಾಂಚಾಳ ಸಮುದಾಯವು ವೃತ್ತಿ ದೈವಾಚರಣೆ, ಊರದೇವತೆಯಾಚರಣೆ, ವಾರ್ಷಿಕ ಆಚರಣೆಗಳು ಇತ್ಯಾದಿಯಾಗಿ ಮುಂದುವರೆಸಿಕೊಂಡು ಬಂದಿದ್ದಾರೆ. ಇವು ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗುತ್ತವೆ. ಮನುಷ್ಯನಿಗೆ ಆರೋಗ್ಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಅಂಶಗಳನ್ನು ಈ ಹಬ್ಬಗಳಿಂದ ಪಡೆದುಕೊಳ್ಳಬಹುದಾಗಿದೆ.

೧. ನಾಗರ ಪಂಚಮಿ

ಈ ಹಬ್ಬವನ್ನು ನಾಗರ ಪಂಚಮಿ, ಪಂಚಮಿ ಹಬ್ಬ, ಜೋಕಾಲಿ ಹಬ್ಬ ಎಂಬಿತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಭಕ್ತಿ, ಭಯ, ಶ್ರದ್ಧೆಗಳಿಂದ ನಾಗರ ಪಂಚಮಿಯನ್ನು ಎಲ್ಲಾ ಸಮುದಾಯಗಳು ಶ್ರಾವಣ ಮಾಸದ ಶುಕ್ಲ ಪಕ್ಷದ ಪಂಚಮಿ ಹಾಗೂ ಚೌತಿ ದಿವಸಗಳಂದು ಹಬ್ಬವನ್ನು ಆಚರಿಸುವರು. ಮುಖ್ಯವಾಗಿ ಎಲ್ಲ ಸಮುದಾಯಗಳು ಈ ಹಬ್ಬದ ಬಗ್ಗೆ ಇಟ್ಟಿರುವ ನಂಬಿಕೆ ಎಂದರೆ ಹಾವುಗಳು ನಮ್ಮನ್ನು ಕಚ್ಚದಿರಲಿ, ಮೈಯಲ್ಲಿರುವ ವಿಷಭಾದೆ ಪರಿಹಾರವಾಗಲಿ, ಚರ್ಮರೋಗಗಳು ಬಾರದಂತೆ ಇರಲಿ, ಸಂತಾನ ಭಾಗ್ಯ, ಧನಪ್ರಾಪ್ತಿ ಉಂಟಾಗಲಿ ಹಾಗೂ ಸ್ವರ್ಗ ಪ್ರಾಪ್ತಿಯಾಗಲಿ ಎಂಬ ನಂಬಿಕೆಗಳಿಂದ ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವರು.

ನಾಗರ ಪಂಚಮಿಯು ಇನ್ನು ಮೂರು-ನಾಲ್ಕು ದಿವಸವಿರುವಾಗಲೇ ತಂದೆ-ತಾಯಿಯರು ತಮ್ಮ ಹೆಣ್ಣು ಮಕ್ಕಳನ್ನು ಗಂಡನ ಮನೆಯಿಂದ ತವರು ಮನೆಗೆ ಕರೆದುಕೊಂಡು ಬರುತ್ತಾರೆ. ಕರೆದುಕೊಂಡು ಬಂದಂತಹ ಹೆಣ್ಣುಮಕ್ಕಳೆಲ್ಲರೂ ಸಂತೋಷದಿಂದ ಕೂಡಿ

"ನಾಗರ ಪಂಚಮಿ ನಾಡಿಗೆ ದೊಡ್ಡದು, ನಾಡನಾರಿಯರು ಕೂಡೋಣ

ನಾಡನಾರಿಯರು ಕೂಡೋಣ ನಾಗಪ್ಪನಿಗೆ ಹಾಲು ಹೊಯ್ಯೋಣ" ಎಂದು ಹಳ್ಳಿಗಾಡುಗಳಲ್ಲಿ ಹೆಣ್ಣು ಮಕ್ಕಳು ಹಾಡಿಕೊಳ್ಳುತ್ತಾರೆ.

ವ್ರತವನ್ನು ಆಚರಿಸುವ ವಿಧಿವಿಧಾನಗಳಲ್ಲಿ ಸಮುದಾಯದಿಂದ ಸಮುದಾಯಕ್ಕೆ ಕೆಲವು ವ್ಯತ್ಯಾಸಗಳಿವೆ. ಪಾಂಚಾಳ ಸಮುದಾಯದಲ್ಲಿ ನಾಗಪ್ಪನಿಗೆ ಹಾಲನ್ನು ಚೌತಿಯ ದಿವಸದಂದು ಎರೆಯುತ್ತಾರೆ. ಪಂಚಮಿಯ ದಿವಸ ಹಾಲನ್ನು ಎರೆಯುವುದು ತುಂಬ ವಿರಳ. ಅಮವಾಸ್ಯೆಯಾದ ಮೂರನೆಯ ದಿನದಂದು ಅಂದರೆ ಬಿಂದಿಗೆಯ ದಿವಸ ರೊಟ್ಟಿ ಹಬ್ಬವನ್ನು, ನಾಲ್ಕನೆಯ ದಿವಸ ಅಂದರೆ ಚೌತಿಯ ದಿನದಂದು ನಾಗಪ್ಪನಿಗೆ ಹಾಲು ಎರೆಯುವುದು, ಐದನೆಯ ದಿವಸ ಅಂದರೆ ಪಂಚಮಿ ದಿನದಂದು ಹೊಲಕ್ಕೆ ಪೂಜೆ ಮಾಡುವ ಸಂಪ್ರದಾಯ ಈ ಮೂರು ದಿನಗಳ ಕಾಲ ಈ ಹಬ್ಬವನ್ನು ಪಾಂಚಾಳರು ಆಚರಿಸುತ್ತಾರೆ.

ತವರಿಗೆ ಬಂದ ಹೆಣ್ಣು ಮಕ್ಕಳು ಹಾಗೂ ತಾಯಿ ಸೇರಿ ಹಬ್ಬಕ್ಕೆ ಬೇಕಾದ ಪರಿಕಾರಗಳನ್ನು ಮಾಡಿಕೊಳ್ಳುತ್ತಾರೆ. ರೊಟ್ಟಿಯ ಹಬ್ಬಕ್ಕೆ ಬೇಕಾದಂತಹ ಕಾಳುಗಳು, ಪುಡಿಗಳು, ಸಜ್ಜೆರೊಟ್ಟಿ, ಹುಂಡಿಗೆ ಸಂಬಂಧಿಸಿದಂತೆ ಕಡ್ಲಿ, ಎಳ್ಳು, ಸಜ್ಜೆ, ನವಣೆ, ಹುರುಕಡ್ಲಿ ಈ ಎಲ್ಲಾ ದಾನ್ಯಗಳನ್ನು ತಯಾರು ಮಾಡಿಕೊಂಡಿರುತ್ತಾರೆ. ಅಮವಾಸ್ಯೆಯ ಮೂರನೆಯ ದಿನದಂದು ರೊಟ್ಟಿಹಬ್ಬವನ್ನು ಮಾಡುತ್ತಾರೆ. ಈ ಹಬ್ಬದ ದಿವಸ ಊಟಕ್ಕೆ ಸಜ್ಜೆಯ ರೊಟ್ಟಿ, ವಿವಿಧ ದಿನಸುಗಳಿಂದ ಮಾಡಿದ ಪಲ್ಯ, ಪುಡಿಗಳು ಹಾಗೂ ಚಿತ್ರಾನ್ನವನ್ನು ಮಾಡಿರುತ್ತಾರೆ. ಈ ಎಲ್ಲಾ ಪರಿಕರಗಳನ್ನು ಮನೆಯ ದೇವರಿಗೆ ನೈವೇದ್ಯವನ್ನು ಹಾಕಿ ಮನೆಯವರೆಲ್ಲರೂ ಸೇರಿ ಭಕ್ಷ್ಯ ಭೋಜನವನ್ನು ಸವಿಯುವರು.

ರೊಟ್ಟಿ ಹಬ್ಬದ ದಿನದ ರಾತ್ರಿ ನಾಗಪ್ಪನ ಪೂಜೆಗಾಗಿ ಉಂಡಿಗಳು, ಕರೆದಂಟು, ಅಳ್ಳಿಟ್ಟು-ತಂಬಿಟ್ಟು, ಕರ್ಚಿಕಾಯಿ ಹಾಗೂ ಗಾರಿಗೆಗಳನ್ನು ಮಾಡುತ್ತಾರೆ. ಚೌತಿಯ ದಿನದಂದು ಮನೆಯ ಹೆಣ್ಣು ಮಕ್ಕಳು ಬಾಗಿಲ ಮುಂದಿನ ಅಂಗಳವನ್ನು ಗೋಮಯವಿಂದ ಸಾರಿಸಿ, ನಾಗಚಿತ್ರಗಳನ್ನು ರಂಗೋಲಿಯಲ್ಲಿ ಬಿಡಿಸುತ್ತಾರೆ. ಮನೆಯ ಹುಡುಗರು ಮಾವಿನ ಮರದ ಎಲೆಯನ್ನು ಹರಿದುಕೊಂಡು ಬಂದು ಬಾಗಿಲುಗಳಿಗೆ ತೋರಣ ಮಾಡಿ ಕಟ್ಟುತ್ತಾರೆ. ಇದರ ಜೊತೆಗೆಯೇ ನಾಗಪ್ಪನಿಗೆ ಹಾಲು ಎರೆಯಲು ಮಾವಿನ ಎಲೆಯಿಂದ ಚಮಚವನ್ನು ಮಾಡುತ್ತಾರೆ. ನಾಗರ ಹುತ್ತಿನ ಮಣ್ಣನ್ನು ತೆಗೆದುಕೊಂಡು ಬಂದು ಮಣ್ಣನ್ನು ಹದ ಮಾಡಿ ನಾಗಮೂರ್ತಿಯನ್ನು ಮಾಡುತ್ತಾರೆ. ಈ ನಾಗಮೂರ್ತಿಗೆ ಹತ್ತಿಯಿಂದ ಮಾಡಿದ ಸರ ಹಾಗೂ ಜನಿವಾರಕ್ಕೆ ಭಂಡಾರ, ಕುಂಕುಮ, ಗಂಧವನ್ನು ಹಚ್ಚಿ ಮೂರ್ತಿಗೆ ಹಾಕುವರು. ನಂತರ ನಾಗಮೂರ್ತಿಯನ್ನು ದೇವರ ಜಗುಲಿಯ ಮೇಲೆ ಒಂದು ತಟ್ಟೆಯಲ್ಲಿಡುವರು. ವೀಳ್ಯಾದೆಲೆಯಲ್ಲಿ ಎಳ್ಳುಹುಂಡಿ, ಹಳ್ಳಿಟ್ಟು-ತಂಬಿಟ್ಟು ಅಡಕೆಯನ್ನಿಟ್ಟು ನಾಗಮೂರ್ತಿಯ ಮುಂದೆ ಇಡುವರು. ಮನೆಯಲ್ಲಿ ಬೆಳೆಸಿದ ರಾಗಿಸಸಿ ಹಾಗೂ

ಗೋಧಿಸಸಿಗಳನ್ನು ನಾಗಮೂರ್ತಿಗೆ ಇಡುವರು. ನಂತರ ಮನೆಯವರೆಲ್ಲರೂ ಸೇರಿ ಪೂಜೆ ಮಾಡಿ, ನೈವೇದ್ಯ ಹಾಕಿ ಹಾಲೇರೆಯುವರು. ಹಾಲೆರೆಯುವ ಸಂದರ್ಭದಲ್ಲಿ ಇದು ನನ್ನ ಪಾಲು, ಇದು ನಮ್ಮ ಅಪ್ಪನ ಪಾಲು, ಇದು ನಮ್ಮ ಅವ್ವನ ಪಾಲು, ಇದು ನಮ್ಮ ಅಣ್ಣನ ಪಾಲು, ಇದು ನನ್ನ ತಮ್ಮನ ಪಾಲು, ಇದು ನಮ್ಮ ತಂಗಿಯ ಪಾಲು, ಇದು ನಮ್ಮ ಮಗನ ಪಾಲು ಹೀಗೆ ಹೇಳುತ್ತ ನಾಗ ಮೂರ್ತಿಗೆ ಹಾಲೇರೆಯುವರು. ಹಾಲೇರೆದ ನಂತರ ಮನೆಯವರೆಲ್ಲರೂ ಬಲಗೈಗೆ ದಾರವನ್ನು ಕಟ್ಟಿಕೊಳ್ಳುತ್ತಾರೆ. ಈ ದಾರಕ್ಕೆ ನಾಗಪ್ಪನ ದಾರ ಎಂದು ಕರೆಯುತ್ತಾರೆ. ದಾರಕ್ಕೆ ಅರಿಶಿಣ, ಕುಂಕುಮ, ಗಂಧವನ್ನು ಲೇಪಿಸಿ ನಾಗಮೂರ್ತಿಯ ಮೇಲೆ ಹಾಕಿ ತಮ್ಮ ಕೈಗೆ ಮನೆಯವರೆಲ್ಲರೂ ಕಟ್ಟಿಕೊಳ್ಳುತ್ತಾರೆ. ಇದರಿಂದ ನಮಗೆ ಯಾವುದೇ ಪೀಡೆ, ಪಿಶಾಚಿ, ರೋಗಗಳು ಅಂಟುವುದಿಲ್ಲ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ನಂತರ ಮನೆಯವರೆಲ್ಲರೂ ವಿವಿಧ ಧಾನ್ಯಗಳಿಂದ ಮಾಡಿದ ಉಂಡಿಗಳನ್ನು ಊಟ ಮಾಡುವರು. ಸಾಯಂಕಾಲ ಹಬ್ಬದ ಸಂತೋಷಕ್ಕಾಗಿ ಸಮುದಾಯದವರೆಲ್ಲರೂ ಸೇರಿ ಮೋಜಿನ ಆಟಗಳಲ್ಲಿ ತೊಡಗುವರು.

ಪಂಚಮಿಯ ದಿವಸ ಹೊಲದಲ್ಲಿ ಬೆಳೆದ ಪೈರುಗಳಿಗೆ ನೈವೇದ್ಯವನ್ನು ಮಾಡುವರು. ಹೊಲದಲ್ಲಿ ಬೆಳೆದ ಪೈರುಗಳಿಗೆ ಹೋಳಿಗೆ ಸಿಕಣಿ ಅನ್ನ-ಸಾಂಬರು, ಕೊಸಂಬರಿ, ಇವುಗಳೆಲ್ಲವನ್ನು ತೆಗೆದುಕೊಂಡು ಹೋಗಿ ಹೊಲದಲ್ಲಿರುವ ಭರಮಪ್ಪ, ಬನ್ನಿಮರ (ಕಾಳಿಕದೇವಿ) ಇವುಗಳಿಗೆ ಪೂಜೆ ಮಾಡಿ ಬರುವರು. ನಂತರ ಪ್ರತಿ ಶ್ರಾವಣ ಸೋಮವಾರದಂದು ನಾಗಮೂರ್ತಿ ಪೂಜೆ ಮಾಡಿ ಕಡೆಯ ಸೋಮವಾರದಂದು ನಾಗಮೂರ್ತಿಯನ್ನು ಬಾವಿಗೆ ಬಿಟ್ಟು ಬರುತ್ತಾರೆ. ಪಾಂಚಾಳರು ಈ ಮೂರು ದಿನಗಳ ಕಾಲ ವೃತ್ತಿಯ ಕೆಲಸವನ್ನು ಮಾಡುವುದಿಲ್ಲ. ಈ ಸಮುದಾಯದಲ್ಲಿ ಚೌತಿಯ ದಿವಸದಂದೆ ನಾಗಪ್ಪನಿಗೆ ಹಾಲೇರೆಯುತ್ತಾರೆ ಆದರೆ ಇನ್ನುಳಿದ ಸಮುದಾಯದವರು ಪಂಚಮಿಯ ದಿವಸದಂದು ನಾಗಪ್ಪನಿಗೆ ಹಾಲೇರೆಯುತ್ತಾರೆ.

೨. ದೀಪಾವಳಿ

ದೀಪಾವಳಿ ಎಂದರೆ ಬೆಳಕಿನ ಹಬ್ಬ, ಪಟಾಕಿ ಹಬ್ಬವೆಂದೆ ಪ್ರಸಿದ್ಧಿ ಪಡೆದಿದೆ. ಪಾಂಚಾಳರು ಈ ಹಬ್ಬವನ್ನು ಅವರವರ ಅನುಕೂಲಕ್ಕೆ ತಕ್ಕಂತೆ ಅನುಸಾರವಾಗಿ ಆಚರಿಸುತ್ತಾರೆ. ಆಶ್ವಯುಜ ಕೃಷ್ಣ ತ್ರಯೋದಶಿ ಅಮವಾಸ್ಯೆ ದಿವಸದಂದು ಮನೆಯಲ್ಲಿ ಮಡಿ ಮೈಲಿಗೆಯಿಂದ ಲಕ್ಷ್ಮಿ ಪೂಜೆಯನ್ನು ಪೂಜಿಸುತ್ತಾರೆ. ಈ ಹಬ್ಬಕ್ಕೆ ವಿಶೇಷವಾಗಿ ತವರು ಮನೆಗೆ ಬಂದಂತಹ ಹೆಣ್ಣು ಮಕ್ಕಳು ತಮ್ಮ ಸಹೋದರರಿಗೆ ಆರತಿಯನ್ನು ಬೆಳಗಿ ಶುಭ ಹಾರೈಸುವರು. ಇದರ ಖುಷಿಗಾಗಿ ಆರತಿ ತಟ್ಟೆಗೆ ತಮಗೆ ತಿಳಿದಷ್ಟು ಹಣವನ್ನು ಹಾಕುತ್ತಾರೆ.

ಅಮವಾಸ್ಯೆಯ ದಿನ ಬೆಳಗ್ಗೆಯೇ ಮನೆಯನ್ನೆಲ್ಲಾ ಶುಚಿಗೊಳಿಸಿ ಮನೆಯ ಮುಂದಿನ ಅಂಗಳವನ್ನು ಗೋಮಯದಿಂದ ಸಾರಿಸುವರು. ತಾಮ್ರ ಇಲ್ಲವೆ ಸ್ಟೀಲ್ ಬಿಂದಿಗೆಯಲ್ಲಿ ಮಡಿಯಿಂದ ತಂದಿರುವ ನೀರನ್ನು ತುಂಬಿ ಆ ಬಿಂದಿಗೆ ಕಂಟದ ಸುತ್ತಲೂ ವೀಳ್ಯಾದೆಲೆಯನ್ನು ಇಟ್ಟು ಅದರ ಮೇಲೆ ಟೆಂಗಿನಕಾಯಿ ಇಡುತ್ತಾರೆ. ಕಾಯಿಯ ಮೇಲೆ ಕುಪ್ಪಸದ ಬಟ್ಟೆಯನ್ನು ಹಾಕಿ ಅದರ ಮೇಲೆ ಬಂಗಾರದ ಒಡವೆಗಳು ಹಾಗೂ ಅಂಗುನೂಲನ್ನು ಹಾಕುತ್ತಾರೆ. ಇದನ್ನು ದೇವರ ಜಗುಲಿಯ ಮೇಲೆ ಅಕ್ಕಿಕಾಳುಗಳನ್ನು ಹಾಕಿ

ಅದರ ಮೇಲೆ ಕಳಶ ತುಂಬಿ ಬಿಂದಿಗೆಯನ್ನು ಇಡಲಾಗುತ್ತದೆ. ಇದರ ಮುಂದೆ ದೀಪವನ್ನು ಹಚ್ಚುತ್ತಾರೆ. ಒಂದು ತಟ್ಟೆಯಲ್ಲಿ ಹಣ, ಹೂವು, ಹಣ್ಣುಗಳನ್ನಿಟ್ಟು, ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸುವರು. ಪೂಜೆಯ ಸಮಯದಲ್ಲಿ ಬಂದವರಿಗೆ ಫಳಾರವನ್ನು ಹಂಚುತ್ತಾರೆ. ಈ ದಿವಸ ಲಕ್ಷ್ಮಿಯನ್ನು ಪೂಜಿಸಿದರೆ ದಾರಿದ್ರ್ಯ, ದುರದೃಷ್ಟಗಳು ಪರಿಹಾರವಾಗುತ್ತವೆ ಎಂದು ನಂಬಿಕೊಂಡು ಬಂದಿದ್ದಾರೆ.

೩. ಮಹಾಶಿವರಾತ್ರಿ

ಈ ಹಬ್ಬವನ್ನು ಮಹಾಶಿವರಾತ್ರಿ, ಶಿವರಾತ್ರಿ ಹಾಗೂ ಜಾಗರಣೆ ಎಂದು ಕರೆಯುತ್ತಾರೆ. ಮಹಾಶಿವರಾತ್ರಿಯನ್ನು ಪ್ರಾಂತ ಭೇದವಿಲ್ಲದೆ ದೇಶಾದ್ಯಂತ ಆಚರಿಸುವ ಪ್ರಧಾನವಾದ ಹಬ್ಬ. ಇಂದ್ರೀಯ ಖಂಡನೆ, ದೇಹದಂಡನೆಗೆ ಇಲ್ಲಿ ಪ್ರಾಶಸ್ತ್ಯ. ಶಿವನನ್ನು ಆರಾಧಿಸುವ ಮುಖಾಂತರ ಜಗತ್ತಿನ ಕ್ಷಾಮ ದೂರವಾಗಿ ಶಾಂತಿ ನೆಲೆಸಲು, ನಮ್ಮ ಮುಖ ಶವಮುಖವಾಗದೆ ಶಿವಮುಖವಾಗಲು, ನಮ್ಮ ಬಾಳು ಬೀಳಾಗದೆ ಬಂಗಾರವಾಗಲು, ನರ ಹರನಾಗಲು, ಪಶುತ್ವ ಕಳೆದುಕೊಂಡು ಪಶುಪತಿಯತ್ತ ಸಾಗಲು ಪಾಂಚಾಳರು ಈ ಆಚರಣೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿ ಆರಾಧಿಸುವ ಆರಾಧ್ಯ ದೇವ ಶಿವ. ಅಂದರೆ ಜೀವವನ್ನೇ ಸೃಷ್ಟಿಸಿದ ವಿಶ್ವಕರ್ಮ. ಅಂದರೆ ಕುಲದೇವ. ಮಾಘಮಾಸ ಕೃಷ್ಣ ಪಕ್ಷದ ಚತುದರ್ಶಿಯಂದು ಶಿವನಿಗೆ ಪ್ರಿಯವಾದ ಶಿವರಾತ್ರಿ. ಶಿವರಾತ್ರಿಯೆಂದು ಉಪವಾಸವೇ ಮುಖ್ಯವಾಗಿರುವುದರಿಂದ ರಾತ್ರಿ ಪುರಾ ಬಿಲ್ವಪತ್ರೆಗಳಿಂದ ಶಿವನನ್ನು ಪೂಜಿಸಿ ಅವನ ಕೃಪೆಗೆ ಪಾತ್ರರಾಗುತ್ತಾರೆ.

ಪಾಂಚಾಳ ಸಮುದಾಯದಲ್ಲಿ ಶಿವರಾತ್ರಿಯ ದಿನ ಮನೆಯವರೆಲ್ಲರೂ ಸೇರಿ ಶಿವಾಲಯಕ್ಕೆ ಹೋಗಿ ರುದ್ರಾಭಿಷೇಕ ಪೂಜೆ ಹಾಗೂ ಹರಿಕಥೆಯನ್ನು ಪಠಣ ಮಾಡಿ, ವಿವಿಧ ಫಲಾಹಾರಗಳನ್ನು ಶಿವನಿಗೆ ನೈವೇದ್ಯ ಮಾಡುತ್ತಾರೆ. ನಾನಾ ವಿಧದ ಪಾಪಕರ್ಮಗಳಿಂದ ಭವಬಂಧನದಲ್ಲಿ ಸಿಲುಕಿದ ನನ್ನನ್ನು, ಲೋಕಕ್ಕೇ ಸುಖ ಕೊಡುವ ಸ್ವಾಮಿಯಾದ ನೀನು ಕಾಪಾಡು ಎಂದು ಬೇಡಿಕೊಳ್ಳುವರು. ನಂತರ ಮನೆಗೆ ಬಂದು ಮನೆಯಲ್ಲಿ ಮಾಡಿದ ವಿವಿಧ ಭಕ್ಷ್ಯ ಬೋಜನಗಳನ್ನು ಸವಿಯುವರು. ಇಡೀ ರಾತ್ರಿ ಶಿವ ಲೀಲೆಗಳನ್ನು ಪಠಣಗಳ ಮುಖಾಂತರ ಕೇಳುತ್ತ ಅವನಿಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ.

೪. ಗಣೇಶ ಚತುರ್ಥಿ

ಗಣೇಶ ಚತುರ್ಥಿ ಭಾರತದಲ್ಲಿ ಎಲ್ಲೆಡೆಯೂ ಆಚರಿಸುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಜಾತಿ ಪಂಥದ ಭೇದವಿಲ್ಲದೆ ಎಲ್ಲಾ ಹಿಂದುಗಳ ಮನೆಗಳಲ್ಲಿಯೂ ಆರಾಧಿಸಲ್ಪಡುವ ದೇವರು. ಗಣಪತಿ ಹಬ್ಬವನ್ನು ಪಾಂಚಾಳರು ಮೂರು ದಿನಗಳ ಕಾಲ ಆಚರಿಸುತ್ತಾರೆ. ಬಹುತೇಕವಾಗಿ ಗಣಪತಿಯನ್ನು ಮಣ್ಣಿನಿಂದ ಇವರೆ ನಿರ್ಮಾಣ ಮಾಡಿ ಅವುಗಳನ್ನು ಮಾರಾಟ ಮಾಡುತ್ತಾರೆ. ಗಣೇಶ ಚೌತಿ ಇನ್ನೂ ಹತ್ತಿರ ಬಂತು ಎನ್ನುವಷ್ಟರಲ್ಲೇ ವಿವಿಧ ಆಕೃತಿಗಳಲ್ಲಿ ಗಣೇಶನ ಪ್ರತಿಮೆಗಳನ್ನು ಮಾಡಿ ಇಟ್ಟುಕೊಂಡಿರುತ್ತಾರೆ. ಗಣೇಶನ ಹಬ್ಬ ಬರುತ್ತಿದ್ದಂತೆ ಗಣೇಶನ ಪ್ರತಿಮೆಗಳ ಮಾರಾಟದ ಭರಾಟೆ ಹೆಚ್ಚುತ್ತದೆ. ಚಿಕ್ಕ, ದೊಡ್ಡ, ಆಳೆತ್ತರದ ಗಣೇಶನ ಪ್ರತಿಮೆಗಳನ್ನು ನೋಡುವುದೇ ಖುಷಿ, ಸಂಭ್ರಮ. ಈ ವಿಗ್ರಹಗಳ ಆಕೃತಿಯ

ಮೇಲೆ ಅವುಗಳ ಬೆಲೆಯನ್ನು ಪಾಂಚಾಳರು ನಿಗದಿಪಡಿಸಿರುತ್ತಾರೆ. ವೃತ್ತಿಯ ಕೆಲಸದ ಜೊತೆಗೆ ಇಂತಹ ಹಬ್ಬಗಳಿಗೆ ಬೇಕಾದ ಪ್ರತಿಮೆಗಳನ್ನು ಮಾಡುವುದರಲ್ಲಿಯೂ ಕರಗತವನ್ನು ಪಡೆದಿರುತ್ತಾರೆ.

ಗಣೇಶ ಚೌತಿಯ ಮುನ್ನವೇ ಪಾಂಚಾಳ ಸಮುದಾಯದಲ್ಲಿ ಮನೆಯನ್ನೆಲ್ಲಾ ಶುಚಿಗೊಳಿಸುತ್ತಾರೆ. ಚೌತಿಯ ದಿವಸದಂದು ಗಣೇಶನ ಪ್ರತಿಮೆಯನ್ನು ಪೂಜಿಸಲು ಮಂಟಪವನ್ನು ಮಾಡುತ್ತಾರೆ. ಈ ಮಂಟಪವನ್ನು ಹೂವು, ವಿದ್ಯುತ್ ದೀಪಗಳಿಂದ, ಆಟಿಕೆ ಸಾಮಾನುಗಳಿಂದ ಅಲಂಕಾರಗೊಳಿಸುತ್ತಾರೆ. ಆ ದಿವಸದಂದು ಗಣೇಶನ ನೈವೇದ್ಯಕ್ಕಾಗಿ ವಿವಿಧ ಭಕ್ಷ ಭೋಜನವನ್ನು ಮಾಡಿರುವರು. ಮನೆಯವರೆಲ್ಲರೂ ಸೇರಿ ಅಲಂಕಾರಗೊಂಡ ಮಂಟಪದೊಳಗೆ ಶುಭ ಮುಹೂರ್ತದ ಸಂದರ್ಭದಲ್ಲಿ ಗಣೇಶನ ಪ್ರತಿಮೆಯನ್ನಿಟ್ಟು ಡುತ್ತಾರೆ. ಪ್ರತಿಮೆಯ ಮುಂದೆ ಹಣ್ಣು, ಹಂಪಲ, ಸಿಹಿಪದಾರ್ಥಗಳನ್ನಿಟ್ಟು, ದೀಪವನಚ್ಚಿ, ಷೋಡಶೋಪ ಚಾರಗಳಿಂದ ಅವನನ್ನು ಆರಾಧಿಸಿ ಪೂಜೆ ಮಾಡಿ ಮಂಗಳರಾತಿ ಮಾಡಿ ನೈವೇದ್ಯವನ್ನು ಅರ್ಪಿಸುವರು. ಮನೆಯವರೆಲ್ಲರೂ ಗಣೇಶನ ಪ್ರತಿಮೆಗೆ ಅಕ್ಷತೆ ಕಾಳುಗಳನ್ನು ಹಾಕಿ ನಮಸ್ಕಾರಿಸುವರು. ಗಣೇಶನ ಪ್ರತಿಮೆಯ ಮುಂದೆ ಹಚ್ಚಿರುವ ದೀಪವನ್ನು ಮೂರು ದಿನಗಳ ಕಾಲ ಆರದಂತೆ ನೋಡಿಕೊಳ್ಳುತ್ತಾರೆ. ಗಣೇಶನ ಪ್ರತಿಮೆಯನ್ನು ವಿಸರ್ಜಿಸುವವರೆಗೂ ಮನೆಯ ಬಾಗಿಲ ಕದವನ್ನು ಮುಚ್ಚುವುದಿಲ್ಲ. ಮನೆಯಲ್ಲಿ ಯಾರಾದರೊಬ್ಬರು ಇದ್ದೇ ಇರಬೇಕು. ಗಣೇಶನನ್ನು ಇಟ್ಟ ದಿವಸ ತಮ್ಮ ಊರುಗಳಲ್ಲಿಟ್ಟಿರುವ ಇತರ ಸಮುದಾಯದವರ ಮನೆಗಳಿಗೆ ಹೋಗಿ ಗಣೇಶನ ದರ್ಶನ ಪಡೆದು ಅಕ್ಷತೆಕಾಳು ಹಾಕಿ ಬರುತ್ತಾರೆ. ಪೂಜಾ ಸಂದರ್ಭದಲ್ಲಿ ಮನೆಯ ಹುಡುಗರು ಪಟಾಕಿಯನ್ನು ಹಚ್ಚಿ ಸಂತೋಷ ಪಡುತ್ತಾರೆ.

೪.೧. ಗಣೇಶನ ವಿಸರ್ಜನೆ

ಗಣೇಶನನ್ನು ಪ್ರತಿಷ್ಠಾಪಿಸಿದಂತೆ ವಿಸರ್ಜನೆ ಮಾಡುವುದು ಮುಖ್ಯವಾಗಿರುತ್ತದೆ. ಮೂರು ದಿನಗಳ ಕಾಲ ನಿಯಮ ಪೂರ್ವಕವಾಗಿ ಗಣೇಶನನ್ನು ಪೂಜಿಸುತ್ತಾರೆ. ಮೂರನೆಯ ದಿವಸ ಆತನಿಗೆ ಇಷ್ಟವಾದ ಸಿಹಿ ಪದಾರ್ಥವನ್ನು ಮಾಡಿ ಆತನಿಗೆ ಎಡೆ ಹಾಕುತ್ತಾರೆ. ನಂತರ ಆ ಎಡೆಯನ್ನು ಒಂದು ಶುಚಿಯಾದ ಹರವಿಯಲ್ಲಿ ಹಾಕಿ ಗಂಟು ಕಟ್ಟಿ ತನ್ನ ಎಡಗೈಗೆ ಹರವಿಯನ್ನು ಕಟ್ಟುತ್ತಾರೆ. ಮನೆಯವರೆಲ್ಲರು ಊಟ ಮುಗಿದ ನಂತರ ಗಣೇಶನ ವಿಸರ್ಜನೆ ಮಾಡಲು ತಯಾರಾಗುತ್ತಾರೆ. ಒಂದು ತಟ್ಟೆಯಲ್ಲಿ ಪ್ರತಿಮೆಯನ್ನು ಇಟ್ಟುಕೊಳ್ಳುತ್ತಾರೆ. ಮಂಟಪದಿಂದ ಮನೆಯ ಬಾಗಿಲ ಹೊರಗಡೆಗೆ ಪ್ರತಿಮೆಯನ್ನು ತೆಗೆದುಕೊಂಡ ಬಂದ ಮೇಲೆ ಅಲಂಕಾರಗೊಂಡ ಮಂಟಪಕ್ಕೆ ಪ್ರತಿಮೆಯನ್ನು ಒಂದು ಬಾರಿ ತೋರಿಸುತ್ತಾರೆ. ನಂತರ ಮನೆಯಲ್ಲಿರುವವರು ಒಂದು ಲೋಟದಲ್ಲಿ ನೀರನ್ನು ತೆಗೆದುಕೊಂಡು ಬಂದು ಗಣೇಶನ ಪ್ರತಿಮೆಯನ್ನಿಡಿದುಕೊಂಡ ವ್ಯಕ್ತಿಗೆ ನೀರನ್ನು ಚಿಮುಕಿಸುತ್ತಾರೆ. ಪಕ್ಕದಲ್ಲಿರುವ ಬಾವಿ, ಕೆರೆ, ನದಿ, ಹೊಳೆಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಮಕ್ಕಳೆಲ್ಲರೂ ಪಟಾಕಿಯನ್ನು ಹಚ್ಚಿ ಸಂಭ್ರಮಿಸುವರು. ಬಾವಿಯ ಹತ್ತಿರ ಹೋಗಿ ಅಲ್ಲಿ ಪಶ್ಚಿಮಭಿಮುಖವಾಗಿ ಮೂರ್ತಿಯನ್ನಿಟ್ಟು ಪೂಜೆ ಮಾಡಿ, ಕೊರಳಲ್ಲಿ ಹಾಕಿರುವ ಜನಿವಾರವನ್ನು ತೆಗೆದು 'ಜಯನಮಃ ಪಾರ್ವತಿ ಪತೇರಾಮದೇವಾ' ಎಂದು ಘೋಷಣೆ ಕೂಗುತ್ತ ಮೂರು ಬಾರಿ ಮೇಲಕ್ಕೆ ಕೆಳಗೆ ಮಾಡಿ ಬಾವಿಯೊಳಗೆ ವಿಸರ್ಜಿಸುತ್ತಾರೆ. ನಂತರ ಮನೆಗೆ

ಬಂದು ಮನೆಯ ಅಕ್ಕ ಪಕ್ಕದವರಿಗೆಲ್ಲಾ ಫಳಾರವನ್ನು ಹಂಚುವರು. ಈ ಹಬ್ಬವನ್ನು ಮಾಡುವ ಉದ್ದೇಶವೆಂದರೆ ಗಣೇಶ ಭೂಲೋಕಕ್ಕೆ ಬಂದು ಇಲ್ಲಿಯ ಜನರ ಯೋಗಕ್ಷೇಮವನ್ನು ವಿಚಾರಿಸಿಕೊಂಡು (ಯೋಗಕ್ಷೇಮ : ಜನರು ಅನುಭವಿಸುವ ಕಷ್ಟ-ಸುಖ ಇತ್ಯಾದಿ) ಕೈಲಸಾದಲ್ಲಿ ತನ್ನ ತಂದೆಗೆ ಜನರು ಅನುಭವಿಸುವ ಕಷ್ಟವನ್ನು ತಿಳಿಸುತ್ತಾನೆ ಹಾಗೂ ನಮ್ಮ ಬಗ್ಗೆ ಇಟ್ಟಿರುವ ನಂಬಿಕೆ, ಭಯ, ಭಕ್ತಿ ಮುಂತಾದ ವಿಷಯಗಳನ್ನು ತನ್ನ ತಂದೆಗೆ ತಿಳಿಸುತ್ತಾನೆ ಎಂದು ನಂಬಿಕೊಂಡು ಬಂದಿದ್ದಾರೆ.

೫.ಗೌರಿ ಹುಣ್ಣಿಮೆ

ಪಾಂಚಾಳರು ಗೌರಿ ಹುಣ್ಣಿಮೆಯ ದಿವಸ ಗುರ್ಜಿಯನ್ನು ಹಾಕುತ್ತಾರೆ. ಗೌರಿ ಪೂಜೆಯನ್ನು ಸಮುದಾಯಗಳಲ್ಲಿ ಅವರ ವಿಧಿಗಳಿಗನುಗುಣವಾಗಿ ಆಚರಿಸುತ್ತ ಬಂದಿದ್ದಾರೆ. ಈ ಗೌರಿ ಹುಣ್ಣಿಮೆ ಇನ್ನು ಐದು ದಿವಸ ಇರುವಾಗಲೇ, ಅಂದರೆ ಆ ಐದು ದಿನದ ರಾತ್ರಿ ಪಾಂಚಾಳ ಸಮುದಾಯದ ಹುಡುಗಿಯರು ಆರತಿಯೊಂದಿಗೆ ಹೊಸ್ನಾರಿಕೆ ಹೂವು ಮತ್ತು ಎಕ್ಕಿಗೀಡದ ಹೂವುಗಳಿಂದ ಗೌರಿ ಪೂಜೆಯನ್ನು ಮಾಡುವರು. ಈ ಸಂದರ್ಭದಲ್ಲಿ ಹುಡುಗಿಯರು ಹಾಡುವುದನ್ನು ನೋಡಬಹುದು.

ಗೌರಿ ಗೌರಿ ಗಾಣಾಗೌರಿ, ಮ್ಯಾಣಾಗೌರಿ, ಕುಳ್ಳಿಗೌರಿ, ಕುಂಕುಮಗೌರಿ |
ಅವರಿಯಂತಾ ಅಣ್ಣನ ಕೋಡೆ, ಅಣ್ಣನ ಕೋಡೆ |
ತೋಗರಿಯಂತಾ ತಮ್ಮನ ಕೋಡೆ ತಮ್ಮನ ಕೋಡೆ |
ನಿಲ್ಲ ನಿಲ್ಲ ಗೌರವ್ವ ಗೌರವ್ವ |
ನೀಲಿ ಸೀರೆ ಉಡಿಸೇನೆ ಉಡಿಸೇನೆ |
ವರುಷಕ್ಕೊಮ್ಮೆ ಕರಿಸೇನೆ ಕರಿಸೇನೆ |
ಅರಿಶಿಣಪತ್ತಲ ಉಡಿಸೇನೆ ಉಡಿಸೇನೆ |
ಹಸಿರು ಬಳೆಯ ಇಡಿಸೇನೆ ಇಡಿಸೇನೆ |
ಉಡಿಯಕ್ಕಿ ಹಾಕಿ ಕಳಿಸೇನೆ ಕಳಿಸೇನೆ |
ಅಗಸಿಮಟ ಕಳಿಸೇನೆ ಕಳಿಸೇನೆ |
ಅಡಲಾರೆನೆ ಗೌರಿ, ಪಾಡಲಾರೆನೆ ಗೌರಿ |

ಇಂತಹ ಅನೇಕ ಹಾಡುಗಳನ್ನು ಹಾಡಿ ಗೌರಮ್ಮನ ಮುಂದೆ ಆರತಿ ಬೆಳಗುವರು. ಹುಣ್ಣಿಮೆಯ ದಿವಸ ಮನೆಯ ಮುಂದಿನ ಅಂಗಳವನ್ನು ಗೋಮಯದಿಂದ ಸಾರಿಸಿ, ಚೆಂದದ ರಂಗೋಲಿಯನ್ನು ಒಯ್ಯುತ್ತಾರೆ. ಆಕಳು ಇಲ್ಲವೆ ಎತ್ತುಗಳ ಗೋಮಯದಿಂದ ಗುರ್ಜಿಯನ್ನು ಮಾಡುತ್ತಾರೆ. ಈ ಗುರ್ಜಿಗೆ ಉತ್ರಾಣಿಕಡ್ಡಿ, ತೊಗರಿ ಹೂ, ನವಣೆ ತೆನಿ, ಬ್ರಹ್ಮದಂಡಿ, ಹೊಸ್ನಾರಿಕೆ ಹೂ, ಚೆಂಡು ಹೂ ಇವುಗಳೆನೆಲ್ಲಾ ಆ ಗುರ್ಜಿಗೆ ಚುಚ್ಚಿ ಅವುಗಳಿಗೆ ಅಂಗುನೂಲನ್ನು ಹಾಕಿ ಕುಂಕುಮ, ಅರಿಶಿಣ ಹಚ್ಚಿ, ಅವುಗಳನ್ನು ಮನೆಯ ಬಾಗಿಲುಗಳ ಹೊಸ್ತಿಲಗಳ ಮೇಲೆ, ದಂಡಕ್ಕಿಯಲ್ಲಿ, ದೇವರ ಜಗುಲಿಯ ಮುಂದೆ ಅವುಗಳನ್ನಿಟ್ಟು ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸುವರು. ಈ ಆಚರಣೆಯನ್ನು ಮಾಡುವ ಉದ್ದೇಶ ಪಾಂಡವರು

ವನವಾಸ ಮುಗಿಸಿ ಬಂದ ಸಂತೋಷದ ನೆನಪಿಗಾಗಿ ಈ ಆಚರಣೆಯನ್ನು ಮಾಡುತ್ತೇವೆ ಎಂದು ಸಮುದಾಯದ ಹಿರಿಯರು ತಿಳಿಸುತ್ತಾರೆ.

ಹುಣ್ಣಿಮೆಯ ದಿನದ ರಾತ್ರಿ ಗೌರಮ್ಮನ ದೇವಸ್ಥಾನಕ್ಕೆ ಮನೆಯ ಹೆಣ್ಣು ಮಕ್ಕಳೆಲ್ಲ ಸಕ್ಕರೆ ಆರತಿಯನ್ನು ತೆಗೆದುಕೊಂಡು ಹೋಗಿ ಕಳಶ ಬೆಳಗಿ ದೇವರಿಗೆ ನೈವೇದ್ಯವನ್ನು ಅರ್ಪಿಸಿ ಬರುವರು. ಮನೆಗೆ ಬಂದ ಮೇಲೆ ಸಕ್ಕರೆಯ ಆರತಿಯನ್ನು ಎಲ್ಲರೂ ತಿನ್ನುವರು. ಈ ಹುಣ್ಣಿಮೆಯ ದಿವಸ ಮನೆಯ ದೇವರುಗಳ ಪೂಜೆಯನ್ನು ಹಮ್ಮಿಕೊಂಡಿರುತ್ತಾರೆ.

೬. ಸೀಗಿ ಹುಣ್ಣಿಮೆ

ಪಾಂಚಾಳರು ಸೀಗಿ ಹುಣ್ಣಿಮೆಯನ್ನು ಆಚರಿಸುವರು. ಸೀಗಿ ಹುಣ್ಣಿಮೆಯ ಮುಖ್ಯ ಉದ್ದೇಶ ಭೂಮಿ ಪೂಜೆಯನ್ನು ಮಾಡುವುದಾಗಿದೆ. ಈ ಹುಣ್ಣಿಮೆಯನ್ನು ಹೊಲ ಇದ್ದವರು ವಿಜೃಂಭಣೆಯಿಂದ ಆಚರಿಸುವರು. ಈ ದಿವಸ ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಿಕೊಂಡು ಹೊಲಕ್ಕೆ ಹೋಗಿ ಹೊಲ ಹಾಗೂ ಹೊಲದಲ್ಲಿ ಬೆಳೆದಿರುವ ಪೈರು(ಬೆಳೆ)ನ್ನು ಪೂಜೆ ಮಾಡಿ ಚರಗ ಉಗ್ಗಿ ಬರುತ್ತಾರೆ. (ಚರಗ: ನೈವೇದ್ಯವನ್ನು ನೀರಿನಲ್ಲಿ ಬೆರೆಸಿ ಹೊಲಕ್ಕೆ ಉಲಿಗ್ಗೂ, ಉಲಿಗ್ಗೂ ಎಂದು ಕೂಗುತ್ತ ಉಗ್ಗುವರು) ಈ ಹುಣ್ಣಿಮೆಯ ಉದ್ದೇಶ ರೈತ ಭೂಮಿ ತಾಯಿಗೆ ತೋರಿಸುವ ಕೃತಜ್ಞತೆ ವ್ಯಕ್ತವಾಗುತ್ತದೆ.

೭. ಹೋಳಿ ಹುಣ್ಣಿಮೆ

ಈ ಹುಣ್ಣಿಮೆಗೆ ಕಾಮನ ಹುಣ್ಣಿಮೆ, ವಸಂತ ಪೂರ್ಣಿಮೆ ಮುಂತಾದ ಹೆಸರುಗಳಿಂದ ಪ್ರಸಿದ್ಧಿ ಪಡೆದಿದೆ. ಭಾರತದ ಎಲ್ಲಾ ಕಡೆಗಳಲ್ಲೂ ಬೇರೆ ಬೇರೆ ವಿಧಾನದಲ್ಲಿ ಆಚರಿಸುವ ಹುಣ್ಣಿಮೆಯಾಗಿದೆ. ಹುಣ್ಣಿಮೆಯ ದಿನ ಕಾಮನ ಮೂರ್ತಿಯನ್ನು ಮಾಡಿ ಅದಕ್ಕೆ ಶೃಂಗಾರ ಮಾಡುವರು. ಊರ ಹೊರಗಡೆ ಕಾಮನ ಕಟ್ಟೆಯ ಹಂದರದಲ್ಲಿ ಕಾಮನ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಈ ಮೂರ್ತಿಯ ಮುಂದೆ ಮಂಗಲ ವಾದ್ಯಗಳನ್ನು ನುಡಿಸುವರು. ಹಲವು ಹಳ್ಳಿಗಳಲ್ಲಿ ಸಮುದಾಯಕ್ಕೊಂದು ಕಾಮದಹನ ಆಚರಣೆ ಬೆಳೆದು ಬಂದಿದೆ. ಅದರಂತೆಯೇ ಪಾಂಚಾಳರು ಕೂಡ ಕಾಮದಹನ ಮೂರ್ತಿಯನ್ನು ಕುಡಿಸಿ ಸಮುದಾಯದ ಮನೆ ಮನೆಗಳಿಗೆಲ್ಲಾ ಒಡೆದ ಮಡಿಕೆಯ ಚೂರು ಮನೆಯ ಮುಂದೆ ಎಸೆದು ಸಂತೋಷ ಪಡುವರು. ಈ ಹಬ್ಬಕ್ಕೆ ಯಾವುದೇ ಕಟ್ಟುಪಾಡುಗಳಿಲ್ಲ.

ಸಮುದಾಯದ ಯಾರಾದರೊಬ್ಬ ವ್ಯಕ್ತಿಯನ್ನು ಶವ ಎಂದು ಭಾವಿಸಿಕೊಂಡು ಆತನನ್ನು ಚಟ್ಟದ ಮೇಲೆ ಮಲಗಿಸಿ ಮೆರವಣಿಗೆ ಮಾಡುತ್ತ ಹೆಣ್ಣು ಮಕ್ಕಳ ವೇಷ ಹಾಕಿಕೊಂಡು ಅಳುತ್ತ ಹೋಗುತ್ತಿರುತ್ತಾರೆ. ಈ ಚಟ್ಟವನ್ನು ಊರ ತುಂಬೆಲ್ಲಾ ಹೊತ್ತುಕೊಂಡು ತಿರುಗಾಡಿ ಊರ ಜನಕ್ಕೆಲ್ಲ ಕಾಮನ ದಹನಕ್ಕೆ ಆಹ್ವಾನಿಸುವರು. ಊರ ಹೊರಗಡೆ ಇರುವ ಕಾಮನ ಕಟ್ಟೆಯ ಹತ್ತಿರ ಕಾಮನ ಮೂರ್ತಿಯನ್ನು ಸುಡುವರು. ಈ ಸುಟ್ಟ ಜಾಗದಲ್ಲೇ ಕಡಲೆಕಾಯಿಯನ್ನು ಸುಟ್ಟುಕೊಂಡು ತಿನ್ನುವರು. ಇದರಿಂದ ಆಯುಷ್ಯ ವೃದ್ಧಿಯಾಗುವುದು ಎಂದು ಸಮುದಾಯದವರು ತಿಳಿದುಕೊಂಡು ಬಂದಿದ್ದಾರೆ. ಇದರ ಜೊತೆಗೆ ಕಾಮನನ್ನು ಸುಟ್ಟ ಬೂದಿಯನ್ನು ಮನೆಯ ಸುತ್ತ ಚೆಲ್ಲಿದರೆ ದುಷ್ಟ ಶಕ್ತಿಗಳು, ಮಕ್ಕಳಿಗೆ ಪೀಡೆ, ಪಿಶಾಚಿಗಳು ಕಾಡುವುದಿಲ್ಲ ಎಂದು ಸಮುದಾಯದ ಹಿರಿಯರು ತಿಳಿಸುತ್ತಾರೆ.

೮. ಯುಗಾದಿ

ನೂತನ ಸಂವತ್ಸರಾರಂಭ ದಿನವಾದ ಚೈತ್ರಮಾಸ ಮತ್ತು ಪಾಡ್ಯ ದಿನ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಬಹುತೇಕವಾಗಿ ಹಿಂದೂಗಳೆಲ್ಲರೂ ವರ್ಷಕ್ಕೊಮ್ಮೆ ಬರುವ ಈ ಹಬ್ಬವನ್ನು ಸುಖ-ದುಃಖ, ಸಿಹಿ-ಕಹಿ, ನೋವು-ನಲಿವುಗಳನ್ನು ಸಮನಾಗಿ ಕಾಣಬೇಕೆನ್ನುವ ದೃಷ್ಟಿಯಿಂದ ಸಂತೋಷ, ಸಂಭ್ರಮದಿಂದ ಆಚರಿಸಲಾಗುತ್ತದೆ.

ಪಾಂಚಾಳ ಸಮುದಾಯದವರಿಗೆ ಯುಗಾದಿ ಹಬ್ಬದ ಹಿಂದಿನ ದಿನಗಳಲ್ಲಿ ಬಿಡುವಿನ ವೇಳೆ ತೀರ ಕಡಿಮೆ. ಅದರಲ್ಲಿಯೂ ಬಡಗಿತನ, ಶಿಲ್ಪಿ ಹಾಗೂ ಕಮ್ಮಾರಿಕೆ ಕೆಲಸ ಮಾಡುವರಿಗೆ ಯುಗಾದಿ ದಿನದ ಆಸುಪಾಸುಗಳಲ್ಲಿ ಕೆಲಸ ಹೆಚ್ಚಾಗಿ ಇರುತ್ತದೆ. ಯುಗಾದಿ ದಿವಸ ರಾಜಯೋಗವಿರುತ್ತದೆ. ಆದ್ದರಿಂದ ಹೊಸಮನೆ ಪ್ರವೇಶ, ಹೊಸಬಾಗಿಲು ಇಡುವುದು, ಮೂರ್ತಿ ಪ್ರತಿಷ್ಠಾಪಿಸುವುದು, ಹೊಸ ಶಿಲ್ಪಗಳ ಕೆಲಸ ಆರಂಭಿಸುವುದು ಇತ್ಯಾದಿ ಕೆಲಸಗಳು ಯುಗಾದಿ ಹಬ್ಬದ ದಿವಸವೆ ಕಾರ್ಯಗಳು ನಡೆಯುತ್ತವೆ. ಈ ದೃಷ್ಟಿಯಿಂದ ಪಾಂಚಾಳರಿಗೆ ಯುಗಾದಿ ಬಂತೆಂದರೆ ಬಿಡುವಿನ ವೇಳೆ ಕಡಿಮೆ.

ಯುಗಾದಿ ಹಬ್ಬವನ್ನು ಪಾಂಚಾಳರು ಚೈತ್ರಮಾಸ ಆರಂಭದ ಅಮವಾಸ್ಯೆಯ ದಿನದಿಂದಲೇ ಆಚರಿಸುತ್ತಾರೆ. ಹಬ್ಬದ ಮುನ್ನಾದಿನವೇ ಮನೆಯನ್ನೆಲ್ಲಾ ಸುಣ್ಣ-ಬಣ್ಣಗಳಿಂದ ಬಳಿದು ಮನೆಯ ಅಂಗಳವನ್ನು ಸಗಣಿರಾಡಿಯಿಂದ ಸಾರಿಸುತ್ತಾರೆ. ಅಮವಾಸ್ಯೆಯ ಬೆಳಗ್ಗೆಯೇ ಮನೆಯ ಬಾಗಿಲುಗಳಿಗೆಲ್ಲಾ ಮಾವಿನ ಎಲೆಗಳಿಂದ ಮಾಡಿದ ತೋರಣವನ್ನು ಕಟ್ಟುತ್ತಾರೆ. ನಂತರ ಅವರ ವೃತ್ತಿ ಸಾಮಾನುಗಳನ್ನು ನೀರಿನಿಂದ ತೊಳೆದು ಒಣ ಬಟ್ಟೆಯಿಂದ ಒರೆಸುತ್ತಾರೆ. ತೊಳೆದ ಸಾಮನುಗಳನ್ನು ದೇವರ ಜಗುಲಿಯ ಪಕ್ಕದಲ್ಲಿ ಇಟ್ಟು ಮನೆಯ ಮಂದಿಯೆಲ್ಲಾ ಸೇರಿ ಕಳಶವನ್ನು ತುಂಬಿಟ್ಟು ಪೂಜೆಯನ್ನು ಮಾಡುತ್ತಾರೆ. ಪ್ರತಿಯೊಂದು ಉಪಕರಣಕ್ಕೂ ಬನ್ನಿಪತ್ರೆ, ಗಂಧ ಹಾಗೂ ಕುಂಕುಮವನ್ನು ಹಚ್ಚಿ ಉದಿನಕಡ್ಡಿಯಿಂದ ಬೆಳಗಿ ಕಾಯಿಯನ್ನು ಉಪಕರಣಕ್ಕೆ ಹೊಡೆಯುತ್ತಾರೆ. ಮನೆಯವರೆಲ್ಲರೂ ವೃತ್ತಿಯ ಉಪಕರಣಗಳಿಗೆ ಅಕ್ಷತೆಕಾಳುಗಳನ್ನು ಹಾಕಿ ಕಳಶ ಬೆಳಗಿ ಎಡೆಯನ್ನು ಹಾಕಿ ಕೈ ಮುಗಿಯುತ್ತಾರೆ. ಮನೆಯಲ್ಲಿ ಮಾಡಿದ ಅಡುಗೆಯನ್ನು ಎಲ್ಲರೂ ಸೇರಿ ಊಟ ಮಾಡುವರು.

ಅಮವಾಸ್ಯೆಯ ಮಾರನೆಯ ದಿನ ಬೆಳಗಿನ ಜಾವ ನಾಲ್ಕುಗಂಟೆಗೆ ಮನೆಯ ಹೆಣ್ಣು ಮಕ್ಕಳು ಮನೆಯನ್ನೆಲ್ಲಾ ಮಡಿಮಾಡುತ್ತಾರೆ. ನಂತರ ಆರು ಅಥವಾ ಏಳು ಗಂಟೆಯ ಸಮಯದ ಹೊತ್ತಿಗೆ ಮನೆಯವರೆಲ್ಲರೂ ಸೇರಿ ರತ್ನ (ಶಂಬರಕಾಗಿ) ಪಕ್ಷಿಯನ್ನು ನೋಡಲು ಹೋಗುತ್ತಾರೆ. ಯುಗಾದಿಯ ಪಾಡ್ಯ ದಿನ ರತ್ನಪಕ್ಷಿಯನ್ನು ಪಾಂಚಾಳರು ತಪ್ಪದೇ ಅಡವಿಯಲ್ಲಿ ತಿರುಗಾಡಿ ಪಕ್ಷಿಯನ್ನು ನೋಡಿಕೊಂಡು ಬರಲು ಹೋಗುತ್ತಾರೆ. ಅಂದು ಪಕ್ಷಿಯನ್ನು ನೋಡಿದರೆ ವರುಷ ಪೂರ್ತಿ ಪಾಂಚಾಳರಿಗೆ ಶುಭದಿನವಾಗಿರುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ನಂತರ ಮೈಗೆಲ್ಲಾ ಕಾಸಿದ ಕೊಬ್ಬರಿ ಎಣ್ಣೆ ಹಚ್ಚಿಕೊಂಡು, ನೀರಿನಲ್ಲಿ ಬೆರಿಸಿದ ಬೇವಿನ ಎಲೆ ಹಾಗೂ ಹೂವುಗಳಿಂದ ಕೂಡಿದ ಬಿಸಿ ನೀರಿನಿಂದ ಮನೆಯವರೆಲ್ಲರೂ ಸ್ನಾನ ಮಾಡಿ ಹೊಸಬಟ್ಟೆಯನ್ನು ಧರಿಸುತ್ತಾರೆ.

ಮನೆಯಲ್ಲಿ ಮಾಡಿದ ಬೇವು ಬೆಲ್ಲವನ್ನು ಮನೆಯ ದೇವರು ಹಾಗೂ ವೃತ್ತಿ ಉಪಕರಣಗಳಿಗೆ ಬೇವು ಬೆಲ್ಲದ ನೈವೇದ್ಯವನ್ನು ಎಡೆ ಮಾಡಿ ಕಳಶ ಬೆಳಗಿ ಎಲ್ಲಾರೂ ಬೇವು ಬೆಲ್ಲವನ್ನು ತಿನ್ನುತ್ತಾರೆ. ಈ ಬೇವು ಬೆಲ್ಲವನ್ನು ಯುಗಾದಿಯ ದಿವಸ ಮಾಡುವ ಉದ್ದೇಶವೆಂದರೆ ಬದುಕಿನ ಸಿಹಿ-ಕಹಿ, ಸುಖ-ದುಃಖ ಇವುಗಳ ಪ್ರತೀಕ. ನೋವು ನಲಿವನ್ನು ಸಮಚಿತ್ತದಿಂದ ಸ್ವೀಕರಿಸಬೇಕೆಂಬ ಭಾವ ಇಲ್ಲಿಗೋಚರ. ಬೇವು ರೋಗ ನಿವಾರಕವೂ ಹೌದು ಹಾಗೂ ಬೆಲ್ಲ ಜೀರ್ಣಕಾರಕ. ಹೀಗೆ ಬೇವುಬೆಲ್ಲವನ್ನು ಇಡೀ ಸಂವತ್ಸರದಲ್ಲಿ ಮಾನವನ ಜೀವನದ ಸುಖ ದುಃಖಗಳನ್ನು ಸಮನಾಗಿ ಸ್ವೀಕರಿಸಬೇಕೆಂಬ ಸಮಸ್ಥಿತಿಯನ್ನು ತಂದುಕೊಳ್ಳುವುದಕ್ಕೆ ಸ್ಫೂರ್ತಿ ತಂದುಕೊಡುತ್ತದೆ.

ಬೇವು ಬೆಲ್ಲ ಮಾಡುವ ವಿಧಾನವೆಂದರೆ ಬೇವಿನ ಎಲೆಯ ಚಿಗುರು, ಬೇವಿನ ಹೂವು, ಬೆಲ್ಲ, ಪುಟಾಣಿಕಾಳು, ಕೊಬ್ಬರಿ ಹಾಗೂ ಕಸಕಸಿ ಈ ಎಲ್ಲಾ ಪರಿಕಾರಗಳನ್ನು ಪುಟಾಣಿ ಹಿಟ್ಟಿಗೆ ಬೆರೆಸುತ್ತಾರೆ. ಇದಕ್ಕೆ ಈ ಸಮುದಾಯದಲ್ಲಿ 'ಸೂಸ್ಲ' ಎಂದು ಕರೆಯುತ್ತಾರೆ. ಪಾಡ್ಯದ ದಿವಸ ಮನೆಯಲ್ಲಿ ಬೇವು ಬೆಲ್ಲ (ಸೂಸ್ಲ)ದ ಜೊತೆಗೆ ಗೋಧಿಯ ಹುಗ್ಗಿಯನ್ನು ಹಾಗೂ ಮಾವಿನಕಾಯಿ ಚಿತ್ರಾನ್ನ ಮಾಡುತ್ತಾರೆ. ಸಾಯಂಕಾಲ ಐದುವರೆಯಿಂದ ಸಮುದಾಯದವರೆಲ್ಲರೂ ಆಕಾಶದಲ್ಲಿ ಮೂಡುವ ಚಂದ್ರನ ದರ್ಶನ ನೋಡಲು ಕಾತುರರಾಗಿರುತ್ತಾರೆ. ಹೊಸ ವರ್ಷದ ದಿನದಂದು ಚಂದ್ರನ ದರ್ಶನ ಪಡೆದರೆ ಶುಭವಾಗುತ್ತದೆ ಎಂದು ನಂಬಿಕೊಂಡು ಬಂದಿದ್ದಾರೆ. ಆಕಾಶದಲ್ಲಿ ಚಂದ್ರಕಂಡ ತಕ್ಷಣವೇ ಕೈಕಾಲು ಮುಖವನ್ನು ತೊಳೆದುಕೊಂಡು ಮನೆಯ ದೇವರಿಗೆ ದೀಪವನ್ನು ಹಚ್ಚಿ ಮನೆಯ ಹಿರಿಯರ ಪಾದಗಳನ್ನು ಮುಟ್ಟಿ ನಮಸ್ಕರಿಸುವರು.

ಪಾಡ್ಯದ ಮರುದಿನ ಬೆಳಗ್ಗೆಯೇ ವೃತ್ತಿ ಉಪಕರಣಗಳನ್ನು ಪೂಜೆ ಮಾಡಿ ತುಂಬಿಟ್ಟಂತಹ ಕಳಶವನ್ನು ತೆಗೆಯುತ್ತಾರೆ. ನಂತರ ವೃತ್ತಿಯ ಕೆಲಸಕ್ಕೆ ಹೋಗಬಹುದು. ಕಳಶ ತೆಗೆಯುವವರೆಗೂ ವೃತ್ತಿ ಕೆಲಸವನ್ನು ಮಾಡುವಂತಿಲ್ಲ. ಯುಗಾದಿ ಹಬ್ಬವು ಪಾಂಚಾಳರಿಗೆ ಬರಿಯ ಯಾಂತ್ರಿಕ ಆಚರಣೆಯಾಗದೆ, ಬದುಕಿನ ಹಲವು ಬದಲಾವಣೆಗಳಿಗೂ ನಾಂದಿಯಾಗುತ್ತದೆ.

೮. ಹಿರಿಯರ ಹಬ್ಬ

ಪಾಂಚಾಳ ಸಮುದಾಯದಲ್ಲಿ ಹಿರಿಯರ ಹಬ್ಬವನ್ನು ತಮಗೆ ಅನುಕೂಲವಾದ ಹಬ್ಬಗಳ ಜೊತೆಗೆ ಹಿರಿಯರ ಹಬ್ಬವನ್ನು ಮಾಡಿಕೊಂಡು ಬಂದಿದ್ದಾರೆ. ಅತಿ ಹೆಚ್ಚಾಗಿ ಮಹಾನವಮಿಯ ಹಬ್ಬದ ದಿವಸದಂದು ಹಿರಿಯರ ಹಬ್ಬವನ್ನು ಮಾಡುವರು. ಈ ಹಬ್ಬವನ್ನು ಪ್ರತಿವರ್ಷವು ಹಿರಿಯರ ಆತ್ಮಶಾಂತಿಗಾಗಿ ಹಾಗೂ ಹಿರಿಯರ ಮಾರ್ಗದರ್ಶನ ನಮ್ಮನ್ನು ಸದಾ ಕಾಪಡಲಿ ಎಂದು ಭಕ್ತಿಯಿಂದ ಆಚರಿಸುತ್ತಾರೆ. ಈ ಹಬ್ಬಕ್ಕೆ ಹಿರಿಯರ ಪೂಜೆ, ಹಿರಿಯರಿಗೆ ಎಡೆಹಾಕುವುದು, ಪಿತೃಗಳನ್ನು ಸ್ಮರಿಸಿಕೊಳ್ಳುವ ದಿನ ಎಂದೆಲ್ಲಾ ಪ್ರಾದೇಶಿಕವಾಗಿ ಕರೆಯುತ್ತಾರೆ.

ಹಿರಿಯರ ಪೂಜೆ ಮಾಡುವ ದಿವಸ ಮನೆಯನೆಲ್ಲಾ ಮಡಿ ಮಾಡಿ ದೇವರ ಜಗುಲಿಯ ಪಕ್ಕದಲ್ಲಿ ಅಕ್ಷತೆಕಾಳುಗಳನ್ನು ಹಾಕಿ ಅದರ ಮೇಲೆ ನೀರು ತುಂಬಿದ ಎರಡು ಚರಿಗೆಗಳನ್ನು ಇಡುವರು. ಈ

ಚರಿಗೆಗಳ ಮೇಲೆ ತೆಂಗಿನ ಕಾಯಿಯನ್ನು ಇಡುವರು. ಒಂದು ಚರಿಗೆಯ ಮೇಲೆ ತನ್ನ ತಂದೆಗೆ ಪ್ರಿಯವಾದ ಬಣ್ಣದ ಬಟ್ಟೆಯನ್ನು ಹಾಕುವರು. ಅಂದರೆ ಪಂಚೆ, ಅಂಗಿಯ ಬಟ್ಟೆ ಹಾಗೂ ಟವಾಲು, ಇನ್ನೊಂದು ಚರಿಗೆಯ ಮೇಲೆ ಸೀರೆ, ಕುಪ್ಪಸವನ್ನು ಹಾಕುತ್ತಾರೆ. ಈ ಎರಡು ಚರಿಗೆಗಳು ತಂದೆ-ತಾಯಿಯ ಪ್ರತೀಕ. ತಂದೆಗೆ ಜನಿವಾರವನ್ನು ಹಾಕುತ್ತಾರೆ. ತಾಯಿಗೆ ತಾಳಿ ಹಾಗೂ ಅಂಗುನೂಲನ್ನು ಹಾಕುವರು. ತಂದೆ ತಾಯಿಯು ಅತಿ ಹೆಚ್ಚಾಗಿ ಉಪಯೋಗಿಸುತ್ತಿದ್ದ ವಸ್ತುಗಳಾದ ಬೀಡಿ, ಅಡಕಿ ಎಲೆ ಇಷ್ಟವಾದ ಪದಾರ್ಥಗಳನ್ನು ಅದರ ಮುಂದೆ ಇಡುತ್ತಾರೆ.

ಹೀಗೆ ವಸ್ತುಗಳೆಲ್ಲವನ್ನು ಇಟ್ಟು ಮನೆಯವರೆಲ್ಲರೂ ಸೇರಿ ಪೂಜೆ ಕೈಗೊಳ್ಳುವರು. ತಂದೆ ತಾಯಿಯ ಪ್ರತೀಕವಾದ ಚರಿಗೆಗಳಿಗೆ ಶಾಸ್ರ್ತೋಕ್ತವಾಗಿ ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸುವರು. ಈ ನೈವೇದ್ಯಕ್ಕೆ ತಂದೆ-ತಾಯಿಯರಿಗೆ ಇಷ್ಟವಾದ ಅಡುಗೆಯನ್ನೇ ಮಾಡುತ್ತಾರೆ. ಮನೆಯವರೆಲ್ಲರೂ ಕಳಶ ಬೆಳಗಿ ಅಕ್ಷತೆಕಾಳನ್ನು ಹಾಕಿ ನಮಸ್ಕರಿಸುವರು. ಅವರಿಗೆ ಅರ್ಪಿಸಿದ ನೈವೇದ್ಯವನ್ನು ಮನೆಯ ಹಿರಿಯರು ಊಟ ಮಾಡಬೇಕು. ಆ ನೈವೇದ್ಯವನ್ನು ಬೇರೆಯವರಿಗೆ ಅಂದರೆ ಮನೆಗೆ ಬಂದಂತಹ ಬೀಗರಿಗೆ ಕೊಡುವಂತಿಲ್ಲ. ಹೀಗೆ ಆಚರಣೆ ಮಾಡಿ ಊಟವನ್ನು ಮಾಡುವರು.

ಮರುದಿನ ಚರಿಗೆಗಳನ್ನು ಪೂಜೆ ಮಾಡಿ ಅದರ ಮೇಲೆ ಇಟ್ಟಿರುವ ಕಾಯಿಯನ್ನು ಒಡೆಯುತ್ತಾರೆ. ಆ ತಂಬಿಗೆಯಲ್ಲಿರುವ ನೀರನ್ನು ಬನ್ನಿಮರಕ್ಕೆ ಹಾಕಿ ಬರುತ್ತಾರೆ. ಅವರಿಗೆ ಹಾಕಿದ ಬಟ್ಟೆಯನ್ನು ಮನೆಯ ಹಿರಿಯರು ಮಾತ್ರ ಉಪಯೋಗಿಸಬೇಕು. ಹೀಗೆ ಪಾಂಚಾಳ ಸಮುದಾಯದಲ್ಲಿ ಹಿರಿಯರ ಹಬ್ಬವನ್ನು ಆಚರಿಸಲಾಗುತ್ತದೆ.

೧೦. ರಕ್ಷಾಬಂಧನ

ಭಾರತದಾದ್ಯಂತ ಆಚರಿಸುವ ರಕ್ಷಾಬಂಧನ ಒಂದು ಬಗೆಯ ಸಹೋದರಿಯರ ದಿನ ಎಂದು ಹೇಳಬಹುದು. ಈ ದಿನದಂದು ಸಹೋದರಿಯರು ಸಹೋದರರಿಗೆ ತೋರಿಸುವ ಪ್ರೀತಿಯ ಸಂಕೇತವೇ ರಕ್ಷಾಬಂಧನ ಅಥವಾ ರಾಖಿ ಹಬ್ಬ ಎಂದು ಕರೆಯಬಹುದು. ಸಹೋದರಿಯರು ಆಪತ್ಕಾಲದಲ್ಲಿ ಇದ್ದಾಗ ಅವರನ್ನು ರಕ್ಷಿಸುವ ಕರ್ತವ್ಯ ನಮ್ಮದು ಎಂದು ರಕ್ಷಾಬಂಧನ ದಿನ ಸಹೋದರರು ಪ್ರತಿಜ್ಞೆ ಮಾಡುತ್ತಾರೆ. ಈ ಸಮುದಾಯದಲ್ಲಿ ಮೊದಲು ಈ ರಕ್ಷಾ ಬಂಧನದ ಆಚರಣೆಯನ್ನು ಮಾಡುತ್ತಿರಲಿಲ್ಲ. ಸುಮಾರು ಒಂದು ಹತ್ತುವರ್ಷಗಳ ಹಿಂದಿನಿಂದ ಇದನ್ನು ಆಚರಿಸುತ್ತ ಬಂದಿದ್ದಾರೆ.

ಶ್ರಾವಣ ಶುಕ್ಲ ಹುಣ್ಣಿಮೆಯ ದಿನ ಸಹೋದರಿಯರು ಶುಚಿ ಪೂರ್ವಕವಾಗಿ ಹೊಸ ಬಟ್ಟೆಯನ್ನು ಧರಿಸುವರು. ಒಂದು ತಟ್ಟೆಯಲ್ಲಿ ಅಕ್ಷತೆಕಾಳು, ಕುಂಕುಮ, ಅರಿಶಿಣ ಹಾಗೂ ರಾಖಿಯನ್ನು ಇಟ್ಟುಕೊಂಡು ಬಂದು ಸಹೋದರರಿಗೆ ಕುಂಕುಮ, ಅರಿಶಿಣವನ್ನು ಹಚ್ಚಿ, ಅಕ್ಷತೆ ಕಾಳನ್ನು ಹಾಕಿ ಅವರ ಬಲ ಕೈಗೆ ರಕ್ಷಾಬಂಧನವನ್ನು ಕಟ್ಟುವರು. ಇದರ ನೆನಪಿಗಾಗಿ ಸಹೋದರರು ಉಡುಗೋರೆಯನ್ನು ನೀಡುವರು. ಈ ಜಾಗತೀಕರಣದ ಪ್ರಭಾವದಿಂದ ಸಮಾಜದ ಏಕತೆ ಒಡೆದ ಸಂದರ್ಭದಲ್ಲಿ ರಾಷ್ಟ್ರದ ಐಕ್ಯತೆ, ಮಕ್ಕಳಲ್ಲಿ ಸ್ನೇಹ, ಸಹಕಾರದ ಮನೋಭಾವನೆ, ಪರಸ್ರ್ತೀ, ಪುರುಷರಲ್ಲಿ ಸಹೋದರರ

ಮನೋಭಾವನೆ ಬೆಳೆಸಿಕೊಳ್ಳಬೇಕಾದದ್ದು ಅವಶ್ಯಕತೆಯಾಗಿದೆ. ಆದ್ದರಿಂದ ಇಂತಹ ಹಬ್ಬಗಳು ಸಹೋದರ ಸಹೋದರಿಯರ ನಡುವಿನ ಸಂಬಂಧವನ್ನು ಬೆಸೆಯುವುದಾಗಿದೆ ಎನ್ನಬಹುದು.

೧೧. ಮಕರ ಸಂಕ್ರಾಂತಿ

ಸೂರ್ಯ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಕಾಲಕ್ಕೆ ಮಕರ ಸಂಕ್ರಾಂತಿ ಎಂದು ಕರೆಯುವರು. ಅಂದರೆ ಧನು ರಾಶಿಯನ್ನು ಬಿಟ್ಟು ಮಕರ ರಾಶಿಯನ್ನು ಸಂಕ್ರಮಿಸುವುದು. ಸಂಕ್ರಾಂತಿ ಹಬ್ಬವನ್ನು ಅತ್ಯಂತ ಮಹತ್ವ ಪವಿತ್ರವುಳ್ಳ ದಿನ ಎಂದು ತಿಳಿದಿದ್ದಾರೆ. ಏಕೆಂದರೆ ಸೂರ್ಯನಾರಯಣನು ದಕ್ಷಿಣದಿಂದ ಉತ್ತರ ದಿಕ್ಕಿಗೆ ಹೆಜ್ಜೆಯಿಡಲು ಪ್ರಾರಂಭಿಸುವ ಪವಿತ್ರ ಸಮಯವಾಗಿರುವುದರಿಂದ ಉತ್ತರಾಯಣ ಪುಣ್ಯದಿನವೆಂದು ತಿಳಿಸುತ್ತಾರೆ.

ಸಂಕ್ರಾಂತಿ ಹಬ್ಬವನ್ನು ಅತಿ ಹೆಚ್ಚಾಗಿ ಸ್ತ್ರೀಯರು ಆಚರಿಸುವ ಹಬ್ಬವಾಗಿದೆ. ಈ ದಿವಸದಂದು ಸ್ತ್ರೀಯರು ಮನೆಯನ್ನು ಶುಚಿಗೊಳಿಸುತ್ತಾರೆ. ಮನೆಯವರೆಲ್ಲರೂ ಅಂದು ಮೈಯಿಗೆಲ್ಲಾ ಎಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡಿ ಹೊಸ ಬಟ್ಟೆಯನ್ನು ಧರಿಸುವರು. ಈ ದಿವಸ ಎಳ್ಳು ಬೆಲ್ಲ ಕೊಡುವ ದಿವಸ. ಅದಕ್ಕಾಗಿ ಎಳ್ಳು, ಬೆಲ್ಲ, ಕೊಬ್ಬರಿ, ಕಡಲೆಕಾಳು, ಹುರುಕಡ್ಡಿ, ಸಕ್ಕರೆ ಇತ್ಯಾದಿಗಳನ್ನು ಮಿಶ್ರಣಮಾಡಿ ಮನೆಯ ದೇವರಿಗೆ ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸುವರು. ಸಂಕ್ರಾತಿಯ ದಿವಸ ಶುಭದಿನ ಆದ್ದರಿಂದ ಎಳ್ಳು ಪಾಪವನ್ನು ಪರಿಹರಿಸುವ ಧಾನ್ಯ ಅದಕ್ಕಾಗಿ ಈ ದಿವಸ ಈ ಧಾನ್ಯವನ್ನು ಕೊಡುವುದರ ಮುಖಾಂತರ ತಮ್ಮ ಪಾಪವನ್ನು ಪರಿಹರಿಸಿಕೊಳ್ಳುತ್ತಾರೆ. ಈ ಎಳ್ಳು, ಬೆಲ್ಲವನ್ನು ಕೊಡುವ ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ. 'ಎಳ್ಳು ಬೆಲ್ಲವನ್ನು ತೆಗೆದುಕೊಂಡು ಒಳ್ಳೆಯ ಮಾತುಗಳನ್ನು ಮಾತಾಡೋಣ' ಎಂದು ಪಾಂಚಾಳರು ಪ್ರತಿಯೊಂದು ಸಮುದಾಯಕ್ಕೂ ಹಾರೈಸುತ್ತಾರೆ. ಏಕೆಂದರೆ ಇವರ ವೃತ್ತಿ ಕೃಷಿಕ ಸಮುದಾಯವನ್ನು ಅವಲಂಬಿಸಿರುವುದರಿಂದ ರೈತ ಸಮುದಾಯದವರೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳಲಿಕ್ಕೆ ಹಾಗೂ ಇದನ್ನು ತಿನ್ನುವುದರಿಂದ ದೇಹಕ್ಕೆ ಸಂಬಂಧಿಸಿದ ಪೀಡೆಗಳು ಪರಿಹಾರವಾಗುತ್ತವೆ ಎಂದು ಸಮುದಾಯದ ಹಿರಿಯರು ತಿಳಿಸುತ್ತಾರೆ.

ಈ ಮೇಲಿನ ಹಬ್ಬಗಳ ಜೊತೆಗೆಯೇ ಊರಿನಲ್ಲಿ ಆಚರಿಸುವ ಇನ್ನಿತರೆ ಗ್ರಾಮದೇವತೆಗಳ ಹಬ್ಬಗಳನ್ನು ಆಚರಿಸುತ್ತಾರೆ. ಈ ಗ್ರಾಮದೇವತೆಯ ದೇವಸ್ಥಾನಗಳಿಗೆಲ್ಲ ಪಾಂಚಾಳ ಸಮುದಾಯದವರೇ ಪೂಜಾರಿಗಳು, ಅರ್ಚಕರು ಆಗಿರುತ್ತಾರೆ. ಇವರ ಪುರೋಹಿತ್ಯದಲ್ಲಿಯೆ ಗ್ರಾಮದೇವತೆಯ ಹಬ್ಬಗಳನ್ನು ಊರಿನ ಇನ್ನುಳಿದ ಸಮುದಾಯದವರು ಆಚರಣೆ ಮಾಡುತ್ತಾರೆ. ಪಾಂಚಾಳ ಸಮುದಾಯದವರಿಗೆ ಗ್ರಾಮದೇವತೆಯ ಹಬ್ಬಕ್ಕೆ ಬೇಕಾಗುವ ಪರಿಕರಗಳನ್ನು ಆ ಊರಿನ ಕಟ್ಟೆ ಮನೆಯ ದೈವದವರು ಸೇರಿ ಕೊಡಿಸುವ ಸಂಪ್ರದಾಯ ಇಂದಿಗೂ ಕೂಡ ಉಳಿದುಬಂದಿದೆ. ಮಾಸಿಕ ಹಬ್ಬವನ್ನು ಆಚರಿಸುತ್ತಾರೆ. ಅಮವಾಸ್ಯೆ ಹುಣ್ಣಿಮೆಗಳಲ್ಲಿ ಮನೆಯಲ್ಲಿ ಕಳಶ ಹೂಡುತ್ತಾರೆ. ಕಳಶಕ್ಕೆ ಪೂಜೆ ಮಾಡಿ ಹಾಲು ಬೆಲ್ಲ ನೈವೇದ್ಯವನ್ನು ಅರ್ಪಿಸುವರು.

ನಮ್ಮ ನಾಡು ಸಾಂಸ್ಕೃತಿಕವಾಗಿ ತುಂಬ ಸಮೃದ್ಧವಾದ ನೆಲ. ಹಲವಾರು ಸಮುದಾಯಗಳ ಧಾರ್ಮಿಕ ಆಚರಣೆಗಳಿಂದ ತುಂಬ ಸಂಕೀರ್ಣವಾದುದು ಇಲ್ಲಿಯ ಸಂಸ್ಕೃತಿ. ಈ ಪರಿಸರದ ವೈವಿಧ್ಯತೆಯಲ್ಲಿ

ಪಾಂಚಾಳರು ವೈದಿಕ ಸಂಸ್ಕೃತಿಯನ್ನು ಹೊಂದಿಕೊಂಡು ಬಂದಿರುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಗ್ರಾಮ ಜೀವನದ ಕ್ರಿಯಾಶೀಲ ಜನಾಂಗವಾದ ಪಾಂಚಾಳರು ವಿಶಿಷ್ಟವಾದ ಸಂಪ್ರದಾಯವುಳ್ಳವರಾಗಿದ್ದಾರೆ. ಮಗು ಹುಟ್ಟಿದಾಗ ಆಚರಿಸುವ ಮೈಲಿಗೆ (ಸೂತಕ) ನಂತರ ಸ್ನಾನ, ಪೂಜೆ, ಸಂಸ್ಕಾರ ನೀಡಿ ಮೈಲಿಗೆ ಕಳೆಯುತ್ತಾರೆ. ಜವುಳ ತೆಗೆಸುವ, ಅಕ್ಷರಾಭ್ಯಾಸ ನೀಡುವ ಸಂಸ್ಕಾರಗಳು ಅನಂತರ ಏಳನೇ ವಯಸ್ಸಿನಿಂದ ಹನ್ನೆರಡನೆಯ ವರ್ಷಗಳ ಅವಧಿಯಲ್ಲಿ ಗಂಡು ಮಗುವಿಗೆ ಉಪನಯನ ಮಾಡುತ್ತಾರೆ. ಈ ಸಂದರ್ಭದಲ್ಲಿ ಗಾಯತ್ರಿ ಮಂತ್ರ ಉಪದೇಶದ ಜೊತೆಗೆ ಮೂರು ಎಳೆಯ ಜನಿವಾರ ಹಾಕುವುದು. ಉಪನಯನ ಮಾಡಿಸಿಕೊಂಡವರು ಸ್ವಜಾತಿಯವರ ಮನೆ ಹೊರತುಪಡಿಸಿ ಅನ್ಯಜಾತಿಯವರ ಮನೆಯಲ್ಲಿ ಊಟ ಮಾಡುವುದಿಲ್ಲ.

ಮದುವೆ, ಉಪನಯನ ಕಾರ್ಯದಲ್ಲಿ ಹೋಮ, ಹವನ, ಧೂಮಗಳ ಆಚರಣೆಯಿದೆ. ಪಂಚಾಂಗ ನೋಡುವುದು, ಶುಭ ಮುಹೂರ್ತ ನಿರ್ಣಯಿಸಿಯೇ ಯಾವುದೇ ಕಾರ್ಯಗಳನ್ನು ಆರಂಭಮಾಡುವುದು. ಮದುವೆ, ಉಪನಯನ, ಸಾವಿನ ಸಂಸ್ಕಾರ ಆಚಾರ್ಯರ ಪುರೋಹಿತ್ಯದಲ್ಲಿಯೇ ನಡೆಸುವರು. ಉಪನಯನದ ಸಂದರ್ಭದಲ್ಲಿ ಹಾಕಿಕೊಂಡ ಮೂರೆಳೆಯ ಜನಿವಾರ ಕಳಚಿ ಆರೆಳೆಯ ಜನಿವಾರವನ್ನು ಮದುವೆಯ ಸಂದರ್ಭದಲ್ಲಿ ಧರಿಸುವರು. ನಂತರ ಗೃಹಸ್ಥಾಶ್ರಮದ ಎಲ್ಲ ಸುಖಗಳನ್ನು ಅನುಭವಿಸಲು ಅವಕಾಶ ನೀಡಲಾಗುವುದು.

ಶವಸಂಸ್ಕಾರ ವಿಧಾನದಲ್ಲಿ ಶವವನ್ನು ದಹಿಸುವ ಸಂಪ್ರದಾಯವಿದೆ. ಶವಕ್ಕೆ ಮನೆಯ ಹಿರಿಯ ಮಗನೆ ಕಿಚ್ಚನ್ನು ಹಚ್ಚಬೇಕು. ಶವದ ಎರಡು ಕಾಲುಗಳನ್ನು ಮಡಚಿ ಮೈ ತೊಳೆದು ಮಲಗಿಸುವ ಪದ್ಧತಿ ರೂಢಿಯಲ್ಲಿದೆ. ದಹಿಸಿದ ಶವದ ಬೂದಿಯನ್ನು ಮೂರು ಇಲ್ಲವೇ ಐದು ದಿನಗಳಲ್ಲಿ ಹತ್ತಿರದ ಹರಿಯುವ ಹಳ್ಳ, ಹೊಳೆ, ನದಿಗೆ ಆ ಅಸ್ತಿಯನ್ನು ವಿಸರ್ಜಿಸುತ್ತಾರೆ. ವ್ಯಕ್ತಿ ಸತ್ತ ದಿವಸದಿಂದ ಹನ್ನೊಂದು ದಿನದವರೆಗೆ ಸತ್ತ ವ್ಯಕ್ತಿಯ ಮನೆಯವರು ಹಾಗೂ ಸಹೋದರ ಸಂಬಂಧದವರು ಸೂತಕವನ್ನು ಆಚರಿಸುವರು. ಹನ್ನೊಂದು ಮತ್ತು ಹನ್ನೆರಡನೆಯ ದಿನದಂದು ಸತ್ತವರ ಆತ್ಮಶಾಂತಿಗಾಗಿ ಆಚಾರ್ಯರ ಪುರೋಹಿತ್ಯದಲ್ಲಿ ದಿನಕರ್ಮವನ್ನು ಮಾಡುತ್ತಾರೆ. ಸತ್ತ ವ್ಯಕ್ತಿಗೆ ಉಪನಯನ, ಮದುವೆ ಆಗಿರದಿದ್ದರೆ ಚಟ್ಟದ ಮೇಲೆ ಶವವನ್ನು ಬೋರಲು ಹಾಕಿ ಸುಡಲಾಗುತ್ತದೆ.

ಪಾಂಚಾಳರು ಹಬ್ಬ ಹರಿದಿನಗಳಿಗೆ ಸಂಬಂಧಿಸಿದಂತೆ ವಾರ್ಷಿಕ, ಮಾಸಿಕ ಹಬ್ಬಗಳನ್ನು ಆಚರಿಸುತ್ತಾರೆ. ಪ್ರತಿ ಮಂಗಳವಾರ, ಶುಕ್ರವಾರ, ಭಾನುವಾರಗಳಂದು ಮನೆಯ ಮುಂದಿನ ಅಂಗಳವನ್ನು ಗೋಮಯದಿಂದ ಸಾರಿಸಿ ರಂಗೋಲಿಯನ್ನು ಹಾಕುತ್ತಾರೆ. ದಿನಂಪ್ರತಿ ಬೆಳಗ್ಗೆಯೇ ಮನೆಯ ಬಾಗಿಲ ಹೊಸ್ತಿಲುಗಳನ್ನು ತೊಳೆದು ಕುಂಕುಮ ಅರಿಶಿಣವನ್ನು ಹಚ್ಚುತ್ತಾರೆ. ನಂತರ ಅವರ ವೃತ್ತಿ ಉಪಕರಣಗಳಿಗೆ ಅಂದರೆ ಕಾಳಿಕದೇವಿಗೆ ಪೂಜೆ ಮಾಡಿ ವೃತ್ತಿಯ ಕೆಲಸವನ್ನು ಆರಂಭಿಸುವುದು. ಅಮವಾಸ್ಯೆಯ ದಿವಸದಂದು ಕಳಶ ಹೂಡಿ ದೀಪಬೆಳಗಿ ಉಪಕರಣಗಳನ್ನು ಪೂಜೆ ಮಾಡುವರು. ಯುಗಾದಿ, ಮಹಾನವಮಿ, ದೀಪಾವಳಿ, ಗಣೇಶ ಚತುರ್ಥಿ, ಮಹಾಶಿವರಾತ್ರಿ, ಪಂಚಮಿ ಮುಂತಾದ ಹಬ್ಬಗಳ ಆಚರಣೆಯಲ್ಲಿ ವಿಶಿಷ್ಟ

ಸಂಪ್ರದಾಯದ ಪ್ರಕಾರ ಆಚರಿಸುತ್ತಾರೆ. ಯುಗಾದಿ, ಮಹಾನವಮಿ ಹಬ್ಬಗಳಲ್ಲಿ ವೃತ್ತಿಯ ಉಪಕರಣಗಳನ್ನು ಶುಚಿಗೊಳಿಸಿ ಕಳಶ ಹೂಡಿ ಒಂಭತ್ತುದಿನಗಳ ಕಾಲ ಕಾಳಿಕದೇವಿಗೆ ಜರದ ಮಡಿ ಉಡಿಸಿ ಬನ್ನಿ ಮರಕ್ಕೆ ಹೂ ಹಾರಗಳಿಂದ ಅಲಂಕರಿಸಿ ಪೂಜೆ ಕೈಗೊಳ್ಳುವರು.

ಸಮುದಾಯದ ದೇವತೆ, ಮಹಾನ್ ಪುರುಷರ ಆರಾಧನಾ ಮಹೋತ್ಸವವನ್ನು ಆಚರಿಸುವರು. ಯುಗಾದಿಯ ಸಂದರ್ಭದಲ್ಲಿ ವೃತ್ತಿದೇವತೆಯಾದ ಕಾಳಿಕದೇವಿಯ ರಥೋತ್ಸವ, ಶ್ರಾವಣ ಮಾಸದ ಕಡೆಯ ಸೋಮವಾರದಂದು ವರವಿಯಲ್ಲಿ ಮೌನೇಶ್ವರನ ರಥೋತ್ಸವ, ಜನವರಿ ತಿಂಗಳಲ್ಲಿ ತಿಂಥಿಣಿಯಲ್ಲಿ ಮೌನೇಶ್ವರನ ರಥೋತ್ಸವ, ಜುಲೈ ತಿಂಗಳಲ್ಲಿ ನವಲಗುಂದ ನಾಗಲಿಂಗಸ್ವಾಮಿಗಳ ಆರಾಧನಾ ಮಹೋತ್ಸವವನ್ನು ಹಾಗೂ ಪ್ರತಿಜಿಲ್ಲೆ, ತಾಲ್ಲೂಕು, ಊರುಗಳಲ್ಲಿ ವಿಶ್ವಕರ್ಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುವುದು ಪಾಂಚಾಳರ ಹಬ್ಬ ಹರಿದಿನಗಳ ಆಚರಣೆಗಳು ವೈಶಿಷ್ಟ್ಯಪೂರ್ಣವಾಗಿವೆ.

ಪಾಂಚಾಳ ಸಮುದಾಯದಲ್ಲಿ ಊಟಕ್ಕೆ ಸಂಬಂಧಿಸಿದ ವಿಶಿಷ್ಟ ಪದ್ಧತಿ ರೂಢಿಯಲ್ಲಿ ಯಾವುದೇ ಕಾರ್ಯಗಳಲ್ಲಿಯಾದರು ಮೊದಲಿಗೆ ಎಲ್ಲರು ತಮ್ಮ ಮೇಲು ವಸ್ತ್ರವನ್ನು ಕಳಚಿ ಬರಿ ಮೈಯಲ್ಲೇ ಊಟಕ್ಕೆ ಕುಳಿತುಕೊಳ್ಳಬೇಕು. ಊಟಕ್ಕೆ ಕುಳಿತುಕೊಳ್ಳುವ ಸಂದರ್ಭದಲ್ಲಿ ಹಣೆಯ ಮೇಲೆ ಗಂಧವನ್ನು ಹಚ್ಚಿಕೊಳ್ಳುತ್ತಾರೆ. ದಿನಕರ್ಮದ ದಿವಸ ಗಂಧವನ್ನು ಅರ್ಧ ಚಂದ್ರಾಕೃತಿಯಾಗಿ ಹಚ್ಚಿಕೊಳ್ಳುತ್ತಾರೆ. ಊಟಕ್ಕೆ ಆಚಾರ್ಯಸ್ವಾಮಿಯವರ ಜೊತೆಯಲ್ಲಿ ಸಮುದಾಯದ ಹಿರಿಯರು ಊಟಕ್ಕೆ ಕುಳಿತುಕೊಳ್ಳುತ್ತಾರೆ. ಮೊದಲು ಊಟದ ಎಲೆಯಲ್ಲಿ ಅನ್ನ ಸಾಂಬರನ್ನು ಮಾತ್ರ ಬಡಿಸಲಾಗುತ್ತದೆ. ಬಡಿಸಿದ ನಂತರ ಮನೆಯ ಯಜಮಾನ ಅಲ್ಲಿ ನೆರೆದಿರುವ ಸಮುದಾಯದ ದೈವಕ್ಕೆ ಪೂಜೆ ಸಲ್ಲಿಸಿದ ಮೇಲೆ ಬಡಿಸಿರುವ ಅನ್ನ ಸಾಂಬರನ್ನು ಊಟ ಮಾಡುತ್ತಾರೆ. ಇದಾದ ಮೇಲೆ ಸಿಹಿ ಅಡುಗೆಯನ್ನು ಬಡಿಸಲಾಗುತ್ತದೆ. ನಂತರ ಮತ್ತೆ ಅನ್ನಸಾಂಬರನ್ನು ಬಡಿಸಲಾಗುತ್ತದೆ. ಇದರಂತೆಯೇ ಎಲ್ಲಾ ಕಾರ್ಯಗಳಲ್ಲಿಯೂ ಊಟದ ವ್ಯವಸ್ಥೆ ನಡೆಯುತ್ತದೆ. ನಂತರ ಹೆಣ್ಣು ಮಕ್ಕಳಿಗೆ ಊಟವನ್ನು ಬಡಿಸಲಾಗುತ್ತದೆ. ಹೀಗೆ ಪಾಂಚಾಳ ಸಮುದಾಯದಲ್ಲಿ ಹುಟ್ಟಿನಿಂದ ಚಟ್ಟದವರೆಗೂ ಅವರ ಅನುಸರಿಸುವ ಆಚರಣೆ ಸಂಪ್ರದಾಯಗಳು ಈ ಪರಿಸರದಲ್ಲಿ ವೈವಿಧ್ಯಮಯತೆಯಿಂದ ಕೂಡಿರುವುದನ್ನು ಕಾಣಬಹುದಾಗಿದೆ.

ನಂಬಿಕೆಗಳು

೦೧. ಗ್ರಹಣ ಹಿಡಿದ ಸಂದರ್ಭದಲ್ಲಿ ಬಸುರಿ ಹೆಣ್ಣುಮಕ್ಕಳು ಮನೆಯಿಂದ ಹೊರಗಡೆ ಬರುವಂತಿಲ್ಲ ತರಕಾರಿ ಹಣ್ಣು ಹಂಪಲ ಮುಂತಾದವುಗಳನ್ನು ಕೊಯ್ಯುವಂತಿಲ್ಲ.

೦೨. ಬಸುರಿ ಹೆಣ್ಣುಮಗಳನ್ನು ಮಧ್ಯಾಹ್ನ ಹನ್ನೆರಡರಿಂದ ಮೂರು ಗಂಟೆಯ ತನಕ ಹಾಗೂ ಸಾಯಂಕಾಲ ಆರು ಗಂಟೆಯಿಂದ ಏಳು ಗಂಟೆಯವರೆಗೆ ಮನೆಯಿಂದ ಹೊರಗಡೆ ಕಳಿಸುವುದಿಲ್ಲ.

೦೩. ಬಸುರಿಯಾದ ಹೆಣ್ಣುಮಗಳ ಗಂಡ ಯಾವುದೇ ಶವಸಂಸ್ಕಾರಗಳಲ್ಲಿ ಭಾಗವಹಿಸುವಂತಿಲ್ಲ.

೦೪. ಬಸುರಿಯಾದ ಸಂದರ್ಭದಲ್ಲಿ ಬಯಕೆಯ ಬುತ್ತಿಯನ್ನು ತವರು ಮನೇಯವರು ತರಲಿಲ್ಲವೆಂದರೆ ಹುಟ್ಟುವ ಮಗುವಿನ ಕಿವಿ ಸೋರುತ್ತದೆ ಹಾಗೂ ಎದೆಯ ಹಾಲು ಬತ್ತುತ್ತದೆ ಎಂಬ ನಂಬಿಕೆ.

೦೫. ಮಗುವಿನ ನಾಮಕರಣದ ದಿವಸ ಜೋಗುಳದ ಹಾಡನ್ನು ಹಾಡಬೇಕು. ಹಾಡುಗಳನ್ನು ಹಾಡದಿದ್ದರೆ ಮಗುವಿಗೆ ಬಾಯಿ ಬರುವುದಿಲ್ಲ.

೦೬. ಬಸುರಿಯಾದ ಹೆಣ್ಣು ಮಗಳಿಗೆ ನಂಜಿನ ಪದಾರ್ಥಗಳನ್ನು ತಿನ್ನಲು ಕೊಡುವುದಿಲ್ಲ.

೦೭. ಮಗುವಿನ ತೊಟ್ಟಿಲನ್ನು ಕಾಲಿನಿಂದ ಒದೆಯಬಾರದು ಹಾಗೂ ಖಾಲಿ ತೊಟ್ಟಿಲನ್ನು ತೂಗಬಾರದು.

೦೮. ಮಗುವಿಗೆ ಮೂರು ತಿಂಗಳು ತುಂಬುವುದರೊಳಗೆ ಕಿವಿಗೆ ಮುರುವು ಚುಚ್ಚುವುದು.

೦೯. ಮಗು ಜನಿಸಿದ ತಕ್ಷಣವೇ ಮಗುವಿನ ತಂದೆ ಕಡೆಯವರು ಯಾರು ನೋಡುವಂತಿಲ್ಲ.

೧೦. ಬಸುರಿಯಾದ ಹೆಣ್ಣುಮಗಳಿಗೆ ಚೇಳು ಕಡಿದರೆ ಒಳ್ಳೆಯದು. ಜನಿಸುವ ಮಗುವಿಗೆ ಅದರ ಜೀವಿತ ಕಾಲದಲ್ಲಿ ಎಷ್ಟೇ ಚೇಳು ಕಡಿದರೂ ವಿಷಬಾಧೆ ಆಗುವುದಿಲ್ಲ.

೧೧. ಮಕ್ಕಳು ಹೆಚ್ಚು ಅಳುತ್ತಿದ್ದರೆ ಒಣಮೆಣಸಿನಕಾಯಿ, ಉಪ್ಪು ಹಾಗೂ ಹುಲ್ಲು ಕಸಬರಿಗೆಯ ಎಳೆಯಿಂದ ಮಗುವಿಗೆ ಅಡಿಯಿಂದ ಮುಡಿಯತನಕ ಮೂರು ಬಾರಿ ಇಳೆದೆಗೆದು ಮುಖಕ್ಕೆ ಉಗುಳಿ ಅವುಗಳನ್ನು ಒಲೆಯೊಳಗೆ ಹಾಕುತ್ತಾರೆ.

೧೨. ಆರುವರುಷ ಒಳಗಿರುವ ಮಕ್ಕಳನ್ನು ಮುರಸಂಜೆ ಸಮಯದಲ್ಲಿ ಮನೆಯಿಂದ ಹೊರಗಡೆ ಬಿಡುವುದಿಲ್ಲ.

೧೩. ಪಾಂಚಾಳರಲ್ಲಿ ಕರಿಬಟ್ಟೆ, ಕರಿದಾರವನ್ನು ಉಪಯೋಗಿಸುವುದಿಲ್ಲ.

೧೪. ಮನೆಯಲ್ಲಿ ಯಾರಾದರೂ ಹೊಸ್ತಿಲ ಮೇಲೆ ಸೀನಿದರೆ ಹೊಸ್ತಿಲಿಗೆ ನೀರನ್ನು ಚಿಮುಕಿಸುವರು.

೧೫. ಮಕ್ಕಳನ್ನು ಸ್ನಾನ ಮಾಡಿ ಮಲಗಿಸುವ ಸಂದರ್ಭದಲ್ಲಿ ತೊಟ್ಟಿಲ ಕೆಳಗೆ ಬೆಂಕಿಕೆಂಡದಲ್ಲಿ ಲೋಬಾನವನ್ನು ಹಾಕಿ ಇಡುವರು.

೧೬. ಮಕ್ಕಳು ಆಗಿರಲಿಲ್ಲದವರ (ಬಂಜೆ) ಹತ್ತಿರ ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳುವುದಕ್ಕೆ ಕೊಡಲು ಅನುಮಾನ ವ್ಯಕ್ತಪಡಿಸುವರು.

೧೭. ಮಗು ಜನಿಸಿದ ಸಂದರ್ಭ, ಹುಡುಗಿ ಕನ್ಯೆಯಾದ ಸಂದರ್ಭ, ಮನೆಯಲ್ಲಿ ಯಾರಾದರು ತೀರಿಕೊಂಡಾಗ ಸೂತಕವನ್ನು ಆಚರಿಸುತ್ತಾರೆ.

೧೮. ಮಗು ನಿದ್ದೆ ಮಾಡುವ ಸಂದರ್ಭ ಎಬ್ಬಿಸಬಾರದು. ಈ ಸಮಯದಲ್ಲಿ ಮಗು ದೇವರ ಹತ್ತಿರ ಇರುತ್ತೆ.

೧೯. ಮಗು ನಿರಂತರ ನಿದ್ದೆ ಮಾಡುತ್ತಿದ್ದರೆ ಬೀಗರು ಬರುವರೆಂಬ ನಂಬಿಕೆ.

೨೦. ಮಕ್ಕಳ ಹಲ್ಲು ಉದುರಿದಾಗ ಸಗಣಿಯೊಳಗೆ ಹಲ್ಲನ್ನು ಸೇರಿಸಿ ಸಣ್ಣ ಉಂಡೆ ಮಾಡಿ ಮನೆಯ ಮಳಿಗೆಯ ಮೇಲೆ ಎಸೆಯುತ್ತಾರೆ.

೨೧. ಮಗು ಎಚ್ಚರ ತಪ್ಪಿದಾಗ ಹಲಸಿನ ನಾರಿನಿಂದ ಮಗುವಿನ ಹೆಬ್ಬೆರಳು, ಕೈ, ಎದೆಭಾಗ, ಹಣೆ, ನೆತ್ತಿ ಈ ಭಾಗಗಳಿಗೆಲ್ಲ ಹಲಸಿನ ನಾರಿಗೆ ಬೆಂಕಿಯನ್ನು ಹಚ್ಚಿಕೊಂಡು ಸುಡುತ್ತಾರೆ.

೨೨. ಹುಡುಗಿ ಮೈ ನೆರೆದುದು ಗೊತ್ತಾದ ತಕ್ಷಣವೇ ಮನೆಯ ಮೂಲೆಯೊಂದರಲ್ಲಿ ಕುಳ್ಳಿರಿಸುತ್ತಾರೆ.

೨೩. ಮೈ ನೆರೆದ ಹುಡುಗಿಗೆ ಸೋದರ ಅತ್ತೆಯೇ ನೀರೆರೆಯಬೇಕು. ಹಾಗೂ ಹುಡುಗಿಗೆ ಊಟಕ್ಕಾಗಿ ಪ್ರತ್ಯೇಕವಾಗಿ ತಟ್ಟೆ, ಲೋಟ, ಚೆಂಬು, ಹಾಸಿಗೆಗಳನ್ನು ಕೊಡುತ್ತಾರೆ.

೨೪. ಮೈ ನೆರೆದ ಹುಡುಗಿಯು ಪರರನ್ನು ಮುಟ್ಟಿಸಿಕೊಳ್ಳುವಂತಿಲ್ಲ ಮತ್ತು ಮನೆಯಲ್ಲಿ ೯ ದಿನಗಳ ಕಾಲ ಸೂತಕವನ್ನು ಆಚರಿಸುತ್ತಾರೆ ಹಾಗೂ ಮೈ ನೆರೆದ ಹುಡುಗಿಯ ಬಟ್ಟೆಯನ್ನು ಮನೆಯ ಮಡಿವಾಳರು ಸೆಳೆದುಕೊಡಬೇಕು.

೨೫. ವರಗಾದಾಗ (ಮುಟ್ಟು) ತುಳಸಿ, ನಿಂಬೆ, ಕರಿಬೇವಿನಗಿಡ ಇವುಗಳ ಮೇಲೆ ಅವರ ನೆರಳು ಬೀಳುವಂತಿಲ್ಲ.

೨೬. ಹೆಣ್ಣನ್ನು ನೋಡಲು ಹೋಗುವಾಗ ಕ್ಷೌರಿಕ, ಒಂಟಿಬ್ರಾಹ್ಮಣ, ಗಾಣಿಗ ಅಡ್ಡ ಬಂದರೆ ಅಶುಭ. ಹಾಗೂ ನೋಡಲು ಹೋದಾಗ ಆ ಮನೆಯಲ್ಲಿ ಹುಡುಗಿ ಕಸ ಗುಡಿಸುತ್ತಿರಬಾರದು, ಜಡೆಹಾಕಿಕೊಳ್ಳುತ್ತಿರಬಾರದು ಹಾಗೂ ಹುಡುಗಿಯ ಕಣ್ಣು ಕಾಡಿಗೆ ಕಣ್ಣು ಆಗಿರಬಾರದು.

೨೭. ಹೆಣ್ಣು ಮಕ್ಕಳಿಗೆ ಕಪ್ಪು ಮಚ್ಚೆ ದೇಹದ ಬಲಭಾಗದ ಕಡೆ, ಗಂಡು ಮಕ್ಕಳಿಗೆ ಎಡಭಾಗದ ಕಡೆ ಇದ್ದರೆ ಅವಲಕ್ಷಣವೆಂದು ತಿಳಿಯುತ್ತಾರೆ.

೨೮. ಹೆಣ್ಣು ಇಲ್ಲವೆ ಗಂಡು ಮಗು ಜನಿಸುವಾಗಲೇ ದೇಹದ ಯಾವುದಾದರೂ ಒಂದು ಭಾಗ ಊನವಾಗಿದ್ದರೆ ಅವರನ್ನು ಮದುವೆ ಅಥವಾ ಶುಭಕಾರ್ಯಗಳಲ್ಲಿ ಕರೆದುಕೊಳ್ಳುವುದಿಲ್ಲ.

೨೯. ಹೆಣ್ಣು ಗಂಡಿಗೂ ತೊನ್ನು ಇರಬಾರದು.

೩೦. ಹೆಣ್ಣು ನೋಡಲು ಹೊರಟಾಗ ದಾರಿಯುದ್ದಕ್ಕೂ ಶುಭಸೂಚನೆಗಳೇ ಕಂಡು ಬಂದರೆ ಆಸಂಬಂಧ ಒಳ್ಳೆಯದು ಎಂದು ಭಾವಿಸುತ್ತಾರೆ. ಹಾಗೂ ಹುಡುಗಿಯ ಎಡಗಡೆಯ ಕಣ್ಣು ಮೇಲುಗಣ್ಣು ಆಗಿದ್ದರೆ ಅದೃಷ್ಟವಂತಳು.

೩೧. ಸ್ತ್ರೀಯರು ಪುನರ್ ವಿವಾಹವಾಗುವಂತಿಲ್ಲ. ಚಿಕ್ಕವಯಸ್ಸಿನಲ್ಲೇ ವಿಧವೆಯಾದರೂ ಮರುಮದುವೆಗೆ ಅವಕಾಶವಿಲ್ಲ. ಆದರೆ ಗಂಡಸರಿಗೆ ಸಂಪ್ರದಾಯಿಕವಾಗಿ ಇಲ್ಲವಾದರೂ ಮರುಮದುವೆಗೆ ಅವಕಾಶವಿದೆ.

೩೨. ಮದುವೆ ನಿಶ್ಚಯವಾದ ಮೇಲೆ ಹೆಣ್ಣು ಅಥವಾ ಗಂಡಿನ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ವರುಷದೊಳಗೆ ಮದುವೆ ಮಾಡಬೇಕು. ಇಲ್ಲವಾದರೆ ಮೂರುವರುಷಗಳ ತನಕ ಬಿಡಬೇಕು.

೩೩. ಮದುವೆಯ ಸಂದರ್ಭದಲ್ಲಿ ಆಚಾರ್ಯ ಸ್ವಾಮಿಗಳು ಪೂಜೆ ಮಾಡಿಕೊಟ್ಟಿರುವ ಟೆಂಗಿನ ಕಾಯಿಯನ್ನು ಯಾರ ಕೈಯಲ್ಲಿಯೂ ಕೊಡುವಂತಿಲ್ಲ.

೩೪. ಮದುಮಕ್ಕಳಿಬ್ಬರು ಹುಣಸೆಮರದಡಿಗೆ ಹೋಗುವಂತಿಲ್ಲ.

೩೫. ಸುರಿಗಿಯ ಸಂದರ್ಭದಲ್ಲಿ ಬಿಟ್ಟಂತಹ ಬಟ್ಟೆಗಳನ್ನು ಮನೆಯ ಮಡಿವಾಳರು ಸೆಳೆದುಕೊಡಬೇಕು. ಹಾಗೂ ಅಶುಭ ಪ್ರಾಣಿಗಳು ಬಾರದಂತೆ ಎಚ್ಚರವಯಿಸುತ್ತಾರೆ. ಹಾಗೂ ಸುರಿಗಿ ಎರೆಯುವಲ್ಲಿ ಮುತ್ತೈದೆಯರು ಮಾತ್ರ ಭಾಗವಹಿಸಬೇಕು.

೩೬. ಪ್ರಸ್ತದ ಎರಡನೆಯ ದಿನ ಮದುಮಗ ಹೆಣ್ಣಿನ ಮನೆಯಲ್ಲಿರಬಾರದು.

೩೭. ಉಪನಯನ ಸಂದರ್ಭದಲ್ಲಿ ಮೂರು ಎಳೆಯ ಜನಿವಾರ ಮದುವೆಯ ಸಂದರ್ಭದಲ್ಲಿ ಆರೆಳೆಯ ಜನಿವಾರವನ್ನು ಹಾಕುತ್ತಾರೆ.

೩೮. ಸತ್ತ ವ್ಯಕ್ತಿಯ ಮನೆ ಸೂತಕವಾಗಿರುತ್ತದೆ.

೩೯. ಸತ್ತ ವ್ಯಕ್ತಿಯ ಮನೆಯಲ್ಲಿ ಹತ್ತು ದಿನಗಳವರೆಗೆ ಯಾವುದೇ ಶುಭಕಾರ್ಯಗಳನ್ನು ಕೈಗೊಳ್ಳುವಂತಿಲ್ಲ.

೪೦. ಸತ್ತ ವ್ಯಕ್ತಿಗೆ ಮನೆಯ ಹಿರಿಯ ಮಗನೇ ಕಿಚ್ಚನ್ನು ಇಡಬೇಕು. ಅವರಿಗೆ ಮಕ್ಕಳಿಲ್ಲದಿದ್ದರೆ ಸಹೋದರ ಸಂಬಂಧದವರು ಕಿಚ್ಚನ್ನು ಇಡಬೇಕು.

೪೧. ಶವವನ್ನು ಸುಡುವ ಸಂಪ್ರದಾಯವಿದೆ. ಸತ್ತವ್ಯಕ್ತಿ ಮದುವೆ ಆಗಿಲ್ಲದಿದ್ದರೆ ಶವವನ್ನು ಬೋರಲು ಹಾಕಿ ಸುಡುತ್ತಾರೆ.

೪೨. ಶವ ಸುಟ್ಟ ಬೂದಿಯನ್ನು ನದಿಗಳಿಗೆ ಬಿಡುವರು.

೪೩. ದಿನ ಕರ್ಮದ ದಿವಸ ಕಿಚ್ಚು ಇಟ್ಟ ವ್ಯಕ್ತಿಯ ತಲೆಯ ಕೂದಲನ್ನು ಬೋಳಿಸುತ್ತಾರೆ. ಹಾಗೂ ದಿನಕರ್ಮದ ದಿವಸ ಕಾಗೆಗಳು ಎಡೆಯನ್ನು ಮುಟ್ಟದಿದ್ದರೆ, ಆಸೆಯನ್ನು ಇಟ್ಟುಕೊಂಡು ಸತ್ತಿದ್ದಾರೆ ಇಲ್ಲವೆ ಧರ್ಮಾತ್ಮನಾಗಿ ಇರಲಿಲ್ಲ ಎಂದುಕೊಳ್ಳುತ್ತಾರೆ.

೪೪. ಹಿರಿಯರ ಹಬ್ಬಗಳನ್ನು ಆಚರಿಸಿದರೆ ಮಾತ-ಪಿತೃ ಸಂತೃಪ್ತರಾಗಿರುತ್ತಾರೆ.

೪೫. ಪಿಂಡ ಹಾಕಿದರೆ ಮೃತನಿಗೆ ಮೋಕ್ಷ ದೊರೆಯುವುದು.

೪೬. ಶನಿವಾರ ಹಾಗೂ ಅಮವಾಸ್ಯೆ ದಿನಗಳಂದು ಸತ್ತರೆ ಸ್ವರ್ಗಕ್ಕೆ ಹೋಗುವುದಿಲ್ಲ ಅಂತರಪಿಶಾಚಿಯಾಗಿ ತಿರುಗುತ್ತಾರೆ.

೪೭. ಶವ ಸಂಸ್ಕಾರಕ್ಕೆ ಹೋದವರು ಸ್ನಾನ ಮಾಡಿ ದೇವರಿಗೆ ನಮಸ್ಕಾರಿಸಿ ಮನೆಯ ಒಳಗೆ ಬರಬೇಕು.

೪೮. ಶವವನ್ನು ನೋಡಲಿಕ್ಕೆ ಹೋಗುವವರು ಮೈಯಲ್ಲಿ ಕಟ್ಟಿಕೊಂಡ ತಾಯತಗಳನ್ನು ಬಿಚ್ಚಿಟ್ಟು ಹೋಗಬೇಕು.

೪೯. ಮನೆಯ ಮುಂದಿನ ಅಂಗಳವನ್ನು ಮಂಗಳವಾರ, ಶುಕ್ರವಾರ ಹಾಗೂ ಹಬ್ಬದ ದಿವಸಗಳಂದು ಗೋಮಯದಿಂದ ಬಳಿದು ರಂಗೋಲಿ ಇಡದಿದ್ದರೆ ಹಿರಿಯರಿಗೆ ಪ್ರೀತಿ ಆಗುವುದಿಲ್ಲ.

೫೦. ಹಬ್ಬದಿನ ಮಾಡಿದಂತಹ ಅಡುಗೆಯನ್ನು ದೇವರಿಗೆ ಹಾಗೂ ವೃತ್ತಿ ಉಪಕರಣಗಳಿಗೆ ಅರ್ಪಿಸುವ (ನೈವೇದ್ಯ ಮಾಡುವುದು) ತನಕ ಯಾರು ಊಟ ಮಾಡುವಂತಿಲ್ಲ ಹಾಗೂ ಎಲ್ಲರೂ ಮಡಿಯಿಂದರಬೇಕು.

೫೧. ಹಬ್ಬದ ದಿವಸ ಮನೆಯವರು ಯಾರಾದರೂ ತೀರಿಕೊಂಡರೆ ಮೂರು ವರುಷಗಳ ತನಕ ಆ ಹಬ್ಬವನ್ನು ಆಚರಿಸುವುದಿಲ್ಲ.

೫೨. ಯುಗಾದಿ ಪಾಡ್ಯದ ದಿವಸ ಬೆಳಗ್ಗೆಯೆ ರತ್ನಪಕ್ಷಿಯನ್ನು ನೋಡುವುದು, ಸಾಯಂಕಾಲ ಚಂದ್ರದರ್ಶನವನ್ನು ಪಡೆಯುವುದು.

೫೩. ಅಮವಾಸ್ಯೆಯ ದಿವಸ ಮನೆಯಲ್ಲಿರುವ ರೊಕ್ಕವನ್ನು (ಹಣ) ಹೊರಗಡೆಯವರಿಗೆ ಕೊಡುವುದಿಲ್ಲ.

೫೪. ಸೀಗೆ ಹುಣ್ಣಿಮೆಯ ಕಾಲದಲ್ಲಿ ಭೂಮಿ ಬಸುರಿಯಾಗಿರುತ್ತಾಳೆ ಬಯಕೆ ತೀರಿಸಬೇಕು.

೫೫. ಬೇರೆ ಸಮುದಾಯದವರು ಹಬ್ಬದ ಮರು ದಿವಸ ಆಚರಿಸುವ ಕರಿ ಹಬ್ಬದಂದು ಪಾಂಚಾಳರು ಮನೆಯಲ್ಲಿ ಪೂಜೆ ಮಾಡುವುದಿಲ್ಲ.

೫೬. ಪಂಚಮಿಯ ಸಂದರ್ಭದಲ್ಲಿ ಹಾವನ್ನು ಕೊಲ್ಲಬಾರದು.

೫.೧.೪. ಪಾಂಚಾಳರ ಧಾರ್ಮಿಕ-ಸಾಮಾಜಿಕ ಸ್ಥಾನಮಾನ

ಪ್ರತಿಯೊಂದು ಸಮುದಾಯವು ತನ್ನ ವೃತ್ತಿಗನುಗುಣವಾಗಿ ತನ್ನದೆ ಆದ ಸ್ಥಾನಮಾನಗಳನ್ನು ಇಟ್ಟುಕೊಂಡು ಬಂದಿರುತ್ತದೆ. ಈ ಸ್ಥಾನಮಾನಗಳ ಪ್ರಾಶಸ್ತ್ಯ ತಿಳಿಯುವುದು ಊರಿನ ಸಾಮಾಜಿಕ ಧಾರ್ಮಿಕ ಚಟುವಟಿಕೆಗಳು ನಡೆಯುವ ಸಂದರ್ಭಗಳಲ್ಲಿ ಇಂತಹ ಸನ್ನಿವೇಶಗಳಲ್ಲಿ ಊರಿನ ಎಲ್ಲ ಸಮುದಾಯದವರು ಜೊತೆ ಸೇರಿ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಆ ಸಮುದಾಯಕ್ಕೆ ಇರುವ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳ ಸ್ಥಾನವನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ ಯಾವುದೇ ಊರಲ್ಲಿ ಗ್ರಾಮ ದೇವತೆಯ ಹಬ್ಬವು ನಡೆಯಬೇಕಾದರೆ ಮೊದಲು 'ಹಬ್ಬಕ್ಕೆ ಸಾರುವ' ಆಚರಣೆ ಪ್ರಾರಂಭವಾಗುತ್ತದೆ. 'ಹಬ್ಬಕ್ಕೆ ಸಾರುವ' ಆಚರಣೆ ಎಂದರೆ ಊರಿನ ಸಮಸ್ತ ದೈವದವರು ಸೇರಿ ಇಂತಹ ದಿನದಿಂದ ಹಬ್ಬವನ್ನು ಪ್ರಾರಂಭಿಸಬಹುದೆಂದು ನಿರ್ಧರಿಸುತ್ತಾರೆ. ಈ ಗೊತ್ತು ಮಾಡಿದ ಹಬ್ಬದ ದಿನವನ್ನು ಊರಿನ ಚಲವಾದಿಗಳು ಇಂತಹ ದಿವಸದಿಂದ ಗ್ರಾಮದೇವತೆಯ ಹಬ್ಬ ಪ್ರಾರಂಭವಾಗುತ್ತದೆ. ಮೊದಲನೆಯ ದಿವಸ ಕೇಲು ತರುವುದು ಎರಡನೆಯ ದಿವಸ ದೇವಿ ಹೊಳೆ ಪೂಜೆಗೆ ಹೋಗುವುದು ಮೂರನೆಯ ದಿವಸ ದೇವಿಗೆ ಉಡಿ ತುಂಬುವುದು ನಾಲ್ಕನೆಯ ದಿವಸ ಕೋಣವನ್ನು ದೇವಿಗೆ ಬಲಿಕೊಡುವುದು ಐದನೆಯ ದಿವಸ ದೇವಿಯ ಬಳೆಯನ್ನು ತೆಗೆಯುವುದು ಹಾಗೂ ಊರಿನ ಸಮಸ್ತ ದೈವದವರು ಹಬ್ಬ ಮುಕ್ತಾಯವಾಗುವ ತನಕ ಮಡಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಊರಿನ ಪ್ರತಿಯೊಂದು ಓಣಿ ಓಣಿಗಳಲ್ಲಿ ಹಬ್ಬದ ಬಗ್ಗೆ ಸಾರಿಕೊಂಡು ಬರುತ್ತಾನೆ. ಅವನು ಸಾರಿಕೊಂಡು ಬಂದ ದಿವಸದಿಂದಲೇ ಹಬ್ಬ ಪ್ರಾರಂಭವಾಗುತ್ತದೆ. ಈ ದಿನಗಳಲ್ಲಿ ಸಾಮಾಜಿಕವಾಗಿ ಕೆಳ ಅಂತಸ್ತಿನವನಾದ ಈತನಿಗೆ ಅಂದು ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಉತ್ತಮ ಸ್ಥಾನಮಾನ ದೊರಕುವುದನ್ನು ಕಾಣಬಹುದು. ಆ ಸಂದರ್ಭಗಳಲ್ಲಿ ಈ ಕೆಲಸವನ್ನು ಇವರೇ ನಿರ್ವಹಿಸಬೇಕು. ಹೀಗೆ ಒಂದೊಂದು ಸಮುದಾಯಕ್ಕೂ ತಮ್ಮದೇ ಆದ ಸ್ಥಾನಮಾನಗಳಿರುವುದನ್ನು ಕಾಣಬಹುದು ಹಾಗೆಯೇ ಪಾಂಚಾಳ ಸಮುದಾಯದವರಿಗೂ ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ತಮ್ಮದೇ ಸ್ಥಾನಮಾನವನ್ನುಗಳಿಸಿಕೊಂಡು ಬಂದಿದ್ದಾರೆ. ಅಂತಹವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಗ್ರಾಮ ದೇವತೆಗಳ ಪೂಜಾರಿಕೆಯನ್ನು ಪಾಂಚಾಳ ಸಮುದಾಯದವರು ನಿರ್ವಹಿಸುತ್ತಿರುತ್ತಾರೆ. ಗ್ರಾಮದೇವತೆಯ ಹಬ್ಬದ ಪ್ರತಿಯೊಂದು ಕಾರ್ಯಗಳಲ್ಲಿ ಪಾಂಚಾಳ ಸಮುದಾಯದವರು ನಿಂತಿದ್ದು ಕಾರ್ಯ ನಿರ್ವಹಿಸಬೇಕು. ಮೊದಲು ಗ್ರಾಮ ದೇವತೆಯ ಹಬ್ಬ ಪ್ರಾರಂಭವಾಯಿತೆಂದರೆ ಕುಂಬಾರನ

ಮನೆಗೆ ಪಾಂಚಾಳ ಸಮುದಾಯದವರು ಹಾಗೂ ಊರಿನ ದೈವದವರು ಕಳಶದ ಮುಖಾಂತರ ಹೋಗಿ ಕೇಲನ್ನು ಹೊರುವ ಪಾಂಚಾಳ ಸಮುದಾಯದ ವ್ಯಕ್ತಿಗಳು ಹಾಗೂ ಕೇಲಗಳನ್ನು ಕುಂಬಾರನ ಕೈಯಿಂದ ಪೂಜೆ ಮಾಡಿಸಿ ಕೇಲುಗಳನ್ನು ಆ ವ್ಯಕ್ತಿಗಳ ತಲೆಯ ಮೇಲೆ ಹೊರಿಸಿಕೊಂಡು ಬಂದು ಆಯಗಾರರ ಮನೆಯಲ್ಲಿ ಅವುಗಳನ್ನು ಪ್ರತಿಷ್ಠಾಪಿಸುತ್ತಾರೆ. ಮಡಿವಾಳರು ಕೇಲು ಹೊತ್ತ ಪಾಂಚಾಳರಿಗೆ ಮಡಿ ಉಡುಗೆಯನ್ನು ಹಾಸಿಕೊಂಡು ಬರುತ್ತಿರುತ್ತಾರೆ. ಈ ಮಡಿ ಉಡುಗೆಯ ಮೇಲೆ ಪಾಂಚಾಳರು ನಡೆದುಕೊಂಡು ಬರಬೇಕು. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಪಾಂಚಾಳ ಸಮುದಾಯದವರಿಂದಲೇ ಹಬ್ಬದ ಪ್ರಮುಖ ಆಚರಣೆಗಳು ಪ್ರಾರಂಭವಾಗುತ್ತವೆ ಹಾಗೂ ಇವರ ಪ್ರಾತಿನಿಧ್ಯತೆ ಇದ್ದೇ ಇರುತ್ತದೆ.

ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ಆದ ದೈವಗಳು ಇವೆ. ಆ ದೈವಗಳ ಆಚರಣೆಯನ್ನು ಆ ಸಮುದಾಯದವರು ಹಾಗೂ ಇತರೆ ಸಮುದಾಯದವರು ಸೇರಿ ಆಚರಿಸುವುದನ್ನು ಕಾಣುತ್ತೇವೆ. ಗ್ರಾಮಗಳಲ್ಲಿರುವ ಆಂಜನೇಯ, ವೀರಭದ್ರೇಶ್ವರ, ಕೊಟ್ಟೂರೇಶ್ವರ, ಹಾಲಸ್ವಾಮಿ, ಸಿದ್ಧಲಿಂಗೇಶ್ವರ ಇತ್ಯಾದಿ ದೈವಗಳು ಒಂದು ಸಮುದಾಯಕ್ಕೆ ಮಿಸಲು ಆಗಿರುವುದಿಲ್ಲ. ಇಂತಹ ದೈವಗಳ ಆಚರಣೆಯನ್ನು ಎಲ್ಲ ಸಮುದಾಯಗಳು ಸೇರಿ ಆಚರಿಸುವುದನ್ನು ನೋಡಬಹುದು. ಈ ದೈವಗಳಿಗೆ ಸಂಬಂಧಿಸಿದ ರಥೋತ್ಸವವನ್ನು ಆಚರಿಸುತ್ತಾರೆ. ಈ ರಥೋತ್ಸವದ ನಿರ್ಮಾಣಕಾರರು ಪಾಂಚಾಳ ಸಮುದಾಯದವರು. ದೇವರ ಉತ್ಸವ ಇನ್ನು ಹದಿನೈದು ದಿವಸ ಮುಂಚಿತವಾಗಿರುವಾಗಲೇ ತೇರಿನ ಗಾಲಿಗಳನ್ನು ಹೊರಕ್ಕೆ ಹಾಕುತ್ತಾರೆ. ಈ ಶಾಸ್ತ್ರವನ್ನು ಆ ಊರಿನ ಮಾದಿಗ ಸಮುದಾಯದ ಹಿರಿಯ ವ್ಯಕ್ತಿಯೊಬ್ಬ ತಮ್ಮಟೆಯನ್ನು ಬಾರಿಸುತ್ತ ಪ್ರತಿಯೊಂದು ಓಣಿ ಓಣಿಗಳಲ್ಲಿ "ನಾಳೆ ಸಾಯಂಕಾಲ ತೇರಿನ ಗಾಲಿಯನ್ನು ಹೊರಕ್ಕೆ ಹಾಕ್ತಾರಂತೆ ಎಲ್ಲರೂ ಸೇರಬೇಕಪ್ಪ" ಎಂದು ಸಾರುತ್ತಾನೆ. ಆ ದಿವಸ ಬಡಿಗನಿಗೂ ಕೂಡ ತಿಳಿಸುತ್ತಾರೆ. ಏಕೆಂದರೆ ಬಡಿಗನೇ ತೇರಿನಗಾಲಿಯನ್ನು ಪೂಜೆ ಮಾಡುವವನು.

ಸಾಯಂಕಾಲ ಐದುಗಂಟೆಯ ಸುಮಾರು ಉತ್ಸವ ಮೂರ್ತಿಯ ಜೊತೆಗೆ ತೇರಿನ ಗಡ್ಡೆಯನ್ನು ಪೂಜೆ ಮಾಡುತ್ತಾರೆ. ಈ ತೇರಿನ ಗಡ್ಡೆಯನ್ನು ಪೂಜೆ ಮಾಡುವವರು ಬಡಿಗ. ತಮ್ಮ ವೃತ್ತಿ ಉಪಕರಣಗಳನ್ನು ಗಡ್ಡೆಯ ಜೊತೆಗಿಟ್ಟು ಪೂಜೆಯನ್ನು ಕೈಗೊಳ್ಳುತ್ತಾನೆ. ಈ ಪೂಜೆಗೆ ಊರಿನ ದೈವದವರು ಪೂಜೆಯ ಸಾಮಾಗ್ರಿಯ ಜೊತೆಗೆ ಉಲಿಪಿಯನ್ನು ಇಟ್ಟಿರುತ್ತಾರೆ. ಅಂದಿನಿಂದಲೆ ತೇರನ್ನು ಕಟ್ಟುವುದಕ್ಕೆ ಪ್ರಾರಂಭಿಸುತ್ತಾನೆ. ತೇರಿಗೆ ಬಣ್ಣ ಬಣ್ಣದ ಬಟ್ಟೆ, ದೇವರ ಫೋಟೋಗಳನ್ನು ತೂಗು ಹಾಕಿ ಅಲಂಕಾರಿಸುವರು. ನಂತರ ತೇರಿಗೆ ಕಳಶವನ್ನಿಡುವರು. ಈ ಕಳಶಯಿಡುವ ಸಂದರ್ಭದಲ್ಲಿ ಊರಿನ ದೈವದವರೆಲ್ಲರೂ ಸೇರಿ ಮೆರವಣಿಗೆಯ ಮುಖಾಂತರ ಬಡಿಗನ ಮನೆಗೆ ಹೋಗಿ ಕಳಶವನ್ನು ಪೂಜೆ ಮಾಡಿಕೊಂಡು ಬರುತ್ತಾರೆ. ನಂತರ ತೇರಿನ ಗಡ್ಡೆಯ ಹತ್ತಿರ ಮತ್ತೊಂದು ಸಲ ಪೂಜೆ ನೆರವೇರುತ್ತದೆ. ನಂತರ ಬಡಿಗನೇ ತೇರಿಗೆ ಕಳಶವನ್ನಿಡುತ್ತಾನೆ. ತೇರನ್ನು ಒಂದು ಗೊತ್ತಾದ ದಿವಸದಲ್ಲಿ ಎಳೆಯುತ್ತಾರೆ. ಆ ದಿವಸ ತೇರನ್ನು ಕಟ್ಟಿದ ಬಡಿಗನಿಗೆ ಹೊಸಬಟ್ಟೆಗಳನ್ನು ಹಾಗೂ ಹಬ್ಬದ ದಿವಸಕ್ಕೆ ಬಡಿಗನ ಮನೆಗೆ ಊಟಕ್ಕೆ ಬೇಕಾದ ಅಡಿಗೆಯ

ಸಾಮಾನುಗಳನ್ನು ಊರಿನ ದೈವದವರು ಕೊಡಿಸುತ್ತಾರೆ. ತೇರನ್ನು ಎಳೆಯುವ ಸಂದರ್ಭದಲ್ಲಿ ಬಡಿಗ ಮೊದಲು ತೇರು ಹಾಗೂ ತನ್ನ ಉಪಕರಣಗಳನ್ನು ಪೂಜೆ ಮಾಡುತ್ತಾನೆ. ನಂತರ ಉತ್ಸವ ಮೂರ್ತಿಯನ್ನು ತೇರಿನಲ್ಲಿಟ್ಟು ತೇರನ್ನು ಎಳೆಯುವರು. ಈ ತೇರಿಗೆ ಕಟ್ಟಿರುವಂತಹ ಬಾಳೆಗೊನೆ, ತೆಂಗಿನಕಾಯಿ ಇತ್ಯಾದಿಗಳನ್ನು ಬಡಿಗನೆ ತೆಗೆದುಕೊಂಡು ಹೋಗಬೇಕು. ಅವುಗಳನ್ನು ಇತರೇ ಸಮುದಾಯದವರು ತೆಗೆದುಕೊಳ್ಳುವಂತಿಲ್ಲ.

ಗ್ರಾಮಗಳಲ್ಲಿ ದೇವರುಗಳ ಹೆಸರಿನಲ್ಲಿ ಮುಳ್ಳು ಪವಾಡಗಳು ನಡೆಯುತ್ತವೆ. ಈ ಮುಳ್ಳು ಪವಾಡಗಳಲ್ಲಿ ಅಂಜನೇಯ, ಹಾಲಸ್ವಾಮಿ, ಸಿದ್ದೇಶ್ವರ ಇತ್ಯಾದಿ ದೈವಗಳ ಪೂಜಾರಿ ಮುಳ್ಳು ಗದ್ದುಗೆಯಲ್ಲಿ ಕುಣಿದು ಪವಾಡವನ್ನು ತೋರಿಸುತ್ತಾನೆ. ಆ ಸಂದರ್ಭದಲ್ಲಿ ಪೂಜಾರಿಯನ್ನು ದಾಸಪ್ಪ ಎಂದು ಕರೆಯುತ್ತಾರೆ. ಕೆಲವೊಂದು ಗ್ರಾಮಗಳಲ್ಲಿ ಸ್ವಾಮಿಗಳು ಕೂಡ ಮುಳ್ಳು ಗದ್ದುಗೆಯಲ್ಲಿ ಪವಾಡವನ್ನು ತೋರಿಸುವರು. ಈ ತರಹ ಪವಾಡಗಳನ್ನು ಮಾಡುತ್ತ ಊರಿಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಹೇಳುತ್ತಿರುತ್ತಾರೆ. ಇಂತಹ ಮುಳ್ಳಿನ ಗದ್ದುಗೆಯನ್ನು ನಿರ್ಮಿಸಿಕೊಡುವರು ಈ ಬಡಿಗ ಸಮುದಾಯದವರು. ಊರಿನ ಸಮಸ್ತ ದೈವದವರು ಸೇರಿ ಮೆರವಣಿಗೆಯ ಮುಖಾಂತರ ಕಳಶ ಹಾಗೂ ಉಲಿಪಿಯೊಂದಿಗೆ ಬಡಿಗನ ಮನೆಗೆ ಬಂದು ವೀಳ್ಯೆಯನ್ನು ಕೊಟ್ಟು ಪಾವಡ ನಡೆಯಲಿಕ್ಕೆ ಬೇಕಾದ ಗದ್ದುಗೆ ನಿರ್ಮಿಸಲಿಕ್ಕೆ ತಿಳಿಸುತ್ತಾರೆ. ಮುಳ್ಳಿನ ಪವಾಡ ನಡೆಯುವ ದಿವಸ ಬಡಿಗ ಊರ ಸಮುದಾಯದವರು ತಂದಿರುವಂತಹ ಕಾರೆ ಮುಳ್ಳಿನಿಂದ ಗದ್ದುಗೆಯನ್ನು ನಿರ್ಮಿಸುತ್ತಾನೆ. ನಂತರ ವೃತ್ತಿ ಉಪಕರಣ ಹಾಗೂ ಗದ್ದುಗೆಯನ್ನು ಬಡಿಗನ ಕೈಯಿಂದ ಪೂಜೆ ಮಾಡಿಸುತ್ತಾರೆ. ಪೂಜೆಗಿಟ್ಟಿರುವ ಸಾಮಾನುಗಳೆಲ್ಲವನ್ನು ಊರಿನ ನಾಯಕ ಜನಾಂಗದ ವ್ಯಕ್ತಿ ಬಡಿಗನ ಮನೆಗೆ ತಲುಪಿಸುತ್ತಾನೆ.

ವೀರಭದ್ರೇಶ್ವರ ಹಾಗೂ ಕೆಲವೊಂದು ಗ್ರಾಮದೇವತೆಯ ಹಬ್ಬಗಳಲ್ಲಿ ಮೌನಾಚರಣೆಯನ್ನು ಮಾಡುತ್ತೇವೆ ಎಂದು ದೇವರಲ್ಲಿ ಹರಕೆಯನ್ನು ಒತ್ತುಕೊಳ್ಳುತ್ತಾರೆ. ಭಕ್ತಾದಿಗಳು ಮೌನಾಚರಣೆ ಎಂದರೆ ತಮ್ಮ ಬಾಯಿಗೆ ಬೀಗವನ್ನು ಹಾಕಿಕೊಂಡು ದೇವರ ಕಾರ್ಯ ಮುಗಿಯುವರೆಗೂ ಮಾತನಾಡದೆ ಇರುವುದು. ತಮ್ಮ ತುಟಿಗಳಿಗೆ ಚೂಪಾದ ಸಲಾಕೆ (ಸೂಸ್ತ್ರ)ಯನ್ನು ಚುಚ್ಚಿಕೊಳ್ಳುತ್ತಾರೆ. ಈ ಸೂಸ್ತ್ರವು 'ಯು' ಆಕಾರದಲ್ಲಿರುತ್ತದೆ. ಇದನ್ನು ನಿರ್ಮಾಣ ಮಾಡಿಕೊಡುವರು ಅಕ್ಕಸಾಲಿಗರು. ಈ ಸೂಸ್ತ್ರವು ಯಾವ ಯಾವ ಅಳತೆಗಳಲ್ಲಿರಬೇಕು. ಯಾವ ಲೋಹದಿಂದ ಮಾಡಬೇಕು. ಅದರ ತುದಿಯ ಭಾಗದ ಚೂಪು ಎಷ್ಟಿರಬೇಕು ಎಂಬೆಲ್ಲಾ ಮಾಹಿತಿಯ ಮೇಲೆ ಅಕ್ಕಸಾಲಿಗ ಸೂಸ್ತ್ರವನ್ನು ನಿರ್ಮಾಣ ಮಾಡುತ್ತಾನೆ. ಮಕ್ಕಳಿಗೆ, ಸ್ತ್ರೀಯರಿಗೆ, ಪುರುಷರಿಗೆ ಹೀಗೆ ಅವರ ವಯೋಮಾನಕ್ಕೆ ತಕ್ಕಂತೆ ಅವುಗಳನ್ನು ನಿರ್ಮಾಣ ಮಾಡುತ್ತಾನೆ. ಹಾಗೂ ಈ ಸೂಸ್ತ್ರವನ್ನು ಹಬ್ಬ ಹಾಗೂ ಗುಗ್ಗಳದ ಸಂದರ್ಭದಲ್ಲಿ ಭಕ್ತಾದಿಗಳಿಗೆ ಚುಚ್ಚುವುದು ಈ ಪಾಂಚಾಳ ಸಮುದಾಯದವರು. ಈ ಸೂಸ್ತ್ರಗಳನ್ನು ಅಕ್ಕಸಾಲಿಗನ ಮನೆಯಿಂದ ಪೂಜೆ ಮಾಡಿ ತೆಗೆದುಕೊಂಡು ಬರುತ್ತಾರೆ. ನಂತರ ಪೂಜಾರಿಯು ದೇವರ ಸನ್ನಿಧಾನದಲ್ಲಿಟ್ಟು ಅವುಗಳನ್ನು ಪೂಜೆಮಾಡಿ ಸೂಸ್ತ್ರವನ್ನು ಹಾಕುತ್ತಾನೆ. ಆ ದಿವಸ ಬಾಯಿಗೆ ಬೀಗ ಹಾಕುವ ಈ ಪಾಂಚಾಳರನ್ನು ದೇವರೆಂದು ಆರಾಧಿಸುತ್ತಾರೆ.

ಭೂಮಿಗೆ ಮೊದಲ ಮಳೆ ಬಿದ್ದಾಗ ಊರಿನ ದೈವದವರೆಲ್ಲರು ಸೇರಿ ಗ್ರಾಮದೇವತೆಯ ಉಡಿಯನ್ನು ತುಂಬುತ್ತಾರೆ. ಇದರ ಉದ್ದೇಶ ಹೊಲವನ್ನು ಬಿತ್ತನೆ ಮಾಡಲಿಕ್ಕೆ ಮೊದಲು ದೇವತೆಯ ಪೂಜೆ ಮಾಡಿ ನಂತರ ಹೊಲವನ್ನು ಬಿತ್ತಿದರೆ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂಬ ಉದ್ದೇಶದಿಂದ ದೇವಿಗೆ ಮೊದಲು ಉಡಿ ತುಂಬಿ ಬಿತ್ತನೆ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಈ ದೇವಿಯ ಕಾರ್ಯವನ್ನು ಮಂಗಳವಾರ ದಿವಸದಂದು ಹಮ್ಮಿಕೊಳ್ಳುತ್ತಾರೆ. ಕಾರ್ಯವನ್ನು ನಡೆಸಲು ಊರಿನ ಎಲ್ಲಾ ಸಮುದಾಯಗಳು ಗೊತ್ತಾದ ದಿವಸದಂದು ದೇವಿಯ ದೇವಸ್ಥಾನದ ಹತ್ತಿರ ಬಂದು ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ. ಬೆಳಗಿನ ಜಾವ ನಾಲ್ಕು ಗಂಟೆಗೆ ಪಾಂಚಾಳ ಸಮುದಾಯದ ಹೆಣ್ಣು ಮಕ್ಕಳು ಮಡಿಯಾಗಿ ಕಳಶದೊಂದಿಗೆ ದೇವಸ್ಥಾನದ ಆವರಣಕ್ಕೆ ಬರುತ್ತಾರೆ. ನಂತರ ಅಲ್ಲಿಂದ ಹೊಳೆಯ ಪೂಜೆಗೆ ಹೋಗುತ್ತಾರೆ. ದೇವಿಯನ್ನು ಹೊಳೆಯ ದಂಡೆಯ ಮೇಲೆ ಪಾಂಚಾಳ ಸಮುದಾಯದವರು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಅಲ್ಲಿ ನೆರದಿರುವ ಎಲ್ಲ ಸಮುದಾಯದ ಹಿರಿಯರಿಗೆ ಕಂಕಣವನ್ನು ಕಟ್ಟುತ್ತಾರೆ. ಪಾಂಚಾಳ ಸಮುದಾಯದ ಇಬ್ಬರು ವ್ಯಕ್ತಿಗಳು ಕೇಲನ್ನು ಹೊರುತ್ತಾರೆ. ಈ ಕೇಲನ್ನು ಗ್ರಾಮದೇವತೆ ಎಂದು ಭಾವಿಸುತ್ತಾರೆ. ಕೇಲನ್ನು ಹೊರುವವರು ಪಾಂಚಾಳ ಸಮುದಾಯದವರು. ಈ ವ್ಯಕ್ತಿಗಳನ್ನು ಇನ್ನುಳಿದ ಪಾಂಚಾಳ ಸಮಾಜದ ವ್ಯಕ್ತಿಗಳು ಅವರನ್ನು ಹಿಡಿದುಕೊಂಡಿರುತ್ತಾರೆ. ನಂತರ ದೇವಸ್ಥಾನಕ್ಕೆ ಕೇಲನ್ನು ತೆಗೆದುಕೊಂಡು ಬಂದು ದೇವಿಯ ಮುಂದೆ ಅವುಗಳನ್ನಿಟ್ಟು ಪೂಜೆ ಮಾಡುತ್ತಾರೆ. ಇದರ ಜೊತೆಗೆಯೇ ಕುರುಬರ ಮನೆಯಿಂದ ತಂದಿರುವ ಜೋಳದ ಕಾಳುಗಳನ್ನು ಪೂಜೆ ಮಾಡಿ ದೇವಿಗೆ ಉಡಿ ತುಂಬಿ ಊರಿನ ಎಲ್ಲಾ ರೈತರಿಗೆ ಕೊಡುತ್ತಾರೆ. ಈ ಬೀಜಗಳನ್ನು ರೈತರು ತಾವು ಬಿತ್ತಲಿಕ್ಕೆ ತಂದಿರುವಂತಹ ಬೀಜದಲ್ಲಿ ಬೆರೆಸಿ ಬಿತ್ತುತ್ತಾರೆ. ಇಂತಹ ಕಾರ್ಯಗಳಲ್ಲಿಯೂ ಪಾಂಚಾಳರ ಸ್ಥಾನ ಅತ್ಯುತ್ತಮ ಸ್ಥಾನದಲ್ಲಿರುತ್ತದೆ. ಬಿತ್ತುವ ಕಾರ್ಯದಲ್ಲಿ ಮೊದಲ ಪೂಜೆ ಪಾಂಚಾಳರದೆ ಆಗಿರುತ್ತದೆ.

ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದೈವಗಳು ಇರುವುದನ್ನು ಕಾಣುತ್ತೇವೆ. ಹಾಗೆಯೇ ಆ ಗ್ರಾಮ ದೈವಗಳಿಗೆ ಪೂಜಾರಿಯು ಪಾಂಚಾಳ ಸಮುದಾಯದವರೇ ಹೆಚ್ಚಾಗಿರುವುದನ್ನು ಕಾಣಬಹುದು. ಈ ಸಮುದಾಯದ ಪೂಜಾರಿಯು ಬೆಳಗ್ಗೆಯೇ ದೇವಸ್ಥಾನವನ್ನು ಸ್ವಚ್ಛಗೊಳಿಸುವುದು. ದೇವಿಯನ್ನು ಮಡಿಯಿಂದ ಅರ್ಚಿಸುವುದು. ದೇವಿಗೆ ಹಿಂದಿನ ದಿನ ಉಡಿಸಿದ ಬಟ್ಟೆಗಳನ್ನು ತೆಗೆಯುವುದು, ದೇವತೆಗೆ ಮಜ್ಜನ ಮಾಡಿಸುವುದು ನಂತರ ದೇವತೆಗೆ ಮಡಿಯಿಂದ ಪುನಃ ಬಟ್ಟೆಗಳನ್ನು ತೊಡಿಸುವುದು, ಅಲಂಕಾರ ಮಾಡುವುದು ಇತ್ಯಾದಿ ಕೆಲಸಗಳು ಈ ಪಾಂಚಾಳರು ಮಾಡುತ್ತಾರೆ. ಈ ಸೇವೆಗಾಗಿಯೇ ಇವರಿಗೆ 'ಮಾನ್ಯದ ಹೊಲ' ಎಂದು ಊರಿನ ದೈವದವರೆಲ್ಲರು ಸೇರಿ ಹೊಲವನ್ನು ಕೊಟ್ಟಿರುತ್ತಾರೆ. ಇದರಿಂದ ಬಂದ ಆದಾಯವನ್ನು ಪೂಜಾರಿಯೇ ಉಪಯೋಗಿಸಿಕೊಳ್ಳುತ್ತಾನೆ.

ರೈತರು ತಾವು ಬೆಳೆದ ಬೆಳೆಯನ್ನು ಒಕ್ಕಣೆ ಮಾಡಿದಾಗ 'ರಾಶಿ' ಮಾಡುತ್ತಾರೆ. ಇದರ ಉದ್ದೇಶ ತಾವು ಬೆಳೆದ ಬೆಳೆಯು ಮೊದಲು ದೇವರಿಗೆ, ಆಯಗಾರರಿಗೆ ಕೊಡಬೇಕು ನಂತರ ತಾವು ಬಳಕೆ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಈ ರಾಶಿ ಪೂಜೆಯನ್ನು ರೈತರು ಕೈಗೊಳ್ಳುತ್ತಾರೆ. ರೈತನಿಗೆ

ಬಿತ್ತಲಿಕ್ಕೆ ಬೇಕಾದ ರೈತಾಪಿ ಉಪಕರಣಗಳನ್ನು ಬಡಿಗ, ಕಮ್ಮಾರ ನಿರ್ಮಾಣ ಮಾಡಿ ಕೊಡುತ್ತಾನೆ. ಈ ಉದ್ದೇಶದಿಂದ ಬೆಳೆದ ಮೊದಲ ಬೆಳೆಯಲ್ಲಿಯೇ ಆಯಗಾರರಿಗೆ ಸಲ್ಲಬೇಕಾದ ಪಾಲನ್ನು ಸಲ್ಲಿಸಿ ಇನ್ನುಳಿದ ಧಾನ್ಯವನ್ನು ತನ್ನ ಮನೆಗೆ ಹೊಯ್ಯುತ್ತಾನೆ. ಇಲ್ಲಿಯೂ ಕೂಡ ಪಾಂಚಾಳ ಮುಂಚಿನ ಸಾಲಿನಲ್ಲಿರುತ್ತನೆ.

ಜನಪದರು ನಂಬಿಕೊಂಡು ಬಂದಿರುವ ಜೋಕಪ್ಪನ ಆಚರಣೆಯನ್ನು ಪ್ರತಿ ಗ್ರಾಮದಲ್ಲಿ ವಿಜೃಂಭಣೆಯಿಂದ ಆಚರಿಸುವುದನ್ನು ಕಾಣಬಹುದು. ಈ ಜೋಕಪ್ಪನನ್ನು ಆಚರಿಸುವ ಉದ್ದೇಶ ಕೂಡ ಮಳೆ-ಬೆಳೆ ಸಮೃದ್ಧಿಯಾಗಲಿ, ಒಂದು ಪಕ್ಷ ಮಳೆ-ಬೆಳೆ ಸಮೃದ್ಧಿ ಆಗಿರದಿದ್ದರೆ ಜೋಕಪ್ಪ ತನ್ನ ತಂದೆಯಾದ ಶಿವನಿಗೆ ಹೇಳಿ ರೈತರು ಪಡುವ ಕಷ್ಟವನ್ನು ತಿಳಿಸಿ ಭೂಮಿಗೆ ಮಳೆ ಬೀಳುವಂತೆ ಮಾಡುತ್ತಾನೆ ಎಂಬ ನಂಬಿಕೆಯಿಂದ ನಮ್ಮ ಜನಪದರು ಈ ಜೋಕಪ್ಪನ ಆಳಲು ಮಾಡಿಕೊಂಡು ಬರುತ್ತಿದ್ದಾರೆ. ಈ ಜೋಕಪ್ಪನನ್ನು ನಿರ್ಮಾಣ ಮಾಡುವರು ಪಾಂಚಾಳ ಸಮುದಾಯದವರೆ ಹಾಗೂ ಮೊದಲ ಪೂಜೆ ಪಾಂಚಾಳ ಸಮುದಾಯಗಳ ಮನೆಯಿಂದಲೆ ಆಗಬೇಕು. ಊರಿನ ದೈವದವರೆಲ್ಲ ಸೇರಿ ಜೋಕಪ್ಪನನ್ನು ನಿರ್ಮಾಣ ಮಾಡಲಿಕ್ಕೆ ಪಾಂಚಾಳರಿಗೆ ತಿಳಿಸುತ್ತಾರೆ. ಆಷಾಢ ಮಾಸದ ಮೊದಲ ದಿವಸದಂದು ಜೋಕಪ್ಪನನ್ನು ಊರಿನ ಕೆಲ ಸಮುದಾಯದ ಸ್ತ್ರೀಯರು ಬಂದು ಪಾಂಚಾಳರು ನಿರ್ಮಾಣ ಮಾಡಿದಂತಹ ಜೋಕಪ್ಪನನ್ನು ಪಾಂಚಾಳರ ಕೈಲಿಂದ ಪೂಜೆ ಮಾಡಿಸುತ್ತಾರೆ. ಪೂಜೆಗೆ ಬೇಕಾದ ಸಾಮಾಗ್ರಿಯನ್ನು ಇಟ್ಟಿರುತ್ತಾರೆ. ಪೂಜೆಯ ನಂತರ ಪಾಂಚಾಳ ಸಮುದಾಯಗಳ ಮನೆಯಲ್ಲಿಯೇ ಮೊದಲ ಭಿಕ್ಷೆ ನಡೆಯುತ್ತದೆ. ನಂತರ ಇನ್ನುಳಿದ ಸಮುದಾಯದವರ ಮನೆಗೆ ತೆರಳಿ ಭಿಕ್ಷೆಯನ್ನು ಹಾಕಿಸಿಕೊಂಡು ಬರುತ್ತಾರೆ. ಇಲ್ಲಿಯೂ ಕೂಡ ಮೊದಲ ಸ್ಥಾನ ಪಾಂಚಾಳರಿಗೆ ದೊರೆಯುವುದು ಕಾಣಬಹುದು.

ಹೀಗೆ ಪಾಂಚಾಳ ಸಮುದಾಯದವರು ಪ್ರತಿಯೊಂದು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ರೈತಾಪಿಸಮುದಾಯದ ನಿಕಟವರ್ತಿಗಳಾದ ಪಾಂಚಾಳರು ಎಲ್ಲ ಕಾರ್ಯಗಳಲ್ಲಿ ಭಾಗವಹಿಸಿ ರೈತಾಪಿ ಸಮುದಾಯದವರ ಕಾರ್ಯಗಳನ್ನು ನಡೆಸಿಕೊಡುವುದನ್ನು ಕಾಣಬಹುದು. ಹೀಗೆ ವಿಶೇಷವಾಗಿ ಪಾಂಚಾಳರಿಗೆ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಾನಮಾನ ದೊರೆತಿರುವುದನ್ನು ತಿಳಿಯಬಹುದು.

೫.೨. ವೃತ್ತಿಯಾಧಾರಿತ ನಂಬಿಕೆ, ನಿಷೇಧ, ಆಚರಣೆಗಳು

೫.೨.೧. ವೃತ್ತಿ ಸಂಬಂಧಿ ಆಚರಣೆ

ಸಮುದಾಯಗಳು ತಮ್ಮದೇ ಆದ ಆಚರಣೆಗಳನ್ನು ರೂಢಿಸಿಕೊಂಡು ಬಂದಿರುತ್ತವೆ. ಈ ಆಚರಣೆಯು ಸಮುದಾಯಗಳ ಸಂಘಟನೆ ಹಾಗೂ ಸಹಬಾಳ್ವೆಯ ಪೂರಕವಾಗಿಯೇ ಅವುಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು. ಉದಾ:- ಒಂದು ಸಮುದಾಯದಲ್ಲಿ ಮಗುವಿನ ನಾಮಕರಣದ ಕಾರ್ಯ ನಡೆಯಬೇಕಾದರೆ ಅದಕ್ಕೆ ಆ ಸಮುದಾಯದ ದೈವದವರ ಅಧಿಕೃತ ಒಪ್ಪಿಗೆ ಬೇಕಾಗುತ್ತದೆ. ಅಂದರೆ ಪರಸ್ಪರ ಮಗುವಿನ ತಾಯಿ, ತಂದೆಯ ಎರಡೂ ಮನೆಯವರು ಸೇರಿ ಇಂತಹ

ದಿವಸ ಮಗುವಿನ ನಾಮಕರಣ ನಡೆಸುವುದು ಎಂದು ನಿಶ್ಚಯ ಮಾಡಿಕೊಳ್ಳುತ್ತಾರೆ. ಆ ದಿವಸದಂದು ತಮ್ಮ ಸಮುದಾಯದವರೆಲ್ಲರನ್ನು ಕರೆದು ಅವರ ಸಮ್ಮುಖದಲ್ಲಿ ನಾಮಕರಣದ ಆಚರಣೆಗಳನ್ನು ಆಚರಿಸಿ ಮಗುವಿಗೆ ಹೆಸರನ್ನು ಕಟ್ಟುತ್ತಾರೆ. ಆ ಸಮುದಾಯದ ಹಿರಿಯರು ಯಾರಾದರೊಬ್ಬರು ನಾಮಕರಣಕ್ಕೆ ಬರಲಿಲ್ಲ ಅಂದರೆ ಅವರ ಮನೆಯ ಮಕ್ಕಳಾದರೂ ಅಲ್ಲಿ ನೆರದಿರಬೇಕು. ಅವಾಗಲೇ ದೈವದವರ ಅಧಿಕೃತ ಒಪ್ಪಿಗೆಯಿಂದ ಆ ಕಾರ್ಯ ನಡೆಯುತ್ತದೆ. ಇದರಿಂದ ನಮಗೆ ವ್ಯಕ್ತವಾಗುವ ಅಂಶವೆಂದರೆ ಮಗುವಿಗೆ ಸಮುದಾಯದ ಅಧಿಕೃತ ಗುರುತು ದೊರೆಯುತ್ತದೆ. ಹಾಗೆಯೇ ಪಾಂಚಾಳರು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಅನೇಕ ಆಚರಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಈ ವೃತ್ತಿ ಸಂಬಂಧಿ ಆಚರಣೆಗಳು ಕೇವಲ ತಮಗೆ ಮಾತ್ರ ಮೀಸಲಾಗಿರದೆ ರೈತಾಪಿ ಸಮುದಾಯವರೆಲ್ಲರೂ ಒಟ್ಟಿಗೆ ಸೇರಿ ಪಾಂಚಾಳರ ಜೊತೆಗೆ ಆಚರಿಸುವುದನ್ನು ಕಾಣಬಹುದು. ಅಂತಹ ವೃತ್ತಿ ಸಂಬಂಧಿ ಆಚರಣೆಗಳನ್ನು ಈ ಅಧ್ಯಾಯದಲ್ಲಿ ಹಿಡಿದಿಡಲಾಗಿದೆ.

೧. ಅಡಿಗಲ್ಲು ಪೂಜೆ

ರೈತ ಮಳೆ ನೆಲಕ್ಕೆ ಬೀಳುವ ಮುಂಚೆಯೇ ಹೊಲವನ್ನು ಹರಗಿ ಹದಮಾಡಿರುತ್ತಾನೆ. ಎಲ್ಲ ರೈತಾಪಿ ಸಮುದಾಯದವರ ಮೊದಲ ಬೆಳೆಯ ಬಿತ್ತನೆ ಕಾರ್ಯ ಆರಂಭವಾಗುವುದು ಭರಣಿ ಇಲ್ಲವೆ ಕೃತಿಕಾ ಮಳೆಯಲ್ಲಿ ತಮ್ಮ ಬಿತ್ತನೆ ಕೆಲಸ ಮುಗಿಸುತ್ತಾರೆ. ಅಂದರೆ ಇಂತಹ ಮಳೆಗಳಲ್ಲಿ ಇಂತಹ ಬಿಜಗಳನ್ನೇ ಬಿತ್ತಬೇಕು ಎಂಬ ಅಂಶವು ರೈತನಿಗೆ ಗೊತ್ತಿರುತ್ತದೆ. ಈ ಎರಡು ಮಳೆಗಳ ನಂತರ ಬಿತ್ತಿದ್ದರೆ ಫಸಲು ಚೆನ್ನಾಗಿ ಬರುವುದಿಲ್ಲ. ಕೊಯ್ಲು ಸಂದರ್ಭದಲ್ಲಿ ಮಳೆಗೆ ಈಡಾಗುತ್ತದೆ. ಇವುಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ರೈತ ತನ್ನ ಬಿತ್ತನೆ ಕಾರ್ಯವನ್ನು ಹಮ್ಮಿಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ರೈತ ಬಿತ್ತನೆಗೆ ಕೂರಿಗೆ, ಕುಂಟೆ, ಸೆಡ್ಡಿ ಇತ್ಯಾದಿಗಳು ಬೇಕು. ಇವುಗಳ ಅಣಿಯನ್ನು ಕೂಡ ಮಾಡಿಕೊಳ್ಳುತ್ತಾನೆ. ಅಂದರೆ ಮಳೆ ನೆಲಕ್ಕೆ ಬಿದ್ದ ತಕ್ಷಣ ಊರಿನ ರೈತರೆಲ್ಲ ಸೇರಿ 'ಅಡಿಗಲ್ಲು' ಪೂಜೆಗೆ ಅಣಿ ಮಾಡುತ್ತಾರೆ. ಈ ಅಡಿಗಲ್ಲು ಪೂಜೆಗೆ ಊರಿನ ಕುರುಬ ರೈತ ಮುಂದಾಳುತನದಲ್ಲಿರುತ್ತಾನೆ. ರೈತರೆಲ್ಲರು ಸೇರಿ ಬಡಗಿ ಹಾಗೂ ಕಮ್ಮಾರನ ಹತ್ತಿರ ಬಂದು ಅಡಿಗಲ್ಲು ಪೂಜೆಗೆ ಸಂಬಂಧಿಸಿದಂತೆ ಎಲ್ಲ ಸಾಮಗ್ರಿಗಳನ್ನು ತಿಳಿದುಕೊಂಡು ನೀವು ಇಂತ ಸಮಯಕ್ಕೆ ಬನ್ನಿ ಎಂದು ಹೇಳಿ ಕಳಿಯಿಸುತ್ತಾರೆ. ಊರ ರೈತರೆಲ್ಲರು ಕುರುಬ ರೈತನ ಕೈಯಲ್ಲಿ ಅಡಿಗಲ್ಲು ಪೂಜೆಗೆ ಬೇಕಾಗುವ ಉಲುಪಿಯನ್ನು ಕೊಟ್ಟು ಆತನ ಮುಖಾಂತರ ಬಡಿಗ, ಕಮ್ಮಾರನ ಮನೆ ಮುಂದೆ ಸೇರುತ್ತಾರೆ. ಇಲ್ಲಿ ಎರಡು ವೃತ್ತಿಯನ್ನು ಒಬ್ಬರೆ ನಿರ್ವಹಿಸುತ್ತಾರೆ ಹಾಗೂ ಅವರ ಸಹೋದರರೇ ವೃತ್ತಿಯನ್ನು ಮಾಡುತ್ತಿರುತ್ತಾರೆ. ಈ ಉದ್ದೇಶದಿಂದ ಬಡಗಿಯ ಮನೆ ಮುಂದೆ ಬಡಗಟ್ಟೆ ಇಲ್ಲವೆ ಕಮ್ಮಾರನ ಮನೆ ಮುಂದೆ ಕುಲುಮೆಯಲ್ಲಿ ಈ ಪೂಜೆಯನ್ನು ಹಮ್ಮಿಕೊಳ್ಳುತ್ತಾರೆ. ಬಡಗಿಯ ಮನೆಯವರು ಈ ಪೂಜೆಗೆ ಸಿದ್ಧರಾಗಿರುತ್ತಾರೆ. ಕುರುಬ ರೈತ ತಂದಂತಹ ಕರಿಕಂಬಳಿಯ ಮೇಲೆ ಪಾಂಚಾಳ ತನ್ನ ಉಪಕರಣಗಳೆಲ್ಲವನ್ನಿಡುತ್ತಾನೆ. ರೈತರು ಈ ಪೂಜೆಗೆ ಬಡಿಗನಿಗೆ ಹೊಸಬಟ್ಟೆ, ಐದು ಸೇರು ಜೋಳು, ಎಲೆ ಅಡಕೆ, ಅಂಗುನೂಲು, ಗೋದಿಹಿಟ್ಟು, ಬೆಲ್ಲ, ತೆಂಗಿನ

ಕಾಯಿ, ತೊಗರಿಬ್ಯಾಳಿ ಹಾಗೂ ದಕ್ಷಿಣೆ ಇವು ಎಲ್ಲವು ಉಲುಪಿ ಮೊರದಲ್ಲಿರಬೇಕು. ಈ ಉಪಕರಣಗಳ ಜೊತೆಗೆ ಉಲುಪಿಯನ್ನಿಟ್ಟು ನಂತರ ಬಡಿಗ ತನ್ನ ತಲೆಗೆ ವಸ್ತ್ರವನ್ನು ಕಟ್ಟಿಕೊಂಡು ಪೂಜೆಗೆ ಸಿದ್ಧನಾಗುತ್ತಾನೆ. ಪೂಜೆಯ ಸಂದರ್ಭದಲ್ಲಿ ನೆರೆದಿರುವ ರೈತಾಪಿ ಜನಗಳಿಗೆಲ್ಲಾ ಕುಂಕುಮವನ್ನು ಹಚ್ಚಲಾಗುತ್ತದೆ. ಇದರ ಉದ್ದೇಶ ಊರಿನಲ್ಲಿ ಮೊದಲ ಮಳೆ ಬಂದ ಮೇಲೆ ಅಡಿಗಲ್ಲು ಪೂಜೆ ನೆರವೇರಿತು. ಇವತ್ತಿನಿಂದಲೇ ಎಲ್ಲ ರೈತರು ರಂಟೆ, ಕುಂಟೆಯನ್ನು ಹಾಸಿಕೊಂಡು ಬಿತ್ತಲಿಕ್ಕೆ ಪ್ರಾರಂಭಿಸಿರಿ ಎನ್ನುವ ಸೂಚನೆಯನ್ನು ನೀಡುತ್ತದೆ. ರೈತ ತಂದಿರುವಂತಹ ಕಟ್ಟಿಗೆಯನ್ನು ಹಾಗೂ ಉಪಕರಣಗಳನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಎಲ್ಲ ರೈತರಿಗೂ ಪಣಿವಾರವನ್ನು ಹಂಚಿ ಕುರಿಗೆಯನ್ನು ಕೆತ್ತಲಿಕ್ಕೆ ಪ್ರಾರಂಭಿಸುತ್ತಾನೆ. ಕೆತ್ತುವ ಸಂದರ್ಭದಲ್ಲಿ ಕಟ್ಟಿಗೆಯ ಮೊದಲ ಚೆಕ್ಕೆ ಯಾವ ದಿಕ್ಕಿನ ಕಡಿಗೆ ಬೀಳುತ್ತದೆಯೋ ಆ ದಿಕ್ಕಿನ ಕಡೆಯ ಹೊಲಗಳಿಗೆ ಮಳೆ, ಬೆಳೆ ಚೆನ್ನಾಗಿ ಆಗುತ್ತವೆ ಎಂದು ತಿಳಿದುಕೊಳ್ಳುತ್ತಾರೆ. ಈ ಕುರುಬನ ಕುರಿಗೆಯನ್ನು ಹಾಸಿದ ನಂತರ ಇನ್ನುಳಿದ ರೈತರೆಲ್ಲರೂ ತಮ್ಮ ರೈತಾಪಿ ಚಟುವಟಿಕೆಗೆ ಬೇಕಾದಂತಹ ಸಾಮಾನುಗಳನ್ನು ಮಾಡಿಸಿಕೊಳ್ಳಲಿಕ್ಕೆ ಪ್ರಾರಂಭಿಸುತ್ತಾರೆ. ಈ ಅಡಿಗಲ್ಲು ಪೂಜೆಯ ಉದ್ದೇಶ ಆ ವರುಷದ ಬಿತ್ತನೆಗೆ ರಂಟೆ, ಕುಂಟೆ, ಕುರಿಗೆಯನ್ನು ಕೆತ್ತಲಿಕ್ಕೆ ಅಧಿಕೃತವಾಗಿ ಚಲಾನೆ ನೀಡಿದಂತೆ. ಮೊದಲು ಕುರುಬ ರೈತನ ಉಪಕರಣಗಳನ್ನು ಕೆತ್ತಿಸಬೇಕು. ಇದರಿಂದ ಉಳಿದ ರೈತರಿಗೆಲ್ಲಾ ಶುಭವಾಗುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಹೀಗೆ ಊರಿನ ಎಲ್ಲ ರೈತರು ಪಾಂಚಾಳರ ಜೊತೆ ಸೇರಿ ಆಚರಿಸುವ ಆಚರಣೆಯಾಗಿದೆ.

೨. ಕುಲುಮೆ ಪೂಜೆ (ಯುಗಾದಿ ಪಾಡ್ಯ)

ವರುಷದ ಮೊದಲ ದಿವಸದಲ್ಲಿ ಅಂದರೆ ಯುಗಾದಿ ಪಾಡ್ಯದ ದಿವಸ ರೈತಾಪಿ ಸಮುದಾಯದವರು ಕುಲುಮೆಗೆ ಪೂಜೆಯನ್ನು ಕೈಗೊಳ್ಳುವರು. ಈ ದಿವಸ ಕಮ್ಮಾರನ ಮನೆಯವರು ಕುಲುಮೆಯ ಗದ್ದೆಯನ್ನು ಗೋಮಯದಿಂದ ಸಾರಿಸಿ ರಂಗೋಲಿಯನ್ನು ಹಾಕಿರುತ್ತಾರೆ. ಬೆಳಗ್ಗೆಯೇ ರೈತಾಪಿ ಸಮುದಾಯದವರೆಲ್ಲ ಸೇರಿ ಕುಲಮೆಯ ಪೂಜೆಗೆ ಬರುತ್ತಾರೆ. ಪೂಜೆಯ ಸಾಮಾಗ್ರಿ ಹಾಗೂ ಉಲಿಪಿಯನ್ನು ಆ ಊರಿನ ಕುರುಬ ರೈತರ ಮನೆಯಿಂದಲೇ ತಂದಿರುತ್ತಾರೆ. ತಂದಂತಹ ಪೂಜೆ ಸಾಮಾಗ್ರಿಗಳಿಂದ ಕಮ್ಮಾರ ಕುಲುಮೆಗೆ ಉಡಿ ತುಂಬಿ ಶಾಸ್ತ್ರೋಕ್ತ ಪೂಜೆ ಮಾಡಿ ಕಳಶವನ್ನು ಬೆಳಗುತ್ತಾರೆ. ನಂತರ ಅಲ್ಲಿ ನೆರದಿರುವ ರೈತರೆಲ್ಲರು ಕಾಳಮ್ಮನಿಗೆ ನಮಸ್ಕರಿಸಿ ಪೂಜೆ ಮಾಡಿದ ಪಣಿವಾರವನ್ನು ಸ್ವೀಕರಿಸುತ್ತಾರೆ. ಕಮ್ಮಾರ ಕುಲುಮೆ ಗದ್ದೆಗೆ ಬೆಂಕಿಯನ್ನು ಹಾಕಿ ಕುರುಬನ ಉಪಕರಣವನ್ನು ಕಾಯಿಸಲಿಕ್ಕೆ ಕುಲುಮೆಯಲ್ಲಿಡುತ್ತಾನೆ. ಕಮ್ಮಾರನ ಸಹಾಯಕ ಬೋರನ್ನು ತಿರುಗಿಸುವುದಕ್ಕೆ ಪ್ರಾರಂಭಿಸಿದ ಕೂಡಲೇ ಕುಲುಮೆಯ ಬೆಂಕಿ ಯಾವ ಕಡೆಗೆ ಹೆಚ್ಚಾಗಿ ವಾಲಿ ಬೆಳೆಯುತ್ತಿರುತ್ತದೆಯೋ (ಉರಿಯುವುದು) ಆ ಕಡೆಯ ದಿಕ್ಕಿಗೆ ಮಳೆ, ಬೆಳೆ ಆ ವರುಷದಲ್ಲಿ ಸಮೃದ್ಧಿಯಾಗಿ ಆಗುತ್ತದೆ ಎಂದು ಕಮ್ಮಾರ ಹಾಗೂ ರೈತಾಪಿ ಸಮುದಾಯದವರು ನಂಬುತ್ತಾರೆ. ಹೀಗೆ ವರುಷದ ಮೊದಲ ದಿವಸದಂದು ರೈತರು ಕುಲುಮೆಗೆ ಪೂಜಿಸುವುದನ್ನು ಕಾಣಬಹುದು.

೩. ಪ್ರಾಣ ಪ್ರತಿಷ್ಠಾಪನೆ

ಶಿಲ್ಪಿ ಕೆಲಸದಲ್ಲಿ ಕೂಡ ಅನೇಕ ವೃತ್ತಿ ಸಂಬಂಧಿ ಆಚರಣೆಗಳನ್ನು ಆಚರಿಸುವುದನ್ನು ಕಾಣಬಹುದು. ಶಿಲೆಯನ್ನು ಕೆತ್ತಲಿಕ್ಕೆ ಪ್ರಾರಂಭಿಸುವ ಮುಂಚೆಯೇ ಶಿಲ್ಪಿ ಆ ಶಿಲೆಯನ್ನು ಅಮೃತಗಳಿಗೆಯಲ್ಲಿ ಪೂಜೆ ಮಾಡಿ ಶಿಲೆಯನ್ನು ಕೆತ್ತಲಿಕ್ಕೆ ಪ್ರಾರಂಭಿಸುತ್ತಾನೆ. ಶಿಲೆಯ ಕೆತ್ತನೆಯ ಕೆಲಸ ಸಂಪೂರ್ಣವಾಗಿ ಮುಗಿದ ಮೇಲೆ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಶಿಲ್ಪಿಯು ಮೂರ್ತಿಗೆ ಪ್ರಾಣ ಪ್ರತಿಷ್ಠೆಯ ಕೆಲಸವು ಅಂತಿಮವಾಗಬೇಕು ಹಾಗೂ ಪ್ರಾಣ ಪ್ರತಿಷ್ಠೆಯ ನಂತರ ಶಿಲ್ಪಿಯಿಂದಲೇ ಆ ಮೂರ್ತಿಗೆ ಮೊದಲ ಪೂಜೆ ನಡೆಯಬೇಕು. ಅಂತಹ ಮೂರ್ತಿಗಳು ಮಾತ್ರ ಪೂಜೆಗೆ ಅರ್ಹವಾಗುತ್ತವೆ. ಯಾವ ಮೂರ್ತಿ ಶಿಲ್ಪಿಯ ಕೈಲಿಂದ ಪೂಜೆಯಾಗಿರುವುದಿಲ್ಲವೋ ಅಂತಹ ಮೂರ್ತಿ ಪೂಜೆಗೆ ಅನರ್ಹ ಎಂದು ಬಾವಿಸುತ್ತಾರೆ. ಈ ಪೂಜೆಗೆ ಸಂಬಂಧಿಸಿದಂತೆ ಪೂಜಾಸಾಮಾಗ್ರಿಗಳೆಲ್ಲವನ್ನು ಊರಿನ ದೈವದವರೆ ತಂದು ಶಿಲ್ಪಿಯ ಉಪಕರಣಗಳ ಜೊತೆಗೆ ಶಾಸ್ತ್ರೋಕ್ತವಾಗಿ ಶಿಲ್ಪಿಯಿಂದಲೇ ಪೂಜೆಯನ್ನು ಮಾಡಿಸುತ್ತಾರೆ.

೪. ಕಂಚಿನ ಪೂಜೆ

ಕಂಚಿನಿಂದ ಮೂರ್ತಿಯನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಕಂಚನ್ನು ಕರಗಿಸುವ ಮೊದಲೇ ವೃತ್ತಿಯ ಉಪಕರಣ ಹಾಗೂ ಕಂಚನ್ನು ಪೂಜೆ ಮಾಡಿಯೆ ವೃತ್ತಿಯನ್ನು ಪ್ರಾರಂಭಿಸುತ್ತಾನೆ. ಮೂರ್ತಿಗೆ ಅಂತಿಮ ರೂಪ ಕೊಟ್ಟ ನಂತರ ಮೂರ್ತಿಯನ್ನು ಕಂಚುಗಾರ ಕೈಲಿಂದ ಪೂಜೆ ಮಾಡಿಸಿಕೊಂಡು ಮೂರ್ತಿಯನ್ನು ತೆಗೆದುಕೊಂಡು ಹೊಗುತ್ತಾರೆ.

೫. ಮದುವೆ ಆಭರಣ ಪೂಜೆ

ಮದುವೆಯ ಸಂದರ್ಭದಲ್ಲಿಯೂ ಪಾಂಚಾಳರ ಕೈಯಿಂದ ಪೂಜೆ ಮಾಡಿಸಿಕೊಳ್ಳುವುದನ್ನು ಕಾಣಬಹುದು. ಶುಭಕಾರ್ಯಗಳಿಗೆ ಬೇಕಾದಂತಹ ತಾಳಿ, ಮೂಗುತಿ, ಕಾಲುಂಗುರವನ್ನು ಅಕ್ಕಸಾಲಿಯರ ಹತ್ತಿರವೇ ನಿರ್ಮಾಣಕ್ಕೆ ಕೊಟ್ಟಿರುತ್ತಾರೆ. ಮೇಲಿನ ಸಾಮಾನುಗಳು ನಿರ್ಮಾಣ ಮಾಡಿ ಅವರು ಸೂಚಿಸಿದ ದಿವಸಕ್ಕೆ ಮುಂಚಿತವಾಗಿಯೇ ನಿರ್ಮಾಣ ಮಾಡಿಕೊಂಡಿರುತ್ತಾರೆ. ಮದುವೆಯ ದಿವಸವೇ ಇಲ್ಲವೆ ಅದಕ್ಕಿಂತ ಮುಂಚಿತವಾಗಿಯೇ ಅಕ್ಕಸಾಲಿಗರ ಮನೆಗೆ ಮದುವೆ ಮನೆಯ ಹಿರಿಯರು ಉಲಿಪಿಯನ್ನು ತೆಗೆದುಕೊಂಡು ಹೋಗಿ ಶಾಸ್ತ್ರೋಕ್ತವಾಗಿ ತಮಗೆ ಬೇಕಾದಂತಹ ತಾಳಿ, ಮೂಗುತಿ ಹಾಗೂ ಕಾಲುಂಗುರವನ್ನು ಪೂಜೆ ಮಾಡಿಸಿಕೊಂಡು ಬರುತ್ತಾರೆ. ಪೂಜೆಯ ಸಂದರ್ಭದಲ್ಲಿ ಅಕ್ಕಸಾಲಿಗ ತನ್ನ ಉಪಕರಣಗಳ ಜೊತೆಗೆ ನಿರ್ಮಾಣ ಮಾಡಿದ ವಸ್ತುಗಳನ್ನಿಟ್ಟು ಪೂಜೆ ಕೈಗೊಳ್ಳುತ್ತಾನೆ.

ಪ್ರಸ್ತುತ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿಯೇ ಎಲ್ಲ ಆಭರಣಗಳು ದೊರೆಯುವುದರಿಂದ ಶುಭ ಕಾರ್ಯಗಳಿಗೆ ಬೇಕಾದ ಆಭರಣಗಳನ್ನು ಅಲ್ಲಿಯೇ ಖರೀದಿ ಮಾಡಿ ತರುವುದನ್ನು ಕಾಣುತ್ತೇವೆ. ಮಾರುಕಟ್ಟೆಯಲ್ಲಿಯೇ ಅವುಗಳನ್ನು ಖರೀದಿ ಮಾಡಿ ತಂದರು ಅವುಗಳನ್ನು ಊರಿನ ಅಕ್ಕಸಾಲಿಗರ ಕೈಯಲ್ಲಿ ಕೊಟ್ಟು ಅವರ ಮನೆಯಿಂದ ಪೂಜೆ ಮಾಡಿಸಿ ತೆಗೆದುಕೊಂಡು ಬರುವುದನ್ನು ಕಾಣಬಹುದು.

೬. ಮುರುವು ಚುಚ್ಚುವ ಆಚರಣೆ

ಯಾವುದೇ ಸಮುದಾಯವಿರಬಹುದು ಮಗು ಜನಿಸಿದ ಮೂರು ತಿಂಗಳೊಳಗೆ ಮಗು ಹೆಣ್ಣಿರಲಿ, ಗಂಡಿರಲಿ ಆ ಮಗುವಿಗೆ ಮುರುವನ್ನು ಚುಚ್ಚಿಸುವುದು ಸಮುದಾಯದಗಳಲ್ಲಿ ಕಂಡುಬರುತ್ತದೆ. ಮುರುವನ್ನು ಮಕ್ಕಳ ಕಿವಿಗೆ ಚುಚ್ಚುವುದು ಪಾಂಚಾಳ ಸಮುದಾಯದವರು. ಅಕ್ಕಸಾಲಿಗರ ಮನೆಗೆ ಬಂದು ನಮ್ಮ ಮಗುವಿಗೆ ಮುರುವನ್ನು ಚುಚ್ಚಬೇಕು ಎಂದು ತಿಳಿಸುತ್ತಾರೆ. ಅದಕ್ಕೆ ಅಕ್ಕಸಾಲಿಗರು ಗುರುವಾರ ಇಲ್ಲವೆ ಭಾನುವಾರ ದಿವಸದಂದು ಬನ್ನಿ ಎಂದು ತಿಳಿಸುತ್ತಾರೆ. ಇವರು ತಿಳಿಸಿದ ದಿವಸದ ಸಾಯಂಕಾಲದ ಹೊತ್ತಿನಲ್ಲಿ ತಮ್ಮ ಮಗುವನ್ನು ಅಕ್ಕಸಾಲಿಗರ ಮನೆಗೆ ಕರೆದೊಯ್ಯುತ್ತಾರೆ. ಅಕ್ಕಸಾಲಿಗನ ಕೈಯಿಂದಲೇ ನಿರ್ಮಾಣ ಮಾಡಿಸಿದ ಮುರುವುವಿರಬಹುದು ಇಲ್ಲವೆ ತಾವು ಮಾರುಕಟ್ಟೆಯಿಂದ ತಂದಿರಬಹುದು. ಈ ಮುರುವು ಹಾಗೂ ತಂದಿರುವಂತಹ ಪೂಜೆ ಸಾಮಾಗ್ರಿಯ ಜೊತೆಗೆ ತಮ್ಮ ಉಪಕರಣಗಳನ್ನಿಟ್ಟು ಪೂಜೆ ಮಾಡುತ್ತಾರೆ. ಪೂಜೆಗೆ ಕಡ್ಡಾಯವಾಗಿ ಕುಂಕುಮ, ಒಣಕೊಬ್ಬರಿ ಬಟ್ಟಲು, ಕೊಬ್ಬರಿ ಎಣ್ಣೆ, ಎಲೆ ಅಡಕಿ, ಊತ್ತತ್ತಿ, ಊದಿನಕಡ್ಡಿ ಹಾಗೂ ದಕ್ಷಿಣೆ ಇವುಗಳನ್ನು ತರಲೇಬೇಕು ನಂತರ ಮಗುವಿನ ಕಿವಿಗೆ ಮುರುವನ್ನು ಚುಚ್ಚುತ್ತಾನೆ. ಮುರುವು ಚುಚ್ಚಿದ ನಂತರ ಮುರುವು ಚುಚ್ಚಿದ ಜಾಗಕ್ಕೆ ಕೊಬ್ಬರಿ ಎಣ್ಣೆ ಹಾಗೂ ಕುಂಕುಮವನ್ನು ಕಲೆಸಿ ಹಚ್ಚಲಾಗುತ್ತದೆ. ಇದನ್ನು ಹಚ್ಚುವ ಉದ್ದೇಶ ಚುಚ್ಚಿದ ಜಾಗದಲ್ಲಿ ರಕ್ತ ಬರುತ್ತಿದ್ದರೆ ಅದು ಕುಂಕುಮ ಕಲೆಸಿದ ಎಣ್ಣೆಯಲ್ಲಿ ಅದು ಕಾಣುವುದಿಲ್ಲ ಹಾಗೂ ಇದನ್ನು ಹಚ್ಚುವುದರಿಂದ ಕಿವಿಯ ನೋವು ಕೂಡ ಆಗುವುದಿಲ್ಲ ಎಂಬ ಉದ್ದೇಶದಿಂದ ಹಚ್ಚಲಾಗುತ್ತದೆ.

ಒಣಕೊಬ್ಬರಿ ಬಟ್ಟಲನ್ನು ಅಕ್ಕಸಾಲಿಗ ಮಗುವಿನ ಮುಖಕ್ಕೆ ಮುರುವಾರಿ ಇಳಿದೆಗೆದು ಮುಖಕ್ಕೆ ಉಗುಳಿ ತನ್ನ ಎರಡು ಕೈಗಳಿಂದ ಬಟ್ಟಲನ್ನು ಮುರಿಯುತ್ತಾನೆ. ಇದರ ಉದ್ದೇಶ ಮಗುವಿಗೆ ದೃಷ್ಟಿತಾಕೀರಬಹುದು ಎಂಬ ಉದ್ದೇಶದಿಂದ ಹಾಗೂ ಮಗು ಅಳುವುದನ್ನು ನಿಲ್ಲಿಸುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ.

೭. ಇತರೆ ಪೂಜೆ ಆಚರಣೆ

ರೈತರು ನಿರ್ಮಾಣ ಮಾಡಿಸಿಕೊಳ್ಳುವ ವಸ್ತುಗಳಿಗೆ ಮೊದಲ ಪೂಜೆ ಪಾಂಚಾಳರದೆ ಆಗಬೇಕು. ಇವರು ಪೂಜೆ ಮಾಡಿದರೆ ಮಾತ್ರ ಆ ವಸ್ತುಗಳಿಗೆ ಮೋಕ್ಷ ದೊರೆಯುತ್ತದೆ ಎಂಬ ಉದ್ದೇಶದಿಂದ ಜನರು ಯಾವುದೇ ವಸ್ತುವನ್ನು ನಿರ್ಮಾಣ ಮಾಡಿಸಿದರು. ಅದನ್ನು ಪೂಜೆ ಮಾಡಿಸುತ್ತಾರೆ.

ರೈತಾಪಿ ಜನರು ಮನೆಯನ್ನು ಕಟ್ಟಿಸಲಿಕ್ಕೆ ಪ್ರಾರಂಭಿಸುತ್ತಾರೆ. ಮನೆಗೆ ಸಂಬಂಧಿಸಿದ ಕಟ್ಟಿಗೆಯ ಕೆಲಸವನ್ನು ಮಾಡಿಕೊಡಲಿಕ್ಕೆ ಬಡಿಗನಿಗೆ ತಿಳಿಸುತ್ತಾರೆ. ಉದಾ:- ದ್ವಾರಬಾಗಿಲು, ಬಾಗಿಲು, ಕಿಟಕಿ, ತೀರು, ಕದ ಇತ್ಯಾದಿ. ಈ ದ್ವಾರಬಾಗಿಲನ್ನು ಇಡುವ ಸಂದರ್ಭದಲ್ಲಿ ಬಡಿಗನ ಮುಖಾಂತರವೇ ಪೂಜೆಯನ್ನು ಮಾಡಿಸುತ್ತಾರೆ. ಬಾಗಿಲ ಪೂಜೆಗೆ ಅಮೃತಗಳಿಗೆಯನ್ನು ಸ್ವಾಮಿಗಳ ಬಳಿ ಕೇಳಿಸಿಕೊಂಡು ಅವರು ಹೇಳಿದ ಸಮಯಕ್ಕೆ ಸರಿಯಾಗಿ ಬಡಿಗನ ಮುಖಾಂತರ ಪೂಜೆ ಮಾಡಿಸುತ್ತಾರೆ.

ಈ ಪೂಜೆಗೆ ಉಲುಪಿ, ಹೊಸಬಟ್ಟೆ ಹಾಗೂ ದಕ್ಷಿಣೆಯನ್ನು ಮನೆಯ ಯಜಮಾನ ಪೂಜೆಗೆ ಇಡಬೇಕಾಗುತ್ತದೆ. ಸ್ವಾಮಿಗಳು ತಿಳಿಸಿದ ಸಮಯಕ್ಕೆ ಸರಿಯಾಗಿ ಬಾಗಿಲನ್ನು ಬುನಾದಿ ಕಟ್ಟಡದ ಮೇಲೆ ಹಿಟ್ಟು ಪೂಜೆಗೆ ಪ್ರಾರಂಭಿಸುತ್ತಾನೆ. ಇದಕ್ಕೆ ಮುಂಚಿತವಾಗಿಯೇ ಬಾಗಿಲು ಇಡುವ ಜಾಗದಲ್ಲಿ ಒಂದು ಚಿಕ್ಕ ಗುಂಡಿಯನ್ನು ತೆಗೆದು ಪಂಚಲೋಹ ಹಾಕಿರುವ ಚಿಕ್ಕ ಗಡಿಗೆಯನ್ನು ಗುಂಡಿಯಲ್ಲಿ ಹಾಕಿ ಮುಚ್ಚುತ್ತಾರೆ. ಬಾಗಿಲ ಮೇಲೆ ಮನೆಯ ಯಜಮಾನ ತಂದಿರುವ ಹೊಸಬಟ್ಟೆಯನ್ನು ಹಾಕಿ ಬಾಗಿಲ ಬಲತೋಳಿಗೆ ಕೇರುಬೀಜ, ನಿಂಬೆಹಣ್ಣು ಹಾಗೂ ಒಣಮೆಣಸಿನಕಾಯಿ ಕಟ್ಟಿದ ದಾರವನ್ನು ಕಟ್ಟಲಾಗುತ್ತದೆ. ನಂತರ ಬಡಿಗ ತನ್ನ ಉಪಕರಣಗಳನ್ನು ಹೊಸ್ತಿಲ ಮೇಲೆಯಿಟ್ಟು ಶಾಸ್ತ್ರೋಕ್ತವಾಗಿ ಗಾಯತ್ರಿ ಮಂತ್ರವನ್ನು ಪಠಿಸುತ್ತ ಅಂಗುನೂಲು ಹಾಕಿ, ಬನ್ನಿಪತ್ರೆ ಮುಡಿಸಿ, ಕುಂಕುಮ, ಗಂಧವನ್ನು ಹಚ್ಚಿ ಹೊಸ್ತಿಲ ಬಲ ತೋಳಿಗೆ ಪಂಚಲೋಹ ಹಾಗೂ ಹಾಲು ತುಪ್ಪ ಬೀಡಲಾಗುತ್ತದೆ. ನಂತರ ಕಳಸವನ್ನು ಬೆಳಗಿ ಹೊಸ್ತಿಲಿಗೆ ಮೊದಲ ಮೊಳೆಯನ್ನು ಬಡಿಯುತ್ತಾನೆ. ಆ ಸಂದರ್ಭದಲ್ಲಿ ಎಲ್ಲರು ಅಕ್ಷತೆ ಕಾಳನ್ನು ಹಾಕುತ್ತಾರೆ. ಅಂದಿನಿಂದ ಮನೆಯವರು ತಮ್ಮ ದ್ವಾರ ಬಾಗಿಲು ಪೂಜೆಗೆ ಅರ್ಹವಾಯಿತು ಎಂದು ತಿಳಿಯುತ್ತಾರೆ. ಆದರೆ ಬಡಿಗ ತಾವು ಮಾಡಿದ ಕೆಲಸಕ್ಕೆ ಮೋಕ್ಷ ಸಿಗಬೇಕಾದರೆ ಅದಕ್ಕೆ ಮೊದಲು ತಮ್ಮ ಕೈಯಿಂದಲೇ ಮೊದಲ ಪೂಜೆ ನೇರವೇರಬೇಕು ಎಂದು ತಿಳಿಸುತ್ತಾರೆ. ಅದು ಬಡಿಗನ ಕೈಯಿಂದ ಪೂಜೆ ಆಗಿಲ್ಲವೆಂದರೆ ಪೂಜೆಗೆ ಅನರ್ಹವೆಂದೆ ಬಾವಿಸುತ್ತಾರೆ. ಹೊಸ್ತಿಲಿಗೆ ಮೊಳೆಯನ್ನು ಬಡಿಸಿದರೆ ಮನೆಯೊಳಗಡೆಗೆ ಯಾವ ಪೀಡೆ ಪಿಶಾಚಿಗಳು ಸುಳಿಯುವುದಿಲ್ಲ ಎಂಬ ನಂಬಿಕೆಯಿದೆ. ಹೀಗೆ ಮನೆಯ ಮಡಿಗೆ ಎತ್ತುವ ಸಂದರ್ಭದಲ್ಲಿ, ಹೊಸಬಂಡಿಯನ್ನು ಮಾಡಿದ ಸಂದರ್ಭದಲ್ಲಿ ಹೊಸ ನೋಗವನ್ನು ಮಾಡಿದ ಸಂದರ್ಭ ಇತ್ಯಾದಿಗಳಲ್ಲಿ ಬಡಿಗನ ಕೈಯಿಂದ ವೃತ್ತಿಸಂಬಂಧಿತ ಆಚರಣೆ ಮಾಡುವುದನ್ನು ಕಾಣಬಹುದು.

೫.೨.೨. ವೃತ್ತಿ ಸಂಬಂಧಿ ಹಬ್ಬ, ಆಚರಣೆಗಳು

ಕಮ್ಮಾರಿಕೆ, ಬಡಗಿತನ, ಅಕ್ಕಸಾಲಿಕೆ, ಕಂಚುಗಾರ ಹಾಗೂ ಶಿಲ್ಪಿ ಈ ವೃತ್ತಿಗಳನ್ನು ಮಾಡುವ ಪಾಂಚಾಳರು ತಮ್ಮ ವೃತ್ತಿ ಹಾಗೂ ಕುಲಕ್ಕೆ ಸಂಬಂಧಿಸಿದ ಹಬ್ಬಗಳನ್ನು ಏಕಕಾಲಕ್ಕೆ ಆಚರಿಸುತ್ತಾರೆ. ಅವುಗಳೆಂದರೆ

೧. ಸಿರಸಂಗಿ ಕಾಳಮ್ಮ

೨. ವರವಿ ಮೋನಪ್ಪಯ್ಯ

೩. ತಿಂಥಿಣಿ ಮೋನಪ್ಪಯ್ಯನ ಜಾತ್ರೆ

೪. ನವಲುಗುಂದದ ನಾಗಲಿಂಗಪ್ಪನ ಆರಾಧನೆ

೫. ವಿಶ್ವಕರ್ಮ ಜಯಂತಿ

೬. ವಿಜಯ ದಶಮಿ

೧. ಸಿರಸಂಗಿ ಕಾಳಮ್ಮ ಯಾತ್ರಾ ಮಹೋತ್ಸವ

ಯುಗಾದಿಯಲ್ಲಿ ನಡೆಯುವ ಸಿರಸಂಗಿ ಕಾಳಮ್ಮನ ಜಾತ್ರೆ ಪಾಂಚಾಳರಿಗೆ ಅತ್ಯಂತ ಪ್ರಮುಖವಾದುದು. ಕಾಳಿಕಾದೇವಿಯು ಚೆಂಡ, ಮುಂಡ ಮುಂತಾದ ಒಂಭತ್ತು ರಾಕ್ಷಸರನ್ನು ಕೊಂದು ಲೋಕ ಕಲ್ಯಾಣ ಸಾಧಿಸಿದ ನೆನಪಿಗಾಗಿ ದೇವಿಯ ತೇರನ್ನು ಎಳೆಯುವರು. ಯುಗಾದಿಯ ಅಮವಾಸ್ಯೆಯಿಂದ ಐದು ದಿನಗಳ

ಕಾಲ ಸಿರಸಂಗಿ ಕಾಳಮ್ಮನ ಯಾತ್ರಾ ಮಹೋತ್ಸವ ನಡೆಯುತ್ತದೆ. ಪ್ರತಿ ಯುಗಾದಿ ಪಾಲ್ಗುಣ ಬಹುಳ ೧೪ ಚತುರ್ಥಿಯಿಂದ ಪ್ರಾರಂಭವಾಗಿ ಹೊಸ ಸಂವತ್ಸರದ ಚೈತ್ರಶುದ್ಧ ಪಂಚಮಿ ಷಷ್ಟಿವರೆಗೆ ಯುಗ ಯುಗಾಂತರ ಯುಗಾದಿ ದಿನದಂದು ನಡೆದುಬಂದ ಪದ್ಧತಿ. ಈ ಪದ್ಧತಿಯಂತೆ ಉತ್ಸವಕ್ಕೆ ಶ್ರೀ ಶಕೆ ಸರ್ವಧಾರಿ ಸಂವತ್ಸರ ಫಾ.ಬ.೧೪ ಚರ್ತುದರ್ಶಿಯ ಮಧ್ಯರಾತ್ರಿ ಪೂಜಾ ಪಾಳೇಗಾರರನ್ನು ಬದಲಿಸುವುದು ನಡೆಯುತ್ತದೆ. ಅಂದರೆ ಪಾಂಚಾಳ ಸಮುದಾಯದಲ್ಲಿ ಸಹೋದರರು ಬೇರೆ ಆಗುವ ಸಂದರ್ಭದಲ್ಲಿ ಆಯತನಕ್ಕೆ ಸಂಬಂಧಿಸಿದ ಮನೆಗಳನ್ನು ಹಂಚಿಕೊಳ್ಳುವ ಹಾಗೆ ದೇವಸ್ಥಾನದ ಪೂಜಾರಿಕೆಯನ್ನು ಹಂಚಿಕೊಳ್ಳುವರು ಇದೇ ಆ ಪೂಜಾ ಪಾಳೇಗಾರರನ್ನು ಬದಲಾಯಿಸುವ ಮೊದಲನೆಯ ಕಾರ್ಯ.

ಯುಗಾದಿಯ ಅಮವಾಸ್ಯೆ ದಿವಸ ಪ್ರಾತಃಕಾಲ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀಗಣಪತಿ ಪುಣ್ಯವಾಚನ ವೇದ ಮಂತ್ರಗಳ ಘೋಷದೊಂದಿಗೆ ಶ್ರೀ ಕಾಳಿಕದೇವಿಗೆ ಮಹಾ ಅಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ, ತೀರ್ಥ ಪ್ರಸಾದ ನಡೆಯುತ್ತದೆ. ಬಂದಂತಹ ಪಾಂಚಾಳ ಸಮುದಾಯದವರು ಮೇಲಿನ ಕಾರ್ಯ ಮುಗಿದ ನಂತರ ದೇವಿಗೆ ಹೊಸಗೋದಿ ನಿಧಿ ಅರ್ಪಿಸುವುದು, ಧೂಳುಗಾಯಿಮುಡುಪು, ದೇವತೆಗೆ ವಸ್ತ್ರ, ಆಭರಣ ಅರ್ಪಿಸುವ ಕಾರ್ಯಗಳು ನಡೆಯುತ್ತವೆ. ನಂತರ ಸೇರಿದ ಪಾಂಚಾಳ ಸದ್ಭಕ್ತರು ಉಪವಾಸ ವ್ರಥಾ ಆಚರಣೆಯನ್ನು ಕೈಗೊಳ್ಳುವರು.

ಮುಂಬರುವ ಹೊಸ ಸಂವತ್ಸರದಲ್ಲಿ ಚೈತ್ರ ಮಾಸ ಶುದ್ಧ ೧ ಪ್ರತಿ ಪದ ಪಾಡ್ಯ ಪ್ರಾತಃಕಾಲ ಬ್ರಾಹ್ಮಿ ಮುಹೂರ್ತದಲ್ಲಿ ಗಣಪತಿ ಪೂಜೆ, ಪುಣ್ಯಾವಾಚನ, ಕಲಶ ಸ್ಥಾಪನೆ ಹಾಗೂ ಕಂಕಣಧಾರಣ ನವಗ್ರಹ ಪೂಜೆಯಿಂದ ಕಾಳಿಕದೇವಿಗೆ ಮಹಾಭಿಷೇಕ, ಷೋಡೋಪಚಾರ, ಪೂಜಾ ಅಲಂಕಾರ ಹಾಗೂ ಪೂಜ್ಯ ವೇದ ಘೋಷದೊಂದಿಗೆ ಶ್ರೀದೇವಿಯ ಜಯ ಜಯಕಾರದೊಂದಿಗೆ ಸಾಯಂಕಾಲ ದೇವಿಯ ಬುತ್ತಿ ಹಾರಿಸುವ ಕಾರ್ಯ ನಡೆಯುತ್ತದೆ. ಈ ಬುತ್ತಿಯನ್ನು ದೇವಿಯ ಪ್ರಸಾದವೆಂದು ಸ್ವೀಕರಿಸುತ್ತಾರೆ. ಇದನ್ನು ಅನ್ನ, ಅರಿಶಿಣ, ಕುಂಕುಮದಲ್ಲಿ ಮಿದಿದು ಉಂಡಿಗಳಂತೆ ಮಾಡಿರುತ್ತಾರೆ. ಈ ಉಂಡೆಗಳನ್ನು ಎಲ್ಲಾ ಭಕ್ತಾಧಿಗಳು ತೆಗೆದುಕೊಂಡು ಬಂದು ಮನೆಯಲ್ಲಿ ಎಲ್ಲರು ಸ್ವೀಕರಿಸುತ್ತಾರೆ.

ಕಾಳಿಕಾದೇವಿಯ ಬುತ್ತಿ ಹಾರಿಸಿದ ನಂತರ ಸಮುದಾಯದವರ ಉಪನಯನಗಳು, ಜವುಳ, ಮದುವೆ ಹಾಗೂ ಇತರೆ ಕಾರ್ಯಕ್ರಮಗಳು ದೇವಿಯ ಮುಂದೆ ಜರುಗುವವು. ಮಾರನೆಯ ದಿವಸ ಕಾಳಿಕದೇವಿಗೆ ಮಹಾಭಿಷೇಕ, ಅಲಂಕಾರ ಪೂಜೆ, ಮಂಗಳಾರತಿಯೊಂದಿಗೆ ತೀರ್ಥ ಪ್ರಸಾದ ನಡೆಯುತ್ತದೆ. ಸಾಯಂಕಾಲ ಸುಮಾರು ಐದುವರೆ ಗಂಟೆಗೆ ದೇವತೆಯ ತೇರನ್ನು ಸಕಲ ಭಕ್ತಾದಿಗಳು ಮಂಗಳ ವಾದ್ಯಗಳೊಂದಿಗೆ ಬನ್ನಿ ಮಹಾಂಕಾಳಿ ದೇವಿಯ ಪಾದಗಟ್ಟೆಯ ಹತ್ತಿರ ತೇರನ್ನು ಎಳೆದುಕೊಂಡು ಹೋಗಿ ಪೂಜೆ ಸಲ್ಲಿಸಿ ಮರಳುತ್ತಾರೆ. ರಾತ್ರಿ ದೇವಿಗೆ ಅಭ್ಯಂಗ ಹಾಗೂ ಉಷ್ಣೋದಕ ಸ್ನಾನ ಜರುಗುವುದು. ನಂತರ ಸಮಾಜದ ಬಾಂಧವರಿಂದ ಅನ್ನಸಂತರ್ಪಣೆ ಜರುಗುವುದು. ಪ್ರತಿದಿನ ಸಾಯಂಕಾಲ ದೇವಿಯ ಪಾರಾಯಣವನ್ನು ಏರ್ಪಡಿಸಲಾಗಿರುತ್ತದೆ. ಹೀಗೆ ಪಾಂಚಾಳರ ವೃತ್ತಿ ದೇವತೆಯಾದ ಕಾಳಿಕದೇವಿಯು ರಾಕ್ಷಸರನ್ನು ಕೊಂದು ಲೋಕ ಕಲ್ಯಾಣ ಸಾಧಿಸಿದ ನೆನಪಿಗಾಗಿ ದೇವಿಯ ತೇರನ್ನು ಪ್ರತಿ ಯುಗಾದಿಯಲ್ಲಿ ಎಳೆಯುವರು. ಹೀಗೆ ಐದು ದಿನಗಳ ಕಾಲ ದೇವಿಯ ಯಾತ್ರಾ ಮಹೋತ್ಸವ ನಡೆಯುತ್ತದೆ.

೨. ವರವಿ ಶ್ರೀ ಮೌನೇಶ್ವರ ಜಾತ್ರಾ ಮಹೋತ್ಸವ

ಮೌನೇಶ್ವರರು ಸುರಪುರದಿಂದ ಮೂರು ಮೈಲು ಅಂತರದಲ್ಲಿರುವ ಗೋನಾಳ ಎಂಬ ಗ್ರಾಮದಲ್ಲಿ ಪಾಂಚಾಳ ಧರ್ಮದ ಸಾನಗ ಗೋತ್ರದ ಕಮ್ಮಾರ ಮನೆತನದಲ್ಲಿ ಸದಾಚಾರ ಸಂಪನ್ನರೂ, ಪರಮಭಕ್ತರೂ ಆದ ಶೇಷಪ್ಪ-ಶೇಷಕ್ಕ ಎಂಬ ದಂಪತಿಗಳಿಗೆ ಮಗನಾಗಿ ಅವತರಿಸಿದರು. ಶೇಷಪ್ಪ-ಶೇಷಕ್ಕ ದಂಪತಿಗಳು ಪರಸ್ಪರ ಒಳ್ಳೆಯವರಾಗಿದ್ದರೂ ಶೇಷಪ್ಪನ ತಾಯಿಯಾದ ಕಮಲಮ್ಮ ಕಡು ಚಾಂಡಾಲಿನಿ. ಶೇಷಕ್ಕನು ಮಹಾಸಾಧ್ವಿ ಅತ್ತೆಯ ಬೈಯ್ಗುಳಗಳ ಕಡೆಗೂ ಲಕ್ಷ್ಯವಹಿಸದೆ ಸದಾ ದೇವರ ಪೂಜೆಯಲ್ಲಿಯೇ ತೊಡಗಿರುತ್ತಿದ್ದಳು. ಲಗ್ನವಾಗಿ ಎಷ್ಟೋ ದಿನಗಳು ಗತಿಸಿದ್ದರೂ ಮಕ್ಕಳಾಗಿರಲಿಲ್ಲ. ಮಹಾದೈವ ಭಕ್ತೆಯಾದ ಅವಳು ಆ ಊರಲ್ಲಿರುವ ಆದಿಲಿಂಗೇಶ್ವರನಿಗೆ ಹನ್ನೆರಡು ವರ್ಷ ನಿತ್ಯ ತ್ರಿಕಾಲ ಪೂಜೆ ಸಲ್ಲಿಸಿದಳು. ಅಂದು ಅವಳ ಹನ್ನೆರಡನೇ ವರ್ಷದ ಸೇವೆಯ ಕೊನೆಯ ದಿನ ಅವಳ ಬಲವಾದ ಇಚ್ಛೆಯ ಮೇರೆಗೆ ಪರಮಾತ್ಮನು ಲಿಂಗದಲ್ಲಿಂದ ಪ್ರತ್ಯಕ್ಷನಾದನು. ಮರೆಯಲ್ಲಿ ನಿಂತು ಇದನ್ನೆಲ್ಲ ನೋಡುತ್ತಿದ್ದ ಶೇಷಪ್ಪನು ಮೂರ್ಛೆ ಹೋದನು. ಶೇಷಕ್ಕನು ಭಗವಂತನಿಗೆ ಸಾಷ್ಟಾಂಗವೆರಗಿ ಪ್ರಾರ್ಥಿಸಿದಳು. ಅವಳ ಮನೋಕಾಮನೆಗೆ ಮೆಚ್ಚಿ ಪರಮಾತ್ಮನು ತಾನೇ ಅವಳಿಗೆ 'ಮೌನೇಶ್ವರ' ಎಂಬ ಹೆಸರನ್ನು ಹೊಂದಿ ಮಗನಾಗಿ ಬರಲು ಒಪ್ಪಿ ಅದೃಶ್ಯನಾದನು.

ಅಂದೇ ಮಧ್ಯರಾತ್ರಿಯ ಅವಧಿಯಲ್ಲಿ ಪರಮಾತ್ಮನು ಶಿಶುವಾಗಿ ಅವತರಿಸಿ ಬಂದನು. ಕೋಟಿ ಸೂರ್ಯ ಪ್ರಕಾಶನಾದ ಆ ಪರಮಾತ್ಮನ ಲೀಲೆಗೆ ಮೆಚ್ಚಿ ಅವರೆಲ್ಲರೂ ಸಂತೋಷ ಸಾಗರದಲ್ಲಿ ಮುಳುಗಿದರು. ಆ ಮಗುವಿಗೆ 'ಮೌನ'ನೆಂದು ನಾಮಕರಣ ಮಾಡಿದರು. 'ಮೌನ' ನೆಂಬ ಹೆಸರಿನ ಮಹತ್ವವು ಬಹಳ ಸ್ವಾರಸ್ಯಕರವಾಗಿದೆ.

"ಮೌನನಾರೆಂದೆನಲು ಶೂನ್ಯದಿ
ತಾನು ತಾನಾದ ಸ್ವಯಂಭುವು
ಮೌನಭಾವದ ಪ್ರಥಮ ಪ್ರಭು ತಾ ಮೌನನೆಂದೆನಿಸಿ
ಮೌನದಿಂದಲಿ ಸಕಲ ಸ್ಥಾವರ
ಮೌನದಿಂದಲಿ ಸಕಲ ಜಂಗಮ
ಮೌನದಿಂದಲಿ ಸಕಲ ವಸ್ತುವು ಮೌನ ಗುರು ಶಿವನು"||

ಹೀಗೆ 'ಮೌನ'ದ ಮಹತ್ವದ ಬಗ್ಗೆ ಹಿರಿಯರು ತಿಳಿಸುತ್ತಾರೆ.

ಮೌನೇಶ್ವರ ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾಪ್ರವೀಣನಾಗಿ ತಂದೆ ತಾಯಿಯನ್ನು ತೊರೆದು ದೇಶ ಸಂಚಾರವನ್ನು ಕೈಗೊಂಡು ಪೆನಗೊಂಡಿ ಬಾಬಯ್ಯನೆಂಬ ಸಾಧುವಿನ ಪರಿಚಯ ಮಾಡಿಕೊಂಡು ಅವರಿಂದ ಇನ್ನಷ್ಟು ವಿದ್ಯಾ ಪ್ರವೀಣನಾಗಿ ಮುಂದೆ ಮತ್ತೆ ದೇಶ ಸಂಚಾರವಾಗಿ ಕಂಚಿ, ಕಾಶಿ, ಕಾಳಹಸ್ತಿ, ಬಾಬಾಬುಡನಗಿರಿ ಮುಂತಾದ ಕಡೆಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಲ್ಲಿ ಪಾಠ ಪ್ರವಚನ ಮಾಡಿದರು. ಅಷ್ಟೋತ್ತಿಗೆ ಮೌನ ಎಂಬ ಹೆಸರು ಮಾನಪ್ಪಯ್ಯ, ಮೌನೇಶ್ವರ ಸ್ವಾಮಿ ಎಂದು ನಾಮಖ್ಯಾತವಾಗಿತ್ತು ಎಂದು ತಿಳಿದು ಬರುತ್ತದೆ.

೧೨ನೇ ಶತಮಾನದ ವಚನ ಚಳವಳಿ ಆರಂಭವಾಗಲು ಪ್ರಮುಖವಾದ ಕಾರಣ ಅಂದಿನ ಚಾರಿತ್ರಿಕ ಅಂಶಗಳು. ಈ ಹಿನ್ನೆಲೆಯಲ್ಲಿಯೇ ವಚನ ಚಳವಳಿಯ ಕ್ರಾಂತಿ ಆರಂಭವಾಗುತ್ತದೆ. ಚಾರಿತ್ರಿಕ ಅಂಶಗಳಾದ ಪ್ರಭುತ್ವ, ಧರ್ಮ ಇತ್ಯಾದಿ ಅಂಶಗಳು ಶಿವಶರಣರಿಗೆ ಪ್ರೇರಣೆ ಮತ್ತು ಪ್ರಭಾವಗಳಾದವು. ಇಂತಹ ಪ್ರೇರಣೆ ಪ್ರಭಾವಗಳೇ ೧೭ನೇ ಶತಮಾನದಲ್ಲಿ ಮೋನಪ್ಪಯ್ಯನ ಮೇಲೆ ಪ್ರಭಾವ ಬೀರಿದವು ಎಂಬುದಕ್ಕೆ ಮೋನಪ್ಪಯ್ಯ ರಚನೆ ಮಾಡಿದ ವಚನಗಳೇ ಸಾಕ್ಷಿ ಇಂತಹ ಮಹಾಪುರುಷರನ್ನು ಪಾಂಚಾಳರು ಆರಾಧಿಸುತ್ತ ಬಂದಿದ್ದಾರೆ. ಇದರ ಆರಾಧನೆಯೇ ಮೋನಪ್ಪಯ್ಯನ ಯಾತ್ರಾ ಮಹೋತ್ಸವ ಎಂದು ಹೇಳಬಹುದು. ಶ್ರಾವಣ ಮಾಸದ ಕೊನೆಯ ಸೋಮವಾರದಂದು ಪಾಂಚಾಳರು ಮೋನಪ್ಪಯ್ಯನ ತೇರನ್ನು ವರವಿಯಲ್ಲಿ ವಿಜೃಂಭಣೆಯಿಂದ ಎಳೆಯುತ್ತಾರೆ. ಈ ತೇರನ್ನು ಎಳೆಯುವ ಸಂದರ್ಭದಲ್ಲಿ ಆಚರಿಸುವ ವಿಧಿ ವಿಧಾನಗಳು ಈ ಕೆಳಕಂಡತಿವೆ.

ಶ್ರಾವಣ ಮಾಸದ ಕೊನೆಯ ಸೋಮವಾರದಿಂದ ಐದು ದಿನಗಳ ಕಾಲ ವರವಿಯಲ್ಲಿ ಮೌನೇಶ್ವರ ಯಾತ್ರಾ ಮಹೋತ್ಸವ ನಡೆಯುತ್ತದೆ. ಸೋಮವಾರದಂದು ಮೌನೇಶ್ವರನ ರಥೋತ್ಸವ, ಮಂಗಳವಾರ ದಿವಸದಂದು ಕಡುಬಿನ ಕಾಳಗ, ಬುಧುವಾರ ದಿವಸದಂದು ಮೌನೇಶ್ವರನ ಪಾಲಿಕೆಯನ್ನು ಛಬ್ಬಿಗೆ ಹೊಯ್ಯುವುದು, ಗುರುವಾರ ದಿವಸದಂದು ಮೌನೇಶ್ವರನ ಪಾಲಿಕೆಯನ್ನು ಅಲಾವಿ ಗುಡ್ಡಕ್ಕೆ ಹೊಯ್ಯುವುದು ಹಾಗೂ ಕೊನೆಯ ದಿವಸವಾದ ಶುಕ್ರವಾರದಂದು ಮೌನೇಶ್ವರನ ಮಹಾ ಪ್ರಸಾದದ ಕಾರ್ಯಕ್ರಮ ನಡೆಯುತ್ತದೆ.

ಈ ಮೇಲಿನ ಎಲ್ಲಾ ಕಾರ್ಯಗಳು ಪೂಜ್ಯ ಶ್ರೀ ಶ್ರೀ ಶ್ರೀ ವಿರೂಪಾಕ್ಷಸ್ವಾಮಿಗಳು, ಶ್ರೀ ಮೌನೇಶ್ವರ ದೇವಸ್ಥಾನ ವರವಿ, ಪೂಜ್ಯ ಶ್ರೀ ಮತ್ಕಾಳ ಹಸ್ತಾಚಾರ್ಯನಾಮ ಶ್ರೀ ಸರಸ್ವತಿ ಪೀಠಾಧೀಶರಾದ ಶ್ರೀ ಶ್ರೀ ಶ್ರೀ ಗುರುನಾಥ ಸ್ವಾಮಿಗಳು, ಶ್ರೀ ಮದ್ಮಾತಗಿರಿ ವಿಶ್ವಕರ್ಮ ಏಕದಂಡಗಿ ಮಠ, ಯಾದಗಿರಿ, ಪೂಜ್ಯ ಶ್ರೀ ಶ್ರೀ ಶ್ರೀ ಫಣೀಂದ್ರ ಸ್ವಾಮಿಗಳು, ಮೂರುಝಾವ ಮಠದ ಕಾರವಾರ ಶ್ರೀ ಮತ್ಕಾಳಹಸ್ತಾಚಾರ್ಯನಾಮ, ಶ್ರೀ ಸರಸ್ವತಿ ಪೀಠಾಧೀಶರು, ಶ್ರೀ ಶ್ರೀ ಶ್ರೀ ಕಾಳಹಸ್ತೇಂದ್ರ ಸ್ವಾಮಿಗಳು ವಿಶ್ವಕರ್ಮ ಏಕದಂಡಗಿಮಠ ಶಹಾಪೂರ, ಶ್ರೀ ಮತ್ಕಾಳಹಸ್ತಾಚಾರ್ಯನಾಮ, ಶ್ರೀ ಮದಾನೆಗೊಂದಿ ಸಂಸ್ಥಾನ ಶ್ರೀ ಸರಸ್ವತಿ ಪೀಠಾಧೀಶರು, ಪೂಜ್ಯ ಶ್ರೀ ಶ್ರೀ ಶ್ರೀ ದಿವಾಕರ ಸ್ವಾಮಿಗಳು ಗಿಣಗೇರಿ ಇವರುಗಳ ದಿವ್ಯ ಸನ್ನಿಧಿಯಲ್ಲಿ ಮೇಲಿನ ಕಾರ್ಯಕ್ರಮಗಳು ಜರುಗುತ್ತವೆ.

ಸೋಮವಾರ ದಿವಸದಂದು ಬೆಳಗಿನಜಾವ ಐದರಿಂದ ಆರುಗಂಟೆಯ ತನಕ ಮೌನೇಶ್ವರನ ಮೂರ್ತಿಗೆ ರುದ್ರಾಭಿಷೇಕ ನಡೆಯುತ್ತದೆ. ಎಂಟರಿಂದ ಒಂಭತ್ತು ಗಂಟೆಯವರೆಗೆ ಧಾರ್ಮಿಕ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತದೆ. ಒಂಭತ್ತು ಗಂಟೆಯಿಂದ ಹನ್ನೊಂದು ಗಂಟೆಯವರೆಗೆ ಯಜ್ಞ, ಹೋಮ, ಹವನದಲ್ಲಿ ಎಲ್ಲರು ಭಾಗವಹಿಸುವರು. ಹನ್ನೊಂದರಿಂದ ಹನ್ನೆರಡು ಗಂಟೆಯವರೆಗೆ ಅಧ್ಯಾತ್ಮ ಪ್ರವಚನ ಕಾರ್ಯಕ್ರಮವಿರುತ್ತದೆ. ಮಧ್ಯಾಹ್ನ ಮೂರು ಮೂವತ್ತರಿಂದ ನಾಲ್ಕು ಮೂವತ್ತರವರೆಗೆ ಶ್ರೀ ಮೌನೇಶ್ವರ ಲೀಲಾ ವಿಲಾಸವನ್ನು ಪಠಣ ಮಾಡುತ್ತಾರೆ. ಸಾಯಂಕಾಲ ಐದರಿಂದ ರಥೋತ್ಸವವನ್ನು ಎಳೆಯುವರು.

ರಥೋತ್ಸವವನ್ನು ಎಳೆಯುವ ಮುಂಚಿತವಾಗಿಯೇ ರಥೋತ್ಸವದ ಗಾಲಿಗಳಿಗೆ ಎಣ್ಣೆ ಎರೆಯುವ ಶಾಸ್ತ್ರ, ಕಾಯಿಪೂಜೆ ಶಾಸ್ತ್ರ, ಮಿಣಿ ತರುವ ಶಾಸ್ತ್ರ, ದೇವರ ಪಾಲಕಿ ತರುವ ಶಾಸ್ತ್ರಗಳೆಲ್ಲವನ್ನು ಮಾಡುತ್ತಾರೆ. ದೇವರ ಪಾಲಕಿಯನ್ನು ಸಕಲ ಸದ್ಭಕ್ತರು ಮಂಗಳ ವಾದ್ಯಗಳೊಂದಿಗೆ ರಥೋತ್ಸವದ ಹತ್ತಿರಕ್ಕೆ ಪಾಲಕಿಯನ್ನು ತೆಗೆದುಕೊಂಡು ಬಂದು ರಥೋತ್ಸವದ ಸುತ್ತಲು ಮೂರು ಸುತ್ತನ್ನು ಸುತ್ತುತ್ತಾರೆ. ನಂತರ ರಥೋತ್ಸವವನ್ನು ಸೇರಿದ ಸಕಲ ಸದ್ಭಕ್ತರು ಮಿಣಿಯಿಂದ ಎಳೆಯುವರು. ಈ ಸಂದರ್ಭದಲ್ಲಿ ಕುದುರೆ, ಒಂಟೆ, ಆನೆ ಮುಂತಾದ ಪ್ರಾಣಿಗಳು ಎಳೆಯುವ ಸಂದರ್ಭಗಳಲ್ಲಿ ಪಾಲ್ಗೊಂಡಿರಲೇಬೇಕು.

ಮಂಗಳವಾರ ದಿವಸದಂದು ಬೆಳಗಿನ ಜಾವದಲ್ಲಿ ರುದ್ರಾಭಿಷೇಕ ನಡೆಯುತ್ತದೆ. ನಂತರ ಸ್ವಾಮಿಯವರಿಂದ ಧಾರ್ಮಿಕ ವಿಚಾರವನ್ನು ನೆರದಿರುವ ಭಕ್ತಾಧಿಗಳಿಗೆಲ್ಲಾ ತಿಳಿಸುತ್ತಾರೆ. ಸಾಯಂಕಾಲ ನಾಲ್ಕು ಗಂಟೆಗೆ ಮೌನೇಶ್ವರ ಗುಡಿಯ ಆವರಣದಲ್ಲಿ ಪೂಜ್ಯ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಡುಬಿನ ಕಾಳಗ ಕಾರ್ಯ ನಡೆಯುತ್ತದೆ. ಇದು ಎರಡನೆಯ ದಿವಸದ ಕಾರ್ಯ ಕಡುಬಿನ ಕಾಳಗ ಎಂದರೆ ಬಹುಶಃ ಎರಡು ವರ್ಗಗಳ ಮಧ್ಯದ ಸಂಘರ್ಷವು ಕಡುಬಿನ ಕಾಳಗದ ಸ್ವರೂಪವನ್ನು ಹೊಂದಿ ಇಂದು ಜನಪದರ ಆಚರಣೆಯಲ್ಲಿ ಉಳಿದುಕೊಂಡು ಬಂದಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕಡುಬನ್ನು ಮಾಡಿ ದೇವರಿಗೆ ನೈವೇದ್ಯವನ್ನು ಅರ್ಪಿಸಿ ಪೂಜೆ ಸಲ್ಲಿಸಲಾಗುತ್ತದೆ. ಈ ಕಡುಬಿನಿಂದ ಪೂಜಾರಿಯವರಿಗೆ ಹೊಡೆಯುತ್ತಾರೆ. ಇದನ್ನೇ ಕಡುಬಿನ ಕಾಳಗ ಎಂದು ಆಚರಿಸುತ್ತಾರೆ.

ಬುಧವಾರ ದಿವಸದಂದು ಬೆಳಗಿನ ಜಾವದಲ್ಲಿ ಮೌನೇಶ್ವರನಿಗೆ ರುದ್ರಾಭಿಷೇಕ ನಡೆಯುತ್ತದೆ. ನಂತರ ಒಂಭತ್ತುಗಂಟೆಗೆ ಮೌನೇಶ್ವರನ ಪಾಲಕಿಯನ್ನು ಹತ್ತಿರದ ಭಭ್ಬಿಗೆ ತೆಗೆದುಕೊಂಡು ಹೋಗಿ ಹೊಳೆಯ ದಡದಲ್ಲಿ ಪೂಜೆ ಮಾಡಿಕೊಂಡು ಬರುವರು. ಗುರುವಾರ ದಿವಸದಂದು ಮೌನೇಶ್ವರನ ಪಾಲಕಿಯನ್ನು ಅಲಾವಿ ಗುಡ್ಡಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುವರು. ಪಾಲಕಿಯನ್ನು ಹೊಯ್ಯುವಾಗ ಮಂಗಳವಾದ್ಯಗಳೊಂದಿಗೆ ಭಕ್ತ ಸಮೂಹದವರೆಲ್ಲರೂ ಪಾಲಕಿಯ ಹಿಂದೆ ನಡೆಯುವರು. ಶುಕ್ರುವಾರ ದಿವಸದಂದು ಬೆಳಗಿನ ಜಾವ ಐದರಿಂದ ಆರುಗಂಟೆಯವರೆಗೆ ರುದ್ರಾಭಿಷೇಕ ನಡೆದ ಮೇಲೆ ಮಹಾಪ್ರಸಾದವಿರುತ್ತದೆ. ಮಹಾಪ್ರಸಾದ ಅಂದರೆ ಗೋಧಿಹಿಟ್ಟಿನಲ್ಲಿ ರೊಟ್ಟಿಯನ್ನು ಸುಟ್ಟು ಅದನ್ನು ಸಣ್ಣಗೆ ಪುಡಿ ಪುಡಿ ಮಾಡಿ ಅದಕ್ಕೆ ಬೆಲ್ಲವನ್ನು ಕಲೆಸುವರು ಇದಕ್ಕೆ 'ಮಾದಲಿ' ಎಂದು ಕರೆಯುತ್ತಾರೆ. ಈ ಮಾದಲಿಯಿಂದ ಲಿಂಗದ ಆಕೃತಿಯನ್ನು ಮಾಡುತ್ತಾರೆ. ಈ ಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ. ನಂತರ ಈ ಲಿಂಗವನ್ನು ಮೌನೇಶ್ವರ ಒಂದು ಪಕ್ಷಿಯ ರೂಪದಲ್ಲಿ ಬಂದು ಅದನ್ನು ಸ್ವೀಕರಿಸುತ್ತಾನೆ. ನಂತರ ಅಲ್ಲಿ ನೆರೆದಿರುವ ಭಕ್ತಾಧಿಗಳಿಗೆ ಪ್ರಸಾದವನ್ನು ಹಂಚುತ್ತಾರೆ. ಈ ಪ್ರಸಾದವನ್ನು ಮೌನೇಶ್ವರ ಬಂದು ಸ್ವೀಕರಿಸುವರಿಗೆ ಭಕ್ತಾದಿಗಳಿಗೆ ಹಂಚುವುದಿಲ್ಲ. ಪ್ರಸಾದವನ್ನು ಮೌನೇಶ್ವರ ಮುಟ್ಟಿದ ಮೇಲೆಯೇ ಭಕ್ತ ಸಮೂಹಕ್ಕೆ ಪ್ರಸಾದವನ್ನು ಕೊಡಲಾಗುತ್ತದೆ. ಇದನ್ನೇ ಮಹಾಪ್ರಸಾದ ಎಂದು ಕರೆಯುತ್ತಾರೆ. ಮೌನೇಶ್ವರನ ಯಾತ್ರಾ ಮಹೋತ್ಸವಕ್ಕೆ ಬಂದ ಭಕ್ತಾದಿಗಳು ಮಹಾಪ್ರಸಾದದ ಕಾರ್ಯವನ್ನು ಮುಗಿಸಿ ಕೊಂಡೇ ತಮ್ಮ ಊರುಗಳಿಗೆ ಹಿಂತಿರುಗುವುದು. ಅಲ್ಲಿಯ ತನಕ ವರವಿಯಲ್ಲಿಯೇ ವಾಸ್ತವ್ಯವನ್ನು ಹೂಡಿರುತ್ತಾರೆ.

ಹೀಗೆ ಪಾಂಚಾಳ ಸಮುದಾಯದ ಮೋನಪ್ಪಯ್ಯನ ಜಾತ್ರೆಯನ್ನು ಪಾಂಚಾಳ ಕುಲದವರು ಐದು ದಿನಗಳ ಕಾಲ ಆಚರಿಸುತ್ತ ಬಂದಿರುವುದನ್ನು ಕಾಣಬಹುದಾಗಿದೆ. ಈ ಐದು ದಿನಗಳ ಕಾಲ ಮೋನಪ್ಪಯ್ಯನ ಲೀಲಾ ವಿಲಾಸವನ್ನು ಭಕ್ತಸಮೂಹಕ್ಕೆ ಪಠಣ ಕೇಳಲು ಅವಕಾಶವನ್ನು ಮಾಡಿರುತ್ತಾರೆ. ಸಮುದಾಯದ ಉಪನಯನ, ಜವುಳ, ಮದುವೆಯ ಕಾರ್ಯಕ್ರಮಗಳು ಕೂಡ ನಡೆಯುತ್ತವೆ.

೩. ತಿಂಥಿಣಿ ಜಗದ್ಗುರು ಮೌನೇಶ್ವರರ ಜಾತ್ರಾ ಮಹೋತ್ಸವ

ಪಾಂಚಾಳ ಸಮುದಾಯದವರು ಮೌನೇಶ್ವರನ ಜಾತ್ರೆಯನ್ನು ತಿಂಥಿಣಿಯಲ್ಲಿ ಜನವರಿ ತಿಂಗಳಲ್ಲಿ ಆಚರಿಸುತ್ತಾರೆ. ಇಲ್ಲಿಯೂ ಕೂಡ ಐದು ದಿನಗಳ ಕಾಲ ಜಾತ್ರೆಯನ್ನು ಆಚರಿಸಲಾಗುತ್ತದೆ. ಮೊದಲನೆಯ ದಿನ ರಥೋತ್ಸವ, ಎರಡನೆಯ ದಿನ ಕಡುಬಿನ ಕಾಳಗ, ಮೂರನೆಯ ಹಾಗೂ ನಾಲ್ಕನೆಯ ದಿನ ಧಾರ್ಮಿಕ ಸಭೆಗಳು ಹಾಗೂ ಐದನೆಯ ದಿನ ಮಹಾ ಪ್ರಸಾದ ನಡೆಯುತ್ತದೆ. ಈ ಆಚರಣೆಯು ವರವಿಯಲ್ಲಿ ಆಚರಿಸುವ ಆಚರಣೆಯಂತೆ ಇಲ್ಲಿ ಕೂಡ ಮಾಡಲಾಗುತ್ತದೆ.

೪. ನವಲುಗುಂದದ ನಾಗಲಿಂಗಪ್ಪನ ಆರಾಧನಾ ಮಹೋತ್ಸವ

ಉತ್ತರ ಕರ್ನಾಟಕದಲ್ಲಿ ಅತ್ಯಂತ ಹೆಸರು ಪಡೆದ ಮಹಿಮಾ ಪುರುಷರಲ್ಲಿ ನವಲುಗುಂದದ ನಾಗಲಿಂಗಪ್ಪ ಸ್ವಾಮಿಗಳು ಒಬ್ಬರಾಗಿದ್ದಾರೆ. ಇವರು ವಿಶ್ವಕರ್ಮ ಕುಲದ ಮೌನೇಶ್ವರ-ನಾಗಮ್ಮ ಎಂಬ ದಂಪತಿಗಳ ಉದರದಲ್ಲಿ ಕ್ರಿ.ಶ.೧೭೩೪ರಲ್ಲಿ ರಾಯಚೂರು ಜಿಲ್ಲೆಯ ಜವಳಗೇರಾ ಗ್ರಾಮದಲ್ಲಿ ಜನಿಸುತ್ತಾರೆ. ತಮ್ಮ ಎಂಟನೆಯ ವಯಸ್ಸಿನಲ್ಲಿಯೇ ಮನೆಬಿಟ್ಟು ಹೋದ ನಾಗಲಿಂಗ ಸ್ವಾಮಿಗಳು ಕೆಲಕಾಲ ಸ್ಮಶಾನವಾಸಿಯಾಗಿ ದೇಶಾಂತರ ಹೋದ ಬಗೆಗೆ ಅವರ ಚರಿತ್ರೆಯಿಂದ ತಿಳಿಯುತ್ತದೆ. ಆಡಿದಂತೆ ಮಾಡಿ ತೋರಿಸುತ್ತ, ಸತ್ಯವನ್ನು ಶೋಧಿಸುತ್ತ, ಪರಸ್ತ್ರೀಯರನ್ನು ತಾಯಿ ಎಂದೇ ಭಾವಿಸಿ, ಸಂಚಾರದಲ್ಲಿಯೇ ಯೋಗಸಿದ್ಧಿಯನ್ನು ಮಾಡಿಕೊಂಡ ನಾಗಲಿಂಗ ಸ್ವಾಮಿಗಳು ಅನೇಕ ಪವಾಡಗಳನ್ನು ಗೈದ ದೃಷ್ಟಾಂತಗಳು ಹಲವೆಡೆ ಕಾಣುತ್ತಿವೆ. ಸತ್ತವರಿಗೆ ಮತ್ತೆ ಜೀವದಾನ ಮಾಡಿದ್ದು, ಹುರಿದ ಕಡಲೆ ಬಿತ್ತಿ ಬೆಳೆ ತರಿಸಿದ್ದು, ಸಂತಾನ ಸುಖದಯ ಪಾಲಿಸಿದ್ದು ಹೀಗೆ ಅನೇಕ ದೃಷ್ಟಾಂತಗಳನ್ನು ನಾವು ನೋಡಬಹುದು. ಇಂತಹ ಪವಾಡ ಪುರುಷನ ಆರಾಧನಾ ಮಹೋತ್ಸವವನ್ನು ಜುಲೈ ತಿಂಗಳಲ್ಲಿ ಪಾಂಚಾಳ ಸಮುದಾಯದವರು ಆಚರಿಸುತ್ತ ಬಂದಿದ್ದಾರೆ.

ಪ್ರತಿ ವರ್ಷ ಜುಲೈ ತಿಂಗಳಲ್ಲಿ ಎರಡು ದಿನಗಳ ಕಾಲ ಶ್ರೀ ಜಗದ್ಗುರು ಅಜಾತ ನಾಗಲಿಂಗ ಸ್ವಾಮಿಗಳ ಮಠ ನವಲಗುಂದ ಇಲ್ಲಿ ಆರಾಧನಾ ಮಹೋತ್ಸವವನ್ನು ಹಮ್ಮಿಕೊಳ್ಳುತ್ತಾರೆ. ಮೊದಲನೇ ದಿವಸ ಪಾಂಚಾಳ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ಆರಾಧನಾ ಮತ್ತು ಮೊದಲಿ ಪೂಜಾ ಮಹೋತ್ಸವ ನೆರವೇರಿಸುತ್ತಾರೆ. ಎರಡನೆಯ ದಿವಸ ನಾಗಲಿಂಗ ಸ್ವಾಮಿಗಳ ಪಲ್ಲಕ್ಕಿ ಮಹೋತ್ಸವ ನೆರವೇರಿಸಲಾಗುತ್ತದೆ. ಈ ಎರಡು ದಿನಗಳ ಆರಾಧನಾ ಮಹೋತ್ಸವದಲ್ಲಿ ವಿಶ್ವಕರ್ಮ ಬಂಧುಗಳು ನೆರೆದಿರುತ್ತಾರೆ.

೫. ವಿಶ್ವಕರ್ಮ ಜಯಂತಿ

ಪಾಂಚಾಲ, ಕಂಸಾಲ, ಆಚಾರಿ, ಓಜ, ವಿಶ್ವಬ್ರಾಹ್ಮಣ ಮುಂತಾದ ಹೆಸರುಗಳಿರುವ ವಿಶ್ವಕರ್ಮ ಜನಾಂಗಕ್ಕೆ ಮೂಲ ಪುರುಷ ವಿಶ್ವಕರ್ಮ ಅತನ ಹೆಸರೇ ಜನಾಂಗಕ್ಕೂ ಬಂದಿದೆ. ವಿಶ್ವಕರ್ಮ ಭೂಮಿಯ

ಮಗ, ವಿಶ್ವದ ಶಿಲ್ಪಿ ಎಂದು ಕರೆಯಲಾಗಿದೆ. ವಿಶ್ವಕ್ರಿಯಾ ಕರ್ಮಗಳನ್ನು ನಿಯಂತ್ರಿಸುವ ಶಕ್ತಿ, ತಂತ್ರಜ್ಞಾನದ ಅಧಿದೇವತೆ, ಭಗವಾನ್ ವಿಶ್ವಕರ್ಮನನ್ನು ಸ್ಮರಿಸಿ ಋಣಭಾರ ಸಲ್ಲಿಸುವ ಅರ್ಥಪೂರ್ಣ ಆಚರಣೆಯೇ ವಿಶ್ವಕರ್ಮ ಜಯಂತಿ.

ವಿಶ್ವಕರ್ಮ ಜಯಂತಿಯನ್ನು ಪ್ರತಿ ತಾಲೂಕು, ಜಿಲ್ಲೆಗಳಲ್ಲಿಯೂ ಪಾಂಚಾಳ ಸಮುದಾಯದವರು ಒಟ್ಟುಗೂಡಿ ಎರಡು ದಿನಗಳ ಕಾಲ ಆಚರಣೆ ಮಾಡುವರು. ಆಯಾ ತಾಲೂಕಿನ, ಜಿಲ್ಲೆಯ ಪಾಂಚಾಳ ಸಮುದಾಯದವರು ಈ ಜಯಂತಿಗೆ ಸಂಬಂಧಿಸಿದಂತೆ ಒಂದು ರೂಪರೇಷವನ್ನು ಹಾಕಿಕೊಂಡು ತಾಲೂಕು ಇಲ್ಲವೆ ಜಿಲ್ಲಾ ಕೇಂದ್ರಗಳಲ್ಲಿ ನಡೆಯುವಂತೆ ಹಮ್ಮಿಕೊಳ್ಳುತ್ತಾರೆ. ನಿಗದಿ ಪಡಿಸಿದ ದಿನಾಂಕದಂದು ಪಾಂಚಾಳ ಸಮುದಾಯದವರೆಲ್ಲರೂ ವಿಶ್ವಕರ್ಮನಿಗೆ ಪೂಜೆಯನ್ನು ಕೈಗೊಳ್ಳುವರು. ನಂತರ ವಿಶ್ವಕರ್ಮ ಧ್ವಜಾರೋಹಣದೊಂದಿಗೆ ಕಾರ್ಯಕ್ರಮಗಳು ಆರಂಭವಾಗುವವು. ಈ ಸಂದರ್ಭದಲ್ಲಿ ವಿಶ್ವಕರ್ಮನಿಗೆ ಹೋಮ, ಹವನ ಹಮ್ಮಿಕೊಳ್ಳಲಾಗುತ್ತದೆ. ನಂತರ ವಿಶ್ವಕರ್ಮ ಮೂರ್ತಿಯನ್ನು ಮಂಗಲವಾದ್ಯಗಳ ಮುಖಾಂತರ ಮೆರವಣಿಗೆಯನ್ನು ಕೈಗೊಳ್ಳಲಾಗುವುದು. ನಂತರ ವಿಶ್ವಕರ್ಮ ಪೂಜಾ ಮಹೋತ್ಸವದ ಧಾರ್ಮಿಕ ಸಭೆಯನ್ನು ಏರ್ಪಡಿಸಲಾಗಿರುತ್ತದೆ. ಈ ವಿಶ್ವಕರ್ಮ ಜಯಂತಿಯ ದಿವ್ಯ ಸಾನಿಧ್ಯವನ್ನು ವಿಶ್ವಕರ್ಮ ಮಠಾಧೀಶರು ವಹಿಸಿಕೊಂಡಿರುತ್ತಾರೆ ಹಾಗೂ ಪಾಂಚಾಳ ಸಮಸ್ತ ಬಂಧುಗಳು ನೆರದಿರುತ್ತಾರೆ.

೬. ವಿಜಯದಶಮಿ

ಈ ಹಬ್ಬವನ್ನು ಮಹಾನವಮಿ, ದಸರಾ, ನವರಾತ್ರಿ, ವಿಜಯದಶಮಿ, ನಾಡಹಬ್ಬ, ಆಯುಧ ಪೂಜೆ ಹಾಗೂ ಬನ್ನಿ ಹಬ್ಬ ಎಂದೆಲ್ಲಾ ಪ್ರಾದೇಶಿಕವಾಗಿ ಕರೆಯುತ್ತಾರೆ. ಈ ಹಬ್ಬವನ್ನು ಒಂಭತ್ತು ದಿನಗಳ ಕಾಲ ಆಚರಿಸುವರು. ಆಶ್ವಯುಜ ಮಾಸದ ಶುಕ್ಲಪಕ್ಷದ ಪಾಡ್ಯದಿಂದ ನವಮಿಯವರೆಗೂ ದೇವಿ ಪೂಜೆಯನ್ನು ಕೈಗೊಳ್ಳುವರು. ಇದರ ಜೊತೆಗೆಯೇ ಮಹಾಲಯ ಅಮವಾಸ್ಯೆ ದಿನದಿಂದ ವಿಜಯದಶಮಿಯವರೆಗೂ ಪಾಂಚಾಳರು 'ದುರ್ಗಾಂ ದುರ್ಗತಿ ನಾಶಿನೀಂ' ಎಂದು ದೇವಿಯ ಪುರಾಣದಲ್ಲಿ ಹೇಳಿರುವಂತೆ ದುರ್ಗೆ ತನ್ನನ್ನು ಪೂಜಿಸುವವರ ದುರ್ಗತಿಯನ್ನು ತಪ್ಪಿಸುವಳು ಎಂಬ ಉದ್ದೇಶದಿಂದ ಹತ್ತು ದಿನಗಳ ಕಾಲ ದೇವಿಯನ್ನು ವಿಶೇಷವಾಗಿ ಪೂಜೆ ಮಾಡುವರು.

ಆಯುಧ ಪೂಜೆಯ ದಿವಸ ವೃತ್ತಿಯ ಕೆಲಸಕ್ಕೆ ಬಿಡುವನ್ನು ಕೊಡುವರು. ಬೆಳಗ್ಗೆಯೇ ಮನೆಯ ಬಾಗಿಲ ಮುಂದಿನ ಅಂಗಳವನ್ನು ಹೆಣ್ಣು ಮಕ್ಕಳು ಗೋಮಯದಿಂದ ಸಾರಿಸಿರುತ್ತಾರೆ. ಹುಡುಗರು ಹೊಲಕ್ಕೆ ಹೋಗಿ ಜೋಳದ ದಂಟುಗಳನ್ನು ಕಿತ್ತುಕೊಂಡು ಬರುತ್ತಾರೆ. ನವರಾತ್ರಿಯಲ್ಲಿ ಆಯುಧ ಪೂಜೆ ವಿಶೇಷವಾದ ದಿನ. ತಮ್ಮ ವೃತ್ತಿಯ ಉಪಕರಣಗಳನ್ನು ನೀರಿನಿಂದ ತೊಳೆದು ಬಟ್ಟೆಯಿಂದ ಒರೆಸಿ ದೇವರ ಜಗುಲಿಯ ಹತ್ತಿರ ಪೂಜೆಗೆ ಇಡುತ್ತಾರೆ. ಹೊಲದಲ್ಲಿ ಕಿತ್ತುಕೊಂಡು ಬಂದಿರುವ ಜೋಳದ ದಂಟುಗಳನ್ನು ಮನೆಯ ಬಾಗಿಲ ತೋಳುಗಳ ಪಕ್ಕದಲ್ಲಿ, ದೇವರ ಜಗುಲಿಯ ಮುಂದೆ, ಉಪಕರಣಗಳ ಪಕ್ಕದಲ್ಲಿ ದಂಟುಗಳನ್ನು ನಿಲ್ಲಿಸುತ್ತಾರೆ. ಐದು ಅಥವಾ ಒಂಭತ್ತು ವಿಳ್ಯಾದೆಲೆಗಳನ್ನು ತೆಗೆದುಕೊಂಡು ಒಂದು ಚಂಬಿಗೆಯಲ್ಲಿ ನೀರು ತುಂಬಿಕೊಂಡು ಚಂಬಿಗೆ ಕಂಟದ ಸುತ್ತಲೂ ವೀಳ್ಯಾದೆಲೆಗಳನ್ನಿಟ್ಟು ಅದರ ಮೇಲೆ

ಟೆಂಗಿನ ಕಾಯಿಯನ್ನು ಇಡುವರು ಇದಕ್ಕೆ ಕಳಶ ಎಂದು ಕರೆಯುವರು. ಇದನ್ನು ವೃತ್ತಿ ದೇವತೆಯಾದ ಕಾಳಿಕದೇವಿಯೆಂದು ಭಾವಿಸಿಕೊಳ್ಳುತ್ತಾರೆ. ಈ ಕಳಶ ಹಾಗೂ ವೃತ್ತಿ ಉಪಕರಣಗಳಿಗೆ ಅಂಗುನೂಲನ್ನು ಹಾಕಿ ಬನ್ನಿ ಪತ್ರಿಯನ್ನು ಮುಡಿಸಿ ಗಂಧ, ಕುಂಕುಮ, ಅರಿಶಿಣ ಹಚ್ಚಿ, ಕಾಯಿಯನ್ನು ಹೊಡೆದು ಊದೂ ಬತ್ತಿಯನ್ನು ಬೆಳಗುತ್ತಾರೆ. ಹೋಳಿಗೆಯ ನೈವೇದ್ಯವನ್ನು ಅರ್ಪಿಸುವರು. ಇದಾದ ಮೇಲೆ ಹೊಲಕ್ಕೆ ಹೋಗಿ ಹೊಲದಲ್ಲಿ ಪೂಜೆ ಕೈಗೊಳ್ಳುತ್ತಾರೆ. ಆರು ಸಣ್ಣ ಕಲ್ಲುಗಳನ್ನು ಶುಚಿಗೊಳಿಸಿ ಅವುಗಳಿಗೆ ಸುಣ್ಣವನ್ನು ಬಳಿದು ಅವುಗಳನ್ನು ಹೊಲದ ಮಧ್ಯದಲ್ಲಿಟ್ಟು ಪೂಜೆ ಮಾಡುವರು. ಇವುಗಳಿಗೆ ಪಾಂಡವರು ಮತ್ತು ಕೃಷ್ಣ ಎಂದು ಕರೆಯುತ್ತಾರೆ. ಈ ಪೂಜೆಯ ಅರ್ಥ ಪಾಂಡವರು ವನವಾಸಕ್ಕೆ ಹೋಗುವಾಗ ಬನ್ನಿಮರದ ಮೇಲೆ ಅವರ ಉಪಕರಣಗಳನ್ನಿಟ್ಟು, ಬನ್ನಿ ಎಲೆಯ ಮೇಲೆ ಊಟ ಮಾಡಿ ಹೋಗಿದ್ದಾರೆ ಎಂಬ ನಂಬಿಕೆಯಿಂದ ಇದನ್ನು ಮಾಡುತ್ತಾರೆ. ಹೊಲಕ್ಕೆ ಹೋಗಿ ಪೂಜೆ ಮಾಡಿಕೊಂಡು ಬಂದ ಮೇಲೆ ಮನೆಯವರೆಲ್ಲರೂ ಸೇರಿ ಊಟವನ್ನು ಮಾಡುತ್ತಾರೆ.

ಹತ್ತನೆಯ ದಿವಸ ವಿಜಯದಶಮಿ ಅಂದು ಬೆಳಗ್ಗೆಯೇ ಆಯುಧ ಪೂಜೆಗೆ ಇಟ್ಟಂತಹ ದಂಟುಗಳನ್ನು ತೆಗೆದು ಮನೆಯನ್ನು ಶುಚಿಗೊಳಿಸುತ್ತಾರೆ. ಮತ್ತೆ ಹೊಲಕ್ಕೆ ಹೋಗಿ ಜೋಳದ ದಂಟುಗಳನ್ನು ಕಿತ್ತುಕೊಂಡು ಬಂದು ಮನೆಯ ಬಾಗಿಲು, ಉಪಕರಣಗಳಿಗೆ ಇಡುತ್ತಾರೆ. ನಂತರ ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸುವರು. ಸಂಜೆಯ ಸಮಯದಲ್ಲಿ ಸಮುದಾಯದವರೆಲ್ಲ ಸೇರಿ ಬನ್ನಿಮರಕ್ಕೆ ಬನ್ನಿಯನ್ನು ಮುಡಿಯಲಿಕ್ಕೆ ಹೋಗುತ್ತಾರೆ. ಪಾಂಚಾಳರು ಬನ್ನಿಮರವನ್ನು ಕಾಳಿಕದೇವಿ ಎಂದು ಆರಾಧನೆ ಮಾಡುತ್ತಾರೆ. ಅಲ್ಲಿ ಸಮುದಾಯವರೆಲ್ಲ ಬನ್ನಿಮರವನ್ನು ಪೂಜೆ ಮಾಡಿ ಬನ್ನಿಯನ್ನು ಮುಡಿದು ಬನ್ನಿಮರಕ್ಕೆ ಜೋಳದ ದಂಟುಗಳನ್ನು ಎಸೆಯುತ್ತಾರೆ. ನಂತರ ಬನ್ನಿ ಪತ್ರೆಯನ್ನು ಹಿರಿಯರಿಗೆಲ್ಲರಿಗೂ ಕೊಟ್ಟು ಅವರ ಪಾದಕ್ಕೆ ನಮಸ್ಕಾರಿಸುತ್ತಾರೆ. ನಂತರ ತಮ್ಮ ಸ್ನೇಹಿತರಿಗೆ, ಬೇರೆ ಸಮುದಾಯದ ಹಿರಿಯರಿಗೆ 'ಬನ್ನಿಯನ್ನು ತೆಗೆದುಕೊಂಡು ಬಂಗಾರವಾಗಿರೋಣ' ಎಂದು ಹೇಳುತ್ತ ಬನ್ನಿಯನ್ನು ಕೊಡುತ್ತಾರೆ. ಇದಕ್ಕೆ ಬನ್ನಿ ಮುಡಿಯುವುದು ಎಂದು ಕರೆಯಲಾಗುತ್ತದೆ. ಈ ವಿಜಯದಶಮಿಯೆಂದು ಮಕ್ಕಳಿಗೆ ಅಕ್ಷರಾಭ್ಯಾಸ, ವೃತ್ತಿಯ ಕೆಲಸದ ಬಗ್ಗೆ ತಿಳುವಳಿಕೆ ಮುಂತಾದ ಶುಭ ಕಾರ್ಯಗಳನ್ನು ಕೈಗೊಳ್ಳುವರು. ಮಾರನೆಯ ದಿವಸ ಪೂಜೆಗೆ ಇಟ್ಟಂತಹ ಕಳಶವನ್ನು ತೆಗೆಯುತ್ತಾರೆ. ಅಂದರೆ ಚರಿಗೆಯ ಮೇಲೆ ಇಟ್ಟಂತ ಕಾಯಿಯನ್ನು ತೆಗೆದು ಹೊಡೆಯುತ್ತಾರೆ. ನಂತರ ಕೆಲಸಕ್ಕೆ ಉಪಕರಣಗಳನ್ನು ಉಪಯೋಗಿಸಬಹುದು. ಕಳಶವನ್ನು ತೆಗೆಯುವವರೆಗೂ ವೃತ್ತಿ ಕೆಲಸವನ್ನು ಮಾಡುವಂತಿಲ್ಲ. ಮಂಗಳವಾರ ಹಾಗೂ ಶುಕ್ರವಾರದಂದು ಈ ಕಳಶವನ್ನು ತೆಗೆಯಲಿಕ್ಕೆ ಬರುವುದಿಲ್ಲ ಎಂದು ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ಏಕೆಂದರೆ ಆ ವಾರಗಳು ದೇವಿಯ ವಾರ, ಅವತ್ತಿನ ದಿವಸವೇ ಕಳಶವನ್ನು ತೆಗೆದರೆ ದೇವಿಯನ್ನು ಮನೆಯಿಂದ ಹೊರಗಡೆ ದೂಕಿದಂತೆ ಎಂದು ತಿಳಿಯುತ್ತಾರೆ. ಇದರಿಂದ ಅಪಶಕುನಗಳು ಸಂಭವಿಸುವವು ಎಂದು ಭಾವಿಸುತ್ತಾರೆ. ಆದ್ದರಿಂದ ಈ ವಾರಗಳಂದು ಕಳಶವನ್ನು ಪಾಂಚಾಳರು ತೆಗೆಯುವುದಿಲ್ಲ.

೫.೨.೩. ವೃತ್ತಿ ಸಂಬಂಧಿ ನಂಬಿಕೆ, ನಿಷೇಧಗಳು

ದೈವ, ನಂಬಿಕೆಯಿಲ್ಲದ ಮನುಷ್ಯನಿಲ್ಲ, ಸಮಾಜವಿಲ್ಲ ಕೊನೆಗೆ ಇಡೀ ವಿಶ್ವವೇ ಅನೇಕ ನಂಬಿಕೆಗಳ ಅಡಿಯಲ್ಲಿ ಬಾಳಿ ಬದುಕು ಸವೆಸುತ್ತದೆ ಎಂದರೆ ತಪ್ಪಿಲ್ಲ. ಇವು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು ಉಳಿದುಕೊಂಡು ಬಂದಿವೆ. ಇವುಗಳ ಬೇರು ಸಮುದಾಯ ಸಂಸ್ಕೃತಿಯ ಅಂತರಾಳದಲ್ಲಿ ನೆಲೆಗೊಂಡಿವೆ. ಅಂದರೆ ಸಮುದಾಯಗಳ ಉದಯದೊಂದಿಗೆ ಇಂತಹ ನಂಬಿಕೆ, ದೈವ, ರೋಗ, ನಿಷೇಧ ತಲೆ ಎತ್ತಿದವು ಎಂಬುದು ಗಮನಾರ್ಹ. ಇದರಿಂದಲೇ ನಮಗೆ ಸಮುದಾಯಗಳ ನಿತ್ಯ ಬದುಕಿಗೂ ಮತ್ತು ನಂಬಿಕೆ, ದೈವ, ರೋಗ, ನಿಷೇಧಗಳಿಗೂ ನಿಕಟವಾದ ಸಂಬಂಧವಿರುವುದನ್ನು ಕಾಣಬಹುದು. ಹಾಗೆಯೇ ಪಾಂಚಾಳ ಸಮುದಾಯದವರು ತಮ್ಮ ವೃತ್ತಿಯ ಸಂದರ್ಭದಲ್ಲಿಯೂ ನಿರ್ದಿಷ್ಟವಾದ ದೈವ, ನಂಬಿಕೆಗೆ ಸಂಬಂಧಿಸಿದಂತೆ ಆಚರಣೆಗಳು ಅವರಲ್ಲಿ ಕಂಡು ಬರುತ್ತವೆ. ಆದರೆ ಮರದ (ಬಡಗಿತನ) ಕೆಲಸವನ್ನುಳಿದು ಬೇರೆ ವೃತ್ತಿಗಳಲ್ಲಿ ರೋಗ ನಿವಾರಣೆಗೆ ಸಂಬಂಧಿಸಿದಂತೆ ನಂಬಿಕೆ ಕಡಿಮೆ.

ಕಾಳಮ್ಮ, ವಿಶ್ವಕರ್ಮ, ಮೌನೇಶ್ವರ ಇವು ಪಾಂಚಾಳ ಸಮುದಾಯದ ವೃತ್ತಿಯ ದೇವರೆಂದು ಆರಾಧಿಸುತ್ತಾರೆ. ಪಾಂಚಾಳರು ಆಭರಣ ಕಾಯಿಸುವ, ಕರಗಿಸುವ ಒಲೆಗೆ ಅಗ್ಗಿಷ್ಟಿಗೆ ಎಂದು ಕರೆಯುತ್ತಾರೆ. ಆದರೆ ಅದಕ್ಕೆ ಒಲೆ ಎಂದು ಕರೆಯುವುದಿಲ್ಲ. ಹಾಗೆಯೇ ಬನ್ನಿ ಮರಕ್ಕೆ ಅದರ ಹೆಸರು ಹಿಡಿದು ಕರೆಯುವುದಿಲ್ಲ. ಹಾಗೂ ಆ ಮರದಿಂದ ಯಾವುದೇ ಕೆಲಸವನ್ನು ನಿರ್ವಹಿಸುವುದಿಲ್ಲ ಯಾಕೆಂದರೆ ಅದು ವೃತ್ತಿಯ ದೇವತೆ ಕಾಳಮ್ಮ ಎಂದು ನಂಬಿಕೊಂಡು ಬಂದಿದ್ದಾರೆ. ಅಮವಾಸ್ಯೆ ದಿವಸದಂದು ಯಾವುದೇ ನಿರ್ಮಾಣ ಕೆಲಸಗಳಲ್ಲಿ ಪಾಂಚಾಳರು ತೊಡಗುವುದಿಲ್ಲ. ಕಮ್ಮಾರ ಅಕ್ಕಸಾಲಿಗ ಕೆಲಸ ಮಾಡುವ ಸಂದರ್ಭದಲ್ಲಿ ಉತ್ತರಾಭಿಮುಖವಾಗಿರುವುದಿಲ್ಲ. ಕೆಲಸದ ಸಂದರ್ಭದಲ್ಲಿ ಅಡಿಗಲ್ಲಿನ ಮೇಲೆ 'ಹುಸಿಪೆಟ್ಟು' ಬಿಳುವಂತಿಲ್ಲ ಬಿದ್ದರೆ ಅಪಶಕುನ ಎಂದು ಭಾವಿಸುತ್ತಾರೆ. ಯುಗಾದಿಯ ದಿನದಂದು ಕುಲುಮೆ ಹತ್ತಿಸಿದಾಗ ಉರಿ ಯಾವ ಕಡೆ ಹೆಚ್ಚಾಗಿ ತಿರುಗುವುದೋ ಆ ಭಾಗದ ಕಡೆಗೆ ಮಳೆ ಬೆಳೆ ಸಮೃದ್ಧಿಯಾಗುತ್ತದೆ ಎಂದು ನಂಬಿಕೊಂಡು ಬಂದಿದ್ದಾರೆ. ಹಾಗೆಯೆ ಬಡಗಿಯವರು ಕೂಡ ವರ್ಷದ ಮೊದಲ ದಿನದಂದು ತಾವು ಮರವನ್ನು ಕೆತ್ತುವಾಗ ಆ ಕೆತ್ತಿದ ಚೆಕ್ಕೆ ಯಾವ ದಿಕ್ಕಿಗೆ ಬೀಳುತ್ತದೆಯೋ ಆ ಭಾಗದ ಕಡೆಗೆ ಮಳೆ ಬೆಳೆ ಚೆನ್ನಾಗಾಗುತ್ತದೆ ಎಂದು ತಿಳಿಯುತ್ತಾರೆ.

ಮನೆ, ದೇವಸ್ಥಾನ ಇತ್ಯಾದಿಗಳಿಗೆ ಮಾಡಿದ ಬಾಗಿಲುಗಳಿಗೆ ಮೊದಲ ಪೂಜೆ ತಮ್ಮದೇ ಆಗಬೇಕು ಎಂಬ ನಂಬಿಕೆ. ಮರವನ್ನು ಕಡಿಸುವ ಸಂದರ್ಭ, ಕೆಲಸವನ್ನು ಕೈಗೊಳ್ಳುವ ಸಮಯ ಇವೆಲ್ಲವು ಅಮೃತ ಘಳಿಗೆಯಲ್ಲಿಯೇ ಕೈಗೊಂಡರೆ ವಸ್ತುಗಳ ಬಾಳಿಕೆ ಬರುತ್ತವೆ. ಹೀಗೆ ಅನೇಕ ನಂಬಿಕೆಗಳನ್ನು ಈ ವೃತ್ತಿಗಳಲ್ಲಿ ಕಾಣಬಹುದು.

ಶಿಲ್ಪ ವೃತ್ತಿಯ ಸಂದರ್ಭದಲ್ಲಿಯೂ ಅನೇಕ ನಂಬಿಕೆಗಳಿವೆ. ಈ ವೃತ್ತಿ ಕಲಿಯುವರು ವೇದ ಅಧ್ಯಯನ ಮಾಡಿರಬೇಕು. ಯಾವುದೇ ವಿಧವಾದ ರೋಗರುಜಿನಗಳಿರಬಾರದು ಹಾಗೂ

ವಿಕಲಾಂಗನಾಗಿರಬಾರದು. ಸಮುದಾಯದಿಂದ ಅಪಮಾನಕ್ಕಿಡಾಗಿರಬಾರದು. ಯಾವ ಶಿಲ್ಪಿಯು ಮೂರ್ತಿಯನ್ನು ಕಡೆದಿರುತ್ತಾನೋ ಆ ಶಿಲ್ಪಿಯೇ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೃಷ್ಟಿ ಇಡಬೇಕು. ಆ ಮೂರ್ತಿಗೆ ಸಂಬಂಧಿಸಿದಂತೆ ದೃಷ್ಟಿ ಇಡುವ ಕೆಲಸವೇ ಕೊನೆಯ ಕೆಲಸವಾಗಬೇಕು ಎಂಬ ನಂಬಿಕೆ ಇದೆ. ಹೀಗೆ ಪಾಂಚಾಳ ಸಮುದಾಯದಲ್ಲಿ ವೃತ್ತಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆ, ನಿಷೇಧಗಳನ್ನು ನಾನಿಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದೇನೆ.

ನಂಬಿಕೆ

ಕುಲುಮೆ:- ಕಾಳಮ್ಮ, ವಿಶ್ವಕರ್ಮ ವೃತ್ತಿಯ ಮೂಲದೇವರುಗಳು. ಯುಗಾದಿ ಪಾಡ್ಯದ ದಿವಸ ರೈತಾಪಿ ಸಮುದಾಯದವರೆಲ್ಲರೂ ಸೇರಿ 'ಉಲಿಪಿ'ಯನ್ನು ತೆಗೆದುಕೊಂಡು ಬಂದು ಪಾಂಚಾಳನ ಕೈಯಿಂದ ಕುಲುಮೆಗೆ ಪೂಜೆ ಮಾಡಿಸಿ ಕುಲುಮೆಗೆ ಬೆಂಕಿಯನ್ನು ಹಾಕಿಸುತ್ತಾರೆ. ಆರಂಭದಲ್ಲಿ ಕುಲುಮೆಯ ಬೆಂಕಿಯ ಉರಿ ಬಲಕ್ಕೆ ತಿರುಗಿದರೆ ಆ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ಎಡಕ್ಕೆ ತಿರುಗಿದರೆ ಸಾಧಾರಣ ಮಳೆ-ಬೆಳೆ ಆಗುತ್ತದೆ ಎನ್ನುವ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಅಂದರೆ ಇಲ್ಲಿ ಸಾಮಾನ್ಯವಾಗಿ ರೈತರು ವ್ಯವಸಾಯಕ್ಕೆ ಸಂಬಂಧಿಸಿದ ಸಲಕರಣೆಗಳೆಲ್ಲವನ್ನು ಕುಲುಮೆಯಿಂದಲೇ ನಿರ್ಮಾಣವಾಗುವುದರಿಂದ ರೈತಾಪಿಸಮುದಾಯದವರು ಕೂಡ ಪಾಂಚಾಳನಷ್ಟೆ ವಿಶೇಷ ಭಯ, ಭಕ್ತಿಯನ್ನು ಕಾಳಮ್ಮನ ಮೇಲೆ ಇಟ್ಟಿರುವುದನ್ನು ಕಾಣಬಹುದು. ಇದರಿಂದಾಗಿ ರೈತಾಪಿ ಸಮುದಾಯದವರು ಹಾಗೂ ಪಾಂಚಾಳರು ಕುಲುಮೆಯ ಉರಿ ಯಾವ ದಿಕ್ಕಿಗೆ ಹೆಚ್ಚಾಗಿ ತಿರುಗುವುದೊ ಆ ಕಡೆಗೆ ಮಳೆ ಬೆಳೆ ಸಮೃದ್ಧಿಯಾಗುತ್ತದೆ ಎಂದು ಅರ್ಥೈಸಿಕೊಳ್ಳುವುದನ್ನು ನೋಡಬಹುದು.

ಕುಲುಮೆಯ ಪ್ರತಿಷ್ಠಾಪನೆ:- ಪಾಂಚಾಳರ ವಿಶೇಷ ಹಬ್ಬ ಯುಗಾದಿ. ಈ ಸಂದರ್ಭದಲ್ಲಿ ಹೊಸ ಕುಲುಮೆಯ ಪ್ರತಿಷ್ಠಾಪನೆ ಪೂಜೆ ಮಾಡುತ್ತಾರೆ. ಈ ದಿವಸ ಪೂರ್ತಿ ಶುಭಗಳಿಗೆ ಇರುತ್ತದೆ. ಅಂತಹ ದಿವಸ ನಾವು ದೇವಿಯನ್ನು ಪ್ರತಿಷ್ಠಾಪಿಸಿದರೆ ನಮ್ಮ ವೃತ್ತಿಯ ಕೆಲಸಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂಬ ನಂಬಿಕೆಯಿಂದ ಯುಗಾದಿ ಪಾಡ್ಯದ ದಿವಸ ಕುಲುಮೆಯನ್ನು ಪ್ರತಿಷ್ಠಾಪಿಸುತ್ತಾರೆ.

ದೃಷ್ಟಿ ಇಡುವುದು:- ದೇವತಾ ಮೂರ್ತಿಯ ಎಲ್ಲ ಭಾಗದ ಕೆಲಸಗಳು ಮುಗಿದ ನಂತರ ಕಣ್ಣಿನ ಭಾಗದ ಕೆಲಸ ಮಾಡಲಾಗುತ್ತದೆ. ಇದರ ನಂತರ ಆ ಮೂರ್ತಿಗೆ ಬೇರೆ ಏನು ಕೆಲಸವನ್ನು ಮಾಡುವುದಿಲ್ಲ. ಬಂಗಾರದ ಚಾಣ, ಬೆಳ್ಳಿ ಸುತ್ತಿಗೆ ಬಳಸಿ ಮೂರ್ತಿಯ ಹಿಂದಿನಿಂದ ದೃಶ್ಯವನ್ನು ಕನ್ನಡಿಯಲ್ಲಿ ನೋಡುತ್ತಾ ಶಿಲ್ಪಿಯಾದವನೊಬ್ಬನು ಮಾತ್ರವೇ ನೋಡುತ್ತಾ ಮಾಡುತ್ತಾನೆ. ಈ ಕೆಲಸವನ್ನು ಮೂರ್ತಿಯ ಎಲ್ಲಾ ಅಂಗಗಳ ಕೆಲಸ ಮುಗಿದ ಮೇಲೆಯೆ ಮಾಡಬೇಕು ಎಂಬ ನಂಬಿಕೆಗೆ ಮುಖ್ಯ ಕಾರಣವೆಂದರೆ ಮೂರ್ತಿಯ ಮುಖ್ಯವಾದ ಭಾಗವೆ ಕಣ್ಣು ಇವುಗಳ ದೃಷ್ಟಿಯೇ ಸರಿಯಿಲ್ಲದಿದ್ದರೆ ಆ ಮೂರ್ತಿಯು ನೋಡಲಿಕ್ಕೆ ಸುಂದರವಾಗಿ ಕಾಣುವುದಿಲ್ಲ. ಮೊದಲೇ ಕಣ್ಣಿನ ಕೆಲಸ ಮಾಡಿದಾಗ ಅತಿ ಚಿಕ್ಕದಾಗಿರುವ ಕಣ್ಣಿನ ಯಾವುದೇ ಪದರು ಕಿತ್ತುಕೊಂಡು ಬಿಟ್ಟರೆ ಈಡಿ ಮೂರ್ತಿ ನಿರ್ಮಾಣದ ಕೆಲಸವೇ ಅಪ್ರಯೋಜಕವಾಗುತ್ತದೆ. ಈ ಉದ್ದೇಶದಿಂದ ಮೂರ್ತಿಯ ಎಲ್ಲಾ ಭಾಗಗಳ ಕೆಲಸ ಮುಗಿದ ಮೇಲೆ ಈ ನೇತ್ರೋನ್ಮಿಲನ ಮಾಡಬೇಕು ಎಂಬ ನಂಬಿಕೆ ಹುಟ್ಟಿರಬಹುದು.

ಪ್ರಾಣಪ್ರತಿಷ್ಠೆ:- ಮೂರ್ತಿಪ್ರಾಣಪ್ರತಿಷ್ಠೆ ಸಂದರ್ಭದಲ್ಲಿ ಕ್ರಿಯೆಮಂತ್ರ ಪೂರ್ವಕವಾಗಿ ೧೬ ಸಂಸ್ಕಾರಗಳನ್ನು ಮೂರ್ತಿಗೆ ಆವಾಹನೆ ಮಾಡಿದರೆ ಅದು ಪೂಜೆಗೆ ಅರ್ಹತೆ ಪಡೆಯುತ್ತದೆ. ಈ ಕಾರ್ಯವನ್ನು ಶಿಲ್ಪಿಯೇ ಮಾಡಬೇಕು ಎಂಬ ನಂಬಿಕೆಯಿದೆ.

ಅಮೃತ ಘಳಿಗೆ:- ಕೆಲಸ ಆರಂಭಿಸಲು ಪವಿತ್ರವಾದ ಸಮಯ. ಈ ಮಹೋರ್ತಗಳಲ್ಲಿ ಕನಿಷ್ಠ ಕೆಲಸವನ್ನಾದರೂ ನಿರ್ವಹಿಸಬೇಕು ಎಂಬ ನಂಬಿಕೆಯಿದೆ.

ನಮ್ಮ ಜನಪದರು ಮಾಂತ್ರಿಕ ಶಕ್ತಿಗಳನ್ನು ನಂಬುವರು. ಮಾನವನಿಗೆ ಪಕ್ಕೆಯಲ್ಲಿ ನೋವು ಕಂಡರೆ ಬಡಿಗನ ಹತ್ತಿರ ಬಂದು ಬಾಚಿಯಿಂದ ಪಕ್ಕೆಗೆ ನಿವಾಳಿಸಿಕೊಂಡರೆ ನೋವು ಮಾಯವಾಗುತ್ತೆ ಎಂಬ ನಂಬಿಕೆಯಿದೆ.

ಶುಭದಿನ:- ಯುಗಾದಿಯ ದಿವಸ ಶುಭ ದಿನವಿರುವುದರಿಂದ ತಾವು ಮಾಡಿದ ಹೊಸ ಬಾಗಿಲು, ಮನೆಯ ಮಡಿಗಿ ಇತ್ಯಾದಿಗಳನ್ನು ಯುಗಾದಿಯ ದಿವಸ ಪೂಜೆ ಮಾಡಿ ರೈತಾಪಿಸಮುದಾಯದವರು ತಮ್ಮ ಮನೆಗಳಿಗೆ ಬಾಗಿಲುಗಳನ್ನು ಇಡಿಸುತ್ತಾರೆ. ಪಾಂಚಾಳ ವಂಶ ಸಂಭೂತನಾಗಿರುವವನೇ ಮಾಂಗಲ್ಯ, ಮೂಗುತಿ, ಬಳೆ, ಕಾಲುಂಗುರ ಕುತ್ತಿಗೆ ಸರವನ್ನು ಮಾಡಿಕೊಡಬೇಕು ಹಾಗೂ ಅವುಗಳಿಗೆ ಮೊದಲ ಪೂಜೆ ಪಾಂಚಾಳರಿಂದಲೇ ನೆರವೇರಬೇಕು ಎಂಬ ನಂಬಿಕೆ.

ಅಶುಭದಿನ:- ಇಂತಹ ದಿವಸಗಳಲ್ಲಿ ಮಾಟಕ್ಕೆ ಸಂಬಂಧಿಸಿದ ಗೊಂಬೆಗಳನ್ನು ಪಾಂಚಾಳರಿಂದ ಇತರೆ ಸಮುದಾಯದವರು ನಿರ್ಮಾಣ ಮಾಡಿಸಿಕೊಳ್ಳುತ್ತಾರೆ. ಅಶುಭ ದಿನಗಳಲ್ಲಿಯೆ ಇವುಗಳನ್ನು ನಿರ್ಮಾಣ ಮಾಡಿಕೊಡಬೇಕು ಎಂಬ ನಂಬಿಕೆಯಿದೆ.

ಹುಸಿಪೆಟ್ಟು:- ಕಮ್ಮಾರಿಕೆ, ಅಕ್ಕಸಾಲಿಕೆ ಕೆಲಸದಲ್ಲಿ ವಸ್ತು ನಿರ್ಮಾಣ ಮಾಡುವ ಸಂದರ್ಭದಲ್ಲಿ ಸುತ್ತಿಗೆಯ ಪೆಟ್ಟು ವಸ್ತುವಿನ ಮೇಲೆ ಬೀಳದೆ ಬೇರೆಡೆ ಬಿದ್ದರೆ (ಅಡಿಗಲ್ಲು ಮೇಲೆ) ಅದನ್ನು ಹುಸಿಪೆಟ್ಟು ಎನ್ನುತ್ತಾರೆ. ಈ ತರಹದ ಹುಸಿಪೆಟ್ಟು ಬಿದ್ದಾಗ ಆ ವಸ್ತುವಿನ ನಿರ್ಮಾಣದ ಕೆಲಸ ಮಾಡುವುದನ್ನು ನಿಲ್ಲಿಸುತ್ತಾರೆ. ಇದು ಪಾಂಚಾಳರಿಗೆ ಅಪಶಕುನವೆಂದು ಭಾವಿಸಿ ಸ್ವಲ್ಪ ಸಮಯ ಕೆಲಸ ನಿಲ್ಲಿಸುತ್ತಾರೆ. ಈ ತರಹದ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ.

ಉತ್ತರಕ್ಕೆ ಬಾಗಿಲು:- ಕಮ್ಮಾರಿಕೆ, ಅಕ್ಕಸಾಲಿ ವೃತ್ತಿ ಮಾಡುವ ಮನೆಯ ಬಾಗಿಲು ಉತ್ತರ ದಿಕ್ಕಿನಲ್ಲಿ ಇರಬಾರದು ಎಂಬ ನಂಬಿಕೆಯಿದೆ. ಇದಕ್ಕೆ ಕಾರಣವೆಂದರೆ ಈ ಕೆಲಸಗಳಿಗೆ ಬೆಳಕು ಬೇಕು. ಆದ್ದರಿಂದ ಪೂರ್ವ, ಪಶ್ಚಿಮದ ಕಡೆಗೆ ಬಾಗಿಲುಗಳು ಇದ್ದರೆ ಬೆಳಕು ಚೆನ್ನಾಗಿ ಕೆಲಸ ಮಾಡುವ ಮನೆಯ ಒಳಕ್ಕೆ ಬರುತ್ತದೆ ಎಂಬ ಉದ್ದೇಶದಿಂದ ನಂಬಿಕೆ ಹುಟ್ಟಿರಬಹುದು.

ಉಪಕರಣ:- ತಮ್ಮ ವೃತ್ತಿ ಉಪಕರಣಗಳನ್ನು ಕಾಳಿ ಎಂದು ನಂಬಿಕೊಂಡು ಬಂದಿದ್ದಾರೆ. ಕುಲುಮೆಯ ಹತ್ತಿರಕ್ಕೆ ಯಾರು ಕೂಡ ಪಾದರಕ್ಷೆಯನ್ನು ಹಾಕಿಕೊಂಡು ಬರುವಂತಿಲ್ಲ. ತಮ್ಮ ಉಪಕರಣಗಳಿಗೆ ಕಾಲನ್ನು ತಾಗಿಸುವಂತಿಲ್ಲ. ಅಕಸ್ಮಾತ್ ಉಪಕರಣಗಳಿಗೆ ಕಾಲು ತಾಗಿದರೆ ಅದು ಕಾಳಿಯನ್ನು ಒದ್ದಂತೆ ಎನ್ನುವ ನಂಬಿಕೆ ಇವರಲ್ಲಿದೆ. ಕಾಲು ತಾಗಿದರೆ ಉಪಕರಣಗಳನ್ನು ನಮಸ್ಕರಿಸುವಂತೆ ತಿಳಿಸುತ್ತಾರೆ.

ಆವಾಜ್:- ಮರ ಬಡಿದಾಗ ಶಬ್ದಗಟ್ಟಿ ಬಂದರೆ ಒಳ್ಳೆಯದು. ನಾದ ಸರಿ ಇಲ್ಲದಿದ್ದರೆ ಕೆಟ್ಟ ಮರ (ಬಕ್ ಬಕ್ ಅಂದರೆ) ಎಂದು ನಿರ್ಧರಿಸುತ್ತಾರೆ.

ಪಂಚಲೋಹ:- ಪಂಚಲೋಹ ಎಂದರೆ ಬಂಗಾರ, ಬೆಳ್ಳಿ, ತಾಮ್ರ, ಕಂಚು, ಹಿತ್ತಳೆ ಈ ಐದು ಲೋಹಗಳ ಮಿಶ್ರಣಕ್ಕೆ ಪಂಚಲೋಹವೆಂದು ಕರೆಯುತ್ತಾರೆ. ಶುಭಕಾರ್ಯಗಳಲ್ಲಿ ಪಂಚಲೋಹಗಳನ್ನು ಉಪಯೋಗಿಸಿದರೆ ಯಾವುದೇ ಕಾಡಾಟಗಳು ಬರುವುದಿಲ್ಲ ಎಂಬ ನಂಬಿಕೆಯಿದೆ.

ಕೀರ್ತಿಮುಖ:- ಮೂರ್ತಿಯ ಹಿಂದಿನ ಪ್ರಭಾವಳಿಯ ಮೇಲೆ ಮಾಡುವ ನರಸಿಂಹಾವತಾರ ಮೂರ್ತಿ ಹಾಗೂ ಪಾಂಚಾಳನಿಗೆ ದೃಷ್ಟಿ ತಾಗದಿರಲಿ ಎಂದು ಇದನ್ನು ಮಾಡಿರುತ್ತಾರೆ. ಇದು ನೋಡುವುದಕ್ಕೆ ರಾಕ್ಷಸವತಾರವಿರುವುದರಿಂದ ಇದನ್ನು ನೋಡಿ ಜನ ಕೆಟ್ಟದಾಗಿದೆ ಎಂದರೆ ಆ ಮೂರ್ತಿಯನ್ನು ಮಾಡಿದ ಪಾಂಚಾಳನಿಗೆ ಹಾಗೂ ಮೂರ್ತಿಗೂ ದೃಷ್ಟಿ ತಾಗುವುದಿಲ್ಲ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ.

ದಸರಾ ಹಬ್ಬ:- ಪಾಂಚಾಳ ಸಮುದಾಯದ ವಿಶೇಷ ಹಬ್ಬ ಕೊನೆಯ ಎರಡು ದಿವಸ ವೃತ್ತಿಗೆ ಬಿಡುವು ಕೊಡುತ್ತಾರೆ. ದಸರ ಹಬ್ಬದ ಖಂಡ್ಯಾ ಪೂಜಾ ದಿವಸ ತಮ್ಮ ವೃತ್ತಿ ಸಾಮಾನುಗಳೆಲ್ಲವನ್ನು ಶುಚಿಗೊಳಿಸಿ ಪೂಜೆ ಸಲ್ಲಿಸುತ್ತಾರೆ. ಕಾರಣ ಪಾಂಡವರು ವನವಾಸವನ್ನು ಕೈಗೊಳ್ಳುವ ಸಂದರ್ಭದಲ್ಲಿ ತಮ್ಮ ಆಯುಧಗಳೆಲ್ಲವನ್ನು ಬನ್ನಿಮಹಾಂಕಾಳಿಗೆ ಒಪ್ಪಿಸಿ ವನವಾಸಕ್ಕೆ ಹೋಗುತ್ತಾರೆ. ಪಾಂಡವರು ವನವಾಸವನ್ನು ಮುಗಿಸಿಕೊಂಡು ಬಂದ ಮೇಲೆ ಬನ್ನಿಮಹಾಂಕಾಳಿಗೆ ಪೂಜೆ ಸಲ್ಲಿಸಿ ತಮ್ಮ ಆಯುಧಗಳನ್ನು ದೇವತೆಯಿಂದ ವಾಪಾಸ್ಸು ಪಡೆಯುತ್ತಾರೆ. ಈ ಕಾರಣಕ್ಕಾಗಿ ಪಾಂಚಾಳರು ಆಯುಧ ಪೂಜೆ ಮಾಡುತ್ತಾರೆ. ಆಯುಧ ಪೂಜೆಯ ದಿವಸ ವೃತ್ತಿ ಉಪಕರಣಗಳೆಲ್ಲವನ್ನು ಶುಚಿಗೊಳಿಸಿ ಅಲಂಕಾರ ಮಾಡಿ ಪೂಜೆ ಕೈಗೊಳ್ಳುತ್ತಾರೆ. ನಂತರ ಉಪಕರಣಗಳಿಗೆ ಕುಂಬಳಕಾಯಿಯನ್ನು ಬಲಿ ಕೊಡುತ್ತಾರೆ. ಈ ತರಹದ ನಂಬಿಕೆಯನ್ನು ಪಾಂಚಾಳರು ಅನುಸರಿಸಿಕೊಂಡು ಬರುತ್ತಿದ್ದಾರೆ.

ಕಿವಿಚುಚ್ಚುವಿಕೆ:- ರೈತಾಪಿ ಸಮುದಾಯದವರ ಚಿಕ್ಕ ಮಕ್ಕಳಿಗೆ ಮುರುವು ಚುಚ್ಚುವ ಕೆಲಸವನ್ನು ಇವರೆ ನಿರ್ವಹಿಸುವರು. ಇವರಿಗೆ ಆಭರಣ ತಯಾರಿಸುವ ಕಲೆ ಗೊತ್ತಿರುತ್ತದೆ. ಮಕ್ಕಳ ಕಿವಿಗೆ ಯಾವ ಜಾಗದಲ್ಲಿ ಮುರುವನ್ನು ಚುಚ್ಚಬೇಕು ಹಾಗೂ ಆ ಮುರುವ ಎಷ್ಟು ದಪ್ಪವಿರಬೇಕು ಎಂಬ ಮಾಹಿತಿ ಅವರಿಗೆ ಪರಂಪಾರಗತವಾಗಿ ತಿಳಿದಂತಹ ವಿಷಯ. ಈ ದೃಷ್ಟಿಯಿಂದ ಕಿವಿಚುಚ್ಚುವುದನ್ನು ಪಾಂಚಾಳರ ಕೈಯಿಂದಲೇ ನೆರವೇರಿಸಿದರೆ ಒಳ್ಳೆಯದು ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ.

ನಿಷೇಧಗಳು

ಅಮವಾಸ್ಯೆ:- ಪಾಂಚಾಳರ ವೃತ್ತಿಯ ಕೆಲಸಕ್ಕೆ ಬಿಡುವಿನ ದಿನ. ಈ ದಿನವನ್ನು ಅಶುಭ ದಿನವೆಂದು ಭಾವಿಸಿ ತಮ್ಮ ಉಪಕರಣಗಳೆಲ್ಲವನ್ನು ಪೂಜೆ ಮಾಡಿ ವೃತ್ತಿಯ ಕೆಲಸಕ್ಕೆ ಬಿಡುವು ಕೊಡುತ್ತಾರೆ. ಅಮವಾಸ್ಯೆಯ ದಿವಸವು ಭಯದ ದಿನವು ಆಗಿರುತ್ತದೆ. ಈ ದಿನದಂದು ವಿಷಮಘಳಿಗೆ ಇರುತ್ತದೆ. ಆ ಸಂದರ್ಭದಲ್ಲಿ ವೃತ್ತಿ ನಿರ್ವಹಿಸುತ್ತಿರುವಾಗ ತಮ್ಮ ಉಪಕರಣಗಳಿಂದ ತಮ್ಮ ಕೈ ಕಾಲಿಗೆ ಬಡಿದು ನೋವಾಗಬಹುದು ಹಾಗೂ ನಿರ್ಮಾಣ ಮಾಡಿದ ವಸ್ತುಗಳು ಬಾಳಿಕೆ ಬರುವುದಿಲ್ಲ ಎಂಬ ಉದ್ದೇಶದಿಂದ ಅಮವಾಸ್ಯೆಯ ದಿವಸ ಕೆಲಸ ಮಾಡುವುದನ್ನು ನಿಷೇಧಿಸುತ್ತಾರೆ. ಆದರೆ ದೈವ, ಮಾಟ, ಮಂತ್ರ ಸಂಬಂಧೀ ವಸ್ತುಗಳನ್ನು ಮಾತ್ರ ನಿರ್ಮಾಣ ಮಾಡಿ ಕೊಡುತ್ತಾರೆ.

ಸೂತಕ:- ಸೂತಕವಾದ ಸಂದರ್ಭದಲ್ಲಿ ವೃತ್ತಿ ದೇವತೆಗೆ ಪೂಜೆ ಮಾಡುವುದಿಲ್ಲ. ಪಾಂಚಾಳರು ಸೂತಕವನ್ನು ಆಚರಿಸುತ್ತಾರೆ. ಅವರ ಮನೆಯಲ್ಲಿ ತಮ್ಮ ಮಕ್ಕಳು ಮೈನೆರೆದಾಗ, ಸಂಬಂಧಿಕರು ತೀರಿಕೊಂಡಾಗ, ಹೆರಿಗೆಯಾದಾಗ, ಮುಟ್ಟು ಇತ್ಯಾದಿ ಸಂದರ್ಭಗಳಲ್ಲಿ ಸೂತಕವನ್ನು ಆಚರಿಸುತ್ತಾರೆ. ಈ ಸೂತಕವನ್ನು ಮೂರು, ಐದು ಇಲ್ಲವೆ ಒಂಭತ್ತು ದಿನಗಳವರೆಗೆ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಮೈಲಿಗೆಯಾಗಿರುತ್ತೇವೆ. ದೇವರ ಪೂಜೆಯನ್ನು ಮಾಡಲಿಕ್ಕೆ ಅನರ್ಹರು ಎಂದು ಭಾವಿಸಿ ವೃತ್ತಿ ದೇವತೆಗೆ, ಗ್ರಾಮದೇವತೆಗೂ ಕೂಡ ಪೂಜೆಯನ್ನು ಮೇಲೆ ತಿಳಿಸಿದ ದಿನಗಳವರೆಗೂ ಕೈಗೊಳ್ಳುವುದಿಲ್ಲ. ತಮ್ಮ ಕುಲದ ಆಚಾರ್ಯ ಸ್ವಾಮಿಗಳಿಂದ ಪೂಜೆ ಮಾಡಿಸಿ ತಮ್ಮ ಮನೆಯ ಸೂತಕ ಕಳೆದುಕೊಂಡ ಮೇಲೆಯೆ ಪೂಜೆಯನ್ನು ತಮ್ಮ ವೃತ್ತಿ ದೇವತೆಗೆ ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ದೈವ, ಮಾಟ ಮಂತ್ರ ಸಂಬಂಧೀ ವಸ್ತುಗಳ ನಿರ್ಮಾಣ ಮಾಡಿಕೊಡುವುದನ್ನು ನಿಷೇಧಿಸುತ್ತಾರೆ.

ಹುಸಿಪೆಟ್ಟು:- ಯಾವುದೇ ವಸ್ತು ತಯಾರಿಕೆಯಲ್ಲಿ (ಆಭರಣ, ರೈತಾಪಿ ಸಲಕರಣೆಗಳು ಇತ್ಯಾದಿ) ಸುತ್ತಿಗೆಯ ಪೆಟ್ಟು ನಿರ್ಮಾಣ ಮಾಡುವ ವಸ್ತುವಿನ ಮೇಲೆ ಬೀಳದೆ ಬೇರೆಡೆ ಬಿದ್ದರೆ (ಅಡಿಗಲ್ಲು) ಅದನ್ನು ಹುಸಿಪೆಟ್ಟು ಎನ್ನುತ್ತಾರೆ. ಇದನ್ನು ಅಪಶಕುನವೆಂದು ಬಾವಿಸಿ ಆ ವಸ್ತುವಿನಿಂದ ನಿರ್ಮಾಣ ಮಾಡುವುದನ್ನು ನಿಲ್ಲಿಸುತ್ತಾರೆ. ಇದರಿಂದಲೇ ಮಾಡಿದರೆ ಆ ನಿರ್ಮಾಣದಿಂದ ಪಾಂಚಾಳನಿಗೆ ಕೆಡುಕುಂಟಾಗುತ್ತದೆ ಎಂಬ ಭಾವನೆಯಿಂದ ಅದನ್ನು ನಿಷೇಧಿಸುತ್ತಾರೆ.

ವಿಕಲಾಂಗನಾಗಿರಬಾರದು:- ಶಿಲ್ಪಿಯಾದವನು ವಿಕಲಾಂಗನಾಗಿರಬಾರದು ಎಂದು ಶಿಲ್ಪಶಾಸ್ತ್ರ ಹೇಳುತ್ತದೆ ಎಂದು ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಅಂದರೆ ಮನುಷ್ಯನ ಜೀವನದಲ್ಲಿ ವಿಕಲಾಂಗನಾದವನಿಗೆ ಧಾರ್ಮಿಕ ಕಾರ್ಯಗಳಲ್ಲಿ ನಿಷಿದ್ಧವಿದೆ. ಹಾಗೆಯೇ ವಿಕಲಾಂಗಲಾದವನು ಮೂರ್ತಿಯನ್ನು ಕೆತ್ತಿದರೆ ಅದು ಪೂಜೆಗೆ ಅನರ್ಹ ಎಂಬ ನಂಬಿಕೆಯು ಬೆಳೆದುಕೊಂಡು ಬಂದಿದೆ. ಅಂದರೆ ಕೈ, ಕಾಲು, ಕಣ್ಣು ಯಾವುದೇ ಅಂಗ ಊನವಾಗಿರುತ್ತದೆ ಇದರಿಂದ ಧಾರ್ಮಿಕ ಕೆಲಸ ಮಾಡಲಿಕ್ಕೆ ಅವನ ಕೈಯಿಂದ ಆಗುವುದಿಲ್ಲ ಹಾಗೂ ಶಿಲ್ಪಿಗೆ ಕೈ, ಕಣ್ಣು, ಕಾಲು ಯಾವುದಾದರೂ ಒಂದು ಭಾಗ ಊನವಾದರೂ ಅವನಿಗೆ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಈ ದೃಷ್ಟಿಯನ್ನಿಟ್ಟುಕೊಂಡು ಈ ನಂಬಿಕೆ ಬೆಳೆದಿರಬಹುದು. ದೇಹದ ಯಾವುದೇ ಭಾಗ ಊನವಿದ್ದ ವ್ಯಕ್ತಿ ಶಿಲ್ಪಿ, ಅಕ್ಕಸಾಲಿಕೆ, ಕಂಚುಗಾರ ಕೆಲಸದ ನಿರ್ಮಾಣದಲ್ಲಿ ಭಾಗವಹಿಸಲು ನಿಷೇಧವಿದೆ. ಈ ಕೆಲಸದಲ್ಲಿ ಅತಿಹೆಚ್ಚಾಗಿ ದೈವ ಸಂಬಂಧಿ ಕೆಲಸ ನಿರ್ಮಾಣ ಮಾಡುವುದರಿಂದ ವ್ಯಕ್ತಿಯು ಯಾವುದೇ ಅಪಶಕುನಕ್ಕೆ ಗುರಿಯಾಗಿರಬಾರದು ಎಂದು ನಂಬಿಕೊಂಡು ಬಂದಿದ್ದಾರೆ.

ಬನ್ನಿಮರ:- ಈ ಮರವನ್ನು ವೃತಿ ದೇವತೆಯಾದ ಕಾಳಮ್ಮ ಎಂದು ಆರಾಧಿಸುತ್ತಾರೆ. ಆದ್ದರಿಂದ ಈ ಮರವನ್ನು ಪಾಂಚಾಳರು ಪವಿತ್ರವಾದ ದೇವರೆಂದು ನಂಬಿದ್ದಾರೆ. ಈ ದೃಷ್ಟಿಯಿಂದ ಇದರಿಂದ ಯಾವುದೇ ವಸ್ತುಗಳ ನಿರ್ಮಾಣಕ್ಕೆ ಈ ಮರವನ್ನು ಉಪಯೋಗಿಸುವುದಿಲ್ಲ. ಈ ಮರವನ್ನು ನಿರ್ಮಾಣಕ್ಕೆ ಉಪಯೋಗಿಸಿದರೆ ತಮ್ಮ ವೃತ್ತಿದೇವತೆಯಾದ ಕಾಳಮ್ಮನ ಕೊಲೆಮಾಡಿದ ಹಾಗೆ ಎಂದು ತಿಳಿಯುತ್ತಾರೆ. ಈ ಉದ್ದೇಶದಿಂದಾಗಿ ಯಾವುದೇ ವಸ್ತು ನಿರ್ಮಾಣಕ್ಕೂ ಈ ಮರವನ್ನು ಉಪಯೋಗಿಸುವುದಿಲ್ಲ.

ಅರಳಿಮರ:- ದೇವರಮರ ಎಂಬ ನಂಬಿಕೆಯಿಂದ ಈ ಮರವನ್ನು ಬಳಸಿ ಪಾಂಚಾಳರು ಕೆಲಸ ಮಾಡುವುದಿಲ್ಲ. ಈ ಮರದಲ್ಲಿ ಶಿವ ವಾಸವಾಗಿರುತ್ತಾನೆ ಎಂಬ ನಂಬಿಕೆಯಿದೆ.

ಜಗಳಗಂಟಿ ಮರ:- ಒಂದು ಜಾತಿಯ ಮರ ಯಾವ ಕೆಲಸಕ್ಕೂ ವಸ್ತು ತಯಾರಿಕೆಗೂ ಈ ಮರ ಬಳಸುವುದಿಲ್ಲ. ಮನೆಯಲ್ಲಿ ಯಾವಾಗಲೂ ಜಗಳ ಆಗುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿರುವುದರಿಂದ ಈ ಮರವನ್ನು ನಿರ್ಮಾಣಕ್ಕೆ ಬಳಸಲು ನಿಷೇಧಿಸುತ್ತಾರೆ.

ತಪ್ಸ:- ಒಂದು ಜಾತಿಯ ಮರ ಈ ಮರವನ್ನು ಯಾವುದೇ ವಸ್ತು ತಯಾರಿಕೆಗೂ ಬಳಸುವುದಿಲ್ಲ ಕಾರಣ ದೇವರ ಮರವೆಂಬ ನಂಬಿಕೆ.

ಬಿಳಿಮರ:- ಮರ ಬೆಳ್ಳಗಿದ್ದರೆ ರೋಗವುಳ್ಳ ಮರ, ಕೆಟ್ಟದ್ದು ಎನ್ನುವ ನಂಬಿಕೆ. ಆದ್ದರಿಂದ ಯಾವುದೇ ನಿರ್ಮಾಣಕ್ಕೂ ಕೂಡ ಉಪಯೋಗಿಸುವುದಿಲ್ಲ.

ಅರಳಿಮರ:- ದೇವರ ಮರ ಎಂಬ ನಂಬಿಕೆಯಿಂದ ಈ ಮರವನ್ನು ಪಾಂಚಾಳರು ಕೆಲಸಕ್ಕೆ ಬಳಸುವುದಿಲ್ಲ.

ಹುಣ್ಸೆಮರ:- ಮನೆಯ ಮುಟ್ಟುಗಳಿಗೆ ಸಂಬಂಧಿಸಿದಂತೆ ಈ ಮರವನ್ನು ಬಳಸುವುದಿಲ್ಲ. ಈ ಮರದಲ್ಲಿ ಪೀಡೆ, ಪಿಶಾಚಿಗಳು ವಾಸವಾಗಿರುತ್ತವೆ ಎಂಬ ನಂಬಿಕೆಯಿದೆ. ಆದ್ದರಿಂದ ಈ ಮರವನ್ನು ಸದಾ ತಿರುಗುವ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವುದನ್ನು ಕಾಣಬಹುದು.

ಚಿರ್ಚಲ ಮರ:- ಮನೆಯ ಮುಟ್ಟುಗಳಿಗೆ ಸಂಬಂಧಿಸಿದಂತೆ ಈ ಮರವನ್ನು ಬಳಸುವುದಿಲ್ಲ. ಈ ಮರವನ್ನು ಉಪಯೋಗಿಸಿ ಮನೆ ಬಳಕೆ ವಸ್ತುಗಳನ್ನು ನಿರ್ಮಾಣ ಮಾಡಿದರೆ ಮನೆಯಲ್ಲಿ ಸರಿಯಾಗಿ ಜೀವನವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗೂ ಆ ಮನೆಯು ಕೂಡ ಏಳಿಗೆಯಾಗುವುದಿಲ್ಲ ಎಂಬ ನಂಬಿಕೆಯಿದೆ. ಆದ್ದರಿಂದ ಈ ಕಟ್ಟಿಗೆಯಿಂದ ಕೆಲವೇ ಕೆಲವು ನಿರ್ಮಾಣಗಳನ್ನು ಮಾಡುತ್ತಾರೆ. ಅವುಗಳೆಂದರೆ ಬಂಡಿಯ ಕುಂಭ, ಬಂಡಿಗೆ ಹಾಸುವ ಹಲಗೆ, ಈ ಕಟ್ಟಿಗೆಯಿಂದ ತಯಾರಾದ ನಿರ್ಮಾಣಗಳು ತಿರುಗುತ್ತಾ ಬಳಕೆಯಲ್ಲಿರಬೇಕು ಅಂತಹವುಗಳಿಗೆ ಮಾತ್ರ ಉಪಯೋಗಿಸಲಾಗುತ್ತದೆ.

ಮೊಲೆ:- ಮರಗಳಿಗೆ ಮೊಲೆ ಬಂದಿದೆ ಎಂದು ಬಡಿಗ ರೈತಾಪಿ ಜನಗಳಿಗೆ ತಿಳಿಸುವುದನ್ನು ಕಾಣಬಹುದು. ಇಲ್ಲಿ ಮರಕ್ಕೆ ಮೊಲೆ ಬಂದಿದೆ ಎಂದರೆ ಮರದ ಸುತ್ತಲೂ ಗಂಟು ಗಂಟು (ಹುಂಡಿಗಳಾಗಿ) ಹೊರ ಮೇಲ್ಭಾಗದಲ್ಲಿ ಕಾಣುತ್ತಿರುತ್ತವೆ. ಇಂತಹ ಮರಗಳು ಟೊಳ್ಳೆಯಾಗಿರುತ್ತವೆ. ಇಂತಹ ಮರಗಳಿಂದ ಮಾಡಿದ ನಿರ್ಮಾಣಗಳು ಬಳಕೆ ಬರುವುದಿಲ್ಲ ಎಂಬ ನಂಬಿಕೆಯಿದೆ.

ನೆಟೆರೋಗ:- ಮರಕ್ಕೆ ಬರುವ ಒಂದು ರೋಗ. ನೆಟೆರೋಗ ಬಂದ ಮರವನ್ನು ಯಾವ ವಸ್ತು ತಯಾರಿಕೆಗೂ ಉಪಯೋಗಿಸುವುದಿಲ್ಲ ಅದನ್ನು ಸೌದೆಗೆ ಮಾತ್ರ ಉಪಯೋಗಿಸುತ್ತಾರೆ. ನೆಟೆಬಂದ ಮರದಿಂದ ಮನೆಯ ಮುಟ್ಟುಗಳನ್ನು ತಯಾರಿಸಿದರೆ ಬಾಳಿಕೆ ಬರುವುದಿಲ್ಲ. ಮನೆಯ ಕೂಡ ಏಳಿಗೆಯಾಗುವುದಿಲ್ಲ ಎಂಬ ದೃಷ್ಟಿಯಿಂದ ಇಂತಹ ಮರಗಳನ್ನು ನಿಷೇಧಿಸುತ್ತಾರೆ.

ಪದರು:- ಕಲ್ಲಿನ ಪದರು ಇದನ್ನು ನೀರುಹಾಕಿ ಪರೀಕ್ಷಿಸುತ್ತಾರೆ. ನೀರು ಒಣಗದೆ ಇರುವ ಭಾಗ ಕೆಟ್ಟಕಲ್ಲು ಮೂರ್ತಿ ನಿರ್ಮಾಣಕ್ಕೆ ಯೋಗ್ಯವಲ್ಲದ ಕಲ್ಲು ಎಂದು ತಿಳಿದು ಅದನ್ನು ನಿಷೇಧಿಸುತ್ತಾರೆ.

ಹೀಗೆ ಪಾಂಚಾಳ ವೃತ್ತಿ ಸಂಬಂಧಿಸಿದ ಅನೇಕ ನಂಬಿಕೆ, ನಿಷೇಧಗಳನ್ನು ನಿತ್ಯ ಜೀವನದಲ್ಲಿ ಕಾಣಬಹುದು.

ಅಡಿಟಿಪ್ಪಣಿ

೧. ಇದನ್ನು ಹೀಗೂ ಹೇಳಬಹುದು ನಯನ ಎಂದರೆ ಕಣ್ಣು, ಉಪ ಎಂದರೆ ಬದುಕು ಅಂದರೆ ಪಾಂಚಾಳ ಬದುಕಿಗೆ ದಾರಿತೋರಿಸುವುದು ಎಂದರ್ಥ. ಬದುಕಿಗೆ ಮತ್ತೊಂದು ಕಣ್ಣುಕೊಡುವುದು, ದಾರಿ ರೂಪಿಸುವುದು ಎಂಬ ಅರ್ಥಗಳನ್ನು ನೀಡುತ್ತದೆ.

೨. ಡಾ.ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ೨೦೦೦, ಪುಟ.೬೬

೩. ಕ್ಷೇತ್ರಕಾರ್ಯಕ್ಕೆ ಹೋದಾಗ ಇಟಗಿಯ ಪಾಂಚಾಳ ಸಮುದಾಯ ಆಚಾರ್ಯ ಸ್ವಾಮಿಗಳಿಂದ ಮಾಹಿತಿ ಸಂಗ್ರಹಿಸಿದೆ.

೪. ಜಾನಕಲ್ ರಾಜಣ್ಣ ಎಂ, ದಕ್ಕಲಿಗ, ೨೦೦೭, ಪುಟ.೬೭

೫. ಡಾ.ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ೨೦೦೦, ಪು.೭೮

೬. ಕನ್ನಡ ಸಾಹಿತ್ಯ ಪರಿಷತ್ತು, ಸಂಕ್ಷಿಪ್ತ ಕನ್ನಡ ನಿಘಂಟು, ಪುಟ.೧೩೬೭

೭. ಡಾ.ಅರ್ಜುನ ಗೊಳಸಂಗಿ, ಗೊಳಸಂಗಿ ಗ್ರಾಮ : ಒಂದು ಸಾಂಸ್ಕೃತಿಕ ಅಧ್ಯಯನ, ೧೯೯೫, ಪುಟ.೮೪

೮. Mythology and legond, Standard Dictionary of Folklore - Vol-2, P-1144

೯. ದೇಜಗೌ, ಜಾನಪದ ಅಧ್ಯಯನ, ಮೈಸೂರು, ೧೯೭೬, ಪುಟ.೩೩೮

ಅಧ್ಯಾಯ - ಆರು

ಸಮಾರೋಪ

ಅಧ್ಯಾಯ - ಆರು

ಸಮಾರೋಪ

ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ ಎಂಬ ಈ ಅಧ್ಯಯನ ಪ್ರಬಂಧವು ಪಾಂಚಾಳ ಸಮುದಾಯದ ಬದುಕು, ವೃತ್ತಿ ಈ ಹಿನ್ನೆಲೆಯಲ್ಲಿಯೆ ಬೆಳೆದು ಬಂದಿರುವ ಆಚರಣೆ, ನಂಬಿಕೆ, ನಿಷೇಧ, ಸಾಮಾಜಿಕ ನಡವಳಿಕೆ, ಧಾರ್ಮಿಕ ನಡವಳಿಕೆಯಂತಹ ಸಾಂಸ್ಕೃತಿಕ ವಿವರಗಳನ್ನು ಸಮಾಜೋ ಭಾಷಿಕ ವಿವರಗಳ ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನವಾಗಿದೆ.

ಪಾಂಚಾಳ ಸಮುದಾಯವು ಕರ್ನಾಟಕದ ಮುಖ್ಯ ಜನ ಸಮುದಾಯಗಳಲ್ಲಿ ಒಂದಾಗಿದ್ದು ವೃತ್ತಿ ಕಾರಣಕ್ಕೆ ಸೂಕ್ಷ್ಮ ಒಳ ಬೇಧಗಳು ಕೆಲವು ಕಡೆ ಇದ್ದರೂ ಸಾಮಾಜಿಕ ಸಾಂಸ್ಕೃತಿಕವಾಗಿ ಒಂದೇ ಘಟಕವಾಗಿಯೂ ಕಂಡುಬರುತ್ತದೆ. ಒಂದು ಪರಿಸರದ ಒಟ್ಟು ಸಾಮಾಜಿಕ ಸಂರಚನೆಯಲ್ಲಿ ಸಮಾಜೋ ಆರ್ಥಿಕವಾದ ಹಾಗೂ ಸಾಂಸ್ಕೃತಿಕವಾದ ಅನೇಕ ಕರ್ತವ್ಯಗಳನ್ನು ಹಕ್ಕುಗಳನ್ನು ಈ ಸಮಾಜವು ಪಡೆದುಕೊಂಡಿದೆ. ಅಂದರೆ ಸಾಮಾಜಿಕ ಸಂರಚನೆಯಲ್ಲಿ ಈ ಸಮುದಾಯ ಬೇರೆ ಸಮುದಾಯಗಳನ್ನು ಅವಲಂಬಿಸಿರುವಂತೆಯೇ ಈ ಸಮುದಾಯವನ್ನು ಇತರೆ ಸಮುದಾಯಗಳು ಅವಲಂಬಿಸಿ ಒಟ್ಟು ಸಮಾಜದ ಸಾಮಾಜಿಕ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸಿದೆ.

ಒಂದು ಸಮುದಾಯವನ್ನು ಭಾಷೆಯಿಲ್ಲದೆ ಕಲ್ಪಿಸಿಕೊಳ್ಳುವುದು ಅಸಾಧ್ಯ. ಒಂದೊಂದು ಸಮುದಾಯವು ತನ್ನದೆ ಆದ ಭಾಷೆಯನ್ನು ಮೈಗೂಡಿಸಿಕೊಂಡು ಬಂದಿರುವುದನ್ನು ಕಾಣಬಹುದು. ಅಂತಹ ಸಮುದಾಯಗಳಲ್ಲಿ ಒಂದಾದ ಪಾಂಚಾಳ ಸಮುದಾಯವು ಆಚರಿಸುವ ಆಚರಣೆ, ಸಂಪ್ರದಾಯ, ನಂಬಿಕೆ, ನಿಷೇಧ, ಸಾಂಸ್ಕೃತಿಕ ವಿಚಾರಗಳನ್ನು ಭಾಷೆಯ ಮೂಲಕ ತಿಳಿಯಲು ಸಾಧ್ಯವಾಗುತ್ತದೆ. ಅಂದರೆ ಭಾಷೆಯು ಮೇಲಿನ ಅಂಶಗಳನ್ನು ತನ್ನೊಳಗಡೆಗೆ ಇಟ್ಟುಕೊಂಡಿರುತ್ತದೆ. ಈ ಎಲ್ಲ ಅಂಶಗಳು ಭಾಷೆಯಲ್ಲಿಯೇ ಅಭಿವ್ಯಕ್ತವಾಗಲು ಸಾಧ್ಯ. ಆದ್ದರಿಂದ ಒಂದು ಸಮುದಾಯದ ಅಧ್ಯಯನ ಮಾಡುವಾಗ ಅವರ ಭಾಷೆಯನ್ನು ಗಮನಿಸುವುದು ಅತ್ಯವಶ್ಯಕವಾಗಿರುತ್ತದೆ.

ಪಾಂಚಾಳ ಸಮುದಾಯವನ್ನು ಹಲವಾರು ದೃಷ್ಟಿಕೋನದಿಂದ ಅಧ್ಯಯನ ಮಾಡಬಹುದು. ಆದರೆ ಕೆಲವೊಂದು ಮಾಹಿತಿಗಳು ದೊರೆಯುವುದು ಕಷ್ಟ. ಸಮಗ್ರವಾಗಿ ಅಧ್ಯಯನ ಮಾಡದಿದ್ದರು ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ಸಾಧ್ಯವಾದ ಮಟ್ಟಿಗೆ ಕ್ಷೇತ್ರಕಾರ್ಯದ ಮೂಲಕ ವಿಷಯವನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಪಾಂಚಾಳ ಅಂದರೆ ಐದು ವೃತ್ತಿಗಳನ್ನು ಒಳಗೊಂಡಿದ್ದು ಅವುಗಳೆಂದರೆ ಕಮ್ಮಾರ, ಬಡಿಗ, ಅಕ್ಕಸಾಲಿಗ, ಕಂಚುಗಾರ ಹಾಗೂ ಶಿಲ್ಪಗಾರಿಕೆ. ಈ ಐದು ವೃತ್ತಿಗಳಲ್ಲಿ ಹೆಚ್ಚಾಗಿ ಅಧ್ಯಯನ ನಡೆದಿರುವುದು ಶಿಲ್ಪಗಾರಿಕೆಯ ಸಂಬಂಧಿಸಿದಂತೆ ಮಾತ್ರ. ಆದರೆ ಇನ್ನು ನಾಲ್ಕು ವೃತ್ತಿಗಳಿಗೆ ಸಂಬಂಧಿಸಿದಂತೆ ಅಧ್ಯಯನ ಕಮ್ಮಿಯೇ ಎಂದು ಹೇಳಬಹುದು. ಅದರಲ್ಲಿಯೂ ಶಿಲ್ಪಗಾರಿಕೆಯ ವೃತ್ತಿಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿದೆ ಆದರೂ ಶಿಲ್ಪಿಗಳ ಮನೆತನ, ಕೆತ್ತನೆ ಈ ತರಹದ ಅಂಶಗಳನ್ನಿಟ್ಟುಕೊಂಡು ಅಧ್ಯಯನ ನಡೆದಿವೆ. ಸಮಾಜೋಭಾಷಿಕ ಅಧ್ಯಯನ ಆಗಿಲ್ಲ.

ಪಾಂಚಾಳರನ್ನು ದೇಸಿ ಕುಶಲಕರ್ಮಿಗಳೆಂದು ಹೇಳಬಹುದು. ಈ ಸಮುದಾಯದವರು ಕನಿಷ್ಠ ಮೂರು ವೃತ್ತಿಗಳನ್ನು ನಿರ್ವಹಿಸುತ್ತಿರುತ್ತಾರೆ. ಅದರ ಜೊತೆಗೆ ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಸ್ಥಾನಮಾನಗಳನ್ನು ಹೊಂದಿರುವುದನ್ನು ಕಾಣಬಹುದು. ಈ ವೃತ್ತಿಗಳನ್ನು ನೋಡಿದರೆ ಅವರ ಪರಿಶ್ರಮದ ಸ್ವರೂಪ ತಿಳಿದು ಬರುತ್ತದೆ. ಈ ಬಗೆಯ ವೃತ್ತಿಯ ಕೌಶಲ್ಯ ತಿಳುವಳಿಕೆಗಳು ಕೇವಲ ವ್ಯಕ್ತಿ ಕೇಂದ್ರಿತವಲ್ಲ ಸಮುದಾಯ ಪಾರಂಪರಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಜ್ಞಾನ, ಕೌಶಲ್ಯಗಳನ್ನು ದಾಟಿಸಿರುತ್ತದೆ. ಅಂತಹ ಸಮಾಜದಲ್ಲಿ ಬಾಳಿಬದುಕಿ ಇತರೆ ಸಮುದಾಯದೊಂದಿಗೆ ಬೆರೆತುಕೊಂಡು ಅವರ ಜೀವನೋಪಾಯಕ್ಕೆ ಬೇಕಾದ ಎಲ್ಲಾ ಉಪಕರಣಗಳನ್ನು ತಯಾರಿಸಿಕೊಟ್ಟು ಈ ಸಮುದಾಯ ಬದುಕು ರೂಪಿಸಿಕೊಂಡಿದೆ.

ಕಮ್ಮಾರಿಕೆ, ಬಡಗಿತನ ವೃತ್ತಿಗಳು ಅತಿಹೆಚ್ಚಾಗಿ ಜನಸಾಮಾನ್ಯರನ್ನೊಳಗೊಂಡ ವೃತ್ತಿ. ಆದರೆ ಕಂಚುಗಾರಿಕೆ, ಅಕ್ಕಸಾಲಿಕೆ ಹಾಗೂ ಶಿಲ್ಪಿ ಈ ವೃತ್ತಿಗಳು ಸಾಮಾನ್ಯ ಜನರಿಂದ ದೂರವಿರುವ ವೃತ್ತಿಗಳಾಗಿವೆ. ಜನರಿಗಾಗಿಯೇ ಮಾಡಿದರೂ ನಿರ್ಮಾಣದ ಹಂತದಲ್ಲಿ ಜನರಿಂದ ದೂರ ಉಳಿಯುತ್ತವೆ. ಆದರೆ ಬಡಗಿತನ, ಕಮ್ಮಾರಿಕೆ ವೃತ್ತಿಯು ಜನರೊಡನೆ ಬೆರೆತುಕೊಂಡು ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಇಂತಹ ಸಂದರ್ಭಗಳಿದ್ದರು ಈ ಒಟ್ಟು ಸಮುದಾಯವು ತಮ್ಮದೇ ಆದ ಆಚರಣೆ, ಸಂಪ್ರದಾಯ, ನಂಬಿಕೆ ಇತ್ಯಾದಿಗಳನ್ನು ರೂಢಿಸಿಕೊಂಡು ಬಂದಿದ್ದಾರೆ.

ಪಾಂಚಾಳರು ಇತರೆ ಸಮುದಾಯಗಳಿಗೆ ಬೇಕಾದ ಉಪಕರಣಗಳನ್ನು ವಸ್ತುಗಳನ್ನು ತಯಾರಿಸಿಕೊಡುವಲ್ಲಿ ತೊಡಗಿಕೊಂಡವರು. ಈ ಉಪಕರಣ, ವಸ್ತುಗಳ ತಯಾರಿಕೆಗೆ ಮುಖ್ಯವಾಗಿ ಪ್ರತಿಭೆ, ಪರಿಶ್ರಮ ಬೇಕು. ಅಂತಹ ಪ್ರತಿಭೆ, ಪರಿಶ್ರಮದಿಂದ ಉಪಕರಣ, ವಸ್ತುಗಳನ್ನು ತಯಾರಿಸುವಲ್ಲಿ ಮುಂಚೂಣಿಯಲ್ಲಿರುವುದನ್ನು ಕಾಣಬಹುದು. ಆದರೆ ಪ್ರಸ್ತುತ ಸಂದರ್ಭದಲ್ಲಿ ಆಧುನಿಕತೆಯ ಪ್ರಭಾವದಿಂದ ವೃತ್ತಿಗಳು ಸ್ಥಿರತೆಯನ್ನು ಕಾಣಲಾಗುತ್ತಿಲ್ಲ. ಇದರಿಂದಾಗಿ ಪಾಂಚಾಳ ವೃತ್ತಿಪದಗಳು ಬಳಕೆಯಿಂದ

ದೂರವಾಗಿವೆ ಹಾಗೂ ಆ ಉಪಕರಣಗಳಿಗೆ ಹೊಸಪದಗಳು ಸೇರ್ಪಡೆಯಾಗುತ್ತಲಿವೆ. ಇಂತಹ ಸಂದರ್ಭದಲ್ಲಿ ಪಾಂಚಾಳರ ಜೀವನಾವರ್ತನ ಆಚರಣೆಗಳು, ವೃತ್ತಿಸಂಬಂಧಿ ನಂಬಿಕೆ, ನಿಷೇಧ, ದೈವ, ನಾಮಗಳು, ಬೈಯ್ಗುಳ ಗಾದೆ, ಒಗಟು, ಸಂಬೋಧನಾರೂಪ, ಸಾಮಾಜಿಕ, ಧಾರ್ಮಿಕ ಸ್ಥಾನಮಾನ ಇತ್ಯಾದಿ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳು ಈ ರೀತಿಯಾಗಿವೆ.

* ಪಾಂಚಾಳ ಸಮುದಾಯ ಇತರೇ ಸಮುದಾಯಗಳನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದರೂ ಅದು ಅವಲಂಬಿಸಿರುವ ಸಮುದಾಯಗಳ ಆಚರಣೆ, ಸಂಪ್ರದಾಯ ಇತ್ಯಾದಿ ಅಂಶಗಳಿಂದ ಬೇರೆಯಾಗಿ ತನ್ನದೇ ಆದ ಆಚರಣೆ, ಸಂಪ್ರದಾಯಗಳನ್ನು ಅಳವಡಿಸಿಕೊಂಡಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಜೀವನಾವರ್ತನ ಆಚರಣೆ, ಸಂಪ್ರದಾಯಗಳಾದ ಉಪನಯನ, ಮದುವೆ, ಸಾವು-ಸಂಸ್ಕಾರ, ಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ತಮ್ಮದೇ ಆದ ಆಚರಣೆ, ಸಂಪ್ರದಾಯಗಳನ್ನು ಆಚರಿಸುವುದನ್ನು ಕಾಣಬಹುದು.

* ಪಾಂಚಾಳ ಸಮುದಾಯದ ವ್ಯಕ್ತಿಗಳ ಹೆಸರುಗಳೆ ವಿಶೇಷವಾಗಿ ಕಂಡುಬರುತ್ತವೆ. ಹೆಸರು ಕೇಳಿದರೆ ಸಾಕು. ಅವರು ಈ ಸಮುದಾಯದವರೆ ಎಂದು ನಿರ್ದಿಷ್ಟವಾಗಿ ಹೇಳಬಹುದು. ಪ್ರಾಚೀನ ಕಾಲದಲ್ಲಿ ತಮ್ಮ ನಿರ್ದಿಷ್ಟ ಹೆಸರಿನ ಜೊತೆಗೆ ತಮ್ಮ ಕಾರ್ಯವನ್ನು ಸೂಚಿಸುವ ಆಚಾರಿ, ಆಚಾರ್ಯ ವಾರ್ಗಿಕ ವೃತ್ತಿವಾಚಕ ಪದವನ್ನು ಹಚ್ಚಿ ಹೆಸರು ಕಟ್ಟುತ್ತಿದ್ದರು. ನಂತರದಲ್ಲಿ ಹತ್ತನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ತಾವು ನಿರ್ವಹಿಸುವ ವೃತ್ತಿಯ ಜೊತೆಗೆ ನಿರ್ದಿಷ್ಟ ಪದದಲ್ಲಿ ಓಜ ಪದವನ್ನು ಸೇರಿಸಿ ಹೆಸರು ಕಟ್ಟುತ್ತಿದ್ದರು. ನಂತರದಲ್ಲಿ ವೃತ್ತಿಯ ಜೊತೆಗೆ ನಿರ್ದಿಷ್ಟ ಪದದಲ್ಲಿ ಆಚಾರಿ ಪದವನ್ನು ಸೇರಿಸಿ ಹೆಸರು ಕಟ್ಟುತ್ತಿದ್ದರು. ಪ್ರಸ್ತುತ ಸಂದರ್ಭದಲ್ಲಿ ಸಮುದಾಯದ ಸಮೂಹ ಪದವನ್ನು ಸೂಚಿಸುವ ವಿಶ್ವಕರ್ಮ, ಪಾಂಚಾಳ ಪದವನ್ನು ಹೆಸರಿನ ಜೊತೆಗೆ ಕಟ್ಟುವುದು ಕಾಣಬಹುದು.

* ಪಾಂಚಾಳ ಸಮುದಾಯದಲ್ಲಿ ನಡೆಯುವ ಉಪನಯನ, ಮದುವೆ, ಸಾವು-ಸಂಸ್ಕಾರ ಇಂತಹ ಕಾರ್ಯಗಳನ್ನು ತಮ್ಮ ಸಮುದಾಯದಲ್ಲೇ ನೇಮಿಸಿಕೊಂಡಿರುವ 'ಆಚಾರ್ಯಸ್ವಾಮಿ'ಯೇ ಈ ಕಾರ್ಯಗಳನ್ನು ನಡೆಸಿಕೊಡಬೇಕು. ಸಮುದಾಯದವರು ಈ ವ್ಯಕ್ತಿಯನ್ನು 'ಆಚಾರ್ಯಸ್ವಾಮಿ' (ಆಚಾರಿಸ್ವಾಮಿ) ಎಂದು ಗೌರವ ಸೂಚಕವಾಗಿ ಕರೆಯುವುದು ಕಂಡುಬರುತ್ತದೆ.

* ಪಾಂಚಾಳ ಸಮುದಾಯದ ವ್ಯಕ್ತಿಗಳು ಇತರೇ ಸಮುದಾಯವನ್ನು ಅವಲಂಬಿಸಿ ವೃತ್ತಿಯನ್ನು ನಡೆಸಿಕೊಂಡು ಬಂದವರು. ಇತರೇ ಸಮುದಾಯದವರು ಪಾಂಚಾಳ ಸಮುದಾಯದ ಚಟುವಟಿಕೆಗಳನ್ನು ಗಮನಿಸಿ ಗಾದೆ, ಒಗಟು, ಬೈಯ್ಗುಳ ಕಟ್ಟಿರುವುದನ್ನು ಕಾಣಬಹುದು. ಬಡಿಗ, ಕಮ್ಮಾರ, ಅಕ್ಕಸಾಲಿಗನ ಮೇಲೆ ಹೆಚ್ಚಾಗಿ ಬಳಕೆ ಮಾಡಿರುವುದು ಕಂಡು ಬರುತ್ತದೆ. ಇದು ಸಾಮಾಜಿಕ ಸಂರಚನೆಯಲ್ಲಿ ಇವರ ಮಹತ್ವವನ್ನು ತೋರಿಸುತ್ತದೆ.

* ಪಾಂಚಾಳ ಸಮುದಾಯದವರು ಗ್ರಾಮದೇವತೆಯ ಪೂಜಾರಿಕೆಯ ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ. ಇವರು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿಲ್ಲದಿದ್ದರು ಕೂಡ ಇವರನ್ನು ಕರೆಯುವಾಗ ಗೌರವ ಸೂಚಕ ಪದಗಳಿಂದಲೇ ಸಂಬೋಧಿಸುವುದು ಕಂಡುಬರುತ್ತದೆ. ಹಾಗೂ ವಿಶಿಷ್ಟವಾದ ಸ್ಥಾನವನ್ನು ಕೊಟ್ಟಿರುತ್ತಾರೆ.

* ಇತರೆ ಸಮುದಾಯದವರು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲಿಕ್ಕೆ ಹೋಗುವ ಸಂದರ್ಭದಲ್ಲಿ ಆ ವ್ಯಕ್ತಿ ತಮ್ಮ ಮನೆಯವರಿಗೆ ಅಥವಾ ಇನ್ಯಾರೊ ಕೇಳಿದಾಗ **'ಕೊಲ್ಮೆಕ್'** ಹೋಗಿದ್ದೆ, **'ಕೊಲ್ಮಿಮನಿಗೆ'** ಹೋಗಿದ್ದೆ, **'ಬಡಿಗೆಟ್ಯಾಕ'** ಹೋಗಿದ್ದೆ, **'ಅಕ್ಸಲೇರ ಮನೀಗೆ'** ಹೋಗಿದ್ದೆ ಈ ತರಹದಲ್ಲಿ ಪ್ರಯೋಗವಾಗುವುದನ್ನು ಕಾಣಬಹುದು. ಇಲ್ಲಿ ಅವರ ಹೆಸರನ್ನು ಸೂಚಿಸುವುದಿಲ್ಲ. ಯಾವ ವೃತ್ತಿಯವರ ಹತ್ತಿರ ಹೋಗಿದ್ದೆ ಎಂಬುದನ್ನು ಸೂಚಿಸುವುದು ಕಾಣಬಹುದು.

* ಜೀವನಾವರ್ತನ ಆಚರಣೆ, ಸಂಪ್ರದಾಯದಲ್ಲಿ ತಮ್ಮದೇ ಆದ ಕೆಲವು ವಿಶಿಷ್ಟ ಭಾಷಾ ರೂಪಗಳು, ಪದಗಳು, ವಿಶಿಷ್ಟ ಅರ್ಥಗಳಲ್ಲಿ ಬಳಸುವುದನ್ನು ಕಾಣಬಹುದು.

* ಪಾಂಚಾಳರ ವೃತ್ತಿ ಉಪಕರಣ ಪದಗಳು ಕೇವಲ ತಮ್ಮ ವೃತ್ತಿಯ ಕ್ಷೇತ್ರಕ್ಕೆ ಮೀಸಲಾಗಿರದೆ ಸಾಮಾಜಿಕ ವಲಯದಲ್ಲಿಯೂ ಬೇರೆ ಬೇರೆ ಸಂದರ್ಭಕ್ಕೆ ಅನುಗುಣವಾಗಿ ಪ್ರಯೋಗವಾಗುತ್ತಿರುವುದು ಕಂಡುಬರುತ್ತದೆ.

* ಪಾಂಚಾಳರು ತಮ್ಮ ಐದು ವೃತ್ತಿಗಳ ಸಂದರ್ಭದಲ್ಲಿ ಅನೇಕ ನಂಬಿಕೆ, ನಿಷೇಧಗಳನ್ನು ಅನುಸರಿಸಿಕೊಂಡು ಬಂದಿರುವುದು ಅಧ್ಯಯನದಿಂದ ತಿಳಿಯುತ್ತದೆ. ಬಡಗಿ ಗೃಹೋಪಯೋಗಿ ಸಾಮಾನುಗಳ ತಯಾರಿಕೆಯಲ್ಲಿ **ಹುಣಸೆ ಮರ, ಚಿರ್ಚಲ ಮರ, ತಾಪ್ಸ ಮರದ** ಕಟ್ಟಿಗೆಗಳನ್ನು ನಿಷೇಧಿಸುತ್ತಾರೆ. ಹಾಗೆಯೇ ನಂಬಿಕೆಗೆ ಸಂಬಂಧಿಸಿದಂತೆ ಕಮ್ಮಾರರು, ಶಿಲ್ಪಿಗಳು, ಕಂಚುಗಾರರು, **ಹುಸಿಪೆಟ್ಟು**, ದೃಷ್ಟಿ ಇಡುವುದು, **ಪ್ರಾಣಪ್ರತಿಷ್ಠೆ** ಇತ್ಯಾದಿ ನಂಬಿಕೆಗಳನ್ನು ಇಟ್ಟುಕೊಂಡು ಬಂದಿದ್ದಾರೆ. ಈ ಪಾಂಚಾಳರ ನಂಬಿಕೆ, ನಿಷೇಧಕ್ಕೆ ಸಂಬಂಧಿಸಿದಂತೆ ಇತರೆ ಸಮುದಾಯದವರು ಕೂಡ ಒಪ್ಪಿಗೆ ಸೂಚಿಸುವುದು ಅಧ್ಯಯನದಿಂದ ತಿಳಿದುಬರುತ್ತದೆ.

* ಪಾಂಚಾಳರಿಗೆ ಊರಿನ ನಿರ್ದಿಷ್ಟ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಇವರಿಗೆ ಮೊದಲ ಸ್ಥಾನ ಇರುವುದು ಅಧ್ಯಯನದಿಂದ ತಿಳಿದುಬರುತ್ತದೆ.

* ಮೊದಲ ಮಳೆ ಭೂಮಿಗೆ ಬಿದ್ದಾಗ ರೈತರೆಲ್ಲರೂ ಸೇರಿ ಪಾಂಚಾಳರ ಕೈಯಿಂದ ಅಡಿಪೂಜೆಯನ್ನು ಮಾಡಿಸುತ್ತಾರೆ. ಅಂದರೆ ಪಾಂಚಾಳರ ವೃತ್ತಿ ಉಪಕರಣಗಳನ್ನು ಪೂಜೆ ಮಾಡಿಸಿ ತಮಗೆ ಬಿತ್ತಲಿಕ್ಕೆ ಬೇಕಾದ ಉಪಕರಣ, ವಸ್ತುಗಳನ್ನು ಮಾಡಿಸಿಕೊಳ್ಳುತ್ತಾರೆ.

ಇಂತಹ ವಿಶಿಷ್ಟವಾದ ವಿವರಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಪ್ರಸ್ತುತ ಪಾಂಚಾಳರ ಸ್ಥಿತಿಗತಿ

ಈ ಸಮುದಾಯವು ಸಂಕ್ರಮಣದ ಕಾಲಘಟ್ಟದಲ್ಲಿದೆ. ಇತರ ಸಮುದಾಯಗಳು ಸಾಧಿಸಿದ ಆರ್ಥಿಕ, ರಾಜಕೀಯ, ಸಾಮಾಜಿಕ ಪ್ರಗತಿಗೆ ಹೋಲಿಸಿದಾಗ ಬಹಳಷ್ಟು ಹಿಂದುಳಿದಿದೆ. ಆದರೆ ಪಾಂಚಾಳ ಸಮುದಾಯಕ್ಕೆ ನಿರುದ್ಯೋಗದ ಸಮಸ್ಯೆಯಿಂದ ಪ್ರಗತಿಗೆ ಅಡ್ಡಿಯಾಗಿದೆ ಎಂದರ್ಥವಲ್ಲ.

ಪಾಂಚಾಳರಿಗೆ ಅವರದೆ ಆದ ಗೌರವ ತಂದುಕೊಡಬಲ್ಲ ಕುಲಕಸುಬು ಇರುವುದರಿಂದ ಅವರೆಂದು ನಿರುದ್ಯೋಗಿಗಳಾಗಲು ಸಾಧ್ಯವಿಲ್ಲ. ಒಂದು ಕೆಲಸವಿಲ್ಲವೆಂದರೆ (ಅಂದರೆ ಐದು ವೃತ್ತಿಗಳಲ್ಲಿ ಯಾವುದಾದರೊಂದು) ಇನ್ನೊಂದು ಕೆಲಸದಲ್ಲಿ ನಿರತರಾಗಿರುತ್ತಾರೆ. ಆದರೆ ಬದಲಾಗುತ್ತಿರುವ ಸಂದರ್ಭದಲ್ಲಿ ಅದೇ ಸಾಂಪ್ರದಾಯಿಕ ಕೌಶಲ್ಯದ ಮನಸ್ಥಿತಿಯನ್ನು ಗಟ್ಟಿಗೊಳಿಸಲು ಸಾಧ್ಯವಾಗದೆ ಸೋತು ಹೋಗಿರುವುದು ಭವಿಷ್ಯದ ಪ್ರಗತಿಯ ಹಿನ್ನೆಡೆಗೆ ಕಾರಣವಾಗಿರಬಹುದು.

ಇಂದು ಎಲ್ಲ ವೃತ್ತಿಗಳು ಆಧುನೀಕರಣಗೊಳ್ಳುತ್ತಿವೆ. ಹೊಸ ಹೊಸ ಆವಿಷ್ಕಾರಗಳಾಗುತ್ತಿವೆ. ಇದಕ್ಕೆ ಪಾಂಚಾಳರ ಕಸಬುಗಳು ಹೊರತಾಗಿಲ್ಲ. ಇಂತಹ ಸಂದರ್ಭದಲ್ಲಿ ವೃತ್ತಿಗಳ ಪ್ರಗತಿ ಸಾಧಿಸಬೇಕಾದರೆ, ಆರ್ಥಿಕವಾಗಿ ಬಲವುಳ್ಳರಾಗಬೇಕಾದರೆ ವೃತ್ತಿಯಲ್ಲಿ ಯಂತ್ರೋಪಕರಣಗಳ ಉಪಯೋಗ ಅನಿವಾರ್ಯ. ವೃತ್ತಿಗೆ ಅನುಗುಣವಾಗಿ ವಿದ್ಯಾಭ್ಯಾಸವನ್ನು ನೀಡಿದರೆ ಅವರು ವೃತ್ತಿಯಲ್ಲಿ ಯಂತ್ರೋಪಕರಣಗಳ ಮೂಲಕ ಯಶಸ್ಸು ಕಾಣಲು ಸಾಧ್ಯ ಹಾಗೂ ಭವಿಷ್ಯದ ಬಗ್ಗೆ ದೂರದೃಷ್ಟಿಯನ್ನು ಹೊಂದಲು ಸಾಧ್ಯವಾಗುತ್ತದೆ. ಇತರ ಸಮುದಾಯಗಳು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಮಕ್ಕಳಿಗೆ ಕನಿಷ್ಟ ಎಸ್.ಎಸ್.ಎಲ್.ಸಿ ಶಿಕ್ಷಣವನ್ನಾದರೂ ಮಕ್ಕಳಿಗೆ ಓದುವಂತೆ ನೋಡಿಕೊಳ್ಳುತ್ತಾರೆ. ನಂತರ ತಮ್ಮ ಕುಲಕಸುಬುಗಳಲ್ಲಿ ಅವರನ್ನು ತೊಡಗಿಸುತ್ತಾರೆ.

ಹೀಗೆ ಶಿಕ್ಷಿತರಾದವರು ಯಾವುದಾದರೊಂದು ಉದ್ಯೋಗಕ್ಕೂ, ಸ್ವ ಉದ್ಯೋಗಕ್ಕೂ ತೊಡಗಿ ಆರ್ಥಿಕ ಬೆಳವಣಿಗೆಯನ್ನು ಸಾಧಿಸಲು ಶಕ್ತನಾಗುತ್ತಾನೆ. ಈ ರೀತಿ ಬೆಳವಣಿಗೆ ಕಂಡ ಅನೇಕ ಸಮುದಾಯಗಳು ಪಾಂಚಾಳರ ವೃತ್ತಿಗಳನ್ನೇ ಉದ್ಯಮವಾಗಿಸಿ ಬೆಳವಣಿಗೆ ಕಂಡಿದ್ದಾರೆ. (ಬಡಗಿತನ, ಅಕ್ಕಸಾಲಿಕೆ) ಅಂತವರ ಉದ್ದಿಮೆಗಳಲ್ಲಿ ಪಾಂಚಾಳರು ದುಡಿಯುವ ಪರಿಸ್ಥಿತಿಯನ್ನು ಇಂದು ಕಾಣಬಹುದಾಗಿದೆ.

ಕಮ್ಮಾರರಿಗೆ ಪ್ರಾಚೀನ ಕಾಲದಲ್ಲಿ ತಮ್ಮ ವೃತ್ತಿ ನಿರ್ವಹಣೆಗೆ ಯಾವುದೇ ತರಹದ ಅಡ್ಡಿ ಆತಂಕಗಳು ಇರಲಿಲ್ಲ. ಆದರೆ ಪ್ರಸ್ತುತದಲ್ಲಿ ಈ ವೃತ್ತಿ ನಿರ್ವಹಿಸುವರಿಗೆ ಅನೇಕ ಅಡ್ಡಿ ಆತಂಕಗಳು ಅವರನ್ನು ಕಾಡುತಲಿವೆ. ಈ ಅಡ್ಡಿ ಆತಂಕಗಳಿಂದಾಗಿಯೇ ವೃತ್ತಿಯಿಂದ ದೂರ ಉಳಿಯುತ್ತಿದ್ದಾರೆ. ಕಮ್ಮಾರನ ಕುಲುಮೆಗೆ ಮೂಲ ಇದ್ದಿಲು. ಇದ್ದಿಲು ಇಲ್ಲ ಅಂದರೆ ತನ್ನ ಕುಲುಮೆಯ ಮೂಲಕ ಕಬ್ಬಿಣ ಕಾಯಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ಇದ್ದಿಲು ಬೇಕೆಬೇಕು. ಇದ್ದಿಲು ಪ್ರಸ್ತುತದಲ್ಲಿ ಕಮ್ಮಾರನಿಗೆ ಸಿಗುತ್ತಿಲ್ಲ. ಅರಣ್ಯ ಇಲಾಖೆಯವರ ಬಿಗಿಯಾದ ಕಾವಲಿನ ಕಾರಣ ಸೌದೆಯನ್ನು ಯಾರು ಒಲಿಗೆ ಉಪಯೋಗಿಸುತ್ತಿಲ್ಲ. ಅಡಿಗೆಯ ತಯಾರಿಕೆಗೆ ಎಲ್ಲರೂ ಗ್ಯಾಸನ್ನೇ ಅವಲಂಬಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಬ್ಬಿಣವನ್ನು ಹದ ಮಾಡಿ ವಸ್ತುಗಳನ್ನು ತಯಾರಿಸುವುದು ಕಷ್ಟಕರವಾಗಿದೆ. ಕಮ್ಮಾರನ ಸಹಾಯಕ್ಕಾಗಿ ಜನರು ಸಿಗುವುದು ಕಡಿಮೆ. ಇದು ತುಂಬ ಶ್ರಮದಾಯಕವಾದ ಕೆಲಸ ಬೆಂಕಿಯ ಮುಂದೆ ಕುಳಿತು ಕೆಲಸವನ್ನು ಮಾಡಬೇಕು. ಸಹಾಯಕ ಕೆಲಸಕ್ಕೆ ಬರಲಿಲ್ಲವೆಂದರೆ ಅವತ್ತು ಕುಲುಮೆಗೆ ರಜೆ ಹಾಕಬೇಕಾಗುತ್ತದೆ. ಇಂತಹ ಸಮಸ್ಯೆಗಳನ್ನೇಲ್ಲ ಬಗೆಹರಿಸಿಕೊಂಡು ವೃತ್ತಿಯನ್ನು ನಿರ್ವಹಿಸಿದರು ಈ

ಆಧುನಿಕತೆಯ ಪ್ರಭಾವದಿಂದ ಮಾರುಕಟ್ಟೆಯಲ್ಲಿ ಸಿಗುವ ವಸ್ತುಗಳ ಬೆಲೆಗಿಂತ ಕಮ್ಮಾರನ ಬೆಲೆ ಹೆಚ್ಚಳವಾಗುವುದರಿಂದ ಎಲ್ಲರೂ ಮಾರುಕಟ್ಟೆಯನ್ನು ಅವಲಂಬಿಸುತ್ತಾರೆ. ಆದರೆ ಕಮ್ಮಾರನು ತಯಾರಿಸುವ ವಸ್ತುಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಇದರಿಂದ ಈ ವೃತ್ತಿಯನ್ನು ಆಸಕ್ತಿಯಿಂದ ಮುಂದುವರೆಸಲು ಪರಿಶ್ರಮ ಪಡುತ್ತಿಲ್ಲ.

ಪಾಂಚಾಳ ಸಮುದಾಯದ ಬಡಗಿತನ ವೃತ್ತಿಯವರಿಗೆ ಮೊದಲಿನಂತೆ ರೈತಾಪಿ ಜನರು ಆಯದ ರೂಪದಲ್ಲಿ ಕೊಡುತ್ತಿದ್ದ ದವಸ ದಾನ್ಯಗಳು ಪ್ರಸ್ತುತ ಸಂದರ್ಭದಲ್ಲಿ ದೊರೆಯುತ್ತಿಲ್ಲ. ಆಧುನೀಕರಣದ ಪ್ರಭಾವದಿಂದಾಗಿ ರೈತರು ತಮ್ಮ ಕೃಷಿ ಚಟುವಟಿಕೆಗಳಿಗೆ ಇಂದು ಬಡಗಿಯವರನ್ನು ಅವಲಂಬಿಸಿಯೇ ಇಲ್ಲ. ಎಲ್ಲ ರೈತರೂ ಕೃಷಿಯ ಚಟುವಟಿಕೆಗೆ ಯಂತ್ರ ನಿರ್ಮಿತ ಕೃಷಿ ಉಪಕರಣಗಳಿಗೆ ಮೊರೆ ಹೋಗುತ್ತಿದ್ದಾರೆ. ಬಡಗಿಯ ಕೈಲಿಂದ ಮಾಡಿಸುತ್ತಿದ್ದ ಮರ-ಮುಟ್ಟುಗಳು ಬಾಳಿಕೆ ಬರುವುದಿಲ್ಲ ಹಾಗೂ ಸಾಮಾನುಗಳ ತಯಾರಿಕೆಗೆ ಬೇಕಾದ ಮರದ ತೊಂದರೆ, ಮರಸಿಕ್ಕರೂ ಅದನ್ನು ಕಡಿಯಲು ಅರಣ್ಯ ಇಲಾಖೆಯವರ ಬಿಗಿಭದ್ರತೆ, ಕಡಿದ ಮೇಲೆ ತಿಂಗಳುಗಟ್ಟಲೆ ಅದನ್ನು ಒಣಗಿಸುವುದು ಇಂತಹ ಅನೇಕ ಸಮಸ್ಯೆಗಳಿಂದ ರೈತಾಪಿ ಕುಟುಂಬದವರು ಮಾರುಕಟ್ಟೆಯಲ್ಲಿ ಸಿಗುವ ಕಬ್ಬಿಣದ ಉಪಕರಣಗಳನ್ನು ಖರೀದಿ ಮಾಡಿ ತಮ್ಮ ಕೃಷಿಗೆ ಬೇಕಾದ ಸಾಮಾನುಗಳ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವೃತ್ತಿಯನ್ನು ಅವಲಂಬಿಸಿದ ಕುಟುಂಬಗಳು ತಮ್ಮ ಜೀವನವನ್ನೇ ಸಾಗಿಸುವುದೇ ಕಷ್ಟಕರವಾಗಿದೆ. ಹೀಗಾಗಿ ಗ್ರಾಮೀಣ ಪ್ರದೇಶದ ಬಡಗಿಯುರು ಬಡಗಿತನ ಮಾಡುವುದು ಕಡಿಮೆಯಾಗಿದೆ.

ಅಕ್ಕಸಾಲಿಗರು ಬಳಸುವ ಕಚ್ಚಾ ವಸ್ತು ಬಂಗಾರ ಅತ್ಯಂತ ದುಬಾರಿ ಬೆಲೆಯ ವಸ್ತು. ಈ ಜಾಗತೀಕರಣದ ಸಂದರ್ಭದಲ್ಲಿ ಬಂಗಾರದ ಬೆಲೆ ಯಾವಾಗ ಏರಿಕೆಯಾಗುತ್ತದೆ ಕಡಿಮೆಯಾಗುತ್ತದೆ ಎಂಬುದು ತಿಳಿಯುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅಕ್ಕಸಾಲಿಗರ ವೃತ್ತಿಯ ಮೇಲೆ ಪರಿಣಾಮ ಬೀರುತ್ತವೆ. ಇವುಗಳಿಂದ ಎಷ್ಟು ಕುಟುಂಬಗಳು ರಾತ್ರೋರಾತ್ರಿ ನಗರ ಪ್ರದೇಶಗಳಿಗೆ ಯಾರಿಗೂ ಗೊತ್ತಾಗದಂತೆ ಹೋಗಿರುವ ನಿದರ್ಶನಗಳಿವೆ.

ಪ್ರತಿ ಹಳ್ಳಿಗಳಲ್ಲಿ ಪಾಂಚಾಳ ಸಮುದಾಯವನ್ನು ಕಾಣಬಹುದಾದರೂ ಪ್ರಸ್ತುತದಲ್ಲಿ ಈ ವೃತ್ತಿಗಳನ್ನು ನಿರ್ವಹಿಸುವರು ಕಾಣಸಿಗುವುದಿಲ್ಲ. ನಗರಗಳು ಬೆಳವಣಿಗೆಗಳಾದ ಸಂದರ್ಭದಲ್ಲಿ ಬಂಡವಾಳಶಾಹಿಗಳು ಬಂಗಾರದ ಅಂಗಡಿಗಳನ್ನು ಪ್ರಾರಂಭಿಸಿ ಪಾಂಚಾಳರ ಸ್ವಾಯಿತ್ತತೆ ಇಲ್ಲವಾಗಿದೆ. ಬಂಡವಾಳಶಾಹಿಗಳ ಕೈಕೆಳಗೂ ಹಾಗೂ ಗ್ರಾಹಕರ ಮಧ್ಯೆ ಕಾರ್ಮಿಕರಾಗಿ ಮಾತ್ರ ಕೆಲಸ ನಿರ್ವಹಿಸುವ ಸಂದರ್ಭ ಬಂದಿದೆ. ಈ ಬಂಡವಾಳ ಶಾಹಿಗಳು ಕೊಟ್ಟ ಕೆಲಸವನ್ನು ಮಾತ್ರ ನಿರ್ವಹಿಸಿ ಅವರು ಕೊಟ್ಟಂತಹ ದಿನಗೂಲಿಯನ್ನು ಪಡೆದುಕೊಂಡು ಬರಬೇಕು. ಇದರಲ್ಲಿ ಪಾಂಚಾಳರನ್ನು ದುಡಿಸಿಕೊಂಡು ಬಂಡವಾಳಶಾಹಿಗಳು ಉನ್ನತಮಟ್ಟಕ್ಕೆ ಏರುವುದನ್ನು ಕಾಣಬಹುದು. ಹಾಗೂ ಈ ಉದ್ಯೋಗಕ್ಕೆ ಸಂಬಂಧಿಸಿದಂತೆ ಕಾರ್ಖಾನೆಗಳು ತಲೆ ಎತ್ತಿರುವುದರಿಂದ ಅಕ್ಕಸಾಲಿಗರ ಕೌಶಲ್ಯಕ್ಕೆ ಬೆಲೆಯಿಲ್ಲದಂತಾಗಿದೆ. ಅಂದರೆ ಇವತ್ತು ಪ್ರತಿಯೊಂದು ಆಭರಣಗಳು ಕಾರ್ಖಾನೆಗಳಲ್ಲಿ ಯಂತ್ರಗಳ ಮುಖಾಂತರ ತಯಾರಾಗಿ ನಿರ್ಮಾಣವಾಗುವುದನ್ನು ಕಾಣಬಹುದು.

ಹಾಗೆಯೆ ಪಾಂಚಾಳರಲ್ಲಿ ಇನ್ನೊಂದು ವೃತ್ತಿಯಾದ ಕಂಚುಗಾರಿಕೆಯು ಕರ್ನಾಟಕದ ಕೆಲವು ಭಾಗದಲ್ಲಿ ಮಾತ್ರ ಉಳಿದಿದೆ. ಕೆಲವೇ ಪ್ರದೇಶಗಳಲ್ಲಿ ಉಳಿದ ವೃತ್ತಿಯು ಕೂಡ ಸಂಪೂರ್ಣವಾಗಿ ನಶಿಸುವ ಹಂತಕ್ಕೆ ತಲುಪಿದೆ. ಆಧುನಿಕತೆಯ ಪ್ರವೇಶದಿಂದ ಪಾರಂಪರಿಕ ವೃತ್ತಿಯನ್ನು ಅವಲಂಬಿಸಿದ ಸಮುದಾಯಗಳು ತಮ್ಮ ವೃತ್ತಿಯನ್ನು ಕೈ ಬಿಟ್ಟು ಬೇರೆ ವೃತ್ತಿಯನ್ನು ಅವಲಂಬಿಸಿರುವುದನ್ನು ಕಾಣಬಹುದು. ಇದರಿಂದಾಗಿ ಈ ವೃತ್ತಿಯ ಉಪಕರಣಗಳು ಮೂಲೆಗುಂಪಾಗಿವೆ. ಅವುಗಳನ್ನು ನೋಡಬೇಕಾದರೂ ಕೂಡ ಸಿಗುವುದಿಲ್ಲ ಹಾಗೂ ಅವುಗಳ ಹೆಸರೇ ಮಾಯವಾಗಿವೆ.

ವಿಶ್ವಕರ್ಮ ಸಮುದಾಯದ ಪರಂಪರೆ, ಚರಿತ್ರೆ, ಬದುಕಿನ ವೈಶಿಷ್ಟ್ಯ, ಅವರ ವೃತ್ತಿ ಸೇವೆ ಈ ಸಮುದಾಯದವರು ಬೇರೆ ಸಮುದಾಯದ ಮೇಲೆ ಬೀರಿದ ಪರಿಣಾಮ ಇತ್ಯಾದಿಗಳ ವಿಷಯ ಕುರಿತಂತೆ ಬೆಳಕು ಚೆಲ್ಲುವ ಗ್ರಂಥಗಳು ಕನ್ನಡದಲ್ಲಿ ಕಡಿಮೆ ಇವೆಯೆಂದೇ ಹೇಳಬಹುದು. ಇಂತಹವುಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಯಬೇಕಿದೆ. ಯಾವುದೇ ಸಮುದಾಯ ಪುಟ ಪುಟಗಳಲ್ಲಿ ಹೆಸರುಗಳಿಸಬೇಕಾದರೆ ಅವರು ಬದುಕಿದ ರೀತಿ ನೀತಿಗಳು ಇತರೆ ಸಮುದಾಯದವರ ರೀತಿ ನೀತಿಗಳಿಗಿಂತ ಉನ್ನತ ಮಟ್ಟದ್ದಾಗಿರಬೇಕಾಗುತ್ತದೆ. ಅಂದರೆ ಸಮಾಜಕ್ಕೆ ಒಳಿತು ಮಾಡುವ ದೃಷ್ಟಿಯಿಂದ ಇಂತಹ ಸಮುದಾಯ ಪಾರಂಪರಿಕ ವೃತ್ತಿಯಿಂದ ಪ್ರಸ್ತುತದಲ್ಲಿ ದೂರ ಉಳಿಯುವ ಅನಿವಾರ್ಯತೆ ಸೃಷ್ಟಿಯಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಪಾಂಚಾಳರಲ್ಲಿ ಅಕ್ಕಸಾಲಿಗ ಹಾಗೂ ಶಿಲ್ಪಗಾರ ವೃತ್ತಿಯವರು ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಮುಂಚೂಣಿಯಲ್ಲಿದ್ದಾರೆ. ಆದರೆ ಬಡಿಗ, ಕಮ್ಮಾರ ಹಾಗೂ ಕಂಚುಗಾರ ವೃತ್ತಿಯವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ತುಂಬಾ ಹಿಂದುಳಿದ್ದಾರೆ.

ಆಧುನೀಕರಣ, ಜಾಗತೀಕರಣ ಕಾರಣಗಳಿಂದ ಯಾಂತ್ರಿಕ ಉಪಕರಣಗಳನ್ನು ಬೇರೆ ಸಮುದಾಯದವರು ಹೆಚ್ಚಾಗಿ ಅವಲಂಬಿಸುತ್ತಿದ್ದರೂ ಕಂಚುಗಾರಿಕೆ, ಶಿಲ್ಪಗಾರಿಕೆಯಂತಹ ಸಾಂಸ್ಕೃತಿಕ ಮಹತ್ವವುಳ್ಳ ಕೆಲಸಗಳಿಗೆ ಅನ್ಯ ಸಮುದಾಯಗಳು ಪ್ರವೇಶಿಸುವುದು ಸಾಧ್ಯವಾಗಿಲ್ಲ. ದೇವಾಲಯ, ದೇವತಾ ಮೂರ್ತಿಗಳು ಹಾಗೂ ಇತರೆ ಸಮುದಾಯಗಳ ಸಾಂಸ್ಕೃತಿಕ ಆಚರಣೆ ವಿಧಿ ನಿಷೇಧಗಳ ಹಿನ್ನೆಲೆಯಲ್ಲಿ ಕೆಲವು ಕೆಲಸಗಳಿಗೆ ಗ್ರಾಮೀಣ ಸಂಸ್ಕೃತಿಯಲ್ಲಿ ಪಾಂಚಾಳರನ್ನು ಅವಲಂಬಿಸಿರುವುದು ಕಾಣಬಹುದು.

ಅನುಬಂಧಗಳು

* ವೃತ್ತಿ ಉಪಕರಣಗಳು
* ವಕ್ತೃವಿವರ
* ಪರಾಮರ್ಶನ ಗ್ರಂಥಗಳು

ಉಪಕರಣಗಳು

ಈ ಅನುಬಂಧದಲ್ಲಿ ಪಾಂಚಾಳರು ತಮ್ಮ ವೃತ್ತಿಯಲ್ಲಿ ಬಳಸುವ ಉಪಕರಣಗಳ ಪಟ್ಟಿಯನ್ನು ನೀಡಲಾಗಿದೆ. ಈ ಉಪಕರಣಗಳು ಸಾಂಪ್ರದಾಯಿಕವಾದವೂ, ಆಧುನಿಕವಾದವೂ ಇವೆ. ಇವುಗಳಲ್ಲಿ ಕನ್ನಡ, ಹಿಂದಿ, ಇಂಗ್ಲಿಶ್ ಎಲ್ಲಾ ಭಾಷೆಯ ಪದಗಳೂ ಇವೆ. ವೃತ್ತಿ ಪರಂಪರೆಯಲ್ಲಿ ಆದ ಬೆಳವಣಿಗೆ ಬದಲಾವಣೆಗಳನ್ನು ಈ ಉಪಕರಣಗಳ ಹೆಸರುಗಳನ್ನು ನೋಡಿದಾಗ ತಿಳಿಯುತ್ತದೆ.

ವೃತ್ತಿ ಪದಕೋಶಗಳಲ್ಲಿ ಉಪಕರಣಗಳ ಹೆಸರುಗಳು ಮುಖ್ಯವಾದವು ಮತ್ತು ವಿಶಿಷ್ಟವಾದವು. ಈ ಪದಗಳಿಗೆ ಸಾಮಾನ್ಯವಾಗಿ ವೃತ್ತಿ ವಲಯವನ್ನು ಮೀರಿದ ಬಳಕೆಯ ಪರಿಸರವಿರುವುದಿಲ್ಲ. ಆದರೆ ಕೆಲವು ವಿಶಿಷ್ಟ ಸಂಪರ್ಕದ ಬಳಕೆಗಳಲ್ಲಿ ಇತರೆ ಸಾಮಾಜಿಕರು ಬಳಸುವ ಬೈಗಳು, ಗಾದೆ, ನುಡಿಗಟ್ಟು, ಹೋಲಿಕೆಯಂತಹ ಸಂದರ್ಭಗಳಲ್ಲಿ ಮಾತ್ರ ವೃತ್ತಿ ಪರಿಸರದಾಚೆಗೂ ಕೆಲವು ಸೀಮಿತವಲಯಗಳಲ್ಲಿ ಅರ್ಥ ಸಂಕೋಚ, ಅರ್ಥ ವಿಸ್ತಾರಗಳೊಂದಿಗೆ ಬಳಕೆಯಾಗುವ ಸಂದರ್ಭಗಳಿವೆ. ಪಾಂಚಾಳ ಎಂಬ ಪದ ಐದು ವೃತ್ತಿಗಳನ್ನು ಒಳಗೊಂಡಿದ್ದು ಈ ಐದು ವೃತ್ತಿಗಳಿಗೂ ಸಾಮಾನ್ಯವಾದ ಉಪಕರಣಗಳು ಒಂದೇ ಹೆಸರಿನಲ್ಲಿ ಬಳಕೆಯಾಗುತ್ತವೆ. ಆದರೆ ಅವುಗಳ ಕಾರ್ಯ ಸ್ವರೂಪ, ಬಳಕೆ ವಿಭಿನ್ನವಾಗಿರುತ್ತವೆ. ಸಮುದಾಯೇತರರಿಗೆ ಅವು ಒಂದೇ ಎಂಬ ಭಾವನೆ ಮೂಡುವುದು ಸಹಜ. ಉದಾಹರಣೆಗೆ ಉಳಿ ಎಂಬ ಒಂದೇ ಉಪಕರಣ ಈ ಐದು ವೃತ್ತಿಗಳಲ್ಲಿ ಬಳಕೆಯಾಗುತ್ತದೆ. ಆದರೆ ಕೆಲಸಕ್ಕೆ ತಕ್ಕಂತೆ ನಿಷ್ಪನ್ನ ಪದಗಳು ಸೃಷ್ಟಿಯಾಗಿವೆ. ಕಮ್ಮಾರಿಕೆ ವೃತ್ತಿಯಲ್ಲಿ ಚಾಣ ಎಂದು ಹೆಸರಿಸಲಾಗುತ್ತದೆ. ಇದನ್ನು ಕಬ್ಬಿಣ ಕಡಿಯಲು, ಅದರಲ್ಲಿ ರಂಧ್ರ ಮಾಡಲು ಉಪಯೋಗಿಸಿದರೆ ಬಡಗಿ ಕೆಲಸದಲ್ಲಿ ಉಳಿಯಿಂದ ಕಟ್ಟಿಗೆಯನ್ನು ತನ್ನ ಕೆಲಸಕ್ಕೆ ತಕ್ಕಂತೆ ಕತ್ತರಿಸಲು ಬಳಕೆಯಾಗುವ ಉಪಕರಣವಾದರೆ, ಕೂಲುಳಿ, ಕಡೆ ಉಳಿ ಇವು ರಂಧ್ರ ಮಾಡಲು ಮಾತ್ರ ಬಳಸುವ ಉಳಿಗಳಾಗಿವೆ. ನೀರುಳಿ ಇದು ಕಟ್ಟಿಗೆಯಲ್ಲಿ ಗೆರೆ ಎಳೆಯಲು ಮಾತ್ರ ಬಳಕೆಯಾಗುತ್ತದೆ ಹಾಗೂ ಚಿರ್ಣ ಉಳಿಗಳು ದೇವರ ವಿಗ್ರಹಗಳ ಕೆತ್ತನೆಗೆ, ವಿನ್ಯಾಸಗಳನ್ನು ಮಾಡಲು ಈ ಉಳಿಗಳನ್ನು ಉಪಯೋಗಿಸಿ ತಯಾರಿಸಲಾಗುತ್ತದೆ. ಮೊನುಳಿ, ಚೌಕುಳಿ, ನೈಸ್ ಉಳಿ ಇತ್ಯಾದಿ ಶಿಲ್ಪಿಗಳಿಗೆ ಸೂಕ್ಷ್ಮ ಕೆಲಸಗಳನ್ನು ಮಾಡಲು ಬೇಕಾದ ಉಳಿಗಳಾಗಿವೆ. ಉಪಕರಣಗಳ ಹೆಸರುಗಳು ಪಾರಂಪರಿಕವಾದರೂ ಅವುಗಳ ಹೆಸರು ಬದಲಾಗುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಮಕ್ಪತ್ತ ಉಳಿ, ಇಂಗ್ರೇಜ್ ಉಳಿ ಇವುಗಳ ಬದಲಾಗಿ ಒಂದು ಇಂಚು ಉಳಿ, ಎರಡಿಂಚಿನ ಉಳಿ ಎಂದು ಪ್ರಸ್ತುತದಲ್ಲಿ ಬಳಕೆಯಿವೆ. ಹೀಗೆ ಹೊಸ ಹೊಸ ಪದಗಳು ಬರುವುದು ಮಾರ್ಪಾಡಾಗುವುದು ನಡೆಯುತ್ತಿರುತ್ತದೆ.

ಅಳತೆಗೆ ಬಳಸುವ ಉಪಕರಣಗಳು

ಅಳತೆಪಟ್ಟಿ :- ಅಳತೆಯ ಉಪಕರಣ, ಟೇಪು.

ಇಂಚು ಪಟ್ಟಿ :- ಅಳತೆಯ ಪಟ್ಟಿ.

ಮಟ್ಟಾಲಗಿ :- ಅಳತೆಗಾಗಿ ಬಳಸುವ ಉಪಕರಣ ಮಟ್ಲಿಗಿ, ಮಟ್ಟಲ್ಗೆ, ಮೂಲೆಮಟ್ಟ, ಇದು ಕಿಟಕಿಗಳ ಚೌಕಟ್ಟನ್ನು ಕೂಡಿಸಲು, ಹಲಗೆಗಳನ್ನು ಸಮಮಾಡಲು ಬಳಸುವ ಉಪಕರಣ. ಇದು ಲಂಬಕೋನದ ಆಕಾರದಲ್ಲಿರುತ್ತದೆ.

ಕ್ರಾಸ್ ಮಟ್ಟಲಿಗೆ :- ಬಾಗಿಲು, ಕಿಟಕಿ, ಹಲಗೆಗಳ ಮೂಲೆಯನ್ನು ವರ್ತುಲ ಮಾಡಲು ಉಪಯೋಗವಾಗುವ ಅಳತೆಯ ಉಪಕರಣ.

ಕೈವಾರ :- ಅಳತೆಯ ಉಪಕರಣ.

ಕತ್ತು :- ಕಟ್ಟಿಗೆಯಲ್ಲಿ ಅಳತೆ ಹಾಕಲು ಬಳಸುವ ಉಪಕರಣ.

ಲೇವಲ್ ಬಾಟಲಿ :- ಕಲ್ಲಿನ ಸಮತಟ್ಟನ್ನು ಅಳೆಯುವ ಆಧುನಿಕ ಉಪಕರಣ.

ರಸಮಟ್ಟ :- ಕಲ್ಲಿನ ಮಟ್ಟ ನೋಡಲು ಬಳಸುವ ಉಪಕರಣ.

ತೂಕದ ಗುಂಡು :- ಕಲ್ಲಿನ ಮಟ್ಟ ನೋಡಲು ಬಳಸುವ ಉಪಕರಣ.

ದಾರ :- ಅಳತೆಗಾಗಿ ಬಳಸುವ ವಸ್ತು.

ಅಡಿಕಡ್ಡಿ :- ಅಳತೆಯ ಉಪಕರಣ, ಪೂಟಿಪಟ್ಟಿ

ಆನೇ :- ತೂಕದ ಬಟ್ಟು ವಸ್ತುಗಳನ್ನು ತೂಗಲು ಉಪಯೋಗಿಸುವ ಉಪಕರಣ.

ಗುಂಜಿ :- ಗುಲಗಂಜಿಯ ಬೀಜ. ಬಂಗಾರ ತೂಕ ಮಾಡಲು ಬಳಸುವ ವಸ್ತು. ಗುಂಜಿಬೀಜ, ಗುಲ.

ತಂತಿ :- ಆಭರಣಗಳ ಸುತ್ತಳತೆ ಅಳೆಯಲು ಬೇಕಾಗುವ ಲೋಹದ ತಂತಿ.

ಪಾವಲಿ :- ಬೆಳ್ಳಿ, ಬಂಗಾರ ತೂಕಮಾಡುವ ಹಳೇ ನಾಣ್ಯ.

ರೂಪಾಯಿ :- ಬೆಳ್ಳಿ, ಬಂಗಾರ ತೂಕಮಾಡಲು ಬಳಸುವ ಹಳೆಯ ನಾಣ್ಯ.

ವರಹ :- ಹಳೇಯ ನಾಣ್ಯ. ತೂಕಮಾಡಲು ಉಪಯೋಗಿಸುತ್ತಾರೆ.

ತಕ್ಕಡಿ :- ಬಂಗಾರ, ಬೆಳ್ಳಿ, ತೊಗಲು ಉಪಯೋಗಿಸುವ ಸಾಧನ. ಕಾಟ, ತ್ರಾಸು, ತುಲ, ನಾರಾಚಿ.

ಉಂಗುರದ ಸ್ಕೇಲ್ :- ಉಂಗುರದ ಅಳತೆಗೆ ಬಳಸುವ ಪ್ಲಾಸ್ಟಿಕ್ ಮಾದರಿಗಳು.

ಕಡ್ಡಿ :- ಕಲ್ಲಿನ ಅಳತೆಗಾಗಿ ಬಳಸುವ ಕಡ್ಡಿ. ಗಜಕೋಲು.

ಮುಕ್ಕಂಡಿದಾರ :- ನಾಲ್ಕುಕಡ್ಡಿಗಳನ್ನು ಹೊಂದಿರುವ ದಾರದ ಉಪಕರಣ. ಕಲ್ಲಿನ ಸಮತಟ್ಟ ನೋಡಲು ಬಳಕೆಯಾಗುತ್ತದೆ.

ಕೈಚರಿಕೆ :- ನಕ್ಷೆ ಮಾಡಲು ಬೇಕಾದ ಉಪಕರಣ.

ಸುತ್ತಿಗೆ ಉಪಕರಣದ ವಿಧಗಳು

ಚಮಟಿಗೆ :- ವಸ್ತುಗಳನ್ನು ಬಡಿಯಲು ಬೇಕಾದ ದೊಡ್ಡ ಸುತ್ತಿಗೆ. ಚಮ್ಮಟಿಕೆ, ಚಮಟ್ಕಿ, ಚಮಟ್ಗೆ, ದೊಡ್ಡಸುತ್ತಿಗೆ, ಘನ.

ಸುತ್ತಿಗೆ :- ಮರದ ಮೇಲೆ ಉಳಿಯಿಂದ ಕೆಲಸ ಮಾಡುವಾಗ ಉಳಿಗೆ ಮೇಲಿನಿಂದ ಬಡಿಯಲು, ಕಟ್ಟಿಗೆಯಲ್ಲಿ ಮೊಳೆ ಬಡಿಯಲು, ಉಳಿಗಳನ್ನು ಕಲ್ಲಿನ ಮೇಲೆ ಬಡಿಯಲು ಬಳಸುವ.

ಜುಟ್ಟುಸುತ್ಗೆ :- ಮೊಳೆ ಮುಂತಾದವನ್ನು ಕೀಳುವುದಕ್ಕೆ ಉಪಯೋಗಿಸುವ ಉಪಕರಣ. ಸೀಳಿದ ಬಾಗು ಕೊನೆಯುಳ್ಳ ಒಂದು ಬಗೆಯ ಸುತ್ತಿಗೆ.

ಉಳಿಬಾಯಿಸುತ್ತಿಗೆ :- ಒಂದು ಕಡೆ ಚೂಪಾಗಿದ್ದು ಒಂದು ಕಡೆ ಚೌಕಕಾರವಾಗಿರುವ ಸುತ್ತಿಗೆ.

ಕಟ್ಟಿಗೆ ಸುತ್ತಿಗೆ :- ಬಂಗಾರ, ಬೆಳ್ಳಿಯಿಂದ ಮೂರ್ತಿ ವಸ್ತುಗಳನ್ನು ತಯಾರಿಸುವಾಗ ಆಕೃತಿಗೆ ಧಕ್ಕೆಯಾಗದಂತೆ ಬಡಿಯಲು ಬಳಸುವ ಮರದ ಸುತ್ತಿಗೆ.

ಗುಂಡು ಬಾಯಿಸುತ್ತಿಗೆ:- ಬಾಯಿ ಗುಂಡಾಗಿರುವ ಸುತ್ತಿಗೆ.

ಚೂಪುಬಾಯಿಸುತ್ತಿಗೆ :- ಸೂಕ್ಷ್ಮ ಕೆಲಸಗಳಿಗೆ ಬೇಕಾದ ಚೂಪಾದ ಸುತ್ತಿಗೆ.

ಕೈ ಸುತ್ತಿಗೆ :- ಕಲ್ಲಿನಲ್ಲಿ ಸೂಕ್ಷ್ಮ ಕೆತ್ತನೆ ಕೆಲಸಗಳನ್ನು ಮಾಡುವಾಗ ಚಾಣ, ಉಳಿ, ಲೋಹ ಬಡಿಯಲು ಬಳಸುವ ಸಣ್ಣ ಸುತ್ತಿಗೆ.

ಪಟ್ಟೆ ಸುತ್ತಿಗೆ :- ಮೂರ್ತಿ ಅಥವಾ ವಿಗ್ರಹದ ಪಕ್ಕದ ಅಂಚಿನ ಕೆಲಸಗಳಿಗೆ ಬಳಕೆಯಾಗುವ ಉಪಕರಣ.

ಚೌಕ್ಸುತ್ತಿಗೆ :- ಸುತ್ತಿಗೆಯ ಒಂದು ಬಗೆ.

ಕಿರ್ಗಣ್ ಸುತ್ತಿಗೆ :- ಸುತ್ತಿಗೆಯ ಒಂದು ಬಗೆ.

ಕೀಚ್ ಸುತ್ತಿಗೆ :- ಮೂರ್ತಿ ತಯಾರಿಸುವಾಗ ಬೇಕಾದ ಒಂದು ಬಗೆಯ ಸುತ್ತಿಗೆ.

ಕೊಂಬಿನ್ಸುತ್ತಿಗೆ :- ಕಂಚುಗಾರಿಕೆಯ ಕೆಲಸದ ಮೊದಲ ಹಂತದಲ್ಲಿ ಬೇಕಾಗುವ ಸುತ್ತಿಗೆ.

ಗುಬ್ಬಣ್ಸುತ್ತಿಗೆ :- ರೇಕಿನ ಕೆಲಸ, ತಗಡಿನ ಕೆಲಸ ಮಾಡಲು ಬೇಕಾದ ಸುತ್ತಿಗೆ.

ಬಾಗದಾರಸುತ್ತಿಗೆ :- ಕೊಡ ಸರಿ ಮಾಡಲು ಬೇಕಾದ ಸುತ್ತಿಗೆ.

ಮಟ್ಗೆಸುತ್ತಿಗೆ :- ಸುತ್ತಿಗೆಯ ಒಂದು ವಿಧಾನ.

ಚಾಣ ಉಪಕರಣದ ವಿಧಗಳು

ಚಾಣ :- ಲೋಹ ಕತ್ತರಿಸಲು, ಕಲ್ಲು ಕೆತ್ತಲು ಕಚ್ಚು (ಗುರುತು) ಹಾಕಿಕೊಳ್ಳಲು. ಉಪಯೋಗಿಸುವ ಉಪಕರಣ. ಚಾನ, ಚಿನೆ, ಚೀರಣ.

ಗೋಲ್ಚಾಣ :- ಕಬ್ಬಿಣದಲ್ಲಿ ರಂಧ್ರಮಾಡಲು ಬೇಕಾದದ ಉಪಕರಣ. ದುಂಡುಚಾನ, ಪಂಚ್, ಸುರುಳು.

ಅಗಲಬಾಯಿ ಚಾಣ :- ಚಾಣದ ಒಂದು ಬಗೆ.

ಹಲ್ಲಿನ ಚಾಣ :- ಹಲ್ಲುಗಳಿಂದ ಕೂಡಿದ ಚಾಣ.

ಒರಟು ಚಾಣ :- ಒರಟಾಗಿ ಕೆತ್ತುವ ಚಾಣ.

ಗೆರೆಕಟ್ಟುವ ಚಾಣ :- ಶಿಲ್ಪದ ಮೇಲೆ ಗೆರೆಮಾಡುವ ಚಾಣ.

ಚೌಕ್ಚಾಣ :- ಚೌಕಕಾರದ ಚಾಣ.

ಜಿನುಗುಚಾಣ :- ಚಾಣದಲ್ಲಿನ ಒಂದು ಬಗೆ.

ನೈಸ್ ಚಾಣ :- ನಯಗೊಳಿಸುವ ಚಾಣ.

ದೊಡ್ಡ ಚಾಣ	:-	ನಯಗೊಳಿಸುವ ಚಾಣ.
ಪಾಯಿಂಟ್ ತಟ್ಟುವ ಚಾಣ	:-	ತುದಿಗಳನ್ನು ತಟ್ಟುವ ಚಾಣ
ರಫ್ ಚಾಣ	:-	ಚಾಣದ ಒಂದು ಬಗೆ.

ಉಳಿಯ ಉಪಕರಣದ ವಿಧಗಳು

ಉಳಿ	:-	ಇದರ ಮುಂಭಾಗ ಉಕ್ಕಿನಿಂದ ಕೂಡಿದ್ದು ಹರಿತವಾಗಿರುತ್ತದೆ. ಇದಕ್ಕೆ ಕಟ್ಟಿಗೆಯ ಹಿಡಿಕೆ ಇರುತ್ತದೆ. ಕಟ್ಟಿಗೆಯಲ್ಲಿ ವಿನ್ಯಾಸ ಮಾಡಲು, ಬೇಕಾದ ಆಕಾರಕ್ಕೆ ಕತ್ತರಿಸಲು, ರಂಧ್ರ ಮಾಡಲು ಬೇಕಾದ ಉಪಕರಣ.
ಅಗಲ್ಬಾಯಿ ಉಳಿ	:-	ಉಳಿಯ ಒಂದು ಬಗೆ, ತಟ್ಟುಳಿ.
ಅಟಕಬಾಯಿ ಉಳಿ	:-	ಉಳಿಯ ಒಂದು ಬಗೆ.
ಅರ್ಧಇಂಚಿನ ಉಳಿ	:-	ಉಳಿಯ ಒಂದು ಬಗೆ.
ಉಗುರುಳಿ	:-	ಹೆಬ್ಬೆರಳಿನ ಆಕಾರದ ಉಳಿ.
ಉಜ್ಜುಳಿ	:-	ಉಳಿಯ ಒಂದು ಬಗೆ.
ಕಡೆ ಉಳಿ	:-	ಉಳಿಯ ಒಂದು ಬಗೆ.
ಕಿರುಳಿ	:-	ಚಿಕ್ಕ ಉಳಿ, ಕೈಯುಳಿ.
ಕೀಲುಳಿ	:-	ಒಂದು ಬಗೆಯ ಉಳಿ, ಕೂಲುಳಿ, ಗಾಡಿಉಳಿ, ಕೂರುಳಿ.
ಗೀರುಳಿ	:-	ಗೆರೆ ಎಳೆಯುವ ಉಳಿ.
ಚೀರ್ಣಉಳಿ	:-	ಸಣ್ಣ ಉಳಿ, ಸೂಕ್ಷ್ಮ ಕೆತ್ತನೆಗೆ ಬಳಸಲಾಗುತ್ತದೆ.
ದೋಣಿ ಉಳಿ	:-	ಮರದಲ್ಲಿ ದೋಣಿ ಆಕಾರ ತೆಗೆಯಲು ಬೇಕಾದ ಉಳಿ, ಡೊಪ್ಪಿಉಳಿ.
ಪಟ್ಟುಳಿ	:-	ಚಿತ್ರದ ಕೆಲಸಕ್ಕೆ ಬೇಕಾದ ಉಳಿ.
ಸೀಮೆ ಉಳಿ	:-	ಒಂದು ಬಗೆಯ ಉಳಿ.
ಕೀಚುಳಿ	:-	ಲೋಹದ ಕೆಲಸದಲ್ಲಿ ಯಾವುದೇ ವಸ್ತು ವಿಗ್ರಹ ಕೆತ್ತಲು ಕೆರೆಯಲು ಬೇಕಾದ ಉಪಕರಣ.

ಮೊಳೆಯ ಉಪಕರಣದ ವಿಧಗಳು

ಮೊಳೆ	:-	ಕಂಚಿನಿಂದ ವಸ್ತು ವಿಗ್ರಹ ತಯಾರಿಸುವಾಗ ಕುಳಿ ಹಾಕಲು ಆಕಾರ ತರಲು, ಕೆರೆಯಲು ಬಳಸುವ ವಿವಿಧ ರೂಪ ಆಕಾರದ ವಿವಿಧ ಹಂತಗಳಲ್ಲಿ ಬಳಕೆಯಾಗುವ ಉಪಕರಣ.
ಉಗುರ್ಮೊಳೆ	:-	ಉಗುರು ಆಕಾರದ ಮೊಳೆ.

ಉಬ್ಬೊಳೆ :- ವಿಗ್ರಹ, ವಸ್ತುಗಳಲ್ಲಿ ಉಬ್ಬು ತರಲು ಬಳಸುವ ಉಪಕರಣ.

ಕಣ್ಮೊಳೆ :- ವಿಗ್ರಹದ ಕಣ್ಣಿನ ಕೆಲಸದಲ್ಲಿ ಬಳಕೆಯಾಗುವ ಮಳೆ.

ಕಚ್ಚಿನ ಮೊಳೆ :- ಮೂರ್ತಿಗಳಿಗೆ ವಿನ್ಯಾಸ ಮಾಡಲು ತಗಡು ಕತ್ತರಿಸುವಾಗ ಕಚ್ಚು ಹಾಕಿಕೊಳ್ಳಲು ಬಳಸುವ ಮೊಳೆ.

ಕೆತ್ತೊಮೊಳೆ :- ಕೆತ್ತಲು ಬೇಕಾಗುವ ಮೊಳೆ.

ಕೋರೆಮಟ್ಗೆಮೋಳೆ :- ವಿಗ್ರಹ ತಯಾರಿಕೆಯಲ್ಲಿ ಬೇಕಾಗುವ ಮೊಳೆ.

ಗುಬ್ಬಿ ಮೊಳೆ :- ವಿಗ್ರಹ ತಯಾರಿಕೆಯಲ್ಲಿ ಬೇಕಾಗುವ ಮೊಳೆ.

ಗೆರೆ ಮೊಳೆ :- ಗೆರೆ ಹಾಕಿಕೊಳ್ಳಲು ಬೇಕಾದ ಮೊಳೆ.

ಜಡಿಮೊಳೆ :- ಸಮಾನಾಂತರ ಗೆರೆ ಹಾಕಲು ಬಳಸುವ ಮೊಳೆ.

ಜೋಡಿರೇಕೆ ಮೊಳೆ :- ತಗಡಿನ ಮೇಲೆ ರೇಖೆ ಹಾಕಿಕೊಳ್ಳುವ ಮೊಳೆ.

ದುಂಡ್ಮೊಳೆ :- ಗುಮ್ಮಾಕಲು ಅಂದರೆ ಉಬ್ಬುತಗ್ಗು ಮಾಡಲು ಬೇಕಾದ ಮೊಳೆ.

ಪ್ಯಾರೆ ಮೊಳೆ :- ವಿಗ್ರಹ ತಯಾರಿಕೆಯಲ್ಲಿ ಬೇಕಾದ ಒಂದು ಬಗೆಯ ಮೊಳೆ.

ಮಟ್ಗೆ ಮೊಳೆ :- ಮೂರ್ತಿ ತಯಾರಿಕೆಯಲ್ಲಿ ಬಳಸುವ ಉಪಕರಣ.

ಮದ್ಮಳೆ :- ಮೂರ್ತಿ ತಯಾರಿಕೆಯಲ್ಲಿ ಬಳಸುವ ಉಪಕರಣ.

ಮುತಾಕಿಮೊಳೆ :- ಮೂರ್ತಿ ತಯಾರಿಕೆಯಲ್ಲಿ ಬಳಸುವ ಉಪಕರಣ.

ರೇಖೆ ಮೊಳೆ :- ರೇಖೆ, ನಕಾಶೆ ಹಾಕಿಕೊಳ್ಳುವ ಮೊಳೆ.

ಸಳುವಮಟ್ಗಿಮಳೆ :- ವಿಗ್ರಹ ತಯಾರಿಕೆಯಲ್ಲಿ ಬೇಕಾದ ಮೊಳೆ.

ಸೊನ್ನೆ ಮಳೆ :- ವಿಗ್ರಹ ತಯಾರಿಕೆಯಲ್ಲಿ ಬಳಸುವ ಮೊಳೆ.

ಕಂಚಿನ್ಗಡ್ಡೆ :- ಆಭರಣಗಳ, ಸಾಮಾಗ್ರಿಗಳ ಮಾದರಿ ತಯಾರಿಸಲು ಬೇಕಾದ ವಸ್ತು.

ಕಂಚಿನ ಮೊಳೆ :- ಆಭರಣಗಳ ವಿನ್ಯಾಸ ಮಾಡಲು ಕೆತ್ತಲು ಬೇಕಾದ ಉಪಕರಣ.

ಗ್ರಿಪಿಂಗ್ ಮೊಳೆ :- ಲೋಹದಲ್ಲಿ ಕೆತ್ತನೆ ಕೆಲಸ ಮಾಡಲು ಬೇಕಾದ ಉಪಕರಣ.

ಗೆರೆ ಮೊಳೆ :- ಲೋಹದ ಮೇಲೆ ಗೆರೆ ಹಾಕಿಕೊಳ್ಳುವ ಮೊಳೆ.

ತಾಳಿಕಟ್ಟು ಮೊಳೆ :- ಮಾಂಗಲ್ಯದ ಆಕಾರ ಮಾಡಲು ಬೇಕಾದ ವಸ್ತು.

ಪೇಜಿನ್ ಮೊಳೆ :- ಆಭರಣಗಳ ತಿರುಪಿನಲ್ಲಿ ದಾರಿ ಮಾಡುವ ಉಪಕರಣ. ಪೇಜ್ ಪಟ್ಟಿ.

ಗಾಳಿ ಒದಗಿಸುವ ಉಪಕರಣದ ವಿಧಗಳು

ತಿದಿ :- ಕುಲುಮೆಗೆ ಗಾಳಿ ಒದಗಿಸುವ ಚರ್ಮದ ಯಂತ್ರ.

ಬ್ಲೋರ್ :- ಕೈಯಿಂದ ತಿರುಗಿಸಿ ಕುಲುಮೆಗೆ ಗಾಳಿ ಒದಗಿಸುವ ಆಧುನಿಕ ಯಂತ್ರ. ಬೋರು, ಪಂಕ.

ಗಾಳಿ ಚಕ್ರ :- ಅಗ್ಗಿಷ್ಟಿಕೆಗೆ ಗಾಳಿ ಒದಗಿಸುವ ಯಂತ್ರ.

ಕೊಳವೆ :- ಬಂಗಾರ ಕಾಯಿಸುವ ಅಗ್ಗಿಷ್ಟಿಕೆಗೆ ಗಾಳಿ ಊದಲು ಬೇಕಾದ ಉಪಕರಣ, ಬಂಕ್ನಳಿಗೆ.

ಚಕ್ಕದ ತಿದಿ :- ಹಿಂದೆ ಅಗ್ಗಿಷ್ಟಿಕೆಗೆ ಗಾಳಿ ಒದಗಿಸಲು ಬಳಸುತ್ತಿದ್ದ ಚರ್ಮದ ವಸ್ತು.

ದೀಪಕೊಳವೆ :- ಸಣ್ಣ ಆಭರಣಗಳ ತಯಾರಿಕೆಯಲ್ಲಿ ದೀಪದಲ್ಲಿ ಕಾಯಿಸುವಾಗ ದೀಪಕ್ಕೆ ಗಾಳಿಹಾಕುವ ಉಪಕರಣ.

ವಂಕಕೊಳವೆ :- ಸಣ್ಣ ಆಭರಣಗಳ ತಯಾರಿಕೆಯ ಸಂದರ್ಭದಲ್ಲಿ ದೀಪದಿಂದ ಕಾಯಿಸುವಾಗ ದೀಪಕ್ಕೆ ಗಾಳಿಹಾಕುವ ಉಪಕರಣ.

ಆಸರೆಯಾಗುವ ಉಪಕರಣಗಳು

ಕುಲುಮೆ :- ಕಮ್ಮಾರರು ಕಬ್ಬಿಣ ಕೆಲಸ ಮಾಡಲು ಬೆಂಕಿ ಮಾಡಿಕೊಳ್ಳುವ ಒಲೆ.

ಅಗ್ಗಿಷ್ಟ :- ಅಕ್ಕಸಾಲಿಗರು ಚಿನ್ನ, ಬೆಳ್ಳಿ, ಲೋಹ, ಆಭರಣ ಕಾಯಿಸುವ, ಕರಗಿಸುವ ಒಲೆ. ಅಗ್ಗಷ್ಟಿ, ಅಗ್ಗಿಷ್ಟಿಗೆ, ಅಗಿಟಿಗಿ, ಕುಪ್ಪಟೆ, ಕುಪ್ಪಡಿ, ಕುಪ್ಪಡಿಗೆ, ಕುಮಟಿ.

ಕಿರಗ್ಗಿಷ್ಟ :- ಬಂಗಾರ ಕಾಯಿಸುವ ಚಿಕ್ಕ ಒಲೆ.

ಕೊಡ್ತಿ :- ಕಟ್ಟಿಗೆಯ ಉಪಕರಣ. ಇದನ್ನು ಹುಣಸೆ ಮರದ ಕೆಚ್ಚಿನ ಭಾಗದಿಂದ ತಯಾರಿಸಿದ ಉಪಕರಣ ಬಡಗಿ ಕೆಲಸ ಮಾಡುವಾಗ ಉಳಿಯ ಮೇಲೆ ಏಟು ಹಾಕುವುದಕ್ಕೆ ಬಳಸಲಾಗುತ್ತದೆ. ಕೊಡಂತಿ, ಕೊಡಂತಿ, ಕೊಡತಿ, ಕೊಡ್ತಿನ್ನಿ.

ವತ್ತಡೆ ಮಣೆ :- ತೊಡೆಗೆ, ವಿಗ್ರಹಕ್ಕೆ ಆದಾರವಾಗಿಟ್ಟುಕೊಂಡು ಕೆಲಸ ಮಾಡುವ ಮಣೆ.

ಸನ್ನೆಕೋಲು :- ಬಂಡಿಯ ಹಳಿ ಬೆಸೆಯುವಾಗ ನಿಲ್ಲಿಸಲು ಉಪಯೋಗಿಸುವ ವಸ್ತು.

ನಾಯಿ :- ಬಂಡಿಯ ಹಳಿ ಎಳೆದು ಕೂರಿಸಲು ಬೇಕಾದ ಉಪಕರಣ.

ಡೋಣಿ :- ಕಾದ ಕಬ್ಬಿಣ ಆರಿಸಲು ಅಥವಾ ಕಬ್ಬಿಣಕ್ಕೆ ನೀರು ಕುಡಿಸಲು ನೀರು ತುಂಬಿಕೊಳ್ಳುವ ವಸ್ತು.

ಅಡಿಗಲ್ಲು :- ಲೋಹದ ವಸ್ತುಗಳನ್ನು ಇಟ್ಟು ಬಡಿಯಲು ಆಸರೆಯಾಗಿ ಉಪಯೋಗಿಸುವ ಕಬ್ಬಿಣದ ಗಟ್ಟಿ. ಅದ್ದಾಣೆ, ಕುರಗ, ಕೋನಶಿಲಿ, ಅಡ್ಗಲ್ ಅದ್ದಗಣೆ, ಅದ್ದುಗಡೆ, ಆಡೆ, ಪಣೆ, ಪನ್ನು.

ಅಡಿಬಡ್ಡಿ :- ಬಡಗಿಗಳು ಕೆಲಸ ಮಾಡುವಾಗ ಆಧಾರವಾಗಿ ಕೆಳಗೆ ಇಟ್ಟುಕೊಳ್ಳುವ ಕಟ್ಟಿಗೆಯ ತುಂಡು. ಅಡೆ, ಕಚ್ಚುಕೊರಡು, ಕಚ್ಚುಗೊಲ್ಲ.

ಅಸಂಗಿ :- ಒಡವೆ, ವಸ್ತುಗಳ ತಗ್ಗನ್ನು ಎತ್ತುವುದಕ್ಕಾಗಿ ಬಳಸುವ ಉಪಕರಣ.

ಕಂಚಿನ್ನಕಡ್ಡಿ :- ತಾಳಿಯಲ್ಲಿ ತಗ್ಗುಮಾಡಲು ಬೇಕಾದ ಉಪಕರಣ.

ಕಂಚಿನ್ಗಡ್ಡೆ	:-	ಆಭರಣಗಳ, ಸಾಮಾಗ್ರಿಗಳ ಮಾದರಿ ತಯಾರಿಸಲು ಬೇಕಾದ ವಸ್ತು.
ಕಂಬಚ್ಚು	:-	ಬೆಳ್ಳಿ, ಚಿನ್ನದ ಕೆಲಸದಲ್ಲಿ ಪದಾರ್ಥಗಳಿಗೆ ರೂಪಕೊಡಲು ತಂತಿ ಎಳೆದು ಉದ್ದಮಾಡಲು ಬಳಸುವ ರಂಧ್ರಗಳುಳ್ಳ ಲೋಹದ ಪಟ್ಟಿ.
ತಿದ್ದು ಗುಂಡು	:-	ಕೊಡದ ಇತರೆ ಪಾತ್ರೆಗಳ ತಗ್ಗೆತ್ತಲು ಬೇಕಾದ ಉಪಕರಣ.
ತಿಲೆ ಕಬ್ಬಿಣ	:-	ಲೋಹರಸ ಬಿಡಲು ಸೇರಿಸಲು ಬೇಕಾದ ವಸ್ತು.
ಹಾರಿ	:-	ಕಬ್ಬಿಣ ಗೋಲ್ (ಉಂಡೆ) ಮಾಡಲು ಬೇಕಾದ ಉಪಕರಣ.
ಕೊಡ್ಲಿಹಾರಿ	:-	ಕೊಡಲಿಯಲ್ಲಿ ರಂಧ್ರ ಮಾಡಲು ಬೇಕಾದ ಉಪಕರಣ.
ಗ್ರಾಂಪ್	:-	ವಸ್ತುವನ್ನು ಹಿಡಿದುಕೊಳ್ಳಲು ಬಳಸುವ ಉಪಕರಣ. ವೈಸ್, ಕ್ಲಾಂಪ್, ರಿಗ್ಸ್.
ತುಬಾರಿ	:-	ಕೊಡಲಿ, ಗಾಡಿ ಚಕ್ರದ ಉಲ್ಲಾಣಿ ತಯಾರಿಸಲು ಬೇಕಾದ ಉಪಕರಣ.
ಸ್ಕ್ರೂಡ್ರೈವರ್	:-	ಕಟ್ಟಿಗೆಯಲ್ಲಿ ಸ್ಕ್ರೂ ಅನ್ನು ಹಾಕಿ ತಿರುವಲು ಬೇಕಾದ ಉಪಕರಣ.
ಬಕ್ಕಸಕೋಲು	:-	ಕುಲುಮೆಯಲ್ಲಿ ಬೆಂಕಿ ಸರಿಪಡಿಸಲು, ಇದ್ದಿಲು ಕೆದಕಲು, ಕಬ್ಬಿಣ ಕಾದಿದೆಯೋ ಇಲ್ಲೊ ಎಂದು ನೋಡಲು ಬಳಸುವ ಉಪಕರಣ. ಬಸ್ಗೋಲ, ಬೆಸೆಕೋಲು, ಬರಗಲ್ಲು,
ಕರ್ವಾಯಿ	:-	ತಗಡಿನಿಂದ ವಿಗ್ರಹ, ಪಾತ್ರೆ ಯಾವುದೇ ವಸ್ತು ತಯಾರಿಸುವಾಗ ಪೊಳ್ಳಾದ ವಸ್ತುಗಳ ಒಳಗಡೆಯಿಂದ ಉಬ್ಬೆತ್ತಲು ಸರಿಮಾಡಲು ನೆಲದಲ್ಲಿ ನೆಟ್ಟಿರುವ ಹಾರೆಯಂತಹ ವಸ್ತು.
ಗುಂಡುಕರ್ವಾಯಿ	:-	ಕರ್ವಾಯಿಯ ಒಂದು ವಿಧ.
ಡೊಂಕುಕರ್ವಾಯಿ	:-	ಡೊಂಕಾದ ಕರ್ವಾಯಿ.
ಕತ್ರೂಸಿ	:-	ಮರದಲ್ಲಿ ಮೊಳೆ ಹೊಡೆಯಲು, ರಂಧ್ರ ಮಾಡಿಕೊಳ್ಳಲು ಉಳಿ ರೀತಿ ಇರುವ ಉಪಕರಣ.

ಕಟ್ಟಿಗೆ ಕೊಯ್ಯಲು ಬಳಸುವ ಉಪಕರಣಗಳು

ಗರಗಸ	:-	ಮರಕೊಯ್ಯಲು, ಲೋಹ ಕೊಯ್ಯಲು, ಕಲ್ಲು ಕೊಯ್ಯಲು ಬೇಕಾದ ಹಲ್ಲುಗಳಿರುವ ಉಪಕರಣ. ರಂಪ, ಕರ್ಕಸ.
ಕೈಗರಗಸ	:-	ಒಬ್ಬ ವ್ಯಕ್ತಿಯು ಬಳಸಬಹುದಾದ ಸಣ್ಣ ಕರ್ಕಸ.
ಜಮಾಗರಗಸ	:-	ಕರ್ಕಸದ ಒಂದು ಬಗೆ.
ಮರಕೊಯ್ಯುವ ಯಂತ್ರ	:-	ದೊಡ್ಡ ದೊಡ್ಡ ಮರಗಳನ್ನು ಕೊಯ್ಯುಲಿಕ್ಕೆ ಉಪಯೋಗಿಸುವ ಆಧುನಿಕ ಯಂತ್ರ, ಸಾಮಿಲ್.

ಕಟ್ಟಿಗೆ ಕೆತ್ತಲು ಬೇಕಾದ ಉಪಕರಣಗಳು

ಬಾಚಿ :- ಮರ ಕೆತ್ತುವ ಉಪಕರಣ.

ಕೈಬಾಚಿ :- ಕುಳಿತು ಮರ ಕೆತ್ತಬಹುದಾದ ಸಣ್ಣ ಬಾಚಿ.

ಡೊಂಕುಬಾಚಿ :- ಬಾಚಿಯ ಒಂದು ವಿಧ.

ದೊಡ್ಬಾಚಿ :- ಮರವನ್ನು ನಿಂತು ಕೆತ್ತುಬಹುದಾದ ದೊಡ್ಬಾಚಿ.

ರಂಧ್ರ ಮಾಡಲು ಬೇಕಾದ ಉಪಕರಣಗಳು

ಆಗ್ರ :- ಮರದಲ್ಲಿ ರಂಧ್ರ ಮಾಡಲು ಬೇಕಾದ ಉಪಕರಣ.

ಬೈರ್ಗಿ :- ಕಟ್ಟಿಗೆಯಲ್ಲಿ ತೂತು ತೆಗೆಯಲು ಬಳಸುವ ಸಾಧನ. ಇದು ಕಬ್ಬಿಣದ ಸಲಾಕೆಯಂತಿದ್ದು ಮುಂಭಾಗ ಹಾವಿನಂತೆ ಮುರಿಗಿಯಾಗಿರುತ್ತದೆ.

ಕೈ ಬೈರ್ಗಿ :- ಚಿಕ್ಕ ಬೈರಿಗೆ.

ಜಿಗ್ರ ಬೈರಿಗೆ :- ಒಂದು ಬಗೆಯ ಬೈರಿಗೆ.

ಡ್ರಿಲ್ ಮೀಷನ್ :- ಕಟ್ಟಿಗೆಯಲ್ಲಿ ರಂಧ್ರಕೊರೆಯಲು ಬಳಸುವ ಆಧುನಿಕ ಯಂತ್ರ.

ಹಿಡಿಸ್ಕಾಳು :- ಸಣ್ಣ ಸಣ್ಣ ರಂಧ್ರ ಮಾಡಲು ಬೇಕಾದ ಉಪಕರಣ.

ಅರ ಉಪಕರಣದ ವಿಧಗಳು

ಅರ :- ಕಬ್ಬಿಣದಿಂದ ತಯಾರಿಸಿದ ವಸ್ತುಗಳನ್ನು ಹರಿತ ಮಾಡುವ ಉಪಕರಣ. ಕಾನಾಸ್, ಕರ್ಕಾ.

ಕರ್ಕಸ ತಿಕ್ಕ ಅರ :- ಗರಗಸದ ಹಲ್ಲು ಹರಿತಗೊಳಿಸಿಕೊಳ್ಳಲು ಬೇಕಾದ ಉಪಕರಣ.

ಬಾಳ ಅರ :- ಅರದ ಒಂದು ಬಗೆ.

ದುಂಡು ಅರ :- ಅರದ ಒಂದು ಬಗೆ.

ಚೌಕ ಅರ್ಣ :- ಚೌಕಕಾರದ ಅರ.

ಗುಂಡರ್ಣ :- ಅರದ ಒಂದು ಬಗೆ

ಡೊಪ್ಪಿ ಅರ್ಣ :- ಅರದ ಒಂದು ಬಗೆ.

ಮೂರೇಣಿ ಅರ್ಣ :- ಒಂದು ಬಗೆಯ ಅರ.

ಅಪ್ಪಪೈಲರ :- ಅರದ ಒಂದು ಬಗೆ.

ಅಫ್‌ರೌಂಡರ ಅರ :- ಅರ್ಧ ದುಂಡಾದ ಅರ.

ಉಚ್ಚಾರ :- ಚಪ್ಪಟೆಯಾದ ಅರ.

ಗುಂಡರ :- ಪೊಳ್ಳಾದ ಭಾಗದಲ್ಲಿ ಉಪಯೋಗಿಸುವ ಅರ.

ಡೊಪ್ಪಿ ಅರ :- ಚಪ್ಪಟೆ ಅರ.

ಚೌನ್ಸಪಟ್ಟಿ :- ವಸ್ತುವಿಗ್ರಹಗಳನ್ನು ನಯಗೊಳಿಸಲು ಬೇಕಾದ ವಸ್ತು.

ಕಣ್ಸಾಲಕೆ :- ಲೋಹಕ್ಕೆ ಹೊಳಪು ಬರುವಂತೆ ಉಜ್ಜಲು ಬಳಸುವ ವಸ್ತು.

ಕುಂಚ :- ಮೂರ್ತಿಗೆ ಬಣ್ಣ ಬಳಿಯಲು ಬಳಸುವ ಕುಂಚ.

ಪೇಪರ್ ಮಿಷನ್ :- ನಯಗೊಳಿಸಲು ಉಪಯೋಗಿಸುವ ಆಧುನಿಕ ಯಂತ್ರ.

ಇಕ್ಕಳ ಉಪಕರಣದ ವಿಧಗಳು

ಇಕ್ಕಳ :- ಕಾಯ್ದು ಆಭರಣ, ವಸ್ತು ಎತ್ತಿಕೊಳ್ಳಲು ಹಾಗೂ ಹಿಡಿದುಕೊಳ್ಳಲು ಬೇಕಾದ ಉಪಕರಣ. ಇರ್ಕುಳ, ಮನಗಾವು, ಇಕ್ಕ, ಪಕ್ಕಡ.

ಕಪ್ಪಿಕ್ಳ :- ವಸ್ತು ದುಂಡಗೆ ಮಾಡುವಾಗ ಬಳಕೆಯಾಗುವ ಉಪಕರಣ.

ಕೊಕ್ಕೆ ಇಕ್ಳ :- ಲೋಹವನ್ನು ಕಡಿಯುವಾಗ ಚಾಣ ಹಿಡಿದುಕೊಳ್ಳಲು ಬಳಸುವ ಇಕ್ಕಳ

ಜಗ್ಗೆ ಇಕ್ಳ :- ಬಂಡಿಗಾಲಿಗೆ ಹಳಿಯನ್ನು ಹಾಕುವಾಗ ಗಾಲಿಗೆ ಎಳೆದು ಕೂರಿಸಲು ಬೇಕಾದ ಇಕ್ಕಳ

ಡೊಂಕ್ಕಿಳ :- ವಸ್ತುಗಳನ್ನು ಹೊರಳಾಡಿಸಿ ಬಡಿಯಲು ಹಿಡಿದುಕೊಳ್ಳುವ ಇಕ್ಕಳ.

ವಂಪಿಕ್ಳ :- ಕೊಡಲಿ ತಯಾರಿಸುವಾಗ (ಅಂದರೆ ತುಂಬಾರಿಗಳನ್ನು ತಿದ್ದುವಾಗ) ಹಿಡಿದುಕೊಳ್ಳಲು ಬಳಸುವ ಇಕ್ಕಳ.

ಹಲ್ಲು ಇಕ್ಳ :- ಇಕ್ಕಳದ ಒಂದು ಬಗೆ.

ಲೋವೆ ಇಕ್ಳ :- ಇಕ್ಕಳದ ಒಂದು ಬಗೆ.

ಸಾದ ಇಕ್ಳ :- ಇಕ್ಕಳದ ಒಂದು ಬಗೆ.

ರಸವಿಕ್ಳ :- ಇಕ್ಕಳದ ಒಂದು ಬಗೆ.

ಚಿಮ್ಟ :- ಸಣ್ಣ ವಸ್ತುಗಳನ್ನು ಹಿಡಿಯಲು ಬಳಸುವ ಉಪಕರಣ. ಶ್ರಾವಣ, ಸವಣ.

ತಂಡ್ಸ :- ವಸ್ತುಗಳನ್ನು ಹಿಡಿದುಕೊಳ್ಳುವ ಉಪಕರಣ, ತಾಂಡಾಸ್.

ಕುಸರಿ ಕೆಲಸಕ್ಕೆ ಬೇಕಾದ ಉಪಕರಣದ ವಿಧಗಳು

ರವಕಡ್ಡಿ :- ಗುಂಡುಗಳನ್ನು ಪೋಣಿಸುವ ಸಣ್ಣ ತಂತಿಯ ಕಡ್ಡಿ.

ಮುಷ್ಟಿ :- ಆಭರಣಕ್ಕೆ ಹರಳು ಕೂರಿಸಲು ಬೇಕಾದ ಉಪಕರಣ.

ಪ್ಯಾರಿ :- ಆಭರಣಕ್ಕೆ ಚುಕ್ಕೆಗಳನ್ನು ಮಾಡುವ ಉಪಕರಣ.

ತಂತಿ :- ತಾಮ್ರ ಇತ್ಯಾದಿ ಲೋಹಗಳ ತಂತಿ ಎರಕ ಒಡೆಯದಿರಲಿ ಎಂದು ಇದರಿಂದ ಕಟ್ಟುತ್ತಾರೆ.

ಕಳಾಸಕಡ್ಡಿ :- v ಆಕಾರದ ಕಟ್ಟಿಗೆಯ ಉಪಕರಣ. ಎರಡು ಮರದ ವಸ್ತುವಿನ ನಡುವೆ ಜಾಗ ಇರದಂತೆ ಸೇರಿಸಲು ಬೇಕಾಗುತ್ತದೆ.

ಕತ್ತರಿಯ ಉಪಕರಣದ ವಿಧಗಳು

ಕತ್ರಿ :- ಲೋಹದ ತಗಡು ತಂತಿ ಕತ್ತರಿಸಿಕೊಳ್ಳಲು ಬಳಸುವ ವಸ್ತು.

ಅಡ್ಡಕತ್ತರಿ :- ಕತ್ತರಿಯ ಒಂದು ವಿಧ.

ಎಲಿಕತ್ತರಿ :- ತೆಳುವಾದ ಕತ್ತರಿ.

ತುದಿಗತ್ತರಿ :- ಚಿಕ್ಕ ಚಿಕ್ಕ ವಸ್ತುಗಳನ್ನು ಕತ್ತರಿಸುವ ಕತ್ತರಿ.

ರವಿಗತ್ತರಿ :- ಅಕ್ಕಸಾಲಿಗರ ವೃತ್ತಿಯಲ್ಲಿ ಬಳಸುವ ಕತ್ತರಿಯ ಒಂದು ಪ್ರಕಾರ.

ಬೋರಿಂಗ್ ಟೂಲ್ :- ಕಲ್ಲು ಸೀಳಲು ಬೇಕಾದ ಉಪಕರಣ.

ಸಂದಾನ್ :- ಉಂಗುರಗಳ ವಿನ್ಯಾಸ ಮಾಡಲು ಬಳಸುವ ಉಪಕರಣ.

ಹಾರಿ :- ಉಂಗುರ ತಯಾರಿಕೆಯಲ್ಲಿ ಬಳಸುವ ಉಪಕರಣ.

ಕಾಲುಂಗ್ರಹಾರಿ :- ಕಾಲುಂಗರ ಮಾಡುವಾಗ ಬಳಕೆ ಆಗುವ ಹಾರಿ.

ಕಡ್ಡಿಣ :- ಉಳಿಯ ರೀತಿಯ ಉಪಕರಣ, ವಿನ್ಯಾಸ ಮಾಡಲು ಬೇಕಾಗುತ್ತದೆ.

ಜಂತ್ರ :- ವಿನ್ಯಾಸದ ಕೆಲಸಗಳನ್ನು ಮಾಡಲು ಬಳಸುವ ಉಪಕರಣ.

ಉಂಡಿ ಕಟ್ಗೆ :- ಆಭರಣಗಳಲ್ಲಿ ಹರಳು ಕೂರಿಸಲು ಬೇಕಾದ ಉಪಕರಣ.

ಉಪಕರಣಗಳನ್ನು ಹರಿತ ಮಾಡಲಿಕ್ಕೆ ಬಳಸುವ ಉಪಕರಣದ ವಿಧಗಳು

ಮಸಗಲ್ಲು :- ಉಪಕರಣ ಹರಿತ ಮಾಡಿಕೊಳ್ಳಲು ಬೇಕಾದ ಕಲ್ಲು. ಮಸ್ಗಲ್ಲು, ಮಸೆಕಲ್ಲು

ಒರೆಗಲ್ಲು :- ಚಿನ್ನ, ಬೆಳ್ಳಿ ಒರೆಗೆ ಹಚ್ಚುವ ಕಲ್ಲು. ಒರ್ಗಲ್, ಕಷೋಪಲಿ, ನಿಕಶ್ನ, ನಿರಶೋಪಳ.

ಸಾಣೆ :- ತಿರುಗುಚಕ್ರ ಮೊಂಡಾದ ಆಯುಧಗಳನ್ನು ಹರಿತಗೊಳಿಸಲು ಬೇಕಾದ ಆಧುನಿಕ ಉಪಕರಣ.

ಮಸೆಮಣೆ :- ಕಟ್ಟಿಗೆಯ ಮೇಲೆ ಬೆಂಜರುಕಲ್ಲಿನ ಪ್ರತಿಯನ್ನು ಹಾಕಿ ಉಳಿಯನ್ನು ಹರಿತಗೊಳಿಸಲು ಉಪಯೋಗಿಸಿಕೊಳ್ಳುತ್ತಾರೆ.

ಲೋಹ ಕರಗಿಸುವ ಉಪಕರಣದ ವಿಧಗಳು

ದೋಣಿ :- ಲೋಹ ಕರಗಿಸಿ ಸುರಿಯಲು ಹಿಂದೆ ಬಳಸುತಿದ್ದ ಬಳಪದ ಕಲ್ಲಿನ ಪಾತ್ರೆ.

ಪಡಿಯಚ್ಚು :- ಅಚ್ಚುಪಡಿ.

ಮೂಸೆ :- ಲೋಹಕರಗಿಸುವ ಪಾತ್ರೆ.

ರೆಜೆ :- ಬಂಗಾರಕರಗಿಸಿ ಹಾಕುವ ಉಪಕರಣ.

ವಕ್ತೃವಿವರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಊರು	ತಾಲೂಕು
೦೧.	ಈಶಪ್ಪ	೫೦	ಬಡಗಿತನ	ಬಾತಿ	ಹರಿಹರ
೦೨.	ಈಶಪ್ಪಚಾರಿ	೬೦	ಕಮ್ಮಾರಿಕೆ	ದಾವಣಗೇರಿ	ದಾವಣಗೇರಿ
೦೩.	ಉಮ್ಮಕ್ಕ	೬೫	ಮನೆಕೆಲಸ	ಮರಿಯಮ್ಮನಹಳ್ಳಿ	ಹೊಸಪೇಟೆ
೦೪.	ಓಂಕಾರಾಚಾರ್	೬೦	ಬಡಗಿತನ	ನಾಯಕನಹಟ್ಟಿ	ಜಗಳೂರು
೦೫.	ಕರಿಬಸವಚಾರಿ	೫೫	ಬಡಗಿತನ	ಮಾಗನಹಳ್ಳಿ	ದಾವಣಗೇರಿ
೦೬.	ಕಾಳಪ್ಪ	೭೦	ಕಮ್ಮಾರಿಕೆ	ಬೆಳ್ಳೂಡಿ	ಹರಿಹರ
೦೭.	ಕಾಳಪ್ಪ	೪೫	ಬಡಗಿತನ	ಕಮಲಾಪುರ	ಹೊಸಪೇಟೆ
೦೮.	ಕಾಳಪ್ಪ	೭೦	ಬಡಗಿತನ	ಹೊಳಲು	ಹೂವಿನಹಡಗಲಿ
೦೯.	ಕಾಳಮ್ಮ	೬೦	ಮನೆಕೆಲಸ	ಬನ್ನಿಕೊಡು	ಹರಿಹರ
೧೦.	ಕಾಳಾಚಾರಿ	೭೦	ಪುರೋಹಿತ	ಇಟ್ಟಿಗಿ	ಹೂವಿನಹಡಗಲಿ
೧೧.	ಕಾಳಾಚಾರಿ	೫೫	ಪುರೋಹಿತ	ಎಂ.ಬಿ.ಅಯ್ಯನಹಳ್ಳಿ	ಕೂಡ್ಲಿಗಿ
೧೨.	ಕುಶಪ್ಪಚಾರಿ	೭೨	ಬಡಗಿತನ	ಇಟ್ಟಿಗಿ	ಹೂವಿನಹಡಗಲಿ
೧೩.	ಕೋಟೆಪ್ಪ	೪೦	ಕಮ್ಮಾರಿಕೆ	ಅಲಬೂರು	ಹಗರಿಬೊಮ್ಮನಹಳ್ಳಿ
೧೪.	ಗಂಗಾಧರಾಚಾರಿ	೭೦	ಕಮ್ಮಾರಿಕೆ	ನ್ಯಾಮತಿ	ಹೊನ್ನಾಳಿ
೧೫.	ಗೌರಮ್ಮ	೫೦	ಮನೆಕೆಲಸ	ಗೌರಿಹಳ್ಳಿ	ಹರಪನಹಳ್ಳಿ
೧೬.	ಚಂದ್ರಪ್ಪ	೪೫	ಕಮ್ಮಾರಿಕೆ	ಮಲ್ಲಿನಕೇರಿ	ಹೂವಿನಹಡಗಲಿ
೧೭.	ಚಾಯಪ್ಪ	೭೫	ಅಕ್ಕಸಾಲಿಕೆ	ಕೋಗಳಿ	ಹಗರಿಬೊಮ್ಮನಹಳ್ಳಿ
೧೮.	ಜಕಣಾಚಾರಿ	೬೦	ಕಮ್ಮಾರಿಕೆ	ಸುಂಕದಕಟ್ಟೆ	ಹೊನ್ನಾಳಿ
೧೯.	ಜಕಣಾಚಾರಿ	೪೫	ಕಮ್ಮಾರಿಕೆ	ಕೆರೆಬಿಳಚಿ	ಚೆನ್ನಗಿರಿ
೨೦.	ಜಗದೀಶ	೪೦	ಬಡಗಿತನ	ಎಂ.ಬಿ.ಅಯ್ಯನಹಳ್ಳಿ	ಕೂಡ್ಲಿಗಿ
೨೧.	ದೀವಕರಾಚಾರಿ	೬೦	ಅಕ್ಕಸಾಲಿಕೆ	ಎಂ.ಬಿ.ಅಯ್ಯನಹಳ್ಳಿ	ಕೂಡ್ಲಿಗಿ
೨೨.	ದೇವಾಚಾರಿ	೫೦	ಕಂಚುಗಾರಿಕೆ	ದಾವಣಗೇರಿ	ದಾವಣಗೇರಿ
೨೩.	ದೇವೇಂದ್ರಪ್ಪ	೫೫	ಬಡಗಿತನ	ಹ್ಯಾರಡ	ಹರಪನಹಳ್ಳಿ
೨೪.	ದೇವಕ್ಕ	೫೬	ಮನೆಕೆಲಸ	ನಿಂಬಳಗೇರಿ	ಕೂಡ್ಲಿಗಿ
೨೫.	ನಾಗರಾಜ	೫೦	ಕಮ್ಮಾರಿಕೆ	ಹೊಳಲು	ಹೂವಿನಹಡಗಲಿ
೨೬.	ನಾರಾಯಣಾಚಾರಿ	೫೫	ಬಡಗಿತನ	ದಾವಣಗೇರಿ	ದಾವಣಗೇರಿ
೨೭.	ನಿಂಗಪ್ಪಚಾರಿ	೫೮	ಬಡಗಿತನ	ಕೋಗಳಿ	ಹಗರಿಬೊಮ್ಮನಹಳ್ಳಿ

೨೮.	ನಿಂಗಾಚಾರಿ	೩೭	ಬಡಗಿತನ	ಅಂಬಳಿ	ಹಗರಿಬೊಮ್ಮನಹಳ್ಳಿ
೨೯.	ನೀಲಕಂಠಚಾರಿ	೬೦	ಬಡಗಿತನ	ಬೇನಕನಹಳ್ಳಿ	ಹೊನ್ನಾಳಿ
೩೦.	ನೀಲಕಂಠಪ್ಪ	೬೫	ಅಕ್ಕಸಾಲಿಕೆ	ಕೋಗಳಿ	ಹಗರಿಬೊಮ್ಮನಹಳ್ಳಿ
೩೧.	ಪರುಶಚಾರಿ	೪೦	ಬಡಗಿತನ	ಯಲ್ಲಾಪುರ	ಹರಪನಹಳ್ಳಿ
೩೨.	ಪೂರ್ವಚಾರಿ	೬೫	ಕಮ್ಮಾರಿಕೆ	ಕೋಗಳಿ	ಹಗರಿಬೊಮ್ಮನಹಳ್ಳಿ
೩೩.	ಪ್ರೇಮಿಲವ್ವ	೬೦	ಮನೆಕೆಲಸ	ಕೋಗಳಿ	ಹಗರಿಬೊಮ್ಮನಹಳ್ಳಿ
೩೪.	ಭಾಗ್ಯಮ್ಮ	೫೦	ಮನೆಕೆಲಸ	ದಾವಣಗೇರಿ	ದಾವಣಗೇರಿ
೩೫.	ಭೀಮಕ್ಕ	೪೫	ಮನೆಕೆಲಸ	ಕೋಗಳಿ	ಹಗರಿಬೊಮ್ಮನಹಳ್ಳಿ
೩೬.	ಬ್ರಹ್ಮಚಾರಿ	೬೦	ಕಮ್ಮಾರಿಕೆ	ಬೇನಕನಹಳ್ಳಿ	ಹೊನ್ನಾಳಿ
೩೭.	ಮರ್ತಾಂಡಚಾರಿ	೬೦	ಕಮ್ಮಾರಿಕೆ	ಮಾಗನಹಳ್ಳಿ	ದಾವಣಗೇರಿ
೩೮.	ಮಲ್ಲಚಾರಿ	೫೦	ಕಮ್ಮಾರಿಕೆ	ನಿಂಬಳಗೇರಿ	ಕೂಡ್ಲಿಗಿ
೩೯.	ಮಲ್ಲಪ್ಪಚಾರಿ	೬೦	ಕಮ್ಮಾರಿಕೆ	ಗೌರಿಹಳ್ಳಿ	ಹರಪನಹಳ್ಳಿ
೪೦.	ಮಲ್ಲಪ್ಪಚಾರಿ	೫೮	ಕಮ್ಮಾರಿಕೆ	ಬಂಡ್ರಿ	ಸಂಡೂರು
೪೧.	ಮಾನಪ್ಪ	೬೪	ಬಡಗಿತನ	ಬನ್ನಿಗೋಳ	ಹಗರಿಬೊಮ್ಮನಹಳ್ಳಿ
೪೨.	ಮೌನೇಶ	೫೦	ಕಂಚುಗಾರಿಕೆ	ನಲ್ಲೂರು	ಚನ್ನಗಿರಿ
೪೩.	ಮೌನೇಶಚಾರಿ	೪೯	ಅಕ್ಕಸಾಲಿಕೆ	ಮಲೆಬೆನ್ನೂರು	ಹೊನ್ನಾಳಿ
೪೪.	ರಮೇಶಚಾರಿ	೫೦	ಅಕ್ಕಸಾಲಿಕೆ	ಕೋಗಳಿ	ಹಗರಿಬೊಮ್ಮನಹಳ್ಳಿ
೪೫.	ರವಿಂದ್ರಚಾರಿ	೩೫	ಬಡಗಿತನ	ಉಜ್ಜಿನಿ	ಕೂಡ್ಲಿಗಿ
೪೬.	ರಾಘುವೇಂದ್ರಚಾರಿ	೫೦	ಬಡಗಿತನ	ಬಾತಿ	ಹರಿಹರ
೪೭.	ರೇವಣಸಿದ್ಧಚಾರಿ	೫೦	ಕಮ್ಮಾರಿಕೆ	ಮರಿಯಮ್ಮನಹಳ್ಳಿ	ಹೊಸಪೇಟೆ
೪೮.	ವನಜಾಕ್ಷಮ್ಮ	೫೦	ಮನೆಕೆಲಸ	ಬೆಂಡಿಗೇರಿ	ಹರಪನಹಳ್ಳಿ
೪೯.	ವರಪುತ್ರಚಾರಿ	೫೦	ಬಡಗಿತನ	ಉಜ್ಜಿನಿ	ಕೂಡ್ಲಿಗಿ
೫೦.	ವಿರೂಪಾಕ್ಷಚಾರಿ	೬೦	ಬಡಗಿತನ	ಕೆರೆಬಿಳಚಿ	ಚೆನ್ನಗಿರಿ
೫೧.	ವೀರಭದ್ರಾಚಾರಿ	೭೫	ಕಂಚುಗಾರಿಕೆ	ಚಿಂತ್ರಪಳ್ಳಿ	ಹಗರಿಬೊಮ್ಮನಹಳ್ಳಿ
೫೨.	ವೀರಭದ್ರಾಚಾರಿ	೬೦	ಬಡಗಿತನ	ಮರಿಯಮ್ಮನಹಳ್ಳಿ	ಹೊಸಪೇಟೆ
೫೩.	ವೀರಭದ್ರಾಚಾರಿ	೩೫	ಬಡಗಿತನ	ಸೋಗಿ	ಹೂವಿನಹಡಗಲಿ
೫೪.	ವೆಂಕಟಚಾರಿ	೬೦	ಕಮ್ಮಾರಿಕೆ	ಸಿರಗುಪ್ಪ	ಸಿರಗುಪ್ಪ
೫೫.	ಶಂಕ್ರಚಾರಿ	೪೦	ಕಮ್ಮಾರಿಕೆ	ಸಂಗಮೇಶ್ವರ	ಹಗರಿಬೊಮ್ಮನಹಳ್ಳಿ
೫೬.	ಷಡಕ್ಷರಚಾರಿ	೫೫	ಅಕ್ಕಸಾಲಿಕೆ	ಬೇನಕನಹಳ್ಳಿ	ಹೊನ್ನಾಳಿ
೫೭.	ಸಿದ್ಧಪ್ಪ	೪೦	ಕಮ್ಮಾರಿಕೆ	ಕಮಲಾಪುರ	ಹೊಸಪೇಟೆ
೫೮.	ಸುನಿತಮ್ಮ	೬೦	ಮನೆಕೆಲಸ	ನಾಯಕನಹಟ್ಟಿ	ಜಗಳೂರು

೫೯.	ಸುಭಕಾರ	३೮	ಬಡಗಿತನ	ಕೋಗಳಿ	ಹಗರಿಬೊಮ್ಮನಹಳ್ಳಿ
೬೦.	ಸುರೇಶಚಾರಿ	೫೦	ಶಿಲ್ಪಿ	ಹೊಸಪೇಟೆ	ಹೊಸಪೇಟೆ
೬೧.	ಹಂಸನಂದಾಚಾರಿ	೬೫	ಶಿಲ್ಪಿ	ಹೂವಿನಹಡಗಲಿ	ಹೂವಿನಹಡಗಲಿ
೬೨.	ಹನುಮಂತಚಾರಿ	೭೫	ಅಕ್ಕಸಾಲಿಕೆ	ಹೊಸಕೇರಿ	ಜಗಳೂರು
೬೩.	ಹಾಲೇಶಪ್ಪ	೫೦	ಕಂಚುಗಾರಿಕೆ	ಕೆರೆಗುಡಿಹಳ್ಳಿ	ಹರಪನಹಳ್ಳಿ
೬೪.	ಹೇಮಣ್ಣಚಾರಿ	೫೦	ಕಮ್ಮಾರಿಕೆ	ಅಂಬಳಿ	ಹಗರಿಬೊಮ್ಮನಹಳ್ಳಿ
೬೫.	ಹೇಮಣ್ಣಚಾರಿ	೫೫	ಬಡಗಿತನ	ಮೈಲಾರ	ಹೂವಿನಹಡಗಲಿ

ಪರಾಮರ್ಶನ ಗ್ರಂಥಗಳು

೦೧. ಅಂಗಡಿ ಎಸ್.ಎಸ್., ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೬.

೦೨. ಅಂಗಡಿ ಎಸ್.ಎಸ್., ಸಂಕೀರ್ಣ ವೃತ್ತಿಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೩. ಅಂಗಡಿ ಎಸ್.ಎಸ್., ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೦೪. ಅಂಗಡಿ ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಶ ಪ್ರಕಾಶನ, ಹೊಸಪೇಟೆ, ೨೦೦೮.

೦೫. ಅಂಗಡಿ ಎಸ್.ಎಸ್., ಬಡಿಗ ವೃತ್ತಿಪದ ಮಂಜರಿ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೯.

೦೬. ಅಂಬಳಿಕೆ ಹಿರಿಯಣ್ಣ, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯.

೦೭. ಅಶೋಕ ಕುಮಾರ ರಂಜೇರಿ, ವಿವಿಧ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೮. ಈರಣ್ಣ ಕೆ.ಪಿ., ಕರ್ನಾಟಕ ವಿಶ್ವಕರ್ಮ ಮಹಾಪುರುಷರು, ಶ್ರೀ ಭುವನೇಶ್ವರಿ ಸಾಹಿತ್ಯ ಪ್ರಕಾಶನ, ಶಿರಹಟ್ಟಿ, ೧೯೯೦.

೦೯. ಈರಣ್ಣ ಕೆ.ಪಿ., ಬಾಲವಿಶ್ವಕರ್ಮ, ಶ್ರೀಭುವನೇಶ್ವರಿ ಸಾಹಿತ್ಯ ಪ್ರಕಾಶನ, ಶಿರಹಟ್ಟಿ, ೧೯೯೦.

೧೦. ಎಚ್ಚೆಸ್ಕೆ, ಬಳಕೆಯ ಭಾಷೆ, ಚೇತನ್ ಬುಕ್ ಹೌಸ್, ಮೈಸೂರು, ೨೦೦೪.

೧೧. ಕಮ್ಮಾರ ಎಸ್.ಎಂ., ಸಮೂಹ ಮಾಧ್ಯಮಗಳು ಹಾಗೂ ಸಮುದಾಯ, ಮುಂಡರಗಿ, ೧೯೯೯.

೧೨. ಕರೀಗೌಡ ಬೀಚನಹಳ್ಳಿ (ಸಂ), ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ, ಕೋಶ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೩. ಕಲಬುರ್ಗಿ ಎಂ.ಎಂ., ಕನ್ನಡ ನಾಮ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೮೯.

೧೪. ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, ೨೦೦೬.

೧೫. ಕುಮಾರ ಆರ್.ಬಿ., ಮುದ್ದೆಕಂಬಾರರು, ಸಾರಾ ಎಂಟರ್ ಪ್ರೈಸಸ್, ಮೈಸೂರು, ೨೦೦೪.

೧೬. ಕುಮಾರ ಸ್ವಾಮಿ ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ಕನ್ನಡ ಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೯೬.

೧೭. ಕುಶಾಲಪ್ಪಗೌಡ ಕೆ., ಕನ್ನಡ ತಿರುಳ ಕನ್ನಡ ಮತ್ತು ಸಮಾಜ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೧.

೧೮. ಕೃಷ್ಣಯ್ಯ ಎಂ.ಎಚ್., ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೯.

೧೯. ಕೆಂಪೇಗೌಡ ಕೆ., ಸಾಮಾನ್ಯ ಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು, ೧೯೯೩.

೨೦. ಕೆಂಪೇಗೌಡ ಕೆ., ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು ೨೦೦೩.

೨೧. ಗಂಗಾಧರ ದೈವಜ್ಞ, ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ, ಶ್ವೇತಾ ಭಾಗೀರಥಿ ಪ್ರಕಾಶನ, ಹೊಸಪೇಟೆ, ೨೦೦೨.

೨೨. ಗುರುಲಿಂಗಾಚಾರ್, ವಿಶ್ವಕರ್ಮ ಗುಣಗಾನ, ವಿಶ್ವಕರ್ಮ ಪ್ರಕಾಶನ, ತುಮಕೂರು, ೧೯೭೩.

೨೩. ಗಣೇಶ ಕೆ.ಆರ್. (ಸಂ), ಸರ್ವಜ್ಞನ ವಚನಗಳು, ಸೃಷ್ಟಿ ಪ್ರಕಾಶನ, ಬೆಂಗಳೂರು, ೨೦೦೬.

೨೪. ಗಿರಿಜಾಪತಿ ಎಸ್.ಎಂ., ಕನ್ನಡ ಭಾಷಾಲೋಕ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭.

೨೫. ಗೊರವರ ಬ.ಸೋ., ಕನ್ನಡ ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ, ಲಡಾಯಿ ಪ್ರಕಾಶನ, ಗದಗ, ೨೦೦೮.

೨೬. ಚಿದಾನಂದ ಮೂರ್ತಿ ಎಂ., ಭಾಷಾವಿಜ್ಞಾನದ ಮೂಲತತ್ವಗಳು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೮೬.

೨೭. ಚಿದಾನಂದಮೂರ್ತಿ ಎಂ., ಜನ-ಜನಪದ-ಜಾನಪದ (ಸಂ.೩), ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೨೮. ಜಯಲಕ್ಷ್ಮೀ ಸೀತಾಪುರ, ಜನಪದ ಒಕ್ಕಲು, ತಳಗವಾದಿ ಪ್ರಕಾಶನ, ಮೈಸೂರು, ೨೦೦೪.

೨೯. ತರೀಕೆರೆ ರಹಮತ್, ಬಹುಭಾಷಾ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೦. ತಿರುಮಲೇಶ್ ಕೆ.ವಿ., ನಮ್ಮ ಕನ್ನಡ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

೩೧. ದಾನೇಶ ಎ.ಚಕ್ಕಿ, ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ, ಎಸ್.ಎಸ್.ಒಡೆಯರ್, ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೭.

೩೨. ದಾಸೇಗೌಡ ಜಿ.ವಿ., ನಮ್ಮ ಜನಪದ ನಂಬಿಕೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ೧೯೭೩.

೩೩. ದೀಕ್ಷಿತ್ ವಿ.ಜಿ., ಕರ್ನಾಟಕದಲ್ಲಿ ವಿಶ್ವಬ್ರಾಹ್ಮಣ ಧರ್ಮ ಮತ್ತು ಸಂಸ್ಕೃತಿ, ವಿಶ್ವಕರ್ಮ ಗಾಯತ್ರಿ ಪ್ರಕಾಶನ, ಧಾರವಾಡ ೧೯೭೫.

೩೪. ಜೋಶಿ ಎಸ್.ಕೆ. (ಸಂ), ಚಂದ್ರಪ್ರಭಾ, ಶ್ರೀ ಚಂದ್ರಕಾಂತ ಸುಳ್ಳದ ಅಭಿನಂದನಾ ಸಮಿತಿ, ಶಿರಸಂಗಿ, ೨೦೦೫.

೩೫. ಜ್ಞಾನಾನಂದ ಜಿ., ಶಿಲ್ಪದರ್ಶನ ಸಂ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೩೬. ಜ್ಞಾನಾನಂದ ಜಿ., ಶಿಲ್ಪದರ್ಶನ ಸಂ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨.

೩೭. ದೇವೇಂದ್ರ ಕುಮಾರ ಹಕಾರಿ., ಸಂಧ್ಯಾರೆಡ್ಡಿ ಕೆ.ಆರ್. (ಸಂ), ಗ್ರಾಮೀಣ ವೃತ್ತಿಗಳು, ಗ್ರಾಮ ಸಂಸ್ಕೃತಿ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦.

೩೮. ನನ್ನಿಹಾಳ ಶಿಲ್ಪಚಾರ್ಯ, ಚಿತ್ತೂರು ಜಿಲ್ಲಾ (ಅದಲತ್ತು) ಕೋರ್ಟ್ ತೀರ್ಪು, ಶ್ರೀಗಾಯಿತ್ರಿ ವಿಶ್ವಕರ್ಮ ಪ್ರಕಟನಾಲಯ, ಬೆಂಗಳೂರು, ೧೯೯೬.

೩೯. ನರಸಿಂಹಮೂರ್ತಿ ಎಚ್.ವಿ., ನಮ್ಮಹಬ್ಬಗಳು, ವಿಕಾಸ ಪ್ರಕಾಶನ, ಉಡುಪಿ, ೨೦೦೨.

೪೦. ನಾಗರಾಜು ಎಂ.ಎಚ್., ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಅನಿಕೇತನ ಪ್ರಕಾಶನ, ತುಮಕೂರು, ೨೦೦೩.

೪೧. ನಾರಾಯಣ ಕೆ.ವಿ. (ಸಂ), ಭಾಷೆ ವಿಶ್ವಕೋಶ -೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೨. ನಾರಾಯಣ ಕೆ.ವಿ. (ಸಂ), ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೩. ನಾರಾಯಣ ಕೆ.ವಿ., ಭಾಷೆಯ ಸುತ್ತ ಮುತ್ತ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೨೦೦೦.

೪೪. ನಾರಾಯಣ ಕೆ.ವಿ., ಮತ್ತೆ ಭಾಷೆಯ ಸುತ್ತಮುತ್ತ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೪.

೪೫. ನಾರಾಯಣ ಕೆ.ವಿ., ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪೬. ಪ್ರಶಾಂತ ಹೆಚ್.ಡಿ. (ಸಂ), ಜನ ಸಮುದಾಯ ಸಂಪುಟ, ಕರ್ನಾಟಕ ರಾಜ್ಯಕೋಶ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೭. ಪಾಂಡುರಂಗಬಾಬು ಡಿ., ಸುಡಿಸೋಟ, ಆಕಾಶ್ ಪ್ರಕಾಶನ, ಹೊಸಪೇಟೆ, ೨೦೦೫.

೪೮. ಪಾಂಡುರಂಗಬಾಬು ಡಿ., ಪಾಂಚಾಳ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೯. ಪುರುಷೋತ್ತಮ ಬಿಳಿಮಲೆ, ಕೊರಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೫೦. ಬೋರಲಿಂಗಯ್ಯ ಹಿ.ಚಿ. (ಸಂ), ಮಂಟೇಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೫೧. ಮರುಳಯ್ಯ ಸಾ.ಶಿ., ಕನ್ನಡ ಭಾಷೆಯ ಚರಿತೆ, ಕನ್ನಡ ಸಾಹಿತ್ಯ ಪರಿಷತ್, ೧೯೯೯.

೫೨. ಮಲ್ಲೇಪುರಂ ಜಿ.ವೆಂಕಟೇಶ (ಸಂ), ಶಂಬಾಕೃತಿ ಸಂಪುಟಗಳು

೧. ಕಂನಡ-ಕಂನುಡಿ, ಸಂ-೨, ೧೯೯೬.

೨. ಕರ್ಣಾಟ-ಸಂಸ್ಕೃತಿ, ಸಂ-೩, ೧೯೯೬.

೩. ಭಾರತೀಯ ಸಂಸ್ಕೃತಿ, ಸಂ-೪, ೧೯೯೬.

೪. ಮಾನವ ಸಂಸ್ಕೃತಿ, ಸಂ-೫, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು, ೧೯೯೬.

೫೩. ಮಹಾದೇವಯ್ಯ ಪಿ., ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫೪. ಮಹಾದೇವಯ್ಯ ಪಿ., ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ, ೨೦೦೬.

೫೫. ಮುತ್ತಾಚಾರ್ ಟಿ.ವಿ., ವಿಶ್ವಕರ್ಮ ವಂಶ ವಿಕಾಶ, ವಿಶ್ವಕರ್ಮ ಧರ್ಮ ವರ್ಧಿನಿ ಸಂಘ, ತುಮಕೂರು, ೧೯೬೮.

೫೬. ಮುರುಳಿಧರ ಉಪಾಧ್ಯ. (ಸಂ), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦.

೫೭. ಮೋಹನ್‌ರಾವ್, ವಿಶ್ವಕರ್ಮ ಪೂರ್ವಕತೆ, ಶ್ರೀ ಕಾಳಿಕಾಮಠೇಶ್ವರ ಪ್ರಕಾಶನ, ಚಿತ್ರದುರ್ಗ.

೫೮. ಮಂಜುನಾಥ ಬೇವಿನಕಟ್ಟಿ, ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫೯. ರವೀಂದ್ರನಾಥ ಕೆ., ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ, ಶ್ರೀ ಪ್ರಭುದೇವರ ಜನ ಕಲ್ಯಾಣ ಸಂಸ್ಥೆ, ಪ್ರಭುದೇವರ ಸಂಸ್ಥಾನ ವಿರಕ್ತಮಠ, ೨೦೦೭.

೬೦. ರಾಗೌ. (ಸಂ), ಕಿಟ್ಟೆಲ್ ಕೋಶದ ಗಾದೆಗಳು, ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೯೮.

೬೧. ರಾಗೌ. (ಸಂ), ಸರ್ವಜ್ಞನ ವಚನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ, ೨೦೦೩.

೬೨. ರಾಗೌ (ಸಂ), ನಮ್ಮ ಒಗಟುಗಳು, ಡಿ.ವಿ.ಕೆ.ಮೂರ್ತಿ, ಮೈಸೂರು, ೨೦೦೧.

೬೩. ರಾಜ ಪುರೋಹಿತ ಬಿ.ಬಿ., ಭಾಷೆ ಮತ್ತು ಅರ್ಥಗಳ ಗುಟ್ಟು, ಮೈಸೂರು, ೨೦೦೫

೬೪. ರಾಜೇಶ್ವರಿ ಮಹೇಶ್ವರಯ್ಯ, ಆಧುನಿಕ ವರ್ಣನಾತ್ಮಕ ಭಾಷಾ ವಿಜ್ಞಾನ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೩.

೬೫. ರಾಮಚಂದ್ರ ಸಿ.ಎಸ್., ಸಂಕೇತಿ: ಜನಾಂಗ ಸಂಸ್ಕೃತಿ ಮತ್ತು ಭಾಷೆ, ಚೈತ್ರ ಪಲ್ಲವಿ ಪ್ರಕಾಶನ, ಮೈಸೂರು, ೧೯೯೨.

೬೬. ರಾಮಚಂದ್ರರಾವ್ ಬಿ., ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ, ಐ.ಬಿ.ಎಮ್.ಪ್ರಕಾಶನ, ಬೆಂಗಳೂರು ೧೯೮೩.

೬೭. ರಾಮಚಂದ್ರರಾವ್ ಬಿ., ಕನ್ನಡ ಭಾಷೆಯ ಇತಿಹಾಸ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೯೮.

೬೮. ಲಕ್ಕಪ್ಪಗೌಡ ಎಚ್.ಜೆ. (ಸಂ), ಜಾನಪದ ಕೈಪಿಡಿ, ಕರ್ನಾಟಕ ಪುಸ್ತಕ ಪ್ರಾಧಿಕಾರ, ಮೈಸೂರು, ೧೯೯೭.

೬೯. ಲಠ್ಠೆ ಎಂ.ಎಸ್., ಉತ್ತರ ಕರ್ನಾಟಕದ ಒಡಪುಗಳು, ರವೀಂದ್ರ ಪ್ರಕಾಶನ, ಕಲಬುರ್ಗಿ, ೧೯೭೯.

೭೦. ವಿಲ್ಸಂ ಮಾಡ್ರ, ಕನ್ನಡ ಭಾಷೆಯ ರೂಪರೇಷೆಗಳು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

೭೧. ವಿಲ್ಸಂ ಮಾಡ್ರ, ಆರ್.ವಾಯ್.ಕುಲಕರ್ಣಿ, ಸಿಘಂಟು ರಚನಾ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೭೨. ವಿವೇಕ ರೈ ಬಿ.ಎ, ಕರ್ನಾಟಕ ಜನಪದ ನಂಬಿಕೆಗಳು, ಕರ್ನಾಟಕ ಜಾನಪದ, ೧೯೮೧.

೭೩. ವಿವೇಕ ರೈ ಬಿ.ಎ, ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು, ಪವನ್ ಪ್ರಿಂಟರ್ಸ್, ಬೆಂಗಳೂರು, ೧೯೮೮.

೭೪. ವೀರೇಶ ಬಡಿಗೇರ, ಅಡಿಗಲ್ಲು, ಮಯಪ್ರಕಾಶನ, ಕಮಲಾಪುರ, ೧೯೯೭.

೭೫. ವೀರೇಶ ಬಡಿಗೇರ, ಬಾಚಿಕಾಯಕದ ಬಸವಯ್ಯ : ವೃತ್ತಿ ಹಾಗೂ ತತ್ವ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭೬. ವೆಂಕಟಸುಬ್ಬಯ್ಯ ಜಿ., ಇಗೋ ಕನ್ನಡ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧.

೭೭. ವೆಂಕಟಸುಬ್ಬಯ್ಯ, ಎರವಲು ಪದಕೋಶ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸ್ಸಿ ಸೆಂಟರ್, ಬೆಂಗಳೂರು, ೧೯೯೮.

೭೮. ಶಂಕರಭಟ್ಟ ಡಿ.ಎನ್., ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು, ೨೦೦೧.

೭೯. ಶಂಕರಭಟ್ಟ ಡಿ.ಎನ್., ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು, ೧೯೯೯.

೮೦. ಶಂಕರಭಟ್ಟ ಡಿ.ಎನ್., ಕನ್ನಡ ವಾಕ್ಯಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು, ೨೦೦೪.

೮೧. ಶಂಕರಭಟ್ಟ ಡಿ.ಎನ್., ಭಾಷೆಯ ಬಗೆಗೆ ನೀವೇನು ಬಲ್ಲಿರಿ, ಭಾಷಾ ಪ್ರಕಾಶನ, ಮೈಸೂರು, ೨೦೦೨.

೮೨. ಶಾಂತಿನಾಥ ದೇಸಾಯಿ, ಸಾಹಿತ್ಯ ಮತ್ತು ಭಾಷೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦.

೮೩. ಶಾಲಿನಿ ರಘುನಾಥ, ಉಪಭಾಷಾಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮೪. ಶಿರೂರು ಬಿ.ವಿ., ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೦.

೮೫. ಶೇಷಾಚಾರಿ ದಾ.ವಿ. (ಸಂ), ಮೂಲಸ್ತಂಭ ಪುರಾಣ, ವಿಶ್ವಕರ್ಮ ಪ್ರಕಾಶನ, ಬೆಂಗಳೂರು, ೧೯೮೦.

೮೬. ಸಂಗಮೇಶ ಸವದತ್ತಿಮಠ, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, ೧೯೯೯.

೮೭. ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೮೮. ಸಾಂಬಾಮೂರ್ತಿ, ನೇಕಾರರ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೮೯. ಸಾಂಬಾಮೂರ್ತಿ, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೯೦. ಸೋಮಶೇಖರಗೌಡ, ಆಡುಮಾತಿನ ಕನ್ನಡ, ಕನ್ನಡ ಸಾಹಿತ್ಯ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦.

೯೧. ಸೋಮಶೇಖರಗೌಡ, ಭಾಷೆ : ರಚನೆ ಬಳಕೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೦.

೯೨. ಸೋಮಶೇಖರ ಇಮ್ರಾಪುರ (ಸಂ), ಆಯ್ದ ಜನಪದ ಒಗಟುಗಳು, ಚೇತನಾ ಪ್ರಕಾಶನ, ಧಾರವಾಡ, ೧೯೯೮.

೯೩. ಹರಿಲಾಲ್ ಕೆ.ಪವಾರ್, ಕರ್ನಾಟಕದ ಹೆಳವರು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

English

1. Ananda K and Koomaraswamy, Vishwakarma (Series-1), lvjhak, london and Thara purnala, Bombay, 1914
2. Aananthakrishna lyer K., The Mysore Tribes and Castes, Mysore University, Mysore, 1931
3. Altekar A.S., A History of Village Communication in westorn india.
4. Dubais abbe, Hindu manvirs, Customs and Cermonies, oxford university, press, 1978
5. Eagal Tharston and Rangachar K., Caste and Tribes of South india, Asain Education Sevices, 1987
6. Gururajachar, Some aspect and Social lite in Karnataka, Mysore University press.
7. Sheshadree M., The Hoysal tempal Artilecte, Mysore University, Mysore
8. Shek Ali, The Hoysal Dinasty, Mysore University, Mysore, 1972

ಲೇಖನಗಳು

೧. ಗಂಗಾಧರಾಚಾರ್ ಎಚ್.ಎಚ್., ವಿಶ್ವಕರ್ಮರ ಶಬ್ದಕೋಶ, ಸಾಧನೆ, ಸಂಪುಟ-೧೫, ಸಂಚಿಕೆ-೧, ೧೯೮೭.

೨. ದೇವಾನಂದ ಮಾಲಗತ್ತಿ, ಚಮ್ಮಾರರು ಮತ್ತು ಅವರ ಉಪಕರಣಗಳ ವಿಚಕ್ಷಣನೋಟ, ಸಾಧನೆ, ಸಂಪುಟ-೧, ಸಂಚಿಕೆ-೧, ೧೯೯೦.

೩. ಮಹೇಶ್ವರಯ್ಯ ಎಚ್.ಎಂ., ಮಲೆನಾಡಿನ ಕೃಷಿಕರ ವೃತ್ತಿಪದಕೋಶ, ಕರ್ನಾಟಕ ಭಾರತಿ, ಸಂಪುಟ-೧೮, ಸಂಚಿಕೆ-೧, ೧೯೯೦.

೪. ಶಿವಾನಂದ ವಿ., ಒಕ್ಕಲುತನ ವೃತ್ತಿಪದಕೋಶ. ಕರ್ನಾಟಕ ಭಾರತಿ, ಸಂಪುಟ-೧೧, ಸಂಚಿಕೆ-೪, ೧೯೮೭.

ಪತ್ರಿಕೆಗಳು

೧. ಜಗತ್ತ ಕಲ್ಯಾಣ, ಮಾಸಪತ್ರಿಕೆ, ಸಂಪಾದಕರು, ಹರಿಹರ.

೨. ವಿಶ್ವಕರ್ಮ ಸಂದೇಶ, ಮಾಸ ಪತ್ರಿಕೆ, ಸಂಪಾದಕರು, ಶಿರಸಂಗಿ.

೩. ವಿಶ್ವಕರ್ಮೋದಯ, ಮಾಸ ಪತ್ರಿಕೆ, ಸಂಪಾದಕರು, ಚಿತ್ರದುರ್ಗ.

೪. ವಿಶ್ವಕರ್ಮ ಕಲಾ, ಮಾಸಪತ್ರಿಕೆ, ಸಂಪಾದಕರು, ಬೆಂಗಳೂರು.

ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಎಂ.ಫಿಲ್ ಸಂಪ್ರಬಂಧಗಳು

೧. ಆಂಜನೇಯ, ಮೊಳಕಾಲ್ಮೂರು ತಾಲೂಕಿನ ಮ್ಯಾಸ ನಾಯಕರ ಭಾಷಿಕ ಅಧ್ಯಯನ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೨. ಶ್ರೀನಿವಾಸಚಾರಿ ಬಿ., ಬಡಗಿತನದ ದೇಶೀಯ ತಂತ್ರಜ್ಞಾನ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಪಿಎಚ್.ಡಿ ಮಹಾಪ್ರಬಂಧಗಳು

೧. ಆಂಜನೇಯ, ಮ್ಯಾಸಬೇಡರ ಕನ್ನಡ ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೨. ಪಾಂಡುರಂಗಬಾಬು ಡಿ., ಆದಿಜಾಂಬವರ ಕನ್ನಡ : ಒಂದು ವಿವರಣಾತ್ಮಕ ಅಧ್ಯಯನ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೫

೩. ಲಿಂಗಣ್ಣ ಎಚ್., ದೆವ್ವವನ್ನು ಕುರಿತ ಭಾಷಿಕ ಸಂಕಥನದ ನೆಲೆಗಳು, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪. ಶ್ರೀನಿವಾಸಚಾರಿ ಬಿ., ಪಾಂಚಾಳ ಜಾನಪದ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೫. ಹಂದ್ರಾಳ ಮಾರ್ಕಂಡೇಯ, ಬಳ್ಳಾರಿ ಜಿಲ್ಲಾ ಗಾಣಿಗರು : ಒಂದು ಅಧ್ಯಯನ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮